ದಲಿತ ಕಾವ್ಯ : ಕಾವ್ಯ ಮತ್ತು ಸಮಾಜ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ
ಸಲ್ಲಿಸುತ್ತಿರುವ ಮಹಾಪ್ರಬಂಧ

ಸಂಶೋಧಕರು
ಹೆಚ್.ಡಿ. ಉಮಾಶಂಕರ

ಮಾರ್ಗದರ್ಶಕರು
ಡಾ. ಬಿ.ಎಂ. ಪುಟ್ಟಯ್ಯ
ಸಹ ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೨

539

ದಲಿತ ಕಾವ್ಯ : ಕಾವ್ಯ ಮತ್ತು ಸಮಾಜ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ
ಸಲ್ಲಿಸುತ್ತಿರುವ ಮಹಾಪ್ರಬಂಧ

ಸಂಶೋಧಕರು
ಹೆಚ್.ಡಿ. ಉಮಾಶಂಕರ

ಮಾರ್ಗದರ್ಶಕರು
ಡಾ. ಬಿ.ಎಂ. ಪುಟ್ಟಯ್ಯ
ಸಹ ಪ್ರಾಧ್ಯಾಪಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೨

ಮಾರ್ಗದರ್ಶಕರ ದೃಢೀಕರಣ ಪತ್ರ

ದಲಿತ ಕಾವ್ಯ : ಕಾವ್ಯ ಮತ್ತು ಸಮಾಜ ಎಂಬ ಮಹಾಪ್ರಬಂಧವನ್ನು **ಹೆಚ್.ಡಿ. ಉಮಾಶಂಕರ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವನ್ನು ಇಡಿಯಾಗಿ ಇಲ್ಲವೆ ಬಿಡಿಯಾಗಿ ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: 22-02-12

ಮಾರ್ಗದರ್ಶಕರು

ಡಾ. ಬಿ.ಎಂ. ಪುಟ್ಟಯ್ಯ

ಸಹ ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಶೋಧಕರ ಪ್ರಮಾಣ ಪತ್ರ

ದಲಿತ ಕಾವ್ಯ : ಕಾವ್ಯ ಮತ್ತು ಸಮಾಜ ಎಂಬ ಮಹಾಪ್ರಬಂಧವನ್ನು ಡಾ. ಬಿ.ಎಂ. **ಪುಟ್ಟಯ್ಯ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಮಹಾಪ್ರಬಂಧವನ್ನು ಇಡಿಯಾಗಿ ಇಲ್ಲವೆ ಬಿಡಿಯಾಗಿ ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: ೧೬.೦೨.೨೦೧೨

ಸಂಶೋಧಕರು

ಹೆಚ್.ಡಿ. ಉಮಾಶಂಕರ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪರಿವಿಡಿ

ಅಧ್ಯಾಯ ಒಂದು

ಪ್ರವೇಶ

೧

ಪ್ರವೇಶ

ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಕಾವ್ಯ ಪ್ರಕಾರವನ್ನು ವಿಶೇಷವಾಗಿ ಪರಿಗಣಿಸಲಾಗಿದೆ. ಸಾಹಿತ್ಯ ಪರಂಪರೆಯಲ್ಲಿ ಕಾವ್ಯಕ್ಕೆ ಸಿಕ್ಕಷ್ಟು ಮಹತ್ವ ಬೇರೆ ಪ್ರಕಾರಗಳಿಗೆ ಸಿಕ್ಕಿಲ್ಲ. ಚಂಪೂ, ವಚನ, ರಗಳೆ, ಕಂದ, ಷಟ್ಪದಿ, ಸಾಂಗತ್ಯ ಮುಂತಾದ ರೂಪಗಳಲ್ಲಿ ಕಾವ್ಯ ತನ್ನ ವೈವಿಧ್ಯತೆಯನ್ನು ನಿರೂಪಿಸುತ್ತ ಬಂದಿದೆ. ಆಧುನಿಕ ಸಾಹಿತ್ಯದಲ್ಲಿಯೂ ಕೂಡ ಕಾವ್ಯ ಪ್ರಕಾರವು ವೈವಿಧ್ಯಮಯವಾಗಿ ಬೆಳೆದಿದೆ. ಕಾವ್ಯದ ವಸ್ತು, ಧೋರಣೆ, ಶೈಲಿಯಲ್ಲಿ ಪಂಪನಾದಿಯಾಗಿ ಇಂದಿನ ಕವಿಗಳವರೆಗೂ ಹಲವು ಹೊಸತನಗಳು ಮೂಡಿ ಬಂದಿರುವುದನ್ನು ಕಾಣಬಹುದು.

ಕಾವ್ಯ ಹೇಗಿರಬೇಕು? ಹೇಗಿದ್ದರೆ ಅದು ಆಹ್ಲಾದಕರವಾಗಿರುತ್ತದೆ? ಆಹ್ಲಾದಕರವಾಗಿ ಮಾಡಬೇಕಾದರೆ ಅದರಲ್ಲಿ ಯಾವ ಯಾವ ಅಂಶಗಳನ್ನು ಸೇರಿಸಬೇಕು ಎಂಬ ಆಸ್ವಾದನಾ ನೆಲೆಯ ಅಂಶಗಳೇ ಕನ್ನಡ ಕಾವ್ಯ ಪರಂಪರೆಯ ಗತಿಯನ್ನು ನಿರ್ಧರಿಸುತ್ತಾ ಬಂದಿತ್ತು. ಕಾವ್ಯ ಮೀಮಾಂಸೆ ಹೆಸರಿನ ಶಾಸ್ತ್ರವೂ ಕೂಡ ಈ ಹಿನ್ನೆಲೆಯಲ್ಲಿ ತನ್ನ ಚಹರೆಗಳನ್ನು ಪಡೆಮೂಡಿಸಿತ್ತು. ಕಾವ್ಯ ಇರುವುದೇ ಆನಂದವನ್ನು ಉಂಟುಮಾಡಲಿಕ್ಕೆ ಎಂಬ ತತ್ವಗಳು ಕಾವ್ಯ ಮೀಮಾಂಸೆಯ ಮೂಲ ನೆಲೆಗಟ್ಟಾಗಿತ್ತು. ಈ ನೆಲೆಗಟ್ಟಿನ ಆಧಾರದ ಮೇಲೆಯೇ ಅನೇಕರು ತಮ್ಮ ಕಾವ್ಯಗಳನ್ನು ರಚಿಸಿದರು.

ಲಿಖಿತ ಪರಂಪರೆಯ ಬಹುಮುಖ್ಯ ಅಭಿವ್ಯಕ್ತಿ ಮಾಧ್ಯಮವಾಗಿ ಮಾರ್ಪಟ್ಟ ಕಾವ್ಯ ಪ್ರಕಾರ, ಓದುವ ವರ್ಗದ ರುಚಿ-ಅಭಿರುಚಿಗಳ ಹಿನ್ನೆಲೆಗೆ ಸ್ಪಂದಿಸುವ ನೆಪದಲ್ಲಿ ಆನಂದ, ಆರಾಧನಾ ಮತ್ತು ಆಸ್ವಾದನಾ ನೆಲೆಗೆ ಸೀಮಿತಗೊಂಡಿತು. ಕಾವ್ಯ ಈ ಆಸ್ವಾದನಾ ನೆಲೆಗೆ ಸೀಮಿತಗೊಂಡಿದ್ದೇ ತಡ ಮೇಲ್ವರ್ಗದ ಆಲೋಚನೆಗಳು ಏಕಾಏಕಿ ಕಾವ್ಯಕ್ಷೇತ್ರದಲ್ಲಿ ದುಮುಕಿದವು. ಭಾರತದಂತಹ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯ ಅರಿವು ಪೂರ್ಣ ಪ್ರಮಾಣದಲ್ಲಿ ಅಗೋಚರಕ್ಕೆ ಒಳಗಾಗುವ ನಿಟ್ಟಿನಲ್ಲಿ 'ಭಾರತ ಬಹುಸಂಸ್ಕೃತಿಗಳ ದೇಶ' ಎಂಬ ಮುಖವಾಡವನ್ನು ತೊಡಿಸುತ್ತಲೇ ಅನೇಕ ಕವಿಗಳ ಕಾವ್ಯಗಳು ಹೊರಹೊಮ್ಮಿದವು.

'ಕಾವ್ಯಂ ಆನಂದಾಯ' ಎನ್ನುವ ಭಾರತೀಯ ಕಾವ್ಯ ಮೀಮಾಂಸೆಯ ಪರಿಕಲ್ಪನೆಗೆ ಕಟ್ಟುಬಿದ್ದ ಅನೇಕ ಕವಿಗಳು ಕಾವ್ಯವನ್ನು ಈ ಹಿನ್ನೆಲೆಯಲ್ಲಿಯೇ ರಚಿಸತೊಡಗಿದರು. ಇದರಿಂದಾಗಿ ಸಮಾಜ, ಅದರ ಇಷ್ಟಾನಿಷ್ಟಗಳು, ವೈರುಧ್ಯಗಳು, ತಾರತಮ್ಯಗಳು, ಮೇಲು-

ಕೀಳುಗಳು ಇವರ ಕಾವ್ಯದ ಪರಿಕರಗಳಾಗಿ ಮೂಡಿಬರಲು ಸಾಧ್ಯವಾಗಲೇ ಇಲ್ಲ. ಜಾತಿ, ವರ್ಗ, ಲಿಂಗ, ಮತ್ತು ಧಾರ್ಮಿಕ ತಾರತಮ್ಯಗಳು ಇವರಿಗೆ ಪ್ರಧಾನವಾಗಲೇ ಇಲ್ಲ. ಜಾತಿಯ ಕಂದಕದಲ್ಲಿ ದಿನನಿತ್ಯ ಶೋಷಣೆಗೊಳಗಾಗುತ್ತಿರುವ ಇಲ್ಲಿನ ಅಸ್ಪೃಶ್ಯರ ಬದುಕು ಇವರ ಕಾವ್ಯದೇವಿಯ ಕಣ್ಣುಗಳಲ್ಲಿ ಮೂಡಲೇ ಇಲ್ಲ. ಶ್ರಮಿಕ ನೆಲೆಯ ಇಚ್ಛಾಶಕ್ತಿಗಳು ಇವರ ಕಾವ್ಯದ ಯಾವ ಸಾಲುಗಳಲ್ಲೂ ಕಾಣಿಸಲೇ ಇಲ್ಲ.

ಕಾವ್ಯವು ಸೌಂದರ್ಯದ ಉದ್ದೇಶಕ್ಕೆ ಬಳಕೆಯಾದಾಗ ಜಗವೆಲ್ಲಾ ಸುಂದರ. ಮರ, ಗಿಡ, ಬಳ್ಳಿ, ಹೂವು, ಗಂಧ, ದುಂಬಿ ಎಲ್ಲವೂ ಕಾವ್ಯದ ಮೈಯೊಳಗೆ ನಿಂತು ಜಗತ್ತನ್ನೇ ಸೌಂದರ್ಯದ ಲಹರಿಯಲ್ಲಿ ತೇಲಾಡುವಂತೆ ಮಾಡುತ್ತವೆ. ಆದರೆ ಜಗತ್ತಿನಲ್ಲಿ ಸೌಂದರ್ಯಾರಾಧಕರಷ್ಟೇ ಇಲ್ಲ; ನೋವಿನ ಸ್ಥಿತಿಗಳಲ್ಲಿ ಬದುಕುವವರೂ ಇಲ್ಲಿದ್ದಾರೆ. ಈ ಮಡಿವ ಜನತೆ ಕಾವ್ಯ ಸೃಷ್ಟಿಯಲ್ಲಿ ತೊಡಗಿದಾಗ ಪಾರಂಪರಿಕ ನೆಲೆಗಟ್ಟುಗಳು ತಮಗೆ ತಾವೇ ದೂರ ಸರಿದು ನಿಲ್ಲುತ್ತವೆ. ಏಕೆಂದರೆ ದುಡಿವ ಜನತೆಯ ಬೆವರ ಹನಿಗಳು ಇಲ್ಲಿ ಅಕ್ಷರದ ರೂಪ ಪಡೆದಿರುತ್ತವೆ. ಅಕ್ಷರ ಸಂಸ್ಕೃತಿಯಿಂದ ಯಾವ ಸಮುದಾಯಗಳು ವಂಚಿತವಾಗಿದ್ದವೋ ಅವು ತಮ್ಮ ಅಭಿವ್ಯಕ್ತಿಗಾಗಿ ಅಕ್ಷರವನ್ನು ಬಳಸಿಕೊಂಡಾಗ ಹೊಮ್ಮುವ ಒಡಲೊಳಗಿನ ತವಕ ತಲ್ಲಣಗಳೇ ಸಾಹಿತ್ಯ ಮತ್ತು ಕಾವ್ಯದ ರೂಪ ಪಡೆದು ದುಡಿವ ಸಮುದಾಯದ ಬದುಕುಗಳನ್ನು ಅನಾವರಣಗೊಳಿಸಿದವು.

ಭಾರತದಲ್ಲೊಂದು ದುಡಿವ ಸಮುದಾಯವಿದೆ, ಅದು ಊರ ಹೊರಗೆ ಅವಿತು ಕುಳಿತಿದೆ. ಜಾತಿ, ವರ್ಗ, ವರ್ಣ, ಧರ್ಮ ಮುಂತಾದವುಗಳಿಂದ ನಿರಂತರವಾಗಿ ದೌರ್ಜನ್ಯಕ್ಕೆ ಒಳಗಾಗುತ್ತಿದೆ. ಅಸ್ಪೃಶ್ಯತೆ, ಸಾಮೂಹಿಕ ಬಹಿಷ್ಕಾರ, ಶ್ರಮಕ್ಕೆ ಸರಿಯಾಗಿ ಸಿಗದ ಕೂಲಿ, ಅವಮಾನ, ಅತ್ಯಾಚಾರ, ಮಲ-ಮೂತ್ರ ಕುಡಿಸುವ ಹೇಯ ಕೃತ್ಯಗಳು, ಪಾರಂಪರಿಕ ಜೀತ ಮುಂತಾದವುಗಳು ಇವರ ಬದುಕನ್ನು ಅತಂತ್ರ ಸ್ಥಿತಿಗೆ ತಳ್ಳಿವೆ. ತಮ್ಮ ದುಡಿಮೆಯಲ್ಲೇ ಬಂಡವಾಳಿಗರ ಬದುಕನ್ನು ಉದ್ಧಾರ ಮಾಡುತ್ತಿರುವ ಇವರು ತಮ್ಮ ಬದುಕಿಗಾಗಿ ಅದೇ ಭೂಮಾಲೀಕ, ಬಂಡವಾಳಶಾಹಿಗಳ ಕೈಕೆಳಗೆ ಜೀತದಾಳುಗಳಾಗಿ ಬದುಕು ಸಾಗಿಸುತ್ತಿದ್ದಾರೆ. ಇವರನ್ನು ಪರಂಪರೆ, ಪುರಾಣ, ಚರಿತ್ರೆ ಯಾವುವೂ ಕೂಡ ಪರಿಗಣಿಸಲೇ ಇಲ್ಲ. ಎಲ್ಲಾ ರೀತಿಗಳಿಂದ ವಂಚಿತರಾದ ಈ ಜನತೆ ತಮ್ಮ ಬದುಕನ್ನು ಬೇರೆಯವರ ಹಿತ ಕಾಯುವುದಕ್ಕಾಗಿಯೇ ಮುಡಿಪಾಗಿಟ್ಟರು.

ಇಲ್ಲಿ ದುಡಿಯುವ ವರ್ಗ ಶೋಷಣೆಗೆ ಒಳಗಾಗಿದೆ. ಆ ಶೋಷಣೆ ಅವರ ಗಮನಕ್ಕೆ ಬರದ ಹಾಗೆ ನೋಡಿಕೊಳ್ಳಲಾಗುತ್ತಿದೆ. ಇದನ್ನು ಸಾಧಿಸಲು ಅನೇಕ ಮೌಢ್ಯಗಳ, ಪಾಪ-ಪುಣ್ಯಗಳ, ಧರ್ಮ-ಕರ್ಮಗಳ ನಂಬಿಕೆಗಳನ್ನು ಹೆಣೆಯಲಾಗಿದೆ. ಹೀಗೆ ದುಡಿಯುವವರನ್ನು ವಂಶ ಪಾರಂಪರ್ಯ ದುಡಿಯುವ ಪರಿಸ್ಥಿತಿಯಲ್ಲೆ ಮುಂದುವರಿಸುವ ಹುನ್ನಾರವನ್ನು ಆಳುವ

ವರ್ಗ ನಿರಂತರವಾಗಿ ಕಾಪಾಡಿಕೊಂಡು ಬಂದಿದೆ. ಈ ಹುನ್ನಾರ ಶತಮಾನಗಳ ಕಾಲ ದಲಿತರನ್ನು ಆಹುತಿ ತೆಗೆದುಕೊಂಡಿದೆ. ಇದಕ್ಕೆ ಜಾತಿ, ವರ್ಗ, ವರ್ಣ, ಧರ್ಮಗಳು ಬೆನ್ನೆಲುಬಾಗಿ ನಿಂತು ಸಮಾಜದ ಕಟ್ಟಕಡೆಯ ಮನುಷ್ಯನನ್ನು ಅಧೋಗತಿಗೆ ತಳ್ಳಿವೆ. ಇವುಗಳಿಂದ ದಲಿತರನ್ನು ಬಿಡುಗಡೆಗೊಳಿಸಿ ಸಮಸಮಾಜವನ್ನು ಅಸ್ತಿತ್ವಕ್ಕೆ ತರಲು ಅನೇಕ ಚಿಂತಕರು, ದಾರ್ಶನಿಕರು, ಹೋರಾಟಗಾರರು, ಸಮಾಜ ಸುಧಾರಕರು ಸಾಮಾಜಿಕ ಪರಿವರ್ತನೆಗಾಗಿ ಹೋರಾಟಗಳನ್ನು ಕೈಗೊಂಡರೂ ಕೂಡ ದಲಿತರ ಬದುಕು ಸಂಪೂರ್ಣವಾಗಿ ಬದಲಾಗಲು ಸಾಧ್ಯವಾಗಲಿಲ್ಲ.

ಅಂಬೇಡ್ಕರ್ ದಲಿತರಿಗೆ ಹೋರಾಟದ ತಳಪಾಯವನ್ನು ಹಾಕಿಕೊಟ್ಟರು. ಇದರ ಮೇಲೆ ಭಾರತದಾದ್ಯಂತ ಅಕ್ಷರ ಕಲಿತ ದಲಿತರು ಶೋಷಣೆ ವಿರುದ್ಧ ಹೋರಾಟದ ಮನೋಭಾವನೆಯನ್ನು ಮೈಗೂಡಿಸಿಕೊಂಡರು. ಜೊತೆಗೆ ಅಂಬೇಡ್ಕರ್, ಮಾರ್ಕ್ಸ್, ಫುಲೆ, ಪೆರಿಯಾರ್, ಬುದ್ಧ, ಬಸವಣ್ಣ ಮುಂತಾದವರ ಚಿಂತನೆಗಳಿಂದ ಪ್ರಭಾವಿತಗೊಂಡರು. ಇದರಿಂದಾಗಿ ದೇಶದಾದ್ಯಂತ ದಲಿತರ ಪರವಾದ ದನಿಯನ್ನು ಹೋರಾಟದ ಮೂಲಕ ಹೊರಹಾಕಿದರು. ಇವರ ಈ ಹೋರಾಟದ ಹಾದಿಯಲ್ಲಿ ದಲಿತ ಕಾವ್ಯ ಮೂಡಿಬಂದು ಹೋರಾಟಕ್ಕೊಂದು ವೇಗವರ್ಧಕವಾಯಿತು. ದಲಿತರು ತಮ್ಮ ಮೇಲಿನ ದಿನನಿತ್ಯದ ದೌರ್ಜನ್ಯಗಳ ವಿರುದ್ಧ ಧಿಕ್ಕಾರಗಳನ್ನು ಕೂಗಲು ಪ್ರಾರಂಭಿಸಿದರು. ಅಲ್ಲಿಂದಲೇ ದಲಿತ ಸಾಹಿತ್ಯ ತನ್ನ ಅಸ್ತಿತ್ವವನ್ನು ಕಂಡುಕೊಂಡಿತು. ಶತಮಾನಗಳಿಂದ ಅದುಮಿಟ್ಟ ನೋವು ಒಮ್ಮೆಗೇ ಸ್ಫೋಟಗೊಂಡಂತೆ ದಲಿತ ಕಾವ್ಯ ದಲಿತ ಹೋರಾಟಗಾರರ ಮೂಲಕ ಹೊರಹೊಮ್ಮಿತು. ಈ ಕಾರಣದಿಂದಾಗಿಯೇ ದಲಿತರನ್ನು, ಅವರು ಬರೆದ ಸಾಹಿತ್ಯವನ್ನು, ಘೋಷಣೆಯನ್ನು, ಸಾಮಾಜಿಕ ಸ್ಥಿತಿಗತಿಯನ್ನು ಮತ್ತು ಹೋರಾಟವನ್ನು ಪ್ರತ್ಯೇಕ ಪ್ರತ್ಯೇಕವಾಗಿ ನೋಡಲು ಬರುವುದಿಲ್ಲ. ಪ್ರತ್ಯೇಕಿಸಿ ನೋಡಿದರೆ ದಲಿತರ ಬದುಕನ್ನಾಗಲೀ, ಸಾಹಿತ್ಯವನ್ನಾಗಲೀ ಸಮಗ್ರವಾಗಿ ತಿಳಿದುಕೊಳ್ಳಲು ಸಾಧ್ಯವಾಗುವುದಿಲ್ಲ.

ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯವಾಗಿ ತೀವ್ರ ಶೋಷಣೆಗೆ ಶತಮಾನಗಳಿಂದ ದಲಿತರನ್ನು ಒಳಪಡಿಸಲಾಗಿದೆ. ಈ ರೀತಿ ಶೋಷಣೆಗೆ ಗುರಿಯಾಗುತ್ತಾ ಬಂದ ದಲಿತವರ್ಗ ತಮ್ಮ ಹಕ್ಕುಗಳಿಗಾಗಿ ಹೋರಾಡುವ ತೀವ್ರ ಸಂಕಲ್ಪ ತೊಟ್ಟಿದ್ದು ಇಪ್ಪತ್ತನೇ ಶತಮಾನದ ಕೊನೆಯ ಭಾಗದಲ್ಲಿ. ಸ್ವಾತಂತ್ರ್ಯ ನಂತರ ದಲಿತರ ಬದುಕು ಹಸನಾಗುತ್ತದೆ ಎಂದು ನಂಬಿಸಲಾಗಿತ್ತು. ಆದರೆ ಸ್ವಾತಂತ್ರ್ಯದ ಹೆಸರಿನಲ್ಲಿ ಅಧಿಕಾರ ಹಸ್ತಾಂತರವಾದ ನಂತರ ಅಧಿಕಾರದ ಚುಕ್ಕಾಣಿ ಹಿಡಿದ ಇಲ್ಲಿನ ಆಳುವ ವರ್ಗ ದಲಿತರ ಬದುಕನ್ನು ಇನ್ನೂ ಅತಂತ್ರ ಸ್ಥಿತಿಗೆ ತಳ್ಳಿತು. ಇಂತಹ ಆಳುವ ವರ್ಗದ ಹುನ್ನಾರಗಳ ವಿರುದ್ಧ ಹೋರಾಡುವುದೇ ದಲಿತರ ಮುಂದಿದ್ದ ಬಹುಮುಖ್ಯ ಆಯ್ಕೆಯಾಗಿತ್ತು. ಇಂತಹ ಸಂದರ್ಭದಲ್ಲಿ ದಲಿತರ ಬದುಕಿನ

ವಿವಿಧ ಮಜಲುಗಳನ್ನು ಜನತೆಯ ಮುಂದೆ ತಂದು ನಿಲ್ಲಿಸಿ, ಅವರ ಶತಮಾನಗಳ ಶೋಷಣೆಯ ವಿವಿಧ ಮುಖಗಳನ್ನು ಶೋಷಕರಿಗೆ ಮತ್ತು ಶೋಷಿತರಿಗೆ ಪರಿಚಯಿಸಿ, ಆ ಮೂಲಕ ಹೋರಾಟಕ್ಕೆ, ಸಮಸಮಾಜದ ನಿರ್ಮಾಣಕ್ಕೆ ಜನತೆಯನ್ನು ಒಗ್ಗೂಡಿಸುವ ಕಾರ್ಯವನ್ನು ಅಕ್ಷರ ಕಲಿತ ದಲಿತರು ಮಾಡಲು ಮುಂದಾದರು. ಈ ಒಗ್ಗೂಡುವಿಕೆ 'ದಲಿತ ಸಂಘರ್ಷ ಸಮಿತಿ'ಯನ್ನು ಕಟ್ಟುವಂತೆ ಮಾಡಿತು. ಈ ಸಂಘಟನೆ ನಾಡಿನಾದ್ಯಂತ ದಲಿತರ ಪರವಾದ ಹೋರಾಟವನ್ನು ಹಮ್ಮಿಕೊಂಡಿತು. ಈ ಹೋರಾಟದ ಫಲವೇ ೭೦ರ ದಶಕದಲ್ಲಿ ಅಕ್ಷರ ಕಲಿತ ದಲಿತರಿಂದ ರಚನೆಯಾದ ದಲಿತ ಕಾವ್ಯ.

ದಲಿತ ಸಾಹಿತ್ಯ ದುಡಿಯುವವರ ಬಗೆಗಿನ ಸಾಹಿತ್ಯ. ಹೆಸರೇ ಸೂಚಿಸುವ ಹಾಗೆ ಇದು ಶೋಷಕರಿಂದ ದಮನ ದೌರ್ಜನ್ಯಕ್ಕೆ ಒಳಗಾದವರ, ನೋವುಂಡವರ, ಶೋಷಣೆಗೆ ಒಳಗಾದವರ, ಊರ ಹೊರಗೆ ಇರಿಸಲ್ಪಟ್ಟವರ, ನಿತ್ಯ ಅವಮಾನದ ಬೆಂಕಿಯಲ್ಲಿ ಬೇಯುತ್ತಿರುವವರ ಸ್ಥಿತಿಗತಿಗಳನ್ನು ಕುರಿತ ಸಾಹಿತ್ಯ. ದಲಿತರು ಸಾಹಿತ್ಯದ ವಿವಿಧ ಪ್ರಕಾರಗಳಾದ ಕಾವ್ಯ, ನಾಟಕ, ಕಥೆ, ಪ್ರಬಂಧ, ವಿಮರ್ಶೆ, ಜೀವನ ಚರಿತ್ರೆ, ಹೋರಾಟದ ಹಾಡುಗಳು, ಕರಪತ್ರಗಳು, ಗೋಡೆ ಬರಹಗಳು, ವಿವಿಧ ರೀತಿಯ ಘೋಷಣೆಗಳು ಮುಂತಾದವುಗಳ ಮೂಲಕ ತಮ್ಮ ಅಭಿವ್ಯಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ಈ ಅಭಿವ್ಯಕ್ತಿಯಲ್ಲಿ ದಲಿತರ ಬದುಕು ಮತ್ತು ಆಶಯಗಳು ಮನೆಮಾಡಿರುವುದನ್ನು ಕಾಣಬಹುದು. ದಲಿತ ಸಾಹಿತ್ಯದಲ್ಲಿಯೂ ಕೂಡ ಸಾಹಿತ್ಯದ ಇತರೆ ಪ್ರಕಾರಗಳಿಗಿಂತ ಕಾವ್ಯವನ್ನು ವಿಶೇಷವಾಗಿ ಪರಿಗಣಿಸಲಾಗಿದೆ.

ದಲಿತ ಕಾವ್ಯ ಎಪ್ಪತ್ತರ ದಶಕದಲ್ಲಿ ಅಕ್ಷರ ಕಲಿತ ದಲಿತರಿಂದ ರಚನೆಗೊಳ್ಳುತ್ತಿದ್ದಾಗ ಕನ್ನಡ ನಾಡಿನಲ್ಲಿ ಹೋರಾಟಗಾರರಿಗೆ ಅನೇಕ ವೇದಿಕೆಗಳು ಸೃಷ್ಟಿಗೊಂಡಿದ್ದವು. ಈ ವೇದಿಕೆಗಳಲ್ಲಿ ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಚರ್ಚೆಗಳು, ವಾಗ್ವಾದಗಳು, ಮುಷ್ಕರಗಳು, ಚಳುವಳಿಗಳು ನಡೆಯುತ್ತಿದ್ದವು. ಈ ಸಂದರ್ಭದಲ್ಲಿ ದಲಿತರ ದನಿಯಾಗಿ ಹೊರಬಂದ 'ದಲಿತ ಸಂಘರ್ಷ ಸಮಿತಿ' ದಲಿತರ ಮೇಲಿನ ದೌರ್ಜನ್ಯಗಳನ್ನು ಧಿಕ್ಕರಿಸಲು, ಪ್ರತಿಭಟಿಸಲು ಮುಂದಾಯಿತು. ಈ ಸಂಘಟನೆ 'ದಲಿತರಿಗೂ ಬದುಕುವ ಸಮಾನ ಹಕ್ಕಿದೆ' ಎಂದು ತೋರಿಸಿಕೊಟ್ಟ ಅಂಬೇಡ್ಕರ್ ಅವರ ಚಿಂತನೆಗಳಿಂದ ಸ್ಫೂರ್ತಿ ಪಡೆದಿತ್ತು. ಇದರ ಪರಿಣಾಮವೆಂಬಂತೆ ಅಕ್ಷರಸ್ಥ ದಲಿತರು ಸಮಾಜದೊಳಗಿನ ಬಿರುಕುಗಳನ್ನು, ಒಳಿತು ಕೆಡುಕುಗಳನ್ನು, ಅರ್ಥಮಾಡಿಕೊಳ್ಳಲು ಪ್ರಾರಂಭಿಸಿ ಜಾತಿ, ಮತ, ವರ್ಗ, ವರ್ಣ ವ್ಯವಸ್ಥೆಯೊಳಗಿನ ಅಸಮಾನತೆ, ಅಸ್ಪೃಶ್ಯತೆ, ದೌರ್ಜನ್ಯ, ಅಪಮಾನ, ಹಿಂಸೆ, ಕ್ರೌರ್ಯ ಮುಂತಾದವುಗಳನ್ನು ಸಾಹಿತ್ಯ ರೂಪದಲ್ಲಿ, ಚಳುವಳಿಯ ರೂಪದಲ್ಲಿ, ಪ್ರತಿಭಟನೆಯ ರೂಪದಲ್ಲಿ ಹೊರಹಾಕಲು ಮುಂದಾದರು. ಈ ಮೂಲಕ ದಲಿತರ ಸಮಗ್ರ ಬದುಕನ್ನು ಕಟ್ಟಿಕೊಡಲು ಸಾಧ್ಯವಾಗದಿದ್ದರೂ ಸಾಧ್ಯವಾದಷ್ಟು ಮಟ್ಟಿಗೆ ದಲಿತ ಜಗತ್ತಿನ ಅನಾವರಣವನ್ನು ಜನತೆಯ ಮುಂದೆ ತಂದು ಹೋರಾಟಕ್ಕೆ ಅಣಿಗೊಳಿಸುವ ಹಾಗೆ ಬಿಂಬಿಸಿದರು.

ಮೌಖಿಕ ಪರಂಪರೆಯಲ್ಲೆ ತಮ್ಮ ಅಭಿವ್ಯಕ್ತಿಯನ್ನು ವ್ಯಕ್ತಪಡಿಸುತ್ತಾ ಬಂದ ದಲಿತರಿಗೆ ಕಾವ್ಯ ಬಹುಮುಖ್ಯ ಮಾಧ್ಯಮವಾಗಿ ಪರಿಣಮಿಸಿತು. ಬೇರೆಲ್ಲಾ ಪ್ರಕಾರಗಳಿಗಿಂತ ಕಾವ್ಯ ಹಾಡುಗಾರಿಕೆಗೆ ಹತ್ತಿರವಾಗಿ ಜನರಿಗೆ ಬೇಗ ತಲುಪುತ್ತದೆ. ಈ ನಂಬಿಕೆಯೇ ರಾಜ್ಯಾದ್ಯಂತ ಹಲವು ದಲಿತ ಕವಿಗಳು ಕಾವ್ಯ ಪ್ರಕಾರದಲ್ಲಿ ತಮ್ಮ ಅಭಿವ್ಯಕ್ತಿಯನ್ನು ರೂಪಿಸಲು ಸಾಧ್ಯವಾಯಿತು. ದಲಿತರಲ್ಲಿ ಅಕ್ಷರಸ್ಥರು ಎಷ್ಟಿರುವರೋ ಅದಕ್ಕೆ ಮೂರು ಪಟ್ಟು ಅನಕ್ಷರಸ್ಥರಿದ್ದಾರೆ. ಕೇವಲ ಅಕ್ಷರ ಬಲ್ಲವರಿಂದಷ್ಟೇ ದಲಿತರ ಹೋರಾಟ ಯಶಸ್ವಿಯಾಗಲು ಸಾಧ್ಯವಿಲ್ಲ. ಇದಕ್ಕೆ ದಲಿತರ ಸಮಗ್ರ ಒಗ್ಗೂಡುವಿಕೆ ಬಹಳ ಮುಖ್ಯ. ಇದನ್ನು ಮನಗಂಡೇ ದಲಿತ ಕವಿಗಳು ಆದಷ್ಟು ತಮ್ಮ ಚಿಂತನೆಗಳನ್ನು ದುಡಿವ ಜನತೆಯ ನೆಲೆಗೆ ಕೊಂಡೊಯ್ಯಲು ಪ್ರಾರಂಭಿಸಿದರು.

ದಲಿತ ಕಾವ್ಯಕ್ಕೂ ದಲಿತ ಹೋರಾಟಕ್ಕೂ ಒಂದು ಅವಿನಾಭಾವ ಸಂಬಂಧವಿದೆ. ಎಲ್ಲಿ ದಲಿತರ ಹೋರಾಟವಿರುತ್ತಿತ್ತೋ ಅಲ್ಲಿ ಕಾವ್ಯ ಸೃಷ್ಟಿಯಾಗುತ್ತಿತ್ತು. ಎಲ್ಲಿ ದಲಿತ ಕಾವ್ಯ ಹಾಡಲ್ಪಡುತ್ತಿತ್ತೋ ಅಲ್ಲಿ ಹೋರಾಟವು ತೀವ್ರತೆಯನ್ನು ಪಡೆಯುತ್ತಿತ್ತು. ದಲಿತ ಕಾವ್ಯ ಸಮುದಾಯದ ಸಾಮೂಹಿಕ ಸೃಷ್ಟಿ. ಕವಿಯ ಹೆಸರೇ ಮರೆತು ಹೋಗಿ ಕಾವ್ಯವು ಜನರ ಹೋರಾಟದ ಹಾದಿಯಲ್ಲಿ ಸ್ಫೂರ್ತಿಯಾಯಿತು. ಕಾವ್ಯ ಜನಕಾವ್ಯವಾಗಿ ನೆಲೆಗೊಳ್ಳುವಂತಹ ಬಗೆ ಇದು. ಇಲ್ಲಿ ನೋವುಂಡ ಮನಸ್ಸುಗಳ ಮೂಕರೋಧನವಿದೆ. ದಲಿತ ಸಮುದಾಯದ ನೋವುಗಳ ನಿವೇದನೆಯಿದೆ. ಅದಕ್ಕೆ ದಲಿತ ಕಾವ್ಯವನ್ನು ಭಕ್ತಿಗೀತೆಯಂತೆ, ಭಾವಗೀತೆಯಂತೆ ಹಾಡುತ್ತಾ, ಗುನುಗುತ್ತಾ, ಕೈಕಾಲುಗಳಲ್ಲಿ ತಾಳಹಾಕುತ್ತಾ ಮೈಮರೆತು ಕೇಳಲು ಆಗುವುದಿಲ್ಲ. ಏಕೆಂದರೆ ಇದು ಎಚ್ಚರದ ಉರಿ ತಾಕುವ ಹಾಗೆ.

*****

ಅಧ್ಯಾಯ ಎರಡು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

೨.೧. ಅಧ್ಯಯನದ ಉದ್ದೇಶ

೨.೨. ಅಧ್ಯಯನದ ವ್ಯಾಪ್ತಿ

೨.೩. ಅಧ್ಯಯನದ ವಿಧಾನ

೨

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

೨.೧. ಅಧ್ಯಯನದ ಉದ್ದೇಶ

೧. ದಲಿತ ಕಾವ್ಯದ ಸ್ವರೂಪ ಏನು ಎಂಬುದನ್ನು ಕುರಿತು ಈಗಾಗಲೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಹಾಗಾಗಿ ಇಲ್ಲಿ ದಲಿತ ಕಾವ್ಯದ ವಸ್ತು ಮತ್ತು ಅದು ಅಭಿವ್ಯಕ್ತಿಸುತ್ತಿರುವ ಸಾಮಾಜಿಕ ವಸ್ತುಸ್ಥಿತಿಯನ್ನು ಕುರಿತು ಅಧ್ಯಯನ ಮಾಡಲಾಗುವುದು.

೨. ದಲಿತ ಕಾವ್ಯವನ್ನು ದಲಿತ ಕವಿಗಳೇ ರಚಿಸಿದ್ದರೂ ದಲಿತರ ಸಾಮಾಜಿಕ ಪರಿಸ್ಥಿತಿಯಿಂದ ಬೇರ್ಪಟ್ಟ ಸ್ಥಿತಿ ವಾಸ್ತವ ನೆಲೆಯಲ್ಲಿದೆ. ಈ ಹಿನ್ನೆಲೆಯಲ್ಲಿ ದಲಿತ ಕಾವ್ಯಕ್ಕೂ ದುಡಿಯುವ ಸಮುದಾಯಕ್ಕೂ ಇರುವ ಸಂಬಂಧದ ಎಳೆಗಳನ್ನು ಚರ್ಚಿಸುವುದು ಈ ಅಧ್ಯಯನದ ಉದ್ದೇಶಗಳಲ್ಲಿ ಒಂದು.

೩. ದಲಿತರ ದುಡಿಮೆಯ ನೆಲೆಗಳಿಂದ ಬೇರಾದ ಅಕ್ಷರ ಕಲಿತ ದಲಿತರು ತಮ್ಮ ಬರಹದ ಮೂಲಕ ಕಟ್ಟಿದ ಸಾಮಾಜಿಕ ವಾಸ್ತವತೆ ಯಾವುದು ಹಾಗೂ ಪ್ರಸ್ತುತದಲ್ಲಿ ಇರುವ ವ್ಯವಸ್ಥೆಯ ತಲ್ಲಣಗಳೇನು? ದಲಿತ ಸಮಾಜ ಕುರಿತು ಬಂದಿರುವ ಹಿತಾಸಕ್ತಿಯು ದಲಿತರ ಹಿತಾಸಕ್ತಿ ನೆಲೆಯಿಂದ ಬಂದಿದೆಯೋ ಅಥವಾ ದಲಿತೇತರ ಹಿತಾಸಕ್ತಿ ನೆಲೆಯಿಂದ ಬಂದಿದೆಯೋ ಎಂಬುದರ ಚರ್ಚೆ ಮತ್ತು ಅದು ಮುಂದೆ ಬೀರಬಹುದಾದ ಪರಿಣಾಮಗಳನ್ನು ಬಹುಮುಖ ನೆಲೆಗಳಲ್ಲಿ ಮುಖಾಮುಖಿಯಾಗಿಸುತ್ತಾ ವಿಶ್ಲೇಷಿಸುವುದೇ ಈ ಅಧ್ಯಯನದ ಮುಖ್ಯ ಉದ್ದೇಶ.

೪. ದಲಿತ ಕಾವ್ಯವನ್ನು ಕುರಿತು ವಿಮರ್ಶಿಸಿರುವ ಲೇಖನಗಳ ಹಿಂದಿನ ಧೋರಣೆ ಮತ್ತು ಅವುಗಳ ವಿಶ್ಲೇಷಣೆಯಿಂದ ದಲಿತ ಕಾವ್ಯಕ್ಕೆ ದಕ್ಕಿದ ವಿಸ್ತಾರತೆ ಇವುಗಳನ್ನು ಪ್ರಶ್ನಿಸುತ್ತಲೇ ವ್ಯಾಖ್ಯಾನಿಸುವುದು ಈ ಅಧ್ಯಯನದ ಉದ್ದೇಶಗಳಲ್ಲಿ ಒಂದು.

೫. ಕಾವ್ಯ ರಚನೆಯು ಕವಿಗಳ ಸಾಮಾಜಿಕ ಹಿನ್ನೆಲೆಯಿಂದ ಪ್ರಭಾವಿತಗೊಂಡಿರುತ್ತದೆ. ಇದು ಅವರ ಅಭಿವ್ಯಕ್ತಿಯಲ್ಲಿ ಸಹಜವಾಗಿಯೇ ನಿರೂಪಿತಗೊಂಡಿರುತ್ತದೆ. ಇದಕ್ಕೆ ದಲಿತ ಕವಿಗಳೂ ಹೊರತಲ್ಲ. ಜಾತಿ, ವರ್ಣ, ವರ್ಗಗಳಿಂದ ನಿರಂತರ ಶೋಷಣೆಗೊಳಗಾದ ಇವರು ಸಹಜವಾಗಿ ಜಾತಿಯ ಮೂಲಕವೇ ತಮ್ಮ ಅಭಿವ್ಯಕ್ತಿಯನ್ನು ಪ್ರಾರಂಭಿಸುತ್ತಾರೆ. ಇದು ಚಾರಿತ್ರಿಕ

ಅನಿವಾರ್ಯತೆಯ ಫಲವೂ ಹೌದು. ಹಾಗಾಗಿ ಇಲ್ಲಿ ಜಾತಿ ವಿಶ್ಲೇಷಣೆ ಅನಿವಾರ್ಯವಾಗುತ್ತದೆ. ಆದ್ದರಿಂದ ಈ ಅಧ್ಯಯನದಲ್ಲಿ ದಲಿತ ಕಾವ್ಯದ ಜಾತಿ ಹಿನ್ನೆಲೆಯ ಪರಿಣಾಮಗಳನ್ನು ಚರ್ಚಿಸಲಾಗುವುದು.

೬. ಜಾತಿ, ವರ್ಗ, ವರ್ಣದಿಂದ ನೊಂದ ಜನತೆಯ ಕಾವ್ಯವನ್ನು ನೋಡುವಾಗ ಸಾಮಾಜಿಕ ವೈರುಧ್ಯಗಳ ಪ್ರಶ್ನೆ ಅನಿವಾರ್ಯವಾಗುತ್ತದೆ. ಈ ದೃಷ್ಟಿಯಿಂದ ದಲಿತ ಕಾವ್ಯವನ್ನು ಕುರಿತು ಅಧ್ಯಯನ ಮಾಡುತ್ತಿರುವ ಈ ಪ್ರಬಂಧದಲ್ಲಿ ದಲಿತ ಕಾವ್ಯದ ಹಿಂದಿರುವ ವರ್ಗ, ವರ್ಣದ ಆಯಾಮಗಳನ್ನು ಚರ್ಚಿಸಲಾಗುವುದು.

೭. ದಲಿತ ಕಾವ್ಯವು ನೊಂದ ಜನತೆಯ ನೋವನ್ನು ಅಭಿವ್ಯಕ್ತಿಸಿದೆ. ಜನತೆಯನ್ನು ದೌರ್ಜನ್ಯಗಳ ವಿರುದ್ಧ ಎಚ್ಚರಿಸಿ ಸಂಘಟಿಸುವ ಆಸಕ್ತಿ ಹೊಂದಿದೆ. ಹಾಗಾಗಿ ದಲಿತ ಕಾವ್ಯವನ್ನು ದಲಿತರ ಅಸಹಾಯಕತೆ, ಅವಮಾನ, ಅತ್ಯಾಚಾರ, ಕೊಲೆ, ಹಿಂಸೆ, ದೌರ್ಜನ್ಯ, ದಬ್ಬಾಳಿಕೆ ಮುಂತಾದವುಗಳ ಹಿನ್ನೆಲೆಯಲ್ಲಿ ಚರ್ಚಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ದಲಿತ ಕಾವ್ಯವನ್ನು ಚರ್ಚಿಸುವ ಉದ್ದೇಶ ಇಲ್ಲಿದೆ.

೮. ದಲಿತ ಕಾವ್ಯವನ್ನು ನೋಡುವುದೆಂದರೆ ದಲಿತರ ಬದುಕನ್ನು ನೋಡಿದಂತೆ. ದಲಿತರ ಬದುಕನ್ನು ಅವಲೋಕಿಸಿದರೆ ದಲಿತ ಕಾವ್ಯವನ್ನು ಓದಿದಂತೆ. ದಲಿತ ಕವಿಗಳು ದಲಿತರ ಬದುಕಿನ ಇರುವಿಕೆಯನ್ನು ಮತ್ತು ಆ ಇರುವಿಕೆಗೆ ಕಾರಣವಾದ ಅಂಶಗಳನ್ನು ತಮ್ಮ ಕಾವ್ಯದಲ್ಲಿ ಮೂಡಿಸಿದ್ದಾರೆ. ಈ ಧೋರಣೆಗಳಿಂದ ದಲಿತ ಕಾವ್ಯ ಹುಟ್ಟು ಹಾಕಿದ ಸಾಮಾಜಿಕ ವಸ್ತುಸ್ಥಿತಿಯ ಬಗ್ಗೆ ಚರ್ಚಿಸುವ ಉದ್ದೇಶವನ್ನು ಇಲ್ಲಿ ಹೊಂದಲಾಗಿದೆ.

೯. ಕನ್ನಡ ಕಾವ್ಯದಲ್ಲಿ ದುಡಿಯುವ ಜನತೆಯ ಅಭಿವ್ಯಕ್ತಿಯನ್ನು ದಲಿತ ಕವಿಗಳು ಚಾರಿತ್ರಿಕವಾಗಿ ಮೊದಲ ಬಾರಿಗೆ ತಮ್ಮ ಕಾವ್ಯಗಳಲ್ಲಿ ಪ್ರಕಟಿಸಿದರು. ಹಾಗಾಗಿ ದಲಿತ ಕಾವ್ಯವನ್ನು ದುಡಿಯುವ ಜನತೆಯ ನೆಲೆಯಲ್ಲಿ ನಿಂತು ವಿಮರ್ಶಿಸುವ ಅಗತ್ಯವಿದೆ. ದುಡಿಯುವ ಸಮುದಾಯದ ಆಶಯಗಳು ದಲಿತ ಕಾವ್ಯದಲ್ಲಿ ಅಭಿವ್ಯಕ್ತಗೊಂಡ ಬಗೆಯನ್ನು ಚರ್ಚಿಸುವ ಉದ್ದೇಶ ಇಲ್ಲಿದೆ.

೨.೨. ಅಧ್ಯಯನದ ವ್ಯಾಪ್ತಿ

೧. ದಲಿತ ಕಾವ್ಯವನ್ನು ಇದುವರೆಗೆ ಎರಡು ನೆಲೆಯಲ್ಲಿ ವಿವರಿಸಲಾಗಿದೆ. ಒಂದು ಜಾತಿಯಲ್ಲಿ ಕೀಳೆನಿಸಿಕೊಂಡು ಅಸ್ಪೃಶ್ಯತೆಯನ್ನು ಅನುಭವಿಸುತ್ತ ದುಡಿದರೂ ಪ್ರತಿಫಲ ಕಾಣದ ಸಮುದಾಯದ ಅಕ್ಷರಸ್ಥರು ರಚಿಸಿದ ಕಾವ್ಯ ಒಂದು ಕಡೆಯಾದರೆ, ಎರಡನೆಯದು ದಲಿತರ ಬಗ್ಗೆ ದಲಿತೇತರರು ಬರೆದ ಅನುಕಂಪಪೂರಿತ ಕಾವ್ಯವೂ ಮತ್ತೊಂದು ಕಡೆ ಇದೆ. ಆದರೆ

ಪ್ರಸ್ತುತ ಅಧ್ಯಯನದಲ್ಲಿ ಅಸ್ಪೃಶ್ಯರೆನಿಸಿಕೊಂಡವರು ಬರೆದ ಕಾವ್ಯವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಆದ್ದರಿಂದ ದಲಿತರೇ ಬರೆದ ದಲಿತ ಕಾವ್ಯವನ್ನು ಅಧ್ಯಯನದಲ್ಲಿ ಚರ್ಚಿಸಲಾಗಿದೆ.

೨. ಲಿಖಿತ ಪರಂಪರೆಯನ್ನೇ ಅಧಿಕೃತವೆಂದು ನಂಬಿರುವ ಈ ಆಧುನಿಕ ಯುಗದಲ್ಲಿ ಸಂಶೋಧನೆ, ಚರ್ಚೆ, ವಿಶ್ಲೇಷಣೆ ಮುಂತಾದವುಗಳು ಲಿಖಿತವಾದದ್ದನ್ನೇ ಬಯಸುತ್ತವೆ. ಇದು ಆಧುನಿಕ ಸಂಶೋಧನೆಯ ಮಿತಿಯೂ ಇರಬಹುದು. ಆದ್ದರಿಂದ ದಲಿತ ಸಾಹಿತ್ಯವನ್ನು ಕೇವಲ ಲಿಖಿತ ರೂಪದ್ದು ಎಂದು ಸೀಮಿತವಾಗಿ ನೋಡಲು ಬರುವುದಿಲ್ಲ. ಆದರೂ ಅಧ್ಯಯನದ ದೃಷ್ಟಿಯಿಂದ ಲಿಖಿತ ರೂಪದ ದಲಿತ ಕಾವ್ಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

೩. ಮುಖ್ಯವಾಗಿ ಹೇಳಲೇಬೇಕಾದ ವಿಷಯವೆಂದರೆ ಅನೇಕರು ಹೋರಾಟದ ಹಾಡುಗಳನ್ನು ದಲಿತ ಕಾವ್ಯದ ವ್ಯಾಪ್ತಿಯ ಹೊರಗಿಟ್ಟು ನೋಡಿದ್ದಾರೆ. ಆದರೆ ದಲಿತರ ವಸ್ತುಸ್ಥಿತಿಯನ್ನು, ಅವರ ಸಮಸ್ಯೆಗಳನ್ನು ಮತ್ತು ಅದಕ್ಕೆ ಪರ್ಯಾಯ ದಾರಿಗಳನ್ನು ಕೊಡುವುದರಲ್ಲಿ ಎಷ್ಟೋ ಹೋರಾಟದ ಹಾಡುಗಳು ದಲಿತ ಕಾವ್ಯಗಳಿಗಿಂತ ವಿಭಿನ್ನ ನೆಲೆಗಳನ್ನು ತೋರಿಸಿಕೊಟ್ಟಿವೆ. ಆದ್ದರಿಂದ ಹೋರಾಟದ ಹಾಡುಗಳನ್ನು ಚರ್ಚೆಯಲ್ಲಿ ಬಹುಮುಖ್ಯವಾಗಿ ಪರಿಗಣಿಸಲಾಗಿದೆ.

೨.೩. ಅಧ್ಯಯನದ ವಿಧಾನ

೧. ಕನ್ನಡದಲ್ಲಿ ಕಾವ್ಯ ವಿಶ್ಲೇಷಣೆಯ ಪರಂಪರೆಯೊಂದು ಬೆಳೆದುಬಂದಿದೆ. ಈ ಪರಂಪರೆಯು ಕಾವ್ಯದಲ್ಲಿ ರಸ, ರೀತಿ, ಅಲಂಕಾರ, ಉಪಮೆ, ರೂಪಕ, ಪ್ರತಿಮೆಗಳನ್ನು ಕುರಿತು ಚರ್ಚಿಸಿದೆ. ಈ ಪರಂಪರೆಯು ಅಲ್ಪಸ್ವಲ್ಪ ಬದಲಾಗಿ ಈಗಲೂ ಅಸ್ತಿತ್ವದಲ್ಲಿದೆ. ಇವುಗಳನ್ನು ದಲಿತ ಕಾವ್ಯ ಬಳಸಿಕೊಂಡಿರುವ ಬಗೆ ಮತ್ತು ಅವುಗಳಿಂದಾಚೆ ದಲಿತ ಕಾವ್ಯ ಅಭಿವ್ಯಕ್ತಗೊಂಡಿರುವ ರೀತಿಯನ್ನು ಕುರಿತು ಚರ್ಚಿಸಲಾಗುವುದು.

೨. ದಲಿತ ಕಾವ್ಯವು ರಚನೆಯಾದ ನಂತರ ಆ ಕಾವ್ಯವನ್ನು ಅಧ್ಯಯನ ಮಾಡುವ ತಾತ್ವಿಕ ಚೌಕಟ್ಟೂ ಕೂಡ ರೂಪುಗೊಳ್ಳುತ್ತ ಬಂತು. ಅದರ ಫಲವಾಗಿ ದಲಿತ ಕಾವ್ಯವನ್ನು ಅಥವಾ ಯಾವುದೇ ಕಾವ್ಯವನ್ನು ಕೇವಲ ಅದರ ರಚನೆ, ಅದರ ಶರೀರದ ಸ್ವರೂಪದಲ್ಲಿ ಮಾತ್ರ ಚರ್ಚಿಸುವ ಅಗತ್ಯವಿಲ್ಲ; ಬದಲಿಗೆ ಅದನ್ನು ಸಾಮಾಜಿಕ ನೆಲೆಗಟ್ಟಿನಲ್ಲಿ ವಿಶ್ಲೇಷಿಸುವ ಪ್ರಯತ್ನಗಳು ರೂಪುಗೊಂಡವು. ಈ ವಿಧಾನವನ್ನು ಇಲ್ಲಿ ಅನುಸರಿಸಲಾಗುವುದು.

೩. ದಲಿತ ಕಾವ್ಯದ ವಿಶ್ಲೇಷಣೆಗೆ ಸಾಮಾಜಿಕ ಪರಿಭಾಷೆ ರೂಪುಗೊಳ್ಳಬೇಕಾದ ಅನಿವಾರ್ಯತೆ ಇದೆ. ಆದ್ದರಿಂದ ದಲಿತ ಕಾವ್ಯವನ್ನು ನೋಡುವಾಗ ಈ ಸಾಮಾಜಿಕ, ಆರ್ಥಿಕ, ರಾಜಕೀಯ ಅಸಮಾನತೆಗಳ ಹಿನ್ನೆಲೆಯಲ್ಲಿ ನೋಡುವುದು ಬಹಳ ಮುಖ್ಯ. ಹಾಗಾಗಿ ಕಾವ್ಯದ ಸಾಮಾಜಿಕ ಪರಿಣಾಮದ ನೆಲೆಗಳನ್ನು ಕುರಿತು ಇಲ್ಲಿ ಚರ್ಚಿಸಲಾಗುವುದು.

೪. ದಲಿತ ಕಾವ್ಯ ಎಲ್ಲಿಂದ ಮೂಡಿಬಂತೋ ಅಲ್ಲಿಂದಲೇ ಅದರ ವಿಶ್ಲೇಷಣೆಯನ್ನು ಪ್ರಾರಂಭಿಸಲಾಗುವುದು. ಸಮುದಾಯದ ಹೋರಾಟದ ಬದುಕಿನಿಂದ ಎದ್ದುಬಂದ ಈ ಕಾವ್ಯವನ್ನು ಸಮುದಾಯದ ಆಶೋತ್ತರಗಳ ಹಿನ್ನೆಲೆಯಲ್ಲಿಯೇ ಚರ್ಚಿಸಲಾಗುವುದು. ದಲಿತ ಸಮುದಾಯದ ಸಿಟ್ಟು, ಆಶೆ, ಆಕಾಂಕ್ಷೆ, ಪ್ರತಿರೋಧ, ಅಸಹನೆ, ಅತೃಪ್ತಿ, ಅಸಹಾಯಕತೆ, ಧಿಕ್ಕಾರ, ನೋವು ಮುಂತಾದವುಗಳು ದಲಿತ ಕಾವ್ಯವನ್ನು ರೂಪಿಸಿವೆ. ಪ್ರಸ್ತುತ ಅಧ್ಯಯನವು ಕಾವ್ಯದ ಈ ಸ್ವರೂಪವನ್ನು ಗ್ರಹಿಸಲು ಪ್ರಯತ್ನಿಸುತ್ತದೆ.

*****

ಅಧ್ಯಾಯ ಮೂರು

ಈವರೆಗೆ ನಡೆದ ಅಧ್ಯಯನಗಳ ವಿಮರ್ಶಾತ್ಮಕ ಸಮೀಕ್ಷೆ

೩

ಈವರೆಗೆ ನಡೆದ ಅಧ್ಯಯನಗಳ ವಿಮರ್ಶಾತ್ಮಕ ಸಮೀಕ್ಷೆ

ಕನ್ನಡ ವಿಮರ್ಶಾ ವಲಯದಲ್ಲಿ ದಲಿತ ಸಾಹಿತ್ಯ ಕುರಿತು ಸಾಕಷ್ಟು ಚರ್ಚೆಗಳು ನಡೆದಿವೆ. ಈ ಚರ್ಚೆಗಳೇ ಪ್ರತ್ಯೇಕ ಅಧ್ಯಯನ ಕೈಗೊಳ್ಳುವಷ್ಟು ವ್ಯಾಪ್ತಿಯನ್ನು ಹೊಂದಿವೆ. ಕನ್ನಡದ ಬಹುಪಾಲು ವಿಮರ್ಶಕರು ಪ್ರಾಸಂಗಿಕವಾಗಿಯೋ, ಪ್ರತ್ಯೇಕ ವಿಶ್ಲೇಷಣೆಯಲ್ಲೋ ದಲಿತ ಕಾವ್ಯ ಮತ್ತು ಸಾಹಿತ್ಯವನ್ನು ಕುರಿತು ಚರ್ಚಿಸಿದ್ದಾರೆ. ಇದರ ಜೊತೆಗೆ ಸಂಶೋಧನಾ ಪ್ರಬಂಧಗಳು, ಎಂ.ಫಿಲ್. ಪ್ರಬಂಧಗಳು, ಅಭಿನಂದನಾ ಗ್ರಂಥಗಳು, ಮುನ್ನುಡಿಗಳು, ಬೆನ್ನುಡಿಗಳು, ಕೆಲವೊಂದು ಪದ್ಯ ಕುರಿತ ವಿಶ್ಲೇಷಣೆಗಳು, ಸ್ವತಂತ್ರ ಲೇಖನಗಳು ಮತ್ತು ವಾರ್ಷಿಕ ಸಂಚಿಕೆಗಳು ಇನ್ನೂ ಮುಂತಾದವುಗಳು ದಲಿತ ಕಾವ್ಯ ಮತ್ತು ಸಾಹಿತ್ಯವನ್ನು ಕುರಿತು ಚರ್ಚಿಸಿವೆ. ಅದರಲ್ಲೂ ದಲಿತ ಕಾವ್ಯಕ್ಕೆ ಬಂದಿರುವ ವಿಮರ್ಶೆಗಳು ದಲಿತ ಸಾಹಿತ್ಯದಲ್ಲೆ ಬೇರೆ ಪ್ರಕಾರಗಳಿಗೆ ಬಂದಿರುವ ವಿಮರ್ಶೆಗಳಿಗೆ ಹೋಲಿಸಿದರೆ ಹೆಚ್ಚು.

ಮೇಲೆ ಉಲ್ಲೇಖಿಸಿರುವ ವಿಮರ್ಶೆಗಳಲ್ಲಿ ದಲಿತ ಕಾವ್ಯವನ್ನು ಇಡಿಯಾಗಿ ಗ್ರಹಿಸಿರುವ ಪ್ರಯತ್ನಗಳು ಹೆಚ್ಚು ಕಂಡುಬರುವುದಿಲ್ಲ. ಕೆಲವು ಸ್ವಾರಸ್ಯಕರ ಸಂಗತಿಗಳನ್ನೋ, ಇದುವರೆಗೆ ಚರ್ಚಿತ ಭಾಗಗಳನ್ನೋ, ಸುಲಭವಾಗಿ ಗ್ರಹಿಕೆಗೆ ನಿಲುಕುವ ಆಯ್ದ ಭಾಗಗಳನ್ನೋ ಅಥವಾ ಕೆಲವೇ ಕವಿಗಳ ಕಾವ್ಯಗಳನ್ನು ಮತ್ತೆ ಮತ್ತೆ ಉಲ್ಲೇಖ ಮಾಡಿ ಚರ್ಚಿಸುವುದರ ಮೂಲಕವೋ ದಲಿತ ಕಾವ್ಯದ ವಿಶಾಲ ವ್ಯಾಪ್ತಿಯನ್ನು ಸಂಕುಚಿತಗೊಳಿಸಲಾಗಿದೆ. ಕೆಲವೊಂದು ವಿಮರ್ಶೆಗಳು ದಲಿತ ಕಾವ್ಯದಲ್ಲಿ ಏಕತಾನತೆ ಇದೆ ಎಂದು ಹೇಳುವುದರ ಮೂಲಕ ಅದರ ಬಹುಮುಖ ನೆಲೆಗಳ ಅನಾವರಣವನ್ನು ಮುಚ್ಚಿಡುವ ಪ್ರಯತ್ನವನ್ನು ಮಾಡಿವೆ. ಕಾವ್ಯಗಳಲ್ಲಿ ಏಕತಾನತೆ ಇದೆ ಎನ್ನುವ ಈ ವಿಮರ್ಶಾ ವಲಯ ತನಗೇ ಗೊತ್ತಿಲ್ಲದಂತೆ ವಿಮರ್ಶೆಯಲ್ಲಿ ಏಕತಾನತೆಯನ್ನು ತಂದಿತು. ಕೆಲವೊಂದು ವಿಮರ್ಶೆಗಳು ಇದಕ್ಕೆ ಹೊರತಾಗಿಯೂ ದಲಿತ ಕಾವ್ಯವನ್ನು ಬಹುಮುಖ ನೆಲೆಯಲ್ಲಿ ನೋಡಿವೆ. ಆದರೆ ಇಡಿಯಾದ ಗ್ರಹಿಕೆ ಸಿಕ್ಕಿಲ್ಲ.

ದಲಿತ ಕಾವ್ಯದ ವಿಮರ್ಶೆ ಮತ್ತು ಸಂಶೋಧನೆಯ ಬಹುಪಾಲು ಅಧ್ಯಯನಗಳು ಸಿದ್ಧಲಿಂಗಯ್ಯ ಅವರ ಕಾವ್ಯವನ್ನೇ ಮೇಲಿಂದ ಮೇಲೆ ಚರ್ಚಿಸಿವೆ. ಆದರೆ 'ಇಡೀ ದಲಿತ ಕಾವ್ಯವನ್ನು ಸಿದ್ಧಲಿಂಗಯ್ಯ ಅವರ ಕಾವ್ಯ ಕುರಿತ ಅಧ್ಯಯನದ ಮಾನದಂಡದಲ್ಲಿಯೇ ತೂಗಿ ನೋಡುವುದು ದಲಿತ ಕಾವ್ಯದ ಒಟ್ಟಾರೆ ಆಶಯಕ್ಕೆ ಮಿತಿ ಹಾಕಿದಂತೆ ಆಗುತ್ತದೆ. ಈ ಎಚ್ಚರ ಬಹಳ ಮುಖ್ಯ ಎನಿಸುತ್ತದೆ. ಯಾಕೆಂದರೆ ಬಹುಪಾಲು ವಿಮರ್ಶೆಗಳು ಸಿದ್ಧಲಿಂಗಯ್ಯ

ಅವರ ಕಾವ್ಯದ ಚರ್ಚೆಯಿಂದ ಪ್ರವೇಶಿಸಿ ಆ ನೆಲೆಗಟ್ಟಿನಲ್ಲೇ ಇನ್ನಿತರ ಕಾವ್ಯಗಳನ್ನು ವಿಮರ್ಶಿಸಿವೆ. ಅಥವಾ ಅವರೊಬ್ಬರನ್ನೇ ಕೇಂದ್ರ ಮಾಡಿಕೊಂಡು ಅವರ ಕಾವ್ಯವೇ ಅತ್ಯುತ್ತಮ ಕಾವ್ಯ ಎಂದು ಪರಿಗಣಿಸಿವೆ. ದಲಿತ ಕಾವ್ಯ ಕ್ಷೇತ್ರದಲ್ಲಿ ನಡೆದಿರುವ ಬಹುತೇಕ ಸಂಶೋಧನೆಗಳು ಸಿದ್ಧಲಿಂಗಯ್ಯ ಅವರ ಕಾವ್ಯವನ್ನೇ ಆವರಿಸಿವೆ ಮತ್ತು ಕೇಂದ್ರೀಕರಿಸಿವೆ. ಈ ಅಧ್ಯಯನಗಳು ದಲಿತ ಕಾವ್ಯವನ್ನು ವಿಭಿನ್ನ ಆಯಾಮಗಳಲ್ಲಿ ನೋಡುವ ದೃಷ್ಟಿಕೋನವನ್ನು ದೂರ ಮಾಡಿವೆ. ಆದ್ದರಿಂದಲೇ ಈ ಅಧ್ಯಾಯದಲ್ಲಿ ದಲಿತ ಕಾವ್ಯವನ್ನು ಕುರಿತ ಒಟ್ಟು ಆಶಯಗಳನ್ನು ಹಿಡಿದಿಡುವ ಪ್ರಯತ್ನ ಮಾಡಲಾಗಿದೆ.

ಸಿದ್ಧಲಿಂಗಯ್ಯ ಅವರನ್ನು 'ದಲಿತರ ಆದಿಕವಿ' ಎಂದು ಕರೆಯುವುದರ ಮೂಲಕ ಅನೇಕ ವಿಮರ್ಶೆಗಳು ಇದನ್ನು ಒಪ್ಪಿಕೊಂಡಿವೆ. ಇದರಿಂದಾಗಿ ದಲಿತ ಕಾವ್ಯಕ್ಕೆ ಸೀಮಿತ ಚೌಕಟ್ಟನ್ನು ಮತ್ತು ಎಲ್ಲೆಯನ್ನು ನಿಗದಿಪಡಿಸಿದವು. ಈ ಚೌಕಟ್ಟು ಸರಿಯಲ್ಲ ಎನ್ನುವ ಕೆಲವು ವಿಮರ್ಶಕರು 'ದಲಿತರ ಆದಿಕವಿ ಡಿ. ಗೋವಿಂದದಾಸ್' ಎನ್ನುವುದರ ಮೂಲಕ ಮತ್ತೊಂದು ಸೀಮಿತತೆಯನ್ನು ತಂದುಕೊಟ್ಟರು. ಇವರಿಬ್ಬರಿಗಿಂತಲೂ ಮೊದಲು ಜನಪದ ಸಾಹಿತ್ಯ ದುಡಿಯುವ ನೆಲೆಗಳ ಅನಾವರಣವನ್ನು ಮತ್ತು ದುಡಿಯುವ ಜನತೆಯ ಹಿತಾಸಕ್ತಿಯನ್ನು ಅಭಿವ್ಯಕ್ತಿಸಿತ್ತು. ದಲಿತರು ತಮ್ಮ ನೋವುಗಳನ್ನು ಅಭಿವ್ಯಕ್ತಿಸಿದ್ದೇ ಮೌಖಿಕ ಪರಂಪರೆಯಲ್ಲಿ. ಆದರೆ ಲಿಖಿತ ಪರಂಪರೆಯನ್ನೇ ಕೊಂಡಾಡುವ ಈ ಪ್ರಜ್ಞಾವಂತ ವರ್ಗ ಮೌಖಿಕತೆಯನ್ನು ಕಡೆಗಣಿಸಿತು. ಹೀಗೆ ಕಡೆಗಣಿಸಿದ್ದರ ಪರಿಣಾಮವೇ ದಲಿತ ಕಾವ್ಯದ ಅಧ್ಯಯನಕ್ಕೆ ಒಂದು ಸೀಮಿತ ಚೌಕಟ್ಟನ್ನು ಕೊಡಲು ಕಾರಣವಾಯಿತು.

> ಅನ್ನೇಕಾರ ಅರಸು ನಿನ್ನ ಸಂಬಳ ಸಾಕು
> ಹನ್ನೆರಡು ವರುಷದ ಹಳೆ ಅಕ್ಕಿ । ಅನ್ನ ಉಂಡು
> ಚೆನ್ನಿಗ ನನ್ನ ತಮ್ಮ ಬಡವಾದ
> ಹಾಗೆಯೇ
> ಬಡವರು ಸತ್ತರೆ ಸುಡಲಿಕ್ಕೆ ಸೌದಿಲ್ಲ
> ಒಡಲ ಬೆಂಕಿಲಿ ಹೆಣ ಬೆಂದೊ । ದೇವರೆ
> ಬಡವರಿಗೆ ಸಾವು ಕೊಡಬೇಡ

ತ್ರಿಪದಿಯ ಈ ಸಾಲುಗಳು ದಲಿತರ ನೋವುಗಳನ್ನು, ಅವರ ಮೇಲಿನ ದಬ್ಬಾಳಿಕೆಗಳನ್ನು ಅತ್ಯಂತ ಸಮಂಜಸವಾಗಿ ಹಿಡಿದಿಟ್ಟಿವೆ. ಇಲ್ಲಿಂದಲೇ ದಲಿತ ಸಾಹಿತ್ಯದ ಉಗಮ ಮತ್ತು ವಿಕಾಸವಾಗಿದೆ. ಆದರೆ ಆಧುನಿಕ ಶಿಕ್ಷಣ ಕಲಿತು ಪ್ರಜ್ಞಾವಂತರೆನಿಸಿಕೊಂಡವರು ದಲಿತ ಕಾವ್ಯ ಲಿಖಿತವಾಗಿ ದಾಖಲಾದದ್ದೇ ಮೊದಲು ಎಂಬ ಭ್ರಮೆಯನ್ನು ಹುಟ್ಟಿಸಿದರು. ಈ

ಭ್ರಮೆಯಿಂದ ಹೊರನಿಂತು ದಲಿತ ಸಾಹಿತ್ಯವನ್ನೂ, ದಲಿತರ ಆಶೋತ್ತರಗಳನ್ನೂ ನೋಡುವ ಅವಶ್ಯಕತೆ ಇದೆ.

ದಲಿತ ಕಾವ್ಯವನ್ನು ಕುರಿತು ಒಂದೊಂದು ವಿಮರ್ಶೆಗಳು ಒಂದೊಂದು ರೀತಿಯಲ್ಲಿ ತಮ್ಮ ವಿಚಾರಗಳನ್ನು ಮಂಡಿಸಿವೆ. ಕೆಲವು ವಿಮರ್ಶೆಗಳು ದಲಿತ ಕಾವ್ಯದ ಅಭಿವ್ಯಕ್ತಿ, ಶೈಲಿ, ನಿರೂಪಣೆಗೆ ಹೆಚ್ಚು ಒತ್ತು ನೀಡಿದ್ದರೆ ಮತ್ತೆ ಕೆಲವು ವಿಮರ್ಶೆಗಳು ಅದರ ವಸ್ತು, ಧೋರಣೆ, ಆಶಯಗಳ ಬಗ್ಗೆ ಚರ್ಚಿಸಿವೆ. ಇನ್ನೂ ಕೆಲವು ವಿಮರ್ಶೆಗಳು ದಲಿತ ಕಾವ್ಯದ ಯಾವುದೇ ವಿಶ್ಲೇಷಣೆಗೆ ಮುಂದಾಗದೆ ಕೇವಲ ಸಾರಾಂಶಕ್ಕಷ್ಟೇ ಸೀಮಿತವಾಗಿವೆ. ಮೊದಲೇ ಸೂಚಿಸಿದ ಹಾಗೆ ದಲಿತ ಕಾವ್ಯದ ವಿಮರ್ಶೆಗಳೇ ಪ್ರತ್ಯೇಕ ಅಧ್ಯಯನವಾಗುವಷ್ಟು ವ್ಯಾಪ್ತಿ ಹೊಂದಿವೆ. ಆದ್ದರಿಂದ ಐದು ಮುಖ್ಯ ಭಾಗಗಳಲ್ಲಿ ಇವುಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗುವುದು. ಅವುಗಳೆಂದರೆ,

೧. ವಸ್ತು ಪ್ರಧಾನ ಚರ್ಚೆಗಳು

೨. ಅಭಿವ್ಯಕ್ತಿ ಮತ್ತು ಆಶಯ ಪ್ರಧಾನ ಚರ್ಚೆಗಳು

೩. ಸಾರಾಂಶ ಪ್ರಧಾನ ಚರ್ಚೆಗಳು

೪. ಪ್ರೇರಣೆ ಮತ್ತು ಪ್ರಭಾವ ಕುರಿತ ಚರ್ಚೆಗಳು

೫. ಸ್ವರೂಪ ಪ್ರಧಾನ ಚರ್ಚೆಗಳು

೧. ವಸ್ತು ಪ್ರಧಾನ ಚರ್ಚೆಗಳು

ದಲಿತ ಕಾವ್ಯವನ್ನು ಅಧ್ಯಯನ ಮಾಡುವಾಗ ಅದರ ವಸ್ತುವಿಗೆ ಕೆಲವೊಂದು ವಿಮರ್ಶೆಗಳು ಹೆಚ್ಚಿನ ಚರ್ಚೆಯನ್ನು ಕೇಂದ್ರೀಕರಿಸಿವೆ. ಜಾತಿ, ಮತ, ಧರ್ಮ, ವರ್ಗ, ಪುರೋಹಿತಶಾಹಿ, ಬಂಡವಾಳಶಾಹಿ, ಜಾಗತೀಕರಣ ಮುಂತಾದವುಗಳನ್ನು ದಲಿತ ಕಾವ್ಯ ಒಳಗೊಂಡಿರುವ ಬಗೆ ಹೇಗೆ? ಈ ವಸ್ತುವಿಗೂ ದಲಿತರಿಗೂ ಇದ್ದ ಸಂಬಂಧವೇನು? ದಲಿತ ಕವಿಗಳು ಈ ವಸ್ತುಗಳ ಮೂಲಕ ಬಿತ್ತುತ್ತಿರುವ ಆಲೋಚನಾ ನೆಲೆಗಳೇನು? ಇನ್ನೂ ಮುಂತಾದ ನೆಲೆಯಲ್ಲಿ ವಿಮರ್ಶೆಗಳು ಬಂದಿವೆ. ಆದರೆ ವಸ್ತುವಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟ ಕೆಲವು ವಿಮರ್ಶೆಗಳು ದಲಿತ ಕಾವ್ಯದಲ್ಲಿ ಇವಿಷ್ಟೇ ಇರಬಹುದೆಂಬ ಭ್ರಮೆಯನ್ನು ಹುಟ್ಟುಹಾಕಿದವು. ಉದಾಹರಣೆಗೆ; 'ಬಡತನ ದಲಿತ ಕಾವ್ಯದ ಕೇಂದ್ರ ವಸ್ತುವಾಗಿದೆ' ಎಂದು ಹೇಳುವುದರ ಮೂಲಕ ಕಾವ್ಯವು ಮಂಡಿಸಿರಬಹುದಾದ ಆ ಬಡತನಕ್ಕೆ ಕಾರಣ, ಪರಿಣಾಮ ಅದರ ಹಿಂದಿರುವ ಹುನ್ನಾರಗಳು, ಜಾಗತಿಕ ನೆಲೆಯಿಂದ ಉಂಟಾಗಿರುವ ತಲ್ಲಣಗಳು ಮುಂತಾದ ನೆಲೆಗಳನ್ನು ಮರೆಮಾಚಿದವು.

ಕೆಲವೊಂದು ವಿಮರ್ಶೆಗಳು ದಲಿತ ಕಾವ್ಯದ ವಸ್ತುವನ್ನು ಕುರಿತು ಬಹಳ ಗಂಭೀರವಾಗಿ ಚರ್ಚಿಸಿವೆ. ಇನ್ನೂ ಕೆಲವು ದಲಿತ ಕಾವ್ಯದಲ್ಲಿ ಜಾತಿ, ಮತ, ಧರ್ಮ, ವರ್ಗ ಮುಂತಾದವುಗಳೇ ಪ್ರಧಾನವಾಗಿವೆ ಎಂದು ಹೇಳಿವೆ. ಹಾಗೆ ಹೇಳುವುದರ ಮೂಲಕ ಪ್ರತಿಯೊಂದನ್ನೂ ಅದರ ನೆಲೆಗಟ್ಟಿನಲ್ಲಿ ನೋಡುವ ಪ್ರಯತ್ನ ಮಾಡಿವೆ. ಹಾಗೆಯೇ ಕೆಲವು ವಿಮರ್ಶೆಗಳು ಪರಂಪರೆಯ ಹಿನ್ನೆಲೆಯಿಂದಲೂ ಅದು ಒಳಗೊಂಡಿರುವ ವಸ್ತುವಿನ ಬಗ್ಗೆ ಚರ್ಚಿಸುತ್ತಲೇ ಅವುಗಳ ಅಭಿವ್ಯಕ್ತಿ ಕ್ರಮಗಳನ್ನೂ ನಿರೂಪಿಸಿವೆ.

ಅರವಿಂದ ಮಾಲಗತ್ತಿ ಅವರು ತಮ್ಮ 'ದಲಿತ ಸಾಹಿತ್ಯ ಪ್ರವೇಶಿಕೆ' ಕೃತಿಯಲ್ಲಿ "ಅಸ್ಪೃಶ್ಯತೆಯ ನೋವಿನ ವಿವಿಧ ಮಜಲುಗಳನ್ನು ಬಿಚ್ಚಿ ತೋರಿಸುತ್ತಾ, ಎದುರಾಳಿಯ ಮನಸ್ಸನ್ನು ಕಲಕುವ ಆತ್ಮ ವಿಮರ್ಶೆಗೆ ಹಚ್ಚುವ ವಸ್ತುವಿನ ಆಯ್ಕೆ ಮತ್ತು ಬರವಣಿಗೆಯ ಶೈಲಿ ಇಲ್ಲಿ ಮನೆಮಾಡಿಕೊಂಡಿದೆ"[೧] ಎನ್ನುವುದರ ಜೊತೆಗೆ ದಲಿತ ಕಾವ್ಯ ಪರಂಪರೆಗೆ ಪ್ರತಿಕ್ರಿಯಿಸುತ್ತಾ ಆಯ್ಕೆ ಮಾಡಿಕೊಂಡ ವಸ್ತುವನ್ನು ಕುರಿತು ಹೀಗೆ ಹೇಳಿದ್ದಾರೆ. "ಪೌರಾಣಿಕ ಪ್ರತಿಮೆಗಳ ಮೂರ್ತಿ ಭಂಜನೆಯ ಕೆಲಸ ಒಂದೆಡೆ ನಡೆದರೆ ಮತ್ತೊಂದೆಡೆ ಪೌರಾಣಿಕ ತತ್ವಗಳ ಪುನರ್‌ಸೃಷ್ಟಿಯೂ ನಡೆದಿದೆ. ರಾಮನಂತಹ ಪಾತ್ರಗಳು ಮೂರ್ತಿಭಂಜನ ಕ್ರಿಯೆಗೆ ಸಿಲುಕಿದರೆ, ಏಕಲವ್ಯ, ಕರ್ಣ, ತ್ರಿಶಂಕು ಇಂತಹ ಪಾತ್ರಗಳು ಪುನರ್‌ಸೃಷ್ಟಿಗೆ ಒಳಗಾಗಿವೆ. ವಚನ ಸಾಹಿತ್ಯದ ಜಾಡನ್ನು ಕೆಲವರು ಅನುಕರಿಸಿದರೆ ಇನ್ನೂ ಕೆಲವರು ನವ್ಯದ ಶೈಲಿಯನ್ನೇ ಅನುಕರಿಸಿದ್ದಾರೆ. ಧರ್ಮ, ಶಾಸ್ತ್ರ, ಪುರಾಣ ಪುನರ್ ವಿಮರ್ಶೆಯೇ ಕಾವ್ಯದಲ್ಲಿ ನಡೆದಿದೆ. ದಲಿತರ ಜೀವನದ ಮಟ್ಟ ಪಶುಪಕ್ಷಿಗಳಿಗಿಂತ ನಾಯಿ-ಹಂದಿಗಳಿಗಿಂತ ಕೀಳಾಗಿದೆ ಎನ್ನುತ್ತ, ಸಮಸ್ಯೆಯ ಮೂಲ ಬೇರುಗಳನ್ನು ಕೆದಕಿದ್ದಾರೆ."[೨] ಇಲ್ಲಿ ವಸ್ತುವೂ ಇದೆ, ಅಭಿವ್ಯಕ್ತಿಯೂ ಇದೆ. ಎಲ್ಲಕ್ಕಿಂತ ಹೆಚ್ಚಾಗಿ ದಲಿತ ಕವಿಗಳು ತಮ್ಮ ಹಿಂದಿನ ಪರಂಪರೆಗೆ ಪ್ರತಿಕ್ರಿಯಿಸುವಾಗ ಆರಿಸಿಕೊಂಡ ವಸ್ತುವಿನ ಹಿನ್ನೆಲೆಯೂ ಇಲ್ಲಿನ ಮಾತುಗಳಲ್ಲಿದೆ. ದಲಿತ ಕಾವ್ಯ ತನ್ನ ವಸ್ತುವಿನ ಆಯ್ಕೆಯಲ್ಲಿ ಭೂತ, ಭವಿಷ್ಯ, ವರ್ತಮಾನದ ದಲಿತರ ಜೀವನವನ್ನು ಆವರಿಸಿದೆ. ದಲಿತ ಜೀವನದ ಭಿನ್ನ ವಿಭಿನ್ನ ಮುಖಗಳು ಕಾವ್ಯದ ವಸ್ತುವಾಗಿ ವಸ್ತುಸ್ಥಿತಿಯನ್ನು ಹಿಡಿದಿಟ್ಟಿವೆ.

'ಸತ್ಯಾನಂದ ಪಾತ್ರೋಟರ ಕಾವ್ಯದಲ್ಲಿ ಪ್ರೀತಿ ಮತ್ತು ನಿಸರ್ಗ' ಲೇಖನದಲ್ಲಿ ಹೇಮಾ ಪಟ್ಟಣಶೆಟ್ಟಿ ಅವರು ದಲಿತ ಕಾವ್ಯದೊಳಗಿನ ವಸ್ತುವಿನ ಮತ್ತೊಂದು ಮಗ್ಗುಲನ್ನು ಪರಿಚಯಿಸಿದ್ದಾರೆ. ಅದಕ್ಕೆ ಅವರು ಪಾತ್ರೋಟರ ಕಾವ್ಯವನ್ನು ಆಯ್ದುಕೊಂಡು ಹೀಗೆ ಬರೆದಿದ್ದಾರೆ. "ಇವರ ಕನಸಿನ ಹುಡುಗಿ ಪ್ರಣಯಿನಿಯಾಗಿ ರೂಪುಗೊಳ್ಳುವುದಿಲ್ಲ. 'ಗೆಳತಿ'ಯಾಗಿ ಮೈದಾಳುತ್ತಾಳೆ. ಈ ಸಖಿತ್ವ, ಸಂಗಾತತ್ವ ತುಂಬಾ ಮಹತ್ವದ್ದಾಗುತ್ತದೆ. ಅಂತೆಯೇ ಪ್ರೇಯಸಿ ಎಂದೊಡನೆ ನೆನಪಾಗುವ ಮಿಲನ ಆಕರ್ಷಣೆ ಅಥವಾ ವಿರಹದ ನೋವು ಎರಡೂ ಈ ಪದ್ಯಗಳಲ್ಲಿಲ್ಲ. ಹೆಣ್ಣಿನ ಅಂಗಾಂಗಗಳ ವಿವರಣೆಯ ವರ್ಣನೆಗಳು

ಅವಳನ್ನು ವಸ್ತುವಾಗಿಸುವ ಅಪಾಯ ಇಲ್ಲಿಲ್ಲ. ಗಂಡು ಹೆಣ್ಣಿನ ಆಪ್ತ ಸಂಬಂಧ ಇಲ್ಲಿ ವ್ಯಕ್ತವಾಗುತ್ತದೆ.”[೩] ಈ ಮಾತುಗಳು ದಲಿತ ಕಾವ್ಯದ ಎಲ್ಲಾ ವಲಯಗಳಿಗೆ ಅನ್ವಯಿಸುತ್ತದೆ. ಕನ್ನಡ ಕಾವ್ಯ ಮಹಿಳೆಯನ್ನು ಪರಿಗಣಿಸಿರುವ ರೀತಿಗಿಂತ ಇಲ್ಲಿ ಭಿನ್ನವಾಗಿದೆ. ಕ್ರಾಂತಿಗೆ ಇಬ್ಬರೂ ಜೊತೆ ನಿಲ್ಲಬೇಕಾದ ಅವಶ್ಯಕತೆಯನ್ನು ದಲಿತ ಕಾವ್ಯ ಒತ್ತಿ ಹೇಳುತ್ತದೆ. ಹಾಗೆಯೇ ಹೋರಾಟದ ಹಾಡುಗಳು ಇನ್ನೂ ತೀವ್ರತರವಾಗಿ ಹೋರಾಟದಲ್ಲಿ ಮಹಿಳೆಯ ಪ್ರಸ್ತುತತೆಯನ್ನು ಹೇಳಿವೆ.

ಹಾಗೆಯೇ ವಿ.ಎಸ್. ಮಾಳಿ ಅವರು 'ಸತ್ಯಾನಂದ ಪಾತ್ರೋಟರ ಕಾವ್ಯದಲ್ಲಿ ಮನುಷ್ಯನ ಹುಡುಕಾಟ' ಎನ್ನುವ ಲೇಖನದಲ್ಲಿ “ನಾಡ ಕಟ್ಟಲು ನಾಡಿನೊಂದಿಗೆ ನಿರಂತರ ಶ್ರಮಿಸಿದ, ಕಲ್ಲು ಒಡೆಯುವ, ಬೇಟೆಯಾಡುವ, ಕಾಡು ತಿರುಗುವ, ಕುರಿ ಕಾಯುವ, ಪಾದರಕ್ಷೆ ಕಟ್ಟುವ, ಮಣ್ಣಿಗೆ ಉಪ್ಪುಗೂಡಿಸುವ, ದಲಿತ ವರ್ಗಗಳ ನೋವು–ಬೆವರು–ಸಹನೆಯನ್ನು ಪಾತ್ರೋಟರು ಕಾವ್ಯದಲ್ಲಿ ಮೂರ್ತಗೊಳಿಸಿದ್ದಾರೆ”[೪] ಎಂದು ಬರೆದಿದ್ದಾರೆ. ಇಲ್ಲಿ ದಲಿತರ ದುಡಿಮೆಯ ವಿವಿಧ ಆಯಾಮಗಳು ಕಾವ್ಯದಲ್ಲಿ ವಸ್ತುವಾಗಿ ರೂಪುಗೊಂಡಿರುವುದನ್ನು ಗುರುತಿಸಲಾಗಿದೆ. ಹಾಗೆಯೇ ಇದು ಒಟ್ಟು ದಲಿತ ಕಾವ್ಯದ ವಸ್ತುವಾಗಿ ಪರಿಗಣಿಸುವುದರ ನೆಲೆಗಳನ್ನೂ ಸೂಚಿಸಿದೆ.

ಇದಕ್ಕೆ ಪೂರಕವೆಂಬಂತೆ 'ಸತ್ಯಾನಂದ ಪಾತ್ರೋಟರ ಕವಿತೆಗಳಲ್ಲಿ ಪ್ರತಿಭಟನೆ' ಎನ್ನುವ ಮಹಾದೇವ ಕಣವಿ ಅವರ ಲೇಖನವನ್ನು ನೋಡಬಹುದು. ಪಾತ್ರೋಟರ 'ಪುಟ್ಟ ಗುಡಿಸಲಿನಲ್ಲಿ ಕೆಟ್ಟ ಕನಸುಗಳಿಲ್ಲ' ಎನ್ನುವ ಕವಿತೆಯನ್ನು ವಿಶ್ಲೇಷಿಸುತ್ತಾ “ಬೈಯ್ಯುವುದೇ ಬಂಡಾಯ ಕಾವ್ಯದ ಕರ್ಮವೆಂದು ಹಲವರು ತಿಳಿದಂತಿದೆ. ಇಲ್ಲಿ ನವಿರತೆಗೂ ಸೂಕ್ಷ್ಮತೆಗೂ ತನ್ನದೇ ಆದ ವಾಸನೆ ಇದೆ, ನೋವಿದೆ, ಸಂಕಟವಿದೆ. ಆದರೆ ಬದುಕು ಹಸನಾಗಿದೆ, ಹೊಲಸಾಗಿಲ್ಲ. ಅಲ್ಲಿ ಕೊಳಕುತನವಿಲ್ಲ, ಹಾವಿನ ವಿಷವಿಲ್ಲ, ಹೂವಿನ ಸುವಾಸನೆ ಇದೆ. ಬದುಕಿನ ಚೇತನದ ಚಿಲುಮೆ ಚಿಮ್ಮುತ್ತಿದೆ, ಪ್ರೀತಿಯಂತಹ ವಸ್ತು ಜಗದಲ್ಲಿ ಕಾಣೆ ಎಂಬ ಸುಖವಿದೆ, ಅದು ಜೀವನವನ್ನು ಸಹ್ಯವನ್ನಾಗಿಸುತ್ತದೆ; ಸಂತೋಷಗೊಳಿಸುತ್ತದೆ”[೫] ಎಂದು ಬರೆದಿದ್ದಾರೆ. ಇದು ದಲಿತ ಕಾವ್ಯ ತನ್ನೊಳಗೆ ಏನಿದೆ ಎಂದು ಹೇಳಿಕೊಳ್ಳಬೇಕಿತ್ತೋ ಅದಕ್ಕೆ ಕನ್ನಡಿ ಹಿಡಿದಂತಿದೆ. ಆದರೆ ದಲಿತರ ಬದುಕಿನಲ್ಲಿ ಹೂವಿನ ಸುವಾಸನೆಗಿಂತ ಬೆವರಿನ ವಾಸನೆಯೇ ಹೆಚ್ಚಿರುವುದನ್ನು ಕಾಣಬಹುದು. ಇದನ್ನು ಮತ್ತೊಂದು ನೆಲೆಯಲ್ಲಿ ಹೇಳುವುದಾದರೆ ಹೂವಿನ ಸುಗಂಧಕ್ಕೆ ಗೊಬ್ಬರವಾದವರು ಎನ್ನಬಹುದು. ಇದೇ ರೀತಿ 'ಪಾತ್ರೋಟರ ಕಾವ್ಯ: ಪ್ರಕೃತಿ ಶೋಧ ಮತ್ತು ಅರ್ಥ ವಿನ್ಯಾಸ' ಎನ್ನುವ ಲೇಖನದಲ್ಲಿ ಗುರುಪಾದಪ್ಪ ಮರಿಗುದ್ದಿ ಅವರೂ ಸಹ ದಲಿತ ಕಾವ್ಯ ಒಳಗೊಂಡಿರುವ ವಸ್ತುವನ್ನೇ ಕುರಿತು ಹೆಚ್ಚು ಚರ್ಚಿಸಿರುವುದನ್ನು ಕಾಣಬಹುದು.

ಮಹಾದೇವಮ್ಮನವರು 'ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ದಲಿತ ಸಂವೇದನೆ: ಒಂದು ಅಧ್ಯಯನ' ಎಂಬ ಎಂ.ಫಿಲ್. ಪ್ರಬಂಧದಲ್ಲಿ ಸಿದ್ಧಲಿಂಗಯ್ಯ ಅವರ ಕಾವ್ಯ ಮತ್ತು ಸಾಹಿತ್ಯ ಕುರಿತು ಚರ್ಚಿಸಲಾಗಿದೆ. ಇಲ್ಲಿ ವಸ್ತುವಿನ ಚರ್ಚೆಗೆ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದೆ. ವಸ್ತುವಿನ ನಿರೂಪಣೆಯಲ್ಲಿ ಅದು ಧ್ವನಿಸಬಹುದಾದ ಅರ್ಥಸಾಧ್ಯತೆಗಳನ್ನು ಇದು ಹೆಚ್ಚು ಚರ್ಚಿಸಿಲ್ಲ. ಆದರೆ ಸಿದ್ಧಲಿಂಗಯ್ಯ ಅವರ ಕಾವ್ಯದಲ್ಲಿನ ವಸ್ತುಸ್ಥಿತಿಯನ್ನು ಹಿಡಿದಿಡಲು ಪ್ರಯತ್ನಿಸಿದೆ. ಸಂಶೋಧಕರೇ ಬರೆಯುವ ಹಾಗೆ "ಸಮಾಜದಲ್ಲಿ ಇವರು ಕಂಡುಂಡ ಬಡತನ, ಹಸಿವು, ಅಸ್ಪೃಶ್ಯತೆ, ಶೋಷಣೆ, ಅಪಮಾನ ನಿಂದನೆಗಳು ಇವರ ಕಾವ್ಯವನ್ನು ರೂಪಿಸಿವೆ".[೬] ಇದು ಸರಿ ಇರಬಹುದು. ಆದರೆ ಈ ಪರಿಸ್ಥಿತಿಗಳು ಕೇವಲ ಸಿದ್ಧಲಿಂಗಯ್ಯ ಅವರಿಗಷ್ಟೇ ಸೀಮಿತವಾದವುಗಳೆಂಬ ಸೀಮಿತ ಪರಿಧಿಯನ್ನು ಮೇಲಿನ ಹೇಳಿಕೆ ನೀಡುತ್ತಿರುವಂತಿದೆ. ದಲಿತ ಕವಿಗಳ ಅಭಿವ್ಯಕ್ತಿ ಸಮುದಾಯದ ಅಭಿವ್ಯಕ್ತಿ. ಅದಕ್ಕೊಂದು ವಿಶಾಲವಾದ ಆಯಾಮವಿದೆ. ಅಲ್ಲಿಂದ ಅದರ ವಿಶ್ಲೇಷಣೆ ಸಾಗಬೇಕಿದೆ. ಹಾಗೆಯೇ ಕಾವ್ಯದ ವಿಶ್ಲೇಷಣೆ ಮಾಡುತ್ತಾ "ಬಿಸಿಲಿನಲ್ಲಿ ದುಡಿಯುವವರಿಗೆ ತಲೆ ಕೂದಲಿಗೆ ಎಣ್ಣೆ ಇಲ್ಲ. ಹಸಿವನ್ನು ಹಿಂಗಿಸಿಕೊಳ್ಳುವುದು ದುಸ್ತರವೆನಿಸಿದೆ. ಬಡತನದಿಂದಾಗಿ ಉಡಲು ಬಟ್ಟೆ ಇಲ್ಲದೆ, ಹರಿದ ಬಟ್ಟೆಗಳಿಂದ ಮಾನ ಮುಚ್ಚಿಕೊಳ್ಳುವುದು ಅಸಾಧ್ಯವೆನಿಸಿದೆ. ಈ ಬಗೆಯ ವಸ್ತುವನ್ನು ಕಾವ್ಯವನ್ನಾಗಿಸುವ ಸಿದ್ಧಲಿಂಗಯ್ಯನವರ ಪ್ರತಿಭೆ ಆಧುನಿಕ ಕನ್ನಡ ಕಾವ್ಯಕ್ಕೆ ಅಪರೂಪವೆನಿಸಿದೆ."[೭] ಇದೇ ದಲಿತ ಕಾವ್ಯದ ವಸ್ತುವಾಗದಿದ್ದರೂ, ಇದನ್ನೂ ದಲಿತ ಕಾವ್ಯ ಒಳಗೊಂಡಿದೆ. ಆದರೆ ಇವುಗಳನ್ನು ದಲಿತ ಕವಿಗಳು ಕೇವಲ ವಸ್ತುವಾಗಿಯಷ್ಟೇ ಬಳಸಿಕೊಳ್ಳಲಿಲ್ಲ. ಬದಲಾಗಿ ತಮ್ಮ ದಿನನಿತ್ಯದ ನೋವುಗಳನ್ನು ಹೊರಹಾಕಲು ಅವುಗಳು ಪರಿಕರಗಳಾದವು. ಈ ಅರಿವು ದಲಿತ ಕಾವ್ಯವನ್ನು ಅಭ್ಯಸಿಸುವ ಪ್ರತಿಯೊಬ್ಬರಿಗೂ ಇರುವುದು ಅವಶ್ಯಕ.

'ಬದಲಾಗುತ್ತಿರುವ ಸಾಂಸ್ಕೃತಿಕ ಸಂದರ್ಭದಲ್ಲಿ ಕರ್ನಾಟಕ ದಲಿತ ಚಳುವಳಿ ಮತ್ತು ಸಾಹಿತ್ಯ' ಎನ್ನುವ ಹೆಚ್.ಟಿ. ವೆಂಕಟೇಶಮೂರ್ತಿ ಅವರ ಸಂಶೋಧನಾ ಕೃತಿಯಲ್ಲಿ ದಲಿತ ಕಾವ್ಯ ಒಳಗೊಂಡಿರುವ ವಸ್ತುವಿನ ಬಗ್ಗೆ ಚರ್ಚಿಸಿರುವುದು ಹೀಗೆ; "ಬದಲಾಗುತ್ತಿರುವ ಸಾಂಸ್ಕೃತಿಕ ಹೊತ್ತಿನಲ್ಲಿ ಅಕ್ಷರ ಕಲಿತ ದಲಿತ ಯುವಕರ ಮುಖವು ತನ್ನ ವೈಯಕ್ತಿಕ ಬದುಕಿಗಷ್ಟೇ ಸೀಮಿತಗೊಳ್ಳಲಿಲ್ಲ. ಅದು ಸಮುದಾಯದಿಂದ ಪ್ರಶ್ನೆಯನ್ನು ಸ್ವೀಕರಿಸಿ ಗರ್ಭೀಕರಿಸಿಕೊಂಡಿತು. ಅದನ್ನು ಹೊರಹಾಕಲು ಹಲವು ಸ್ವರೂಪವನ್ನು ಪಡೆದು ನಿಂತಿತು. ತನಗೆ ತಾನೇ ಆಶ್ಚರ್ಯಗೊಂಡು ಯೋಚಿಸುವಂತೆ ತಮ್ಮ ಸಮುದಾಯಗಳ ವಾಸ್ತವ ಸ್ಥಿತಿಯು ಕಂಡಿತು."[೮] ದಲಿತ ಕವಿಗಳು ಆರಿಸಿಕೊಂಡ ವಸ್ತುವನ್ನು ಕುರಿತು ಮೇಲಿನ ಮಾತುಗಳು ನಿಖರವಾಗಿ ಹೇಳುತ್ತಿವೆ. ದಲಿತ ಕಾವ್ಯ ಸಮುದಾಯದ ವಿವಿಧ ಮಜಲುಗಳ ಶೋಷಣಾ ನೆಲೆಗಳನ್ನು ಪ್ರಮುಖವಾಗಿ ಕೇಂದ್ರೀಕರಿಸಿಕೊಂಡಿರುವುದು ಈ ಚಿಂತನೆಗಳಿಂದ ತಿಳಿದುಬರುತ್ತದೆ.

[illegible]

[illegible]

ರಂಗರಾಜ ವನದುರ್ಗ ಅವರು ತಮ್ಮ 'ದಲಿತ ಸಂವೇದನೆ' ಕೃತಿಯಲ್ಲಿ ದಲಿತ ಸಾಹಿತ್ಯದ ವಿವಿಧ ನೆಲೆಗಳನ್ನು ಚರ್ಚಿಸಿದ್ದಾರೆ. ದಲಿತ ಕಾವ್ಯ ತನ್ನ ಜನಾಂಗದ ನೋವುಗಳಾದಿಯಾಗಿ ಪುರಾಣ, ಪರಂಪರೆ, ಚರಿತ್ರೆ, ವರ್ತಮಾನ ಮುಂತಾದವುಗಳೊಂದಿಗೆ ಹೇಗೆ ಮುಖಾಮುಖಿಯಾಗಿದೆ ಎಂಬುದನ್ನು ಸಂಕ್ಷಿಪ್ತವಾಗಿ ವಿಶ್ಲೇಷಿಸಿದ್ದಾರೆ. ಅವರೇ ಬರೆಯುವ ಹಾಗೆ "೧೯೮೫ರ ಈಚಿನ ದಲಿತ ಕಾವ್ಯ ಅನೇಕ ರೀತಿಯ ವಸ್ತುಗಳನ್ನು ವೈವಿಧ್ಯಮಯವಾಗಿ ದುಡಿಸಿಕೊಳ್ಳುತ್ತಿದೆ. ಈ ಮೇಲೆ ಪ್ರಸ್ತಾಪಿಸಿದ ಸಂಗತಿಗಳ ಜೊತೆಗೆ ಇನ್ನೂ ಹಲವು ಮಗ್ಗಲುಗಳನ್ನು ಯೋಚಿಸಿದೆ. ಪರಂಪರೆಯೊಂದಿಗೆ ಮಾತಾಡಿದೆ. ನೆನಪುಗಳನ್ನು ಮೆಲುಕು ಹಾಕಿದೆ. ತನ್ನ ಸಮುದಾಯದ ಬಿಡುಗಡೆಗೆ ಶಿಕ್ಷಣ, ಸ್ವಾಭಿಮಾನ ಮತ್ತು ಮುಂತಾದವುಗಳನ್ನು ನಂಬಿಸಿದೆ. ಜಾಗತೀಕರಣದ ಫಲವಾಗಿ ಬಂದ ಎಲ್ಲಾ ಸವಾಲುಗಳೊಂದಿಗೆ ಗುದ್ದಾಡಲು ತನ್ನ ಆರಂಭದ 'ಖಡ್ಗವಾಗಲಿ ಕಾವ್ಯ'ದ ದಿನಗಳನ್ನು ನೆನಪಿಸಿಕೊಳ್ಳುತ್ತಿದೆ. ಹಸಿವು, ಆಕ್ರೋಶಗಳ ನಡುವೆಯೂ ಪ್ರೀತಿ-ಪ್ರೇಮ, ಕಲೆ-ನೆಲೆಗಳ ಬಗ್ಗೆ ಮಾತಾಡುತ್ತಿದೆ."[೯] ಆರಂಭದಲ್ಲಿ ದಲಿತ ಕಾವ್ಯ ಕೇಂದ್ರೀಕರಿಸಿಕೊಂಡಿದ್ದ ವಸ್ತು ಮತ್ತು ಇಂದಿನ ವಸ್ತುಸ್ಥಿತಿ ಇಲ್ಲಿ ಚರ್ಚಿತಗೊಂಡಿದೆ. ಇಲ್ಲಿನ ಚರ್ಚೆ ಕೇವಲ ವಸ್ತುವಿಗಷ್ಟೇ ಸೀಮಿತವಾಯಿತೆನಿಸಿದರೂ ದಲಿತ ಕಾವ್ಯದ ಬೇರೆ ಬೇರೆ ಆಯಾಮಗಳನ್ನು ಕುರಿತು ಆಲೋಚಿಸಲು ಪರೋಕ್ಷವಾಗಿ ಸೂಚಿಸಿದೆ.

'ಕನ್ನಡ ದಲಿತ ಕಾವ್ಯ: ಇಟ್ಟ ಹೆಜ್ಜೆ - ತೊಟ್ಟ ರೂಪಗಳು' ಎನ್ನುವ ಲೇಖನದಲ್ಲಿ ಬಸವರಾಜ ಸಬರದ ಅವರು ದಲಿತ ಕಾವ್ಯದ ವಸ್ತು ಮತ್ತು ಅಭಿವ್ಯಕ್ತಿಗೆ ಹೆಚ್ಚು ಒತ್ತು ನೀಡಿದ್ದಾರೆ. "ದಲಿತ ಕಾವ್ಯ ವಿಶಿಷ್ಟವಾಗಿ ಕಾಣಲು ಅದರ ವಸ್ತು ಹಾಗೂ ಅಭಿವ್ಯಕ್ತಿ ಕ್ರಿಯೆ ಎರಡೂ ಕಾರಣವಾಗಿದೆ"[೧೦] ಎನ್ನುವ ಸಬರದ ಅವರು ದಲಿತ ಕಾವ್ಯದ ವಸ್ತು ವೈವಿಧ್ಯತೆಯನ್ನೂ, ಆ ವಸ್ತುವಿಗೆ ತಕ್ಕ ಹಾಗೆ ನಿರೂಪಿತಗೊಂಡಿರುವ ಅಭಿವ್ಯಕ್ತಿಯನ್ನೂ ಏಕಕಾಲದಲ್ಲಿ ಗುರುತಿಸಲು ಪ್ರಯತ್ನಿಸಿದ್ದಾರೆ. "ಸಾಮಾಜಿಕ ಕಳಕಳಿ, ವರ್ಣವ್ಯವಸ್ಥೆಯ ತೀವ್ರ ಪ್ರತಿಭಟನೆ ಇವರ ಕಾವ್ಯದ ಕೇಂದ್ರವಾಗಿರುವಂತೆ ಮನುಷ್ಯನ ಅಂತಃಕರಣ ಹಾಗೂ ಜೀವಸೆಲೆಗೂ ಇಲ್ಲಿ ಪ್ರಾಮುಖ್ಯತೆ ನೀಡಲಾಗಿದೆ. ಹೀಗಾಗಿ ದಲಿತ ಕಾವ್ಯ ಕೇವಲ ಸಪ್ಪಳದ ಮಾತಾಗದೆ, ಸಂಯಮದ ಅಭಿವ್ಯಕ್ತಿಯೂ ಆಗಿದೆ. ಅಬ್ಬರದ ನುಡಿಗಳೊಂದಿಗೆ ಅಂತರಂಗದ ತುಡಿತವೂ ಇದೆ. ಭೋರ್ಗರೆವ ಮಳೆಯಂತೆ ಕಂಡರೂ, ಒಳಗೆ ನೋಡಿದಾಗ ತಣ್ಣಗೆ ಹನಿಸುವ ಅಂತರ್ಜಲವೂ ಕಾಣಿಸುತ್ತದೆ."[೧೧] ಇಲ್ಲಿ ಕಾವ್ಯದ ವಸ್ತು ಮತ್ತು ಅಭಿವ್ಯಕ್ತಿಯ ಕುರಿತು ಚರ್ಚಿಸಲಾಗಿದೆ. ಆದರೆ ದಲಿತ ಕಾವ್ಯದ ಅಭಿವ್ಯಕ್ತಿಯನ್ನು ಸೀಮಿತ ಚೌಕಟ್ಟಿನಲ್ಲಿ ನೋಡಿರುವಂತೆ ಭಾಸವಾಗುತ್ತದೆ. ಏಕೆಂದರೆ ಊಳಿಗಮಾನ್ಯಶಾಹಿ ಕರಾಳ ಕೈಗಳ ಚರ್ಚೆಯೇ ಇಲ್ಲಿ ಗೌಣವಾಗಿದೆ.

ದಲಿತ ಕಾವ್ಯ ದಲಿತರ ದಿನನಿತ್ಯದ ಸಾಮಾಜಿಕ ಬದುಕಿಗಷ್ಟೇ ಸೀಮಿತವಾಗಿಲ್ಲ. ಬದಲಾಗಿ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಿಷಯಗಳೂ ಇಲ್ಲಿ ಚರ್ಚಿತವಾಗಿವೆ. ಜಾಗತೀಕರಣದ ಕರಾಳ ಕೈಗಳು ದುಡಿಯುವವರನ್ನು ಬಲಿತೆಗೆದುಕೊಳ್ಳುವ ಪರಿಯನ್ನು ಅನೇಕ

ದಲಿತ ಕಾವ್ಯಗಳು ನಿರೂಪಿಸಿವೆ. ಇದಕ್ಕೆ ಉದಾಹರಣೆಯಾಗಿ ಅರವಿಂದ ಮಾಲಗತ್ತಿ ಅವರ ಕಾವ್ಯಗಳು ನಿಲ್ಲುತ್ತವೆ. ಇದನ್ನು 'ಬಿಂಬ, ಪ್ರತಿಬಿಂಬ' ಕೃತಿಯಲ್ಲಿ ಎನ್.ಎಸ್. ಶಂಕರೇಗೌಡ ಅವರು 'ಸೀಮಾತೀತ ನೆಲೆಯಲ್ಲಿ ಸಿಲಿಕಾನ್ ಸಿಟಿ ಮತ್ತು ಕೋಗಿಲೆ' ಲೇಖನದಲ್ಲಿ ಗುರುತಿಸಿರುವ ಬಗೆ ಹೀಗಿದೆ; "ಜಾಗತೀಕರಣದ ಭಾಗಗಳ ನೀತಿ ನಿಯಮಗಳು ಮಾನವ ಕೋಟಿಯನ್ನು ತಂತ್ರಜ್ಞಾನದ ಹೆಸರಿನಲ್ಲಿ ವಂಚಿಸುತ್ತಾ ನಿಷ್ಕ್ರಿಯಗೊಳಿಸುತ್ತಿರುವ ಪರಿಸ್ಥಿತಿ ಹಾಗೂ ಅದಕ್ಕೆ ಪರವಶರಾಗುತ್ತಾ ಸ್ವಂತಿಕೆಯನ್ನು ನಾಶಮಾಡಿಕೊಳ್ಳುತ್ತಿರುವುದರ ಬಗ್ಗೆ ಕವಿತೆಗಳು ವಿಷಾಧದ ನೆಲೆಗೆ ಹೊರಳುತ್ತವೆ."[೧೨] ಇಲ್ಲಿ ಕಾವ್ಯ ಒಳಗೊಂಡಿರುವ ವಸ್ತುವನ್ನು ಕುರಿತು ಚರ್ಚಿಸಲಾಗಿದೆ. ವಸ್ತುವನ್ನು ವಿವರಿಸುತ್ತಲೇ ತಂತ್ರಜ್ಞಾನದ ಹುನ್ನಾರವನ್ನು ಮೇಲಿನ ಸಾಲುಗಳು ಹೇಳುತ್ತಿವೆ.

ಎಲ್. ಹನುಮಂತಯ್ಯ ಅವರ 'ಕಪ್ಪು ಕಣ್ಣಿನ ಹುಡುಗಿ' ಕೃತಿಗೆ ಮುನ್ನುಡಿ ಬರೆದಿರುವ ಎನ್.ಬಿ. ಚಂದ್ರಮೋಹನ್ ಅವರು ಕವಿಯ ಕಾವ್ಯವನ್ನು ವಿಶ್ಲೇಷಿಸುತ್ತಾ "ಅವರ ಎಲ್ಲಾ ಕವನಗಳಲ್ಲೂ ಸ್ಥಾಯಿಯಾಗಿರುವ ಧೋರಣೆಯೆಂದರೆ ಅವರ ಸಾಮಾಜಿಕ ಕಳಕಳಿ, ಸಾಮಾಜಿಕ ಅಸಮಾನತೆ, ಅನ್ಯಾಯ ಇವು ಕವಿಯನ್ನು ಕಾಡುತ್ತವೆ. ಮೇಲು ನೋಟಕ್ಕೆ ರೊಮ್ಯಾಂಟಿಕ್ ಆಗಿ ಕಾಣುವ ಹೆಸರನ್ನು ಸಂಕಲನಕ್ಕೆ ಕೊಟ್ಟಿರುವ 'ಕಪ್ಪು ಕಣ್ಣಿನ ಹುಡುಗಿ' ಕವನದಲ್ಲಿ ಇಂಥದೇ ಆಶಯ ವ್ಯಕ್ತವಾಗುವುದನ್ನು ಗುರುತಿಸಬಹುದಾಗಿದೆ."[೧೩] ಈ ಸಾಲುಗಳು ಮೇಲುನೋಟಕ್ಕೆ ಆಶಯವನ್ನು ಕುರಿತು ಮಾತನಾಡುವಂತಿದ್ದರೂ ಅಂತರಾಳದಲ್ಲಿ ಕವನ ಸಂಕಲನದ ವಿವಿಧ ವಸ್ತುಗಳ ಅನಾವರಣವನ್ನು ಕಟ್ಟಿಕೊಡುತ್ತಿದೆ. ಹಾಗೆಯೇ ವಿನಾಯಕ ಕಮತದ ಅವರ 'ಒಡಲ ಹಕ್ಕಿಯ ಹಾಡು' ಕವನ ಸಂಕಲನಕ್ಕೆ ವಿಮರ್ಶೆ ಬರೆಯುತ್ತಾ ಸತ್ಯಾನಂದ ಪಾತ್ರೋಟ ಅವರು "ಒಡಲ ಹಕ್ಕಿಯ ಹಾಡು' ಸಂಕಲನದಲ್ಲಿ ಶಾಯರಿಗಳನ್ನು (ಕವಿ ಹೇಳಿದಂತೆ) ಹೊರತುಪಡಿಸಿ ಸುಮಾರು ಮೂವತ್ತು ಕವಿತೆಗಳಿವೆ. ಸಂಕಲನದಲ್ಲಿಯ ಹೆಚ್ಚಿನ ಕವಿತೆಗಳ ವಸ್ತು ಪ್ರೀತಿ, ಪ್ರೇಮ, ಪ್ರಣಯಕ್ಕೆ ಸಂಬಂಧಿಸಿದಂತದ್ದು. ಇಲ್ಲಿ ನೋವಿದೆ, ನಲಿವಿದೆ, ಆಶೆ–ನಿರಾಶೆಗಳ ಮಧ್ಯದಲ್ಲೂ ಇದಕ್ಕೆ ಕಾರಣ ಹುಡುಕುವ ಪ್ರಯತ್ನವೂ ಇದೆ. ಪರಿಹಾರ ಕಂಡುಕೊಳ್ಳುವ ಮನಸ್ಸು ಇದೆ"[೧೪] ಎಂದು ಬರೆದಿದ್ದಾರೆ. ದಲಿತ ಕಾವ್ಯದಲ್ಲಿ ನೋವಿನ ನಿವೇದನೆಯೇ ಹೆಚ್ಚು ಎನ್ನುವ ಸಂದರ್ಭದಲ್ಲಿ ಇಲ್ಲಿ ಪ್ರೀತಿ, ಪ್ರೇಮದಂತಹ ವಿಷಯಗಳು ಇವೆ ಎಂಬುದನ್ನು ಇಂತಹ ಆಲೋಚನೆಗಳು ತೋರಿಸಿಕೊಡುತ್ತವೆ. ಪ್ರೀತಿಯೂ ಕೂಡ ನೋವಿನೊಳಗೆ ಜನಿಸುವುದು ದಲಿತರ ಬಹುಪಾಲು ಕಾವ್ಯಗಳಲ್ಲಿ ಅಡಗಿದೆ. ಇದು ಕಾವ್ಯ ಅಧ್ಯಯನಕಾರರಿಗೆ ತಿಳಿಯದಿರುವ ವಿಷಯವೇನಲ್ಲ.

ಎಸ್.ಜಿ. ಸಿದ್ಧರಾಮಯ್ಯ ಅವರು 'ಊರಿಂದ ಊರಿಗೆ' ಕವನ ಸಂಕಲನಕ್ಕೆ ಬೆನ್ನುಡಿ ಬರೆಯುತ್ತಾ "ಪ್ರೀತಿಯ ಹಂಬಲ ಇವರ ಬಹುತೇಕ ರಚನೆಗಳ ವಸ್ತುದ್ರವ್ಯ. ಛಿದ್ರೀಕರಣಗೊಂಡ ಸಂಬಂಧಗಳ ನಡುವೆ ಕಕ್ಕಾಬಿಕ್ಕಿಯಾದ ಮನಸ್ಸು ಪ್ರೀತಿಗಾಗಿ ತುಡಿಯುವುದು ಅದನ್ನೇ

ಧ್ಯಾನಿಸುವುದು ಸಹಜವಿದೆ"[೧೫] ಎಂದಿದ್ದಾರೆ. ದಲಿತ ಕಾವ್ಯದ ವಸ್ತು ಕುರಿತ ಒಳನೋಟ ಇಲ್ಲಿದೆ. ದಲಿತ ಕಾವ್ಯದಲ್ಲಿ ಬರೀ ನೋವುಗಳಷ್ಟೇ ಬಿಂಬಿತಗೊಂಡಿವೆ ಎನ್ನುವ ಮಾತಿದೆ. ಇದಕ್ಕೆ ಲಕ್ಕೂರು ಆನಂದ ಅವರ ಮೇಲಿನ ಸಂಕಲನ ವಿರುದ್ಧವಾಗಿದೆ. ಇದನ್ನು ನಿಖರವಾಗಿ ಮೇಲಿನ ವಿಮರ್ಶೆಯೂ ಗುರುತಿಸಿದೆ. ಹಾಗೆಯೇ ದಲಿತ ಕಾವ್ಯದ ವಸ್ತುವನ್ನು ರಾಗೌ ಅವರು ಗುರುತಿಸಿರುವ ಬಗೆ ಹೀಗಿದೆ; ಮಹಾದೇವ ಕುಕ್ಕರಹಳ್ಳಿ ಅವರ 'ಬೆಂಕಿಯೊಳಗಿನ ಬದುಕು' ಕೃತಿಗೆ ಮುನ್ನುಡಿ ಬರೆಯುತ್ತಾ "ಇಲ್ಲಿಯ ಅನೇಕ ಕವಿತೆಗಳು ವ್ಯವಸ್ಥೆಯ ಕರಾಳ ಮುಖಗಳನ್ನು ಪರಿಚಯಿಸುವುದರಲ್ಲಿ ಯಶಸ್ವಿಯಾಗಿವೆ. ಹಣ, ಅಧಿಕಾರ, ಸ್ವಾರ್ಥ ರಾಜಕಾರಣ, ಜಾತಿಯ ಹಿಡಿತ, ಮತಧರ್ಮದ ಅಭಿನಿವೇಶ, ಬಂಡವಾಳಶಾಹಿಯ ಅಟ್ಟಹಾಸ, ಬಡತನದ ದೀನಮುಖ ಮೊದಲಾದವನ್ನು ಕವಿ 'ಸಿಟ್ಟು' ಮತ್ತು 'ವ್ಯಥೆ'ಯಿಂದ ಮುಂದಿಡುತ್ತಾರೆ"[೧೬] ಎಂದಿದ್ದಾರೆ. ದಲಿತ ಕಾವ್ಯದ ವಸ್ತು ಮತ್ತು ಆ ವಸ್ತು ಪ್ರಕಟವಾಗುವುದರ ಹಿಂದಿನ ಉದ್ದೇಶವನ್ನು ರಾಗೌ ಅವರ ಬರಹ ಸ್ಪಷ್ಟವಾಗಿ ಸೂಚಿಸುತ್ತಿದೆ.

'ವಿಷಾದದ ದನಿಯ ಕವಿತೆಗಳು' ಲೇಖನದಲ್ಲಿ ರಾಮಚಂದ್ರ ಶರ್ಮ ಅವರು ಮುನಿವೆಂಕಟಪ್ಪನವರ ಕಾವ್ಯಗಳ ಕುರಿತು ಬರೆಯುತ್ತಾ "ಅಭಾವವೇ ಅನುದಿನದ ಕತೆಯಾಗಿ 'ಹಸಿವೊಂದೇ ಧರಿಸಿದಾಭರಣ'ವಾದ ದಲಿತರ ಬವಣೆಯೇ ಇಲ್ಲಿರುವ ಎಲ್ಲ ಕವನಗಳ ವಸ್ತು. ಇಂತಹ ವಸ್ತುವುಳ್ಳ ಕಾವ್ಯಕ್ಕೆ ಸುಲಭವಾಗಿ ದಕ್ಕುವ ಸಾಮಾನ್ಯವಾದ ಆಕ್ರೋಶಕ್ಕೆ ಬದಲಾಗಿ ಮುನಿವೆಂಕಟಪ್ಪ ಅವರ ಕಾವ್ಯದಲ್ಲಿ ಒಂದು ಆಳವಾದ ವಿಷಾದವಿದೆ ಅನ್ನುವುದನ್ನು ಬಿಟ್ಟರೆ ಕಣ್ಣಿಗೆ ಹೊಡೆಯುವಂತಹ ಹೊಸತನ ಇಲ್ಲಿಲ್ಲವೆಂದು ಹೇಳಬೇಕಾಗುತ್ತದೆ"[೧೭] ಎಂದಿದ್ದಾರೆ. ಕಾವ್ಯದ ವಸ್ತುವನ್ನು ಸಮಂಜಸವಾಗಿ ಹಿಡಿದಿಟ್ಟಿರುವ ಈ ಮಾತುಗಳು ಹೊಸತನಕ್ಕೆ ಹಾತೊರೆಯುತ್ತವೆ. ಹೊಸತನವೆಂಬುದು ಸಾಂಪ್ರದಾಯಿಕ ಕಾವ್ಯ ನೆಲೆಗಳಿಂದ ಆಚೆ ನಿಂತು ನೋಡಿದ್ದರೆ ಅದಕ್ಕೊಂದು ಅರ್ಥ ಇರುತ್ತದೆ. ಏಕೆಂದರೆ ದಲಿತ ಕಾವ್ಯಕ್ಕೆ ದೇಶದ ಮೂಲೆ ಮೂಲೆಯಲ್ಲಿ ದಲಿತರು ಅನುಭವಿಸುತ್ತಿರುವ ನೋವೇ ಮುಖ್ಯವಾಗಿದೆ. ಈ ನೋವೇ ಪ್ರದೇಶದಿಂದ ಪ್ರದೇಶಕ್ಕೆ ದಲಿತ ಕಾವ್ಯವನ್ನು ಭಿನ್ನತೆಯಲ್ಲಿ ಅಭಿವ್ಯಕ್ತಗೊಳ್ಳುವಂತೆ ಮಾಡಿದೆ.

ದಲಿತ ಕಾವ್ಯದ ವಸ್ತುವಿನ ವಿಸ್ತಾರತೆ ಕುರಿತು ಚಂದ್ರಶೇಖರ ನಂಗಲಿ ಅವರು ಸಿದ್ಧಲಿಂಗಯ್ಯ ಅವರ ಕಾವ್ಯ ಕುರಿತ 'ಛದ್ಮವೇಶದ ಕಾವ್ಯ' ಎನ್ನುವ ಲೇಖನದಲ್ಲಿ ಬರೆಯುವ ರೀತಿ ಹೀಗಿದೆ;

> "ಜಾತಿ ಮತಗಳ ವಿಷದ ಮಂಜು ಕರಗಲಿ ಎಂದು
> ಬಿಸಿಲಿನಲಿ ತಿರುಗಿದಿರಿ ದೇಶವೆಲ್ಲ

ಹುಲ್ಲುಗರಿಕೆಗು ಕೂಡ ಪ್ರಾಣಮಾನಗಳುಂಟು
ಎಂಬುದನು ಸಾರಿದಿರಿ ಲೋಕಕೆಲ್ಲ

ಇಲ್ಲಿ ಬಳಕೆಯಾಗಿರುವ 'ಹುಲ್ಲು ಗರಿಕೆ' ಎಂಬ ರೂಪಕ ವೈಯಕ್ತಿಕ ನೆಲೆಯನ್ನು ಮೀರಿದ (ಕಾವ್ಯದ) ಜೀವಸತ್ವವಾಗಿದೆ. ಸಿದ್ಧಲಿಂಗಯ್ಯನವರ ಕಾವ್ಯದಲ್ಲಿ 'ದಲಿತ ಲೋಕದ ಕವಿತೆಗಳು' ಒಂದು ಮುಖವಾದರೆ, 'ದಲಿತ ಭೂಗೋಳದ ಕವಿತೆಗಳು' ಇನ್ನೊಂದು ಮುಖವಾಗಿದೆ. ಇಂತಹ ಕವಿತೆಗಳ ಪರಿಶೀಲನೆ ನಮ್ಮನ್ನು ದಲಿತ ಜಾತಿ, ದಲಿತ ವರ್ಗದ ಪರಿಕಲ್ಪನೆಯಿಂದ ಬಿಡಿಸಿ 'ದಲಿತ ಭೂಮಿ'ಯ ಕಡೆಗೆ ಹೊರಳಿ ನೋಡುವಂತೆ ಪ್ರೇರೇಪಿಸುತ್ತದೆ."[೧೮] ಇಲ್ಲಿ ದಲಿತ ಕಾವ್ಯದ ವಸ್ತು ದಲಿತ ಲೋಕದಿಂದ ಹಿಡಿದು ದುಡಿಯುವ ವರ್ಗದ ನೆಲೆಗಳವರೆಗೂ ವಿಸ್ತರಿಸಿಕೊಂಡಿದೆಯೆಂಬ ಸೂಕ್ಷ್ಮವನ್ನು ಹೇಳಲಾಗಿದೆ. ದಲಿತ ಕಾವ್ಯದ ಜೀವಂತಿಕೆ ಇರುವುದೇ ಇಂತಹ ಗುಣಗಳಿಂದ. ಕಾವ್ಯವನ್ನು ಅಭ್ಯಸಿಸಿದಂತೆಲ್ಲಾ ಅದರೊಳಗಿನ ನೋವುಗಳು ಪ್ರಪಂಚದಾದ್ಯಂತ ದುಡಿಯುವ ವರ್ಗದ ನೋವುಗಳಾಗಿ ಪರಿವರ್ತನೆಗೊಳ್ಳುತ್ತವೆ.

ಮೇಲಿನ ಮಾತುಗಳಿಗೆ ಪೂರಕವೆಂಬಂತೆ ಅಗ್ರಹಾರ ಕೃಷ್ಣಮೂರ್ತಿ ಅವರು 'ಏಕಾಂತ– ಲೋಕಾಂತಗಳ ಅರಿವು' ಎಂಬ ಲೇಖನದಲ್ಲಿ ಎಲ್. ಹನುಮಂತಯ್ಯ ಅವರ ಕಾವ್ಯವನ್ನು ವಿಮರ್ಶಿಸುತ್ತಾ "ಕಾವ್ಯ ಸೃಷ್ಟಿಗೆ ಬೇಕಾದ ಏಕಾಂತ ಮತ್ತು ಲೋಕಾಂತಗಳ ಸಮತೂಕದ ಅರಿವು ಅವರಲ್ಲಿ ಜಾಗೃತವಾಗಿರುವುದನ್ನು ನಿಚ್ಚಳವಾಗಿ ಗುರುತಿಸಬಹುದು"[೧೯] ಎಂದಿದ್ದಾರೆ. ದಲಿತ ಕವಿಗಳಲ್ಲಿ ಈ ಸಮತೂಕದ ಅರಿವು ಬಹು ಮುಖ್ಯವಾಗಿ ಕೆಲಸ ಮಾಡಿದೆ. ಏಕೆಂದರೆ ವೈಯಕ್ತಿಕ ನೆಲೆಯಿಂದ ಹೊರಟ ಅಭಿವ್ಯಕ್ತಿ ಕೊನೆಗೆ ಸಮುದಾಯದ ಅಭಿವ್ಯಕ್ತಿಯಾಗಿ ರೂಪುಗೊಳ್ಳುತ್ತದೆ. ಇದು ಎಲ್ಲಾ ದಲಿತ ಕಾವ್ಯದ ಧೋರಣೆಯೂ ಹೌದು. ಇದನ್ನೇ ಮೇಲಿನ ವಿಮರ್ಶೆ ಗುರುತಿಸಿರುವುದು.

ಇದೇ ಧೋರಣೆ ಮುಂದುವರಿದಂತೆ ಚೆನ್ನವೀರ ಕಣವಿ ಅವರು ಎಲ್. ಹನುಮಂತಯ್ಯ ಅವರ 'ಅಕ್ಷರ ಅಕ್ಷರವೇ' ಕೃತಿಗೆ ತಮ್ಮ ಅಭಿಪ್ರಾಯವನ್ನು ಬರೆಯುತ್ತಾ "ವೈಯಕ್ತಿಕ ನೋವು ನಲಿವುಗಳು ಸಮುದಾಯದ ನೋವಿನ ಕಾವಿನಲ್ಲಿ ಕಾಳಜಿಗಳಲ್ಲಿ ಒಂದಾಗಿ 'ಬೆಳೆಯ ಕಾಯುವ ಬೇಲಿ ಗಿಡವು ನಾನು' ಎಂಬ ಪ್ರಜ್ಞೆಯುಳ್ಳದಾಗಿರುವುದರಿಂದ ಕಾವ್ಯ ಘೋಷಣೆಯಾಗದಂತೆ ನೋಡಿಕೊಳ್ಳಲು ಸಾಧ್ಯವಾಗಿದೆಯೆಂದು ನನ್ನ ಅನಿಸಿಕೆ"[೨೦] ಎಂದಿದ್ದಾರೆ. ಮೇಲಿನ ಅಭಿವ್ಯಕ್ತಿಯ ಎರಡು ನೆಲೆಗಳೂ ಕೂಡ ದಲಿತ ಕಾವ್ಯದ ವಸ್ತು ಏಕಾಂತಗಳ ನೆಲೆಯಿಂದ ಸಮುದಾಯದ ಕಡೆಗೆ ಸಾಗುವ ಹಿನ್ನೆಲೆಯನ್ನು ಗುರುತಿಸಿವೆ. ಇದು ದಲಿತ ಕಾವ್ಯಕ್ಕಿರುವ ಮೌಲ್ಯವೂ ಹೌದು.

ಜಿ.ಬಿ. ಪೂಜಾರಿ ಅವರ 'ಬಿಸಿಲ ಭೂಮಿಯ ಕೋಗಿಲೆ' ಕವನ ಸಂಕಲನಕ್ಕೆ ಮುನ್ನುಡಿ ಬರೆದಿರುವ ಕಾಶಿನಾಥ ಅಂಬಲಗೆ ಅವರೂ ಸಹ ಕಾವ್ಯದೊಳಗಿನ ವಸ್ತುವಿನ ಅವಲೋಕನಕ್ಕೇ ತಮ್ಮ ಚಿಂತನೆಯನ್ನು ಮಿತಿಗೊಳಿಸಿದ್ದಾರೆ. ಕೃತಿ ಕುರಿತ ವಿಶ್ಲೇಷಣೆ ಹೀಗಿದೆ;

"ನಾ ಬರೆಯುವೆ
ದಣಿದವರಿಗೆ ನೆರಳಾಗಿ
ಹಸಿದವರಿಗೆ ಉಸಿರಾಗಿ

ಎಂದು ತಮ್ಮ ಕಾವ್ಯದ ಉದ್ದೇಶ ದಾಖಲಿಸುತ್ತಾರೆ. ಒಟ್ಟು ಬಡತನ, ಹಸಿವು, ನೋವು, ಅಪಮಾನ, ಓಟಿನ ರಾಜಕೀಯ, ರೈತನ ಗೋಳು, ಲಂಚರಿಷವತ್ತುಗಳೆಲ್ಲ ಇಲ್ಲಿ ಕಾವ್ಯವಾಗಿವೆ. ಬುದ್ಧ ಅಂಬೇಡ್ಕರರಿಗೆ ನುಡಿ ಕಾಣಿಕೆಗಳಿವೆ. ಭವ್ಯ ಭಾರತಕ್ಕೆ ಬೆತ್ತಲೆಗೊಳಿಸಿ, ಬೆತ್ತಲೆಯಾಗಿಯೇ ಇದ್ದವರಿಗೆ ಬಟ್ಟೆ ತೊಡಿಸುವ ಪ್ರಯತ್ನಗಳು ಇಲ್ಲಿವೆ."[೨೧] ಇಲ್ಲಿಯೂ ಕೂಡ ವಸ್ತುವಿಂದಾಚೆ ಕಾವ್ಯ ಧ್ವನಿಸಬಹುದಾದ ಸಾಧ್ಯತೆಗಳ ಕಡೆಗೆ ಇಲ್ಲಿನ ವಿಶ್ಲೇಷಣೆ ಹೆಚ್ಚು ಗಮನವನ್ನು ಕೇಂದ್ರೀಕರಿಸಲಿಲ್ಲ. ಆದರೆ ದಲಿತ ಕಾವ್ಯ ಕೇವಲ ನೋವುಗಳಷ್ಟೇ ಅಲ್ಲ ಆಧುನಿಕ ಪ್ರಪಂಚವನ್ನು ದಿವಾಳಿ ಮಾಡುತ್ತಿರುವ ಲಂಚರಿಷವತ್ತುಗಳ ಬಗ್ಗೆಯೂ ಅಭಿವ್ಯಕ್ತಿಸಿದೆ ಎಂಬುದನ್ನು ತೋರಿಸಿಕೊಟ್ಟಿದೆ.

ಮೇಲೆ ಉಲ್ಲೇಖಿಸಿರುವ ಕೃತಿಗೆ ಶುಭ ಕೋರಿರುವ ಶಾಂತಿನಾಥ ದಿಬ್ಬದ ಅವರೂ ಸಹ ಕಾವ್ಯದ ವಸ್ತುವಿಗೆ ಹೆಚ್ಚು ಗಮನ ಕೊಟ್ಟಿರುವುದನ್ನು ಕಾಣಬಹುದು. "ಸಂಕಲನದ ಶೀರ್ಷಿಕೆ ತುಂಬಾ ಧ್ವನಿಪೂರ್ಣವಾಗಿದೆ. 'ಬಿಸಿಲ ಭೂಮಿ' ಎಂಬ ಶಬ್ದವು ತನ್ನ ಒಡಲಾಳದಲ್ಲಿ ಶತಮಾನಗಳಿಂದ ಭಾರತವು ಅನುಭವಿಸುತ್ತ ಬಂದಿರುವ ಜಾತೀಯತೆ, ಅಸಮಾನತೆ, ಅಮಾನವೀಯತೆ ಮೊದಲಾದವುಗಳ ಸಂಕೇತಾರ್ಥವನ್ನು ಹುದುಗಿಸಿಕೊಂಡಿದೆ"[೨೨] ಎಂದು ಬರೆದಿದ್ದಾರೆ. ದೇಶದ ಯಾವುದೋ ಒಂದು ಮೂಲೆಯಲ್ಲಿ ಪ್ರಕಟಗೊಂಡ ದಲಿತ ಕಾವ್ಯ ತನಗೇ ಗೊತ್ತಿಲ್ಲದಂತೆ ಇಡೀ ದೇಶದ ದುಡಿಯುವ ವರ್ಗಕ್ಕೆ ಅನ್ವಯಿಸುತ್ತದೆ. ಈ ಅಂಶವನ್ನು ಮೇಲಿನ ಮಾತುಗಳು ಸ್ಪಷ್ಟಗೊಳಿಸುತ್ತಿವೆ.

'ಪ್ರಭುತ್ವ ಮತ್ತು ಸಾಹಿತ್ಯ' ಎನ್ನುವ ಕೃತಿಯಲ್ಲಿ ಆರ್.ವಿ. ಭಂಡಾರಿ ಅವರು ದಲಿತ ಕಾವ್ಯದ ವಸ್ತುವನ್ನು ಅತ್ಯಂತ ಸಮಂಜಸವಾಗಿ ಹಿಡಿದಿಟ್ಟಿದ್ದಾರೆ. ಅವರೇ ಬರೆಯುವಂತೆ "ದಲಿತ ಬಂಡಾಯದ ವಸ್ತು ನಗರ ಕೇಂದ್ರಿತವಲ್ಲ. ಬದಲಾಗಿ ಅದು ಗ್ರಾಮೀಣ ಕೇಂದ್ರಿತವಾದುದು. ಇದಕ್ಕೆ ಕಾರಣ ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಜೀವಂತವಾಗೇ ಇರುವ ಊಳಿಗಮಾನ್ಯ ವ್ಯವಸ್ಥೆ ಮತ್ತು ಅದರಿಂದ ಪೋಷಿತವಾದ ಧರ್ಮ-ಜಾತಿಯ ಸಂರಚನೆ. ಜಾತಿ-ಧರ್ಮ ಅದರಂತೆ ಲಿಂಗಭೇದದಿಂದಾಗಿ ಸಮಾಜದಿಂದ ಇಂದಿನ ಲೇಖಕ ಬೇರೆಯಾಗಿದ್ದಾನೆ"[೨೩] ಎನ್ನುವುದರ ಮೂಲಕ ದಲಿತ ಕಾವ್ಯದ ವಸ್ತುವಿಗೆ ಹೆಚ್ಚು ಗಮನ

[illegible]

[illegible]

[illegible]

[illegible]

[illegible]

ಕೇಂದ್ರೀಕರಿಸಿದ್ದಾರೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾಗಿರುವ ಸಂಗತಿಯೆಂದರೆ ದಲಿತ ಕಾವ್ಯದಲ್ಲಿ ಕೇಂದ್ರೀಕೃತವಾಗಿರುವ ಗ್ರಾಮೀಣ ಪ್ರಜ್ಞೆ, ದಲಿತರ ಬದುಕು ದಿನನಿತ್ಯ ಶೋಷಣೆಯನ್ನು ಅನುಭವಿಸುತ್ತಿರುವುದೇ ಒಗ್ಗಟ್ಟಿನ ಹೊದಿಕೆಯನ್ನು ಹಾಕಿಕೊಂಡು ದಬ್ಬಾಳಿಕೆಗೆ ಕುಮ್ಮಕ್ಕು ನೀಡುತ್ತಿರುವ ಹಳ್ಳಿಗಳಲ್ಲಿ. ಈ ಹಿನ್ನೆಲೆ ಅಕ್ಷರ ಕಲಿತ ದಲಿತರಿಗೆ ಗೊತ್ತಿರುವ ಮತ್ತು ಅನುಭವಿಸಿರುವ ಕಾರಣದಿಂದಾಗಿಯೇ ಅಭಿವ್ಯಕ್ತಿ ಆ ನೆಲೆಯನ್ನು ಆವರಿಸಿಕೊಂಡೇ ಜನ್ಮತಾಳಿದೆ. ದಲಿತ ಕಾವ್ಯದಲ್ಲಿ ಕೆಲವೊಮ್ಮೆ ಪ್ರತಿಭಟನೆ ವಾಚ್ಯದಲ್ಲಿ ಕಾಣಿಸಿಕೊಂಡರೆ, ಮತ್ತೊಮ್ಮೆ ಸೂಚ್ಯವಾಗಿ ಕಾಣಿಸಿಕೊಳ್ಳುತ್ತದೆ. ಈ ಅಂಶವನ್ನು ಮೇಲಿನ ಮಾತುಗಳು ಸೂಚಿಸುತ್ತಿವೆ.

ಸುಬ್ಬು ಹೊಲೆಯಾರ್ ಅವರು ಮೂಡ್ನಾಕೂಡು ಚಿನ್ನಸ್ವಾಮಿ ಅವರ 'ನಾನೊಂದು ಮರವಾಗಿದ್ದರೆ' ಕವನಕ್ಕೆ ಪ್ರತಿಕ್ರಿಯಿಸುತ್ತಾ 'ಎಲ್ಲರ ಮನೆಯ ಮೇಲೆ ಸುರಿಯುವ ಮಳೆ' ಎಂಬ ಲೇಖನದಲ್ಲಿ "'ನಾನೊಂದು ಮರವಾಗಿದ್ದರೆ' ಇಡೀ ಪದ್ಯದ ಸ್ಥಾಯಿ ಅವಶ್ಯಕತೆಯ ಗಾಢ ನೋವು ತನ್ನನ್ನು ಮುಟ್ಟಿಸಿಕೊಳ್ಳಲಾರದಕ್ಕೆ ನೊಂದು ಮಿಡಿಯುವ ಮನಸ್ಸು. ಇದು ಕವಿಯದ್ದು ಮತ್ತು ತನ್ನನ್ನು ಆವರಿಸಿಕೊಂಡಿರುವ ಜನಾಂಗದ್ದು ಕೂಡ"[೨೪] ಎಂದಿದ್ದಾರೆ. ದಲಿತ ಕಾವ್ಯದ ವಸ್ತು ವ್ಯಕ್ತಿಯಿಂದ ಸಮುದಾಯವನ್ನು ಆವರಿಸಿಕೊಳ್ಳುವ ಬಗೆಯನ್ನು ಮೇಲಿನ ವಿಶ್ಲೇಷಣೆ ತೋರಿಸಿಕೊಡುತ್ತಿದೆ. ಇದೇ ಕಾವ್ಯದ ವಿಶ್ಲೇಷಣೆಯನ್ನು ಮುಂದುವರಿಸುತ್ತಾ ಲೇಖಕರು–

"ಹಕ್ಕಿಗೂಡು ಕಟ್ಟುವ ಮುನ್ನ
ಕೇಳುತ್ತಿರಲಿಲ್ಲ ನೀನು ಯಾವ ಕುಲ;
ಬಿಸಿಲು ನನ್ನ ಅಪ್ಪಿಕೊಂಡಾಗ
ನೆರಳಿಗಾಗುತ್ತಿರಲಿಲ್ಲ ಮೈಲಿಗೆ;

ಇದನ್ನು ಗಮನಿಸಿ: ವರ್ಣಾಶ್ರಮದ ಘನ ಘೋರ ಕ್ರೌರ್ಯ ಎಷ್ಟರಮಟ್ಟದ್ದು ಎಂದರೆ, ಇಲ್ಲಿ ನೋಟ ಮತ್ತು ನೆರಳು ಎರಡು ಮೈಲಿಗೆಯೆಂದು ಭಾವಿಸಿ ಸ್ನಾನ ಮಾಡಿಕೊಳ್ಳುತ್ತಿದ್ದರು ಆಗ; ಈಗಲೂ ಅದು ಬದಲಾಗಿಲ್ಲ. ಅದು ಈಗಲೂ ಪ್ರಸ್ತುತವಿದ್ದದ್ದರಿಂದಲೇ ಈ ಪದ್ಯ ತನ್ನ ತೀವ್ರತೆಯನ್ನು ಪಡೆದಿದೆ."[೨೫] ಇಲ್ಲಿ ವರ್ಣಾಶ್ರಮದ ಕ್ರೌರ್ಯ ಮುಖಗಳ ಅನಾವರಣವಿದೆ. ದಲಿತ ಕಾವ್ಯದಲ್ಲಿ ಕೆಲವು ಕೃತಿಗಳು ವರ್ಣಾಶ್ರಮವನ್ನು ಧಿಕ್ಕರಿಸುವಲ್ಲಿ ಹೆಚ್ಚು ಆಸಕ್ತಿ ವಹಿಸಿವೆ. ಆದರೆ ದಲಿತರ ಸಮಸ್ಯೆ ಇಂದು ಭಿನ್ನ ಭಿನ್ನ ನೆಲೆಯಲ್ಲಿ ವಿಸ್ತರಿಸಿಕೊಳ್ಳುತ್ತಿದೆ. ಬಂಡವಾಳಶಾಹಿ ವರ್ಗ ನಿರಂತರವಾಗಿ ದಲಿತರನ್ನು ಶೋಷಿಸುತ್ತಿದೆ. ಆದರೆ ಇಲ್ಲಿ ಕಾವ್ಯ ಮತ್ತು ಅದರ ವಿಶ್ಲೇಷಣೆ ವರ್ಣಾಶ್ರಮವನ್ನು ಗುರಿಯಾಗಿಟ್ಟುಕೊಂಡಿದೆ. ಇದು ಕಾವ್ಯ ಮತ್ತು ವಿಮರ್ಶೆಯ ಮಿತಿಯೂ ಇರಬಹುದು.

ಮೇಲಿನ ಕವಿತೆಯನ್ನೇ ಕುರಿತು 'ಆರ್ತ ಕಲಾತ್ಮಕತೆಯ ಕವಿತೆಗಳು' ಎನ್ನುವ ಲೇಖನದಲ್ಲಿ ಪ್ರತಿಕ್ರಿಯಿಸಿರುವ ಬಂಜಗೆರೆ ಜಯಪ್ರಕಾಶ್ ಅವರು "ಹೆಣ್ಣಾಗಿ ಹುಟ್ಟೋಕ್ಕಿಂತ ಮಣ್ಣಾಗಿ ಹುಟ್ಟಿದರೆ ಮಣ್ಣೀನ ಮೇಲೊಂದು ಮರವಾಗಿ' ಎಂಬ ನೊಂದ ಮಹಿಳೆಯ ಜಾನಪದ ಸಾಹಿತ್ಯಾಶಯ, ಹೆಣ್ಣಿನಂತೆಯೇ ಅನಾದಿ ಕಾಲದಿಂದ ದಮನಕ್ಕೊಳಗಾಗಿರುವ ತಮ್ಮ ಅಸ್ತಿತ್ವದ ಬಗ್ಗೆಯೇ ತೀವ್ರ ಕಳವಳವನ್ನು ಹೊಂದಿರುವ ದಲಿತರ ಪರಿಸ್ಥಿತಿಯನ್ನು ಚಿನ್ನಸ್ವಾಮಿಯವರ ನಾನೊಂದು ಮರವಾಗಿದ್ದರೆ ಕವಿತೆ ವ್ಯಕ್ತಪಡಿಸುತ್ತದೆ"[೨೬] ಎಂದಿದ್ದಾರೆ. ದಲಿತರ ಅಸ್ತಿತ್ವದ ಪ್ರಶ್ನೆಯೇ ಕಾವ್ಯದ ವಸ್ತುವಾಗಿರುವುದನ್ನು ಮೇಲಿನ ಮಾತುಗಳ ಹಿನ್ನೆಲೆಯಲ್ಲಿ ಕಾಣಬಹುದಾಗಿದೆ.

ಮೂಡ್ನಾಕೂಡು ಚಿನ್ನಸ್ವಾಮಿ ಅವರ 'ಗೋಧೂಳಿ' ಕೃತಿಗೆ ಮುನ್ನುಡಿ ಬರೆಯುತ್ತಾ ಚನ್ನವೀರ ಕಣವಿ ಅವರು "ಹುಟ್ಟೇ ನೋವಾಗಿ, ಬದುಕು ಸಾವಾಗಿ ಅಣಕಿಸುವ ಒಂದು ಬೃಹತ್ ಮಾನವ ಸಮುದಾಯ ಅನಾಗರೀಕ ಹಾಗೂ ಅಮಾನವೀಯ ಶೋಷಣೆ ಮತ್ತು ದಬ್ಬಾಳಿಕೆಗೆ ಒಳಗಾಗಿರುವ ಅದರ ನೋವು, ಸಂಕಟಗಳನ್ನು, ದುಃಖ ದುಮ್ಮಾನಗಳನ್ನು ಆ ಸಮುದಾಯದ ಒಂದು ಭಾಗವೇ ಆದ ಲೇಖಕನೇ ಅದನ್ನು ಅಧಿಕೃತವಾಗಿ ನೀಡಬಲ್ಲ. ಈಚಿನ ಕವಿಗಳಲ್ಲಿ ಅಂತಹ ದಲಿತ ಬಂಡಾಯ ಮನೋಧರ್ಮವನ್ನು ಸಂಯಮದಿಂದ ಅಭಿವ್ಯಕ್ತಗೊಳಿಸುತ್ತಿರುವವರಲ್ಲಿ ಶ್ರೀ ಸ್ವಾಮಿಯವರ ಪ್ರಯತ್ನ ವೈಶಿಷ್ಟ್ಯಪೂರ್ಣವಾಗಿದೆ"[೨೭] ಎಂದು ಬರೆದಿದ್ದಾರೆ. ದಲಿತ ಕಾವ್ಯದಲ್ಲಿ ನೋವಿನ ಅನಾವರಣಗಳೇ ಹೆಚ್ಚು. ದಲಿತರ ನೋವುಗಳಿಗೆ ಅನಾಗರೀಕ ಮತ್ತು ಅಮಾನವೀಯ ಮನಸ್ಸುಗಳೇ ಕಾರಣ. ದಲಿತರು ತಮ್ಮ ಒಡಲಾಳದ ಕಿಚ್ಚಿಗೆ ಅಭಿವ್ಯಕ್ತಿ ನೀಡಲು ಮುಂದಾದಾಗ ಅವರ ವಾಸ್ತವ ಸ್ಥಿತಿಯೇ ವಸ್ತುಗಳಾಗಿ ಪರಿಣಮಿಸುತ್ತವೆ. ಈ ಅಂಶವನ್ನು ಮೇಲಿನ ಮಾತುಗಳು ಸ್ಪಷ್ಟಪಡಿಸುತ್ತಿವೆ.

ಮೂಡ್ನಾಕೂಡು ಅವರ 'ನಾನೊಂದು ಮರವಾಗಿದ್ದರೆ' ಕೃತಿಗೆ ವಿಮರ್ಶೆ ಬರೆದಿರುವ ವಿನಯಾ ಅವರು 'ನೆಲದ ಸಂಕಟಗಳಿಗೆ ಸೃಜನಶೀಲ ರೂಪಕ.....' ಎಂಬ ಲೇಖನದಲ್ಲಿ ಕಾವ್ಯದ ವಸ್ತುವಿಗೆ ಹೆಚ್ಚು ಪ್ರಾಮುಖ್ಯತೆ ನೀಡಿರುವುದನ್ನು ಕಾಣಬಹುದು. ಅವರೇ ಬರೆಯುವಂತೆ "ಉಳ್ಳವರ ಕಾಲ ಕೆಳಗೆ ನಲುಗಿದ ಸಮುದಾಯ ತನ್ನ ಕಂಪನ ಮತ್ತು ಯಾತನೆಯನ್ನು ಯಾರಿಗೂ ದಕ್ಕದ ವಿಚಿತ್ರ ತಲ್ಲಣದಲ್ಲಿ ನುಡಿಸುತ್ತದೆ. ಯಾರಿಗೂ ಸುಲಭವಾಗಿ ಒದಗದ ಸುಂದರ ಕನಸಿನ ಕೌದಿಯನ್ನು ಹೊದೆಯುತ್ತದೆ. ಈ ಎರಡೂ ನೆಲೆಗಳ ಕಾವ್ಯದಾರಿ ಪ್ರಸ್ತುತ ಸಂಕಲನದಲ್ಲಿದೆ"[೨೮] ಎಂದಿದ್ದಾರೆ. ಇದುವರೆಗೂ ಬರೆಯದ ವಿಶಿಷ್ಟ ದನಿಯೊಂದು ಇಲ್ಲಿದೆ. ಅದೆಂದರೆ ಯಾರಿಗೂ ದಕ್ಕದ ಹಾಗೂ ಯಾರಿಗೂ ನಿಲುಕದ ದಲಿತ ಸಂವೇದನೆಗಳು. ಇಲ್ಲಿ ದಲಿತರ ವಸ್ತುಸ್ಥಿತಿ ದಕ್ಕುವುದು ಮತ್ತು ನಿಲುಕುವುದು ದಲಿತ ಬದುಕಿನ ಒಳ ಹೊಕ್ಕಾಗ ಮಾತ್ರ ಎಂಬುದನ್ನು ಮೇಲಿನ ಚರ್ಚೆಯು ಸ್ಪಷ್ಟಪಡಿಸುತ್ತಿದೆ. ಇದನ್ನೇ ಮುಂದುವರಿಸುವುದಾದರೆ

ಮೇಲ್ನೋಟಕ್ಕೆ ಕಂಡ ದಲಿತರ ಬದುಕು ಸಮಗ್ರವಾದ ಚಿತ್ರಣವನ್ನು ಕೊಡಲು ಸಾಧ್ಯವಿಲ್ಲ. ಅಂತರಾಳದಲ್ಲಿ ಯಾತನೆಯ ಇನ್ನೊಂದು ಮಜಲು ಅವಿತುಕೊಂಡಿರುತ್ತದೆ. ಇದರ ವಿಶ್ಲೇಷಣೆ ಮೇಲ್ನೋಟದ ಚರ್ಚೆಗಿಂತ ಬಹಳ ಮುಖ್ಯ.

'ಜಲದ ಕಣ್ಣಿನ ಕಡೆಗೆ' ಎನ್ನುವ ಲೇಖನದಲ್ಲಿ ಮಲ್ಲೇಪುರಂ ಜಿ. ವೆಂಕಟೇಶ್ ಅವರು ಮೂಡ್ನಾಕೂಡು ಕಾವ್ಯ ಕುರಿತು ಬರೆಯುತ್ತಾ ದಲಿತ ಕಾವ್ಯದ ವಸ್ತುವಿನ ವಿಸ್ತಾರತೆ ಕುರಿತು ಚರ್ಚಿಸಿದ್ದಾರೆ. ಅವರೇ ಬರೆಯುವಂತೆ "ನನ್ನ ಮಟ್ಟಿಗೆ ಈ ಹೊತ್ತಿನ ಕವಿತೆಯ ನೆಲೆಗಳು ಎರಡು ಮುಖಗಳಲ್ಲಿ ನೆಲೆನಿಂತಿವೆ. ಮೊದಲನೆಯದು, ಜನಾಂಗದ ಸ್ಮೃತಿ; ಎರಡನೆಯದು ಸಾಮಾಜಿಕ ಧ್ಯಾನ. ಇವು ಬೇರೆ ಬೇರೆಯಲ್ಲ. ಬದಲಾಗಿ ಅವು ಒಂದಕ್ಕೊಂದು ಬಲಿತು ನಿಂತಿವೆ. ಒಲಿದು ನಿಂತಿವೆ. ಬಸವಣ್ಣ ಹೇಳಿದ 'ಆನು ಒಲಿದಂತೆ ಹಾಡುವೆನಯ್ಯಾ' ಎಂಬ ಮಾತು ಈ ಎರಡು ಅಂಶಗಳಿಗೂ ಸರಿಹೊಂದುತ್ತದೆ. ನಿಜವಾದ ಸಾಮಾಜಿಕ ಕವಿಯಾದವನು ನಿಜಕತೆಗಾರನೂ ಆಗಿರುತ್ತಾನೆ. ಸಾಮಾಜಿಕತೆ ಅವನ ಕವಿತೆಯ ದ್ರವ್ಯವಾಗಿರುತ್ತದೆ"[೨೯] ಎಂದಿದ್ದಾರೆ. ಇಲ್ಲಿ ದಲಿತ ಕಾವ್ಯದ ಅಭಿವ್ಯಕ್ತಿಯ ಹಿಂದೆ ಇರಬಹುದಾದ ಸಾಮಾಜಿಕ ಒತ್ತಡವನ್ನು ಮೇಲಿನ ಮಾತುಗಳು ಕಟ್ಟಿಕೊಡುತ್ತಿವೆ. ಈ ಸಾಮಾಜಿಕತೆಯೇ ಕಾವ್ಯದ ವಸ್ತುವಾಗಿರುವುದು ದಲಿತರ ವಸ್ತುಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ. ಸಮುದಾಯ ಮತ್ತು ಅದರ ಇಷ್ಟಾನಿಷ್ಟಗಳು ದಲಿತ ಕಾವ್ಯದಲ್ಲಿ ಹಾಸುಹೊಕ್ಕಾಗಿವೆ. ಇವೆರಡರ ಪ್ರಜ್ಞೆ ಪ್ರತಿಯೊಬ್ಬ ದಲಿತ ಕವಿಗಳಿಗೆ ಇರುವುದು ಅತ್ಯವಶ್ಯಕ. ಇದರಿಂದಲೇ ಅವರು ಚರಿತ್ರೆಯನ್ನು ಮುರಿದು ಕಟ್ಟಲು ಸಾಧ್ಯ.

ಗಂಗಾರಾಂ ಚಂಡಾಲ ಅವರ 'ಚಾಂಡಾಲರ ಕೂಗು' ಕೃತಿಗೆ ಮುನ್ನುಡಿ ಬರೆದಿರುವ ಜಿ.ಎಸ್. ಅವಧಾನಿಯವರೂ ಕೂಡ ಕಾವ್ಯದ ವಸ್ತುವನ್ನು ವಿಶ್ಲೇಷಿರುವ ಬಗೆ ಹೀಗಿದೆ; "ಗಂಗಾರಾಂ ಅವರ ಕಾವ್ಯದ ಕೂಗಿನ ಹಿಂದೆ ಸಾವಿರ ವರ್ಷಗಳ ನೋವು, ಅಪಮಾನ, ಶೋಷಣೆಗಳಲ್ಲಿ ಕಾದಿದ ಇತಿಹಾಸವಿದೆ. ಅಂತೆಯೇ ಅವರ ಕವಿತೆಗಳಲ್ಲಿ ಅದೆಲ್ಲ ಹೂಬೇ ಹೂಬಾಗಿ ಮೈದುಂಬಿಕೊಂಡಿದೆ"[೩೦] ಎಂದಿರುವ ಅವಧಾನಿಯವರು ದಲಿತ ಕಾವ್ಯದ ವಸ್ತುವಿನ ಹಿಂದೆ ಇರುವ ಸಾವಿರಾರು ವರ್ಷಗಳ ಶೋಷಣೆಯ ತೀವ್ರತೆಯನ್ನು ಹೇಳಲು ಪ್ರಯತ್ನಿಸಿದ್ದಾರೆ. ಜನಪರ ಚಳುವಳಿಗಳಲ್ಲಿ ಹುಟ್ಟಿದ ಕಾವ್ಯ ವಸ್ತುಗಳ ಆಯ್ಕೆಯಲ್ಲಿ ಚಾರಿತ್ರಿಕ ತುರ್ತಿನ ಹಿನ್ನೆಲೆಯಲ್ಲಿ ಆಯ್ದುಕೊಳ್ಳುತ್ತದೆ. ಇದು ದಲಿತ ಕಾವ್ಯದ ಅಭಿವ್ಯಕ್ತಿಯ ಹಿಂದೆ ಕೆಲಸ ಮಾಡಿದೆ.

ಪುರುಷೋತ್ತಮ ಬಿಳಿಮಲೆ ಅವರ 'ಬಂಡಾಯ-ದಲಿತ ಸಾಹಿತ್ಯ' ಎನ್ನುವ ಲೇಖನವೂ ಕೂಡ ಸಿದ್ಧಲಿಂಗಯ್ಯ ಅವರ ಕಾವ್ಯದ ವಸ್ತುವಿನ ಚರ್ಚೆಗೆ ಹೆಚ್ಚು ಕೇಂದ್ರೀಕರಿಸಿಕೊಂಡಿದೆ. ಬಿಳಿಮಲೆಯವರೇ ಬರೆಯುವಂತೆ "ದಲಿತರ ದುರಂತಕ್ಕೆ ಕಾರಣವಾಗಿರುವ

ವ್ಯವಸ್ಥೆಯ ವಿರುದ್ಧ ಸಿಟ್ಟು, ಅದನ್ನು ಧ್ವಂಸ ಮಾಡಿಬಿಡಬೇಕೆಂಬ ಅದಮ್ಯ ಉತ್ಸಾಹ, ತನ್ನವರ ಅಜ್ಞಾನ ಮತ್ತು ಹೆಡ್ಡತನಕ್ಕಾಗಿ ನೋವು–ಬೇಸರ, ದಲಿತರನ್ನು ಸಂಘರ್ಷಕ್ಕೆ ಪ್ರಚೋದಿಸುವ ಬಯಕೆ, ಕ್ರಾಂತಿಯ ಬಗ್ಗೆ ಅಚಲವಾದ ನಂಬಿಕೆ– ಇವೇ ಮುಂತಾದವು ಇವರ ಕಾವ್ಯದ ಪ್ರಧಾನ ಪ್ರೇರಣೆ ಮತ್ತು ವಸ್ತು".[೨೧] ಇಲ್ಲಿ ದಲಿತ ಕಾವ್ಯದ ಅಭಿವ್ಯಕ್ತಿಯ ಹಿಂದೆ ಇರಬಹುದಾದ ಪ್ರೇರಣೆಯನ್ನು ಹೇಳಲಾಗಿದೆ. ಈ ಪ್ರೇರಣೆಯಿಂದ ಉಂಟಾದ ವಸ್ತುವಿನ ಅನಿವಾರ್ಯತೆಯನ್ನು ಹೇಳಲಾಗಿದೆ. ದಲಿತ ಕಾವ್ಯದ ಅಭಿವ್ಯಕ್ತಿಯಲ್ಲಿ ಎರಡು ಮುಖ್ಯ ನೆಲೆಗಳು ಪ್ರಮುಖವಾಗಿ ಕೆಲಸ ಮಾಡಿವೆ. ಒಂದು ವಸ್ತುಸ್ಥಿತಿಯನ್ನು ಹೇಳುವುದು. ಮತ್ತೊಂದು ವಸ್ತುಸ್ಥಿತಿಗೆ ತಕ್ಕಂತೆ ಪ್ರತಿಕ್ರಿಯಿಸುವುದು. ಇಲ್ಲಿ ವಿರೋಧವೂ ಇರಬಹುದು, ಒಪ್ಪುವ ಗುಣಗಳೂ ಇರಬಹುದು.

ಕೃಷ್ಣಮೂರ್ತಿ ಅವರು ಸಿದ್ಧಲಿಂಗಯ್ಯ ಅವರ 'ಸಾವಿರಾರು ನದಿಗಳು' ಕೃತಿಗೆ ಅದೇ ಶೀರ್ಷಿಕೆಯಲ್ಲಿ ವಿಮರ್ಶೆ ಬರೆಯುತ್ತಾ ಕಾವ್ಯದ ವಿವಿಧ ವಸ್ತು ವೈವಿಧ್ಯತೆಯನ್ನು ಗುರುತಿಸಿದ್ದಾರೆ. ಆದರೆ ಆ ವಸ್ತುವಿನ ಮೂಲಕ ಅವರು ಗುರುತಿಸಿರುವ ಸಾಮಾಜಿಕ ವಾಸ್ತವತೆ ಮಾತ್ರ ದಲಿತ ನೆಲೆಯಿಂದ ಹೊರಗೆ ನಿಂತು ನೋಡಿದಂತೆ ಭಾಸವಾಗುತ್ತದೆ. ಇದನ್ನು ತಿಳಿಯಬೇಕಾದರೆ ಅವರ ಹೇಳಿಕೆಯನ್ನು ಗಮನಿಸುವುದು ಒಳಿತು. "ಭಾರತದ ದಲಿತರ ವಿಮೋಚನೆಗೆ ಮಾರ್ಕ್ಸ್‌ವಾದ ತಾರಕವಾಗುವುದಿಲ್ಲ ಎಂಬುದನ್ನು ಕವಿ ಮನಗಾಣಬೇಕಾಗುತ್ತದೆ. ಏಕೆಂದರೆ ಮಾರ್ಕ್ಸ್‌ವಾದವನ್ನು ಅಳವಡಿಸಿಕೊಂಡು ಬೆಳೆದಿರುವ ರಾಷ್ಟ್ರಗಳಲ್ಲಿ ವಸ್ತುತಃ ಇದ್ದದ್ದು ವರ್ಗವ್ಯವಸ್ಥೆಯೇ ಹೊರತು ಜಾತಿವ್ಯವಸ್ಥೆ ಅಲ್ಲ. ಹಾಗಾಗಿ ಅಲ್ಲಿ ಮಾರ್ಕ್ಸ್‌ವಾದ ಯಶಸ್ವಿಯಾಯಿತು. ಆದರೆ ಭಾರತದಂತಹ ರಾಷ್ಟ್ರದಲ್ಲಿ ಜಾತಿವ್ಯವಸ್ಥೆ ಬಲವಾಗಿ ಬೇರುಬಿಟ್ಟಿರುವಾಗ ಅದನ್ನು ಮೊದಲು ನಿರ್ಮೂಲನಗೊಳಿಸದೆ ವರ್ಗತಾರತಮ್ಯವನ್ನು ತೊಲಗಿಸಲು ಯತ್ನಿಸಲಾಗುವುದಿಲ್ಲ. ದಲಿತರು ಆರ್ಥಿಕವಾಗಿ ಹಿಂದುಳಿಯಲು ಜಾತಿವ್ಯವಸ್ಥೆಯೇ ಕಾರಣ ಎನ್ನುವುದನ್ನು ಮನಗಾಣಬೇಕಾಗುತ್ತದೆ"[೨೨] ಎಂದು ಹೇಳಿದ್ದಾರೆ. ಆದರೆ ಇದು ದಲಿತರ ವಾಸ್ತವ ನೆಲೆಯ ಆಚೆಯಿಂದ ಬಂದದ್ದು. ಇನ್ನೊಂದು ನೆಲೆಗಟ್ಟಿನಲ್ಲಿ ಹೇಳುವುದಾದರೆ ಬಂಡವಾಳಶಾಹಿ ಆಲೋಚನಾ ಕ್ರಮದಿಂದ ಜನ್ಮತಾಳಿದ್ದು ಎನ್ನಬಹುದು. ಏಕೆಂದರೆ ದಲಿತರ ದಿನನಿತ್ಯ ಬದುಕು ನಡೆಯುತ್ತಿರುವುದೇ ಬಂಡವಾಳಶಾಹಿ ಮತ್ತು ಭೂಮಾಲೀಕ ವರ್ಗದವರೊಂದಿಗೆ. ಹಾಗೆಯೇ ದಲಿತರ ಶೋಷಣೆಯ ಮೂಲವೂ ಇಲ್ಲೇ ಇದೆ. ಇದನ್ನು ದಲಿತರ ನಿಜವಾದ ಸಮಸ್ಯೆ 'ಜಾತಿ' ಎಂದು ಹೇಳುತ್ತಲೋ ಅಥವಾ ದಲಿತರ ನಿಜವಾದ ಶತ್ರು 'ಪುರೋಹಿತಶಾಹಿಗಳು' ಎನ್ನುತ್ತಲೋ ಭೂಮಾಲೀಕರ ದಬ್ಬಾಳಿಕೆಯನ್ನು ಮುಚ್ಚಾಕುವ ಹುನ್ನಾರವನ್ನು ನಡೆಸಲಾಗುತ್ತಿದೆ. ಮೇಲಿನ ವಿಮರ್ಶೆ ಇದಕ್ಕೆ ಪೂರಕವೆಂಬಂತೆ ಕಾಣಿಸುತ್ತದೆ.

ದಲಿತ ಕಾವ್ಯ ಶೋಷಣೆ, ಅವಮಾನ, ದಬ್ಬಾಳಿಕೆ, ದೌರ್ಜನ್ಯ ಮುಂತಾದವುಗಳಿಗಷ್ಟೇ ತನ್ನ ವಸ್ತುವನ್ನು ಕೇಂದ್ರೀಕರಿಸಿಲ್ಲ. ಬದಲಾಗಿ ಸದ್ಯದ ರಾಜಕೀಯ ಪರಿಸ್ಥಿತಿ, ಇಂದಿನ ಆರ್ಥಿಕ ನೀತಿ, ಅಂತರರಾಷ್ಟ್ರೀಯ ಗುಲಾಮಗಿರಿತನ ಮುಂತಾದವುಗಳ ಬಗ್ಗೆಯೂ ಚರ್ಚಿಸಿದೆ.

[illegible]

ಇದನ್ನು ರಾಜಪ್ಪ ದಳವಾಯಿ ಅವರು ಅರವಿಂದ ಮಾಲಗತ್ತಿಯವರ 'ಮೂರನೆಯ ಕಣ್ಣು' ಕೃತಿಯನ್ನು ವಿಮರ್ಶಿಸುತ್ತಾ ಈ ನೆಲೆಗಳನ್ನು ಗುರುತಿಸಿದ್ದಾರೆ. ಅವರ ಬರವಣಿಗೆ ಹೀಗೆ ಸಾಗಿದೆ; "ಹೊಸ ಆರ್ಥಿಕ ನೀತಿ ಒಡ್ಡಿದ ಬಿಕ್ಕಟ್ಟುಗಳು ಗ್ರಹಿಕೆಗಳು ಇಲ್ಲಿ ಮುಖ್ಯವಾಗಿ ಪ್ರಕಟಗೊಂಡಿವೆ. ಇಲ್ಲಿಯೂ ಸ್ವಾತಂತ್ರ್ಯದ ಹಂಬಲವೇ ಮುಖ್ಯ ಕಾಳಜಿಯಾದರೂ ಹಿಂದಿನ ಸಂಕಲನಗಳ ಸ್ವಾತಂತ್ರ್ಯ ಕಾಳಜಿಗಿಂತಲೂ ಇಲ್ಲಿ ಬೇರೆಯದೇ ನೆಲೆಯ ಸ್ವಾತಂತ್ರ್ಯದ ಅಗತ್ಯಗಳನ್ನು ಕಾಣಬಹುದಾಗಿದೆ. ಇಲ್ಲಿನ ನೀಳ್ಗವಿತೆಗಳಲ್ಲಿ ಭಾರತದ ರಾಜಕೀಯ ಅರಾಜಕತೆ, ಮತೀಯವಾದ, ಆರ್ಥಿಕ ದಿವಾಳಿತನಗಳನ್ನು ಸ್ಪಷ್ಟವಾಗಿ ಗಮನಿಸಬಹುದು. ಪರಂಪರೆಯನ್ನು ಮರೆಯದ ಎಚ್ಚರವೇ ಇಲ್ಲಿ ಸ್ಥಾಯಿ."[೩೩] ಇಲ್ಲಿ ದಲಿತ ಕಾವ್ಯದ ವಿಭಿನ್ನ ನೋಟಗಳ ವಿಸ್ತಾರತೆ ಸಿಗುತ್ತದೆ. ದಲಿತ ಕಾವ್ಯವನ್ನು ಸೀಮಿತ ಚೌಕಟ್ಟಿನಿಂದ ಆಚೆ ನಿಂತು ನೋಡಲು ಮೇಲಿನ ಮಾತುಗಳು ಒತ್ತಾಯಿಸುತ್ತವೆ.

ನಿಸಾರ್ ಅಹಮದ್ ಅವರು ಎಲ್. ಹನುಮಂತಯ್ಯ ಅವರ 'ಅಕ್ಷಾರ ಅಕ್ಷಾರವೇ' ಕೃತಿಗೆ ತಮ್ಮ ಅಭಿಪ್ರಾಯವನ್ನು ಬರೆಯುತ್ತಾ "ವಸ್ತುವಿನ ಸಾಮಾಜಿಕ ಪ್ರಸ್ತುತತೆ, ಭಾವಾತಿರೇಕಕ್ಕೆ ತುತ್ತಾಗದ ಆಕ್ರೋಶಯುಕ್ತ ಧೋರಣೆ; ದುಗುಡ ದುಮ್ಮಾನಗಳನ್ನು, ಅಪಮಾನ ದಬ್ಬಾಳಿಕೆಗಳನ್ನು ತೋಡಿಕೊಳ್ಳುವಾಗಿನ ಮಾನಸಿಕ ನಿರ್ಲಿಪ್ತಿ ಇಲ್ಲಿನ ಕವನಗಳನ್ನು ಆತ್ಮೀಯಗೊಳಿಸುತ್ತವೆ. ವೈಯಕ್ತಿಕ ಗೋಣಗಾಟದಿಂದ ಬಿಡಿಸಿಕೊಂಡು ಸಾಮಾಜಿಕ ಪರಿಪ್ರೇಕ್ಷ್ಯದಲ್ಲಿ ಅರ್ಥವಂತಿಕೆ ಪಡೆಯುವ ಪ್ರಯತ್ನವನ್ನು ಇಲ್ಲಿಯ ಕೆಲವು ಕವನಗಳಲ್ಲಿ ನಾನು ಗುರುತಿಸಿದ್ದೇನೆ"[೩೪] ಎಂದಿದ್ದಾರೆ. ದಲಿತ ಕಾವ್ಯಕ್ಕೆ ವಾಸ್ತವವೇ ಮುಖ್ಯ. ಅದು ವೈಯಕ್ತಿಕತೆಯಿಂದ ಅಂತಿಮವಾಗಿ ಸಾಮಾಜಿಕ ನೆಲೆಗಳ ಕಡೆಗೆ ಹೊರಳುತ್ತದೆ. ದಲಿತ ಕಾವ್ಯದ ನಿಜವಾದ ಯಶಸ್ಸು ಅದು ಸಮಾಜದಲ್ಲಿ ಐಕ್ಯಗೊಂಡಾಗ ಮಾತ್ರ. ದಲಿತ ಕವಿಯ ಆಂತರಿಕ ಒತ್ತಡಗಳು ಅಭಿವ್ಯಕ್ತಿಯ ರೂಪ ಪಡೆದಾಗ ಅದು ಒಳಗೊಳ್ಳುವ ವಸ್ತುವಿನ ಬಗ್ಗೆ ಮೇಲಿನ ಮಾತುಗಳು ಗಮನ ಸೆಳೆಯುತ್ತವೆ.

ಅರವಿಂದ ಮಾಲಗತ್ತಿಯವರ ಕಾವ್ಯಗಳನ್ನು ಕುರಿತು ವಿಮರ್ಶಿಸುತ್ತಾ ಸಿ.ಎನ್. ರಾಮಚಂದ್ರನ್ ಅವರು 'ಕೇಂದ್ರ ಮತ್ತು ಪರಿಧಿ ಅರವಿಂದ ಮಾಲಗತ್ತಿಯವರ ಕಾವ್ಯ' ಎಂಬ ಲೇಖನದಲ್ಲಿ ಮಾಲಗತ್ತಿಯವರ ಕಾವ್ಯದ ವಿವಿಧ ಮಜಲುಗಳನ್ನು ಶೋಧಿಸಿದ್ದಾರೆ. ಕಾವ್ಯದ ವಸ್ತು ಮತ್ತು ಅದರೊಳಗಿನ ಆಶಯಗಳ ಭಿನ್ನ ನೆಲೆಗಳು ಪ್ರಸ್ತುತ ಲೇಖನದಲ್ಲಿ ಚರ್ಚಿತವಾಗಿವೆ. ಆದರೆ ಆಶಯಕ್ಕಿಂತ ಪ್ರಧಾನವಾಗಿ ವಸ್ತುವೇ ಇಲ್ಲಿ ಹೆಚ್ಚು ಚರ್ಚೆಗೆ ಒಳಗಾಗಿದೆ. ಲೇಖಕರೇ ಬರೆಯುವಂತೆ "ತಮ್ಮ ಮೊದಲನೆಯ 'ಮೂಕನಿಗೆ ಬಾಯಿ ಬಂದಾಗ' ಸಂಕಲನದಲ್ಲಿ ಮಾಲಗತ್ತಿಯವರು ತಮ್ಮ ಅನನ್ಯತೆಯನ್ನು ಸಂಪೂರ್ಣವಾಗಿ ಜಾತಿಯ ನೆಲೆಯಲ್ಲಿ– ಎಂದರೆ ದಲಿತ ಸಮುದಾಯದ ನೆಲೆಯಲ್ಲಿ– ಗುರುತಿಸಿಕೊಳ್ಳುತ್ತಾರೆ.

ಆದ್ದರಿಂದಲೇ ಈ ಸಂಕಲನದ ಎಲ್ಲಾ ಕವಿತೆಗಳೂ ಜಾತೀಯ ಆಧಾರದಲ್ಲಿ ನಿರ್ಮಿಸಲ್ಪಟ್ಟು ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಹುದುಗಿರುವ ಕ್ರೌರ್ಯ, ಶೋಷಣೆ ಮತ್ತು ಶೋಷಿತರ ವೇದನೆ ಹಾಗೂ ಕಿಚ್ಚು ಇವುಗಳನ್ನು ಅಭಿವ್ಯಕ್ತಿಗೊಳಿಸುತ್ತವೆ"[೩೫] ಎಂದಿದ್ದಾರೆ. ಇಲ್ಲಿ ಮಾಲಗತ್ತಿಯವರ ಕಾವ್ಯದ ವಿವಿಧ ವಸ್ತುಗಳ ಚರ್ಚೆ ಈ ಲೇಖನದಲ್ಲಿ ನಡೆದಿದೆ. ಜಾತಿ, ವರ್ಣ, ವರ್ಗಗಳು ದಲಿತರನ್ನು ತುಳಿದಿವೆ. ಅದರಲ್ಲೂ ಜಾತಿ ದಲಿತರನ್ನು ಸಾಮಾಜಿಕ ಸ್ಥಾನಮಾನದಲ್ಲಿ ಕೊನೆಗೆ ತಂದು ನಿಲ್ಲಿಸಿದೆ. ಈ ವ್ಯವಸ್ಥೆಯೊಳಗಿಂದ ಮೂಡುವ ಕಾವ್ಯ ಕೂಡ ಜಾತಿಯ ಬಾಗಿಲಿನಿಂದಲೇ ತೂರಿ ಬರುತ್ತದೆ. ಆದ್ದರಿಂದ ಜಾತಿಯ ಮೂಲಕವೇ ಅನೇಕ ದಲಿತ ಕವಿಗಳು ತಮ್ಮ ಪ್ರವೇಶವನ್ನು ಪಡೆಯುತ್ತಾರೆ. ಇದು ಚಾರಿತ್ರಿಕ ಅನಿವಾರ್ಯತೆಯ ಫಲ. ಇಂತಹ ನೆಲೆಗಳನ್ನು ಅನೇಕ ವಿಮರ್ಶೆಗಳು ಶೋಧಿಸಿವೆ.

ದಲಿತ ಕಾವ್ಯದಲ್ಲಿ ದಲಿತರ ಯಾವುದೋ ಕಾಲದ ಸಮಸ್ಯೆಗಳ ಅನಾವರಣವಿಲ್ಲ. ಬದಲಾಗಿ ವಾಸ್ತವದ ವಸ್ತುಸ್ಥಿತಿ ಇದೆ. ಈ ವಸ್ತುಸ್ಥಿತಿ ಅನೇಕ ಸಂಕೋಲೆಗಳಿಂದ ಸುತ್ತುವರಿದಿದೆ. ಹಿಂದೆ ಇದ್ದ ಸಮಸ್ಯೆಗಳ ಜೊತೆಗೆ ಇನ್ನೂ ಹತ್ತಾರು ಸಮಸ್ಯೆಗಳು ದಲಿತರ ಬೆನ್ನು ಹತ್ತಿವೆ. ಜಾತಿ, ಧರ್ಮ, ಮತ, ಶೋಷಣೆ, ಅವಮಾನ, ಅತ್ಯಾಚಾರಗಳ ಜೊತೆಗೆ ಇಂದು ಆಧುನಿಕತೆಯ ಪ್ರವಾಹದಲ್ಲಿ ಜಾಗತೀಕರಣದಂತಹ ಕೊಳ್ಳುಬಾಕ ಸಂಸ್ಕೃತಿಗಳು ಸೇರಿಕೊಂಡಿವೆ. ಇವುಗಳ ದಲಿತರ ಪಾಲಿನ ವರ ಎಂಬುದನ್ನು ಬಿಂಬಿಸುತ್ತಿರುವ ಸಂದರ್ಭದಲ್ಲಿ ಅನೇಕ ದಲಿತ ಕಾವ್ಯಗಳು ಇವುಗಳ ಹುನ್ನಾರಗಳನ್ನು ಬಯಲುಮಾಡಿವೆ. ಅರವಿಂದ ಮಾಲಗತ್ತಿ ಅವರ ಕವನಗಳಲ್ಲಿ ಇಂತಹ ಅಂಶಗಳನ್ನು ಗುರುತಿಸಬಹುದಾಗಿದೆ. ಇದನ್ನು ಕೆ. ಕೇಶವಶರ್ಮ ಅವರು ತಮ್ಮ 'ಪ್ರೊ. ಅರವಿಂದ ಮಾಲಗತ್ತಿ ಅವರ ಮಾರ್ಗ ಸಾಹಿತ್ಯ' ಎನ್ನುವ ಕೃತಿಯಲ್ಲಿ ಗುರುತಿಸಿರುವ ಬಗೆ ಹೀಗಿದೆ; "ವಸಾಹತೋತ್ತರ ಕಾಲದ ಸಮಾಜದಲ್ಲಿನ ಪ್ರಮುಖ ಸಮಸ್ಯೆಗಳನ್ನು ಮಾಲಗತ್ತಿಯವರು ಬೇರೆ ಬೇರೆ ಬರಹಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಎದುರಿಸಿದ್ದಾರೆ. ಉದಾರವಾದಿ ಚಿಂತನೆಯ ಕ್ರಮ; ಕೋಮುವಾದ; ಜಾಗತೀಕರಣ; ರಾಷ್ಟ್ರೀಯತೆ; ಪ್ರಾದೇಶಿಕತೆ ಮುಂತಾದವುಗಳ ಜೊತೆಗೆ ಅವರ ಬರಹಗಳು ಮುಖಾಮುಖಿಯಾಗಿವೆ. ಇರುವ ವ್ಯವಸ್ಥೆಯನ್ನು ಯಥಾವತ್ತಾಗಿ ಒಪ್ಪಿಕೊಳ್ಳುವುದು ಅವರ ಬರಹಗಳ ಗುಣವಲ್ಲ."[೩೬] ಇಲ್ಲಿ ಮಾಲಗತ್ತಿ ಅವರ ಬರಹದ ಹಿಂದಿನ ವಸ್ತುಗಳ ವೈವಿಧ್ಯತೆಯನ್ನು ಗುರುತಿಸಲಾಗಿದೆ.

೨. ಅಭಿವ್ಯಕ್ತಿ ಮತ್ತು ಆಶಯ ಪ್ರಧಾನ ಚರ್ಚೆಗಳು

"ನೊಂದ ಜನತೆಗೆ ತಮ್ಮ ಸ್ಥಿತಿಯ ಅರಿವನ್ನು ಮೂಡಿಸುವುದಷ್ಟೇ ಅಲ್ಲ. ಅದನ್ನು ಬದಲಾಯಿಸುವ ಆಶಾವಾದವನ್ನು ಕವಿತೆ ಉಂಟುಮಾಡಬೇಕು. ಅಂದಮಾತ್ರಕ್ಕೆ ಕಾವ್ಯ ಒಂದು

[illegible]

[illegible]

[illegible]

ಪಕ್ಷದ ಮುಖಂಡರ ಮರ್ಜಿಗಾಗಿ ಹುಟ್ಟುವುದಿಲ್ಲ. ಅದು ಕವಿಯ ಸಂಕಟದಿಂದ ಸ್ಫೋಟಗೊಂಡದ್ದು. ಕ್ರಾಂತಿ ಕ್ರಿಯೆಯಲ್ಲಿ ಕಾವ್ಯಕ್ಕೆ ತನ್ನದೇ ಆದ ವಿಶಿಷ್ಟ ಪಾತ್ರವನ್ನು ಒಪ್ಪಬಹುದಾದರೂ, ಕವಿಯ ಮನಸ್ಸು ಹೃದಯಗಳನ್ನು ನಿಯಂತ್ರಿಸುವ ಯಾವುದೇ ಕುತಂತ್ರವನ್ನು ಒಪ್ಪಲು ಸಾಧ್ಯವಿಲ್ಲ”[೩೭] ಎಂದಿರುವ ಸಿದ್ಧಲಿಂಗಯ್ಯ ಅವರ ಮಾತುಗಳು ಕಾವ್ಯದ ಅಭಿವ್ಯಕ್ತಿಯ ಹಿಂದೆ ಇರಬಹುದಾದ ಮತ್ತು ಇರಬೇಕಾದ ಧೋರಣೆಯನ್ನು ಕುರಿತು ಹೇಳುತ್ತಿವೆ. ದಲಿತ ಕಾವ್ಯ ಹೊರಬಂದಿದ್ದೇ ಸಂಕಟಗಳ ನೆಲೆಯಿಂದ ಎಂಬುದನ್ನು ಮೇಲಿನ ಮಾತುಗಳು ಹೇಳುತ್ತಿವೆ.

ದಲಿತ ಕಾವ್ಯದಲ್ಲಿ ಅಭಿವ್ಯಕ್ತಿಯ ನೆಲೆಗಳು ಬಹಳ ಮುಖ್ಯ. ಇಲ್ಲಿ ಅಭಿವ್ಯಕ್ತಿ ಎಂಬುದು ಭಾಷಾ ವೈವಿಧ್ಯತೆಗೆ ಸಂಬಂಧಪಟ್ಟಿದ್ದೋ ಅಥವಾ ಧೋರಣೆಗೆ ಸಂಬಂಧಿಸಿದ್ದೋ ಎನ್ನುವ ಪ್ರಶ್ನೆ ಕಾಡುತ್ತದೆ. ಆದರೆ ದಲಿತ ಕಾವ್ಯವನ್ನು ನೋಡುವಾಗ ಈ ಅಭಿವ್ಯಕ್ತಿಯ ಹಿಂದಿನ ಉದ್ದೇಶ ಮತ್ತು ಆಶಯಗಳು ಪ್ರಧಾನ ನೆಲೆಯಲ್ಲಿ ಚರ್ಚೆಯಾಗಬೇಕು. ಇದರ ಹೊರತು ಕಾವ್ಯದ ಸಾಂಪ್ರದಾಯಿಕ ನೆಲೆಗಳ ಚರ್ಚೆಗಳಿಂದಲ್ಲ. ದಲಿತ ಕಾವ್ಯದ ಚರ್ಚೆಯಲ್ಲಿ ಕೆಲವು ವಿಮರ್ಶೆಗಳು ಅದರ ಭಾಷಿಕ ನೆಲೆಯನ್ನು ಚರ್ಚಿಸಿವೆ. ಇದರ ಆಧಾರದ ಮೇಲೆ ಅದು ಕಾವ್ಯಕ್ಷೇತ್ರದಲ್ಲಿ ಬೀರಿರುವ ಹೊಸತನದ ಬಗ್ಗೆ ಚಿಂತಿಸಲು ಹೆಚ್ಚು ತೆರೆದುಕೊಂಡಿದೆ. ಇವುಗಳ ಜೊತೆಗೆ ದಲಿತ ಕಾವ್ಯದ ಅಭಿವ್ಯಕ್ತಿಯ ಹಿಂದೆ ಇರಬಹುದಾದ ಧೋರಣೆ ಮತ್ತು ಅಗತ್ಯತೆಯ ಹಿನ್ನೆಲೆಯನ್ನೂ ಕುರಿತು ಚರ್ಚಿಸಲಾಗಿದೆ. ಆದರೆ ಇವುಗಳು ಪ್ರಾಸಂಗಿಕವಾಗಿ ಚರ್ಚೆಯಾಗಿರುವುದೇ ಹೆಚ್ಚು. ಇಲ್ಲಿನ ಕೆಲವು ಚರ್ಚೆಗಳು ದಲಿತ ಕಾವ್ಯದ ಹೊಸ ಹೊಳಹುಗಳನ್ನು ನೋಡಲು ಒತ್ತಾಯಿಸುತ್ತವೆ.

ಮೇಲಿನ ವಿಚಾರಗಳಿಗೆ ಪೂರಕವೆಂಬಂತೆ ಸರಜೂ ಕಾಟ್ಕರ್ ಅವರ ದಲಿತ ಕಾವ್ಯ ಕುರಿತ ಒಳನೋಟ ಹೀಗಿದೆ; “ದಲಿತ ಕವಿತೆಯ ಹುಟ್ಟು ದಲಿತ ಹೋರಾಟದಿಂದಲೇ ಆಗಿರುವುದರಿಂದ ಅಲ್ಲಿ ಸ್ವಾಭಾವಿಕವಾಗಿ ಆಕ್ರೋಶವಿದೆ; ಸಮಾಜದ ವಿರುದ್ಧ ಕವಿಗಳು ಬೆಂಕಿ ಕಾರುತ್ತಾರೆ. ದಲಿತ ಕವಿತೆಗಳು ದಲಿತ ಸಮಾಜದ ನೋವಿನ ಗೀತೆಗಳಾಗಿವೆ. ಮನುಷ್ಯನು, ಮನುಷ್ಯನ ಹಾಡುಗಳನ್ನು ಹಾಡುವ ಕವಿತೆಗಳಾಗಿವೆ. ಅದು ದಲಿತರನ್ನು ಗುಲಾಮಗಿರಿಯಿಂದ ಬಿಡುಗಡೆಗೊಳಿಸುತ್ತಲೇ ಸಮಾಜದಲ್ಲಿರುವ ಅಸಮಾನತೆ, ಮೂಢನಂಬಿಕೆ, ಉಪೇಕ್ಷೆ, ಸಂಕುಚಿತತೆಗಳನ್ನು ನಾಶಮಾಡುತ್ತದೆ.”[೩೮]

ದಲಿತ ಕಾವ್ಯದ ಅಭಿವ್ಯಕ್ತಿಯ ಹಿಂದಿರುವ ವಾಸ್ತವತೆಯನ್ನು ಮೇಲಿನ ಮಾತುಗಳು ಅತ್ಯಂತ ಸಮಂಜಸವಾಗಿ ಕಟ್ಟಿಕೊಟ್ಟಿವೆ. ದಲಿತ ಕಾವ್ಯದಲ್ಲಿ ಸಮುದಾಯದಿಂದ ಹೊರಗೆ ನಿಂತ ಏಕಾಂಗಿತನದ ಮನಸ್ಸಿನ ತಳಮಳಗಳಿಲ್ಲ. ಅದು ಸಮುದಾಯದ ನೋವಿನ ನೆಲೆಗಳಿಂದಲೇ ರೂಪುಗೊಂಡಿರುವಂತಹುದು. ಈ ನೋವಿನ ನೆಲೆಗಳು ರೂಪಕಾತ್ಮಕವಾಗಿ

ಹೇಗೆ ಬಳಕೆಗೊಂಡಿವೆ ಎಂಬುದನ್ನು ಹಲವು ವಿಮರ್ಶೆಗಳು ಚರ್ಚಿಸಿವೆ. ರಹಮತ್ ತರೀಕೆರೆ ಅವರು ಜಂಬಣ್ಣ ಅಮರಚಿಂತ ಅವರ ಕಾವ್ಯ ಕುರಿತು ಚರ್ಚಿಸಿರುವ 'ಅಮರಚಿಂತ : ಗಾಯಗಳ ಕಾವ್ಯ' ಎಂಬ ಲೇಖನದಲ್ಲಿ ಕಾವ್ಯ ಕುರಿತ ವಿಶ್ಲೇಷಣೆ ಸಾಗಿರುವ ಬಗೆ ಹೀಗಿದೆ;

"ನಾನು
ಸದಾ ಬೇಟೆಯ ಜೊತೆಗಿದ್ದೇನೆ
ಬೇಟೆಗಾರನ ಜೊತೆಗಲ್ಲ

ತನ್ನ ಪ್ರಾಮಾಣಿಕ ವೇದನೆಯನ್ನು ಒಳಗಿನಿಂದ ಉಕ್ಕಿಸುತ್ತಾ, ಬಹಳ ಆರ್ತವಾಗಿ ಬರೆಯುತ್ತಾ ಸಾಮಾನ್ಯ ಮಾತುಗಳನ್ನೂ ಅಂತಃಕರಣ ತಟ್ಟುವ ಕಾವ್ಯವನ್ನಾಗಿ ಮಾಡುವುದು. ಹಾಗೆ ಕಂಡರೆ, ಕಾವ್ಯದ ಕಲಾತ್ಮಕ ರೂಪದ ಬಗ್ಗೆ ಯಾವ ಪ್ರಯತ್ನಗಳನ್ನೂ ಪ್ರಜ್ಞಾಪೂರ್ವಕವಾಗಿ ಅಮರಚಿಂತರು ಮಾಡುವುದಿಲ್ಲ. ಆದರೆ ತಮ್ಮ ಅನನ್ಯವಾದ ರೂಪಕ ಶಕ್ತಿಯಿಂದ ಚಿತ್ರಗಳನ್ನು ಸೃಷ್ಟಿಸುತ್ತಾ ಅವರು ಕಲೆಗಾರಿಕೆಯನ್ನು ಸಾಧಿಸುತ್ತಾರೆ. ಅವರ ಕಾವ್ಯದ ಶಕ್ತಿಯೆಂದರೆ ವೇದನಾಭರಿತ ಮಾತುಗಳನ್ನು ರೂಪಕಗಳಲ್ಲಿ ಹೇಳುವುದೇ ಆಗಿದೆ."[೯] ಈ ವಿಶ್ಲೇಷಣೆಯ ಹಿಂದೆ ದಲಿತ ಕಾವ್ಯ ಅಭಿವ್ಯಕ್ತಗೊಳ್ಳುವ ಹಿನ್ನೆಲೆಯನ್ನು ಮತ್ತು ಅದು ತನಗೇ ಗೊತ್ತಿಲ್ಲದಂತೆ ಕಲಾತ್ಮಕವಾಗಿ ಮೂಡಿಬರುವಂತಹುದನ್ನೂ ತೋರಿಸುತ್ತಿದೆ. ಆದರೆ ಅಮರಚಿಂತ ಕಾವ್ಯದಂತೆಯೇ ವೇದನಾಭರಿತ ಮಾತುಗಳನ್ನು ಕಲಾತ್ಮಕವಾಗಿ ಇನ್ನಿತರ ದಲಿತ ಕವಿಗಳೂ ಹೇಳಬೇಕೆಂಬ ಅಪೇಕ್ಷೆ ಈ ಚರ್ಚೆಯ ಮೂಲಕ ರವಾನೆಯಾಗುತ್ತಿರುವಂತೆ ಭಾಸವಾಗುತ್ತದೆ. ದಲಿತ ಕಾವ್ಯದಲ್ಲಿ ಕಲಾತ್ಮಕತೆ ಎನ್ನುವುದು ಇರಲೇಬಾರದೆಂದು ಹಠ ಹಿಡಿದು ಸಾಧಿಸುವ ಉದ್ದೇಶ ಇಲ್ಲಿನದಲ್ಲ. ಆದರೆ ದಲಿತ ಕಾವ್ಯ ಎಂದ ಕೂಡಲೇ ಅದು ನೋವಿನೊಳಗೇ ಜನ್ಮತಾಳಿರುವಂತಹುದು. ಅದರ ವಿಶ್ಲೇಷಣೆ ಅಲ್ಲಿಂದಲೇ ಸಾಗಬೇಕು. ಇದನ್ನು ಹೊರತುಪಡಿಸಿ ಅದರ ರೂಪಕ, ಪ್ರತಿಮೆ, ಪ್ರತೀಕ ಮುಂತಾದ ಕಲಾತ್ಮಕತೆಯ ಆರಾಧನೆಯಲ್ಲಿ ತೊಡಗಿದರೆ ದಲಿತರ ನೋವಿನ ಎಳೆಗಳ ವಿವಿಧ ವೇದನೆಗಳು ಮರೆಯಾಗಿ ಆ ಸ್ಥಾನದಲ್ಲಿ ಕಲಾತ್ಮಕತೆ ಹೆಸರಿನ ಸೋಗು ಆವರಿಸುವ ಅಪಾಯವಿರುತ್ತದೆ.

ಮುಂದುವರಿದು ರಹಮತ್ ತರೀಕೆರೆ ಅವರು ಅಮರಚಿಂತರ ಕಾವ್ಯ ಕುರಿತು "ಸಮಕಾಲೀನ ಬದುಕಿನ ವೈರುಧ್ಯಗಳನ್ನು ಹೊಸತಾದ ರೀತಿಯಲ್ಲಿ ಹೇಳಿ ಮನಸ್ಸನ್ನು ಮುಟ್ಟುವ ಅಮರಚಿಂತರ ಕಾವ್ಯ ಎಲ್ಲೂ ಅಮೂರ್ತವಾಗುವುದಿಲ್ಲ. ವೈಯಕ್ತಿಕ ಪ್ರತಿಮೆಗಳ ಹಂತದಲ್ಲಿ ನಿಂತು ಅಸ್ಪಷ್ಟವಾಗುವುದಿಲ್ಲ. ಸ್ಫಟಿಕದಂತೆ ಅದು ಸ್ವಚ್ಛವಾಗಿದೆ. ಅವರ ಕಾವ್ಯದ ನೇರ ಗುಣವು ಮಿತಿಯಾಗುವುದು ಹೇಳಿಕೆಯಾಗುವಾಗ ಹಾಗೂ ವಾಚಾಳಿಯಾಗುವಾಗ"[೧೦] ಎಂದಿದ್ದಾರೆ. ದಲಿತ ಕಾವ್ಯದ ಅಭಿವ್ಯಕ್ತಿಯಲ್ಲಿ ಮತ್ತೆ ಮತ್ತೆ ಚರ್ಚೆಗೆ ಒಳಪಟ್ಟಿರುವುದು

ಈ ವಾಚಾಳಿತನ ಮತ್ತು ಹೇಳಿಕೆಯ ನೆಲೆಯಲ್ಲಿರುವ ಸಾಲುಗಳು. ಇದು ದಲಿತ ಕವಿಗಳ ಕಲಾತ್ಮಕತೆಗೆ ಪೆಟ್ಟು ಎಂಬುದು ಹಲವರ ಅನಿಸಿಕೆ. ಇದು ತಪ್ಪು ಎಂದು ಸಾರಾಸಗಟಾಗಿ ತಿರಸ್ಕರಿಸಲು ಬರುವುದಿಲ್ಲ. ಆದರೆ ದಲಿತ ಕಾವ್ಯವನ್ನೂ ಸಾಂಪ್ರದಾಯಿಕ ಕಾವ್ಯ ಮಾದರಿಯಲ್ಲೇ ನೋಡಿದರೆ ಆಗುವ ಅಪಾಯವನ್ನು ಬಹು ಮುಖ್ಯವಾಗಿ ಪ್ರಶ್ನಿಸಿಕೊಳ್ಳಬೇಕಾಗಿದೆ. ಏಕೆಂದರೆ ಬಿ.ಎಂ. ಪುಟ್ಟಯ್ಯ ಅವರು ಹೇಳುವ ಹಾಗೆ ದಲಿತ ಕಾವ್ಯಕ್ಕೆ "ಪಾರಂಪರಿಕ ಕಾವ್ಯದ ಸ್ವರೂಪ ಬೇಕಾಗಿರಲಿಲ್ಲ. ಬದಲಾಗಿ ತಮ್ಮ ಮೇಲೆ ಸವರ್ಣೀಯರು ನಡೆಸುತ್ತಿರುವ ದಮನ, ದಬ್ಬಾಳಿಕೆ ಮತ್ತು ಅಪಮಾನಗಳ ಕ್ರೂರ ಬದುಕನ್ನು ಬಿಚ್ಚಿಡಬೇಕಿತ್ತು".[೪೧] ಹೀಗೆ ಬಿಚ್ಚಿಡುವಾಗ ಅದು ಪಾರಂಪರಿಕ ಕಾವ್ಯದ ನೆಲೆಗಟ್ಟನ್ನು ದೂರತಳ್ಳಿ ಒಡಲೊಳಗಿನ ಕಿಚ್ಚಿಗೆ ಅಕ್ಷರ ರೂಪ ಕೊಡುತ್ತದೆ. ಈ ಕಿಚ್ಚಲ್ಲಿ ಕಲಾತ್ಮಕತೆಯನ್ನು ಹುಡುಕುವುದು ದಲಿತ ಕಾವ್ಯದ ಆಶಯಕ್ಕೇ ಭಂಗ ತಂದಂತೆ. ಆದರೆ ಎಷ್ಟೋ ವಿಮರ್ಶೆಗಳು ಈ ಕೆಲಸ ಮಾಡಿವೆ.

ಅಭಿವ್ಯಕ್ತಿಯನ್ನೇ ಪ್ರಧಾನವಾಗಿ ಪರಿಗಣಿಸಿರುವಂತೆ ಜಿ.ಆರ್. ತಿಪ್ಪೇಸ್ವಾಮಿ ಅವರು 'ಸಾಹಿತ್ಯ ಮತ್ತು ಕ್ರಿಯಾಶೀಲತೆ' ಎನ್ನುವ ಕೃತಿಯಲ್ಲಿ ಕನ್ನಡ ದಲಿತ ಕವಿಗಳಲ್ಲಿ ಪ್ರಮುಖರೆನಿಸಿಕೊಂಡವರ ಕೃತಿಗಳನ್ನು ಅವಲೋಕಿಸಿದ್ದಾರೆ. ಅನಸೂಯ ಕಾಂಬಳೆ ಅವರ ಕಾವ್ಯಗಳನ್ನು ಕುರಿತು ಬರೆಯುತ್ತಾ "ಶ್ರೇಣೀಕೃತ ಸಮಾಜದ ತಾರತಮ್ಯಗಳ ದಳ್ಳುರಿಯಲ್ಲಿ ಸ್ಫೋಟಗೊಂಡ ಧ್ವನಿ ಇದಾಗಿದೆ. ಇದರಲ್ಲಿ ಸಹಜವಾದ ಅಸಹಾಯಕತೆಯ ಆಕ್ರೋಶವಿದೆ. ಎಲ್ಲಕ್ಕಿಂತ ಮಿಗಿಲಾಗಿ ಅನುಭವ ಗ್ರಹಿಕೆಗೆ ಕಲಾತ್ಮಕ ರೂಪ ಕೊಡುವ, ರಸ ಸ್ಪರ್ಶವಾಗುವಂತೆ ಮೂಡಿಸುವ ಸೃಜನಶೀಲತೆಯ ಕುಸುರಿ ಕೆಲಸವಿದೆ."[೪೨] ಇಲ್ಲಿ ದಲಿತ ಕಾವ್ಯ ಅಭಿವ್ಯಕ್ತಿ ಮೂಲಕ ಹೊರಡಿಸುವ ವಾಸ್ತವತೆಯ ಕಡೆಗೆ ಹೆಚ್ಚು ಕೇಂದ್ರೀಕರಿಸಿಲ್ಲ. ಬದಲಾಗಿ ಅದರೊಳಗಿನ ಕಲಾತ್ಮಕ ಭಿನ್ನ ಚಹರೆಯ ಕಡೆಗೆ ಕೇಂದ್ರೀಕರಿಸಿದೆ. ಇದು ದಲಿತ ಕಾವ್ಯ ನೋಡುವ ಸಮಗ್ರ ಸ್ವರೂಪ ಅಲ್ಲ. ಆದರೂ ದಲಿತ ಕಾವ್ಯದಲ್ಲಿ ಕಲಾತ್ಮಕತೆ ಇಲ್ಲ ಎನ್ನುವವರಿಗೆ ಇದು ಉತ್ತರ ನೀಡುವಷ್ಟು ಶಕ್ತವಾಗಿದೆ.

ಮೇಲಿನ ಮಾತುಗಳಿಗೆ ಪೂರಕವೆಂಬಂತೆ ತಿಪ್ಪೇಸ್ವಾಮಿ ಅವರು ಹೊಸೂರು ಮುನಿಶಾಮಪ್ಪ ಅವರ ಕಾವ್ಯ ಕುರಿತು ಬರೆಯುತ್ತಾ "ಹೊಸೂರು ಮುನಿಶಾಮಪ್ಪ ಎಷ್ಟೇ ಅನ್ಯಾಯವಾಗಿದ್ದರೂ, ಕೋಪೋದ್ರಿಕ್ತ ಸ್ಥಿತಿಯಲ್ಲಿದ್ದರೂ ಕಾವ್ಯದಲ್ಲಿ ಮಾತ್ರ ಅದರ ಪ್ರಖರತೆಯನ್ನು ಮರೆಸುವುದಿಲ್ಲ. 'ದಲಿತ ಜನರ ಕಿರಣ'ದ ಕವಿತೆಗಳು ವಿಶಿಷ್ಟವಾಗಿ ಕಾಣುವುದು ಇದರಿಂದ. ಇವರ ಪ್ರತಿ ಕವಿತೆಯಲ್ಲಿ ಅನ್ಯಾಯದ ವಿರುದ್ಧ ಅಸಹನೆ, ಶೋಷಕರ ಬಗ್ಗೆ ಅಸಹ್ಯತೆ, ಮನುಷ್ಯತ್ವದ ಬಗೆಗೆ ಪ್ರೀತಿ ಇದೆ."[೪೩] ಇದೂ ಕೂಡ ಕಾವ್ಯ ಅಭಿವ್ಯಕ್ತಿಸಿರುವ ರೀತಿಯನ್ನೇ ಕುರಿತು ಚರ್ಚಿಸುತ್ತಿದೆ.

ಮ.ನ.ಜ. ಅವರ 'ಅತ್ತೆ ಸೊಸೆ ಆತ್ಮಕತೆ' ಕವನ ಸಂಕಲನ ಕುರಿತು ಹೆಚ್.ಎಂ. ಚೆನ್ನಯ್ಯ ಅವರು ವಿಮರ್ಶಿಸುತ್ತಾ ಆ ಮೂಲಕ ಒಟ್ಟಾರೆ ದಲಿತ ಕಾವ್ಯದ ಅಭಿವ್ಯಕ್ತಿಯನ್ನು ಹಿಡಿದಿಡಲು ಪ್ರಯತ್ನಿಸಿದ್ದಾರೆ. "ದಲಿತ ದೃಷ್ಟಿ ಸಾಮಾಜಿಕ ಬದಲಾವಣೆಯನ್ನು ಬಯಸುತ್ತದೆ; ಅದಕ್ಕೆ ಕಾವ್ಯ ವೇಗವರ್ಧಕದಂತೆ ಕೆಲಸ ಮಾಡಬೇಕೆಂದು ತಿಳಿಯುತ್ತದೆ. ಅದಕ್ಕಾಗಿ ಅದು ಕಾವ್ಯವನ್ನು ಒಂದು ಯುಕ್ತಿಯನ್ನಾಗಿ ಬಳಸುತ್ತದೆ. ದಲಿತ ಕಾವ್ಯದ ದೃಷ್ಟಿಕೋನ ಸಂಪ್ರದಾಯ ವಿರೋಧಿಯಾದದ್ದು. ಆದ್ದರಿಂದ ಅದು ಅದರ ಅಭಿವ್ಯಕ್ತಿಗೆ ತಕ್ಕ ರೂಪವನ್ನು ಹುಡುಕುತ್ತದೆ. ಹೇಳಬೇಕಾದ್ದನ್ನು ಪರಿಣಾಮಕಾರಿಯಾಗಿ ಹೇಳಿ ಹೆಚ್ಚು ಮಂದಿಗೆ ಅದನ್ನು ತಲುಪಿಸಬೇಕೆಂಬುದು ಅದರ ಉದ್ದೇಶವಾಗಿದೆ."[೪೪] ಈ ರೀತಿ ದಲಿತ ಕಾವ್ಯದ ಹಿಂದಿರುವ ಅಭಿವ್ಯಕ್ತಿಯ ಮೂಲ ಆಶಯವನ್ನು ಗುರುತಿಸಿರುವ ವಿಮರ್ಶಕರು ಮ.ನ.ಜ. ಅವರ ಕಾವ್ಯ ವಿಶ್ಲೇಷಣೆ ಮಾಡುವಾಗ ಅಲ್ಲಿ ಗ್ರಾಮ್ಯವಿದೆ, ಸಂಸ್ಕೃತ ಭೂಯಿಷ್ಠತೆ ಇದೆ, ನೇರ ಮಾತುಗಳಿವೆ, ಗದ್ಯ-ಪದ್ಯವಿದೆ, ಶೈಲಿ ಪೆಡಸಾಗಿದೆ ಎಂದು ಹೇಳುವುದರ ಮೂಲಕ ಮ.ನ.ಜ. ಕಾವ್ಯ ತನ್ನ ಅಭಿವ್ಯಕ್ತಿಯ ಮೂಲಕ ಹೊರಡಿಸುತ್ತಿರಬಹುದಾದ ದಲಿತರ ಸಾಮಾಜಿಕ ವಾಸ್ತವತೆಯನ್ನು ಕುರಿತು ಚರ್ಚಿಸುವುದೇ ಇಲ್ಲ. ಕೆಲವೊಂದು ಕಡೆ ಸಾಂದರ್ಭಿಕವಾಗಿ ಚರ್ಚಿಸಿದರೂ ಅವುಗಳನ್ನು ಪ್ರಧಾನವೆಂದು ಪರಿಗಣಿಸಲಿಲ್ಲ.

'ಬಂಡಾಯ - ದಲಿತ ಕಾವ್ಯ' ಲೇಖನದಲ್ಲಿ ಲಕ್ಷ್ಮೀಪತಿ ಕೋಲಾರ ಅವರು ದಲಿತ ಕಾವ್ಯದ ಅಭಿವ್ಯಕ್ತಿಯ ಮತ್ತೊಂದು ನೆಲೆಯನ್ನು ಗುರುತಿಸಿರುವ ರೀತಿ ಹೀಗಿದೆ; "ಸಮೂಹವನ್ನು ಉದಾತ್ತ ಗುರಿಯೊಂದರತ್ತ ಕೊಂಡೊಯ್ಯಬೇಕಾದ ಕಾವ್ಯ ಅರಿವಾಗುವುದರ ಬದಲು ಹಿಂಸೆಗೆ, ಸೇಡಿಗೆ ಪ್ರತೀಕವಾಗಿ ನಿಲ್ಲುವ ಖಡ್ಗವಾಗುವುದು ಆ ಕಾವ್ಯ ದಿಕ್ಕು ತಪ್ಪುವುದರ ಸೂಚನೆಯಂತೆ ಕಾಣಿಸುತ್ತದೆ"[೪೫] ಎಂದಿರುವ ಮಾತು ಸತ್ಯವೆನಿಸಿದರೂ ಅವರು ಕೊಡುವ ಉದಾಹರಣೆಗಳು ಮಾತ್ರ ಕೆಲವೇ ಕಾವ್ಯಗಳನ್ನು ಪ್ರತಿನಿಧಿಸುತ್ತವೆ. ಅರಿವು ಬರಬೇಕೆಂಬುದು ಎಷ್ಟು ಸತ್ಯವೋ ಅಷ್ಟೇ ಸತ್ಯ ಆ ಅರಿವು ಕ್ರಿಯೆಯಲ್ಲಿ ಪೂರ್ಣಗೊಳ್ಳುವುದು. ಈ ಹಿನ್ನೆಲೆಯಲ್ಲಿ ಚರ್ಚೆಯಾಗುವುದು ಒಳಿತು.

ದಲಿತ ಕಾವ್ಯದ ಅಭಿವ್ಯಕ್ತಿಗೆ ತಮ್ಮ ವಿಮರ್ಶೆಯನ್ನು ಕೇಂದ್ರೀಕರಿಸಿಕೊಂಡ ಅನೇಕ ವಿಮರ್ಶಕರು ಅದರೊಳಗಿನ ಶೈಲಿ, ರೂಪ, ಬಂಧ ಇವುಗಳಿಗೇ ಹೆಚ್ಚಿನ ಒತ್ತನ್ನು ನೀಡಿದರು. ನೀಡಬಾರದೆಂಬ ಉದ್ದೇಶವೂ ಇಲ್ಲಿಲ್ಲ. ಆದರೆ ದಲಿತ ಕಾವ್ಯದ ಅಭಿವ್ಯಕ್ತಿ ದಲಿತರೊಳಗಿನ ಸಂಕಟಗಳಿಗೆ ಸಂಬಂಧಿಸಿದ್ದೆಂದು ಮೊದಲು ತಿಳಿದಿರಬೇಕಾದುದು ಅತ್ಯವಶ್ಯಕ. ಈ ಚರ್ಚೆಗೆ ಪೂರಕವೆಂಬಂತೆ ೧೯೮೩ರ ಸಾಹಿತ್ಯ ವಾರ್ಷಿಕ ಸಂಚಿಕೆಯಲ್ಲಿ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಸಿದ್ಧಲಿಂಗಯ್ಯ ಅವರ 'ಕಪ್ಪು ಕಾಡಿನ ಹಾಡು' ಕೃತಿಗೆ ವಿಮರ್ಶೆ ಬರೆಯುತ್ತಾ "ಅಬ್ಬರದ ಆಕ್ರೋಶದ ದನಿಯನ್ನು ಬಿಟ್ಟುಕೊಟ್ಟಿರುವ ಸಿದ್ಧಲಿಂಗಯ್ಯ ಈ ಸಂಕಲನದಲ್ಲಿ

ಆಪ್ತವಾಗಿ ಮಾತನಾಡಲು ತೊಡಗಿದ್ದಾರೆ. ಈ ಆಪ್ತದನಿ ತನ್ನ ತೀವ್ರತೆಯನ್ನೇನೂ ಬಿಟ್ಟುಕೊಟ್ಟಿಲ್ಲ, ಸಿಟ್ಟನ್ನು ಕಳೆದುಕೊಂಡಿಲ್ಲ. ಒರಟುತನ ಕಳೆದುಕೊಂಡು ನಯಗಾರಿಕೆಯಲ್ಲಿ ಸ್ವಾನುಭವಕ್ಕೆ ದೂರವಾಗಿಲ್ಲ. ಆದರೆ ಆಕ್ರೋಶ ಒಡಲಿನಾಳದ ದನಿಯಾಗಿ ರೂಪುಗೊಳ್ಳುತ್ತಿದೆ. ಸಂಯಮ ಕಾವ್ಯಕ್ಕೆ ಸತ್ವ ತುಂಬುತ್ತಿದೆ”[೪೬] ಎಂದಿದ್ದಾರೆ. ಇಲ್ಲಿ ಕಾವ್ಯದ ಅಭಿವ್ಯಕ್ತಿಯನ್ನು ಕುರಿತು ಚರ್ಚಿಸಲಾಗಿದೆ. ಆದರೆ ಅಭಿವ್ಯಕ್ತಿಯ ಹಿಂದೆ ಅಡಗಿರಬಹುದಾದ ಸಾಮಾಜಿಕ ವಾಸ್ತವತೆಯನ್ನು ಕುರಿತು ಚರ್ಚಿಸುತ್ತಿಲ್ಲ. ಇದಕ್ಕೆ ದಲಿತ ಕಾವ್ಯವನ್ನು ಕಾವ್ಯವಾಗಿಯೇ ಪರಿಗಣಿಸಿ ವ್ಯಾಖ್ಯಾನಿಸುವಾಗಿನ ಸೀಮಿತತೆಯೂ ಇರಬಹುದು.

ಮೇಲಿನ ಚರ್ಚೆಯನ್ನು ಇನ್ನಷ್ಟು ವಿಸ್ತರಿಸುವುದಾದರೆ ನರಹಳ್ಳಿ ಅವರೇ ಬರೆದಿರುವ ಹಾಗೆ “ಸಿದ್ಧಲಿಂಗಯ್ಯನವರು ಗಳಿಸಿಕೊಳ್ಳಲು ಯತ್ನಿಸುತ್ತಿರುವ ಕಾವ್ಯ ಕೌಶಲ್ಯಕ್ಕೆ ಬೌದ್ಧಿಕ ಪ್ರಖರತೆಯೂ ಕೂಡಿ ಬಂದರೆ ಉತ್ತಮ ಕಾವ್ಯವನ್ನು ಅವರಿಂದ ನಿರೀಕ್ಷಿಸಬಹುದು.”[೪೭] ಇಲ್ಲಿ ವಿಮರ್ಶೆ ಉತ್ತಮ ಕಾವ್ಯವನ್ನು ಬಯಸುತ್ತಿದೆ. ಆದರೆ ದಲಿತ ಕಾವ್ಯ ಉತ್ತಮ ಸಮಾಜವನ್ನು ಬಯಸುತ್ತಿದೆ. ಇವೆರಡು ಒಂದಾದರೆ ಮಾತ್ರ ದಲಿತ ಕಾವ್ಯದ ವಿಶ್ಲೇಷಣೆ ಸರಿ ದಾರಿಯಲ್ಲಿ ಸಾಗಲು ಸಾಧ್ಯ.

ದಲಿತ ಕವಿಗಳು ತಮ್ಮ ಕಾವ್ಯದ ಮೂಲಕ ಸಮುದಾಯದ ತಲ್ಲಣಗಳನ್ನು ಹಿಡಿದಿಟ್ಟಿದ್ದರು. ಅಲ್ಲಿನ ನೋವು, ಅವಮಾನ, ದಬ್ಬಾಳಿಕೆ, ದೌರ್ಜನ್ಯ, ಶೋಷಣೆ, ಪ್ರೀತಿ ಮುಂತಾದವುಗಳನ್ನು ಅಭಿವ್ಯಕ್ತಿಸಿದ್ದರು. ಇವರಿಂದ ಹೊರಹೊಮ್ಮಿದ ಹೋರಾಟದ ಹಾಡುಗಳಂತೂ ವಸ್ತುಸ್ಥಿತಿಯನ್ನು ಬಿಂಬಿಸುತ್ತಲೇ ಅದರ ಬದಲಾವಣೆಗೆ ಸನ್ನದ್ಧರಾಗಬೇಕಾದ ಅನಿವಾರ್ಯತೆಯನ್ನು ಮನಗಾಣಿಸುತ್ತಿದ್ದವು. ಇಂತಹ ಕಾವ್ಯಗಳ ವಿಶ್ಲೇಷಣೆ, ವಿಮರ್ಶೆ ದಲಿತರ ಆಶೋತ್ತರ ನೆಲೆಗಳ ಹಿನ್ನೆಲೆಯಲ್ಲಿಯೇ ನಡೆಯಬೇಕು.

ದಲಿತ ಕಾವ್ಯದ ವಸ್ತು ಮತ್ತು ಅದನ್ನು ಅಭಿವ್ಯಕ್ತಿಸುವಾಗ ದಲಿತ ಕವಿಗಳಿಗಿದ್ದ ತಳಮಳಗಳೇನು ಎಂಬುದೂ ಮುಖ್ಯ. ಇಂತಹ ಸೂಕ್ಷ್ಮಗಳನ್ನು ಬಿ.ಎಂ. ಪುಟ್ಟಯ್ಯ ಅವರು ತಮ್ಮ ಸಂಶೋಧನೆಯಲ್ಲಿ ಸೂಕ್ಷ್ಮವಾಗಿ ಹಿಡಿದಿಟ್ಟಿದ್ದಾರೆ. ಹೋರಾಟದ ಹಾಡುಗಳಲ್ಲಿ ಒಂದಾದ 'ಮನೆ ಮನೆಯು ಕತ್ತಲೆ' ಹಾಡು ಕುರಿತು ಅವರು ಬರೆಯುವಾಗ “ಕೆಲವೊಮ್ಮೆ ಇಂತಹ ಹಾಡುಗಳು ನಿರ್ದಿಷ್ಟ ಘಟನೆಗಳ ಪ್ರೇರಣೆಯಿಂದ ಹುಟ್ಟಿರುವುದೂ ಉಂಟು. ಹಾಗೆಂದು ಅವುಗಳ ಭಾವಕೇಂದ್ರಿತ ಸಂವೇದನೆಗಳಿಗಾಗಲೀ, ಸೈದ್ಧಾಂತಿಕ ಕೇಂದ್ರಿತ ಆಶಯವಾಗಲೀ, ಕೇವಲ ಆ ನಿರ್ದಿಷ್ಟ ಘಟನೆಯ ಸುತ್ತ ಗಿರಕಿ ಹೊಡೆಯುವುದಿಲ್ಲ. ಈ ನೋವನ್ನು ಪಾರಂಪರಿಕ ನೋವಿನೊಂದಿಗೆ ಸೇರಿಸಲು ಪ್ರಯತ್ನಿಸುತ್ತದೆ. ಆ ಸಂಬಂಧಿ ರಾಗ ಭಾವಗಳು ಆಯಾ ಪರಿಸರದಿಂದಲೇ ಎದ್ದು ಬರುತ್ತವೆ. ಮತ್ತು ಅದು ಹೋರಾಟದಲ್ಲಿ ತೊಡಗಿರುವ ಎಲ್ಲರನ್ನೂ ಸುಲಭವಾಗಿ ಆವರಿಸಿಕೊಳ್ಳುತ್ತದೆ. ಓದಿನ ಹಂಗಿಲ್ಲದ ಈ ಹಾಡುಗಳು ಅಕ್ಷರಸ್ಥರು–

ಅನಕ್ಷರಸ್ಥರೆನ್ನದೆ ಎಲ್ಲರಲ್ಲೂ ಅನುರಣಿಸುತ್ತವೆ."[48] ಇಲ್ಲಿ ದಲಿತ ಕಾವ್ಯ ಮತ್ತು ಹೋರಾಟದ ಹಾಡುಗಳ ಅಭಿವ್ಯಕ್ತಿಯ ಹಿಂದೆ ಇರಬಹುದಾದ ಸಾಮಾಜಿಕ ನೆಲೆಗಟ್ಟನ್ನು ಕುರಿತು ಚರ್ಚಿಸಲಾಗಿದೆ. ಅಭಿವ್ಯಕ್ತಿ ಹೇಗೆ ಬಂದಿದೆ? ಎಂಬುದರ ಬಗ್ಗೆಯೇ ಹೆಚ್ಚು ಗಮನ ಕೇಂದ್ರೀಕರಿಸಿದ್ದ ಕನ್ನಡ ವಿಮರ್ಶೆಗೆ ದಲಿತ ಕವಿಗಳ ಅಭಿವ್ಯಕ್ತಿಯಲ್ಲಿ ಏನಿದೆ? ಎಂಬುದು ಮುಖ್ಯವಾಗಬೇಕು. ಈ ಆಲೋಚನೆಯನ್ನು ಮೇಲಿನ ವಿಮರ್ಶೆ ಬಿತ್ತುತ್ತಿದೆ.

ಮುಂದುವರೆದು ಬಿ.ಎಂ. ಪುಟ್ಟಯ್ಯ ಅವರು 'ದಲಿತ ಸಾಹಿತ್ಯಕ್ಕೆ ಸಾಹಿತ್ಯ ಮೀಮಾಂಸೆ ಬೇಕೆ?' ಎಂಬ ಲೇಖನದಲ್ಲಿ ಹೋರಾಟದ ಹಾಡುಗಳ ಅಭಿವ್ಯಕ್ತಿಯನ್ನು ಕುರಿತು ಬರೆಯುತ್ತಾ "ಹೋರಾಟದ ಹಾಡುಗಳ ಲೋಕದಿಂದ ಹೇಳುವುದಾದರೆ ದಲಿತ ಸಾಹಿತ್ಯ ಎಂಬುದು ಗಾಯದ ಕತೆ, ಗಾಯವು ಮಾಯದ ಕತೆ, ಈ ಕತೆಗಳನ್ನೊಳಗೊಂಡ ನೋವಿನ ರಾಗ".[49] ಹಾಗೆಯೇ ದಲಿತ ಕಾವ್ಯವನ್ನು ಕುರಿತು 'ಆಧುನಿಕತೆ ದಲಿತ ಬಂಡಾಯ ಕಾವ್ಯ' ಲೇಖನದಲ್ಲಿ "ಯಾವುದು ಸಾಹಿತ್ಯ ಅಲ್ಲ; ಆಗಲ್ಲ ಎಂದು ಹೇಳಲಾಗಿತ್ತೊ ಅದು, ಯಾವುದು ಕವಿತೆ ಆಗಲ್ಲ ಎಂದು ಹೇಳಲಾಗಿತ್ತೊ ಅದು ಮೊದಲ ಬಾರಿಗೆ ಸಾಹಿತ್ಯವಾಯಿತು, ಕವಿತೆಯಾಯಿತು, ಕಾವ್ಯವಾಯಿತು. ಇದು ನಂತರ ಬಂದ ಕವಿಗಳಿಗೆ ತಮ್ಮ ದುಃಖ ದುಮ್ಮಾನಗಳನ್ನು, ನೋವು ಅಪಮಾನ ಹಿಂಸೆಗಳನ್ನು ಅಕ್ಷರ ರೂಪದಲ್ಲಿ ವ್ಯಕ್ತಪಡಿಸುವಂತೆ ಮಾಡಿತು. ಪ್ರಾಸ, ಲಯ, ಗೇಯತೆ, ಛಂದಸ್ಸು ಮುಂತಾದವುಗಳ ಚೌಕಟ್ಟನ್ನು ಮೊಟ್ಟಮೊದಲ ಬಾರಿಗೆ ಕುಟ್ಟಿ ಪುಡಿ ಮಾಡಿತು."[50] ದಲಿತ ಕಾವ್ಯದ ಒಟ್ಟು ಅಭಿವ್ಯಕ್ತಿಯನ್ನು ಹಿಡಿದಿಡುವಲ್ಲಿ ಮೇಲಿನ ಮಾತುಗಳು ಅತ್ಯಂತ ಸಮಂಜಸವಾಗಿವೆ. ದಲಿತ ಕಾವ್ಯದ ಅಭಿವ್ಯಕ್ತಿಯ ಚರ್ಚೆಯಲ್ಲೇ ದಲಿತರ ನೋವುಗಳಿಗಿಂತ ಹೆಚ್ಚಾಗಿ ಕಾವ್ಯದ ರೂಪ, ಸ್ವರೂಪದ ಬಗ್ಗೆಯೇ ಕೇಂದ್ರೀಕರಿಸಿದ್ದ ಕನ್ನಡ ವಿಮರ್ಶೆಗೆ ಮೇಲಿನ ವಿಮರ್ಶಕರ ದೃಷ್ಟಿಕೋನ ವಾಸ್ತವ ನೆಲೆಯಲ್ಲಿ ಕೊಂಡೊಯ್ಯಲು ಪ್ರೇರೇಪಿಸುತ್ತದೆ. (ದಲಿತ ಕಾವ್ಯದ ಸ್ವರೂಪದ ಚರ್ಚೆ ಕನ್ನಡ ವಿಮರ್ಶೆಯಲ್ಲಿ ಇನ್ನೂ ಉತ್ತಮವಾಗಿ ನಡೆದಿಲ್ಲ) ಏಕೆಂದರೆ ದಲಿತ ಕಾವ್ಯ ಹೆಸರೇ ಸೂಚಿಸುವ ಹಾಗೆ ದಲಿತರ, ನೋವುಂಡವರ, ಆ ನೆಲೆಯಲ್ಲೇ ಬದುಕಿರುವವರ ಕಾವ್ಯ.

ಮೇಲಿನ ಮಾತುಗಳಿಗೆ ಪೂರಕವೆಂಬಂತೆ ಕೋಟಗಾನಹಳ್ಳಿ ರಾಮಯ್ಯ ಅವರು ಎಂ. ವೆಂಕಟಸ್ವಾಮಿ ಅವರ 'ಬೆಟ್ಟಗುಡ್ಡಗಳ ಭೋಗುಣಿಯಲ್ಲಿ' ಕವನ ಸಂಕಲನಕ್ಕೆ ಬೆನ್ನುಡಿ ಬರೆಯುತ್ತಾ "ಅವರು ಬರೆದ ಎಲ್ಲವನ್ನೂ ಗಮನಿಸಿದಾಗ ಥಟ್ಟನೆ ಸೆಳೆಯುವುದು ಪದ್ಯ ಕಟ್ಟುವಲ್ಲಿನ ಅವರ ಪ್ರಾಮಾಣಿಕ ಪರಿಶ್ರಮ, ಬೆರಗು ತರುವ ಮುಗ್ಧ ಪ್ರತಿಮಾ ಲೋಕ, ಸಮಕಾಲೀನ ಕ್ಲೀಷೆ, ಗೊಂದಲಗಳನ್ನು ಮೀರಿದ ವಸ್ತು...ವಿನ್ಯಾಸ. ಹೊರ ಒತ್ತಡಗಳನ್ನು ಕೇರು ಮಾಡದೆ ತನಗನಿಸಿದ್ದನ್ನು ಕವಿತೆ ಮಾಡುವ ಕಳಕಳಿ....ಇವು ಕಾವ್ಯದಲ್ಲಿ ತನ್ನ ತನ ಕಂಡುಕೊಳ್ಳಬಯಸುವ ಕವಿಯೊಬ್ಬನ ಜರೂರಿಗಳು"[51] ಎಂದು ಹೇಳುವುದರ ಮೂಲಕ ದಲಿತ ಕಾವ್ಯದ ಹಿಂದಿರಬಹುದಾದ ಆಶಯ ಮತ್ತು ಅಭಿವ್ಯಕ್ತಿಗಳನ್ನು ಹಿಡಿದಿಟ್ಟಿದ್ದಾರೆ.

ಮೊಗಳ್ಳಿ ಗಣೇಶ್ ಅವರು 'ದುಡಿವ ಜನರ ನಾಡಿನ ಕವಿ ಸಿದ್ಧಲಿಂಗಯ್ಯ' ಎಂಬ ಲೇಖನದಲ್ಲಿ ಸಿದ್ಧಲಿಂಗಯ್ಯ ಅವರ ಕಾವ್ಯದ ಅಭಿವ್ಯಕ್ತಿಯ ಹಿಂದಿನ ಆಶಯಗಳನ್ನು ಸಮಂಜಸವಾಗಿ ಹಿಡಿದಿಟ್ಟಿದ್ದಾರೆ. ಅವರೇ ಬರೆಯುವಂತೆ "ನೊಂದವರ ಆಕ್ರಂದನವನ್ನು ಹಾಡಾಗಿಸಿ ಕಾವ್ಯದ ನಾಡಿ ಬಡಿತಕ್ಕೆ ಅವರು ಹೊಸ ಬಗೆಯ ಸಂವೇದನೆಯನ್ನೂ ತಂದವರು. ಅವರ ಕಾವ್ಯದ ಆಶಯವೆಲ್ಲ ಮಾನವೀಯತೆಯ ದಾಹದಿಂದ ಕಿಕ್ಕಿರಿದಿದೆ. ಸಾಮಾಜಿಕ ನ್ಯಾಯದ ಆತ್ಯಂತಿಕ ತುಡಿತ ಮತ್ತು ಕನಸುಗಳು ಇಡೀ ಅವರ ಕಾವ್ಯದ ಶರೀರದ ತುಂಬಾ ಆವರಿಸಿಕೊಂಡಿವೆ"[೫೨] ಎಂದಿದ್ದಾರೆ. ಈ ಮಾತುಗಳು ಸಿದ್ಧಲಿಂಗಯ್ಯ ಅವರ ಕಾವ್ಯದ ಅಭಿವ್ಯಕ್ತಿಗೆ ಅನ್ವಯಿಸಿದರೂ ಕೂಡ ಎಲ್ಲಾ ದಲಿತ ಕಾವ್ಯದ ಹಿಂದಿನ ಆಶಯದ ನೆಲೆಗಳನ್ನು ಬಿಂಬಿಸುತ್ತಿವೆ.

ದಲಿತ ಕಾವ್ಯದ ಆಶಯಗಳನ್ನು ಹಿಡಿದಿಟ್ಟಿರುವ ಮತ್ತೊಂದು ಬರಹವೆಂದರೆ ಪೋಲಂಕಿ ರಾಮಮೂರ್ತಿ ಅವರದು. ಕೆ.ಬಿ. ಸಿದ್ದಯ್ಯ ಅವರ 'ಬಕಾಲ' ಕೃತಿ ಕುರಿತು 'ಸುಡು ಬಂಡೆಯ ಮೇಲೆ ಚಿಗುರು' ಎನ್ನುವ ಲೇಖನ ಬರೆಯುತ್ತಾ "ಬಕಾಲ ಭೂಮಿಯ ವಿಷಾದ ಗೇಯ, ನೆಲದ ಪಾಡು, ಎಲಿಯಟ್‌ನ 'ದ ವೇಸ್ಟ್ ಲ್ಯಾಂಡ್' ಹೇಗೆ ಶಬ್ದಗಳ ಅಧ್ಯಾಹಾರಗಳಲ್ಲಿ ನೆಲದ ಪಾಡನ್ನು ಮಿಡಿಯುತ್ತದೆಯೋ ಹಾಗೆ ಈ ಭೂ ಗೇಯ ರೂಪಕಗಳ ಅಧ್ಯಾಹಾರಗಳಲ್ಲಿ ಬಾಳಿನ ಪಾಡನ್ನು ಬಕಾಲ ಮುಟ್ಟಿಸುತ್ತದೆ"[೫೩] ಎಂದಿದ್ದಾರೆ. ಈ ಬಾಳಿನ ಪಾಡು ದಲಿತ ಕರುಳಿನ ತುಡಿತಕ್ಕೆ ಸಂಬಂಧಿಸಿದ್ದು. ದಲಿತ ಕವಿಗಳ ಬಹುಪಾಲು ಹಾಡುಗಳು ಈ ಕರುಳ ತುಡಿತಗಳಿಂದ ನೋವಿನ ನೆಲೆಗಳನ್ನು ಹೊರಹೊಮ್ಮಿಸಿದೆ. ಈ ಮೂಲಕ ಬದುಕು ಬದಲಾಗಬೇಕಾದ ಅನಿವಾರ್ಯತೆಯನ್ನು ಒತ್ತಿ ಹೇಳುತ್ತವೆ.

'ಬಂಡಾಯ : ಸಮುದಾಯ ಕಾವ್ಯ ಪ್ರಾತಿನಿಧಿಕ' ಎನ್ನುವ ಲೇಖನದಲ್ಲಿ ಜಿ.ಎಸ್. ಆಮೂರ ಅವರು ಮುನಿವೆಂಕಟಪ್ಪ ಅವರ ಕಾವ್ಯಗಳನ್ನು ಕುರಿತು ವಿಮರ್ಶಿಸಿರುವ ರೀತಿ ಹೀಗಿದೆ; "ಕಾವ್ಯ ದೀನದಲಿತರ ನೋವಿನ ಅಭಿವ್ಯಕ್ತಿಯಾಗಬೇಕು ಎನ್ನುವುದು ಈ ಕಲ್ಪನೆಯ ಮುಖ್ಯ ಆಶಯವಾಗಿದೆ. ಉದಾಹರಣೆಗೆ ಮುನಿವೆಂಕಟಪ್ಪನವರ 'ಕವಿತೆ'ಯ ಈ ಸಾಲುಗಳು

ನೊಂದವರ ನೋವಿನ
ಕೆನೆಗಟ್ಟಿರುವ ಅಳಲುಗಳನ್ನು
ಚಿಮ್ಮಿಸುವ ಹಾಡಿನ
ಹೊಸ ರಾಗ ನುಡಿಸಿದಾಗ
ಅರಳುವುದು ನನ್ನ ಕವಿತೆ."[೫೪]

ದಲಿತ ಕಾವ್ಯದ ಅಭಿವ್ಯಕ್ತಿಯ ಹಿಂದಿನ ಆಶಯವನ್ನು ಆಮೂರ ಅವರು ಮುನಿವೆಂಕಟಪ್ಪ ಕಾವ್ಯದ ಮೂಲಕ ಸ್ಪಷ್ಟವಾಗಿ ಚರ್ಚಿಸಿದ್ದಾರೆ. ದಲಿತ ಕವಿಗಳಿಗೆ ನೋವಿನ ಅಭಿವ್ಯಕ್ತಿಯೇ ಮುಖ್ಯ. ಅದು ನೊಂದವರ ನೋವು. ಈ ನೊಂದಿರುವವರ ನೋವಿನ ಅಭಿವ್ಯಕ್ತಿಯೇ ದಲಿತ ಕಾವ್ಯದ ತಿರುಳು. ಇದನ್ನು ಮೇಲಿನ ವಿಮರ್ಶೆ ಹಿಡಿದಿಟ್ಟಿದೆ.

ಲಿಂಗದೇವರು ಹಳೆಮನೆ ಅವರು 'ಸಿದ್ಧಲಿಂಗಯ್ಯನವರ ಕಾವ್ಯ' ಎನ್ನುವ ಲೇಖನದಲ್ಲಿ ಕಾವ್ಯ ಅಭಿವ್ಯಕ್ತಿಸುವ ಆಶಯವನ್ನು ಕುರಿತು ಹೀಗೆ ಬರೆದಿದ್ದಾರೆ. "ಹೊಲೆಮಾದಿಗರ ಹಾಡು ತನ್ನ ಹೆಸರೇ ಸೂಚಿಸುವಂತೆ ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ರಚಿತಗೊಂಡ ಜನಾಂಗವೊಂದರ ಬದುಕಿನ ಚಿತ್ರಣವಾಗಿದೆ. ಈ ಸಮಾಜದಲ್ಲಿ ಅವರಿಗಿರುವ ಸ್ಥಾನ, ಅವರ ದುಡಿತಕ್ಕಿರುವ ಪ್ರತಿಫಲ, ಎಲ್ಲರಂತೆ ತಾವೂ ಮನುಷ್ಯರಾಗಿ ಬಾಳಬೇಕೆನ್ನುವ ಹಂಬಲ ಇಲ್ಲಿಯ ಕವನಗಳ ಆಶಯ. ಅದು ಪ್ರಾತಿನಿಧಿಕವಾಗಿ ಕವಿಯ ಆಶಯವೂ ಹೌದು; ಆದ್ದರಿಂದಲೇ ಕವಿ ಸಂದರ್ಭಕ್ಕನುಗುಣವಾಗಿ ವ್ಯಥೆಯನ್ನು ಚಿತ್ರಿಸಿಕೊಳ್ಳುವ, ಹೊರಗೆ ನಿಂತು ಹೋರಾಟಕ್ಕೆ ಪ್ರಚೋದಿಸುವ ವ್ಯಕ್ತಿಯಾಗಿ ಮೂಡಿಬರುತ್ತಾನೆ".[೫೫] ಇಲ್ಲಿ ದಲಿತರ ವಸ್ತುಸ್ಥಿತಿ ಮತ್ತು ದಲಿತ ಕಾವ್ಯದ ಆಶಯವನ್ನು ಒಟ್ಟಿಗೆ ಹೇಳಲಾಗಿದೆ. ಒಟ್ಟು ಮನುಷ್ಯ ಸಮಾಜದಿಂದ ಹೊರಗೆ ನಿಂತು ಮನುಷ್ಯತ್ವದ ನೆಲೆಗಳ ಹುಡುಕಾಟಕ್ಕೆ ದಲಿತ ಕಾವ್ಯದ ಅಭಿವ್ಯಕ್ತಿ ಸಾಗಿದೆ. ಯಾವ ವ್ಯವಸ್ಥೆ ಇವರನ್ನು ಊರ ಹೊರಗಿರಿಸಿತೋ ಅದರ ಬದಲಾವಣೆಯ ಕಡೆಗೆ ದಲಿತ ಕಾವ್ಯದ ನೋಟವಿದೆ. ಮೇಲಿನ ವಿಮರ್ಶೆಯಲ್ಲಿ 'ತಾವೂ ಮನುಷ್ಯರಾಗಿ ಬಾಳಬೇಕೆನ್ನುವ ಹಂಬಲ ಇಲ್ಲಿಯ ಕವನಗಳ ಆಶಯ' ಎಂದು ಹೇಳಲಾಗಿದೆ. ಆದರೆ ದಲಿತ ಕಾವ್ಯ ಇದಕ್ಕಿಂತಲೂ ಮುಂದೆ ಹೋಗಿ ಮನುಷ್ಯಪರ ಆಲೋಚನೆ ಇಲ್ಲದವರಿಗೆ ಮನುಷ್ಯತ್ವವನ್ನು ತಿಳಿಸುವ ಹಿನ್ನೆಲೆಯಲ್ಲಿ ನಿರೂಪಿತಗೊಂಡಿರುವುದನ್ನು ಕಾಣಬಹುದು.

ದಲಿತ ಕಾವ್ಯದ ಅಭಿವ್ಯಕ್ತಿಯನ್ನು ಪ್ರಧಾನವಾಗಿ ಗುರುತಿಸಿದವರಲ್ಲಿ ಕೆ.ವಿ. ನಾರಾಯಣ ಅವರು ಪ್ರಮುಖರು. ಜಿ. ಶಿವಕುಮಾರ್ ಮತ್ತು ಸಹ ಮಿತ್ರರು ಸೇರಿ ಹೊರತಂದ 'ಜ್ವಾಲಾಮುಖಿ' ಕವನ ಸಂಕಲನ ಕುರಿತು ತಮ್ಮ ಅಭಿಪ್ರಾಯವನ್ನು ಬರೆದಿರುವ ರೀತಿ ಹೀಗಿದೆ; "ಕಳೆದ ಒಂದು ದಶಕದಲ್ಲಿ ಕನ್ನಡದಲ್ಲಿ ಈ ಬಗೆಯ 'ಸಾಮಾಜೀಕರಣ ಕವಿತೆ'ಗಳ ರಚನೆ ನಡೆಯುತ್ತ ಬಂದಿದೆ. ಕವಿಯ ಹುಡುಕಾಟ ಹೊರಕ್ಕೆ ಮುಖ ಮಾಡಿರುತ್ತದೆ. ಭಾಷೆಯ ಮೂಲಕ ಜನರೊಡನೆ ಒಂದು ಸೇತುವೆ ಕಟ್ಟಿಕೊಳ್ಳುವ ತವಕ ಇಲ್ಲಿ ಮುಖ್ಯವಾಗಿದೆ".[೫೬] ಇಲ್ಲಿ ದಲಿತ ಕಾವ್ಯ ಮತ್ತು ಸಮಾಜಕ್ಕಿರುವ ಸಂಬಂಧವನ್ನು ಮೇಲಿನ ಮಾತುಗಳು ಕಟ್ಟಿಕೊಡುತ್ತಿವೆ. ಸಾಮಾಜೀಕರಣ ತತ್ವವು ದಲಿತ ಕಾವ್ಯದ ಮೂಲ ಅಭಿವ್ಯಕ್ತಿಗೆ ಸಂಬಂಧಿಸಿದ್ದು. ಹಾಗೇ ಮುಂದುವರಿದು ನಾರಾಯಣ ಅವರು "ಇಲ್ಲಿ ನಾಲ್ವರು ಕಿರಿಯ ಗೆಳೆಯರು ಹೀಗೆ ಉದ್ವಿಗ್ನ ಕ್ಷಣಗಳನ್ನು ಕವಿತೆಯಾಗಿಸಲು ನಡೆಸಿದ ಪ್ರಯತ್ನಗಳಿವೆ. ಅಸಮಾನತೆ, ನಿರುದ್ಯೋಗ,

ಜಾತಿ ತಾರತಮ್ಯ, ಅಪ್ರಾಮಾಣಿಕತೆ, ಅನ್ಯಾಯ ಇವೆಲ್ಲವೂ ಈ ಕವಿಗಳನ್ನು ಉದ್ದೀಪಿಸಿವೆ. ಚಡಪಡಿಸುವಂತೆ ಮಾಡಿವೆ. ಈ ಗಳಿಗೆಗಳಲ್ಲಿ ಅವರು ನಡೆಸಿದ ಚಿಂತನೆ, ಮಾತು, ಸ್ವಗತಗಳನ್ನು ಈ ಕವಿತೆಗಳಲ್ಲಿ ಕೇಳಬಹುದು. ಈ ಯುವಕರು ಸಮಾಜದೊಡನೆ ಸಂವಾದ ಬಯಸುತ್ತ ಈ ಕ್ರಿಯೆಯಲ್ಲಿ ತೊಡಗಿದ್ದಾರೆ."[೫೭] ಇಲ್ಲಿ ಕೇಳಬಹುದು ಎಂಬ ಪದ ದಲಿತ ಕಾವ್ಯ ಮತ್ತು ಅದರ ಅಭಿವ್ಯಕ್ತಿಯ ಹಿಂದಿನ ಧೋರಣೆಯನ್ನು ಸಮಂಜಸವಾಗಿ ಕಟ್ಟಿಕೊಟ್ಟಿದೆ. ದಲಿತ ಕವಿಗಳನ್ನು ಕಾವ್ಯ ಬರೆಯುವಂತೆ ಉದ್ದೀಪಿಸುವ ಅಂಶಗಳು ಮತ್ತು ದಲಿತ ಕಾವ್ಯ ಸಮಾಜದ ಜೊತೆ ಬೆಸೆದುಕೊಳ್ಳುವ ಸಂಬಂಧದ ಸೂಕ್ಷ್ಮತೆಗಳು ಮೇಲಿನ ಚರ್ಚೆಯಲ್ಲಿವೆ.

'ಕಾವ್ಯ : ಪ್ರತಿಭಟನೆ ಹಾಗೂ ಸಾಂಸ್ಕೃತಿಕತೆ' ಎನ್ನುವ ಲೇಖನದಲ್ಲಿ ಐ.ಜಿ. ಮ್ಯಾಗೇರಿ ಅವರು ಮೂಡ್ನಾಕೂಡು ಅವರ ಕಾವ್ಯವನ್ನು ಕುರಿತು ವಿಮರ್ಶಿಸಿದ್ದಾರೆ. ದಲಿತ ಕಾವ್ಯದ ಅಭಿವ್ಯಕ್ತಿಯ ಹಿನ್ನೆಲೆ ಮತ್ತು ಆಶಯವನ್ನು ಹಿಡಿದಿಟ್ಟಿರುವ ಈ ಲೇಖನ ನಿರೂಪಿತಗೊಂಡಿರುವುದು ಹೀಗೆ; "ಚಿನ್ನಸ್ವಾಮಿಯವರ ಕಾವ್ಯದಲ್ಲಿ ಪ್ರತಿಭಟನೆಗಳು ಸಿಟ್ಟಿನ ಮೂಲಕವಾಗಲಿ, ಸುಖದ ಮೂಲಕವಾಗಲಿ ಬಂದದ್ದಲ್ಲ. ಅದು ವಿಷಾದಗಳ ನಡುವೆ ಹುಟ್ಟಿದ ಕಾವ್ಯ. ಚಿನ್ನಸ್ವಾಮಿಯವರ ಸಿಟ್ಟು ಮನುಷ್ಯನ ಮೇಲಲ್ಲ. ಅದು ವ್ಯವಸ್ಥೆಯ ಮೇಲಿದೆ. ಮನುಷ್ಯನ ಮೇಲಿನ ಸಿಟ್ಟು ಪ್ರೀತಿಸುವುದನ್ನು ಕಲಿಸುವುದಿಲ್ಲ. ಈ ಪ್ರಜ್ಞೆಯಿಂದಲೇ ಚಿನ್ನಸ್ವಾಮಿಯವರು ಮನುಷ್ಯನನ್ನು ಪ್ರೀತಿಸುತ್ತಾರೆ. ಮನುಷ್ಯ ಆದಷ್ಟು ಅಂತರದಿಂದ ಹತ್ತಿರವಾಗಬೇಕೆನ್ನುತ್ತಾರೆ. ಹಾಗಾಗಿಯೇ ಅವರ ಕಾವ್ಯ ಏಕಕಾಲಕ್ಕೆ ಧ್ಯಾನವನ್ನೂ, ಇದಿರಿನ ಅಪರಿಚಿತರಿಗೆ ಪರಿಚಯವನ್ನೂ, ಏಕಾಂತದ ತಲ್ಲಣಗಳನ್ನೂ ಒಟ್ಟಿಗೆ ಅಭಿವ್ಯಕ್ತಿಸುತ್ತದೆ."[೫೮] ದಲಿತ ಕಾವ್ಯದ ಯಶಸ್ಸಿರುವುದೇ ಮನುಷ್ಯ ಪರ ಆಲೋಚನೆಗಳನ್ನು ನಿರೂಪಿಸಿರುವುದರಲ್ಲಿ. ಅದು ಸಮಾಜದ ಬದಲಾವಣೆಗಾಗಿ ತುಡಿಯುತ್ತದೆ. ಈ ಬದಲಾವಣೆಯ ಆಶಯವೇ ದಲಿತ ಕಾವ್ಯದ ಮೂಲ ಧ್ಯೇಯ. ಇದನ್ನು ಅನೇಕ ವಿಮರ್ಶೆಗಳು ಗುರುತಿಸಿವೆ.

ಮೇಲಿನ ಮಾತುಗಳಿಗೆ ಪೂರಕವೆಂಬಂತೆ ಎಸ್.ಎಫ್. ಯೋಗಪ್ಪವನರ್ ಅವರು ಸಿದ್ಧಲಿಂಗಯ್ಯನವರ ಕಾವ್ಯವನ್ನು ವಿಮರ್ಶಿಸಿರುವ 'ಕಾವ್ಯದಲ್ಲಿ ಪ್ರಾಮಾಣಿಕತೆಯ ಸ್ಥಾನ' ಎನ್ನುವ ಲೇಖನವನ್ನು ಗಮನಿಸಬಹುದು. ಅವರೇ ಬರೆಯುವಂತೆ "ಕಾವ್ಯ ಎನ್ನುವುದು ಅರ್ಧ ಮನುಷ್ಯ. ಅರ್ಧ ಕುದುರೆಯ ಶಕ್ತಿ ಸ್ವರೂಪದ ಆಕಾರವೆಂದು ಎಜ್ರಾಪೌಂಡ್ ಹೇಳುತ್ತಾನೆ. ಅದು ಭಾವಶಕ್ತಿ, ಬೌದ್ಧಿಕ ಬಲದ ಸಮ್ಮಿಶ್ರಣ. ಕಾವ್ಯ ಮನುಷ್ಯನ ಬದುಕಿಗೆ ಹತ್ತಿರವಿರಬೇಕು. ಮನುಷ್ಯನ ಬದುಕಿಗೆ ಉಪಯೋಗವಾಗಬೇಕು. ಅಂತಹ ಉತ್ತಮ ಕಾವ್ಯದ ಲಕ್ಷಣಗಳನ್ನು ಡಾ. ಸಿದ್ಧಲಿಂಗಯ್ಯನವರು ಪ್ರಸ್ತುತ ಕವನ ಸಂಕಲನದಲ್ಲಿ ಎತ್ತಿಕೊಟ್ಟಿದ್ದಾರೆ"[೫೯] ಎಂದಿದ್ದಾರೆ. ಇಲ್ಲಿ ಕಾವ್ಯದ ಲಕ್ಷಣಗಳನ್ನು ಹಿಡಿದಿಡುವ ಪ್ರಯತ್ನದಂತೆ ಕಂಡುಬಂದರೂ ಕೂಡ ಅಂತಿಮವಾಗಿ ಕಾವ್ಯದ ಆಶಯಕ್ಕೆ ಹೆಚ್ಚು ಒತ್ತನ್ನು ನೀಡಲಾಗಿದೆ.

ದಲಿತ ಕಾವ್ಯವನ್ನು ಕುರಿತ ಕೆಲವು ವಿಮರ್ಶೆಗಳು ಅದರ ಆಶಯ ಮತ್ತು ಅಭಿವ್ಯಕ್ತಿಯನ್ನು ಒಟ್ಟಿಗೆ ಹಿಡಿದಿಡುವ ಪ್ರಯತ್ನವನ್ನು ಮಾಡಿವೆ. ಇಂತಹ ಪ್ರಯತ್ನದಲ್ಲಿ ಕಿ.ರಂ. ನಾಗರಾಜರ ವಿಮರ್ಶೆಯೂ ಒಂದು. ಸಿದ್ಧಲಿಂಗಯ್ಯ ಅವರ 'ಹೊಲೆ ಮಾದಿಗರ ಹಾಡು' ಕೃತಿಗೆ ತಮ್ಮ ಅಭಿಪ್ರಾಯವನ್ನು ಬರೆಯುತ್ತಾ ಶ್ರೀಯುತರು ಹೀಗೆ ಹೇಳಿದ್ದಾರೆ; "ಆಂತರಿಕ ಒತ್ತಡ ಮತ್ತು ಮಾನಸಿಕ ಪ್ರಕ್ರಿಯೆಗಳ ಸೂಕ್ಷ್ಮಗಳನ್ನು ಈ ಹೊತ್ತಿನ ನಮ್ಮ ಕಾವ್ಯ ಪ್ರಕಟಪಡಿಸಲು ನಡೆಸುತ್ತಿರುವ ಹುನ್ನಾರಗಳನ್ನು ಗೆಳೆಯ ಸಿದ್ಧಲಿಂಗಯ್ಯನವರ 'ಹೊಲೆ ಮಾದಿಗರ ಹಾಡು'ವಿನಲ್ಲಿ ಕಾಣಬಹುದು. ಮಾನವೀಯ ಕ್ರೌರ್ಯಗಳ ಆಳದಲ್ಲಿ ಹುದುಗಿಹೋಗಿರುವ ಮಾನವತೆಯ ಅನೇಕ ವಿವರಗಳು ಜೀವಂತವಾಗಿ ಪಡಿಮಿಡಿಯುತ್ತಿರುವ ಈ ಸಂಕಲನದ ಕವಿತೆಗಳು ತತ್ಕಾಲೀನ ಸಾಂಸ್ಕೃತಿಕ ಸ್ಥಗಿತ ಸಂದರ್ಭವನ್ನು ಪಾರುಮಾಡುವ ಚೈತನ್ಯವನ್ನು ಪಡೆದುಕೊಂಡಿರುವ ಮಹತ್ವದ ದಾಖಲೆಯಾಗಿವೆ."[೬೦] ಇಲ್ಲಿ ದಲಿತ ಕಾವ್ಯ ದಲಿತರ ಯಾತನಾಮಯ ಬದುಕನ್ನು ಅಭಿವ್ಯಕ್ತಿಸುತ್ತಲೇ ಒಂದು ಸಾಂಸ್ಕೃತಿಕ ಚೈತನ್ಯವನ್ನು ಹುಟ್ಟುಹಾಕಿದೆ. ಈ ಶಕ್ತಿಯನ್ನು ದಲಿತ ಕಾವ್ಯ ಹೊಂದಿದೆ ಎಂಬುದನ್ನು ಮೇಲಿನ ವಿಮರ್ಶೆ ತಿಳಿಸಿಕೊಡುತ್ತದೆ.

ದಲಿತ ಕಾವ್ಯದ ಅಭಿವ್ಯಕ್ತಿಯನ್ನು ಆಶಯದೊಂದಿಗೆ ಗುರುತಿಸಿದವರಲ್ಲಿ ಕೀರ್ತಿನಾಥ ಕುರ್ತಕೋಟಿ ಪ್ರಮುಖರು. 'ಸಿದ್ಧಲಿಂಗಯ್ಯನವರ ಕಾವ್ಯ' ಎಂಬ ಲೇಖನದಲ್ಲಿ ಸಿದ್ಧಲಿಂಗಯ್ಯನವರ ಕಾವ್ಯವನ್ನು ವಿಮರ್ಶಿಸುತ್ತಾ ಹೀಗೆ ಬರೆದಿದ್ದಾರೆ. "ಈಗಾಗಲೇ ಡಿ.ಆರ್. ನಾಗರಾಜರು ಗುರುತಿಸಿರುವಂತೆ ಸಿದ್ಧಲಿಂಗಯ್ಯನವರ ಹಾಡು ಒಂದು ಜನಾಂಗವನ್ನು ಕಟ್ಟಿದೆ, ಕೇವಲ ಜೈವಿಕ ಪಾತಳಿಯ ಮೇಲೆ ಜೀವಿಸುತ್ತಿರುವ ಜನಾಂಗಕ್ಕೆ ಒಂದು ಸಾಂಸ್ಕೃತಿಕ ನೆಲೆಯನ್ನು ಕಟ್ಟಿಕೊಟ್ಟಿದೆ. ಈ ಹಾಡು ಕೇವಲ ಒಂದು ಜನಾಂಗವನ್ನಲ್ಲ, ವಿಶ್ವದ ಎಲ್ಲ ದಲಿತರನ್ನೂ ಒಂದುಗೂಡಿಸುವ ಸಾಮರ್ಥ್ಯವನ್ನು ಪಡೆದಿದೆ. ತನಗೆ ವಿರುದ್ಧವಾದದ್ದರ ಬಗ್ಗೆ ಆಕ್ರೋಶವಿದ್ದರೂ, ತನ್ನ ನೋವಿನ ಅನನ್ಯತೆಯ ಬಗ್ಗೆ ಅಭಿಮಾನವಿದೆ. ಬೇಕೆಂದೇ ಈ ನೋವು ಜೋರಾದ ದನಿಯಲ್ಲಿ, ಉತ್ಪ್ರೇಕ್ಷೆಗಳು ತುಂಬಿರುವ ಭಾಷೆಯಲ್ಲಿ ಅಭಿವ್ಯಕ್ತವಾಗುತ್ತದೆ. ನೋವು ಅಸಹನೀಯವಾಗಿರುವುದರಿಂದ ಧ್ವನಿಗಾಗಲಿ, ಮೆಲುಮಾತಿಗಾಗಲಿ ಇಲ್ಲಿ ಅವಕಾಶವಿಲ್ಲ. ಉಳ್ಳವರ ಸಾಂಸ್ಕೃತಿಕ ಮೌಲ್ಯಗಳನ್ನು ನಿರಾಕರಿಸುವ ಮಟ್ಟಿಗೆ ನೋವು ತೀಕ್ಷ್ಣವಾಗಿದೆ."[೬೧] ಇಲ್ಲಿ ದಲಿತ ಕಾವ್ಯ ವಿಶ್ವದ ನೋವುಂಡವರ ನೆಲೆಗಳನ್ನೆಲ್ಲಾ ಒಳಗೊಳ್ಳುವ ಬಗೆಯನ್ನು ಅವಲೋಕಿಸಲಾಗಿದೆ. ದಲಿತ ಕವಿಗಳು ಕಾವ್ಯ ಬರೆಯುವುದರ ಹಿಂದಿನ ಉದ್ದೇಶ ಮತ್ತು ಅದು ಅಭಿವ್ಯಕ್ತಗೊಳ್ಳುವ ಬಗೆ ಮುಂತಾದವನ್ನು ಮೇಲಿನ ಮಾತುಗಳು ತುಂಬಾ ಸೂಕ್ಷ್ಮವಾಗಿ ತಿಳಿಸಿಕೊಡುತ್ತಿವೆ. ನೋವು ದಲಿತ ಕವಿಗಳ ಅಭಿವ್ಯಕ್ತಿಯಲ್ಲಿ ಹಾಸುಹೊಕ್ಕಾಗಿದೆ ಎಂಬುದನ್ನು ಮತ್ತೊಮ್ಮೆ ಮೇಲಿನ ಸಾಲುಗಳು ನಿರೂಪಿಸುತ್ತಿವೆ.

ಮೂಡ್ನಾಕೂಡು ಚಿನ್ನಸ್ವಾಮಿ ಅವರ 'ಗೋಧೂಳಿ' ಕವನ ಸಂಕಲನಕ್ಕೆ ಬೆನ್ನುಡಿ ಬರೆದಿರುವ ಜಿ.ಎಸ್. ಶಿವರುದ್ರಪ್ಪ ಅವರು ಕಾವ್ಯದ ಅಭಿವ್ಯಕ್ತಿಯ ಹಿಂದಿನ ಧೋರಣೆಗಳನ್ನು ಹಿಡಿದಿಡಲು ಪ್ರಯತ್ನಿಸಿದ್ದಾರೆ. ಅವರ ನಿಲುವು ಹೀಗಿದೆ; "ಚರಿತ್ರೆಯ ನಿಜವಾದ ಅರಿವಿನಿಂದ ಹುಟ್ಟಿದ ಇಲ್ಲಿನ ಕವಿತೆಗಳಲ್ಲಿ ಶತಮಾನಗಳ ನೋವಿದೆ, ವೈಚಾರಿಕತೆಯಿದೆ. ಪ್ರಜ್ಞಾವಂತರನ್ನು ಮರುಚಿಂತನೆಗೆ ಒಳಪಡಿಸುವ ಪ್ರತಿಕ್ರಿಯೆಗಳಿವೆ ಮತ್ತು ಬಹುಮುಖ್ಯವಾದ ಮಾತೆಂದರೆ ಈ ಎಲ್ಲವೂ ಕಾವ್ಯರೂಪದಲ್ಲಿ ಸಂಭವಿಸಿವೆ. ಅಲ್ಲದೆ ಈ ಕವಿತೆಗಳು ದಲಿತ ಲೋಕದ ಅನುಭವಗಳನ್ನು ಇದುವರೆಗೂ ಅಭಿವ್ಯಕ್ತಪಡಿಸುತ್ತಿದ್ದ ಕ್ರಮದಿಂದ ಬೇರೆಯೇ ಆದ ಒಂದು ಹದವನ್ನು ಪಡೆದುಕೊಂಡಿದೆ"[೬೨] ಎಂದಿದ್ದಾರೆ. ಇಲ್ಲಿ ದಲಿತ ಕಾವ್ಯದ ಆಶಯ ಮತ್ತು ಅಭಿವ್ಯಕ್ತಿಯ ಹಿಂದಿನ ಧೋರಣೆಯನ್ನು ಗುರುತಿಸಲಾಗಿದೆ. ದಲಿತ ಕವಿಗಳಲ್ಲೇ ಅನುಭವದ ಹಾದಿಯಿಂದ ಭಿನ್ನ ಭಿನ್ನ ನೆಲೆಯ ವಸ್ತುಸ್ಥಿತಿ ಅನಾವರಣಗೊಳ್ಳುತ್ತದೆಂದು ಮೇಲಿನ ಸಾಲುಗಳು ತಿಳಿಸಿಕೊಡುತ್ತಿವೆ. ಎಲ್ಲರಲ್ಲೂ ಚಿಂತನೆಯಿದೆ. ಆದರೆ ಪ್ರಜ್ಞಾವಂತರನ್ನು ಮರುಚಿಂತನೆಗೆ ಒಳಪಡಿಸುವ ಕಾವ್ಯದ ಸೃಷ್ಟಿ ತನ್ನ ಆಂತರ್ಯದಲ್ಲಿ ಸಾಮಾಜಿಕ ಬದಲಾವಣೆಯ ಕಡೆಗೇ ತುಡಿಯುತ್ತದೆ. ಈ ಅಂಶಗಳನ್ನು ಲೇಖಕರ ಮಾತುಗಳು ಸ್ಪಷ್ಟಪಡಿಸುತ್ತಿವೆ.

ದಲಿತ ಕಾವ್ಯವು ಭಾಷಿಕವಾಗಿ ಏನನ್ನು ನಿರೂಪಿಸಿದೆಯೋ ಅದಷ್ಟೇ ವಾಸ್ತವ ಎಂಬುದು ಭ್ರಮೆ. ಏಕೆಂದರೆ ನೋವು ಹಾಡಾಗಿ ಹೊರಹೊಮ್ಮುವಾಗ ಅಥವಾ ಸಿಟ್ಟು ಧಗಧಗಿಸಿ ಉರಿಯುತ್ತಿರುವಾಗ ಭಾಷೆ ಎಷ್ಟರಮಟ್ಟಿಗೆ ಆ ತಲ್ಲಣಗಳನ್ನು ಹಿಡಿದಿಡುತ್ತದೆ ಎಂಬುದು ಮೂಲಭೂತವಾಗಿ ಕೇಳಿಕೊಳ್ಳಬೇಕಾದ ಪ್ರಶ್ನೆಯಾಗಿದೆ. ಭಾಷೆ ದಲಿತರ ಆಶಯಗಳನ್ನು ಹೊತ್ತೊಯ್ಯುವಾಗ ಎಷ್ಟೋ ಬಾರಿ ಸೋಲಬೇಕಾಗುತ್ತದೆ. ಇದನ್ನು ಮಾಧವ ಪೆರಾಜೆ ಅವರು ಸಿದ್ಧಲಿಂಗಯ್ಯ ಅವರ 'ಹೊಲೆ ಮಾದಿಗರ ಹಾಡು' ಕೃತಿಯನ್ನು ಕುರಿತು ವಿಮರ್ಶಿಸುತ್ತಾ ಗುರುತಿಸಿದ್ದಾರೆ. ಅವರೇ ಬರೆಯುವಂತೆ "ಹೊಲೆ ಮಾದಿಗರ ಹಾಡಿ'ನಲ್ಲಿ ಮುಖ್ಯವಾಗಿ ಕಂಡುಬರುವುದು ಸಿಟ್ಟು. ಕಾವ್ಯವು ಕಾಂತಾಸಂಮಿತ ಎಂಬ ದೃಷ್ಟಿಕೋನ ಇಲ್ಲಿ ಕಂಡುಬರುವುದಿಲ್ಲ. ಹಾಗಾದುದರಿಂದ ಕಾವ್ಯವನ್ನು 'ಸಂತೋಷಕ್ಕಾಗಿ' ಓದುವುದಷ್ಟೇ ಮುಖ್ಯವಾಗದೆ ಹೋರಾಟದ ಅಸ್ತ್ರವನ್ನಾಗಿಸಿಕೊಳ್ಳುವುದೂ ಮುಖ್ಯವಾಗಬೇಕಾಗುತ್ತದೆ. ಈ ಸಂಕಲನದಲ್ಲಿ ಸಿಟ್ಟು ತನ್ನೆಲ್ಲ ಸಾಮರ್ಥ್ಯವನ್ನು ಮೈದುಂಬಿಸಿಕೊಂಡು ಹೊರಬರುತ್ತದೆ. ಆದರೆ ಹಾಗೆ ಬರುವ ಸಿಟ್ಟನ್ನು ತಾಳಿಕೊಳ್ಳುವ ಶಕ್ತಿ ಭಾಷೆಗೆ ಇಲ್ಲವೆನಿಸುತ್ತದೆ"[೬೩] ಎಂದಿದ್ದಾರೆ. ಇಲ್ಲಿ ದಲಿತ ಕಾವ್ಯ ತನ್ನ ಅಭಿವ್ಯಕ್ತಿಗಾಗಿ ಬಳಸಿಕೊಳ್ಳುವ ಭಾಷೆಗೆ ಪೂರ್ಣ ಪ್ರಮಾಣದ ತಳಮಳಗಳನ್ನು ಹಿಡಿದಿಡಲು ಸಾಧ್ಯವಿಲ್ಲ ಎಂಬುದನ್ನು ಮೇಲಿನ ಮಾತುಗಳು ತೋರಿಸಿಕೊಡುತ್ತಿವೆ.

ಸಿದ್ಧಲಿಂಗಯ್ಯ ಅವರ 'ಆಯ್ದ ಕವಿತೆಗಳಿಗೆ' ಮುನ್ನುಡಿ ಬರೆದಿರುವ ಡಿ.ಆರ್. ನಾಗರಾಜ ಅವರು ಕಾವ್ಯವನ್ನು ರೂಪಿಸಿರುವ ಆಶಯಗಳನ್ನು ಗುರುತಿಸಿರುವ ಬಗೆ ಹೀಗಿದೆ; "'ಹೊಲೆಮಾದಿಗರ ಹಾಡು'ವಿನಿಂದ ಶುರುವಾಗಿ ತೀರಾ ಈಚಿನ ತನಕ ಸಿದ್ಧಲಿಂಗಯ್ಯನವರ ಕಾವ್ಯವನ್ನು ಈ ಶತಮಾನದ ದಲಿತರ, ಕೆಳಜಾತಿಗಳ ಆತ್ಮ ಪ್ರತಿನಿಧೀಕರಣದ ಮೂರು ಪ್ರಧಾನ ಆಶಯಗಳು ರೂಪಿಸಿದ್ದವು. ಅವುಗಳೆಂದರೆ;

ಅ) ದಲಿತರಿಗೆ ಶೋಷಣೆ, ದಮನಗಳಿಂದ ಹೊರತಾದ ಬೇರೆ ಸಾಂಸ್ಕೃತಿಕ ಸ್ಮೃತಿಯೇ ಇಲ್ಲಾ ಎಂಬ ಚಾರಿತ್ರಿಕ ಗ್ರಹಿಕೆ. ಇದಕ್ಕೆ ಹೊಂದಿಕೊಂಡಂತೆ ಹಿಂದೂ ಧರ್ಮ ಒಂದು ಏಕಕಾರೀ ರಚನೆ ಎಂಬ ನಿಲುವು.

ಆ) ಆತ್ಮಾನುಕಂಪ ಮತ್ತು ಆಕ್ರೋಶಗಳ ಎರಡು ಅತಿಗಳಲ್ಲಿ ತುಯ್ಯಲಾಡುತ್ತಿದ್ದ ಮನೋ–ರಾಜಕೀಯ ಸ್ಥಿತಿ.

ಇ) ಚರಿತ್ರೆಯ ವಿಕಾಸ ಪಥದಲ್ಲಿ ಆಧುನೀಕರಣ ತಮ್ಮ ಬಿಡುಗಡೆಯ ಏಕಮಾತ್ರ ದಾರಿ ಎಂಬ ಆಶಾವಾದ. ಆದ್ದರಿಂದ, ಆಧುನೀಕರಣಕ್ಕಿಂತ ಹೆಚ್ಚಾಗಿ ಪರಂಪರೆಯ ಬಗ್ಗೆ ಧಗಧಗಿಸುವ ಸಿಟ್ಟು."[೬೪]

ಮೇಲಿನ ಮೂರು ಆಶಯಗಳು ಇಡೀ ದಲಿತ ಕಾವ್ಯವನ್ನು ರೂಪಿಸಿವೆ. ದಲಿತ ಕಾವ್ಯ ತನ್ನ ಅಭಿವ್ಯಕ್ತಿಯಲ್ಲಿ ಆಶಯಗಳನ್ನು ವ್ಯಕ್ತಪಡಿಸುವುದು ಒಂದು ಬಗೆ. ಹಾಗೆಯೇ ಆಶಯಗಳು ದಲಿತ ಕಾವ್ಯವನ್ನು ರೂಪಿಸುವುದು ಇನ್ನೊಂದು ಬಗೆ. ಈ ಎರಡರ ಬಗೆಯನ್ನು ಡಿ.ಆರ್. ನಾಗರಾಜ ಅವರು ಸಮಂಜಸವಾಗಿ ತಮ್ಮ ಲೇಖನದಲ್ಲಿ ಹಿಡಿದಿಟ್ಟಿದ್ದಾರೆ. ಸಿದ್ಧಲಿಂಗಯ್ಯ ಅವರ ಕಾವ್ಯವನ್ನು ಇಡಿಯಾಗಿ ನೋಡುವ ಇಲ್ಲಿನ ದೃಷ್ಟಿಕೋನ ಇಡೀ ದಲಿತ ಕಾವ್ಯವನ್ನು ವಿಭಿನ್ನ ಆಶಯಗಳಲ್ಲಿ ನೋಡುವಂತೆ ಒತ್ತಾಯಿಸುತ್ತದೆ.

೩. ಸಾರಾಂಶ ಪ್ರಧಾನ ಚರ್ಚೆಗಳು

ದಲಿತ ಕಾವ್ಯವನ್ನು ಕುರಿತ ಅನೇಕ ವಿಮರ್ಶೆಗಳು ವಿಮರ್ಶೆಯ ಹೆಸರಿನಲ್ಲಿ ಸಾರಾಂಶವನ್ನೇ ಬರೆದಿಟ್ಟಿವೆ. ಕೆಲವೊಂದು ವಿಮರ್ಶೆಗಳು ದಲಿತ ಕಾವ್ಯದ ಸಾಲುಗಳನ್ನು ಗದ್ಯದ ಸಾಲುಗಳಲ್ಲಿ ನಿರೂಪಿಸಿರುವಂತೆ ಭಾಸವಾಗುತ್ತದೆ. ಕಾವ್ಯದ ವಸ್ತುವಿನ ಬಗೆಗಿನ ಚರ್ಚೆಯಾಗಲೀ, ಒಳನೋಟಗಳಾಗಲಿ ಇಲ್ಲಿ ಕಂಡುಬರುವುದಿಲ್ಲ. ಹಾಗೆಯೇ ಅಭಿವ್ಯಕ್ತಿಯ ಹಿನ್ನೆಲೆ ಆಶಯದ ನೆಲೆಗಳ ಹುಡುಕಾಟವಾಗಲೀ ಅಥವಾ ಕಾವ್ಯದ ಧೋರಣೆ ಕುರಿತಾದ ಪರಾಮರ್ಶೆಯಾಗಲೀ ಈ ವಿಮರ್ಶೆಗಳು ಪ್ರಧಾನ ನೆಲೆಯಲ್ಲಿ ಚರ್ಚಿಸಿಲ್ಲ. ಕೆಲವೊಂದು ಆಸ್ವಾದನೆ ಮತ್ತು ಆರಾಧನೆ ನೆಲೆಗೆ ಸೀಮಿತಗೊಂಡರೆ ಮತ್ತೆ ಕೆಲವು ದಲಿತ ಕಾವ್ಯ ಕುರಿತಾದ ಜನಪ್ರಿಯ ಹೇಳಿಕೆಗಳಲ್ಲಿಯೇ ಮೈಮರೆತಿವೆ.

‘ಸತ್ಯಾನಂದ ಪಾತ್ರೋಟರ ಕಾವ್ಯದಲ್ಲಿ ಪ್ರೀತಿ ಮೀಮಾಂಸೆ’ ಎಂಬ ಎಂ.ಫಿಲ್. ಪ್ರಬಂಧದಲ್ಲಿ ಸಂಶೋಧಕರು ಪಾತ್ರೋಟರ ಕಾವ್ಯವನ್ನು ವಿಶ್ಲೇಷಣೆಗೆ ಒಳಪಡಿಸಿರುವ ರೀತಿ ಹೀಗಿದೆ,

“ತುಂತುರು ಹನಿಯಾಗಿ
ಗಡಸಾಗಿ ಇಲ್ಲ ದಡಸಾಗಿ
ಸುರಿವ ಈ ಮಳೆ
ಕೊಚ್ಚಿ ಒಯ್ಯುತ್ತದೆ ಈ ಭೂಮಿ ಮೇಲಿನ
ಎಲ್ಲಾ ಕೆಸರು ಕೊಳೆ

ಸುಂದರವಾದ ಈ ಮಳೆ ಭೂಮಿಯ ಮೇಲೆ ಸುರಿದು, ಭುವಿಗೆ ಸುಂದರ ಕಳೆಯನ್ನು ತರುವುದು. ಗಡಸಾಗಿ, ದಡಸಾಗಿ ಸುರಿಯುವ ಈ ಮಳೆ ಭೂಮಿಯ ಮೇಲಿನ ಎಲ್ಲಾ ಕೆಸರು, ಕೊಳೆಯನ್ನು ಕೊಚ್ಚಿಕೊಂಡು ಹೋಗುವುದು ಎಂದು ಕವನದಲ್ಲಿ ಹಾಡಿದ್ದಾರೆ.”[೬೫]

ಮೇಲಿನ ಕವನಕ್ಕೂ ಕೆಳಗಿನ ವಿಮರ್ಶೆ ಎಂಬ ಹೆಸರಿನ ಸಾರಾಂಶಕ್ಕೂ ಇರುವುದು ಒಂದೇ ವ್ಯತ್ಯಾಸ. ಅದು, ಮೇಲೆ ಪದ್ಯವಾಗಿರುವುದು ಕೆಳಗೆ ಗದ್ಯವಾಗಿದೆ. ದಲಿತ ಕಾವ್ಯದಲ್ಲಿ ಮಳೆಯೇ ಒಂದು ರೂಪಕವಾಗಿ ನಿಲ್ಲುತ್ತದೆ. ಆದರೆ ಇಲ್ಲಿ ಅದನ್ನು ರೂಪಕವಾಗಿ ಗ್ರಹಿಸದೆ ಕೇವಲ ವಾಚ್ಯಾರ್ಥದ ಸಾರಾಂಶದಲ್ಲಿ ಗ್ರಹಿಸಲಾಗಿದೆ. ಹಾಗೆಯೇ ಪಾತ್ರೋಟರ ಮತ್ತೊಂದು ಕವನ ಕುರಿತ ವಿಶ್ಲೇಷಣೆ ಹೀಗಿದೆ; “ನೋವಿರದ, ನೋವುಗಳರಿಯದವರು ನೊಂದು ನೋವಿನ ಪಾಡನ್ನು ಅವರೇನು ಬಲ್ಲರು? ಕ್ಷಣ ಕ್ಷಣಕ್ಕೊಂದು ನೋವು ಕಾಡುತಿಹವು. ಒಂದರ ನಂತರ ಮತ್ತೊಂದು ನೋವುಗಳೇ ತುಂಬಿರುವಾಗ ಎದೆ ತುಂಬ, ಎದೆಯೊಳಗಿನ ನೋವನ್ನು ಯಾರಿಗೆ ಹೇಳಲಿ, ಹೇಗೆ ಹೇಳಲಿ? ಎಂದು ಕವಿ ಇಲ್ಲಿ ನೋವಿನಿಂದ ನುಡಿದಿದ್ದಾನೆ.”[೬೬] ಈ ರೀತಿಯ ಸಾರಾಂಶಗಳು ದಲಿತ ಕಾವ್ಯದ ಅರ್ಥವ್ಯಾಪ್ತಿಯನ್ನು ಸಂಕುಚಿತಗೊಳಿಸಿವೆ.

‘ಸಿದ್ಧಲಿಂಗಯ್ಯನವರ ಕಾವ್ಯಗಳಲ್ಲಿ ಭಾಷೆ : ಒಂದು ಅಧ್ಯಯನ’ ಎಂಬ ಮಂಜುಳ ಅವರ ಎಂ.ಫಿಲ್. ಸಂಪ್ರಬಂಧದಲ್ಲಿ ಸಿದ್ಧಲಿಂಗಯ್ಯ ಅವರ ಕಾವ್ಯ ಭಾಷೆ ಕುರಿತಾದ ಚರ್ಚೆಗೆ ಒತ್ತು ನೀಡಿದ್ದಾರೆ. ಕವಿಯ ‘ಇಕ್ರಲಾ ವದೀರ್ಲಾ, ಈ ನನ್ ಮಕ್ಳ ಚರ್ಮ ಎಬ್ರುಲಾ’ ಎನ್ನುವ ಕಾವ್ಯದ ಸಾಲುಗಳನ್ನು ಕುರಿತ ವಿಶ್ಲೇಷಣೆ ಹೀಗಿದೆ. “ಮೇಲಿನ ಕವನದಲ್ಲಿ ಕಂಡುಬರುವ ಪದಗಳನ್ನು ಗಮನಿಸಿದಾಗ ವಾಚ್ಯ ರಚನೆ ಇದೆ. ಇಲ್ಲಿ ಕವನವನ್ನು ಬರೆಯುವುದಕ್ಕೋಸ್ಕರ ಮಾತ್ರ ಪದಗಳ ರಚನೆಯನ್ನು ಮಾಡಿಕೊಂಡಿದ್ದಾರೆ. ಇಕ್ರಲಾ ವದೀರ್ಲಾ

ಇಂತಹ ಪದಗಳು ಅವಿದ್ಯಾವಂತ ಮತ್ತು ಭಾಷೆಯ ನಾಗರೀಕತೆ ಇಲ್ಲದವರು ಬಳಸುವಂತಹ ಸಂದರ್ಭವನ್ನು ತೋರಿಸುತ್ತದೆ ಎನಿಸಿದರೂ ಅವರ ಆಕ್ರೋಶ ಎಂತಹುದು ಎಂಬುದನ್ನು ಕವನದ ಭಾಷೆ ವ್ಯಕ್ತಪಡಿಸುತ್ತದೆ. ಈ ಸಂಕಲನದಲ್ಲಿ ಹೆಚ್ಚಾಗಿ ಉತ್ಪ್ರೇಕ್ಷೆ ಕಂಡುಬರುತ್ತದೆ."[೬೭]

ಇನ್ನೂ ಮುಂದೆ ಹೋಗಿ ಈ ಸಂಶೋಧಕರು ಕಾವ್ಯದ ಪದಗಳಿಂದ ಹೊರಹೊಮ್ಮಬಹುದಾದ ಸಂಧಿಗಳ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ. ಉದಾ:ಗೆ "ಬೆಟ್ಟ+ಅಲ್ಲಿ = ಬೆಟ್ಟದಲ್ಲಿ, ಇಲ್ಲಿ ಬೆಟ್ಟ ಎಂಬುದು ನಾಮಪದವಾದರೆ ಅಲ್ಲಿ ಎಂಬುದು ಪ್ರತ್ಯಯವಾಗುತ್ತದೆ. ವಿಗ್ರಹ ವಾಕ್ಯವನ್ನು ಕೂಡಿಸಿ ಬರೆದಾಗ ಅದೊಂದು ಸಂಧಿಯಾಗುತ್ತದೆ. ಅದೇ ಆಗಮಸಂಧಿ."[೬೮] ಈ ರೀತಿಯ ವಿವರಣೆಗಳಿಂದ ದಲಿತ ಕಾವ್ಯಕ್ಕೆ ಯಾವ ರೀತಿಯ ಅರ್ಥ ಸಾಧ್ಯತೆಗಳು ಸಿಕ್ಕಿವೆಯೋ ಗೊತ್ತಿಲ್ಲ. ಇಲ್ಲಿ ವಿಮರ್ಶೆ ಹೆಸರಿನ ವಿವರಣೆ ಇದೆ. ಆ ವಿವರಣೆಯೂ ಕೂಡ ವಸ್ತುಸ್ಥಿತಿಯಿಂದ ದೂರವಾಗಿದೆ. 'ಕವನವನ್ನು ಬರೆಯುವುದಕ್ಕೋಸ್ಕರ ಮಾತ್ರ ಪದಗಳ ರಚನೆಯನ್ನು ಮಾಡಿಕೊಂಡಿದ್ದಾರೆ' ಎಂದು ಹೇಳುತ್ತಿರುವ ಈ ವಿವರಣೆ ದಲಿತ ಕಾವ್ಯದ ಪದದ ಹಿಂದೆ ಅಡಗಿರುವ ಅಭಿವ್ಯಕ್ತಿ ನೆಲೆಯನ್ನು ಸೂಕ್ತವಾಗಿ ಗ್ರಹಿಸಿಲ್ಲ.

'ಸಿದ್ಧಲಿಂಗಯ್ಯನವರ ಕಾವ್ಯದಲ್ಲಿ ಕ್ರಾಂತಿಕಾರಿ ಚಿಂತನೆಗಳು' ಎಂಬ ಎಂ.ಫಿಲ್. ಸಂಪ್ರಬಂಧದಲ್ಲಿ ಸಂಶೋಧಕರು ಕವಿಯ ಕಾವ್ಯ ಕುರಿತು ವಿಶ್ಲೇಷಿಸಿರುವ ರೀತಿ ಹೀಗಿದೆ,

"ದಣಿಗಳ ಹಬ್ಬದ ಊಟಕ್ಕಾಗಿ
ಖಂಡವ ಕಿತ್ತು ಕೊಟ್ಟವರು
ನೆಲದಾಧಾರ ತಪ್ಪಿದ ಜನರು
ಮುಗಿಲಿನ ಆಸರೆ ಸಿಗದವರು

ಈ ಕವಿತೆಯು ಅಂದಿನ ದಲಿತರು ಊಟಕ್ಕಾಗಿಯೇ ಜಮೀನುದಾರರ ಮನೆಯಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೂ ದುಡಿಯಬೇಕಾಗಿತ್ತು ಎನ್ನುವ ಮಾತು ಮತ್ತು ನೆಲದ ಅಂದರೆ ಭೂಮಿಯ ಹಕ್ಕು ಅವರಿಗಿಲ್ಲ. ದಲಿತರು ಭೂಮಿ ಹೊಂದಬಾರದು ಎನ್ನುವ ಸ್ಥಿತಿಯಲ್ಲಿ ಬದುಕಿದ್ದವರು ಎಂದು ತಿಳಿಸುತ್ತದೆ."[೬೯] ಇಲ್ಲಿ 'ಅಂದಿನ ದಲಿತರು ಊಟಕ್ಕಾಗಿ ಪರದಾಡುತ್ತಿದ್ದರು' ಎನ್ನುವ ವಿಶ್ಲೇಷಣೆ ಇಂದಿನ ದಲಿತರು ಆ ಪರಿಸ್ಥಿತಿಯಲ್ಲಿ ಇಲ್ಲ ಎನ್ನುವ ಅಂಶವನ್ನು ಒತ್ತಿ ಹೇಳಿದಂತೆ ಭಾಸವಾಗುತ್ತದೆ. ಇನ್ನೂ ಮುಂದುವರಿದು ಸಂಶೋಧಕರು ಸಿದ್ಧಲಿಂಗಯ್ಯ ಅವರ ಕಾವ್ಯ ಕುರಿತು ಹೀಗೆ ಹೇಳಿದ್ದಾರೆ. "ಸಿದ್ಧಲಿಂಗಯ್ಯನವರು ಇತರೆ ಕವಿಗಳಂತೆ ಹೋಲಿಕೆ ಮತ್ತು ಪ್ರತಿಮೆಗಳನ್ನು ನೀಡುತ್ತಾ ಕಾವ್ಯ ಬರೆಯದೆ, ಇಡೀ ವ್ಯವಸ್ಥೆಯಲ್ಲಿನ ಜಾತಿಪದ್ಧತಿ, ಅಸಮಾನತೆ, ಅನ್ಯಾಯ, ಅಕ್ರಮಗಳೆಲ್ಲವನ್ನು ಪ್ರತಿಭಟಿಸುವ ಪ್ರತಿಭಟನೆಯ ಅಸ್ತ್ರಗಳಾಗಿದ್ದವು. ಶೋಷಕರಿಗೆ, ಶೋಷಿತರ ರೋಷ ಆಕ್ರೋಶದ ಸಿಟ್ಟನ್ನು

ಮುಟ್ಟಿಸುವ ಬೆಂಕಿಯ ಜ್ವಾಲೆಗಳಾಗಿ ಹೊರಹೊಮ್ಮಿದವು. ಇವರ ಕಾವ್ಯದಲ್ಲಿ ರೂಪಕ ಪ್ರತಿಮೆಗಳು ತುಂಬಾ ಕಡಿಮೆ ಇದ್ದರೂ ಸಹ ಇವರ ಬರವಣಿಗೆ ನೇರವಾದ ನುಡಿಗಳಿಂದ ಕೂಡಿದವುಗಳಾಗಿವೆ"[೨೦] ಇದು ಸಿದ್ಧಲಿಂಗಯ್ಯ ಅವರ ಕಾವ್ಯದ ಮೇಲ್ನೋಟದ ಗ್ರಹಿಕೆಯೇ ಹೊರತು, ಇಡಿಯಾಗಿ ಗ್ರಹಿಸಿರುವ ವಿಧಾನವೇ ಇಲ್ಲಿ ಕಂಡುಬರುವುದಿಲ್ಲ. 'ಸಿದ್ಧಲಿಂಗಯ್ಯ ಅವರ ಕಾವ್ಯದಲ್ಲಿ ಪ್ರತಿಮೆ ರೂಪಕಗಳು' ತುಂಬಾ ಕಡಿಮೆ ಎನ್ನುವ ಮೇಲಿನ ವಿವರಣೆ ಮತ್ತು ದಲಿತ ಕಾವ್ಯದಲ್ಲಿ ಉತ್ಪ್ರೇಕ್ಷೆ ಹೆಚ್ಚಿದೆ ಎನ್ನುವ ಆಲೋಚನೆಗಳು ದಲಿತ ಕಾವ್ಯ ನೋಡುವ ಸಾಂಪ್ರದಾಯಿಕ ನೆಲೆಗಳಿಂದ ಬಂದವುಗಳೇ ಹೊರತು, ದಲಿತರ ಹಿತಾಸಕ್ತಿಯ ಹಿನ್ನೆಲೆಯಿಂದ ಬಂದವುಗಳಲ್ಲ.

ಮೇಲಿನ ವಿಮರ್ಶೆಗಳನ್ನು ಸಾರಾಂಶ ಎಂದು ಕರೆದುದರಲ್ಲಿ ಉದ್ದೇಶವಿದೆ. ಸಮಗ್ರ ದಲಿತ ಕಾವ್ಯವನ್ನು ಇಲ್ಲಿ ಪರಿಗಣಿಸಿಲ್ಲ. ಕೇವಲ ಸಿದ್ದಲಿಂಗಯ್ಯನವರ ಕವಿತೆಯ ಒಂದೆರಡು ಸಾಲುಗಳನ್ನು ತೆಗೆದುಕೊಂಡು ಅದಕ್ಕೆ ವಿವರಣೆ ಕೊಟ್ಟು ಅದನ್ನೇ ವಿಮರ್ಶೆ ಎಂಬ ಹೆಸರಿನಲ್ಲಿ ಪ್ರಕಟಿಸಲಾಗಿದೆ. ಇಂತಹ ಬರವಣಿಗೆಗಳು ಕವಿತೆಯ ಸಾರಾಂಶ ಹೇಳಲಿಕ್ಕಷ್ಟೇ ಸಾಧ್ಯವೇ ಹೊರತು ಮತ್ತೇನನ್ನೂ ಹೇಳಲು ಸಾಧ್ಯವಿಲ್ಲ. ಈ ಸ್ವರೂಪದಲ್ಲಿ ಬಹಳಷ್ಟು ಲೇಖನಗಳು ಬಂದಿವೆ.

'ದೇವನೂರ ಮಹಾದೇವ ಮತ್ತು ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ದಲಿತ ಪ್ರಜ್ಞೆ' ಎನ್ನುವ ಎಂ.ಫಿಲ್. ಸಂಪ್ರಬಂಧ ದಲಿತ ಪ್ರಜ್ಞೆಯ ವಿವಿಧ ಆಯಾಮಗಳನ್ನು ಅವಲೋಕಿಸುವ ಬದಲು ಮೊದಲೇ ಸೂಚಿಸಿದ ಹಾಗೆ ಪದ್ಯಕ್ಕೆ ವಿವರಣೆ ಬರೆಯುವ ರೀತಿಯಲ್ಲಿ ವಿವರಿಸಿದೆ. ಸಿದ್ಧಲಿಂಗಯ್ಯ ಅವರ 'ಬೆಲ್ಚಿಯ ಹಾಡು' ಕವನ ಕುರಿತ ಅಭಿಪ್ರಾಯ ಹೀಗಿದೆ; "ಬೆಲ್ಚಿಯ ಹಾಡು ಕವನದ ಮಾತುಗಳು ದಲಿತರನ್ನು ಚೆನ್ನಾಗಿ ಕಡೆದು ನಿಲ್ಲಿಸುತ್ತದೆ. ಶ್ರೀಮಂತರು ದಲಿತರನ್ನು ಕೇವಲ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಷ್ಟೇ ಶೋಷಿಸುವುದಿಲ್ಲ. ಲೈಂಗಿಕವಾಗಿಯೂ ಶೋಷಣೆ ಮಾಡುತ್ತಾರೆ. ಇದೇ ಕವನದ 'ಅವರ ಅಮಲಿನ ಗುಂಗಿನಲ್ಲಿ ಕೂಲಿ ಹೆಣ್ಣಿನ ಕಣ್ಣೀರು' ಎನ್ನುವ ಸಾಲುಗಳು ಈ ಅಂಶವನ್ನು ಸ್ಪಷ್ಟಪಡಿಸುತ್ತವೆ."[೨೧] ಇದು ಇದುವರೆಗೆ ಬಂದ ದಲಿತ ಕಾವ್ಯದ ಸಾಮಾನ್ಯ ವಿವರಣೆಗಳ ಕಡೆಗೇ ಕರೆದೊಯ್ಯುತ್ತದೆ. ದುಡಿಮೆಯ ವಿವಿಧ ಮುಖಗಳ ಅನಾವರಣ ದಲಿತ ಕಾವ್ಯದಲ್ಲಿದೆ. ಈ ದುಡಿಮೆಯಲ್ಲಿಯೇ ಶತಮಾನಗಳ ಬದುಕು ಸವೆಸಿದ ದಲಿತರ ವಾಸ್ತವತೆ ಇದೆ. ಪ್ರತಿಯೊಂದು ವಸ್ತುವಿನ ಹಿಂದೆ ಅಡಗಿರುವ ಶ್ರಮಿಕರ ಬೆವರು, ಇವೆಲ್ಲವುಗಳ ನಿರೂಪಣೆಯೇ ಕಾವ್ಯವಾಗಿ ರೂಪುಗೊಂಡಿದೆ. ಆದರೆ ಮೇಲಿನ ಅಭಿಪ್ರಾಯ ಮಾತ್ರ ಅದಕ್ಕೊಂದು ಚೌಕಟ್ಟನ್ನು ಒದಗಿಸಿದಂತೆ ಕಂಡುಬರುತ್ತದೆ.

ಮೇಲಿನ ಕವನಕ್ಕೆ ಚಂದ್ರಕಾಂತ್ ವಿ. ಚವ್ಹಾಣ್ ಅವರ ಪ್ರತಿಕ್ರಿಯೆ ಹೀಗಿದೆ; "ಊರಗೌಡರ ಹಟ್ಟಿ, ನಿಂತಿರುವುದು ದುಡಿವ ಜನಗಳ ದುಡಿಮೆಯ ಆಧಾರದ ಮೇಲೆ.

ಶ್ರೀಮಂತರ ಬೇಕು–ಬೇಡಗಳಿಗೆ ದುಡಿಮೆಗಾರರ ಬದುಕು ವಸ್ತುವಾಗಿರುವುದನ್ನು ಬಹು ಸುಂದರವಾಗಿ ವರ್ಣಿಸಲಾಗಿದೆ."[೭೨] ಇಲ್ಲಿ ಕಾಡಿಸುವ ಪ್ರಶ್ನೆಯೆಂದರೆ ಯಾವುದು ಸುಂದರ? ಈ ಪರಿಕಲ್ಪನೆಯೇ ದಲಿತ ನೆಲೆಯ ಆಚೆಯಿಂದ ಬಂದದ್ದು. ಏಕೆಂದರೆ ದಲಿತ ಕವಿಗಳು ತನ್ನ ಜನರ ದಿನನಿತ್ಯದ ವೇದನೆಗಳನ್ನೇ ಹಾಡಾಗಿ ಕಟ್ಟಿಕೊಟ್ಟಂತವರು. ಈ ಹಾಡು ನೋವಿನಿಂದ ಜನ್ಮ ತಾಳಿ, ನೋವನ್ನೇ ಬಿತ್ತುತ್ತದೆ. ಆದರೆ ಇದರ ವಿಮರ್ಶೆ ಮಾತ್ರ ಸುಂದರ, ಮನೋಹರ, ಆಹ್ಲಾದವೆಂಬ ಕಾವ್ಯ ನೋಡುವ ಪಾರಂಪರಿಕ ಶೈಲಿಯಲ್ಲಿ ವಿವರಿಸುತ್ತಿದೆ. ಇದು ದಲಿತ ಕಾವ್ಯವನ್ನು ಮಿತಿಯೊಳಗೆ ನೋಡುವ ಹಿನ್ನೆಲೆಯನ್ನು ತೋರಿಸುತ್ತದೆ.

ಹಾಗೆಯೇ ಸಿದ್ಧಲಿಂಗಯ್ಯ ಅವರ 'ಕತ್ತೆ ಮತ್ತು ಧರ್ಮ' ಕವನ ಕುರಿತು ವಿವರಣೆಗೊಂಡಿರುವ ಬಗೆ ಹೀಗಿದೆ; "ಕತ್ತೆ ಮತ್ತು ಧರ್ಮ– ಕವಿ ಈ ಕವಿತೆಯ ಮೂಲಕ ಜನಗಳ ಮೂರ್ಖತೆಯನ್ನು, ಧರ್ಮದ ಹಿನ್ನೆಲೆಯಲ್ಲಿ ಧರ್ಮವನ್ನು ಸೇರಿಸಿದ ಹಾಗೆ ವಿಡಂಬನೆ ಮಾಡಿದ್ದಾರೆ. ಕತೆಯೊಂದನ್ನು ಹೇಳುವುದರ ಮೂಲಕ ವಾಸ್ತವ ಸ್ಥಿತಿಯನ್ನು ಈ ಕವನದಲ್ಲಿ ಪಡಿಮೂಡಿಸಿದ್ದಾರೆ."[೭೩] ಇದು ಕವಿತೆಯ ಅಂತರಾಳಕ್ಕೆ ಇಳಿಯದ ವ್ಯಾಖ್ಯಾನವಾಗಿ ನಿಲ್ಲುತ್ತದೆ. ಇಂತಹ ಸಾರಾಂಶಗಳ ಹಿನ್ನೆಲೆಯನ್ನು ಹೊರತುಪಡಿಸಿದ ಚರ್ಚೆಯು ಪ್ರಸ್ತುತ ಅಧ್ಯಯನದಲ್ಲಿ ಸಾಗಿದೆ.

ದಲಿತ ಕಾವ್ಯದೊಳಗಿನ ಧೋರಣೆ, ಆಶಯ, ಭಾಷಾಭಿವ್ಯಕ್ತಿ ಇವುಗಳನ್ನು ಪ್ರಧಾನವಾಗಿ ಇಲ್ಲಿನ ಚರ್ಚೆಗಳು ಪರಿಗಣಿಸಿಲ್ಲ, ದಲಿತ ಕಾವ್ಯ ಕುರಿತಾದ ಮೇಲ್ನೋಟದ ಗ್ರಹಿಕೆಗಳನ್ನೇ ನಿಜವೆಂದು ಭ್ರಮಿಸಲಾಗಿದೆ. ಕಾವ್ಯದ ಸಾಧಕ–ಬಾಧಕಗಳತ್ತ ಗಮನ ಹರಿಸಲೇ ಇಲ್ಲ. ಈ ಧೋರಣೆಗಳಿಂದಾಗಿಯೇ ದಲಿತ ಕಾವ್ಯ ಕುರಿತಾದ ಅನೇಕ ಉಪದೇಶಗಳೂ ಬರತೊಡಗಿದವು. ಇದಕ್ಕೆ ದಲಿತ ಕಾವ್ಯದೊಳಗಿನ ಭಿನ್ನತೆಯೂ ಕಾರಣವಿರಬಹುದು. ಇದಕ್ಕೆ ಪೂರಕವೆಂಬಂತೆ ಮ.ನ.ಜ. ಅವರ 'ವಿದ್ರೋಹ' ಕೃತಿಯ ಮುನ್ನುಡಿಯಲ್ಲಿ "ಜವರಯ್ಯನವರ ಕಾವ್ಯದಲ್ಲಿ ಕಂಡಿದ್ದೇನೆ, 'ಹೊಲೆಯ', 'ಮಾದಿಗ' ಎಂಬಂತಹ ಪದಗಳನ್ನೆಲ್ಲ. ಅವರು ಇವುಗಳನ್ನು ತಮ್ಮ ಕಾವ್ಯದಲ್ಲಿ ಬಳಕೆ ಮಾಡುತ್ತಾರೆ. ಅಂತಹ ಪದಗಳನ್ನೆಲ್ಲ ಹಾಗೆ ಬಳಕೆ ಮಾಡುವ ಬಗೆಗೆ ಅವರ ಅಭಿಪ್ರಾಯ ಏನೇ ಇದ್ದರೂ ಆ ಪದಗಳನ್ನೆಲ್ಲ ಹಾಗೆ ಬಳಸುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ"[೭೪] ಎಂಬಂತಹ ಸಾಂಪ್ರದಾಯಿಕ ಉಪದೇಶವಿದೆ. ದಲಿತ ಕಾವ್ಯ ಕುರಿತಾದ ಸಾಂಪ್ರದಾಯಿಕ ವಿಮರ್ಶಾ ವಿಧಾನಗಳು ಇಂತಹ ಹೇಳಿಕೆಗಳನ್ನು ಯಾವ ಎಗ್ಗಿಲ್ಲದೆ ನೀಡುತ್ತಿವೆ. ಇಂತಹ ಉಪದೇಶಗಳು ಹೊರಬರಲು ಎಲ್ಲೋ ಒಂದು ಕಡೆ ಈ ಸಾರಾಂಶ ವಿಧಾನದ ಅಧ್ಯಯನವೂ ಪ್ರಮುಖ ಪಾತ್ರವನ್ನು ವಹಿಸಿದೆ.

'ಸತ್ಯಾನಂದ ಪಾತ್ರೋಟರ ಕಾವ್ಯ' ಲೇಖನದಲ್ಲಿ ಕ್ಯಾತಮಾರನಹಳ್ಳಿ ಉಮೇಶ್ ಅವರು ಪಾತ್ರೋಟರು 'ಗಾಂಧಿ' ಕುರಿತು ಬರೆದ ಕವನವನ್ನು ಸಾರಾಂಶೀಕರಿಸಿರುವ ಬಗೆ ಹೀಗಿದೆ;

“ದಲಿತರ ಉದ್ಧಾರಕ್ಕಾಗಿ ತನ್ನ ಜೀವಮಾನವನ್ನೇ ಮುಡುಪಾಗಿಟ್ಟ ಗಾಂಧಿಯ ಬಗೆಗಿನ ಕವನಗಳು ಪಾತ್ರೋಟರ ಕವನ ಸಂಕಲನಗಳಲ್ಲಿ ಕಂಡುಬರುತ್ತವೆ.”[೭೫] ಈ ಹೇಳಿಕೆಯನ್ನು ಸಮರ್ಥಿಸಲು ಅವರು ಕೊಡುವ ಕವನದ ಸಾಲುಗಳು ಮತ್ತು ಅದರ ಸಾರಾಂಶವು ಈ ಕೆಳಗಿನಂತಿದೆ.

“ಹರಿಯ ಮಕ್ಕಳ ಬಾಯಿಗೆ ಮಲಮೂತ್ರ ಸಿಂಚನ
ಹಗಲಲ್ಲೂ ದರೋಡೆ ಅಬಲೆಯರ ಮೈಮಾನ
ಮೊಲೆ ಕುಡಿವ ಕೂಸಿಗೂ ಬಂದೂಕಿನ ಉತ್ತರ
ಹೇಳಯ್ಯ ಹೇಳೋ ಬಡಕಲು ಮುದುಕ
ಮಾಡಲಿ ಯಾವ ಮೊಗದಿಂದ ಜಯಂತಿ

ಈ ಮೇಲಿನ ಸಾಲುಗಳಲ್ಲಿ ಕವಿ ದಲಿತರ ಮೇಲಿನ ದೌರ್ಜನ್ಯ ಅಂತ್ಯವಾಗಿಲ್ಲ ಎಂದು ಹೇಳುತ್ತಾ ಗಾಂಧಿಯ ಬಗೆಗಿನ ಅಪಾರ ಪ್ರೀತಿ ಮತ್ತು ಗೌರವವನ್ನು ಹೇಳಿದ್ದಾರೆ”[೭೬] ಎನ್ನುವ ಈ ಸಾರಾಂಶ ದಲಿತ ಕಾವ್ಯದ ಸಾರಾಂಶದ ನಿರೂಪಣೆಗೆ ಹೆಚ್ಚು ಒತ್ತು ಕೊಡುವುದಿರಲಿ ದಲಿತ ಕಾವ್ಯದ ವಿಶ್ಲೇಷಣೆಯನ್ನೇ ದಿಕ್ಕು ತಪ್ಪಿಸುವ ಕಡೆಗೆ ಸಾಗಿದೆ. ಕಾವ್ಯದಲ್ಲಿ ಗಾಂಧಿಯ ‘ಹರಿಜನ’ ಪರಿಕಲ್ಪನೆಯನ್ನು ವ್ಯಂಗ್ಯ ನೆಲೆಯಲ್ಲಿ ನೋಡಲಾಗಿದೆ. ಆದರೆ ಈ ವಿಮರ್ಶೆ ಹೆಸರಿನ ಸಾರಾಂಶ ಮಾತ್ರ ಗಾಂಧಿಯನ್ನು ಕೊಂಡಾಡಲಾಗುತ್ತಿದೆ ಎಂಬುದನ್ನು ನಿರೂಪಿಸುತ್ತಿದೆ. ದಲಿತ ಕಾವ್ಯದ ಅಧ್ಯಯನದಲ್ಲಿ ಇಂತಹವುಗಳ ಬಗ್ಗೆ ಎಚ್ಚರಿರುವುದು ಒಳ್ಳೆಯದು.

‘ಶ್ರೀ ಶ್ರೀ ಮತ್ತು ಸಿದ್ಧಲಿಂಗಯ್ಯ ತೌಲನಿಕ ಅಧ್ಯಯನ’ ಎನ್ನುವ ಪಿ.ಎಚ್‌ಡಿ. ಮಹಾಪ್ರಬಂಧವು ಕನ್ನಡದ ಸಿದ್ಧಲಿಂಗಯ್ಯ ಮತ್ತು ತೆಲುಗಿನ ಶ್ರೀ ಶ್ರೀ ಅವರ ಕಾವ್ಯವನ್ನು ಪರಾಮರ್ಶಿಸಿದೆ. ಇವರಿಬ್ಬರ ಕಾವ್ಯದ ನಡುವಿನ ಸಾಮ್ಯತೆ, ಭಿನ್ನತೆ, ದಲಿತ ಹೋರಾಟಕ್ಕೆ ಕೊಡುಗೆ ಮುಂತಾದವುಗಳನ್ನು ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ಈ ಪ್ರಬಂಧದಲ್ಲಿ ಇಬ್ಬರ ಕಾವ್ಯ ಕುರಿತ ವಿಶ್ಲೇಷಣೆ ಹೀಗಿದೆ; “ಸಿದ್ಧಲಿಂಗಯ್ಯನವರ ‘ಕತ್ತೆ ಮತ್ತು ಧರ್ಮ’, ಶ್ರೀ ಶ್ರೀಯವರ ‘ನಿನ್ನೆಯ ಜಟಕಾವಾಲ’ ಹೋಲಿಸಿ ನೋಡಬಹುದಾದ ಕಥನ ಗೀತೆಗಳು. ಇಲ್ಲಿ ಇಬ್ಬರಲ್ಲೂ ದೃಷ್ಟಿ ಭಿನ್ನತೆಗಳಿವೆ. ನಿರೂಪಣಾ ವೈವಿಧ್ಯಗಳಿವೆ. ಸಿದ್ಧಲಿಂಗಯ್ಯನವರ ಕತ್ತೆ ಮತ್ತು ಧರ್ಮದಲ್ಲೂ ಲೋಕದ ಧಾರ್ಮಿಕ ಮೌಢ್ಯತೆಯೇ ಕಥನವಾಗಿದೆ. ದೇವರು ಮತ್ತು ಧರ್ಮಗಳು ಹೇಗೆ ಸಾಮಾನ್ಯರ ಮೌಢ್ಯಗಳಿಂದಲೂ ತಮ್ಮ ಬೇಳೆ ಬೇಯಿಸಿಕೊಳ್ಳುವ ವಸ್ತುಗಳಾಗುತ್ತವೆ ಎಂಬುದನ್ನು ಕವಿ ಇಲ್ಲಿ ಸೂಕ್ಷ್ಮವಾಗಿ ಶ್ರೀಮಂತ, ರಾಜಕಾರಣಿ, ರಾಜನನ್ನು ತರುವುದರ ಮೂಲಕ ಇಡೀ ವ್ಯವಸ್ಥೆ ಹೇಗೆ ಸಾಮಾನ್ಯರನ್ನು ದೂರ ತಳ್ಳುತ್ತದೆ ಎಂಬುದನ್ನು

ಚಿತ್ರಿಸಿದ್ದಾರೆ."[೭೭] ಇಲ್ಲಿ ಧಾರ್ಮಿಕ ನೆಲೆಗಳ ಅನಾವರಣ ಮಾತ್ರ ಇದೆ ಎಂಬುದನ್ನು ಹೇಳಲಾಗಿದೆ. ಆದರೆ ಇಲ್ಲಿ ದುಡಿಮೆಯ ಅನೇಕ ನೆಲೆಗಳ ಶೋಧನೆಯಿದೆ. ಇದನ್ನು ಈ ಸಾರಾಂಶವು ಮರೆಮಾಚಿದೆ. ಕಾವ್ಯಕ್ಕೆ ವಿವರಣೆಯನ್ನಷ್ಟೇ ನೀಡಲಾಗಿದೆ. ಇಲ್ಲಿ ಸಾರಾಂಶ ಇದೆಯೇ ಹೊರತು ಬೇರೇನೂ ಇಲ್ಲ.

ಇನ್ನೂ ಮುಂದುವರಿದು ಈ ಇಬ್ಬರು ಕವಿಗಳ ಸಾಮ್ಯತೆಯನ್ನು ಹುಡುಕುತ್ತಾ "ಇಬ್ಬರನ್ನೂ ಉತ್ಪ್ರೇಕ್ಷಾಲಂಕಾರದ ಕವಿಗಳೆನ್ನಬಹುದು"[೭೮] ಎಂಬ ಹೇಳಿಕೆಯನ್ನೂ ನೀಡುತ್ತಾರೆ. ಇದು ಡಿ.ಆರ್. ನಾಗರಾಜ್ ಅವರು ಸಿದ್ಧಲಿಂಗಯ್ಯ ಅವರ ಆಯ್ದ ಕವಿತೆಗಳಿಗೆ ಮುನ್ನುಡಿ ಬರೆಯುತ್ತಾ "ಉತ್ಪ್ರೇಕ್ಷಾಲಂಕಾರ ಎಡಪಂಥೀಯ ಕಾವ್ಯದ ಸಹಜ ಧರ್ಮ ಎನ್ನುವುದಾದರೆ, ಸಿದ್ಧಲಿಂಗಯ್ಯ ಆ ಧರ್ಮದ ಅಧಿದೇವತೆ. ತೆಲುಗಿನಲ್ಲಿ ಶ್ರೀ ಶ್ರೀ ಕೂಡ ಇದೇ ರೀತಿಯ ಉತ್ಪ್ರೇಕ್ಷಾಲಂಕಾರದ ಚಕ್ರವರ್ತಿ!"[೭೯] ಎನ್ನುವ ಆಲೋಚನೆಗಳು ಮೇಲಿನ ಸಂಶೋಧನಾ ಪ್ರಬಂಧದ ಚರ್ಚೆಯನ್ನು ಪ್ರಭಾವಿಸಿರಬಹುದು. ಆದರೆ ಉತ್ಪ್ರೇಕ್ಷೆ ಎನ್ನುವುದು ವಸ್ತುಸ್ಥಿತಿ ಅಲ್ಲ ಎನ್ನುವುದನ್ನು ತೋರ್ಪಡಿಸುತ್ತದೆ. ಹಾಗಾದರೆ ದಲಿತ ಕಾವ್ಯ ವಸ್ತುಸ್ಥಿತಿಗೆ ಹೆಚ್ಚು ಒತ್ತು ನೀಡಲಿಲ್ಲವೇ ಎಂಬ ಪ್ರಶ್ನೆ ಕಾಡುತ್ತದೆ. ಇದರ ಬಗ್ಗೆ ಹೆಚ್ಚಿನ ಚರ್ಚೆಯನ್ನು ಮುಂದಿನ ಅಧ್ಯಾಯಗಳಲ್ಲಿ ಮಾಡಲಾಗಿದೆ.

'ಸುಟ್ಟಾವು ಬೆಳ್ಳಿ ಕಿರಣ' ಕೃತಿಯಲ್ಲಿ ಸಿದ್ಧಲಿಂಗಯ್ಯ ಅವರ ಒಟ್ಟು ಕವಿತೆ ಕುರಿತು ಕಾವ್ಯಾನುಸಂಧಾನ ನಡೆಸಿರುವ ಅಪ್ಪಗೆರೆ ಸೋಮಶೇಖರ್ ಅವರು ಕವಿಯ ಕಾವ್ಯ ಕುರಿತ ವಿವರಣೆ ಹೀಗೆ ಸಾಗಿದೆ. "ಕವಿ ಬಾಲ್ಯದಲ್ಲಿ ಕಂಡ ದಲಿತ ಸಮುದಾಯದ ಶೋಷಣೆಯ ಸ್ಥಿತಿಗತಿಗಳನ್ನು ಇಲ್ಲಿ ಕಾವ್ಯವಾಗಿಸಿದ್ದಾರೆ. ಈ ಹಿಂದೆ ಚರ್ಚಿಸಿದ 'ನನ್ನ ಜನಗಳು' ಕವಿತೆಯು ದಲಿತರ, ರೈತರ, ಕೂಲಿಕಾರ್ಮಿಕರ, ಬಡತನದ ಸ್ಥಿತಿಯನ್ನು ಕಟ್ಟಿಕೊಡುತ್ತಲೇ, ಅವರ ಶೋಷಿತ ಬದುಕಿನ ಎಲ್ಲ ನೆಲೆಗಳನ್ನು ಪರಿಚಯಿಸುತ್ತಾ ಹೋಗುತ್ತದೆ. ಶೋಷಣೆಗೆ ಒಳಪಟ್ಟ ಎಲ್ಲಾ ವರ್ಗದ ಜನರನ್ನು ಕವಿ 'ನನ್ನ ಜನಗಳು' ಎಂಬುದಾಗಿ ಅರ್ಥೈಸಿಕೊಂಡಿದ್ದಾರೆ. 'ನನ್ನ ಜನಗಳು' ಕವಿತೆಯು ವರ್ಗ ವ್ಯವಸ್ಥೆಯೊಳಗಿನ ಶೋಷಣೆಯ ಪರಿಯನ್ನು ವಾಸ್ತವ ನೆಲೆಯಲ್ಲಿ ಬಿಂಬಿಸುತ್ತದೆ."[೮೦] ಈ ವಿಶ್ಲೇಷಣೆ ಇದುವರೆಗೆ ಬಂದ ಕಾವ್ಯ ವಿಮರ್ಶೆಯನ್ನೇ ನೆನಪಿಸಿದರೂ, ಕವಿ ಬಾಲ್ಯದಲ್ಲಿ ಕಂಡ ಶೋಷಣೆ ಎನ್ನುವುದರ ಮೂಲಕ ಕವಿಯೊಬ್ಬರಿಗೇ ಈ ಶೋಷಣೆಯ ತೀವ್ರತೆಯನ್ನು ಮೀಸಲು ಮಾಡುವ ಪ್ರಯತ್ನ ನಡೆದಂತೆ ತೋರುತ್ತದೆ. ದಲಿತ ಕಾವ್ಯ ಸಮಷ್ಠಿ ಕಾವ್ಯ. ಆದ್ದರಿಂದ ಕಾವ್ಯ ಏನನ್ನು ಹೇಳುತ್ತಿದೆ ಎಂಬುದು ಮುಖ್ಯವಾಗಬೇಕು. ಕಾವ್ಯ ಹುಟ್ಟುಹಾಕುವ ಪ್ರತಿಯೊಂದು ಪ್ರತಿಭಟನೆಯೂ ಸಮುದಾಯಕ್ಕೆ ಸಂಬಂಧಿಸಿದ್ದು. ಇದರ ವಿಶ್ಲೇಷಣೆ ಅಲ್ಲಿಂದಲೇ ಮೂಡಬೇಕು.

ಮುಂದುವರಿದು ಲೇಖಕರು ಸಿದ್ಧಲಿಂಗಯ್ಯ ಅವರ ಕಾವ್ಯದ ಆರಾಧನೆಯಲ್ಲಿ ತೊಡಗಿ "ಸಿದ್ಧಲಿಂಗಯ್ಯನವರು ಶೋಷಣೆಗೆ ಕಾವ್ಯದ ಮೆರುಗನ್ನು ಲೇಪಿಸಿ, ಹಾಡಾಗಿಸಿದ

[illegible]

ಮೊಟ್ಟಮೊದಲ ಮಹತ್ವದ ದಲಿತ ಕವಿ. ಶೋಷಣೆಯ ತೀವ್ರತೆ ಕವಿಯ ವೈಯಕ್ತಿಕ ತಳಮಳವಾದಾಗ ಮಾತ್ರ ಹಾಡಾಗಿ ಹೊರಹೊಮ್ಮಲಿಕ್ಕೆ ಸಾಧ್ಯ"[೮೧] ಎನ್ನುವ ತೀರ್ಮಾನಕ್ಕೂ ಬಂದು ಬಿಡುತ್ತಾರೆ. ಲಿಖಿತ ಪರಂಪರೆ ಮತ್ತು ವೈಯಕ್ತಿಕ ಆರಾಧನೆಯ ಹಿಂದೆ ದಲಿತ ಪ್ರಜ್ಞೆಯ ಅರಿವು ಧೂಳೀಪಟವಾಗುತ್ತದೆ. ಈ ವಾಸ್ತವತೆ ಬಹುಶಃ ಲೇಖಕರಿಗೆ ಇದ್ದಂತೆ ಕಾಣುವುದಿಲ್ಲ. ಬಹುತೇಕ ದಲಿತ ಕಾವ್ಯ ಕುರಿತಾದ ವಿಮರ್ಶೆಗಳು ಸಮುದಾಯದ ನೆಲೆಯಲ್ಲಿ ಶೋಷಣೆಯನ್ನು ನೋಡುವ ಬದಲು ಕವಿಯ ವೈಯಕ್ತಿಕತೆ ನೆಲೆಗೆ ಅಂಟಿಕೊಂಡಿವೆ. ಇದು ವಾಸ್ತವವೇ ಇರಬಹುದು. ಶೋಷಣೆ ವೈಯಕ್ತಿಕ ಅನುಭವವಾದಾಗ ಪ್ರತಿರೋಧದ ತೀವ್ರತೆ ಅಭಿವ್ಯಕ್ತಗೊಳ್ಳುವುದು ಬಹಳ ಮುಖ್ಯ. ಆದರೆ ಇದೇ ಶೋಷಣೆ ಕಾವ್ಯದಲ್ಲಿ ಕೇವಲ ವೈಯಕ್ತಿಕ ನೆಲೆಗೆ ಸೀಮಿತಗೊಳ್ಳದೆ ಸಮುದಾಯದ ತಲ್ಲಣಗಳಾಗಿ ಅಭಿವ್ಯಕ್ತಗೊಂಡಿರುತ್ತದೆ. ದಲಿತ ಕವಿಗಳ ಶೋಷಣೆ ಖಾಸಗಿ ಅನುಭವಗಳೂ ಕೂಡ ಸಮುದಾಯದ ನೆಲೆಯಲ್ಲೆ ಪರ್ಯಾವಸಾನಗೊಳ್ಳುತ್ತವೆ. ಇದು ಬಹು ಮುಖ್ಯವಾಗಿ ಚರ್ಚಿತಗೊಳ್ಳಬೇಕಿದೆ. ಏಕೆಂದರೆ ದಲಿತ ಕಾವ್ಯ ಸಮುದಾಯದ ಕೊಡುಗೆ.

ಸಾರಾಂಶಕ್ಕೆ ಮತ್ತೊಂದು ಉದಾಹರಣೆಯನ್ನು ನೀಡುವುದಾದರೆ ಚ. ಸರ್ವಮಂಗಳ ಅವರ 'ನೋವನ್ನು ಕಾವ್ಯವಾಗಿಸಿದ ಕವಿ' ಎನ್ನುವ ಲೇಖನ. ಲೇಖಕರು ಮೂಡ್ನಾಕೂಡು ಚಿನ್ನಸ್ವಾಮಿ ಅವರ ಕಾವ್ಯ ಕುರಿತು ವಿಮರ್ಶಿಸುತ್ತಾ "ಚಪ್ಪಲಿ ಮತ್ತು ನಾನು ಈ ಕವಿತೆಯಲ್ಲಿ ಚಿನ್ನಸ್ವಾಮಿಯವರು ಒಂದು ಮಾತನ್ನು ಹೇಳುತ್ತಾರೆ. 'ನಾನು ದೇವಸ್ಥಾನಕ್ಕೆ ಹೋದಾಗ ಚಪ್ಪಲಿಯನ್ನು ಹೊರಗೆ ಬಿಡುವುದಿಲ್ಲ. ನಾನೇ ಹೊರಗಿರುತ್ತೇನೆ. ಇದು ತುಂಬಾ ಒಳ್ಳೆಯ ಮಾತು. ಮೊದಲ ಬಾರಿ ಇದನ್ನು ನಾನು ಕೇಳಿದಾಗ ಬಹಳ ಸಂತೋಷಪಟ್ಟಿದ್ದೇನೆ"[೮೨] ಎಂದು ಬರೆಯುತ್ತಾರೆ. ಇಲ್ಲಿ ಸಂತೋಷ ಪಡುವ ವಿಷಯ ಏನಿದೆ ಎಂಬುದೇ ತಿಳಿಯುವುದಿಲ್ಲ. ಚಪ್ಪಲಿಯ ಜೊತೆ ಹೊರಗಿರುತ್ತೇನೆ ಎನ್ನುವುದೇ ಅಸ್ಪೃಶ್ಯತೆಯ ವಸ್ತುಸ್ಥಿತಿಯ ಸಹಜ ನಿರೂಪಣೆ. ಇದನ್ನೇ ಕೊಂಡಾಡುವ ಈ ವಿಮರ್ಶೆ ಮತ್ತೊಂದು ರೀತಿಯಲ್ಲಿ ಆಸ್ವಾದನೆಗೆ ಮೀಸಲಾಗಿದೆ.

'ದಲಿತ ಬಂಡಾಯ ಕಾವ್ಯದಲ್ಲಿ ಪ್ರತಿಮಾ ಸಂವಿಧಾನ' ಎನ್ನುವ ಸಂಶೋಧನಾ ಪ್ರಬಂಧದಲ್ಲಿ ದಲಿತ ಕಾವ್ಯದಲ್ಲಿ ಮೂಡಿಬಂದಿರುವ ಪ್ರತಿಮೆಗಳನ್ನು ಕುರಿತು ಚರ್ಚಿಸಲಾಗಿದೆ. ಈ ಪ್ರಬಂಧವನ್ನು ಸಾರಾಂಶದ ನೆಲೆಯಲ್ಲಿ ಪರಿಗಣಿಸಲು ಸಾಧ್ಯವಾಗದಿದ್ದರೂ, ಕೇವಲ ಪ್ರತಿಮೆಗಳು ಬಳಕೆಗೊಂಡಿರಬಹುದಾದ ವಿಭಿನ್ನ ವಲಯಗಳನ್ನಷ್ಟೇ ಚರ್ಚಿಸಿರುವುದರ ಬಗ್ಗೆ ಪ್ರಶ್ನಿಸಬಹುದೆನಿಸುತ್ತದೆ. ಏಕೆಂದರೆ ಈ ಸಂಶೋಧನಾ ಕೃತಿಯಲ್ಲಿ ಪ್ರತಿಮೆಗಳು ಯಾವ ಯಾವ ಸಂದರ್ಭದಲ್ಲಿ ಹೇಗೆ ಬಳಕೆಯಾಗಿವೆ ಎಂಬುದನ್ನು ಹೇಳಲಾಗಿದೆಯೇ ಹೊರತು ಆ ಪ್ರತಿಮೆಗಳನ್ನು ಬಳಸುವಾಗ ದಲಿತ ಕವಿಗಳಿಗಿದ್ದ ಸಾಮಾಜಿಕ ಒತ್ತಡಗಳೇನು? ಹಾಗೂ ಆ ಪ್ರತಿಮೆಗಳು ಹೊರಡಿಸುವ ವಸ್ತುಸ್ಥಿತಿಯೇನು ಎಂಬುದರ ವಿಶ್ಲೇಷಣೆಗೆ ಇಲ್ಲಿ ಹೆಚ್ಚು ಒತ್ತನ್ನು ನೀಡಿಲ್ಲ.

ಹಾಗೆಯೇ 'ಅಸಮಾನತೆಯ ವಿರುದ್ಧ ಸಿಡಿದೆದ್ದ ತಪ್ತ ಕಾವ್ಯ' ಲೇಖನದಲ್ಲಿ ದೊಡ್ಡರಂಗೇಗೌಡ ಅವರು ಸಿದ್ಧಲಿಂಗಯ್ಯ ಅವರ ಕಾವ್ಯ ಕುರಿತು ವಿಮರ್ಶಿಸಿದ್ದಾರೆ. ಶೀರ್ಷಿಕೆ ಆಕರ್ಷಣೀಯವಾಗಿರುವಷ್ಟು ಅವರ ವಿಚಾರಗಳು ಆಕರ್ಷಣೀಯವಾಗಿಲ್ಲ. ಅವರ ವಿಮರ್ಶೆ ಇದುವರೆಗೆ ಬಂದ ವಿಮರ್ಶೆಗಳನ್ನೇ ನೆನಪಿಸುತ್ತದೆ. ಆ ಲೇಖನದ ವಿಚಾರ ಹೀಗಿದೆ; "ಸಿದ್ಧಲಿಂಗಯ್ಯನವರ ಕಾವ್ಯದಲ್ಲಿ ಸಿಟ್ಟು, ಆಕ್ರೋಶ, ರೊಚ್ಚು ವ್ಯಕ್ತಗೊಂಡಿರುವುದರಲ್ಲಿ ತಪ್ಪಿಲ್ಲ. ಮೊದಲು ಅನ್ಯಾಯವನ್ನು ಸಹಿಸಿಕೊಳ್ಳದೆ ಪ್ರತಿಭಟಿಸೋದು ವ್ಯಕ್ತಿಯ ಮೂಲಭೂತ ಗುಣ. ಅದು ಆರೋಗ್ಯವಾದಂತಹುದು. ಅವರು 'ಇಕ್ರಲಾ....ವದೀರ್ಲಾ...' ಅಂತ ಬರೆದದ್ದು ತಪ್ಪಲ್ಲ. ಒಂದು ಸಮುದಾಯ ರೋಸಿ ಹೋದಾಗ ಎಂತಹವರೂ ಕೂಡ ವಿಪರೀತ ಸಿಟ್ಟಿಗೇಳುವುದು ಸ್ವಾಭಾವಿಕ."[೬೩] ಇಲ್ಲಿ ಕಾವ್ಯದ ಧೋರಣೆ ಹಿಡಿದಿಡುವ ಪ್ರಯತ್ನವಿದ್ದರೂ ಪೂರ್ಣ ಹಿಡಿತ ಹೊಂದಿಲ್ಲ.

'ಆಧುನಿಕ ಕನ್ನಡ ಕಾವ್ಯಕ್ಕೆ ಮರುಜೀವ ನೀಡಿದ ಕವಿ' ಲೇಖನದಲ್ಲಿ ಎಂ.ಎಸ್. ಶೇಖರ್ ಅವರು ಸಿದ್ಧಲಿಂಗಯ್ಯ ಅವರ ಕಾವ್ಯ ಕುರಿತು ಹೀಗೆ ವಿವರಿಸಿದ್ದಾರೆ. "ಜಾತಿ ವ್ಯವಸ್ಥೆಯ ಕ್ರೂರತೆಗಳನ್ನು ಪದರ ಪದರವಾಗಿ ಕಾವ್ಯವನ್ನಾಗಿಸಿದ ಸಿದ್ಧಲಿಂಗಯ್ಯನವರ ಕಾವ್ಯದ ಮೇಲೆ ದಟ್ಟ ವೈಚಾರಿಕತೆಯನ್ನು ಪಸರಿಸಿರುವ ಕುವೆಂಪು ಅವರ ಪ್ರಭಾವ ಇದ್ದೇ ಇದೆ. ಇದು ಉತ್ಪ್ರೇಕ್ಷೆ ಮಾತಲ್ಲ. ಕಾವ್ಯದಲ್ಲಿ ಶೋಷಣೆಯ ವಿವಿಧ ಮುಖಗಳನ್ನು ಬಿಚ್ಚುತ್ತಾ ವೈಚಾರಿಕತೆಯನ್ನು ಬಿತ್ತಿದವರಲ್ಲಿ, ಕುವೆಂಪು ಅವರನ್ನು ಬಿಟ್ಟರೆ ಸಿದ್ಧಲಿಂಗಯ್ಯನವರೇ ಎಂಬುದು ತುಂಬಾ ಮಹತ್ವದ ಸಂಗತಿ ಆಗಿದೆ. ಅಲ್ಲದೆ ಸಾಮಾಜಿಕ ಬದುಕು ಈ ಪರಿಯಲ್ಲಿ ಕಾವ್ಯವಾಗಿರುವುದು ಸಿದ್ಧಲಿಂಗಯ್ಯನವರಲ್ಲಿ ಮಾತ್ರ ಎನ್ನುವುದು ಕಟು ಸತ್ಯವಾಗಿದೆ."[೬೪] ಇಲ್ಲಿ ಕಟು ಸತ್ಯದ ಹೆಸರಿನಲ್ಲಿ ರಾಜ್ಯದ ಮೂಲೆ ಮೂಲೆಯಲ್ಲಿ ದಲಿತ ಕವಿಗಳು ಅಲ್ಲಿನ ಸಾಮಾಜಿಕ ವಾಸ್ತವತೆಯನ್ನು ತಮ್ಮ ಅಭಿವ್ಯಕ್ತಿಯಲ್ಲಿ ಮಂಡಿಸಿರುವುದನ್ನು ಕಡೆಗಣಿಸಲಾಗಿದೆ. ಸಿದ್ಧಲಿಂಗಯ್ಯ ಅವರ ಕಾವ್ಯವೇ ಅಂತಿಮ ಎನ್ನುವ ಧೋರಣೆ ಮೇಲಿನ ಹೇಳಿಕೆಯಲ್ಲಿ ಮನೆಮಾಡಿದೆ.

ಹಾಗೆಯೇ ಮುನಿವೆಂಕಟಪ್ಪ ಅವರ 'ಸ್ವಾಭಿಮಾನದ ಬೀಡಿಗೆ' ಕೃತಿಯನ್ನು ಕುರಿತು 'ಸ್ವಾಭಿಮಾನದ ಬೀಡಿಗೆ ಕರೆದ ದಲಿತ ಕವಿ' ಎನ್ನುವ ಲೇಖನ ಬರೆದಿರುವ ಈಚನೂರು ಕುಮಾರ್ ಅವರು ಕವಿಯ ಕಾವ್ಯಗಳ ಶೀರ್ಷಿಕೆಗಳನ್ನೆಲ್ಲಾ ಉಲ್ಲೇಖಿಸುತ್ತಾ ಅವುಗಳಲ್ಲಿ ಇಂತಿಂತಹ ಸಮಾನ ಅಂಶಗಳಿವೆ ಎಂಬುದರ ವಿವರಣೆಯನ್ನು ನೀಡಿದ್ದಾರೆ. ಇದು ಸಮಗ್ರವಾಗಿರುವುದಿರಲಿ ಕಾವ್ಯದ ವಿಶ್ಲೇಷಣೆಯೇ ಇಲ್ಲಿ ನಡೆದಿಲ್ಲ. ಇದನ್ನು ಸ್ಪಷ್ಟಗೊಳಿಸುವುದಾದರೆ ಅವರ ಮಾತುಗಳನ್ನೇ ನೋಡುವುದು ಒಳಿತು. "ಮಲೆನಾಡ ಗೀತೆ, ಡಾ. ಅಂಬೇಡ್ಕರ್, ಯುಗಾದಿ, ಮಾತೆ, ತಾಯ್ನಾಡಿಗೆ 'ಶಾಂತಿ' ಕವನಗಳು ಸಂಸ್ಕೃತಿ ಕವನಗಳಾಗಿ ಸೆಲೆ

ಒಡೆದಿದ್ದರೆ ‘ಸತಿ’ ಕವನವಂತೂ ಹೆಣ್ಣಿನ ಸ್ಥಿತಿಗತಿ ಭೀಕರಗೊಂಡಿರುವುದಕ್ಕೆ ಸಹಾನುಭೂತಿ ಧಾರೆ ಎರೆದಿದ್ದಾರೆ”[೮೫] ಎನ್ನುವ ಮಾತುಗಳು ಕವನಗಳ ಸಂಪೂರ್ಣ ವಿಶ್ಲೇಷಣೆ ಇಲ್ಲದೆ ಬರೀ ಮಾಹಿತಿಯನ್ನು ನೀಡುತ್ತವೆ.

‘ಮಾನವತಾವಾದಿ ಪ್ರಾಧ್ಯಾಪಕರು’ ಎನ್ನುವ ಲೇಖನದಲ್ಲಿ ಕಮಲಮ್ಮ ಅವರು ಸಿದ್ಧಲಿಂಗಯ್ಯ ಅವರ ‘ನನ್ನ ಜನಗಳು’ ಕವಿತೆಯನ್ನು ವಿವರಿಸುತ್ತಾ “ದುಡಿವ ಸಮುದಾಯವೇ ಈ ದಲಿತರು, ಶೋಷಿತರು. ಇವರು ಸಮಾಜದ ಅಭಿವೃದ್ಧಿ ಕೆಲಸಗಳು, ಕೃಷಿ ಚಟುವಟಿಕೆಗಳು, ವಸತಿ, ಬಟ್ಟೆ ಮುಂತಾದ ಅಗತ್ಯತೆಗಳನ್ನು ಪೂರೈಸುವಲ್ಲಿ ಅಹರ್ನಿಶಿ ದುಡಿದೂ ಹಸಿವಿನಿಂದ ಸಾಯುತ್ತಿರುವ; ಗಾಳಿಯಲ್ಲೇ ಬಾಳುತ್ತಿರುವ ಸಮುದಾಯ. ಇವರಿಂದ ದುಡಿಸಿಕೊಳ್ಳುವ ಆಳುವ ವರ್ಗವು ಇವರ ಬೇಕು ಬೇಡಗಳಿಗೆ ಬೆಲೆಕೊಡದೇ ಊಟವಾದ ನಂತರದ ಬಾಳೆ ಎಲೆಯಂತೆ ಬಿಸಾಡುತ್ತಾರೆ. ಕಷ್ಟಪಟ್ಟು ದುಡಿಮೆ ಮಾಡದಿರುವ ಶೋಷಕ ಸಮುದಾಯ ದಲಿತರ ಶ್ರಮದ ಫಲವನ್ನುಂಡು ಸುಖಿಸುತ್ತದೆ”[೮೬] ಎಂದು ಬರೆದಿದ್ದಾರೆ. ಇದು ದಲಿತ ಕಾವ್ಯದ ವಸ್ತುಗಳ ಅಧ್ಯಯನದಂತೆ ಕಂಡುಬಂದರೂ ಇದುವರೆಗಿನ ವಿವರಣೆಗಳಿಂದ ಹೊಸದಾದ ಆಲೋಚನೆಯನ್ನೇನೂ ಇದು ಕಟ್ಟಿಕೊಡುವುದಿಲ್ಲ. ಕವಿತೆಗಿರುವ ವಿಸ್ತಾರವಾದ ಸ್ವರೂಪವನ್ನು ಇಂತಹ ಆಲೋಚನೆಗಳು ಸಂಕುಚಿತಗೊಳಿಸುತ್ತವೆ ಎಂದೆನಿಸುತ್ತದೆ.

ಹೈದ್ರಾಬಾದ್ ಕರ್ನಾಟಕ ದಲಿತ ಸಾಹಿತ್ಯ ಕುರಿತು ಸಂಶೋಧನೆ ಮಾಡಿರುವ ಎಂ.ಆರ್. ಚಲವಾದಿ ಅವರು ದಲಿತ ಕಾವ್ಯಗಳನ್ನು ಅವಲೋಕಿಸುತ್ತಾ ಬಾಬು ಭಂಡಾರಿಗಲ್ ಅವರ ‘ಶೋಷಿತರು’ ಕವನ ಕುರಿತು ಈ ರೀತಿ ವಿವರಿಸುತ್ತಾರೆ;

“ಶೋಷಿತರು – ಸ್ವಾಮಿ
ನಾವು.......
ಶೋಷಣೆಗೊಳಗಾದವರು
ಶೋಷಕರನ್ನೇ ಆರಾಧಿಸುವ ಪರಮಭಕ್ತರು

ದಲಿತರ ಆರ್ಥಿಕ ಪರಿಸ್ಥಿತಿಯಿಂದಾಗಿ, ತಮ್ಮ ಹೊಟ್ಟೆಪಾಡಿಗಾಗಿ ಹಗಲಿರುಳು ಅವರ ಸೇವೆ ಮಾಡಿದರೂ ಅನೇಕ ರೀತಿಯ ನಿರ್ಬಂಧನೆಯ ಇಕ್ಕಟ್ಟಿಗೆ ಸಿಲುಕಿ ತುಳಿಯಲ್ಪಟ್ಟಿದ್ದಾರೆ. ದುಡ್ಡಿನ ಆಸೆಗಾಗಿ ತುಳಿದ ಕಾಲನ್ನು ನೆಕ್ಕುವರು ಎಂಬಲ್ಲಿ ಇನ್ನೂ ದಲಿತರು ಮೇಲ್ವರ್ಗದವರಲ್ಲಿ ಕೈಯೊಡ್ಡಿ ಬೇಡುವ ಪದ್ಧತಿಯಿಂದ ಮುಕ್ತಿ ಹೊಂದಿಲ್ಲ. ಯಾವಾಗ ನಾವು ಕೈಯಾರೆ ಮರಳಿ ಕೊಡುತ್ತೇವೆಯೋ ಆಗ ಮಾತ್ರ ಇಂತಹ ಶೋಷಣೆಯಿಂದ ಮುಕ್ತಿ ಹೊಂದಬಹುದೆಂದು ಕವಿಯ ಅಭಿಪ್ರಾಯವಾಗಿದೆ”[೮೭] ಎಂದಿದ್ದಾರೆ. ಇದು ಮೇಲಿನ ಕವನದ ಸಾಲುಗಳಿಗೆ

ಪೂರಕವಾಗಿರುವಂತೆ ಕಂಡರೂ ಅಂತರಾಳದಲ್ಲಿ ವಿವರಣೆಗಷ್ಟೇ ಮೀಸಲಾಗಿದೆ. ದಲಿತರು ಶೋಷಣೆಯನ್ನು ಆರಾಧಿಸುವುದರ ಹಿಂದಿನ ನೆಲೆಗಳ ವಿಶ್ಲೇಷಣೆಯೇ ಇಲ್ಲಿ ಸಾಧ್ಯವಾಗಿಲ್ಲ. ಇದೂ ಒಂದು ರೀತಿಯಲ್ಲಿ ದಲಿತ ಕಾವ್ಯವನ್ನು ಸೀಮಿತ ಚೌಕಟ್ಟಿನಲ್ಲಿ ನೋಡುವ ಬಗೆಯೇ ಆಗುತ್ತದೆ.

ಎನ್.ಸಿ. ವೆಂಕಟರಾಜು ಅವರ 'ಅವ್ವ' ಕವನ ಸಂಕಲನಕ್ಕೆ ಮುನ್ನುಡಿ ಬರೆದಿರುವ ಅರ್ಜುನ ಗೊಳಸಂಗಿ ಅವರು "ಎನ್.ಸಿ. ವೆಂಕಟರಾಜು ಅವರ 'ಅವ್ವ' ಕವನ ಸಂಕಲನದ ಹೆಚ್ಚು ಕವಿತೆಗಳಲ್ಲಿ ದಲಿತ ಲೋಕದ ಚಿತ್ರಣವಿದೆ. 'ಊರು ಬಿಟ್ಟು ಊರು ಸೇರುವ ಮುನ್ನ', 'ಜಾತಿ ಪಂಜರ', 'ಅಂತರ್ಜಾತಿ ಪ್ರೇಮ', 'ಜಾತಿ ಮತ್ತು ಪ್ರೀತಿ', 'ಅಂಬೇಡ್ಕರ್', ಮುಂತಾದ ಕವಿತೆಗಳು ದಲಿತರ ಪ್ರಚಲಿತ ಸಮಸ್ಯೆಗಳನ್ನು ಚರ್ಚಿಸುತ್ತವೆ. ಇದರೊಂದಿಗೆ ಯೌವನದ ಸಹಜವಾದ ಪ್ರೀತಿಯ ಕವಿತೆಗಳೂ ಈ ಸಂಕಲನದಲ್ಲಿ ಇಲ್ಲದಿಲ್ಲ"[೮೮] ಎಂದು ಬರೆದಿದ್ದಾರೆ. ಇಲ್ಲಿ ವಸ್ತುವನ್ನು ಕುರಿತು ಚರ್ಚಿಸುವಂತೆ ಕಾಣುವ ಈ ವಿಮರ್ಶೆ ಕಾವ್ಯದ ಅಭಿವ್ಯಕ್ತಿಯ ಹಿಂದಿನ ಧೋರಣೆಗಳನ್ನು ಚರ್ಚಿಸದೆ ಸಾರಾಂಶಕ್ಕೆ ಸೀಮಿತವಾಗಿದೆ.

ದಲಿತ ಕಾವ್ಯದ ಚರ್ಚೆಯಲ್ಲಿ ಸಿದ್ಧಲಿಂಗಯ್ಯ ಅವರ ಕಾವ್ಯದ ಚರ್ಚೆಯೇ ಹೆಚ್ಚು ನಡೆದಿರುವುದು. ಎಷ್ಟೋ ವಿಮರ್ಶೆಗಳು ಸಿದ್ಧಲಿಂಗಯ್ಯ ಅವರ ಕಾವ್ಯದ ಆಶಯ ಮತ್ತು ಅಭಿವ್ಯಕ್ತಿಯನ್ನು ಹಿಡಿದಿಡಲು ಪ್ರಯತ್ನಿಸಿ ಕೊನೆಗೆ ಸಾರಾಂಶದಲ್ಲಿ ಅಂತ್ಯ ಕಾಣುತ್ತವೆ. ಇದಕ್ಕೆ ಉದಾಹರಣೆಯೆಂಬಂತೆ ಶಾರದ ಅವರ 'ಸಿದ್ಧಲಿಂಗಯ್ಯ ಅವರ ಸಾಹಿತ್ಯದಲ್ಲಿ ದಲಿತರ ಒಳಧ್ವನಿ' ಎನ್ನುವ ಲೇಖನ ನೋಡಬಹುದು. ಶಾರದ ಅವರು ಸಿದ್ಧಲಿಂಗಯ್ಯ ಅವರ ಕಾವ್ಯದ ವಿವಿಧತೆಯನ್ನು ಅವಲೋಕಿಸುತ್ತ ಕೊನೆಗೆ ವಿಫಲರಾದವರಂತೆ ಮತ್ತದೇ ಸಾರಾಂಶಕ್ಕೆ ಬಂದುಬಿಡುತ್ತಾರೆ. ಅವರೇ ಬರೆಯುವಂತೆ "ಸಾವಿರಾರು ವರ್ಷಗಳಿಂದ ಎಲ್ಲ ಸವಲತ್ತು ಹಾಗೂ ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದ ಜನತೆಯನ್ನು ತಮ್ಮ ಅನುಭವದ ನುಡಿಗಳಿಂದ ಪ್ರೇರೇಪಿಸಿ ಅವರೊಂದಿಗೆ ಜೊತೆಗೂಡಿ ನಡೆಯುತ್ತಿದ್ದಾರೆ. ಅವರ ಕ್ರಾಂತಿಯ ನುಡಿಗಳೇ ದಲಿತರಲ್ಲಿ ಚಲನಶೀಲತೆಯನ್ನು ಉಂಟುಮಾಡಿದೆ ಎಂದರೆ ತಪ್ಪಾಗಲಾರದು."[೮೯] ಇದು ಸಾರಾಂಶದ ನೆಲೆಗಷ್ಟೇ ಸೀಮಿತವಾಗಿದೆ.

೪. ಪ್ರೇರಣೆ ಮತ್ತು ಪ್ರಭಾವಗಳ ಕುರಿತ ಚರ್ಚೆ

ದಲಿತ ಕಾವ್ಯ ಮತ್ತು ಸಾಹಿತ್ಯದ ಮೇಲೆ ಬೇರೆ ಬೇರೆ ಸಾಹಿತ್ಯ ಮತ್ತು ಸಾಹಿತ್ಯೇತರ ಚಟುವಟಿಕೆಗಳು ತಮ್ಮ ಪ್ರಭಾವ ಮತ್ತು ಪ್ರೇರಣೆಗಳನ್ನು ಉಂಟುಮಾಡಿವೆ. ಕನ್ನಡದ ಅನೇಕ ವಿಮರ್ಶಕರು ದಲಿತ ಸಾಹಿತ್ಯದ ಮೇಲೆ ಇತರೆ ಭಾಷೆಗಳಿಂದ, ಸಮಕಾಲೀನ ಸಾಹಿತ್ಯ, ಹೋರಾಟ, ಚಳುವಳಿ, ಸಂಘಟನೆ ಮುಂತಾದವುಗಳಿಂದ ಉಂಟಾಗಿರಬಹುದಾದ ಪ್ರಭಾವ ಮತ್ತು ಪ್ರೇರಣೆಗಳನ್ನು ಕುರಿತು ಚರ್ಚಿಸಿದ್ದಾರೆ. ಯಾವುದೇ ಒಂದು ಚಳುವಳಿ ಮತ್ತು

ಹೋರಾಟ ಅಸ್ತಿತ್ವಕ್ಕೆ ಬರಲು ಅದಕ್ಕೊಂದು ರಾಜಕೀಯ ಮತ್ತು ಸಾಮಾಜಿಕ ತುರ್ತು ಇರುತ್ತದೆ. ಇದರ ಜೊತೆ ಹುಟ್ಟುವ ಸಾಹಿತ್ಯವೂ ಕೂಡ ಈ ಹೋರಾಟಕ್ಕೊಂದು ಚಲನಶೀಲತೆಯನ್ನು ತಂದುಕೊಡುತ್ತದೆ. ಇಂತಹ ಸಾಮಾಜಿಕ ಮತ್ತು ರಾಜಕೀಯ ಹೋರಾಟದ ಫಲವಾಗಿ ಮೂಡಿದ್ದೇ ದಲಿತ ಕಾವ್ಯ.

ದಲಿತ ಸಾಹಿತ್ಯ ಮತ್ತು ಕಾವ್ಯದ ಮೇಲೆ ವಿವಿಧ ಸಾಹಿತ್ಯ ಕ್ಷೇತ್ರಗಳು ಬೀರಿರಬಹುದಾದ ಪ್ರಭಾವವನ್ನು ಕುರಿತು ಅರವಿಂದ ಮಾಲಗತ್ತಿ ಅವರು ಬರೆಯುವ ರೀತಿ ಹೀಗಿದೆ; "ಭಾರತೀಯ ಮತ್ತು 'ಅನ್ಯಭಾಷಾ ಸಾಹಿತ್ಯದ ಪ್ರಭಾವ' ದಲಿತ ಸಾಹಿತ್ಯಕ್ಕಿದೆ. ಉತ್ತರ ಕರ್ನಾಟಕದ ಲೇಖಕರ ಮೇಲೆ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳುವಳಿಯ ಪ್ರಭಾವ ಅಧಿಕವಾಗಿರುವಂತೆ, ದಕ್ಷಿಣ ಕರ್ನಾಟಕದ ದಲಿತ ಬರಹಗಾರರ ಮೇಲೆ ತೆಲುಗಿನ ದಿಗಂಬರ ಹಾಗೂ ತಿರುಗುಬುಡಲು ಕಾವ್ಯದ ಪ್ರಭಾವ ಅಧಿಕವಾಗಿದೆ. ದಕ್ಷಿಣ ಆಫ್ರಿಕಾದ ಕಪ್ಪು ಸಾಹಿತ್ಯದ ಪ್ರಭಾವ ಗಮನಾರ್ಹವಾದ ರೀತಿಯಲ್ಲಿ ಕಂಡುಬಂದರೂ, ಕಪ್ಪುತನದ ಶ್ರೇಷ್ಠತೆ ಅವರಿಗೆ ಸ್ವಾಭಿಮಾನದ ಸಂಕೇತವಾದಂತೆ, ಇಲ್ಲಿಯ ದಲಿತರಿಗೆ ಸ್ಥಳೀಯ ವಿಚಾರಗಳು ಸ್ವಾಭಿಮಾನದ ಸಂಕೇತಗಳಾದವು."[೧೦] ಯಾವುದೇ ಸಾಹಿತ್ಯ ಪ್ರಕಾರವಿರಲಿ ಅದು ತನ್ನ ಸಮಕಾಲೀನ ಮತ್ತು ಪರಂಪರೆಯ ಬೇರುಗಳೊಂದಿಗೆ ತಳಕುಹಾಕಿಕೊಂಡೇ ಹುಟ್ಟುತ್ತದೆ. ಕನ್ನಡ ದಲಿತ ಸಾಹಿತ್ಯದ ಮೇಲೆಯೂ ಬೇರೆ ಭಾಷೆಯ ಸಮಕಾಲೀನ ಬರವಣಿಗೆ ಮತ್ತು ಚಳುವಳಿ ಪ್ರಭಾವ ಬೀರಿರುವುದನ್ನು ಮೇಲಿನ ಮಾತುಗಳಿಂದ ತಿಳಿಯಬಹುದಾಗಿದೆ. ದಲಿತ ಕಾವ್ಯದ ಮೇಲೆ ಕೇವಲ ಸಾಹಿತ್ಯದಲ್ಲಿ ಉಂಟಾದ ಬದಲಾವಣೆಗಳಷ್ಟೇ ಪ್ರಭಾವವನ್ನು ಬೀರಲಿಲ್ಲ. ಬದಲಾಗಿ ಅನೇಕ ಹೋರಾಟಗಳ, ಚಳುವಳಿಗಳ ಪ್ರೇರಣೆ ಅದರೊಂದಿಗೆ ಕೆಲಸ ಮಾಡಿದೆ.

ಕರ್ನಾಟಕದ ದಲಿತ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ೧೯೬೯ರಲ್ಲಿ 'ಹಾವನೂರ ಆಯೋಗ ವರದಿ' ಕುರಿತ ಚರ್ಚೆ, ೧೯೭೩ರಲ್ಲಿ 'ಮಲ ಹೊರುವ ಪದ್ಧತಿ' ಕುರಿತ ಚರ್ಚೆ, ೧೯೭೪ರಲ್ಲಿ ಕರ್ನಾಟಕದಲ್ಲಿ ಬಿರುಗಾಳಿಯನ್ನೇ ಸೃಷ್ಟಿಸಿದ ಬಸವಲಿಂಗಪ್ಪವನರ 'ಬೂಸಾ ಪ್ರಕರಣ' ಕುರಿತಾದ ಹೋರಾಟ, ೧೯೭೫ರಲ್ಲಿ ಅಸ್ತಿತ್ವಕ್ಕೆ ಬಂದ 'ದಲಿತ ಬರಹಗಾರರ ಯುವ ಸಂಘಟನೆ' ೧೯೭೩ರಲ್ಲಿ ಲೋಹಿಯಾ ಮಂಚ ವೇದಿಕೆ ವತಿಯಿಂದ ನಡೆದ 'ಜಾತಿ ವಿನಾಶ ಸಮ್ಮೇಳನ, ೧೯೭೯ರಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಪ್ರತಿಯಾಗಿ ಹುಟ್ಟಿಕೊಂಡ ಬಂಡಾಯ ಸಂಘಟನೆ, ೧೯೭೦ರ ದಶಕದಲ್ಲಿ ಅಸ್ತಿತ್ವಕ್ಕೆ ಬಂದು ಅದೇ ದಶಕದಲ್ಲಿ ಕರ್ನಾಟಕದಲ್ಲಿ ಒಂದು ರೀತಿಯ ಸಂಚಲನೆಯನ್ನು ಉಂಟುಮಾಡಿದ 'ದಲಿತ ಸಂಘರ್ಷ ಸಮಿತಿ', ಇದೇ ವೇಳೆಯಲ್ಲಿ ಅಸ್ತಿತ್ವಕ್ಕೆ ಬಂದ 'ರೈತ ಸಂಘಟನೆ' ಮುಂತಾದವುಗಳು ದಲಿತ ಕಾವ್ಯ ಮತ್ತು ಸಾಹಿತ್ಯದ ಮೇಲೆ ತೀವ್ರತರವಾದ ಪ್ರಭಾವವನ್ನು ಉಂಟುಮಾಡಿವೆ.

ಮೇಲೆ ಉಲ್ಲೇಖಿಸಿರುವ ಸಾಹಿತ್ಯೇತರ ಚಟುವಟಿಕೆಗಳ ಜೊತೆ ಅನೇಕ ಸಿದ್ಧಾಂತಗಳ ಪ್ರಭಾವವು ದಲಿತ ಸಾಹಿತ್ಯದ ಮೇಲಾಗಿದೆ. ಜಿ.ಆರ್. ತಿಪ್ಪೇಸ್ವಾಮಿ ಅವರು ಗುರುತಿಸಿರುವಂತೆ "ಸಾಹಿತ್ಯಿಕ ಪ್ರೇರಣೆಗಳ ಜೊತೆಗೆ ಸಾಹಿತ್ಯೇತರ ಪ್ರೇರಣೆಗಳೂ ಕೆಲಸ ಮಾಡಿದವು. ಮುಖ್ಯವಾಗಿ ಎಡಪಂಥೀಯ ಸಿದ್ಧಾಂತಗಳೆಲ್ಲವೂ ದಲಿತ ಸಾಹಿತ್ಯದ ಮೇಲೆ ಪ್ರಭಾವವನ್ನು ಬೀರಿದವು. ಇದರ ಮೂಲಕವಾಗಿ ಈ ಪಂಥದ ಲೇಖಕರ ಸೃಜನಶೀಲ ಚಟುವಟಿಕೆಗಳಿಗೆ ಬೆಂಬಲ ಒದಗಿತ್ತು. ಮಾರ್ಕ್ಸ್‌ವಾದ, ಲೋಹಿಯಾವಾದ, ಅಂಬೇಡ್ಕರ್‌ವಾದ ಈ ಸಿದ್ಧಾಂತಗಳು ಪ್ರಮುಖವಾದವು."[೯೧] ಇಲ್ಲಿ ದಲಿತ ಸಾಹಿತ್ಯದ ಮೇಲಾಗಿರುವ ಸಿದ್ಧಾಂತಗಳ ಪ್ರಭಾವವನ್ನು ಕಾಣಬಹುದಾಗಿದೆ. ದಲಿತ ಕಾವ್ಯ ಮೊದಮೊದಲು ಮಾರ್ಕ್ಸ್‌ನ ತತ್ವಗಳಿಂದ ಪ್ರೇರಣೆಗೊಂಡು ಕಾವ್ಯವನ್ನು ರಚಿಸಿದರೂ ಕೂಡ ನಂತರದಲ್ಲಿ ಅಂಬೇಡ್ಕರ್ ಅವರ ಪ್ರಭಾವ ದಟ್ಟವಾಗಿ ಪ್ರಭಾವಿಸಿರುವುದನ್ನು ಕಾಣಬಹುದು. ಇದನ್ನು ಅರವಿಂದ ಮಾಲಗತ್ತಿ, ರಾಜಶೇಖರಯ್ಯ, ಮ.ನ. ಜವರಯ್ಯ ಮುಂತಾದವರು ತಮ್ಮ ವಿಮರ್ಶೆಯಲ್ಲಿ ಸೂಕ್ಷ್ಮವಾಗಿ ಗುರುತಿಸಿದ್ದಾರೆ.

ಮೇಲಿನ ಸಿದ್ಧಾಂತಗಳ ಜೊತೆ ಗಾಂಧಿಯ ತತ್ವ ಸಿದ್ಧಾಂತಗಳು ದಲಿತ ಬರಹಗಾರರ ಮೇಲಾಗಿರುವುದನ್ನು ಎಲ್. ರಾಜಶೇಖರಯ್ಯ ಅವರು ತಮ್ಮ 'ಡಾ. ಸಿದ್ಧಲಿಂಗಯ್ಯ : ದಲಿತ ಕಾವ್ಯ ಕುತೂಹಲ' ಎನ್ನುವ ಕೃತಿಯಲ್ಲಿ ಗುರುತಿಸಿರುವ ಬಗೆ ಹೀಗಿದೆ; "ಲೋಹಿಯಾ ವಾದದ ಪ್ರಭಾವದಿಂದ ಶೂದ್ರ ಪ್ರಜ್ಞೆ ತಲೆ ಎತ್ತಿದರೂ ಅದು ಹೆಚ್ಚು ಕಾಲ ಕೆಲಸ ಮಾಡಲಿಲ್ಲ. ದಲಿತ ಬಂಡಾಯದ ಮೇಲೆ ಲೋಹಿಯಾ ವಾದದ ಪ್ರಭಾವ ಕೊನೆಯವರೆಗೂ ಉಳಿಯಲಾಗಲಿಲ್ಲ. ದಲಿತರು ಅಧಿಕೃತವಾಗಿ 'ಅಂಬೇಡ್ಕರ್ ವಾದ'ವನ್ನು ನಂಬಿದರು. ದಲಿತರಲ್ಲದವರು ಮಾರ್ಕ್ಸ್‌ವಾದವನ್ನು ನಂಬಿ ನಡೆದರು. ದಲಿತರಿಗೆ ಮಾರ್ಕ್ಸ್, ಲೋಹಿಯಾ ವಾದಗಳಿಗಿಂತ ಗಾಂಧೀವಾದವೇ ಪರೋಕ್ಷವಾಗಿ ಪ್ರೇರಕಶಕ್ತಿಯಾಗಿ ಕೆಲಸ ಮಾಡಿದೆ ಎನ್ನಬಹುದು."[೯೨] ಇಲ್ಲಿ ಸಿದ್ಧಾಂತಗಳು ಕೂಡ ಕಾಲದಿಂದ ಕಾಲಕ್ಕೆ ಬದಲಾವಣೆಯಾದ ಬಗೆಯನ್ನು ಮೇಲಿನ ಮಾತುಗಳು ತಿಳಿಸಿಕೊಡುತ್ತಿವೆ. ಇದರ ಪರಿಣಾಮವೆಂಬಂತೆ ದಲಿತ ಕಾವ್ಯದಲ್ಲಿ ಮೊದಲಿದ್ದ ರೊಚ್ಚು, ಆವೇಶಗಳು ಕ್ರಮೇಣ ತಣ್ಣಗೆ ಎಚ್ಚರದ ಉರಿ ತಾಗುವ ಹಾಗೆ ಮಾರ್ಪಾಡುಗೊಂಡದ್ದನ್ನು ಕಾಣಬಹುದು.

ದಲಿತ ಕಾವ್ಯದ ಮೇಲೆ ವ್ಯಕ್ತಿ ಪ್ರಭಾವ ದಟ್ಟವಾಗಿರುವುದನ್ನು ಕಾಣಬಹುದಾಗಿದೆ. ಮೇಲಿನ ವಿಮರ್ಶೆಗಳು ಅಂಬೇಡ್ಕರ್, ಮಾರ್ಕ್ಸ್, ಲೋಹಿಯಾ, ಗಾಂಧಿ ಇವರುಗಳ ಪ್ರಭಾವವನ್ನು ಗುರುತಿಸಿವೆ. ಇವರ ಜೊತೆಗೆ ಪೆರಿಯಾರ್, ಫುಲೆ, ನಾರಾಯಣ ಗುರು, ಬಸವಣ್ಣ, ನೆಲ್ಸನ್ ಮಂಡೆಲಾ, ಮಾವೋ ಮುಂತಾದವರ ಪ್ರಭಾವ ದಲಿತ ಸಾಹಿತ್ಯದ ಮೇಲಾಗಿದೆ. ಈ ಹಿನ್ನೆಲೆಯಿಂದಾಗಿಯೇ ಬುದ್ಧನಿಂದ ಹಿಡಿದು ತನ್ನ ಸಮಕಾಲೀನ ಸಾಮಾಜಿಕ ಪರಿವರ್ತನಾಕಾರರವರೆಗೆ ದಲಿತ ಕಾವ್ಯ ತನ್ನದೇ ಆದ ನೆಲೆಯಲ್ಲಿ ಅವರನ್ನು ಸ್ಮರಿಸಿ, ವಿಮರ್ಶಿಸಿದೆ.

[illegible]

ದಲಿತ ಕಾವ್ಯದ ಮೇಲೆ ಬೀರಿರಬಹುದಾದ ಪ್ರಭಾವಗಳನ್ನು ಕುರಿತು ಪುರುಷೋತ್ತಮ ಬಿಳಿಮಲೆ ಅವರು 'ಬಂಡಾಯ-ದಲಿತ ಸಾಹಿತ್ಯ' ಎನ್ನುವ ಕೃತಿಯಲ್ಲಿ ಸಮಂಜಸವಾಗಿ ಹಿಡಿದಿಟ್ಟಿದ್ದಾರೆ. ಸಾಹಿತ್ಯ ಮತ್ತು ಸಾಹಿತ್ಯೇತರ ಪ್ರೇರಣೆಗಳನ್ನು ಕುರಿತು ಅವರು ಬರೆಯುವ ರೀತಿ ಹೀಗಿದೆ; "ಬಂಡಾಯ-ದಲಿತ ಸಾಹಿತ್ಯ ಚಳುವಳಿಯು ಪ್ರಬಲವಾಗಿ ಕಾಣಿಸಿಕೊಂಡದ್ದು ೧೯೭೦ರ ದಶಕದ ಉತ್ತರಾರ್ಧದಲ್ಲಿ. ಅದೇ ದಶಕದಲ್ಲಿ ನಡೆದ ಅನೇಕ ಘಟನೆಗಳು ಆ ಚಳವಳಿಗೆ ಪ್ರೇರಣೆ ನೀಡಿವೆ ಮತ್ತು ಆ ಪ್ರೇರಣೆಗಳೇ ಚಳವಳಿಯ ಮುಖ್ಯ ಪ್ರವೃತ್ತಿಗಳ ಸ್ವರೂಪವನ್ನು ನಿರ್ಧರಿಸಿವೆ. ಅಧ್ಯಯನದ ಸೌಕರ್ಯಕ್ಕಾಗಿ ಈ ಪ್ರೇರಣೆಗಳನ್ನು 'ಸಾಹಿತ್ಯೇತರ' ಮತ್ತು 'ಸಾಹಿತ್ಯಿಕ' ಎಂದು ಎರಡು ರೀತಿಯಿಂದ ವಿಭಜಿಸಿಕೊಳ್ಳಬಹುದು. 'ಸಾಹಿತ್ಯೇತರ'ದಲ್ಲಿ ಮತ್ತೆ 'ಸಿದ್ಧಾಂತಗಳು' ಮತ್ತು ಚಳವಳಿಗಳು ಎಂದು ಒಳವಿಭಾಗ ಮಾಡಿಕೊಳ್ಳಲು ಸಾಧ್ಯವಿದೆ. ಪತ್ರಿಕೆಗಳೂ ಇಲ್ಲಿ ಸೇರ್ಪಡೆಯಾಗುತ್ತವೆ"[೯೩] ಎಂದಿದ್ದಾರೆ. ಇಲ್ಲಿ ಸಾಹಿತ್ಯದ ಜೊತೆ ಸಾಹಿತ್ಯೇತರ ಕಾರಣಗಳಾದ ಸಿದ್ಧಾಂತಗಳು, ಚಳುವಳಿಗಳು, ಪತ್ರಿಕೆಗಳು ಮುಂತಾದವುಗಳ ಪ್ರಭಾವವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಬಿಳಿಮಲೆ ಅವರು ಸಾಹಿತ್ಯೇತರ ಕಾರಣಗಳಲ್ಲಿ ಮುಖ್ಯವಾಗಿ ಸಿದ್ಧಾಂತಗಳ ಬಗ್ಗೆ ಬರೆಯುತ್ತಾ ಮಾರ್ಕ್ಸ್‌ವಾದ, ಲೋಹಿಯಾವಾದ, ಅಂಬೇಡ್ಕರ್‌ವಾದದ ಪ್ರಭಾವಗಳನ್ನು ಕುರಿತು ಚರ್ಚಿಸಿದ್ದಾರೆ.

ಹಾಗೆಯೇ ಚಳವಳಿಗಳಲ್ಲಿ ಮುಖ್ಯವಾಗಿ ಹಾವನೂರರ ವರದಿ ಕುರಿತ ಚರ್ಚೆ, ೧೯೭೩ರಲ್ಲಿ ನಡೆದ ಬಸವಲಿಂಗಪ್ಪನವರ 'ಬೂಸಾ ಪ್ರಕರಣ'ದ ಚಳವಳಿ, ಮಲ ಹೊರುವ ಪದ್ಧತಿ ಕುರಿತ ಚರ್ಚೆ, ೧೯೭೩ರಲ್ಲಿ ನಡೆದ ಜಾತಿ ವಿನಾಶ ಸಮ್ಮೇಳನ, ೧೯೭೪ರಲ್ಲಿ ರಚನೆಗೊಂಡ 'ಬರಹಗಾರರ ಮತ್ತು ಕಲಾವಿದರ ಒಕ್ಕೂಟ, ೧೯೭೪ರಲ್ಲಿ ರೂಪುಗೊಂಡ 'ದಲಿತ ಸಂಘರ್ಷ ಸಮಿತಿ' ಈ ಸಂಘಟನೆಯ ಕಾವಿನಲ್ಲಿ ಅಸ್ತಿತ್ವಕ್ಕೆ ಬಂದ 'ದಲಿತ ವಿದ್ಯಾರ್ಥಿ ಒಕ್ಕೂಟ', 'ದಲಿತ ಮಹಿಳಾ ಒಕ್ಕೂಟ', 'ದಲಿತ ಕಲಾ ಮಂಡಲಿ', 'ದಲಿತ ನೌಕರರ ಒಕ್ಕೂಟ' ಮತ್ತು 'ದಲಿತ ವೈದ್ಯರ ಒಕ್ಕೂಟ' ಮುಂತಾದವುಗಳ ಜೊತೆ ೭೦ರ ದಶಕದಲ್ಲಿ ಜಾರಿಗೆ ಬಂದ ಭೂ ಮಸೂದೆ ಕಾಯ್ದೆ, ೧೯೭೫ರಲ್ಲಿ ಜಾರಿಗೆ ಬಂದ 'ತುರ್ತು ಪರಿಸ್ಥಿತಿ' ಮುಂತಾದ ಘಟನೆಗಳು ಮತ್ತು ಸಂಘಟನೆಗಳು ದಲಿತ ಕಾವ್ಯ ಮತ್ತು ಸಾಹಿತ್ಯದ ಮೇಲೆ ಪ್ರಭಾವ ಬೀರಿರುವುದನ್ನು ಪುರುಷೋತ್ತಮ ಬಿಳಿಮಲೆ ಅವರು ಗುರುತಿಸಿದ್ದಾರೆ. ಇದರ ಜೊತೆಗೆ ಸಾಹಿತ್ಯಿಕ ಕಾರಣಗಳಲ್ಲಿ 'ಕನ್ನಡ ನವ್ಯ ಸಾಹಿತ್ಯದ ಮಿತಿಗಳು', 'ತೆಲುಗಿನ ದಿಗಂಬರ ಕಾವ್ಯದ ಪ್ರೇರಣೆ', ಮತ್ತು 'ಮರಾಠಿ ದಲಿತ ಸಾಹಿತ್ಯ ಚಳವಳಿಯ ಪ್ರೇರಣೆ' ಮುಂತಾದವುಗಳನ್ನು ಹಾಗೂ ಸಂಕ್ರಮಣ, ಅನ್ವೇಷಣೆ, ಮುಂಗಾರು, ಬಂಡಾಯ ಸಾಹಿತ್ಯ, ಪಂಚಮ, ಹೊಸದಿಕ್ಕು, ಸಮುದಾಯ ವಾರ್ತಾಪತ್ರ, ಕೆಂಬಾವುಟ, ಐಕ್ಯರಂಗ ಮುಂತಾದ ಪತ್ರಿಕೆಗಳು ದಲಿತ ಸಾಹಿತ್ಯ ಮತ್ತು ಕಾವ್ಯದ ಮೇಲೆ ಪ್ರಭಾವ ಬೀರಿರುವುದನ್ನು ಬಿಳಿಮಲೆಯವರು ತಮ್ಮ 'ಬಂಡಾಯ-ದಲಿತ ಸಾಹಿತ್ಯ' ಕೃತಿಯಲ್ಲಿ ವಿವೇಚಿಸಿದ್ದಾರೆ.

[illegible]

ಮೇಲೆ ತಿಳಿಸಿರುವ ಘಟನೆಗಳು ಮತ್ತು ಸಾಹಿತ್ಯಿಕ ಕಾರಣಗಳು ದಲಿತ ಸಾಹಿತ್ಯ ರೂಪುಗೊಳ್ಳಲು ಒಂದು ಚಾರಿತ್ರಿಕ ಅನಿವಾರ್ಯತೆ ಇತ್ತು ಎಂಬುದನ್ನು ಪ್ರತಿಪಾದಿಸುತ್ತವೆ. ಸಾಹಿತ್ಯಿಕ ಘಟ್ಟವೊಂದು ಯಾವುದರಿಂದ ಪ್ರೇರಣೆಗೊಳ್ಳುತ್ತದೆ ಎಂಬುದೂ ಮುಖ್ಯ. ಏಕೆಂದರೆ ಈ ಪ್ರೇರಣೆಗಳ ಹಿಂದೆ ಒಂದು ಸಾಮಾಜಿಕ ವಾಸ್ತವತೆ ನಿರಂತರವಾಗಿರುತ್ತದೆ. ಈ ಸಾಮಾಜಿಕ ವಸ್ತುಸ್ಥಿತಿಯ ಪರಿಣಾಮದಿಂದಾಗಿಯೇ ದಮನಕ್ಕೆ ಒಳಗಾದ ಧಿಕ್ಕಾರದ ದನಿಗಳು ಅಲ್ಲಲ್ಲಿ ಕೂಗಲ್ಪಟ್ಟವು. ಅವೆಲ್ಲವೂ ದಲಿತ ಕಾವ್ಯ ಮತ್ತು ಸಾಹಿತ್ಯದ ಮೇಲೆ ತೀವ್ರತರವಾದ ಪ್ರಭಾವವನ್ನು ಬೀರಿದವು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಕನ್ನಡ ದಲಿತ ಸಾಹಿತ್ಯ ಅಲ್ಲಿಂದಲೇ ತನಗೆ ಬೇಕಾದ ಪ್ರೇರಣೆಯನ್ನು ಪಡೆದುಕೊಂಡಿತು.

'ದಲಿತ ಬಂಡಾಯ ಕಾವ್ಯ ಮತ್ತು ವಿಚಾರವಾದಗಳು' ಎನ್ನುವ ಕೃತಿಯಲ್ಲಿ ಪ್ರಾಹ್ಲಾದ ಅಗಸನಕಟ್ಟೆ ಅವರು ದಲಿತ ಬಂಡಾಯ ಕಾವ್ಯದ ಮೇಲೆ ಅಂಬೇಡ್ಕರ್, ಮಾರ್ಕ್ಸ್ ಮತ್ತು ಲೋಹಿಯಾ ಅವರ ವಿಚಾರಗಳು ಬೀರಿದ ಪ್ರಭಾವ ಮತ್ತು ಅದನ್ನು ದಲಿತ ಕಾವ್ಯ ಅಭಿವ್ಯಕ್ತಿಸಿದ ಬಗೆಯನ್ನು ಕುರಿತು ಸಂಶೋಧನೆಯನ್ನೇ ನಡೆಸಿದ್ದಾರೆ. ಇಲ್ಲಿ ದಲಿತ ಕಾವ್ಯಕ್ಕೆ ಇನ್ನಿತರೆ ಪ್ರಭಾವಗಳಿಗಿಂತ ಇವರ ಪ್ರಭಾವಗಳು ಯಾವ ರೀತಿ ಕೆಲಸ ಮಾಡಿವೆ ಎಂಬುದನ್ನು ಅವಲೋಕಿಸಲಾಗಿದೆ. ಮೇಲಿನ ಮಾತಿಗೆ ಪೂರಕವೆಂಬಂತೆ ಅಂಬೇಡ್ಕರ್ ಅವರ ವಿಚಾರಧಾರೆಗಳು ಅಕ್ಷರ ಕಲಿತ ದಲಿತರನ್ನು ಪ್ರಭಾವಿಸಿದ ಬಗೆಯನ್ನು ಅಗಸನಕಟ್ಟೆ ಅವರು ನಿರೂಪಿಸುವ ರೀತಿ ಹೀಗಿದೆ; "ದಲಿತರಿಗೆ ಅಂಬೇಡ್ಕರ್ ಒಂದು ರೂಪಕ, ಪ್ರತಿಮೆ, ಸಂಕೇತ, ಪ್ರತೀಕ ಎಲ್ಲವೂ ಮುಪ್ಪುರಿಗೊಂಡ ಒಂದು ಜೀವಂತ ಸ್ಫೂರ್ತಿಕೇಂದ್ರ. ದಲಿತರ ಕವಿತೆಗಳು ಎಲ್ಲಿಂದಲೇ ಹೊರಟರೂ ಎಲ್ಲಿಯೇ ಸುತ್ತಿ ಬಂದರೂ ಮತ್ತೆ ಅದೇ ಪಾಡಿನ ಹಾಡಿನ ಅಂತ್ಯಕ್ಕೆ ಬಂದು ಮುಟ್ಟಿಬಿಡುತ್ತವೆ. ದಲಿತರೆಲ್ಲ ಹಾಡು, ಸ್ವರ, ಲಯ ಒಂದೇ ಇರಬಹುದೇ ಎಂಬ ಭ್ರಮೆಯನ್ನು ಪುಟ್ಟಿಸುವ ಸಾಮ್ಯತೆಯನ್ನು ಅರ್ಥ-ದನಿಗಳನ್ನು ಹೊಂದಿವೆ. ಹೀಗಾಗಿ ವಿಮರ್ಶಕರು ದಲಿತ ಮತ್ತು ಬಂಡಾಯ ಕಾವ್ಯ ಏಕತಾನತೆಯ ಜಾಡಿಗೆ ಬಿದ್ದು ಬಿಟ್ಟಿದೆಯೆಂಬ ರೂಢಿಗತ ವಿಮರ್ಶೆಯ ಶರಾ ಬರೆದುಬಿಡುತ್ತಾರೆ"[೪] ಎಂದಿದ್ದಾರೆ. ಇಲ್ಲಿ ಅಂಬೇಡ್ಕರ್ ಅಕ್ಷರ ಕಲಿತ ದಲಿತರಿಗೆ ಜೀವಂತ ಸ್ಫೂರ್ತಿಯ ಕೇಂದ್ರವಾಗಿರುವುದನ್ನು ಗುರುತಿಸಲಾಗಿದೆ. ದಲಿತ ಕಾವ್ಯ ತನ್ನ ಆರಂಭದಲ್ಲಿ ಮಾರ್ಕ್ಸ್‌ನ ವಿಚಾರಗಳಿಂದ ನಂತರದಲ್ಲಿ ಅಂಬೇಡ್ಕರ್ ಮತ್ತು ಲೋಹಿಯಾ ಅವರ ವಿಚಾರಧಾರೆಗಳಿಂದ ಪ್ರಭಾವಿತಗೊಂಡಿರುವುದನ್ನು ಕಾಣಬಹುದಾಗಿದೆ.

ಅಂಬೇಡ್ಕರ್, ಮಾರ್ಕ್ಸ್, ಲೋಹಿಯಾ ಅವರುಗಳ ವಿಚಾರಗಳಿಂದಾಗಿಯೇ ದಲಿತ ಕಾವ್ಯ ಸಮಾಜದ ಶೋಷಣೆಯ ನೆಲೆಗಳ ವಿರುದ್ಧ ಗಟ್ಟಿಯಾಗಿ ಮಾತನಾಡಲು ಸಾಧ್ಯವಾಗಿದ್ದು. ವೈಯಕ್ತಿಕ ನೆಲೆಯಿಂದ ದೂರ ಸರಿದು ಸಾಮೂಹಿಕ ನೆಲೆಯಲ್ಲಿ ತನ್ನನ್ನು ಗುರುತಿಸಿಕೊಳ್ಳಲು ಸಾಧ್ಯವಾಗಿದ್ದು. ಪ್ರಾಹ್ಲಾದ ಅಗಸನಕಟ್ಟೆ ಅವರು ಬರೆಯುವಂತೆ "ಖಾಸಗಿಯಾದ ಅಭಿವ್ಯಕ್ತಿಮಾರ್ಗ- ಬಹಿರ್ಮುಖಿಯಾದದ್ದರ ಸೂಚನೆ ಇಲ್ಲಿದೆ. 'ವ್ಯಕ್ತಿ' ಹಿಂದೆ ಸರಿದು

[illegible]

'ಸಮಾಜ' ಸಮುದಾಯದ ಇಷ್ಟಾನಿಷ್ಟಗಳು ಮುಂದಾಗಿವೆ. ಕವಿ ಜನರ ಕೊರಳಾಗುವ ಲಕ್ಷಣಗಳು ದಲಿತ ಕಾವ್ಯದಲ್ಲಿ ಅಡಗಿವೆ."[೯೫] ಇಲ್ಲಿ ದಲಿತ ಕಾವ್ಯದ ಅಭಿವ್ಯಕ್ತಿಯ ಹಿಂದಿನ ಧೋರಣೆಯನ್ನು ಸಮಂಜಸವಾಗಿ ಗುರುತಿಸಲಾಗಿದೆ.

ವಿ. ಮುನಿವೆಂಕಟಪ್ಪ ಅವರು 'ದಲಿತ ಚಳುವಳಿ ಮತ್ತು ಸಾಹಿತ್ಯ' ಎನ್ನುವ ಲೇಖನದಲ್ಲಿ ಭಾರತೀಯ ದಲಿತ ಸಾಹಿತ್ಯದ ಮೇಲೆ ಆಫ್ರಿಕಾದ ಕಪ್ಪು ಸಾಹಿತ್ಯ ತೀವ್ರವಾಗಿ ಪ್ರಭಾವ ಬೀರಿರುವುದನ್ನು ಗುರುತಿಸಿದ್ದಾರೆ. ಅವರೇ ಬರೆದಿರುವಂತೆ "ಆಫ್ರಿಕಾದ ಕಪ್ಪು ಸಾಹಿತ್ಯ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಇಲ್ಲಿಯ ದಲಿತ ಚಳವಳಿ ಮತ್ತು ಸಾಹಿತ್ಯದ ಮೇಲೆ ಅಪಾರ ಪ್ರಭಾವ ಬೀರಿತು. ಈ ಪ್ರಭಾವವನ್ನು ೧೯೫೫ರಲ್ಲಿ ಸ್ಫೋಟಗೊಂಡ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳವಳಿಯಲ್ಲಿ ನೋಡಬಹುದು. ದಲಿತ ಪ್ಯಾಂಥರ್ಸ್ ಎಂದು ಹೆಸರು ಬಂದಿದ್ದೇ ಕಪ್ಪು ಪ್ಯಾಂಥರ್ಸ್ ಹಿನ್ನೆಲೆಯಲ್ಲಿ"[೯೬] ಎಂದು ಹೇಳುತ್ತಲೇ ಅದು ಕರ್ನಾಟಕದಲ್ಲಿ ಉಂಟು ಮಾಡಿದ ತಲ್ಲಣಗಳ ಬಗ್ಗೆಯೂ ಚರ್ಚಿಸಿದ್ದಾರೆ.

ಕನ್ನಡ ದಲಿತ ಕಾವ್ಯ ಮತ್ತು ಸಾಹಿತ್ಯದ ಮೇಲೆ ದಲಿತ ಚಳುವಳಿಗಳ ಪ್ರಭಾವ ದಟ್ಟವಾಗಿರುವುದನ್ನು ಕಾಣಬಹುದು. ಹೋರಾಟದ ಮನೋಭಾವ ದಲಿತರಲ್ಲಿ ಜಾಗೃತಗೊಳ್ಳುತ್ತಿದ್ದಂತೆಯೇ ಅಕ್ಷರ ಅಭಿವ್ಯಕ್ತಿಯ ಮಾಧ್ಯಮವಾಗಿ ರೂಪಿತಗೊಂಡಿತು. ಇದರಿಂದಾಗಿಯೇ ಹೋರಾಟ ಮತ್ತು ಸಾಹಿತ್ಯಕ್ಕೆ ಒಂದು ಅವಿನಾಭಾವ ಸಂಬಂಧವಿದೆ. ಒಂದು ಮತ್ತೊಂದನ್ನು ಪ್ರಭಾವಿಸುತ್ತಾ ವಿಸ್ತರಿಸಿದೆ. ಈ ಸಾಹಿತ್ಯ ಮತ್ತು ಹೋರಾಟದ ಹಿನ್ನೆಲೆಯನ್ನು ಅನೇಕ ಬರವಣಿಗೆಗಳು ಮಂಡಿಸಿವೆ. ಇದರಲ್ಲಿ ಟಿ.ಆರ್. ಚಂದ್ರಶೇಖರ್ ಅವರ 'ದೇಸಿ ಪರಂಪರೆ ಮತ್ತು ದಲಿತ ಸಾಹಿತ್ಯ' ಎನ್ನುವ ಲೇಖನವೂ ಒಂದು. "ಕನ್ನಡದಲ್ಲಿ ಒಂದು ವಿಶಿಷ್ಟ ಸ್ವರೂಪದಲ್ಲಿ ದಲಿತ ಸಾಹಿತ್ಯ ಬೆಳೆದುಕೊಂಡು ಬಂದಿದೆ. ಕನ್ನಡದಲ್ಲಿ ದಲಿತ ಸಾಹಿತ್ಯವು ದಲಿತ ಚಳುವಳಿಯ ಹುಟ್ಟಿನೊಂದಿಗೆ ಆರಂಭವಾಯಿತು ಎಂದು ಹೇಳಬಹುದು"[೯೭] ಎಂದು ಬರೆಯುತ್ತಲೇ ಲೇಖಕರು ಚಳುವಳಿಯ ಪ್ರಭಾವವನ್ನು ಗುರುತಿಸಿದ್ದಾರೆ. ಕರ್ನಾಟಕದ ದಲಿತ ಚಳುವಳಿಯ ಮೇಲೆ ಭಾರತದಾದ್ಯಂತ ನಡೆದ ದಲಿತ ಚಳುವಳಿಗಳು ಮತ್ತು ಹೋರಾಟಗಳು ಪ್ರಭಾವವನ್ನು ಬೀರಿವೆ. ಹಾಗೆಯೇ ದಲಿತ ಸಾಹಿತ್ಯದ ಮೇಲೂ ಇತರೆ ಭಾಷೆಗಳ ಸಾಹಿತ್ಯವೂ ಪ್ರಭಾವ ಬೀರಿದೆ. ಆದರೆ ಎಲ್ಲಕ್ಕಿಂತ ಹೆಚ್ಚಾಗಿ ಕನ್ನಡ ದಲಿತ ಸಾಹಿತ್ಯದ ಮೇಲೆ ದಲಿತ ಸಂಘಟನೆಗಳ ಹೋರಾಟಗಳು ಪ್ರಭಾವ ಬೀರಿರುವುದನ್ನು ಕಾಣಬಹುದಾಗಿದೆ.

ಮೇಲಿನ ಮಾತುಗಳಿಗೆ ಪೂರಕವೆಂಬಂತೆ, ೧೯೭೦ರ ದಶಕದಲ್ಲಿ ಸಾಹಿತ್ಯ ಲೋಕದಲ್ಲಿ ಒಂದು ಹೊಸ ಸಂಚಲನವನ್ನು ಉಂಟುಮಾಡಿದ್ದು ಸಿದ್ಧಲಿಂಗಯ್ಯನವರ ಕಾವ್ಯಗಳು. ಇವರ ಆಯ್ದ ಕವಿತೆಗಳಿಗೆ ಮುನ್ನುಡಿ ಬರೆಯುತ್ತಾ ಡಿ.ಆರ್. ನಾಗರಾಜ ಅವರು ಸಿದ್ಧಲಿಂಗಯ್ಯ

ಅವರ ಕಾವ್ಯದ ಮೇಲೆ ಬೀರಿರುವ ಪ್ರಭಾವವನ್ನು ಗುರುತಿಸಿರುವ ಬಗೆ ಹೀಗಿದೆ; "೭೦ ಮತ್ತು ೮೦ರ ದಶಕಗಳಲ್ಲಿ ಸಿದ್ಧಲಿಂಗಯ್ಯವನರ ಕಾವ್ಯ ಮತ್ತು ದಲಿತ ಚಳುವಳಿಗಳು ಪರಸ್ಪರ ರೂಪಿಸಿಕೊಂಡಿದ್ದವು. ದಲಿತ ಹೋರಾಟದ ಎಲ್ಲ ಆಶಯಗಳೂ ಕವಿಯ ಕಾವ್ಯದಲ್ಲಿ ಪ್ರತಿಧ್ವನಿಸಿದವು. ಅಂಬೇಡ್ಕರ್ ಪ್ರಣೀತ ದಲಿತ ಮುಕ್ತಿಯ ದಾರಿ ಈ ಕಾವ್ಯ ಮತ್ತು ಚಳುವಳಿಗಳನ್ನು ಆಳವಾಗಿಯೇ ಪ್ರಭಾವಿಸಿದ್ದವು."[೯೮] ಈ ಮಾತುಗಳು ಸಿದ್ಧಲಿಂಗಯ್ಯ ಅವರ ಕಾವ್ಯಕ್ಕಷ್ಟೇ ಮಿತಿಗೊಳಿಸಲಾಗುವುದಿಲ್ಲ, ಬದಲಾಗಿ ೭೦ ಮತ್ತು ೮೦ರ ದಶಕದ ಎಲ್ಲಾ ದಲಿತ ಕಾವ್ಯಗಳಿಗೂ ಅನ್ವಯಿಸುತ್ತದೆ. ಅಂಬೇಡ್ಕರ್ ಅವರ ಹೋರಾಟ ಮತ್ತು ಚಳುವಳಿಗಳ ನಡೆ ಅಕ್ಷರ ಕಲಿತ ಕೆಲವು ದಲಿತರಲ್ಲಿ ಆತ್ಮಾಭಿಮಾನವನ್ನು ಹುಟ್ಟುಹಾಕಿದವು. ಈ ಆತ್ಮಾಭಿಮಾನ ಹೋರಾಟದ ಮನೋಭಾವವನ್ನು ರೂಪಿಸಿತು. ಈ ಕಾರಣದಿಂದಾಗಿಯೇ ದಲಿತರ ಅಭಿವ್ಯಕ್ತಿಯ ಹಿಂದೆ ಅಂಬೇಡ್ಕರ್ ಅವರ ಪ್ರಭಾವ ದಟ್ಟವಾಗಿ ನೆಲೆ ನಿಂತಿರುವುದನ್ನು ಕಾಣಬಹುದಾಗಿದೆ.

ಮೇಲಿನ ಮಾತುಗಳಿಗೆ ಪೂರಕವೆಂಬಂತೆ ಸಿದ್ಧಲಿಂಗಯ್ಯ ಅವರು 'ದಲಿತ ಸಾಹಿತ್ಯ' ಕುರಿತು ಬರೆದಿರುವ ಮಾತುಗಳನ್ನು ಅವಲೋಕಿಸಬಹುದು. "ಕನ್ನಡ ದಲಿತ ಸಾಹಿತ್ಯದ ಮೇಲ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರಭಾವ ಅಪಾರ. ಮಹಾರಾಷ್ಟ್ರದ ದಲಿತ ಸಾಹಿತ್ಯಕ್ಕಂತೂ ಅಂಬೇಡ್ಕರ್ ಸ್ಫೂರ್ತಿಯ ಚಿಲುಮೆ. ಕನ್ನಡಕ್ಕೆ ಹೋಲಿಸಿದರೆ ಮಹಾರಾಷ್ಟ್ರದಲ್ಲಿ ಆಗಿರುವ ಸಾಹಿತ್ಯ ಸೃಷ್ಟಿ ಬಹಳ ದೊಡ್ಡದು. ಭಾರತೀಯ ಭಾಷೆಗಳಲ್ಲಿ ಇಂದು ಸೃಷ್ಟಿ ಆಗುತ್ತಿರುವ ಬಹುತೇಕ ಸಾಹಿತ್ಯಕ್ಕೆ ಅಂಬೇಡ್ಕರ್ ಅವರ ಪ್ರಭಾವ ಇದೆ. ಪ್ರತಿಯೊಬ್ಬ ದಲಿತನೂ ಶಿಕ್ಷಣದ ಜೊತೆಗೆ ಅಂಬೇಡ್ಕರ್ ಅವರ ವಿಚಾರಧಾರೆಗೆ ಹತ್ತಿರವಾಗುತ್ತಾ ಹೋಗುವುದು ಈ ಪ್ರಭಾವಕ್ಕೆ ಕಾರಣ. ವಿದ್ಯಾವಂತ ದಲಿತ ತನ್ನ ರಾಜಕೀಯ, ಆರ್ಥಿಕ, ಸೈದ್ಧಾಂತಿಕ ಸಮಸ್ಯೆಗಳಿಗೆ ಅಂಬೇಡ್ಕರ್ ವಾದದಲ್ಲಿ ಉತ್ತರವನ್ನು ಕಂಡುಕೊಳ್ಳುತ್ತಿರುವುದೂ ಇನ್ನೊಂದು ಕಾರಣ. ಕನ್ನಡ ದಲಿತ ಸಾಹಿತ್ಯ ಕೂಡ ಇದಕ್ಕೆ ಹೊರತಲ್ಲ"[೯೯] ಎಂದಿದ್ದಾರೆ. ಅಂಬೇಡ್ಕರ್ ಅವರ ಪ್ರಭಾವ ಇಡೀ ಭಾರತದ ಅಕ್ಷರ ಕಲಿತ ದಲಿತರ ಮೇಲೆ ಆಗಿರುವುದನ್ನು ಮೇಲಿನ ಮಾತುಗಳಿಂದ ತಿಳಿಯಬಹುದು. ಭಾರತದ ಪ್ರತಿ ದಲಿತ ಸಾಹಿತ್ಯವೂ ಕೂಡ ಅಂಬೇಡ್ಕರ್ ವಿಚಾರಧಾರೆಗಳಿಂದ ಪ್ರಭಾವಿತಗೊಂಡೇ ತನ್ನ ಅಭಿವ್ಯಕ್ತಿಯನ್ನು ಮಂಡಿಸಿದೆ. ಅಂಬೇಡ್ಕರ್ ಅವರ ಪ್ರಭಾವದಷ್ಟೇ ಕಾರ್ಲ್‌ಮಾರ್ಕ್ಸ್ ಅವರ ಪ್ರಭಾವ ದಲಿತ ಸಾಹಿತ್ಯದ ಮೇಲಾಗಿರುವುದನ್ನು ಸಿದ್ಧಲಿಂಗಯ್ಯ ಅವರು ಗುರುತಿಸಿದ್ದಾರೆ.

ಕನ್ನಡ ದಲಿತ ಸಾಹಿತ್ಯಕ್ಕೆ ಬೇರೆ ಭಾಷೆಗಳ ಸಾಹಿತ್ಯ ಮತ್ತು ಅನೇಕ ಹೋರಾಟಗಾರರ ತಾತ್ವಿಕ ಚಿಂತನೆಗಳು ಪ್ರೇರಣೆಯನ್ನು ನೀಡಿದವು. ಇದರಂತೆ ಕರ್ನಾಟಕದಲ್ಲಿ ಅಂದು ನಡೆಯುತ್ತಿದ್ದ ಅನೇಕ ಹೋರಾಟಗಳು ಸಾಹಿತ್ಯವನ್ನು ಪ್ರಭಾವಿಸಿದವು. ಯಾವುದೇ ಒಂದು

ಸಮಕಾಲೀನ ಹೋರಾಟಗಳು ಅಂದಂದಿನ ಕಲೆ ಮತ್ತು ಸಾಹಿತ್ಯದ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರುತ್ತವೆ. ಈ ಹಿನ್ನೆಲೆಯನ್ನು ಜಿ.ಆರ್. ತಿಪ್ಪೇಸ್ವಾಮಿ ಅವರು 'ಕನ್ನಡ ದಲಿತ ಸಾಹಿತ್ಯದ ನೆಲೆ' ಎನ್ನುವ ಕೃತಿಯಲ್ಲಿ ಹಿಡಿದಿಟ್ಟಿರುವ ಬಗೆ ಹೀಗಿದೆ; "ಜಾನಪದದಂತೆ ಬದುಕು ಮತ್ತು ಸಾಹಿತ್ಯ ಜೊತೆ ಜೊತೆಯಾಗಿ ಸಾಗಿದವು. ಭೂ ಆಕ್ರಮಣ ಹೋರಾಟಗಳು, ವೆಂಕಟಸ್ವಾಮಿ ಆಯೋಗದ ವರದಿ, ಮುನಿವೆಂಕಟಪ್ಪನವರ ಕೆಂಡದ ನಡುವೆ ಪ್ರಕರಣ, ಗಾಂಧಿ ಚಲನಚಿತ್ರದ ಬಹಿಷ್ಕಾರ, ಖೋಟಾ ಜಾತಿ ಪತ್ರಗಳ ಹಂಚಿಕೆ ವಿರುದ್ಧದ ಹೋರಾಟ, ಬೆತ್ತಲೆ ಸೇವೆ, ದೇವದಾಸಿ ಪದ್ಧತಿ ವಿರುದ್ಧದ ಹೋರಾಟ, ಮಲ ತಿನ್ನಿಸಿದ ಪ್ರಕರಣ, ಬೆಲ್ಚಿ, ಕುದುರೆಮೋತಿ ಪ್ರಕರಣ, ಬೆಂಡಿಗೇರಿ ಪ್ರಕರಣ, ಚುನಾವಣಾ ಬಹಿಷ್ಕಾರ ಮುಂತಾದ ಘಟನೆಗಳು ದಲಿತ ಚಳುವಳಿಗೆ ಹೆಚ್ಚು ಚಾಲನೆ ಬರುವಂತೆ ಮಾಡಿರುವುದಲ್ಲದೆ ದಲಿತ ಸಾಹಿತ್ಯ ರಚನೆಯ ಸಂದರ್ಭದಲ್ಲೂ ಪರಿಣಾಮಕಾರಿಯಾದ ಕೆಲಸ ಮಾಡಿವೆ"[೧೦೦] ಎಂದು ಗುರುತಿಸಿದ್ದಾರೆ. ಮೇಲಿನ ಮಾತುಗಳು ದಲಿತ ಸಾಹಿತ್ಯವು ರೂಪುಗೊಳ್ಳಲು ಸಾಮಾಜಿಕ ಮತ್ತು ರಾಜಕೀಯ ತುರ್ತು ಇತ್ತು ಎಂಬುದನ್ನು ಸಾಬೀತುಪಡಿಸುತ್ತಿವೆ. ಒಟ್ಟಿನಲ್ಲಿ ಹೇಳುವುದಾದರೆ ದಲಿತ ಚಳುವಳಿ, ಹೋರಾಟ ಮತ್ತು ಸಾಹಿತ್ಯ ಈ ಮೂರೂ ಕೂಡ ಜೊತೆಯಲ್ಲೇ ಹುಟ್ಟಿದಂತಹುಗಳು ಮತ್ತು ಒಂದನ್ನೊಂದು ಪ್ರಭಾವಿಸಿರುವಂತಹುಗಳು.

೫. ಸ್ವರೂಪ ಪ್ರಧಾನ ಚರ್ಚೆಗಳು

ದಲಿತ ಕಾವ್ಯದ ಸ್ವರೂಪವನ್ನು ಕುರಿತು ಬಂದಿರುವ ಅಧ್ಯಯನಗಳು ತೀರಾ ಕಡಿಮೆ. ಕೆಲವೊಂದು ವಿಮರ್ಶೆಗಳು ಪ್ರಾಸಂಗಿಕವಾಗಿಯೋ ಅಥವಾ ಸಾಂದರ್ಭಿಕವಾಗಿಯೋ ಅವಲೋಕಿಸಿವೆ. ಅನೇಕ ವಿಮರ್ಶೆಗಳು ದಲಿತ ಕಾವ್ಯ ಮತ್ತು ಸಾಹಿತ್ಯದ ಸ್ವರೂಪವನ್ನು ಕುರಿತು ಚರ್ಚಿಸುವಲ್ಲಿ ಅದರ ಆಶಯ ಮತ್ತು ವಸ್ತುವಿಗಷ್ಟೇ ಚರ್ಚೆಯನ್ನು ಮಿತಿಗೊಳಿಸಿವೆ. ಕಾವ್ಯ ಹೇಗೆ ಬಂದಿದೆ ಎಂಬುದರ ಚರ್ಚೆಯೇ ಸ್ವರೂಪದ ಚರ್ಚೆಯಾಗಲು ಸಾಧ್ಯ. ದಲಿತ ಕಾವ್ಯದ ರೂಪ, ಬಂಧ, ಅಭಿವ್ಯಕ್ತಿ, ಶೈಲಿ ಮುಂತಾದವುಗಳ ಚರ್ಚೆ ಹೆಚ್ಚು ನಡೆದಿಲ್ಲ. ಕನ್ನಡದ ಇತರೆ ಕಾವ್ಯಗಳನ್ನು ಕುರಿತು ಈ ಚರ್ಚೆಗಳು ನಡೆದಿವೆ. ಆದರೆ ದಲಿತ ಕಾವ್ಯದಲ್ಲಿ ಆಶಯಗಳಿಗೇ ಪ್ರಧಾನ ಒತ್ತು ನೀಡಿರುವುದನ್ನು ಕಾಣಬಹುದಾಗಿದೆ.

ಕನ್ನಡ ವಿಮರ್ಶಾ ವಲಯದೊಳಗೆ ದಲಿತ ಕಾವ್ಯವನ್ನು ಸ್ವರೂಪದ ನೆಲೆಯಲ್ಲಿ ಚರ್ಚಿಸಿದವರಲ್ಲಿ ಪ್ರಮುಖರೆಂದರೆ ಡಿ.ಆರ್. ನಾಗರಾಜ್. ಸಿದ್ಧಲಿಂಗಯ್ಯ ಅವರ 'ಆಯ್ದ ಕವಿತೆ'ಗಳಿಗೆ ಮುನ್ನುಡಿ ಬರೆದಿರುವ ಇವರು ಕಾವ್ಯವನ್ನು ಪ್ರಭಾವ–ಪ್ರೇರಣೆ ಹಿನ್ನೆಲೆಯಲ್ಲಿ, ಸ್ವರೂಪದ ಹಿನ್ನೆಲೆಯಲ್ಲಿ, ಆಶಯ ಮತ್ತು ಅಭಿವ್ಯಕ್ತಿಗಳ ಹಿನ್ನೆಲೆಯಲ್ಲಿ, ವಸ್ತುವಿನ ಹಿನ್ನೆಲೆಯಲ್ಲಿ, ಒಟ್ಟಾರೆ ಕಾವ್ಯ ನೋಡುವ ವಿಭಿನ್ನ ದೃಷ್ಟಿಕೋನಗಳಲ್ಲಿ ವಿಶ್ಲೇಷಿಸಿದ್ದಾರೆ.

ಸಿದ್ಧಲಿಂಗಯ್ಯ ಅವರ 'ಬೆಲ್ಚಿಯ ಹಾಡು' ಕವನವನ್ನು ವಿಶ್ಲೇಷಿಸುತ್ತಾ ಡಿ.ಆರ್, ನಾಗರಾಜ್ ಅವರು ಬರೆದಿರುವ ರೀತಿ ಹೀಗಿದೆ; "ಈ ಬಗೆಯ ಸಾಲುಗಳಲ್ಲಿ ಸಿದ್ಧಲಿಂಗಯ್ಯನವರ ಯಶಸ್ಸೂ ಇದೆ, ಸೋಲೂ ಇದೆ. ಉತ್ಪ್ರೇಕ್ಷಾಲಂಕಾರ ತನ್ನ ತೀವ್ರತೆಯ ತುದಿಯಲ್ಲಿ ಅಸಾಮಾನ್ಯವಾದ ರೂಪಕ ಶಕ್ತಿಯನ್ನು ಸಾಧಿಸಬಹುದು. ಇಲ್ಲವೇ ಅದೊಂದು ಚಮತ್ಕಾರ ಅಥವಾ ಕವಿಸಮಯ ಆಗಿ ಪರಿವರ್ತನೆಯಾಗಬಹುದು. ಆಗ ಪ್ರತಿಮೆಗಳ ನಿರೀಕ್ಷಿತ ಹೊಂದಾಣಿಕೆ ಎದ್ದು ಕಾಣುತ್ತದೆ. ಸಿದ್ಧಲಿಂಗಯ್ಯನವರ ಮೂಲ ಪ್ರತಿಭೆಯಲ್ಲಿ ಇಂದಿಗೂ ಇರುವ ಮೂಲ ಗ್ರಹಿಕೆಯ ಗುಣಗಳಿವು. ಸಾಕಷ್ಟು ಮೂಲ ಬದಲಾವಣೆಯಾಗಿದ್ದರೂ ಉತ್ಪ್ರೇಕ್ಷೆ ಹಾಗೇ ಉಳಿದಿದೆ."[೧೦೧] ಇಲ್ಲಿ ಉತ್ಪ್ರೇಕ್ಷೆ ಎನ್ನುವುದನ್ನು ಒಪ್ಪಲಾಗದಿದ್ದರೂ ಕಾವ್ಯವನ್ನು ಅದರ ಸ್ವರೂಪದಲ್ಲಿ ಇಡಿಯಾಗಿ ನೋಡುವ ದೃಷ್ಟಿಕೋನ ಮಹತ್ವದ್ದೆನಿಸುತ್ತದೆ. ಬಹುಶಃ ಸಿದ್ಧಲಿಂಗಯ್ಯ ಅವರ ಕಾವ್ಯವನ್ನು ಬಹು ಆಯಾಮಗಳಲ್ಲಿ ನೋಡಿದವರಲ್ಲಿ ಡಿ.ಆರ್. ನಾಗರಾಜ್ ಅವರೇ ಪ್ರಮುಖರಿರಬೇಕು. ಹಾಗೆಯೇ ಕಾವ್ಯದ ಶೈಲಿಯನ್ನು ಕುರಿತು ಬರೆಯುತ್ತಾ "ಹರಿಹರನ ಸರಾಗ ಪ್ರವಾಹ ಮತ್ತು ಪಂಪ, ರನ್ನರ ಭೀಮ ಸದೃಶ ಗಾಂಭೀರ್ಯಗಳೆರಡೂ ಕುವೆಂಪು ಶೈಲಿಗೆ ಜನ್ಮದತ್ತವಾದ ಗುಣಗಳು. ಈ ಗುಣಗಳು ಸಿದ್ಧಲಿಂಗಯ್ಯನವರಿಗೆ ಸಹಜವಾಗಿ ಬಂದರೂ, ಈ ಭೀಮ ಸದೃಶ ಶೈಲಿಗೆ ಭಿನ್ನವಾದ ಇನ್ನೊಂದು ಲಘು ಶೈಲಿ ಅದರಲ್ಲಿ ಅಡಕವಾಗಿತ್ತು. ಮುಂದೆ ಪ್ರವರ್ಧಮಾನಕ್ಕೆ ಬಂದ ಕಾಮಿಕ್ ಪ್ರತಿಭೆ ಕವಿಯಲ್ಲಿ ಮೊದಲಿಗೆ ಆಡುನುಡಿಯ ಶೈಲಿಯಾಗಿ ಕಾಣಿಸಿಕೊಂಡಿತು"[೧೦೨] ಎಂದಿದ್ದಾರೆ. ಹೊಸದಾಗಿ ಹುಟ್ಟಿದ ಯಾವುದೇ ಕಾವ್ಯ ಪರಂಪರೆಯು ತನ್ನ ಹಿಂದಿನ ಪರಂಪರೆಯ ಸತ್ವವನ್ನು ಅರಗಿಸಿಕೊಂಡೇ ಮುಂದುವರಿಯುತ್ತದೆ ಎಂಬುದು ಮೇಲಿನ ಮಾತುಗಳಿಂದ ತಿಳಿಯುತ್ತದೆ. ದಲಿತ ಕಾವ್ಯವು ಪರಂಪರೆಯ ಲಯದ ಪರಿಭಾಷೆಯನ್ನು ಮುರಿದು ತನ್ನದೇ ಲಯವನ್ನು ಸೃಷ್ಟಿಸಿತು. ಅದಕ್ಕಾಗೇ ಅದು ತನ್ನ ಸಮುದಾಯದ ಅಸಹಾಕತೆಯನ್ನೇ ಮುಖ್ಯವಾಗಿ ಪರಿಗಣಿಸಿತು. ಕಾವ್ಯದ ಲಯ, ಶೈಲಿ, ಪ್ರತಿಮೆಗಳ ಅವಾವರಣ, ಗುಣ, ದೋಷ, ಧ್ವನಿ ಮುಂತಾದವುಗಳನ್ನು ಡಿ.ಆರ್. ನಾಗರಾಜ್ ಅವರು ತಮ್ಮ ಬರವಣಿಗೆಯಲ್ಲಿ ವಿಶ್ಲೇಷಣೆ ಮಾಡಿದ್ದಾರೆ.

ಕನ್ನಡ ದಲಿತ ಸಾಹಿತ್ಯದ ರೂಪ, ಸ್ವರೂಪವನ್ನು ಕುರಿತು ಬರೆಯುತ್ತಾ ರಂಗರಾಜ ವನದುರ್ಗ ಅವರು "ಇದು ದುಡಿವ ಸಮುದಾಯದ ಸಾಹಿತ್ಯ. ಇಲ್ಲಿ ಬದುಕುತ್ತಿರುವ ಶ್ರಮಿಕರ ಬೆವರಿನ ರೂಪಕಗಳಿವೆ. ಸಹಜವಾಗಿಯೆ ಇಂತಹ ರೂಪಕದ ಆಶಯಗಳು ನೆಲದ ಪರವಾಗಿವೆ. ಅಭಿವ್ಯಕ್ತಿ ಕ್ರಮವೂ ಅಷ್ಟೆ. ಗದ್ಯ, ಗಾಯನ ಮತ್ತು ಪ್ರದರ್ಶನದ ಮಾದರಿಗಳು ಆತ್ಮ ಪ್ರತ್ಯಯದ ಅನಿಸಿಕೆಗಳಾಗಿವೆ. ಬಳಸಿಕೊಂಡ ಭಾಷೆ, ರೂಢಿಸಿಕೊಂಡ ತಂತ್ರಗಳು ಮಾತು ಮತ್ತು ಮೌನಗಳ ಒಡಲಲ್ಲಿ ಹುಟ್ಟಿಕೊಂಡಿವೆ. ಅನಂತರ ಅಕ್ಷರ ಸೂರ್ಯನ ಗೆಳೆತನದ ಫಲವಾಗಿ ಹಲವು ರೂಪ ಸ್ವರೂಪಗಳಲ್ಲಿ ಹಬ್ಬಿಕೊಂಡಿವೆ"[೧೦೩] ಎಂದಿದ್ದಾರೆ. ಇಲ್ಲಿ ದಲಿತ

ಕಾವ್ಯದ ಸ್ವರೂಪವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಆದರೆ ಕಾವ್ಯದ ಸ್ವರೂಪಕ್ಕಿಂತ ಹೆಚ್ಚಾಗಿ ಆಶಯಕ್ಕೇ ಪ್ರಧಾನ ಒತ್ತನ್ನು ನೀಡಲಾಗಿದೆ. ಇನ್ನೊಂದು ನೆಲೆಯಲ್ಲಿ ಹೇಳುವುದಾದರೆ ಆಶಯ ಮತ್ತು ಅಭಿವ್ಯಕ್ತಿಯನ್ನೇ ಸ್ವರೂಪದ ನೆಲೆಯಲ್ಲಿ ವಿಸ್ತರಿಸಿದಂತೆ ಕಂಡುಬರುತ್ತದೆ. ಏಕೆಂದರೆ 'ಅಕ್ಷರ ಸೂರ್ಯನ ಗೆಳೆತನದ ಫಲವಾಗಿ ದಲಿತ ಸಾಹಿತ್ಯ ಹಲವು ರೂಪ ಸ್ವರೂಪಗಳಲ್ಲಿ ಹಬ್ಬಿಕೊಂಡಿದೆ' ಎಂದು ಬರೆದಿರುವ ಲೇಖಕರು ತಮ್ಮ ಲೇಖನದಲ್ಲಿ ಇವುಗಳನ್ನು ಪ್ರಧಾನವಾಗಿ ಚರ್ಚಿಸಲೇ ಇಲ್ಲ. ಬದಲಾಗಿ ಕಾವ್ಯದ ಒಟ್ಟು ಆಶಯವನ್ನು ಕುರಿತು ವಿಶ್ಲೇಷಿಸಿದ್ದಾರೆ. ಒಟ್ಟಿನಲ್ಲಿ ಕಾವ್ಯದ ಸ್ವರೂಪಕ್ಕಿಂತ ಆಶಯದ ಚರ್ಚೆಯೇ ಇಲ್ಲಿ ಹೆಚ್ಚು ನಡೆದಿದೆ.

ಮೇಲಿನ ಚರ್ಚೆಗೆ ಮತ್ತೊಂದು ಪೂರಕವೆನಿಸುವಂತೆ ಅರವಿಂದ ಮಾಲಗತ್ತಿ ಅವರ ಲೇಖನವನ್ನು ನೋಡಬಹುದು. ತಮ್ಮ 'ದಲಿತ ಸಾಹಿತ್ಯ ಪ್ರವೇಶಿಕೆ' ಎನ್ನುವ ಕೃತಿಯಲ್ಲಿ ದಲಿತ ಸಾಹಿತ್ಯದ ಸ್ವರೂಪ ಮತ್ತು ಲಕ್ಷಣಗಳನ್ನು ಕುರಿತು ಬರೆದಿದ್ದಾರೆ. ಮೊದಲಿಗೆ ಅದರಲ್ಲಿನ ಗೇಯತೆಯ ಅಂಶಗಳ ಬಗ್ಗೆ ಚರ್ಚಿಸಿದರಾದರೂ ಅಂತಿಮವಾಗಿ ಅದೇ ಆಶಯದ ವಿಶ್ಲೇಷಣೆಯ ಕಡೆ ನಡೆದುಬಿಡುತ್ತಾರೆ. ಅಂತಿಮವಾಗಿ ಅವರು ಕೊಡುವ ತೀರ್ಪು ಹೀಗಿದೆ; ದಲಿತ ಸಾಹಿತ್ಯದ ಕೇಂದ್ರ ಭಾವ, ವರ್ಣ ಮತ್ತು ಜಾತಿ ವ್ಯವಸ್ಥೆಯಿಂದ ಕೂಡಿದ ಒಬ್ಬರಿನ್ನೊಬ್ಬರ ಮೇಲೆ ನಿಂತ ಗೋಪುರಾಕಾರದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸುವುದು. ಹೀಗೆ ಪ್ರಶ್ನಿಸುವಲ್ಲಿಯೇ ಭಿನ್ನರೀತಿಯ ಅಭಿವ್ಯಕ್ತಿಗಳಿವೆ. ಆದರೆ ಈ ಎಲ್ಲ ಅಭಿವ್ಯಕ್ತಿಗಳಲ್ಲಿ ಮಾನವೀಯತೆಯೇ ಮನೆಮಾಡಿಕೊಂಡು ನಿಂತಿದೆ. ಆವೇಶ, ಆರ್ದ್ರತೆ, ವಿಡಂಬನ ಸ್ವರೂಪದ ಅಭಿವ್ಯಕ್ತಿಯೇ ಕೇಂದ್ರವಾಗಿದ್ದು, ಪರಂಪರಾಗತ ಮೌಢ್ಯದ ಮೌಲ್ಯಗಳನ್ನು ಅನಾದರಣೆಯಿಂದ ಕಾಣುವುದು ತಕ್ಷಣವೇ ಗಮನ ಸೆಳೆಯುತ್ತದೆ. ಪ್ರತಿಭಟನೆಗಿಂತ ಅಸಹಾಯಕತೆಯ ಗುಣವೇ ಪ್ರಧಾನವಾಗಿ ಕಂಡುಬರುತ್ತದೆ"[೧೦] ಎಂದಿದ್ದಾರೆ. ಇಲ್ಲಿ ಕೂಡ ಪ್ರಧಾನ ಚರ್ಚೆ ಸ್ವರೂಪ ಕುರಿತು ನಡೆದಿಲ್ಲ. ಗೇಯತೆ ಮತ್ತು ವಿವಿಧ ಅಂಶಗಳನ್ನು ಕುರಿತು ಮೊದಲು ಚರ್ಚಿಸಿದರೂ ಕೂಡ ಅವು ಕೇವಲ ಪ್ರಾಸಂಗಿಕವಾಗಿ ಬಂದಂತೆ ಕಂಡುಬರುತ್ತವೆ. ಆದರೆ ದಲಿತ ಸಾಹಿತ್ಯದ ದೃಷ್ಟಿ ಕೇಂದ್ರೀಕೃತವಾಗಿರುವ ನೆಲೆಗಳ ಅವಲೋಕನಕ್ಕೆ ಇದು ಸಹಾಯಕವಾಗಿ ನಿಲ್ಲುತ್ತದೆ.

ದಲಿತ ಕಾವ್ಯದ ಸ್ವರೂಪವನ್ನು ಕುರಿತು ಚರ್ಚಿಸಿದವರಲ್ಲಿ ಮತ್ತೊಬ್ಬ ಪ್ರಮುಖ ವಿಮರ್ಶಕರೆಂದರೆ ಕೀರ್ತಿನಾಥ ಕುರ್ತಕೋಟಿಯವರು. ಸಿದ್ಧಲಿಂಗಯ್ಯ ಅವರ ಕಾವ್ಯಗಳಲ್ಲಿ ಒಂದಾದ 'ಹೆಂಡಕ್ಕೆ ಸಾವಿಲ್ಲವೋ' ಕವನವನ್ನು ವಿಮರ್ಶಿಸುತ್ತಾ ಅದರೊಳಗಿನ ನೋವಿನ ನೆಲೆಗಳನ್ನು ಗುರುತಿಸಿ ಹೀಗೆ ವಿಶ್ಲೇಷಿಸಿದ್ದಾರೆ. "ಪದ್ಯದ ಲಯ ಮತ್ತೇನನ್ನೋ ಹೇಳುತ್ತದೆ. ವ್ಯಸನ ಮತ್ತು ಹೆಂಡ ಇವುಗಳ ನಿರಂತರ ಧ್ಯಾನದಲ್ಲಿ ಮತ್ತೇನೋ ಹುಟ್ಟಿಕೊಳ್ಳುತ್ತದೆ.

‘ನಮ್ಮಯ ದುಡಿಮೇಲಿ ಧನಿಜೀವ ಅಡಗೈತೆ’ ಅದರಂತೆ ‘ಹೆಂಡದ ಗಡಿಗೇಲಿ ನಮಜೀವ ಅಡಗೈತೆ’ ಈ ಎರಡು ಸಮಾನ ಹೇಳಿಕೆಗಳ ನಡುವಿನ ವಿರೋಧ ಅನುಭವವನ್ನು ಶಕ್ತಿಯುತವಾದ ರೂಪಕವನ್ನಾಗಿಸುತ್ತದೆ. ಧಣಿ ಮತ್ತು ಆಳು ಇವರ ಪರಸ್ಪರ ಅವಲಂಬನ ಬಿಡುಗಡೆಯನ್ನು ಪಡೆಯಲು ಹವಣಿಸುತ್ತದೆ.”[೧೦೫] ಇಲ್ಲಿ ರೂಪಕವು ಸಾಧಿಸುವ ಹೊಸ ಸಾಧ್ಯತೆಗಳನ್ನು ಗುರುತಿಸಲಾಗಿದೆ. ಪದ್ಯ ತನ್ನ ಉದ್ದೇಶಿತ ಆಶಯವನ್ನು ಕಟ್ಟಿಕೊಡುವಲ್ಲಿ ಬಳಸಿಕೊಳ್ಳುವ ವಸ್ತು ಮತ್ತು ಪರಿಕರಗಳ ಚರ್ಚೆ ಇಲ್ಲಿ ಅನಾವರಣಗೊಂಡಿದೆ. ದಲಿತ ಕಾವ್ಯದಲ್ಲಿ ಲಯದ ಪ್ರಾಧಾನ್ಯತೆ ಇರುವುದೇ ಶಕ್ತಿಯುತವಾದ ಸಾಮಾಜಿಕ ವಸ್ತುಸ್ಥಿತಿಯನ್ನು ಮನಗಾಣಿಸುವುದರಲ್ಲಿ. ಈ ಅಂಶಗಳ ಪ್ರಧಾನ ಚರ್ಚೆ ಮೇಲಿನ ವಿಮರ್ಶೆಯಲ್ಲಿದೆ.

ನಟರಾಜ ಹುಳಿಯಾರ್ ಅವರು ಸುಬ್ಬು ಹೊಲೆಯಾರ್ ಅವರ ‘ಸೂಜಿ ಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು’ ಸಂಕಲನಕ್ಕೆ ಮುನ್ನುಡಿ ಬರೆಯುತ್ತಾ ಅವರ ಕಾವ್ಯದ ಸ್ವರೂಪವನ್ನು ಗುರುತಿಸಿರುವ ಬಗೆ ಹೀಗಿದೆ; “ಸುಬ್ಬುವಿನ ಬರವಣಿಗೆಯಲ್ಲಿ ಎರಡು, ಮೂರು ತೊರೆಗಳಿರುವುದು ಗೊತ್ತಾಗುತ್ತದೆ. ಒಂದು: ದಲಿತ ಕಾವ್ಯದ ಪರಿಚಿತ ರೀತಿಯಲ್ಲಿ ಸಮಾಜವನ್ನು ನೋಡುವ ಕ್ರಮ. ಇನ್ನೊಂದು: ನವ್ಯ ಕಾವ್ಯದ ಒಂದು ಮಾದರಿಯನ್ನನುಸರಿಸಿ ಬಿಡಿಬಿಡಿ ಪ್ರತಿಮೆಗಳನ್ನು ಜೋಡಿಸುವ ಕ್ರಮ. ಇದನ್ನು ನೋಡಿದರಂತೂ ಸುಬ್ಬುವಿನ ಸಹಜ ಕವಿವ್ಯಕ್ತಿತ್ವ ನವ್ಯ ಮಾದರಿಯ ಕಟ್ಟಡದತ್ತಲೇ ಹೆಚ್ಚು ಚಲಿಸುತ್ತಿರುವಂತಿದೆ.”[೧೦೬] ಹೀಗೆ ಹೇಳುತ್ತಲೇ ನಟರಾಜ ಹುಳಿಯಾರ್ ಅವರು ಕಾವ್ಯದಲ್ಲಿನ ಪ್ರತಿಮೆ, ರೂಪಕ, ಸಂಕೇತ, ಭಾಷೆ ಇವುಗಳ ಬಗ್ಗೆಯೂ ಚರ್ಚಿಸಿದ್ದಾರೆ. ಒಂದು ಕಾವ್ಯದ ಓದುವಿಕೆ ಯಾವ ಯಾವ ಕ್ರಮದಲ್ಲಿರಬೇಕು ಎಂಬುದಕ್ಕೆ ಮೇಲಿನ ಚರ್ಚೆ ಉದಾಹರಣೆಯಂತಿದೆ. ದಲಿತ ಕಾವ್ಯದಲ್ಲಿ ಬರುವ ಉಪಮೆ ರೂಪಕಗಳು ಕವಿಯೊಬ್ಬನ ಖಾಸಗಿ ಅನುಭವದಿಂದ ರೂಪುಗೊಂಡ ಸಾಮಾಜಿಕ ನೆಲೆಯಲ್ಲಿ ಒಂದಾಗುವ ಬಗೆಗೆ ಈ ಚರ್ಚೆ ಸಾಗಿದೆ.

ದಲಿತ ಕಾವ್ಯದ ಸ್ವರೂಪವನ್ನು ಕುರಿತು ಚರ್ಚಿಸಿದವರಲ್ಲಿ ಮತ್ತೋರ್ವ ಪ್ರಮುಖರೆಂದರೆ ಬಿ.ಎಂ. ಪುಟ್ಟಯ್ಯನವರು. ‘ಆಧುನಿಕತೆ : ದಲಿತ ಬಂಡಾಯ ಕಾವ್ಯ’ ಎನ್ನುವ ಲೇಖನದಲ್ಲಿ ದಲಿತ ಕಾವ್ಯದ ಸ್ವರೂಪ ಕುರಿತ ಚರ್ಚೆ ಹೀಗಿದೆ; “ಮಾನವರಿಂದ ಮಾನವರ ಶೋಷಣೆಯ ವ್ಯಾಪ್ತಿಯ ಹೊರಗಿನಿಂದ ಪ್ರತಿಮೆ ರೂಪಕಗಳನ್ನು ಕನ್ನಡ ಕಾವ್ಯ ಹೊಂದಿತ್ತು. ದಲಿತ ಕಾವ್ಯ ಮಾನವರಿಂದ ಮಾನವರ ವ್ಯಾಪ್ತಿಯಲ್ಲೇ ಪ್ರತಿಮೆ ರೂಪಕಗಳನ್ನು ಸೃಷ್ಟಿಸಿತು. ಹಾಗಾಗಿ ಆ ರೂಪಕ ಮತ್ತು ಪ್ರತಿಮೆಗಳು ಶೋಷಣೆಯ ವಿನ್ಯಾಸವನ್ನು ಬಿಚ್ಚಿಟ್ಟವು”[೧೦೭] ಎನ್ನುವುದರ ಜೊತೆಗೆ “ಕವಿತೆಯ ಧೋರಣೆಗೆ ಅನುಗುಣವಾಗಿ ಅದರ ವಿನ್ಯಾಸವೂ ಕೂಡ ಬದಲಾಯಿತು”[೧೦೮] ಎಂದಿದ್ದಾರೆ. ದಲಿತ ಕಾವ್ಯ ರೂಪುಗೊಂಡಿರುವುದರ ಹಿನ್ನೆಲೆಯನ್ನು ಮೇಲಿನ ಮಾತುಗಳು ಚರ್ಚಿಸುತ್ತಿವೆ. ಕಾವ್ಯದ ಮೆರಗನ್ನು ಹೆಚ್ಚಿಸಲು ಉಪಯೋಗಿಸುತ್ತಿದ್ದ ಪ್ರತಿಮೆಗಳು ದಲಿತ ಕಾವ್ಯಕ್ಕೆ ಬಂದ ತಕ್ಷಣ ಶೋಷಣೆಯ ತೀವ್ರತೆಯನ್ನು ಬಿಚ್ಚಿಟ್ಟವೆಂಬ

ವಾಸ್ತವ ಮೇಲಿನ ಚರ್ಚೆಯಿಂದ ತಿಳಿದುಬರುತ್ತದೆ. ಇಲ್ಲಿ ಪ್ರತಿಮೆಗಳ ಚರ್ಚೆ ಕೇವಲ ಅದು ಹೊರಡಿಸುವ ಧ್ವನಿಗಷ್ಟೇ ಸೀಮಿತಗೊಂಡಿಲ್ಲ. ಕಾವ್ಯ ಪರಂಪರೆ ಇವುಗಳನ್ನು ಮಂಡಿಸುವ ಕ್ರಮದ ಬಗ್ಗೆಯೂ ಚರ್ಚಿಸುತ್ತಿದೆ.

'ದಲಿತ ಬಂಡಾಯ ಸಾಹಿತ್ಯದ ರೂಪ ವಿರೂಪ' ಎನ್ನುವ ಲೇಖನದಲ್ಲಿ ಮೊಗಳ್ಳಿ ಗಣೇಶ್ ಅವರು ದಲಿತ-ಬಂಡಾಯ ಸಾಹಿತ್ಯದ ಸ್ವರೂಪವನ್ನು ಗುರುತಿಸಿ ಹೀಗೆ ಬರೆದಿದ್ದಾರೆ; "ದಲಿತ ಬಂಡಾಯ ಸಾಹಿತ್ಯವು ಹಲವಾರು ಸಮುದಾಯಗಳ ಅಭಿವ್ಯಕ್ತಿಯಾಗಿದ್ದರೂ ಅದರ ಒಟ್ಟು ಧೋರಣೆ ಬದ್ಧತೆ ಸಾಹಿತ್ಯದ ಶಿಲ್ಪ, ಅದರ ಶೈಲಿ ಹಾಗೆಯೇ ಆ ಸಾಹಿತ್ಯದ ಆಶಯ ಮತ್ತು ಭಾಷಿಕ ವಿನ್ಯಾಸವು ಒಂದೇ ಧಾಟಿಯಲ್ಲಿ ವ್ಯಾಪಿಸಿಕೊಂಡಿವೆ. ಒಂದೇ ಅನುಭವವನ್ನೆ ಹಲವಾರು ಕೇರಿಗಳು ನಿರೂಪಿಸಿಕೊಂಡಂತೆ ಕಾಣುವುದು ಹೀಗಾಗಿಯೇ"[೧೧೯] ಎಂದು ಬರೆದಿದ್ದಾರೆ. ಇಲ್ಲಿ ದಲಿತ ಬಂಡಾಯ ಸಾಹಿತ್ಯದ ಅಭಿವ್ಯಕ್ತಿಯಲ್ಲಿ ಸಾಮ್ಯತೆಯನ್ನು ಗುರುತಿಸುವ ಪ್ರಯತ್ನ ನಡೆದಿದೆ. ದಲಿತ ಸಾಹಿತ್ಯದ ಹಿಂದೆ ಅನುಭವದ ಸಮಗ್ರತೆ ಇದೆ. ಹಲವು ಅನುಭವಗಳು ಏಕಕಾಲದಲ್ಲಿ ನಿರೂಪಿತಗೊಂಡಾಗ ಒಂದೇ ಎನಿಸುವುದು ಸಹಜ. ಆದರೆ ಆಳಕ್ಕಿಳಿದಾಗ ನೋವಿನ ವಿಭಿನ್ನ ಮುಖಗಳ ಪರಿಚಯ ಬೇರೆ ಬೇರೆ ಸ್ತರಗಳಲ್ಲಿ ಪರಿಚಯವಾಗುತ್ತದೆ. ಇದು ಒಟ್ಟು ದಲಿತ ಕಾವ್ಯದ ಭಿನ್ನ ಭಿನ್ನ ಪ್ರದೇಶಗಳ ಭಿನ್ನ ಭಿನ್ನ ನೋವುಗಳನ್ನು ಬೇರೆ ಬೇರೆ ನೆಲೆಗಳಲ್ಲಿ ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ.

*****

ಕೊನೆ ಟಿಪ್ಪಣಿಗಳು

೧. ದಲಿತ ಸಾಹಿತ್ಯ ಪ್ರವೇಶಿಕೆ, ಅರವಿಂದ ಮಾಲಗತ್ತಿ, ೧೯೯೭, ಪುಟ ೧೮

೨. ದಲಿತ ಸಾಹಿತ್ಯ ಪ್ರವೇಶಿಕೆ, ಅರವಿಂದ ಮಾಲಗತ್ತಿ, ೧೯೯೭, ಪುಟ ೧೬

೩. ಹುಸಿ ಇಲ್ಲದ ಗೂಡಿನೊಳಗೆ, (ಸಂ) ಅರ್ಜುನ್ ಗೊಳಸಂಗಿ, ೨೦೦೫, ಪುಟ ೩

೪. ಹುಸಿ ಇಲ್ಲದ ಗೂಡಿನೊಳಗೆ, (ಸಂ) ಅರ್ಜುನ್ ಗೊಳಸಂಗಿ, ೨೦೦೫, ಪುಟ ೧೩

೫. ಹುಸಿ ಇಲ್ಲದ ಗೂಡಿನೊಳಗೆ, (ಸಂ) ಅರ್ಜುನ್ ಗೊಳಸಂಗಿ, ೨೦೦೫, ಪುಟ ೨೩

೬ ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ದಲಿತ ಸಂವೇದನೆ: ಒಂದು ಅಧ್ಯಯನ, ಮಹಾದೇವಮ್ಮ, ೨೦೦೭, ಪುಟ ೨೨ (ಎಂ.ಫಿಲ್. ಸಂಪ್ರಬಂಧ)

೭ ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ದಲಿತ ಸಂವೇದನೆ : ಒಂದು ಅಧ್ಯಯನ, ಮಹಾದೇವಮ್ಮ, ೨೦೦೭, ಪು ೨೩ (ಎಂ.ಫಿಲ್. ಸಂಪ್ರಬಂಧ)

೮. ಬದಲಾಗುತ್ತಿರುವ ಸಾಂಸ್ಕೃತಿಕ ಸಂದರ್ಭದಲ್ಲಿ ಕರ್ನಾಟಕ ದಲಿತ ಚಳುವಳಿ ಮತ್ತು ಸಾಹಿತ್ಯ, ಹೆಚ್.ಟಿ. ವೆಂಕಟೇಶಮೂರ್ತಿ, ೨೦೦೦, ಪು ೧೩೮ (ಪಿಹೆಚ್.ಡಿ.ಮಹಾಪ್ರಬಂಧ)

೯. ದಲಿತ ಸಂವೇದನೆ, ರಂಗರಾಜ ವನದುರ್ಗ, ೨೦೦೪, ಪುಟ ೪೫

೧೦. ಕನ್ನಡ ದಲಿತ ಸಾಹಿತ್ಯ ಸಮಾಲೋಕನ, (ಸಂ) ಅರ್ಜುನ್ ಗೊಳಸಂಗಿ, ೨೦೦೩, ಪುಟ ೪೬

೧೧. ಕನ್ನಡ ದಲಿತ ಸಾಹಿತ್ಯ ಸಮಾಲೋಕನ, (ಸಂ) ಅರ್ಜುನ್ ಗೊಳಸಂಗಿ, ೨೦೦೩, ಪುಟ ೪೮

೧೨. ಬಿಂಬ, ಪ್ರತಿಬಿಂಬ, ಎನ್.ಎಸ್. ಶಂಕರೇಗೌಡ, ೨೦೦೪, ಪುಟ ೮೪

೧೩. ಕಪ್ಪು ಕಣ್ಣಿನ ಹುಡುಗಿ, ಎಲ್. ಹನುಮಂತಯ್ಯ, ೧೯೯೧, ಮುನ್ನುಡಿ

೧೪. ಒಡಲ ಹಕ್ಕಿಯ ಹಾಡು, ವಿನಾಯಕ ಕಮತದ, ೨೦೦೨, ಪುಟ ೩

೧೫. ಊರಿಂದ ಊರಿಗೆ, ಲಕ್ಕೂರು ಸಿ. ಆನಂದ, ೨೦೦೪, ಬೆನ್ನುಡಿ

೧೬. ಬೆಂಕಿಯೊಳಗಿನ ಬದುಕು, ಮಹಾದೇವ ಕುಕ್ಕರಹಳ್ಳಿ, ೨೦೦೬, ಪುಟ ೩೪

೧೭. ಸ್ವಾಭಿಮಾನದ ಬೀಡಿಗೆ, ವಿ. ಮುನಿವೆಂಕಟಪ್ಪ, ೧೯೯೬, ಪುಟ ೭೪

೧೮. ಬತ್ತದ ಬೆಳದಿಂಗಳು, (ಪ್ರಸಂ) ಲಕ್ಷ್ಮೀನಾರಾಯಣ ನಾಗವಾರ, ೨೦೦೬, ಪುಟ ೮೪

೧೯. ಅಕ್ಷಾರ ಅಕ್ಷಾರವೇ, ಎಲ್. ಹನುಮಂತಯ್ಯ, ೨೦೦೨, ಪಟು ೯೧

೨೦. ಅದೇ ಪುಟ ೯೮

೨೧. ಬಿಸಿಲ ಭೂಮಿಯ ಕೋಗಿಲೆ, ಜಿ.ಬಿ. ಪೂಜಾರಿ, ೨೦೦೭, ಮುನ್ನುಡಿ

೨೨. ಅದೇ ಮುನ್ನುಡಿ

೨೩. ಪ್ರಭುತ್ವ ಮತ್ತು ಸಾಹಿತ್ಯ, ಆರ್.ವಿ. ಭಂಡಾರಿ, ೨೦೦೫, ಪುಟ ೩೦

೨೪. ಬಯಲ ಬೆಳಕು, (ಸಂ) ಅಪ್ಪಗೆರೆ ಸೋಮಶೇಖರ, ೨೦೧೦, ಪುಟ ೧೪೭

೨೫. ಅದೇ ಪುಟ ೧೪೭

೨೬. ಅದೇ ಪುಟ ೧೫೧

೨೭. ಮತ್ತೆ ಮಳೆ ಬರುವ ಮುನ್ನ, ಮೂಡ್ನಾಕೂಡು ಚಿನ್ನಸ್ವಾಮಿ, ೨೦೦೦, ಪುಟ ೧೦೭

೨೮. ಬಯಲ ಬೆಳಕು, (ಸಂ) ಅಪ್ಪಗೆರೆ ಸೋಮಶೇಖರ, ೨೦೧೦, ಪುಟ ೧೭೧

೨೯. ಅದೇ ಪುಟ ೧೨೫

೩೦. ಚಾಂಡಾಲರ ಕೂಗು, ಗಂಗಾರಾಂ ಚಾಂಡಾಲ, ೧೯೮೩, ಮುನ್ನುಡಿ

೩೧. ಬಡವರ ನಗುವಿನ ಶಕ್ತಿ, (ಸಂ) ಎಚ್. ದಂಡಪ್ಪ, ೨೦೦೧, ಪುಟ ೬೮

೩೨. ಅದೇ ಪುಟ ೧೯೦

೩೩. ದಲಿತಜ್ಞ, (ಸಂ) ಅರ್ಜುನ ಗೊಳಸಂಗಿ, ೨೦೦೦, ಪುಟ ೧೪೭

೩೪. ಅಕ್ಷರ ಅಕ್ಷರವೇ, ಎಲ್. ಹನುಮಂತಯ್ಯ, ೨೦೦೨, ಪುಟ ೯೮

೩೫. ದಲಿತಜ್ಞ, (ಸಂ) ಅರ್ಜುನ ಗೊಳಸಂಗಿ, ೨೦೦೦, ಪುಟ ೧೧೨

೩೬. ಪ್ರೊ. ಅರವಿಂದ ಮಾಲಗತ್ತಿ ಅವರ ಮಾರ್ಗ ಸಾಹಿತ್ಯ, ಕೆ. ಕೇಶವ ಶರ್ಮಾ, ೨೦೦೬, ಪು ೪

೩೭. ಕರಿನೆಲದ ಕಲೆಗಳು, ಸತ್ಯಾನಂದ ಪಾತ್ರೋಟ, ೧೯೮೫, ಪುಟ ೨

೩೮. ಕನ್ನಡ ಮರಾಠಿ ದಲಿತ ಸಾಹಿತ್ಯ, ಸರಜೂ ಕಾಟ್ಕರ್, ೧೯೯೬, ಪುಟ ೫೨

೩೯. ಪ್ರತಿ ಸಂಸ್ಕೃತಿ, ರಹಮತ್ ತರೀಕೆರೆ, ೨೦೦೯, ಪುಟ ೧೬೧

೪೦. ಪ್ರತಿ ಸಂಸ್ಕೃತಿ, ರಹಮತ್ ತರೀಕೆರೆ, ೨೦೦೯, ಪುಟ ೧೬೫

೪೧. ಕದಡು, ಬಿ.ಎಂ. ಪುಟ್ಟಯ್ಯ, ೨೦೦೮, ಪುಟ ೪೫

೪೨. ಸಾಹಿತ್ಯ ಮತ್ತು ಕ್ರಿಯಾಶೀಲತೆ, ಜಿ.ಆರ್. ತಿಪ್ಪೇಸ್ವಾಮಿ, ೨೦೦೫, ಪುಟ ೧೭೮

೪೩. ಸಾಹಿತ್ಯ ಮತ್ತು ಕ್ರಿಯಾಶೀಲತೆ, ಜಿ.ಆರ್. ತಿಪ್ಪೇಸ್ವಾಮಿ, ೨೦೦೫, ಪುಟ ೧೯೦

೪೪. ವಿದ್ರೋಹ, ಮ.ನ. ಜವರಯ್ಯ., ೨೦೦೩, ಪುಟ ೩೮೭

೪೫. ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ, (ಪ್ರ.ಸಂ) ಎಲ್.ಎಸ್. ಶೇಷಗಿರಿರಾವ್, ೧೯೯೩, ಪುಟ ೩೯

೪೬. ಸಾಹಿತ್ಯ ವಾರ್ಷಿಕ, (ಸಂ) ಜಿ.ಎಸ್. ಶಿವರುದ್ರಪ್ಪ, ೧೯೮೭, ಪುಟ ೧೯

೪೭. ಸಾಹಿತ್ಯ ವಾರ್ಷಿಕ, (ಸಂ) ಜಿ.ಎಸ್. ಶಿವರುದ್ರಪ್ಪ, ೧೯೮೭, ಪುಟ ೧೯

೪೮. ಕನ್ನಡ ದಲಿತ ಸಾಹಿತ್ಯ ಮತ್ತು ಪ್ರತಿ ಸಂಸ್ಕೃತಿ, ಬಿ.ಎಂ. ಪುಟ್ಟಯ್ಯ, ಪುಟ ೧೮೦

೪೯. ಕದಡು, ಬಿ.ಎಂ. ಪುಟ್ಟಯ್ಯ, ೨೦೦೮, ಪುಟ ೪೧

೫೦. ಕದಡು, ಬಿ.ಎಂ. ಪುಟ್ಟಯ್ಯ, ೨೦೦೮, ಪುಟ ೧೬೩

೫೧. ಬೆಟ್ಟಗುಡ್ಡಗಳ ಬೋಗುಣಿಯಲ್ಲಿ, ಎಂ. ವೆಂಕಟಸ್ವಾಮಿ, ೧೯೯೬, ಪುಟ ೯೭

೫೨. ದಲಿತ ಕಥನ, ಮೊಗಳ್ಳಿ ಗಣೇಶ್, ೨೦೦೬, ಪುಟ ೩೭

೫೩. ಬಕಾಲ, ಕೆ.ಬಿ. ಸಿದ್ದಯ್ಯ, ೧೯೮೮, ಪುಟ ೨೫

೫೪. ಸ್ವಾಭಿಮಾನದ ಬೀಡಿಗೆ, ವಿ. ಮುನಿವೆಂಕಟಪ್ಪ, ೧೯೯೬, ಪುಟ ೭೩

೫೫. ಬತ್ತದ ಬೆಳದಿಂಗಳು, (ಪ್ರ.ಸಂ) ಲಕ್ಷ್ಮೀನಾರಾಯಣ ನಾಗವಾರ, ೨೦೦೬, ಪುಟ ೧೭೧

೫೬. ಜ್ವಾಲಾಮುಖಿ, ಜಿ. ಶಿವಕುಮಾರ್, ೨೦೦೯, ಪುಟ ೧೦೩

೫೭. ಅದೇ ಪುಟ ೧೦೩

೫೮. ಬಯಲ ಬೆಳಕು, (ಸಂ) ಅಪ್ಪಗೆರೆ ಸೋಮಶೇಖರ, ೨೦೧೦, ಪುಟ ೮೫

೫೯. ಬತ್ತದ ಬೆಳದಿಂಗಳು, (ಸಂ) ಲಕ್ಷ್ಮೀನಾರಾಯಣ ನಾಗವಾರ, ೨೦೦೬, ಪುಟ ೨೯೨

೬೦. ಬಡವರ ನಗುವಿನ ಶಕ್ತಿ, (ಸಂ) ಹೆಚ್. ದಂಡಪ್ಪ, ೨೦೦೧, ಪುಟ ೧೬೭

೬೧. ಅದೇ ಪುಟ ೩೭

೬೨. ಮತ್ತೆ ಮಳೆ ಬರುವ ಮುನ್ನ, ಮೂಡ್ನಾಕೂಡು ಚಿನ್ನಸ್ವಾಮಿ, ೨೦೦೦, ಪುಟ ೧೧೩

೬೩. ಬಡವರ ನಗುವಿನ ಶಕ್ತಿ, (ಸಂ) ಹೆಚ್. ದಂಡಪ್ಪ, ೨೦೦೧, ಪುಟ ೧೬೪

೬೪. ಬಡವರ ನಗುವಿನ ಶಕ್ತಿ, (ಸಂ) ಹೆಚ್. ದಂಡಪ್ಪ, ೨೦೦೧, ಪುಟ ೧೬೩

೬೫. ಸತ್ಯಾನಂದ ಪಾತ್ರೋಟರ ಕಾವ್ಯದಲ್ಲಿ ಪ್ರೀತಿ ಮೀಮಾಂಸೆ, ವಿ.ಅಯ್. ಬಸನಗೌಡರ, ೨೦೦೯, ಪುಟ ೧೯ (ಎಂ.ಫಿಲ್. ಸಂಪ್ರಬಂಧ)

೬೬. ಸತ್ಯಾನಂದ ಪಾತ್ರೋಟರ ಕಾವ್ಯದಲ್ಲಿ ಪ್ರೀತಿ ಮೀಮಾಂಸೆ, ವಿ.ಅಯ್. ಬಸನಗೌಡರ, ೨೦೦೯, ಪುಟ. ೪೯ (ಎಂ.ಫಿಲ್. ಸಂಪ್ರಬಂಧ)

೬೭. ಸಿದ್ಧಲಿಂಗಯ್ಯನವರ ಕಾವ್ಯಗಳಲ್ಲಿ ಭಾಷೆ: ಒಂದು ಅಧ್ಯಯನ, ಮಂಜುಳಾ, ೨೦೦೮ ಪುಟ ೧೮ (ಎಂ.ಫಿಲ್. ಸಂಪ್ರಬಂಧ)

೬೮. ಸಿದ್ಧಲಿಂಗಯ್ಯನವರ ಕಾವ್ಯಗಳಲ್ಲಿ ಭಾಷೆ, ಒಂದು ಅಧ್ಯಯನ, ಮಂಜುಳಾ, ೨೦೦೮, ಪುಟ ೪೨ (ಎಂ.ಫಿಲ್. ಸಂಪ್ರಬಂಧ)

೬೯. ಸಿದ್ಧಲಿಂಗಯ್ಯನವರ ಕಾವ್ಯಗಳಲ್ಲಿ ಕ್ರಾಂತಿಕಾರಿ ಚಿಂತನೆಗಳು, ಗಿರಿಯಪ್ಪ, ೨೦೦೯, ಪುಟ ೨೦ (ಎಂ.ಫಿಲ್. ಸಂಪ್ರಬಂಧ)

೭೦. ಸಿದ್ಧಲಿಂಗಯ್ಯನವರ ಕಾವ್ಯಗಳಲ್ಲಿ ಕ್ರಾಂತಿಕಾರಿ ಚಿಂತನೆಗಳು, ಗಿರಿಯಪ್ಪ, ೨೦೦೯, ಪುಟ ೩೦ (ಎಂ.ಫಿಲ್. ಸಂಪ್ರಬಂಧ)

೭೧. ದೇವನೂರು ಮಹಾದೇವ ಮತ್ತು ಸಿದ್ಧಲಿಂಗಯ್ಯನವರ ಸಾಹಿತ್ಯದಲ್ಲಿ ದಲಿತ ಪ್ರಜ್ಞೆ, ಎ.ಎನ್. ಗಜೇಂದ್ರ, ೨೦೦೬, ಪುಟ ೪೦ (ಎಂ.ಫಿಲ್. ಸಂಪ್ರಬಂಧ)

೭೨. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬಂಡಾಯ, ಚಂದ್ರಕಾಂತ್ ವಿ. ಚವ್ಹಾಣ್, ೨೦೦೪, ಪುಟ ೧೫೮

೭೩. ಅದೇ ಪುಟ ೧೫೯

೭೪. ವಿದ್ರೋಹ, ಮ.ನ. ಜವರಯ್ಯ, ೨೦೦೩, ಪುಟ ೮

೭೫. ದಲಿತ ಸಾಹಿತ್ಯ ದರ್ಶನ, (ಸಂ) ವಿ. ಮುನಿವೆಂಕಟಪ್ಪ, ೨೦೦೨, ಪುಟ ೧೭೮

೭೬. ದಲಿತ ಸಾಹಿತ್ಯ ದರ್ಶನ, (ಸಂ) ವಿ. ಮುನಿವೆಂಕಟಪ್ಪ, ೨೦೦೨, ಪುಟ ೧೭೯

೭೭ ಶ್ರೀ ಶ್ರೀ ಮತ್ತು ಸಿದ್ಧಲಿಂಗಯ್ಯ ತೌಲನಿಕ ಅಧ್ಯಯನ, ಶಿವಕುಮಾರ್ ಕೆ, ೨೦೧೦, ಪುಟ. ೨೬೪ (ಪಿಹೆಚ್.ಡಿ. ಮಹಾಪ್ರಬಂಧ)

೭೮. ಶ್ರೀ ಶ್ರೀ ಮತ್ತು ಸಿದ್ಧಲಿಂಗಯ್ಯ ತೌಲನಿಕ ಅಧ್ಯಯನ, ಶಿವಕುಮಾರ್ ಕೆ, ೨೦೧೦, ಪುಟ ೨೬೨ (ಪಿಹೆಚ್.ಡಿ. ಮಹಾಪ್ರಬಂಧ)

೭೯. ಬಡವರ ನಗುವಿನ ಶಕ್ತಿ, (ಸಂ) ಹೆಚ್. ದಂಡಪ್ಪ, ೨೦೦೧, ಪುಟ ೫೯

೮೦. ಸುಟ್ಟಾವು ಬೆಳ್ಳಿ ಕಿರಣ, ಅಪ್ಪಗೆರೆ ಸೋಮಶೇಖರ್, ೨೦೦೬, ಪುಟ ೨೪

೮೧. ಸುಟ್ಟಾವು ಬೆಳ್ಳಿ ಕಿರಣ, ಅಪ್ಪಗೆರೆ ಸೋಮಶೇಖರ್, ೨೦೦೬, ಪುಟ ೨೯

೮೨. ಬಯಲ ಬೆಳಕು, (ಸಂ) ಅಪ್ಪಗೆರೆ ಸೋಮಶೇಖರ್, ೨೦೧೦, ಪುಟ ೧೫

೮೩. ಬತ್ತದ ಬೆಳದಿಂಗಳು, (ಸಂ) ಲಕ್ಷ್ಮೀನಾರಾಯಣ ನಾಗವಾರ, ೨೦೦೬, ಪುಟ ೫೪

೮೪. ಬತ್ತದ ಬೆಳದಿಂಗಳು, (ಸಂ) ಲಕ್ಷ್ಮೀನಾರಾಯಣ ನಾಗವಾರ, ೨೦೦೬, ಪುಟ ೧೫೧

೮೫. ಸ್ವಾಭಿಮಾನದ ಬೀಡಿಗೆ, ವಿ.ಮುನಿವೆಂಕಟಪ್ಪ, ೧೯೯೬, ಪುಟ ೭೯

೮೬. ಬತ್ತದ ಬೆಳದಿಂಗಳು, (ಸಂ) ಲಕ್ಷ್ಮೀನಾರಾಯಣ ನಾಗವಾರ, ೨೦೦೬, ಪುಟ ೧೪೦

೮೭. ಹೈದ್ರಾಬಾದ್ ಕರ್ನಾಟಕ ದಲಿತ ಸಾಹಿತ್ಯ, ಎಂ.ಆರ್. ಚಲವಾದಿ, ೨೦೧೦ ಪುಟ ೫೯

೮೮. ಅವ್ವ, ಎನ್.ಸಿ. ವೆಂಕಟರಾಜು, ೨೦೦೯, ಮುನ್ನುಡಿ

೮೯. ಬತ್ತದ ಬೆಳದಿಂಗಳು, (ಸಂ) ಲಕ್ಷ್ಮೀನಾರಾಯಣ ನಾಗವಾರ, ೨೦೦೬, ಪುಟ ೨೬೩

೯೦. ದಲಿತಪ್ರಜ್ಞೆ, (ಸಂ) ಅರ್ಜುನ ಗೊಳಸಂಗಿ, ೨೦೦೦, ಪುಟ ೧೩

೯೧. ಕನ್ನಡ ದಲಿತ ಸಾಹಿತ್ಯದ ನೆಲೆ, ಜಿ.ಆರ್. ತಿಪ್ಪೇಸ್ವಾಮಿ, ೨೦೦೧, ಪುಟ ೧೮

೯೨. ಡಾ. ಸಿದ್ಧಲಿಂಗಯ್ಯ: ದಲಿತ ಕಾವ್ಯ ಕುತೂಹಲ, ಎಲ್. ರಾಜಶೇಖರಯ್ಯ, ೨೦೦೯, ಪುಟ ೪೪

೯೩. ಬಂಡಾಯ–ದಲಿತ ಸಾಹಿತ್ಯ, ಪುರುಷೋತ್ತಮ ಬಿಳಿಮಲೆ, ೨೦೦೫, ಪುಟ. ೧೮

೯೪. ದಲಿತ–ಬಂಡಾಯ ಕಾವ್ಯ ಮತ್ತು ವಿಚಾರವಾದಗಳು, ಪ್ರಾಹ್ಲಾದ ಅಗಸನಕಟ್ಟೆ, ೨೦೦೪, ಪುಟ ೧೨೭

೯೫. ಅದೇ ಪುಟ ೧೩೨

೯೬. ಕನ್ನಡ ದಲಿತ ಸಾಹಿತ್ಯ ಸಮಾಲೋಕನ, (ಸಂ) ಅರ್ಜುನ ಗೊಳಸಂಗಿ, ೨೦೦೩, ಪುಟ ೧೨೦

೯೭. ದಲಿತ ಅಧ್ಯಯನ, (ಸಂ) ಚಂದ್ರಶೇಖರ್. ಟಿ.ಆರ್, ೨೦೦೫, ಪುಟ ೨೪೯

೯೮. ಬಡವರ ನಗುವಿನ ಶಕ್ತಿ, (ಸಂ) ಹೆಚ್. ದಂಡಪ್ಪ, ೨೦೦೧, ಪುಟ ೬

೯೯. ಜನಸಂಸ್ಕೃತಿ, ಡಾ. ಸಿದ್ಧಲಿಂಗಯ್ಯ, ೨೦೦೭, ಪುಟ ೨೨೫

೧೦೦. ಕನ್ನಡ ದಲಿತ ಸಾಹಿತ್ಯದ ನೆಲೆ, ಜಿ.ಆರ್. ತಿಪ್ಪೇಸ್ವಾಮಿ, ೨೦೦೧, ಪುಟ ೨೨

೧೦೧. ಬಡವರ ನಗುವಿನ ಶಕ್ತಿ, (ಸಂ) ಹೆಚ್. ದಂಡಪ್ಪ, ೨೦೦೧, ಪುಟ ೬೦

೧೦೨. ಅದೇ ಪುಟ ೫೭

೧೦೩. ದಲಿತ ಸಂವೇದನೆ, ರಂಗರಾಜ ವನದುರ್ಗ, ೨೦೦೪, ಪುಟ ೨೫

೧೦೪. ದಲಿತ ಸಾಹಿತ್ಯ ಪ್ರವೇಶಿಕೆ, ಅರವಿಂದ ಮಾಲಗತ್ತಿ, ೧೯೯೭, ಪುಟ ೧೮

೧೦೫. ಬಡವರ ನಗುವಿನ ಶಕ್ತಿ, (ಸಂ) ಹೆಚ್. ದಂಡಪ್ಪ, ೨೦೦೧, ಪುಟ ೩೯

೧೦೬. ಸೂಜಿಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು, ಸುಬ್ಬು ಹೊಲೆಯಾರ್, ೨೦೦೩, ಮುನ್ನುಡಿ

೧೦೭. ಕದಡು, ಡಾ. ಬಿ.ಎಂ. ಪುಟ್ಟಯ್ಯ, ೨೦೦೮, ಪುಟ ೧೬೪

೧೦೮. ಅದೇ ಪುಟ ೧೬೪

೧೦೯. ದಲಿತ ಕಥನ, ಮೊಗಳ್ಳಿ ಗಣೇಶ್, ೨೦೦೬, ಪುಟ ೪೯

ಅಧ್ಯಾಯ ನಾಲ್ಕು

ದಲಿತ ಕಾವ್ಯದ ಸ್ವರೂಪ, ಲಕ್ಷಣ ಮತ್ತು ವ್ಯಾಪ್ತಿ

೪

ದಲಿತ ಕಾವ್ಯದ ಸ್ವರೂಪ, ಲಕ್ಷಣ ಮತ್ತು ವ್ಯಾಪ್ತಿ

* ‘ಜಾತಿ ಬಿಡಿ ಮತ ಬಿಡಿ ಮಾನವತೆಗೆ ಜೀವ ಕೊಡಿ’
* ‘ಜಾತಿ ಬಿಟ್ಟು ದೇಶ ಕಟ್ಟು’
* ‘ಕೊಟ್ಟಿದ್ದು ಸಾಕು ಹೆಂಡ ಕೋಳಿ, ದಲಿತರು ನಿಂತಿದ್ದಾರೆ ಭೂಮಿ ಕೇಳಿ’
* ‘ರಕ್ತವನ್ನು ಚೆಲ್ಲುತ್ತೇವೆ, ನ್ಯಾಯವನ್ನು ಪಡೆಯುತ್ತೇವೆ’
* ‘ಧಿಕ್ಕಾರ ಧಿಕ್ಕಾರ ಅಸಮಾನತೆಗೆ ಧಿಕ್ಕಾರ’

ಇಂತಹ ಅದೆಷ್ಟೋ ಘೋಷಣೆಗಳು ೧೯೭೦ರ ದಶಕದಲ್ಲಿ ಕರ್ನಾಟಕದ ಮೂಲೆ ಮೂಲೆಯಲ್ಲಿ ಪ್ರತಿಧ್ವನಿಗೊಂಡಿವೆ. ಜನಮನದಲ್ಲಿ ಹೋರಾಟದ ಕಿಚ್ಚನ್ನು ತುಂಬಿವೆ. ಡಾ. ಅಂಬೇಡ್ಕರರ ಅಕ್ಷರ, ಅಧಿಕಾರ, ಆತ್ಮಾಭಿಮಾನದ ಆಶಯಗಳನ್ನು ಮೈಗೂಡಿಸಿಕೊಂಡ ಅಕ್ಷರ ಕಲಿತ ದಲಿತರು ಕರ್ನಾಟಕದಲ್ಲಿ ಹೊಸ ಬಗೆಯ ಹೋರಾಟಕ್ಕೆ ಬುನಾದಿ ಹಾಕಿದರು. ಈ ಹೋರಾಟ ಏಕೆ ಬೇಕಿತ್ತು ಎಂಬುದಕ್ಕೆ ಮೇಲಿನ ಘೋಷಣೆಗಳೊಳಗಿನ ತುಡಿತ, ಧ್ವನಿ ಮತ್ತು ಪದಗಳೇ ಉತ್ತರ ನೀಡುತ್ತವೆ. ದಲಿತ ಸಾಹಿತ್ಯವನ್ನು ಅಭ್ಯಸಿಸುವ ಪ್ರತಿಯೊಬ್ಬರಿಗೂ ಈ ಘೋಷಣೆಗಳೇ ಮೊದಲ ಹಾದಿಯನ್ನು ತೋರಿಸುತ್ತವೆ. ಜಾತಿ, ಧರ್ಮ, ಜೀತ, ಅತ್ಯಾಚಾರ, ಅವಮಾನ, ಶೋಷಣೆ ಮುಂತಾದವುಗಳ ವಿರುದ್ಧ ದಲಿತರು ಮೊದಲ ಬಾರಿ ಧಿಕ್ಕಾರಗಳನ್ನು ಕೂಗಿದರು. ಅವೇ ದಲಿತ ಸಾಹಿತ್ಯದ ಮೊದಲ ಮೆಟ್ಟಿಲುಗಳಾದವು. ಇದರಲ್ಲಿ ಯಾವುದೇ ಅನುಮಾನವಿಲ್ಲ. ಏಕೆಂದರೆ ದಲಿತರು, ದಲಿತ ಸಾಹಿತ್ಯ ಮತ್ತು ಹೋರಾಟಗಳನ್ನು ಬೇರೆಬೇರೆಯಾಗಿ ನೋಡಬಾರದು. ಅವೆಲ್ಲವನ್ನೂ ಒಟ್ಟಾಗಿ ಗ್ರಹಿಸಬೇಕು.

ಎದಿಯನ ಮಾತು ಎದಿಯಾಗಿಟ್ಟು
ಮುಳ್ಳು ಬೇಲಿಯಂಗ ಒಣಗುದು ಬ್ಯಾಡ
ಕಾಸಿಬಡ್ದ ಹಲಗಿಯಂಗ
ಎದಿಯ ಬಿಚ್ಚಿ ಹಾಡುನ ಬಾರಾ[೧]

ಹಾಡುಗಾರಿಕೆಯು ದಲಿತ ಕವಿಗಳು ತಮ್ಮ ಕಾವ್ಯದ ಅಭಿವ್ಯಕ್ತಿಯಲ್ಲಿ ಕಂಡುಕೊಂಡ ಹೊಸ ಮಾರ್ಗ. ೧೯೭೦ರ ದಶಕದಲ್ಲಿ ದಲಿತರಲ್ಲಿ ಒಂದು ಹೊಸ ಎಚ್ಚರವನ್ನು ಮೂಡಿಸಿದ್ದು ದಲಿತ ಹೋರಾಟ. ಹಾಗಾಗಿಯೇ ದಲಿತ ಹೋರಾಟದಲ್ಲಿ ದಲಿತ ಕಾವ್ಯಕ್ಕೆ ವಿಶೇಷ ಸ್ಥಾನಮಾನ. ಈ ದಶಕದ ಅದೆಷ್ಟೋ ಹಾಡುಗಳು ಹೋರಾಟದ ಹಾದಿಗೆ ಸ್ಫೂರ್ತಿ ತುಂಬಿ ದಲಿತರಲ್ಲಿ ಆತ್ಮಾಭಿಮಾನವನ್ನು ಹುಟ್ಟು ಹಾಕಿವೆ. "ಕಾವ್ಯ ಲಿಖಿತ ಪರಂಪರೆಯಲ್ಲೂ ಕೂಡ ಹಾಡುಗಾರಿಕೆಗೆ ಹತ್ತಿರವಾಗುತ್ತದೆ. ಅದು ಯಾವಾಗ ಅಂದರೆ ಅದು ಮೂಲತಃ ವ್ಯವಸ್ಥೆಯೊಂದಕ್ಕೆ ಬದ್ಧವಾಗದೆ ಅಥವಾ ವ್ಯವಸ್ಥೆಯನ್ನು ತಿರಸ್ಕರಿಸಿ ಹೊರಕ್ಕೆ ಬಂದು ಜನಸಮೂಹದ ಬದುಕಿನೊಂದಿಗೆ ತನ್ನ ಸಂಬಂಧವನ್ನು ಸ್ಥಾಪಿಸಿಕೊಳ್ಳಲು ಬಯಸಿದಾಗ".[೨] ಇದು ಅಕ್ಷರಶಃ ದಲಿತ ಕಾವ್ಯಕ್ಕೆ ಅನ್ವಯಿಸುತ್ತದೆ. ಏಕೆಂದರೆ ಸಾವಿರಾರು ಜನರನ್ನು ಹೋರಾಟಕ್ಕೆ ಪ್ರೇರೇಪಿಸಿ ಎದೆತಟ್ಟಿ ನಿಲ್ಲುವಂತೆ ಮಾಡಿದ ಶಕ್ತಿ ಈ ಕಾವ್ಯಗಳದ್ದು.

ಇಲ್ಲಿ ಬುದ್ಧಿಯ ಮಾತಿಲ್ಲ, ಆಡಂಬರದ ಮಾತಿಲ್ಲ. ಹರಟೆಯ ಮಾತಿಲ್ಲ, ಎದೆಯ ಮಾತಿದೆ. ಅದು ಸಮುದಾಯದ ಮಾತೂ ಕೂಡ. ಇಲ್ಲಿ ಎದೆಯ ಮಾತನ್ನು ಬರೆಯಲಾಗಿದೆ. ಆದರೆ ಕರೆಯುತ್ತಿರುವುದು ಹಾಡಲಿಕ್ಕೆ. ಮೌಖಿಕ ಅಭಿವ್ಯಕ್ತಿಗೆ ಈ ದ್ವಂದ್ವತೆ ಇಲ್ಲ. ಏಕೆಂದರೆ ಅದು ಹುಟ್ಟುವುದೇ ಕೇಳುಗರಿರುವಲ್ಲಿ. ಇಲ್ಲಿ ಬರವಣಿಗೆ ಓದುವುದನ್ನು ಅಪೇಕ್ಷಿಸುವಂತದ್ದಾದರೂ, ಕೇಳುಗರನ್ನು ತನ್ನ ಜೊತೆ ಹಾಡಲಿಕ್ಕೆ ಒತ್ತಾಯಿಸುತ್ತಾ ಕಲಿತವರು, ಕಲಿಯದವರು, ಕಲಿತು ಬರೆದವರು, ಕಲಿತು ಓದುವವರು ಎಲ್ಲರೂ ಒಂದಾಗಬೇಕೆಂಬ ಆಶಯ ಮೇಲಿನ ಕವನದ ಸಾಲುಗಳಲ್ಲಿ ಕಂಡುಬರುತ್ತಿದೆ.

ಆಧುನಿಕತೆ ಎಂಬುದು ಸಾಮ್ರಾಜ್ಯಶಾಹಿ ಲೂಟಿಕೋರರ ಕೈಗಳನ್ನು ವಿಸ್ತಾರಗೊಳಿಸಿತು. ಇದರಿಂದಾಗಿ ಬಂಡವಾಳಶಾಹಿ ರಾಷ್ಟ್ರಗಳನ್ನು ಮತ್ತು ದೇಶೀಯ ಬಂಡವಾಳಿಗರನ್ನು ಆರ್ಥಿಕವಾಗಿ ಮತ್ತಷ್ಟು ಪ್ರಬಲಗೊಳ್ಳುವಂತೆ ಮಾಡಿತು. ಇದೇ ಆಧುನಿಕತೆ ಲೂಟಿಕೋರರ ವಿರುದ್ಧ ದಲಿತರಲ್ಲಿ ಶೋಷಣೆ ವಿರುದ್ಧ ಹೋರಾಡುವ ಮನೋಭಾವನೆಯನ್ನು ತಂದುಕೊಟ್ಟಿತು. ದೇವನೂರು ಮಹಾದೇವರ 'ಡಾಂಬರು ಬಂದುದು' ಕತೆಯಲ್ಲಿ ಈ ಆಧುನಿಕತೆಯ ವಿಭಿನ್ನ ಮುಖಗಳ ಅನಾವರಣದ ಒಳನೋಟಗಳು ಸಿಗುತ್ತವೆ. ಈ ಆಧುನಿಕತೆಯಿಂದಾಗಿ ದಲಿತರಲ್ಲಿ ಕೊಂಚ ಬದಲಾವಣೆಯ ಗಾಳಿ ಬೀಸಿತು. ಅದರಲ್ಲೂ ಆಧುನಿಕ ಶಿಕ್ಷಣ ಪಡೆದ ಕೆಲವು ದಲಿತರನ್ನು ಹೊಸ ಚಿಂತನೆಗೆ ಹಚ್ಚಿತು. ಸಮಾಜವನ್ನು ನೋಡುವ ಅವರ ದೃಷ್ಟಿಕೋನವನ್ನು ಸ್ವಲ್ಪಮಟ್ಟಿಗೆ ಬದಲಿಸಿತು. ಈ ಹಿನ್ನೆಲೆಯಲ್ಲಿ ಕೆಳಗಿನ ಕವಿತೆಯ ಸಾಲುಗಳನ್ನು ಗಮನಿಸಬಹುದು.

ಗಂಗಮ್ಮಗೆ ಗುಡಿಕಟ್ಟಿಸಿ ಮಾರಮ್ಮಗೆ ಹರಕೆಕಟ್ಟಿ
ಕೋಳಿಕುರಿ ಕುಯ್ಯುವ ಯುಗ ಹೊರಟು ಹೋಯಿತು
ಹೊಸ ಓದಿನಿಂದ ಲೋಕವೇ ಬದಲಾಯಿತು[೩]

ಹಳೆಯದರ ನೆನಪು, ಹೊಸತನದ ಹುಡುಕಾಟ ಮತ್ತು ಮುಂದಿನ ದಾರಿಗಳನ್ನು ರೂಪಿಸುವುದು ದಲಿತ ಕಾವ್ಯದಲ್ಲಿ ಪ್ರಧಾನವಾಗಿ ನೆಲೆನಿಂತಿದೆ. ಇವುಗಳಿಗಿಂತ ಮುಖ್ಯವಾಗಿ ದಲಿತ ಕವಿಗಳನ್ನು ಕಾಡಿರುವುದು ವರ್ತಮಾನ. ವರ್ತಮಾನವನ್ನು ಸರಿಯಾಗಿ ಅರ್ಥೈಸಿಕೊಂಡರೆ ಮಾತ್ರ ಭೂತ ಮತ್ತು ಭವಿಷ್ಯಗಳು ತಾವಾಗೇ ತಮ್ಮ ಅಸ್ತಿತ್ವವನ್ನು ತೆರೆದುಕೊಳ್ಳುತ್ತವೆ. ಅಕ್ಷರ ಕಲಿತ ದಲಿತರಿಗೆ ಇದು ಬಹಳ ಮುಖ್ಯವೆನಿಸಿರಬೇಕು. ಆದ್ದರಿಂದಲೇ ವರ್ತಮಾನವನ್ನು ದಲಿತ ಕವಿಗಳು ಮತ್ತು ಚಿಂತಕರು ಶೋಷಣಾಯುಕ್ತ ಸಮಾಜದ ನೆಲೆಯಲ್ಲಿ ಕಂಡುಕೊಂಡರು. ಈ ವರ್ತಮಾನದ ಅರಿವು ಅಕ್ಷರ ಶಿಕ್ಷಣ ಪಡೆದ ದಲಿತರನ್ನು ಹೋರಾಟದ ಹಾದಿಯಲ್ಲಿ ಸಾಗುವಂತೆ ಪ್ರೇರೇಪಿಸಿತು. ಈ ಅರಿವಿನಿಂದ ರಚನೆಯಾದ ಕಾವ್ಯವು ಪರಂಪರೆ, ವರ್ತಮಾನ ಮತ್ತು ಭವಿಷ್ಯವನ್ನು ಮುಖಾಮುಖಿಯಾಗಿಸುತ್ತಾ ಮೂಡಿಬಂತು. ಕನ್ನಡ ಸಾಹಿತ್ಯದಲ್ಲಿ ಹಳೆಯ ನೆನಪು ಇಲ್ಲವೆಂದಲ್ಲ, ಇದೆ. ಅದು ಅನುಭವದ ಪರಾಕಾಷ್ಠತೆಯಲ್ಲಿ ಮಿಂದು ತನ್ನನ್ನೂ ಮತ್ತು ತನ್ನ ಇರುವಿಕೆಯನ್ನು ವಾಸ್ತವಕ್ಕಿಂತ ಹೆಚ್ಚಾಗಿ ವೈಭವೀಕರಣದ ಹಾದಿಯಲ್ಲಿ ಕೊಂಡೊಯ್ಯುವ ಸ್ಥಿತಿಯಲ್ಲಿ ಸಾಗಿ ಬಂದಿತ್ತು. ಆದರೆ ದಲಿತ ಕವಿಗಳು ಹಿಂದಿನ ಪರಂಪರೆಯು ವರ್ತಮಾನವನ್ನು ಪ್ರಭಾವಿಸಿರುವ ಬಗೆಯನ್ನು ಅರಿತರು. ಹೊಸತನಕ್ಕೆ ತಮ್ಮ ಅಭಿವ್ಯಕ್ತಿಯನ್ನು ಸನ್ನದ್ದುಗೊಳಿಸಿದರು.

ಇಲ್ಲಿ ಆಧುನಿಕ ಶಿಕ್ಷಣದ ಸಕಾರಾತ್ಮಕ ಮುಖವನ್ನು ಅತಿರೇಕದ ಹಂತದಲ್ಲಿ ಚರ್ಚಿಸುತ್ತಿರುವ ಗುಮಾನಿಯೂ ಇದೆ. ಅಕ್ಷರದಿಂದ ವಂಚಿತರಾದ ದಲಿತರು ಮೌಖಿಕವಾಗೇ ತಮ್ಮ ಅಭಿವ್ಯಕ್ತಿಯನ್ನು ಕಂಡುಕೊಂಡವರು. ಅಕ್ಷರವು ಅನಿವಾರ್ಯ ಪರಿಸ್ಥಿತಿಯಲ್ಲಿ ಇವರ ಬಳಿ ಬಂದಾಗ ಅದು ಹೊಸದನ್ನೇನೂ ತರಲಿಲ್ಲ. ಬದಲಾಗಿ ತಮ್ಮದಲ್ಲದ, ತಮ್ಮ ಬದುಕಿಗೂ ಅದಕ್ಕೂ ಸಂಬಂಧವಿಲ್ಲದ ಆಲೋಚನೆಗಳು ಇವರನ್ನು ಪ್ರಭಾವಿಸಿದವು. ಯಾವುದನ್ನು ದಲಿತರು ಎದುರಿಸಿ ನಿಲ್ಲಬೇಕಿತ್ತೋ ಅವುಗಳು ನೀತಿಯೋಪಾದಿಯಲ್ಲಿ ಪಥ್ಯರೂಪ ತಾಳಿ ದಲಿತರ ಮುಂದೆ ನಿಂತವು. ಇವುಗಳ ಮಧ್ಯೆ ಸಿಕ್ಕಿಹಾಕಿಕೊಂಡ ನೌಕರಿ ಪಡೆದ ದಲಿತರು ಏಕಕಾಲದಲ್ಲಿ ತಮ್ಮ ಇರುವಿಕೆಯಿಂದ ಬೇರ್ಪಟ್ಟು ಮಧ್ಯಮ ಜಾತಿಯ ಆಶೋತ್ತರಗಳಿಗೆ ಅನುಗುಣವಾಗಿ ಬದಲಾಗಲು ಪ್ರಾರಂಭಿಸಿದರು. ಈ ಅಪಾಯ ದಲಿತರ ಒಟ್ಟು ಅಸ್ತಿತ್ವವನ್ನು ಬಲಿ ತೆಗೆದುಕೊಳ್ಳುವ ಹಂತ ತಲುಪಿತು. ಆಗ ಅಕ್ಷರ ಕಲಿತ ಕೆಲವು ದಲಿತರು ಅಂಬೇಡ್ಕರ್ ಹೋರಾಟದ ಹಾದಿಯಿಂದ ಪ್ರೇರಣೆ ಪಡೆದರು. ಸಾಹಿತ್ಯವನ್ನು ಪ್ರತಿಭಟನೆಯ ಅಸ್ತ್ರವನ್ನಾಗಿ ಮಾರ್ಪಡಿಸಲು ಮುಂದಾದರು. ಪರಂಪರೆಯಿಂದಲೇ ತಮ್ಮ ಅಸ್ತಿತ್ವವನ್ನು ಕಂಡುಕೊಂಡಿದ್ದ ದಲಿತರಿಗೆ ಅಕ್ಷರ ಸಂಸ್ಕೃತಿ ಹೊಸದನ್ನೇನೂ ತಂದುಕೊಡಲಿಲ್ಲ. ಬದಲಾಗಿ ಅಕ್ಷರದ ಮೂಲಕ ಪರ್ಯಾಯ ಆಲೋಚನೆಯನ್ನು ಬಿತ್ತಲು ಮತ್ತು ಅದನ್ನು ಸಾಂಸ್ಕೃತಿಕವಾಗಿ ನೆಲೆಗೊಳ್ಳುವಂತೆ ಮಾಡಲು ಸಾಧ್ಯವಾಯಿತು.

ದಲಿತರು ತಮ್ಮ ಅಸ್ತಿತ್ವವನ್ನು ಕುರಿತು ಆಲೋಚಿಸದಂತೆ ದೇವರು, ಧರ್ಮ ಕರ್ಮ ಮುಂತಾದವು ಅಡ್ಡಿ ಮಾಡಿದ್ದವು. ಆಧುನಿಕ ಓದು ದಲಿತರಿಗೆ ಚಿಂತಿಸುವ ಶಕ್ತಿಯನ್ನು ತಂದುಕೊಟ್ಟಿತು. ಹೊಸ ಓದಿನಿಂದ ಹೊಸ ಲೋಕವನ್ನು ದಲಿತರು ಕಾಣಲಿಲ್ಲ, ಬದಲಾಗಿ ತಮ್ಮ ಈವರೆಗಿನ ಬದುಕಿನ ರೀತಿನೀತಿಯನ್ನು ಸರಿಯಾಗಿ ಅರ್ಥೈಸಿಕೊಂಡರು. ಇದರಿಂದಾಗಿ ತಮ್ಮ ಅತಂತ್ರ ಬದುಕಿನ ವಿರುದ್ಧ ಮಾತನಾಡಲು ಪ್ರಾರಂಭಿಸಿದರು. ಈ ಮಾತೇ ಕೆಲವರಲ್ಲಿ ಹಾಡಾಗಿ, ಮತ್ತೆ ಕೆಲವರಲ್ಲಿ ಕಾವ್ಯವಾಗಿ ಹೊಮ್ಮಿತು. ಸಾವಿರಾರು ವರ್ಷಗಳ ಶೋಷಣೆಯ ತೀವ್ರತೆಯನ್ನು ಒಮ್ಮೆಲೇ ಹೊರಹಾಕುವಂತೆ ಕಾವ್ಯ ಕಟ್ಟಿ ಸಾಹಿತ್ಯ ಲೋಕದಲ್ಲಿ ತಮ್ಮದೇ ಛಾಪು ಮೂಡಿಸಲು ಪ್ರಾರಂಭಿಸಿದರು.

ನಾ ಹಾಡಬೇಕು
ಜನರ ಹಾಡು
ಹಸಿವಿನ ಹಾಡು
ಉಸಿರಿನ ಹಾಡು
ನನ್ನದೇ ಆದ
ನನ್ನವರ ಪಾಡು
ನಾ ಹಾಡಬೇಕು[೪]

ಇಲ್ಲಿ ಹಾಡಲೇಬೇಕೆಂಬ ತೀವ್ರ ತುಡಿತವಿದೆ; ಕುದಿತವಿದೆ; ಸಂಕಲ್ಪವಿದೆ. ಪಾರಂಪರಿಕ ಹಾಡಿನ ರೂಪಕ್ಕೊಂದು ಪ್ರತಿರೋಧವೂ ಇದೆ. ಈ ತುಡಿತ ಕಾವ್ಯ ಲೋಕದಲ್ಲಿ ಗಟ್ಟಿಯಾಗಿ ನೆಲೆಯೂರುವ ಕಡೆಗಿಲ್ಲ. ಹೊಸದನ್ನೇನೋ ಸೃಷ್ಟಿಸುತ್ತೇನೆಂಬ ಭ್ರಮೆಯೂ ಇಲ್ಲ. ಇಲ್ಲಿ ಹಸಿವಿನ, ನೋವಿನ, ಉಸುರಿನ ಹಾಡಿದೆ. ತನ್ನವರ ಪಾಡನ್ನೇ ಹಾಡಾಗಿಸಿ ಬೆವರಿಗೆ ಬೆಲೆ ಕಟ್ಟುವ ಒಳಗಿನ ಬೇಗುದಿಯಿದೆ. ಇದು ದಲಿತ ಕವಿಗಳ ಬಹುಮುಖ್ಯ ತುಡಿತಗಳಲ್ಲೊಂದು. ಏಕೆಂದರೆ ಇವರ ಕವನ ಹವಾನಿಯಂತ್ರಿತ ಕೊಠಡಿಯಲ್ಲಿ ಹಾಡಾಗಿ ಹೊರಹೊಮ್ಮಿದವುಗಳಲ್ಲ, ಪ್ರಕೃತಿಯ ನಿರ್ಜನ ಸ್ವಚ್ಛ ಸುಂದರತೆಯಲ್ಲಿ ಮೈಮರೆತವುಗಳೂ ಅಲ್ಲ. ಹಾಡುವುದನ್ನು ಹಕ್ಕಿಗಳ ಮಧುರಗಾನಕ್ಕೆ ಹೋಲಿಸುತ್ತಾ ಅದರ ಒಂದು ಭಾಗ ನಾವು ಎನ್ನುವ ಕಲ್ಪನೆಯ ಕನಸುಗಾರಿಕೆಯೂ ಇಲ್ಲಿಲ್ಲ.

ಇಲ್ಲಿ ಹಸಿವಿನ, ಉಸಿರಿನ ಹಾಡಿದೆ. ಆದರೆ ನನ್ನವರ ಪಾಡು ಎನ್ನುವಾಗ ಅದು ನನ್ನದಲ್ಲ ಎನ್ನುವ ಅಂಶವನ್ನೂ ಅದು ಹೊರಹಾಕುತ್ತಿರಬಹುದೆಂಬ ಗುಮಾನಿಯೂ ಕಾಡುತ್ತದೆ. ಇದು ಅಕ್ಷರ ಕಲಿತ ದಲಿತ ತಾನಿರುವ ವಾಸಸ್ಥಳವನ್ನು ಬಿಟ್ಟು ನಗರ ಪ್ರದೇಶಗಳಲ್ಲಿ ವಾಸಿಸುತ್ತಾ ತನ್ನವರ ಬದುಕನ್ನು ಕಂಡ ಬಗೆ ಇದಾಗಿರಬೇಕೆಂಬ ಅನುಮಾನಕ್ಕೆ ಕವಿತೆಯ

ಸಾಲುಗಳು ಎಡೆಮಾಡಿಕೊಡುತ್ತವೆ. ಈ ಚರ್ಚೆಯನ್ನು ಮುಂದುವರಿಸುವುದಾದರೆ ಅಕ್ಷರದ ಅರಿವೇ ಇಲ್ಲದ ತಂದೆ ತಾಯಿಗಳು ಒಂದು ಕಡೆ. ಅವರ ಜೀತದಿಂದ ಶಿಕ್ಷಣ ಪಡೆದ ಮಕ್ಕಳು ಒಂದು ಕಡೆ. ಮಕ್ಕಳ ಭವಿಷ್ಯವನ್ನು ಕುರಿತು ಅವರು ಕಟ್ಟಿಕೊಳ್ಳುವ ಕನಸುಗಳು ಒಂದು ಕಡೆ. ಈ ದ್ವಂದ್ವದಲ್ಲಿ ಅಕ್ಷರ ಕಲಿತವರು ತಮ್ಮ ತಂದೆ ತಾಯಿಗಳನ್ನು ನೋಡುವ ಕ್ರಮವು ಅವರ ತಂದೆ ತಾಯಿಗಳಿಗೆ ಪೂರಕವಾಗಿಲ್ಲ.

ದಲಿತ ಕಾವ್ಯವು ತಾನು ಕಾವ್ಯ ಹೇಗೆ ಎಂಬುದನ್ನು ಸಮರ್ಥಿಸಿಕೊಂಡಿದೆ. ಈ ಸಮರ್ಥಿಸಿಕೊಳ್ಳುವುದರ ಅನಿವಾರ್ಯತೆ ಇವತ್ತಿನದೇನೂ ಅಲ್ಲ. ಸಾಮಾನ್ಯವಾಗಿ ಎಲ್ಲಾ ಕಾವ್ಯದಲ್ಲಿಯೂ ಇದನ್ನು ಕಾಣಬಹುದು. ಆದರೆ ಅವುಗಳ ಅಭಿವ್ಯಕ್ತಿ ವಿಧಾನಗಳು ಬೇರೆ ಬೇರೆಯಾಗಿರಬಹುದು. ಮೇಲೆ ಉಲ್ಲೇಖಿಸಿದ ಕಾವ್ಯವನ್ನೇ ತೆಗೆದುಕೊಂಡರೆ ಅದು ತನ್ನ ಆಶಯಕ್ಕಾಗಿ ಹಸಿವನ್ನು, ಉಸಿರನ್ನೇ ಅಭಿವ್ಯಕ್ತಿಯನ್ನಾಗಿಸಿಕೊಂಡಿದೆ. ಆ ಮೂಲಕ ಕಾವ್ಯದ ರೂಪ ತಾಳಿದೆ. ಈ ಸಮರ್ಥನೆಯಲ್ಲಿ ದ್ವಂದ್ವತೆಗಳಿಲ್ಲ. ಆದರೆ ತನ್ನ ಆಶಯ ಪ್ರಧಾನ ನೆಲೆಗಟ್ಟಿನಲ್ಲಿ ನಿಂತು ಸಾಮಾಜಿಕ ವ್ಯವಸ್ಥೆಗೊಂದು ಪರ್ಯಾಯ ಆಲೋಚನೆ ಕೊಡುವಾಗ ದ್ವಂದ್ವತೆ ಕಾಡಿದೆ. ಸಮಾಜವೇ ಈ ಅಧ್ಯಯನದ ಕೇಂದ್ರಬಿಂದುವಾದ ಕಾರಣ ಈ ವೈರುಧ್ಯಗಳನ್ನು ಕುರಿತು ಮುಂದೆ ಚರ್ಚಿಸಲಾಗುವುದು.

ಗುಡಿಲಿಲಿನಲ್ಲಿ ಅರಳುವ ಗುಲಾಬಿ
ನಕ್ಷತ್ರ ನನ್ನ ಕವನ
ಕತ್ತಲೆಯಲ್ಲಿ ಕಾಣುವ ಬೆಳಕು
ಬಂಡಾಯದ ಈ ಕವನ[೫]

ಈ ಬಂಡಾಯದ ಕವನ ಗುಡಿಸಿಲಿನಲ್ಲಿ ಅರಳುತ್ತಿದೆ. ಗುಡಿಸಲು ದಲಿತರಾದಿಯಾಗಿ ದುಡಿಯುವ ಸಮುದಾಯ ಬದುಕುವ ತಾಣ. ಇಲ್ಲಿಂದಲೇ ಕಾವ್ಯ ಕಸಿಯೊಡೆಯುತ್ತಿದೆ, ಅದೂ ಗುಲಾಬಿ ನಕ್ಷತ್ರವಾಗಿ. ಇಲ್ಲಿನ ನಕ್ಷತ್ರ ಆಕಾಶದ ಸೌಂದರ್ಯಕ್ಕೆ ಮೆರುಗು ನೀಡಿ ಪೋಣಿಸಿದ ಹೂ ಮಾಲೆಗಳಲ್ಲ. ಬದಲಾಗಿ ನಕ್ಷತ್ರದ ಬೆಳಕು ಭೂಮಿಗೂ ಕೂಡ ಬೀಳುವುದಿಲ್ಲ. ಆದರೆ ಎಲ್ಲ ಜನಕ್ಕೂ ಕಾಣಿಸುತ್ತದೆ. ಕಂಡಷ್ಟೆ ಅದರ ಗಾತ್ರವೂ ಇರುವುದಿಲ್ಲ. ಅದರೊಳಗೆ ಅದರದೇ ಆದ ಒಂದು ದೊಡ್ಡ ಜಗತ್ತಿದೆ. ಇಂತಹ ಜಗತ್ತೇ ದಲಿತ ಕಾವ್ಯದೊಳಗಿಂದ ತನ್ನ ದನಿಯನ್ನು ಹೊರಚೆಲ್ಲಿದೆ. ಅದೂ ಹೇಗೆ? ಗುಲಾಬಿಯಾಗಿ, ಗುಲಾಬಿ ಪ್ರೀತಿಗೂ ಮತ್ತು ಕ್ರಾಂತಿಗೂ ಸಂಕೇತ. ಇಲ್ಲಿ ಬದಲಾವಣೆಯ ನಂತರ ಉಂಟಾಗುವ ಪರಿಣಾಮದ ಕಡೆಗೆ ದಲಿತ ಕಾವ್ಯದ ನೋಟವಿದೆ. ಇಂತಹ ಗುಡಿಸಲಿನಲ್ಲಿ ಕೂತ ಕವಿ ಕೊಡುವುದಾದರೂ ಎಂತಹ ಕವನವನ್ನು?

ನನ್ನ ಜನರೊಡನೆ ನಾನಾಡಿದ ಮಾತು
ನಾನು ಕೊಡುವ ಕವನ
ನನ್ನ ಜನರ ನಾನೋಡಿದ ರೀತಿ
ನನ್ನ ಒಡಲ ಕವನ[೬]

ಆಡಿದ ಮಾತು ಮತ್ತು ನೋಡಿದ ನೋಟ ಎರಡೂ ಮುಖ್ಯ. ಏಕೆಂದರೆ ಮಾತು ಆಲಿಸುವವರನ್ನು ಉದ್ದೇಶಿಸಲ್ಪಟ್ಟಿದ್ದು, ನೋಟ ಪರಸ್ಪರ ಸಂಪರ್ಕವನ್ನು ಬೆಳೆಸುವಂತಹದ್ದು. ಕವನ ಎನ್ನುವುದು ಜೀವನದ ಅನುಭವದಿಂದ ಸಮ್ಮಿಳಿತಗೊಂಡು ಅಥವಾ ಪರಿಪಾಕಗೊಂಡು ಹೊರಹೊಮ್ಮಬೇಕೆಂಬ ತಾತ್ವಿಕ ನಿಲುವಿಗೇ ಇಲ್ಲಿ ಪ್ರತಿರೋಧವಿದೆ. ಪ್ರತಿರೋಧ ಯಾವಾಗಲೂ ಪ್ರತಿ ಪರ್ಯಾಯವನ್ನು ಹುಟ್ಟುಹಾಕುತ್ತದೆ. ಮಾತಿಗೂ, ಕಾವ್ಯಕ್ಕೂ, ನೋಟಕ್ಕೂ ಒಂದು ಸಂಬಂಧವೇರ್ಪಟ್ಟು ಕಾವ್ಯರೂಪ ತಾಳಿದೆ. ಕವನ ಮಾತಾಗುವ ಬಗೆಯನ್ನು ಅಥವಾ ಮಾತೇ ಕವನವಾಗುವ ಬಗೆಯನ್ನು ಮೇಲಿನ ಸಾಲುಗಳು ಹೇಳುತ್ತಿವೆ. ಕವನವು ಸಮುದಾಯದ ಸಂಕಷ್ಟಗಳ ಹಿನ್ನೆಲೆಯಲ್ಲಿ ಮೂಡಬೇಕೆಂಬ ಒತ್ತಾಯವನ್ನು 'ಒಡಲ ಕವನ' ಎಂಬ ಮಾತು ಸೂಕ್ಷ್ಮವಾಗಿ ತಿಳಿಸುತ್ತಿದೆ. ತನಗೂ ತನಗೆ ಗೊತ್ತಿಲ್ಲದ ಸಮಾಜದ ಓರೆಕೋರೆಗಳನ್ನು ಬರೆಯುವ ಸಂವೇದನಾಶೀಲ ಬರಹಗಾರನಿಗೆ ಈ ಮಾತು ಅನ್ವಯಿಸುತ್ತದೆ. ದಲಿತ ಕಾವ್ಯ ಬಂದಿದ್ದೇ ಸಮುದಾಯದ ಆಶೋತ್ತರಗಳಿಗೆ ಅನುಗುಣವಾಗಿ. ಆದರೆ ಮೇಲಿನ ಕವಿತೆಯ ಚರ್ಚೆಯನ್ನು ಮತ್ತೊಂದು ಕಡೆ ವಿಸ್ತರಿಸುವುದಾದರೆ ತನ್ನ ಜನರನ್ನು ನೋಡುವಾಗ ತಾನು ನಿಂತ ನೆಲೆಯೂ ಮುಖ್ಯವಾಗುತ್ತದೆ. ಆ ನಿಂತ ನೆಲ ದಲಿತ ಸಮಾಜದಿಂದ ದೂರನಿಂತು ನೋಡಿದ್ದೇ ಆದರೆ ಅದು ತನ್ನ ಅಭಿವ್ಯಕ್ತಿಯಲ್ಲಿ ಮೇಲ್ನೋಟದ ಹೊಳಹುಗಳನ್ನಷ್ಟೇ ಹೊರಹಾಕಲು ಸಾಧ್ಯ. ಇದು ಏಕಕಾಲದಲ್ಲಿ ದಲಿತ ಬಲಿತರನ್ನೂ ಮತ್ತು ದಲಿತೇತರರನ್ನೂ ದೂರ ತಳ್ಳುತ್ತದೆ.

ಕವಿ ಎದೆ ಹೆಜ್ಜೇನಿನ ಗೂಡಾದಾಗ ಬರೀ ಸವಿಯ ಹಾಡನ್ನು ನೀಡಬಲ್ಲ. ಆದರೆ ಇಲ್ಲಿನ ಕವಿಗಳದು ತಾನು ಕಟ್ಟಿದ ಜೇನನ್ನು ಕಳೆದುಕೊಂಡ ತಳಮಳ. ಅದಕ್ಕಾಗೆ ಕವಿ ತನ್ನ ಜನರೊಡನೆ ತಾನಾಡಿದ ಮಾತನ್ನೇ ಕಾವ್ಯವಾಗಿ ಕೊಡುತ್ತಿದ್ದಾನೆ. ಹಾಗೆಯೇ ತನ್ನ ಜನರನ್ನು ತಾ ನೋಡಿದ ರೀತಿಯೂ ಹೌದು. ಇಲ್ಲಿ ಕವಿಗೆ ತನ್ನ ಜನರನ್ನು ತಾ ನೋಡುವಾಗ ನೋಡಿದ ನೋಟವೂ ಬಹುಮುಖ್ಯವೇ. ಏಕೆಂದರೆ ತನ್ನ ಜನಗಳು ಸಕಲ ಸಂಪತ್ತಿನ ಒಡೆಯರಾಗಿ, ಮೂಲಭೂತ ಸೌಕರ್ಯಗಳನ್ನು ಪಡೆದುಕೊಂಡು ಆಹಾರದ ಸಮಸ್ಯೆಗೆ ಅವಕಾಶವೇ ಇಲ್ಲದಂತೆ ಬಾಳಿದರೆ ಅಥವಾ ಬಾಳುತ್ತಿದ್ದರೆ ಬಹುಶಃ ಈ ಕೆಳಗಿನ ಕವಿತೆ ದಲಿತರಿಂದ ರಚನೆಯಾಗುತ್ತಿರಲಿಲ್ಲ.

ನೊಂದವರ ನೋವಿನ
ಕೆನೆಗಟ್ಟಿರುವ ಅಳಲುಗಳನ್ನು
ಚಿಮ್ಮಿಸುವ ಹಾಡಿನ

ಹೊಸರಾಗ ನುಡಿಸಿದಾಗ
ಅರಳುವುದು ನನ್ನ ಕವಿತೆ[೭]

ಇಲ್ಲಿ ನೊಂದವರು ಯಾರು? ಆ ನೊಂದಿರುವ ಕೆನೆಗಟ್ಟಿರುವ ಅಳಲುಗಳನ್ನು ಹೊಸ ರಾಗದಲ್ಲಿ ಹಾಡಾಗಿ ಮೂಡಿಸುವ ಈ ಕವಿಗೂ ಆ ನೊಂದಿರುವವರಿಗೂ ಇರುವಂತಹ ಸಂಬಂಧವೇನು? ಹಾಗೆ ನೋಯಲು ಕಾರಣಗಳೇನು ಎಂಬುದರ ಜಾಡು ಹಿಡಿದು ದಲಿತ ಕವಿಗಳ ಕಾವ್ಯಗಳನ್ನು ಅಧ್ಯಯನ ಮಾಡಿದರೆ ಅಲ್ಲಿ ನಮಗೆ ಸಿಗುವುದು ವಾಸ್ತವದ ಸಂಗತಿ. ಅದೇ ಕರುಳುಬಳ್ಳಿಯ ಸಂಬಂಧ.

ಇಲ್ಲಿ ಕರುಳುಬಳ್ಳಿಯ ಸಂಬಂಧ ಎಂದರೆ ಕಾವ್ಯ, ಕವಿ ಮತ್ತು ಸಮಾಜದ ನಡುವಿನ ತೀವ್ರತರ ಸಂಬಂಧದ ಸ್ವರೂಪ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ದಲಿತ ಕಾವ್ಯವು ಸಾಮಾನ್ಯವಾಗಿ ಸಮಾಜವನ್ನು ಕೇಂದ್ರೀಕರಿಸಿರುತ್ತದೆ. ಒಂದು ವೇಳೆ ಅದು ಸಮಾಜವನ್ನು ಪ್ರಧಾನವಾಗಿ ಕೇಂದ್ರೀಕರಿಸದಿದ್ದರೆ ಅದು ದಲಿತ ಕಾವ್ಯ ಆಗಲಾರದು.

ನೊಂದವರ ನೋವುಗಳನ್ನು ಹೇಳಲು ಹೊಸರಾಗದ ಅವಶ್ಯಕತೆ ಇದೆ ಎಂಬುದನ್ನು ಮೇಲಿನ ಕವಿತೆ ಸೂಚಿಸುತ್ತಿದೆ. ಆ ನೋವಿನ ರಾಗ ನೊಂದವನ ಎದೆಯಲ್ಲೇ ಅವಿತು ಕುಳಿತಿದೆ. ತನ್ನ ಮತ್ತು ತನ್ನವರ ನೋವನ್ನು ಹೇಳುವಾಗ ವಾಸ್ತವ ಸತ್ಯಗಳ ನಿರೂಪಣೆಯೇ ಹೊಸದೊಂದು ರಾಗವಾಗಿ ಮಾರ್ಪಡುತ್ತದೆ. ದಲಿತ ಕಾವ್ಯ ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಪಾರಂಪರಿಕ ಹಾಡುಗಾರಿಕೆಯ ತಾಳ, ಲಯ, ಛಂಧಸ್ಸುಗಳ ಮೇಳದಿಂದ ಹಾಡುವುದನ್ನು ತಿರಸ್ಕರಿಸುತ್ತದೆ. ಆದರೆ ನೋವಿನ ಹಾಡಿಗೆ ಮತ್ತು ಕತ್ತಲೆಯ ನಾಡಿಗೆ ಬೆಳಕು ಚೆಲ್ಲುವ ಕವಿತೆಗೆ ಒಂದು ಹಾಡಿನ ಧಾಟಿ ಬೇಕಿದೆ. ಅದು ಪರಂಪರೆಯ ಮೌಖಿಕ ನೆಲೆಯಲ್ಲಿ ಅವಿತು ಕುಳಿತಿದೆ. ಮೂಕನಿಗೆ ಬಾಯಿ ಬಂದಾಗ ಅವನು ನಿರೂಪಿಸುವ ವಾಸ್ತವ ಸತ್ಯಗಳ ಮಾತುಗಾರಿಕೆಯ ಹಿನ್ನೆಲೆಯನ್ನು ಅದು ಒಳಗೊಂಡಿದೆ.

ಎಲ್ಲ ಕೇಳಲಿ ಎಂದು ನಾನು ಹಾಡುವುದಿಲ್ಲ
ಹಾಡುವುದು ಅನಿವಾರ್ಯ ಕರ್ಮ ಎನಗೆ[೮]

ಹೀಗೆ ಕನ್ನಡ ಕಾವ್ಯದ ಸಾಂಪ್ರದಾಯಿಕ ಪರಂಪರೆಯೊಂದು ತೀರ ವೈಯಕ್ತಿಕ ನೆಲೆಯಲ್ಲಿ ಕಾವ್ಯವನ್ನು ಅಭಿವ್ಯಕ್ತಿಸಿತ್ತು. ಕಾವ್ಯ ಅಥವಾ ಕವಿತೆ ಇರುವುದೇ ಮನದಾಳದ ಮಾತುಗಳಿಗೆ ಅಕ್ಷರ ರೂಪ ಕೊಡಲು ಎಂಬ ಭಾವನೆ ಇತ್ತು. ಜೊತೆಗೆ ಹಾಡುವುದು ಅನಿವಾರ್ಯ, ಅದು ಎಲ್ಲರಿಗಾಗಿ ಅಲ್ಲ; ತನಗೊಬ್ಬನಿಗೆ ಎಂಬ ಅಭಿಮಾನವೂ ಇತ್ತು. ಆದರೆ ದಲಿತ ಕಾವ್ಯ...

ರಾತ್ರೆಲ್ಲ ಕುಂತ ಹಾಡೊಂದ ಬರಿದ್ಯಾನ
ಹೇಳ್ತೀನಿ ಕೇಳಬಾರಾ
ಹಾಡಲ್ಲ ಇದು ಹಾಡೈತಿ ನಮ್ಮ
ಜನಗಳದು ತಿಳಿಯಬಾರ್

ದಲಿತ ಕಾವ್ಯ ಹಾಡುವುದು ಜನ ಕೇಳಲೆಂದೇ. ಏಕೆಂದರೆ ಇಲ್ಲಿಯ ಹಾಡು ಬರೀ ಹಾಡಲ್ಲ. ಅಂದರೆ ಅದು ತೀರಾ ವೈಯಕ್ತಿಕ ನೆಲೆಗಳ ಅನಾವರಣವಲ್ಲ. ಅದು ಸಮುದಾಯದ ನೋವಿನ ತಲ್ಲಣ. ಅದಕ್ಕೆ ಕವಿ ರಾತ್ರೆಲ್ಲ ಕುಂತು ಕಟ್ಟಿದ ಹಾಡನ್ನು ಜನ ಕೇಳಲೆಂದೇ ಒತ್ತಾಯಿಸುತ್ತಾನೆ. ಒಮ್ಮೆ ಕೇಳಿದರೆ ಸಾಕು ಅದು ಬದಲಾವಣೆಗೆ ನಾಂದಿ ಹಾಡುತ್ತದೆ ಎಂಬುದು ದಲಿತ ಕವಿಯ ಮತ್ತು ಕವಿತೆಯ ಆಶಯ. ಮೊದಲೇ ಉಲ್ಲೇಖಿಸಿದಂತೆ ಬರೆದ ಹಾಡನ್ನು ಕೇಳಲು ಒತ್ತಾಯಿಸುವ ಈ ಸಾಲುಗಳು ಮೌಖಿಕ ನೆಲೆಗೆ ಕಾವ್ಯ ತಲುಪಬೇಕೆಂಬ ಆಶಯವನ್ನು ಬಿತ್ತಿದಂತೆ ಕಾಣುತ್ತದೆ.

ಎನ್ನ ಪಾಡೆನಗಿರಲಿ
ಅದರ ಹಾಡನ್ನಷ್ಟೇ ನೀಡುವೆನು ರಸಿಕ ನಿನಗೆ
ಕಲ್ಲು ಸಕ್ಕರೆಯಂತ ನಿನ್ನೆದೆಯು ಕರಗಿದರೆ
ಆ ಸವಿಯ ಹನಿಸು ನನಗೆ[೧೦]

ಕವಿ ತನ್ನ ವೇದನೆಗಳನ್ನೆಲ್ಲ ತಾನೇ ಉಂಡು ಸವಿಯ ಹಾಡನ್ನಷ್ಟೆ ನೀಡಬೇಕು. ಅದು ಸಹೃದಯರಲ್ಲಿ ತನ್ಮಯತೆ ಹೊಂದಿ ಸಂತೋಷಗೊಳಿಸಬೇಕು. ಈ ನೆಲೆಗೆ ಕನ್ನಡ ಕಾವ್ಯ ಅಂಟಿಕೊಂಡಿತ್ತು. ಇದು ಒಂದು ರೀತಿಯ ಆಸ್ವಾದನಾ ನೆಲೆ. ಇದು 'ಕಾವ್ಯಂ ಆನಂದಾಯ' ಎನ್ನುವ ಭಾರತೀಯ ಕಾವ್ಯ ಮೀಮಾಂಸೆಯ ಪರಿಕಲ್ಪನೆಗೆ ಸಂಬಂಧಿಸಿದ್ದು. ಆದರೆ ದಲಿತ ಕಾವ್ಯ ಇಂತಹ ಮನೋಭಾವಕ್ಕೆ ಮೊದಲ ಕೊಡಲಿಪೆಟ್ಟು ನೀಡಿತು. ಕವಿತೆಯು ಕವಿಯನ್ನು ದೈವೀಕರಿಸಿ, ಸೃಷ್ಟಿಯಲ್ಲಿ ಪ್ರತಿಬ್ರಹ್ಮನಿಗೆ ಹೋಲಿಸಿ, ತನ್ಮಯತೆಯ ನಡುವೆ ಕಾವ್ಯವನ್ನು ಆಸ್ವಾದಿಸುವ ಹಂತದಲ್ಲಿತ್ತು. ಇಂತಹ ಕವಿತೆಗೆ ಓದಿ ಆನಂದ ಪಡುವುದಕ್ಕಿಂತ ಅದು ಸಮಾಜ ಬದಲಾವಣೆಗೆ ನಾಂದಿ ಹಾಡಬೇಕೆಂಬ ಸಂಕಲ್ಪ ತೊಟ್ಟಿದ್ದು ದಲಿತ ಕಾವ್ಯ. ಅದಕ್ಕೆ ಅವರ ಕಾವ್ಯ ಹೀಗೆ ಹೇಳುತ್ತದೆ.

ನಾ ಮಾಡುವ ಶಬ್ದ
ನಯವಾಗಿ ಹೊಂಚಿಸುವುದಿಲ್ಲ
ಬಾಯೊಳಗೆ ಹೂತು ಹೋಗುವುದಿಲ್ಲ

ಭುವಿಯತ್ತ ಬೀಸುತ್ತದೆ
ಥಳಥಳಿಸಿ
ಝಳಪಿಸುವ ಖಡ್ಗವಾಗಿ
ನಾ ಮಾಡುವ ಶಬ್ದ
ಸುಳಿ ಮಿಂಚಾಗಿ ಕಣ್ತಣಿಸುವುದಿಲ್ಲ
ಗುಡುಗಾಗಿ ಬರ
ಸಿಡಿಲಾಗಿ
ಸೀಳುತ್ತದೆ
ಮಾನವೀಯವಲ್ಲದ ಎಲ್ಲ
ವ್ಯವಸ್ಥೆಗಳನ್ನು
ಅವಸ್ಥೆಗಳನ್ನು[೧೧]

ದಲಿತ ಕವಿಗಳದು ವಂಚಿಸುವ ಕಾವ್ಯವಲ್ಲ. ಇಲ್ಲಿ ಗುಡುಗಿನಂತಹ, ಸಿಡಿಲಿನಂತಹ ಧ್ವನಿಯಿದೆ. ಇವು ಬೆಚ್ಚಿಬೀಳಿಸುವಂತಹುಗಳು. ಅದೂ ಯಾವುದರ ವಿರುದ್ಧವೆಂದರೆ ಮಾನವೀಯವಲ್ಲದ ಎಲ್ಲ ಅವಸ್ಥೆಗಳ ವಿರುದ್ಧ. ಇಲ್ಲಿ ಮಾನವೀಯತೆಯಿಂದ ದೂರಾದ ಜನರ ಒಳಗಿನ ವೇದನೆ ಕಾವ್ಯವಾಗಿ ಮೂಡಿದಾಗ ಅದು ತೆರೆದುಕೊಳ್ಳುವುದರ ಬಗೆಯನ್ನು ಮೇಲಿನ ಸಾಲುಗಳು ನಿರೂಪಿಸಿವೆ. ಕನ್ನಡ ಕಾವ್ಯವು ಶಬ್ದ, ಅರ್ಥ, ಧ್ವನಿ, ರಸ, ಅಲಂಕಾರಗಳಿಂದ ಉಂಟಾಗುವ ರಸಾನಂದಕ್ಕೆ ಆಸಕ್ತಿಯನ್ನು ಕೇಂದ್ರೀಕರಿಸಿತ್ತು. ಆದರೆ ದಲಿತ ಕಾವ್ಯ ಇವುಗಳು ಸಮಾಜದ ಮೇಲೆ ಉಂಟುಮಾಡುವ ಪರಿಣಾಮಗಳ ಕಡೆಗೆ ತನ್ನ ಆಸಕ್ತಿಯನ್ನು ಕೇಂದ್ರೀಕರಿಸಿತು. ಆದ್ದರಿಂದಲೇ ದಲಿತ ಕಾವ್ಯ ಸುಳಿ ಮಿಂಚಾಗಿ ಕಣ್ತಣಿಸುವ, ನಯವಾದ ಮಾತುಗಳಿಂದ ವ್ಯವಸ್ಥೆಯನ್ನು ಮುಚ್ಚಿಡುವ ತಂತ್ರಗಾರಿಕೆಯನ್ನು ಮಾಡುವುದಿಲ್ಲ.

ಶಬ್ದದ ಕೆಲಸ ಕೇಳಿಸುವುದು. ಇದು ಎರಡು ರೀತಿಯಲ್ಲಿದೆ. ಒಂದು ನಯವಾಗಿ ವಂಚಿಸುವುದು ಮತ್ತೊಂದು ಸುಳಿಮಿಂಚಾಗಿ ಕಣ್ತಣಿಸುವುದು. ಮೇಲಿನ ಕವಿತೆ ಈ ವಿಚಾರವನ್ನು ಮುಂದಿಡುತ್ತಲೇ ತನ್ನ ಉದ್ದೇಶವನ್ನು ಹೇಳಿದೆ. ಅದು ಗುಡುಗು ಮಿಂಚಿನೋಪಾದಿಯಲ್ಲಿ ವ್ಯವಸ್ಥೆಯನ್ನು ಧಿಕ್ಕರಿಸುವುದು. ಆದರೆ ಗುಡುಗು ಮಿಂಚುಗಳು ಶಾಶ್ವತವಲ್ಲ. ಅವು ಒಂದು ಕಾಲದವು ಮತ್ತು ಅವುಗಳಿಂದ ಉಂಟಾಗುವ ಬದಲಾವಣೆ ಕ್ಷಣಿಕ ಮಾತ್ರ. ಇಲ್ಲಿ ಮಾನವೀಯವಲ್ಲದ ಎಲ್ಲ ಅವಸ್ಥೆಗಳನ್ನು ಸೀಳಲು ಕೇವಲ ಶಬ್ದವೊಂದರಿಂದ ಸಾಧ್ಯ ಎಂಬುದು ಸೀಮಿತ ಚೌಕಟ್ಟಿನಲ್ಲಿ ದಲಿತ ಹೋರಾಟವನ್ನು ಗ್ರಹಿಸಿದಂತಾಗುತ್ತದೆ. ಏಕೆಂದರೆ ಇದು ಶಬ್ದವೊಂದರಿಂದಲೇ ಸಾಧ್ಯವಿಲ್ಲ. ಇಂತಹ ಮಿತಿಗಳ ಹಿನ್ನೆಲೆಯೂ ದಲಿತ ಕಾವ್ಯದಲ್ಲಿರುವ ಕಾರಣ ಮುಂದಿನ ಅಧ್ಯಾಯಗಳಲ್ಲಿ ಅವುಗಳನ್ನು ಚರ್ಚಿಸಲಾಗುವುದು.

ಇನ್ನು ಶಬ್ದ ಮತ್ತು ಅರ್ಥಗಳ ಚರ್ಚೆಯು ಭಾರತೀಯ ಕಾವ್ಯಮೀಮಾಂಸೆಯಿಂದ ಇಂದಿನವರೆಗೂ ವಿಸ್ತರಿಸಿದೆ. ಜಿ.ಎಸ್.ಎಸ್. ಬರೆಯುವಂತೆ 'ಸ್ಫೂರ್ತಿಯ ಕರು ಬಾಯಿಕ್ಕಲು ಪ್ರತಿಭೆಯ ಕೆಚ್ಚಲಿಗೆ, ಶಬ್ದಾರ್ಥದ ಹಾಲಿಳಿಯುವುದು. ಕವಿ ಪಾತ್ರೆಯ ಒಳಗೆ.' ಪ್ರತಿಭೆ ಮತ್ತು ಶಬ್ದದ ಕೆಲಸ ಇಷ್ಟೇ ಆಗುವುದಾದರೆ ದಲಿತರಿಗಾಗಲೀ ಅವರ ಸಾಹಿತ್ಯಕ್ಕಾಗಲೀ ಏನೂ ಕೆಲಸವಿಲ್ಲದಂತಾಗುತ್ತದೆ. ಶಬ್ದ ಮತ್ತು ಅರ್ಥ ಕಾವ್ಯದಲ್ಲಿ ಬಹುಮುಖ್ಯ ಅಂಗಗಳು. ಶಬ್ದದ ಕೆಲಸ ಅರ್ಥಗಳನ್ನು ಹುಟ್ಟಾಕುವುದು, ಅರ್ಥದ ಕೆಲಸ ಬಹು ಅರ್ಥಗಳನ್ನು ಹೊರಡಿಸುತ್ತಾ ಕಾವ್ಯವನ್ನು ಗಟ್ಟಿಗೊಳಿಸುವುದು. ಆದರೆ ದಲಿತ ಕಾವ್ಯದಲ್ಲಿ 'ಅರ್ಥ'ದ ಕೆಲಸ ಆಗಬೇಕಿರುವುದು ಕ್ರಿಯೆಯಲ್ಲಿ. ಕ್ರಿಯೆಯನ್ನು ಪ್ರಚೋದಿಸದ ಅರ್ಥವು ದಲಿತ ಕಾವ್ಯದಲ್ಲಿ ಇರುವುದಿಲ್ಲ. ಆದರೆ ಕೆಲವು ವಿಮರ್ಶೆಗಳು ಪಾರಂಪರಿಕ ಅರ್ಥದ ಜಾಡನ್ನು ದಲಿತ ಕಾವ್ಯದ ಮೇಲೂ ಪ್ರಯೋಗಿಸಿವೆ. ಆ ಮೂಲಕ ಅದರ ವಿಶಾಲತೆಯನ್ನು ಸಂಕುಚಿತಗೊಳಿಸಿವೆ.

ಇದನ್ನೇ ಮತ್ತೊಂದು ನೆಲೆಯಲ್ಲಿ ಚರ್ಚಿಸುವುದಾದರೆ ಅರವಿಂದ ಮಾಲಗತ್ತಿಯವರ 'ಒಂದಾ ಪದ' ಕವನ ಈ ಶಬ್ದ ಮತ್ತು ಅರ್ಥ ಪರಿಧಿಯಿಂದ ಭಿನ್ನ ನೆಲೆಗೆ ಕರೆದೊಯ್ಯುತ್ತದೆ. 'ಚೀರತೀನಿ, ಬರೀತೀನಿ. ಬರೀತೀನಿ, ಚೀರತೀನಿ' ಎಂದು ಪ್ರಾರಂಭವಾಗುವ ಕವಿತೆ ಅಕ್ಷರ ದೇವತೆಯ ಸೀರೆ ಸೆಳೆದು ಮಾನ ಮುಚ್ಚಿಕೊಳ್ಳುವ ನೆಲೆಯವರೆಗೂ ವಿಸ್ತರಿಸಿಕೊಳ್ಳುತ್ತದೆ. ಇಲ್ಲಿ ಮುಖ್ಯವಾಗಿರುವುದು ಚೀರುವುದು ಮತ್ತು ಅದನ್ನು ಬರೆಯುವುದು ಹಾಗೂ ಬರೆಯುವುದು ಮತ್ತು ಅದನ್ನು ಚೀರುವುದು. ಬರೆದಿರುವುದಕ್ಕೆ ವಿಭಿನ್ನ ಅರ್ಥಗಳನ್ನು ಹುಡುಕಬಹುದು, ಆದರೆ ಚೀರುವುದಕ್ಕೆ ಹಾಗಿಲ್ಲ, ಅದಕ್ಕಿರುವುದು ಒಂದೇ ಕಾರಣ. ಅದು ನೋವಿನ, ಹತಾಶೆಯ, ಸಹಿಸಲಿಕ್ಕಾಗದ ವೇದನೆಯ ಕೂಗು. ಇದು ದಲಿತ ಕಾವ್ಯದ ಒಳಗೆ ಮನೆಮಾಡಿಕೊಂಡಿದೆ. ಚೀರುವಿಕೆಗೆ ಒಂದು ನಿರ್ದಿಷ್ಟವಾದ ಪರಿಭಾಷೆಯೂ ಇಲ್ಲ. ಕೇಶಿರಾಜನು 'ಘನಸ್ವನಾದಿ ಧ್ವನಿಗಳನ್ನು ಅಕ್ಷರಗಳಿಂದ ಹೇಳಲಾಗದು ಅಥವಾ ಅವು ಭಾಷೆಯಲ್ಲ' ಎಂದು ಹೇಳಿರುವ ಹಾಗೆ ಇದೂ ಕೂಡ. ಆದರೆ ಚೀರುವಿಕೆಯ ಹಿಂದೆ ಪ್ರತಿರೋಧವಿದೆ ಮತ್ತು ಪ್ರತಿಭಟನೆಯಿದೆ. ಚೀರುವಿಕೆಯನ್ನು ಅರ್ಥಮಾಡಿಕೊಳ್ಳಬೇಕಾದರೆ, ಚೀರಿಕೊಳ್ಳುತ್ತಿರುವವರ ಮನಸ್ಥಿತಿಯೂ ಅರ್ಥವಾಗಬೇಕು. ಆಗಲೇ ಇದಕ್ಕೆ ಸ್ಪಂದಿಸಲು ಸಾಧ್ಯ. ದಲಿತ ಕಾವ್ಯದಲ್ಲಿ ಇಂತಹ ಚೀರುವಿಕೆಯ ನೋವುಗಳು ಕಾವ್ಯವಾಗಿ ರೂಪುಗೊಂಡಿವೆ. ಇವುಗಳ ವಿಮರ್ಶೆ ಅಲ್ಲಿಂದಲೇ ನಡೆಯಬೇಕೆಂಬುದನ್ನು ಅವು ಒತ್ತಾಯಿಸುತ್ತವೆ.

"ದಲಿತ ಕಾವ್ಯಕ್ಕೆ ತನ್ನದೇ ಆದ ದೇಶೀಯತೆ ಇದೆ".[೨] ಇಲ್ಲಿ ಗ್ರಾಮೀಣ ಬದುಕಿನ ಚಲನವಲನಗಳಿವೆ. ದುಡಿವ ಜನಗಳ ಲಯಗಳಿವೆ. ಕಾವ್ಯ ಆಸ್ವಾದನೆಗಷ್ಟೇ ಅಲ್ಲ; ಅದೊಂದು ಕ್ರಿಯೆಗೆ ದೂಡುವ ಪ್ರಕ್ರಿಯೆ ಎಂಬುದು ದಲಿತ ಕಾವ್ಯದ ತಿರುಳು. ಜನಪದ ಗತ್ತು ಮತ್ತು ಮಟ್ಟುಗಳನ್ನು ಬಳಸಿಕೊಂಡು ಹಾಡುಗಬ್ಬದಲ್ಲಿ ಮೈದಳೆದೆದ್ದ ದಲಿತರ ಹಾಡು ಹೋರಾಟದ ತೀವ್ರತೆಯನ್ನು ಹೆಚ್ಚಿಸಿತು. ಬಿ.ಎಂ. ಪುಟ್ಟಯ್ಯನವರು ಹೇಳುವ ಹಾಗೆ "ಕವಿತೆ ಹಾಡಾಗಿ

ಪರಿವರ್ತಿತವಾದುದು ಒಂದು ಹಂತವಾದರೆ, ಹಾಡು ಹೋರಾಟಕ್ಕೆ ವೇಗವರ್ಧಕವಾಗಿದ್ದು ಮತ್ತೊಂದು ಹಂತ. ಶೋಷಿತರ ಬದುಕು ಬವಣೆಯಿಂದ ಹುಟ್ಟಿದ ಹಾಡು ತಿರುಗಿ ಅವರ ಹೋರಾಟಕ್ಕೆ ವೇಗವರ್ಧಕವೂ, ಮಾರ್ಗದರ್ಶನವೂ ಆಯಿತು."[೧೩]

ಹೀಗೆ ತನ್ನೊಳಗೆ ಹುಟ್ಟಿದ ಹಾಡನ್ನು ಸಮುದಾಯದ ಕವಿಗಳು ಎಲ್ಲರ ಹಾಡಾಗಿಸಲು ಪ್ರಯತ್ನಿಸಿದರು. ಕವಿಗಳು ಮುಖ್ಯರಾಗದೆ ಅವರ ಹಾಡುಗಳು ಸಮುದಾಯದ ಹಾಡುಗಳಾದವು. ಅದಕ್ಕೆ ಕವಿ ತನ್ನ ಜನರ ಪಾಡನ್ನೇ ಹಾಡಾಗಿಸಿ ಬರೀ ಕೇಳಲಿಕ್ಕಷ್ಟೇ ತನ್ನವರನ್ನು ಕರೆಯುವುದಿಲ್ಲ, ಜೊತೆಗೆ ಹಾಡಲು ಒತ್ತಾಯಿಸುತ್ತಾನೆ.

ಕೂಳಿಗಾಗಿ ಸತ್ತ ದನಿಯವರೇ
ತುಂಡು ಅರಿವೆಗಾಗಿ ಬತ್ತಿ ಹೋದವರೇ
ಓ ಕಪ್ಪು ಜನರೇ ಬಂಧು ಬಾಂಧವರೇ
ಎಲ್ಲಿ ನಿಮ್ಮ ಸ್ವರ ಎಲ್ಲಿ ನಿಮ್ಮ ದನಿ
ಕರಿಯೊಡಲ ಕೆಂಪುಸಿರು ಎಲ್ಲಿ
ಈ ಮಣ್ಣ ಮಕ್ಕಳು ನೀವು
ನಿಮ್ಮೊಡಲ ಉಸಿರೇ ನಮ್ಮ ಹಾಡು
ಹಾಡು ಹಾಡುವ ಮುನ್ನ
ದನಿಗೂಡ ಬನ್ನಿ ಮನಗೂಡ ಬನ್ನಿ
ಕ್ರಾಂತಿ ಪಥಕೆ[೧೪]

'ಒಡಲ ಉಸಿರನ್ನೆ ಹಾಡಾಗಿ ಹಾಡಿಸುತ್ತಾ, ಆ ಹಾಡಿಗೆ ದನಿಗೂಡ ಬನ್ನಿ, ದನಿಯಷ್ಟೇ ಅಲ್ಲ ಮನಗೂಡ ಬನ್ನಿ' ಎಂದು ಸಮುದಾಯಕ್ಕೆ ಕರೆಕೊಡುವ ಕವಿತೆಯು ಹತಾಶೆಯ ನೆಲೆಯಲ್ಲಿಯೇ ನಿರೂಪಣೆಯಾಗಿದೆ. ಬದಲಾವಣೆಗೆ ಮುಖಮಾಡಿ ನಿಂತ ದಲಿತ ಕಾವ್ಯ ಶೋಷಣೆಗೊಳಗಾದ ಜನರನ್ನು ಪ್ರತಿಭಟನೆಗೆ ಮುಂದಾಗಲು ಕರೆಕೊಡುತ್ತದೆ. ಕ್ರಾಂತಿ ಪಥಕೆ ಬನ್ನಿ ಎನ್ನುವ ಕರೆ ದಲಿತ ಕಾವ್ಯದ ಆಶಯ. ಏಕೆಂದರೆ ಪ್ರತಿಭಟನೆಗೂ ಮತ್ತು ದಲಿತ ಕಾವ್ಯಕ್ಕೂ ಅವಿನಾಭಾವ ಸಂಬಂಧವಿದೆ. ದಲಿತರ ಹೋರಾಟದ ಹಾದಿಯಲ್ಲೆ ದಲಿತ ಕಾವ್ಯವೂ ಬೆಳೆದು, ದಲಿತರ ಹೋರಾಟಕ್ಕೆ ಬೆನ್ನೆಲುಬಾಗಿದೆ.

೭೦ರ ದಶಕದಲ್ಲಿ ದಲಿತ ಕಾವ್ಯ ತನ್ನ ಅನುಭವಗಳೊಂದಿಗೆ ಅಕ್ಷರ ರೂಪ ಪಡೆಯಿತು. ಆಗ ಕೆಲವು ವಿಮರ್ಶಕರು 'ದಲಿತ ಕಾವ್ಯ ಕಾವ್ಯವೇ ಅಲ್ಲ' ಅಂದರು. ಕೆಲವೊಂದು ಕವನಗಳಿಗೆ 'ಇದು ಕಾವ್ಯವಾಗುವುದಾದರೆ ಬೇರೆ ಏನು ಬೇಕಾದರೂ

ಕಾವ್ಯವಾಗುತ್ತದೆ' ಎಂಬ ಹೇಳಿಕೆಗಳನ್ನು ನೀಡಿದರು. ಆದರೆ ದಲಿತ ಕಾವ್ಯಕ್ಕೆ "ಪಾರಂಪರಿಕ ಕಾವ್ಯದ ಸ್ವರೂಪ ಬೇಕಾಗಿರಲಿಲ್ಲ. ಬದಲಾಗಿ ತಮ್ಮ ಮೇಲೆ ಸವರ್ಣೀಯರು ನಡೆಸುತ್ತಿರುವ ದಮನ, ದಬ್ಬಾಳಿಕೆ ಮತ್ತು ಅಪಮಾನಗಳ ಕ್ರೂರ ಬದುಕನ್ನು ಬಿಚ್ಚಿಡಬೇಕಿತ್ತು"[೧೫] ಇದರಿಂದಾಗಿಯೇ ಯಾವುದನ್ನು ಕಾವ್ಯ, ಕವಿತೆ ಅಲ್ಲ ಎಂದು ಹೇಳಲಾಗಿತ್ತೊ ಅದೇ ಮೊದಲ ಬಾರಿಗೆ ಕಾವ್ಯವಾಯಿತು. ಸಾಹಿತ್ಯದ ರೂಪ ಪಡೆಯಿತು. "ಪ್ರಾಸ, ಲಯ, ಗೇಯತೆ, ಛಂದಸ್ಸು ಮುಂತಾದವುಗಳ ಚೌಕಟ್ಟನ್ನು ಮೊಟ್ಟ ಮೊದಲ ಬಾರಿಗೆ ಕುಟ್ಟಿ ಪುಡಿ ಮಾಡಿತು."[೧೬]

ದಲಿತ ಕಾವ್ಯ ತನ್ನ ಚಹರೆಗಳನ್ನು ತನ್ನ ಸಾಂಸ್ಕೃತಿಕ ಪರಂಪರೆಯಿಂದ ಪಡೆದುಕೊಂಡಿದೆ. ಇಲ್ಲಿ ತಮಟೆ ದಲಿತರ ಬದುಕಿನ ಬವಣೆಯ ಸಂಕೇತ ಹಾಗೂ ಎಚ್ಚರಿಕೆಯ ಸಂಕೇತ. ಇಂತಹ ಸಾಧನದಿಂದಲೇ ದಲಿತರು ಶುಭ ಮತ್ತು ಅಶುಭ ಕಾರ್ಯಗಳನ್ನೆಲ್ಲ ಮಾಡುತ್ತಿದ್ದರು. ತಮಟೆ ಎಲ್ಲಿರುತ್ತದೋ ಅಲ್ಲಿ ಜನರ ದಂಡು ನಿಂತಿರುತ್ತದೆ. ದಲಿತ ಕಾವ್ಯದ ಉದ್ದೇಶವೂ ಇದೇ ಆಗಿದೆ. ಇಂತಹ ಸಾಧನದ ಲಯಕ್ಕೆ ಅನುಗುಣವಾಗಿಯೇ ಅನೇಕ ಕಾವ್ಯಗಳು ಹುಟ್ಟಿವೆ. ಜನರನ್ನು ಹೋರಾಟಕ್ಕೆ ಹಚ್ಚಿವೆ. ಎದೆಯ ಮಾತಿಗೆ ಪ್ರಾಮುಖ್ಯತೆ ಕೊಟ್ಟ ಕನ್ನಡ ಕಾವ್ಯ ದಲಿತರೆಡೆಗೆ ಬಂದಾಗ ತನ್ನ ಸ್ವರೂಪವನ್ನು ವ್ಯಕ್ತಿನಿಷ್ಠತೆಯಿಂದ ಸಮೂಹ ನಿಷ್ಠೆಯೆಡೆಗೆ ಬದಲಿಸಿತು. ಇಲ್ಲಿ ವ್ಯಕ್ತಿಗಿಂತ ಸಮೂಹ ಮುಖ್ಯ, ಸಮೂಹಕ್ಕಿಂತ ಸಮುದಾಯ ಮುಖ್ಯ. ಹಾಗಾಗಿ ದಲಿತ ಕಾವ್ಯಕ್ಕೆ ತನ್ನ ಸಮುದಾಯದ ದಿನನಿತ್ಯ ಶೋಷಣೆಯ ನಿವೇದನೆಯೇ ಮುಖ್ಯ.

ತಮಟೆ ಅಥವಾ ಹಲಗೆ ದಲಿತರ ಆವಿಷ್ಕಾರ. ದಲಿತರು ಕಂಡುಹಿಡಿದ ಕಲೆಯ ಸಾಧನ. ಒಡೆಯನ ಒಡೆತನದಲ್ಲಿ ತಾವೇ ಸಾಕಿದ ಹಸು/ದನ ಸತ್ತಾಗ ಅದರ ಮಾಂಸದಿಂದ ತಮ್ಮ ಹಸಿವನ್ನು ನೀಗಿಸಿಕೊಳ್ಳುತ್ತಿದ್ದರು. ಅದರ ಚರ್ಮದಿಂದ ಹಲಗೆಯನ್ನು ಮಾಡುತ್ತಿದ್ದರು. ಅದು ಅವರ ಕಲೆಯ ಸಾಧನವಾಗುತ್ತಿತ್ತು. ಅದನ್ನು ಇಡೀ ಊರಿನ ಕಾರ್ಯಗಳಲ್ಲಿ ಬಳಸಲಾಗುತ್ತಿತ್ತು. ತಮ್ಮ ಅಭಿವ್ಯಕ್ತಿಯನ್ನು ಅದರ ಮೂಲಕವೇ ಹೊರಹೊಮ್ಮಿಸುತ್ತಿದ್ದರು. ದಲಿತರ ಈ ಕಲೆಯ ಸಾಧನವು ದಲಿತ ಕವಿಗಳ ಕಾವ್ಯಕ್ಕೆ ಲಯದ ಪರಿಭಾಷೆಯಾಯಿತು. ಪರಂಪರೆಯಿಂದ ಇದನ್ನು ಅರಿತ ದಲಿತರು ತಮ್ಮ ಅಭಿವ್ಯಕ್ತಿಯಲ್ಲಿ ಸಮುದಾಯದ ತಲ್ಲಣಗಳನ್ನು ಅಭಿವ್ಯಕ್ತಿಸಿದರು. ಇದನ್ನು ಒಂದು ದಲಿತ ಕಾವ್ಯ ನಿರೂಪಿಸಿರುವ ಬಗೆ ಹೀಗಿದೆ.

ಕಥೆ ಹೇಳುವುದಿಲ್ಲ
ಸಂಗೀತದ ಶೃತಿ ಹಿಡಿಯುವುದಿಲ್ಲ
ರಾಗ ತಾಳ ಮದ್ದಳೆಗಳ ರಿದಮಿಗೆ
ತಕ್ಕಂತೆ ಪದಗಳ ಕುಣಿಸುವುದಿಲ್ಲ

ಬದುಕ ಹೇಳುತ್ತದೆ ಬದುಕಿನ
ಮಿಡಿತ ತುಡಿತ ಸಿಡಿತಗಳ
ಕ್ರೂರ ಹಿಡಿತಗಳ ಬಿಚ್ಚಿ ಹಿಡಿಯುತ್ತದೆ
ದುಡಿದಿಕ್ಕುವ ನನ್ನವರ ಒಡಲಿನಳಲ
ಚೆಲ್ಲಿ ಹೊಸ ಜೀವ ದನಿಗಳ ಪುಟಿಸುತ್ತದೆ.[೧೭]

ಒಡಲಿನ ಅಳಲನ್ನು ಹೇಳುವ ಕವಿತೆಗೆ ರಾಗ ತಾಳಗಳ ಅವಶ್ಯಕತೆ ಇರುವುದಿಲ್ಲ. ಅಥವಾ ದಲಿತ ಕಾವ್ಯಕ್ಕೆ ಈ ಸಂಗೀತ ಪರಿಕರಗಳ ಬಳಕೆಯ ಬಗ್ಗೆ ವಿರೋಧವಿದೆ. ಬೇರೆಯವರ ಮರ್ಜಿಗೆ ಕಾವ್ಯ ಹುಟ್ಟುವುದು ಮತ್ತು ಅದನ್ನು ಹಾಡುವುದು ಸಾಧ್ಯವಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತಿದೆ. ಇಲ್ಲಿ ಕಾವ್ಯ ಪರಂಪರೆಗೆ ಒಡ್ಡಿದ ಪ್ರತಿರೋಧವೂ ಇದೆ ಮತ್ತು ತನ್ನ ಒಳಗಿನ ದನಿಯನ್ನು ಹೊರಹಾಕಲಿಕ್ಕೆ ತಾನೇ ಕಂಡುಕೊಂಡ ಮಾರ್ಗದ ಬಗ್ಗೆ ಅಭಿಮಾನವೂ ಇದೆ. ಈ ಅಭಿಮಾನವನ್ನು ಸಮುದಾಯದಲ್ಲಿ ಬಿತ್ತಲು ಕಾವ್ಯ ಪ್ರಯತ್ನಿಸಿದೆ.

ಮೇಲಿನ ಕವನದ ಚರ್ಚೆಯು ಬಸವಣ್ಣನ 'ಓಜೆ ಬಜಾವಣೆಯನರಿಯೆ, ರುದ್ರಗಣ ಬ್ರಹ್ಮಗಣವನರಿಯೆ, ಆನು ಒಲಿದಂತೆ ಹಾಡುವೆನು' ಎಂಬ ವಚನವನ್ನು ನೆನೆಪಿಗೆ ತರುತ್ತಿದೆ. ಬಸವಣ್ಣ ತನ್ನ ಹಿಂದಿನ ಪರಂಪರೆಗೆ ಕೊಟ್ಟ ಪ್ರತಿಕ್ರಿಯೆ ಮತ್ತು ಮೇಲಿನ ಕಾವ್ಯ ಕೊಡುತ್ತಿರುವ ಪ್ರತಿಕ್ರಿಯೆ ಎರಡರಲ್ಲೂ ಸಾಮ್ಯತೆ ಇದೆ. ಏಕೆಂದರೆ ದಲಿತ ಕಾವ್ಯದ ಮತ್ತೊಂದು ಮಗ್ಗುಲಂತೆ ಹುಟ್ಟಿರುವ ಹೋರಾಟದ ಹಾಡುಗಳಿಗೆ ಹಾಡುಗಾರಿಕೆಯೇ, ರಾಗವೇ ಜೀವಾಳವಾದ ಕಾರಣ ಈ ಸಾಮ್ಯತೆಯೊಳಗಿನ ಅಂತರವನ್ನು ಹೇಳಬೇಕಾಯಿತು.

ಈ ಚರ್ಚೆಯನ್ನು ಇನ್ನೂ ಸ್ಪಷ್ಟಗೊಳಿಸುವುದಾದರೆ ಅನಿವಾರ್ಯವಾಗಿ ಜನಪದದ ಕಡೆ ಹೋಗಲೇಬೇಕಾಗುತ್ತದೆ. ಜನರ ಒಡಲೊಳಗಿನ ದನಿಯಿಂದ ಹುಟ್ಟಿದ ತ್ರಿಪದಿ ಸಾಲುಗಳು ಹೀಗಿವೆ.

'ಕಣಜ ಬೆಳೆದ ಮನೆಗೆ ಉಣಲಾಕ ಕೂಳಿಲ್ಲ
ಬೀಸಾಕ ಕವಣೆ ಬಲವಿಲ್ಲ । ಕೂಲ್ಯವರ
ಸುಖವಿಲ್ಲದ ಜನುಮವನ್ನು ಸುಡಬೇಕು'

ಎನ್ನುವ ಜನಪದರಿಗೆ ತಮ್ಮ ಸ್ಥಿತಿಗೆ ಕಾರಣರಾದವರ ಬಗ್ಗೆ ಪ್ರತಿರೋಧವಿಲ್ಲ. ಆದರೆ ಕಣಜ ಬೆಳೆದ ಮನೆಗೆ ಉಣಲಾಕ ಕೂಳಿಲ್ಲ ಎನ್ನುವ ಸಾಲುಗಳು ಕೊಡುವ ಪ್ರತಿರೋಧ ಚರಿತ್ರೆಯೊಳಗೆ ಸ್ಥಿರವಾಗಿ ದಾಖಲಾಗುವಂತಹುದು. ಇಲ್ಲಿ ದುಡಿವ ಜನತೆಯ ಅಂತರಾಳದ ನೋವು ಹಾಡಾಗಿ ಹೊರಹೊಮ್ಮಿದೆ. ಈ ಚರ್ಚೆಯಲ್ಲಿ ಜನಪದ ಮತ್ತು ವಚನದ ಸಾಲುಗಳನ್ನು ಒಟ್ಟಿಗೆ ಉಲ್ಲೇಖ ಮಾಡಿದ್ದು ಯಾಕೆಂದರೆ, ಈ ಎರಡೂ ಪರಂಪರೆಗಳಿಂದಲೂ ದಲಿತ ಕಾವ್ಯ ಪ್ರೇರಣೆ ಪಡೆದಿದೆ. ಅದು ಪ್ರತಿರೋಧ, ಕಾವ್ಯದ ಭಾಷೆ, ನಿರೂಪಣಾ

ತಂತ್ರ, ಸಮಾಜವನ್ನು ನೋಡುವ ದೃಷ್ಟಿಕೋನ ಇವು ಇರಬಹುದು. ಆದರೆ ಎಲ್ಲವೂ ಒಂದೇ ಎನ್ನಲು ಸಾಧ್ಯವಿಲ್ಲ. ನೊಂದ ನೋವುಗಳನ್ನು ಹೇಳಲು ಯಾವುದರ ಹಂಗೂ, ಯಾರ ಹಂಗೂ ಬೇಕಿಲ್ಲ ಎಂಬುದನ್ನು ಮೇಲಿನ ಚರ್ಚೆಯು ತಿಳಿಸುತ್ತಿದೆ. ಇದನ್ನೇ ಮಂಜುಳಾ ವೆಂಕಟೇಶಯ್ಯವನರ ಕವನ ಹೀಗೆ ನಿರೂಪಿಸಿದೆ;

ಸೋರುತಿರುವ ಸೂರುಗಳಲಿ
ಸೊರಗುತಿರುವ ಜನಗಳ
ಕರುಳು ಕೂಗು ನನ್ನ ಕವನ
ಗುಡಿಸಲಿನ ಮೂಲೆಯಲಿ
ಉರಿಯುತಿಹ ಪುಟ್ಟ ಹಣತೆಗೆ
ದಿಗ್ಜ್ಯೋತಿ ನನ್ನ ಕವನ
ಬಂಡೆಗಳ ಪುಡಿ ಮಾಡುವ
ತಾಯಿ ಮಡಿಲ ಕಂದನ
ಲಾಲಿ ನನ್ನ ಕವನ[೧೮]

ಸೋರುತಿರುವ ಸೂರು, ಅದರೊಳಗೆ ಬದುಕಿರುವ ಜನ, ಆ ಜನರೊಳಗಿನ ಕರುಳ ಕೂಗು ದಲಿತ ಕಾವ್ಯದ ತಿರುಳು. ಇಲ್ಲಿ ಚಳುವಳಿಯ ತೀವ್ರತೆ ಇದೆ, ಹಾಗೆಯೇ ಒಡಲೊಳಗಿನ ಸಂಕಟಗಳ ನಿವೇದನೆಯಿದೆ. ಇಲ್ಲಿರುವ ಕೂಗು ಏಕಕಾಲದಲ್ಲಿ ಇವೆರಡನ್ನೂ ಹಿಡಿದಿಡಬಲ್ಲದು. ಸೋರು, ಸೂರು, ಕರುಳು, ಕವನ ಒಂದಕ್ಕೊಂದು ಸಂಬಂಧವಿಲ್ಲದಂತಹವು. ಆದರೆ ಸೋರು ಕ್ರಿಯಾಪದದ ಜೊತೆ ಸೂರು, ಕರುಳೆಂಬ ಕ್ರಿಯಾಪದಗಳು ಸೇರಿ ಕ್ರಿಯೆ ಮತ್ತೊಂದು ರೂಪವಾದ ಕವಿತೆಯನ್ನು ಹುಟ್ಟುಹಾಕಿವೆ. ಅದೂ ಹೇಗೆ? ಕವನವೆಂದರೆ ಇದಿಷ್ಟೇ ಎನ್ನುವ ಧೈರ್ಯದ ಸ್ವಾಭಿಮಾನದಲ್ಲಿ.

ದಲಿತ ಕಾವ್ಯ "ಗತಕಾಲದ ಹಿಂಸೆಯ ಬೇರುಗಳನ್ನು ಇವತ್ತಿನ ಅನುಭವಗಳ ಜೊತೆಗೆ ತನ್ನ ಸುತ್ತಲೂ ವ್ಯಾಪಿಸಿರುವ ಇತರೆ ಸಮುದಾಯಗಳ ಮಾನವ ಸಂಬಂಧದ ಮೂಲಕ ಹುಡುಕುತ್ತದೆ."[೧೯] ಹೀಗೆ ಹುಡುಕುವಾಗ ಹುಟ್ಟುವ ಕಾವ್ಯ 'ಭೃಂಗದ ಬೆನ್ನೇರಿ ಬರುವ ಕಲ್ಪನಾ ವಿಲಾಸದಂತೆ' ಕಾಣದ ಲೋಕದ ಕೈವಾಡವಲ್ಲ. ದಲಿತ ಕಾವ್ಯ ಕಂಡ ಲೋಕದ ಕೈವಾಡ. ಅದಕ್ಕೇ ಇವರ ಕಾವ್ಯ ಅರಳುವುದು ಹೀಗೆ

ಮಾವು ಚಿಗುರಿದಂತೆ ಚಿಗುರಬೇಕು ಕವಿತೆ
ಹೂವು ಅರಳಿದಂತೆ ಅರಳಬೇಕು ಕವಿತೆ[೨೦]

ಮಾವು ಚಿಗುರಲು, ಹೂವು ಅರಳಲು ಯಾರ ಅಪ್ಪಣೆಯೂ ಬೇಕಾಗಿಲ್ಲ. ಹಾಗೆಯೇ ಯಾರ ಹಂಗೂ ಬೇಕಾಗಿಲ್ಲ. ನಿಸರ್ಗದ ಅತ್ಯಂತ ಸಹಜ ಚಲನವಲನ ಸ್ಥಿತಿ ಇದು. ಹಾಗೆಯೇ ದಲಿತ ಕಾವ್ಯ ಕೂಡ ಮೂಕನಿಗೆ ಬಾಯಿ ಬಂದಾಗ ನಿರೂಪಿಸುವ ವಾಸ್ತವ ಸತ್ಯಗಳ ಪ್ರತಿಬಿಂಬದಂತೆ ಅದು. ಮೂಕನಿಗೆ ಬಾಯಿ ಬರುವುದು ಅಸಾಧ್ಯವಿರಬಹುದು. ಆದರೆ ಮೂಕರಂತೆ ಮಾಡಲಾದ ಸಮುದಾಯಗಳು ಮಾತನಾಡಿದಾಗ ಉಂಟಾಗುವ ತಲ್ಲಣವೇ ದಲಿತ ಕಾವ್ಯ.

ದಲಿತ ಕಾವ್ಯ ಓದುವಿಕೆಯನ್ನು ಬಯಸುವುದಿಲ್ಲ. ಬದಲಾಗಿ ಹಾಡುವಿಕೆಯನ್ನು ಬಯಸುತ್ತದೆ. ಓದುವಾಗ ಹೊಳೆಯದ ಅರ್ಥಗಳು ಹಾಡಿದಾಗ ಹೊಳೆಯುತ್ತವೆ. ಕೇಳುವಿಕೆಯನ್ನು ಹೆಚ್ಚು ಪ್ರೋತ್ಸಾಹಿಸುತ್ತವೆ. "ಖಾಸಗಿಯಾದ ಅಭಿವ್ಯಕ್ತಿ ಮಾರ್ಗ ಬಹಿರ್ಮುಖಿಯಾದದ್ದರ ಸೂಚನೆ ಇಲ್ಲಿದೆ. 'ವ್ಯಕ್ತಿ' ಹಿಂದೆ ಸರಿದು 'ಸಮಾಜ' ಸಮುದಾಯದ ಇಷ್ಟಾನಿಷ್ಟಗಳು ಮುಂದಾಗಿವೆ. ಕವಿ ಜನರ ಕೊರಳಾಗುವ ಲಕ್ಷಣಗಳು ದಲಿತ ಕಾವ್ಯದಲ್ಲಿ ಅಡಗಿವೆ."[೨೧] ಮೌಖಿಕ ನೆಲೆಯಿಂದ ಬಂದ ದಲಿತ ಕವಿಗಳು ತಮ್ಮ ಕಾವ್ಯಗಳನ್ನು ಮೌಖಿಕಗೊಳಿಸಲು ಯತ್ನಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕ್ರಾಂತಿಗೀತೆಗಳು ತಮ್ಮನ್ನು ಆಲಿಸಲು ಕರೆ ಕೊಡುತ್ತವೆ;

> ಈ ನಾಡ ಮಣ್ಣಿನಲ್ಲಿ
> ಮಣ್ಣಾದ ಜನಗಳ ಕತೆಯ
> ಈ ನಾಡ ಮಣ್ಣಿನಲ್ಲಿ
> ಹೂವಾಗಿ ಅರಳಿದ ಜನರ
> ಹಣ್ಣಿನ ಗಿಡಗಳಲ್ಲಿ
> ಹಣ್ಣಾಗಿ ಉದುರಿದೋರ
> ಕತೆಯನು ಹೇಳುತೀವಿ
> ಕಿವಿಗೊಟ್ಟು ಕೇಳಿರಣ್ಣ
> ನೋವಿನ ರಾಗವನ್ನು[೨೨]

ಹಾಡುವಿಕೆ ಮತ್ತು ಕೇಳುವಿಕೆ ಇದು ಜನಪದರ ಆಶಯ. ಅದೇ ದಲಿತ ಕಾವ್ಯದ ಆಶಯವೂ ಆಯಿತು. ದಲಿತರ ಮೇಲೆ ನಡೆಸಿದ ದೌರ್ಜನ್ಯ, ದಬ್ಬಾಳಿಕೆಗಳನ್ನು ಕ್ರೂರ ವಾಸ್ತವಗಳನ್ನು ಹಾಡಾಗಿಸಿದರು. ಆ ಮೂಲಕ ಆ ಕ್ರೂರ ವಾಸ್ತವಗಳನ್ನು ಜನತೆಯ ಮನದಾಳಕ್ಕೆ ತಲುಪಿಸಿದರು. ಇಂತಹ ಹಾಡುಗಳು ಏಕಾಂತದಲ್ಲಿ ಹುಟ್ಟುವ ಬದಲು ಸಮೂಹದಲ್ಲಿ ಸೃಷ್ಟಿಯಾಗತೊಡಗಿದವು. "ತನಗೆ ತಾನೇ ಒಳಮುಖಿಯಾಗಿದ್ದ ಕಾವ್ಯ ನಿರೂಪಣೆಯ ಜನಮುಖಿಯಾಯಿತು."[೨೩]

ದಲಿತ ಕಾವ್ಯದ ದೃಷ್ಟಿ ಮುಖ್ಯವಾಗಿ ಮನಗಾಣಿಸುವ ದೃಷ್ಟಿ. ಏಕೆಂದರೆ ದಲಿತರಲ್ಲಿ ಅನಕ್ಷರಸ್ಥ ದುಡಿಮೆಯ ಜನರೇ ಹೆಚ್ಚು. ಕಲಿತವರು ಬೆರಳೆಣಿಕೆಯಷ್ಟು, ಕಲಿಯದವರು ಲೆಕ್ಕವಿಲ್ಲದಷ್ಟು. ಇವರಿಗೆ ಹೋರಾಟದ ಕಿಚ್ಚು ಹಚ್ಚಬೇಕಾದರೆ ಅದು ಮೌಖಿಕ ನೆಲೆಯಿಂದ ಮಾತ್ರ ಸಾಧ್ಯ. ಇದನ್ನು ಒಂದು ರೀತಿಯಲ್ಲಿ ಕಾಣಿಸುವ ದೃಷ್ಟಿ ಎನ್ನಲೂಬಹುದು. ಇಂತಹ ಕಾವ್ಯದಲ್ಲಿ ನೋವಿದೆ, ಸಿಟ್ಟಿದೆ, ಆಕ್ರೋಶವಿದೆ, ವಿಡಂಬನೆಯಿದೆ, ಧಗಧಗಿಸುವ ಕ್ರೋಧವಿದೆ, ಪ್ರತಿಭಟನೆಯಿದೆ, ನಿವೇದನೆಯಿದೆ, ಹತಾಶಾಸ್ಥಿತಿಯಿದೆ, ಕರುಣೆಯಿದೆ, ಎಲ್ಲಕ್ಕಿಂತ ಹೆಚ್ಚಾಗಿ ಮಾನವೀಯ ನೆಲೆಗಳ ಹುಡುಕಾಟವಿದೆ. ಬದುಕನ್ನು ಪ್ರೀತಿಸುವ ನೈತಿಕ ನೆಲೆಗಟ್ಟುಗಳಿವೆ. ಸಮಾನ ಆಶಯ ಹೊತ್ತ ದೃಢ ಸಂಕಲ್ಪಗಳಿವೆ ಮತ್ತು ಸಮಾಜ ಹೀಗೇ ಇರಬೇಕೆಂಬ ಕನಸುಗಳಿವೆ.

೧೯೭೦ರ ದಶಕ ಕರ್ನಾಟಕದಲ್ಲಿ ಹೊಸ ಸಂಚಲನ ಉಂಟುಮಾಡಿದ ದಶಕ. ಈ ದಶಕದಲ್ಲಿ ಉಂಟಾದ 'ಮಲ ಹೊರುವ ಪದ್ಧತಿ ಕುರಿತ ಚರ್ಚೆ' (೧೯೭೮), ಬಸವಲಿಂಗಪ್ಪನವರ ಬೂಸಾ ಚಳುವಳಿ (೧೯೭೪), ದಲಿತ ಬರಹಗಾರರ ಯುವ ಸಂಘಟನೆ (೧೯೭೪) ಆನಂತರ ಹುಟ್ಟಿದ 'ದಲಿತ ಸಂಘರ್ಷ ಸಮಿತಿ' ಕರ್ನಾಟಕದಾದ್ಯಂತ ಹೋರಾಟದ ತೀವ್ರತೆಯನ್ನು ಹುಟ್ಟುಹಾಕಿತು. ಎಲ್ಲೆಲ್ಲಿ ದಲಿತರಿಗೆ ದೌರ್ಜನ್ಯವಾಗುತ್ತಿತ್ತೊ ಅಲ್ಲಲ್ಲಿ ಅದನ್ನು ಪ್ರತಿಭಟಿಸಲು ಮುಂದಾಯಿತು. ಈ ಹೋರಾಟದ ಫಲದಿಂದಾಗಿ ಅನೇಕ ಅಕ್ಷರ ಕಲಿತ ಯುವಕರು ಸಾಹಿತ್ಯ ರಚಿಸಲು ಪ್ರಾರಂಭಿಸಿದರು. ಕಾವ್ಯ ಏಕಾಂತದಲ್ಲಿ ಅತ್ಯಂತ ಬೌದ್ಧಿಕ ಚಟುವಟಿಕೆಯ ಹಂತದಲ್ಲಿ ಹುಟ್ಟುತ್ತದೆ ಎಂಬ ನಂಬಿಕೆಗೆ ದಲಿತ ಕಾವ್ಯ ಮೊದಲ ಪೆಟ್ಟು ನೀಡಿತು. ಅದು ವ್ಯಕ್ತಿಯ ಆಂತರಂಗಿಕ ವ್ಯಾಪಾರಕ್ಕಿಂತ ಸಮುದಾಯದೊಳಗಿನ ತಲ್ಲಣಗಳ ನಡುವೆ ಮೂಡಿ, ಸಮುದಾಯದಲ್ಲೇ ಹಾಡಾಗಿ ಪರಿವರ್ತಿತವಾಗಿ ಹೋರಾಟದ ಹೆಜ್ಜೆಗೊಂದು ದಾರಿ ಮೂಡಿಸಿತು. ಇದಕ್ಕೆ ತನ್ನ ಹಿಂದಿನ ಪರಂಪರೆಯ ಕಾವ್ಯದ ನೆಲೆಗಟ್ಟು ಬೇಕಾಗಿರಲಿಲ್ಲ. ಬದಲಾಗಿ ಆ ಪರಂಪರೆಯನ್ನೇ ಧಿಕ್ಕರಿಸುವ ನೆಲೆಯಲ್ಲಿ ತನ್ನ ಸ್ವರೂಪ ಕಂಡುಕೊಂಡಿತು.

ಚದುರಿದ ಶಬ್ದಗಳನ್ನು ಸಂಚಯಿಸಿ
ವಾಕ್ಯದ ಅರ್ಥಗಳನ್ನು ತುಂಬುವುದು ಹೇಗೆ?
ವಿವಿಧ ವರ್ಣಗಳಲ್ಲಿ ವಿಭಜನೆಗೊಂಡ
ಮೂಲವರ್ಣವನ್ನು ಕಾಣುವುದು ಹೇಗೆ?
ಕ್ಷರವಾಗುತ್ತಿರುವ ಬದುಕನ್ನು ಅಕ್ಷರವಾಗಿಸುವುದು ಹೇಗೆ ?
ಅಕಾವ್ಯ ಅಧೋಜಗತ್ತನ್ನು ಕಾವ್ಯವಾಗಿಸುವುದು ಹೇಗೆ?[೨೪]

ಅನುಭವದ ಆಳವನ್ನು ಮಾತಿನಲ್ಲಿ ಅಭಿವ್ಯಕ್ತಿಗೊಳಿಸುವ ಕಾವ್ಯ ನೆಲೆಗಿಂತ ಆಚೆ ನಿಂತು ಕ್ಷರವಾಗುತ್ತಿರುವ ಬದುಕನ್ನು ಅಕ್ಷರವಾಗಿಸುವತ್ತ ದಲಿತ ಕಾವ್ಯದ ಚಿಂತನೆ ಸಾಗಿದೆ. ಯಾವುದನ್ನು ಕಾವ್ಯವಲ್ಲ ಎಂದು ಕರೆಯಲಾಗಿತ್ತೊ ಅದನ್ನೆ ಕಾವ್ಯವಾಗಿಸುವ ಪರಿ ಇಲ್ಲಿದೆ. ಕಾವ್ಯ ವ್ಯಕ್ತಿಯೊಳಗಿನ ಹಪಹಪಿತನದಿಂದ ಬೇರೆಯಾಗಿ ಸಮುದಾಯದೊಳಗಿನ ತಲ್ಲಣಗಳಲ್ಲಿ ಐಕ್ಯಗೊಂಡಿತು. ತನ್ನನ್ನು ತಾನು ಕಂಡುಕೊಂಡಾಗ ಹೊರಹೊಮ್ಮುವ ಸ್ವರೂಪವೇ ಇಂತಹುದು. ಕಾವ್ಯ ಎಂಬುದಕ್ಕೆ ಪ್ರತಿರೋಧವಾಗಿ ಅಕಾವ್ಯ ಎಂದಿರುವ ಮೇಲಿನ ಸಾಲುಗಳು ಕಾವ್ಯದ ಪಾರಂಪರಿಕ ನೆಲೆಗಟ್ಟಿಗೆ ವಿರುದ್ಧ ಚಲನೆಯಲ್ಲಿ ಚಲಿಸಿದಂತೆ ಕಾಣುತ್ತದೆ.

ತನ್ನ ಅಭಿವ್ಯಕ್ತಿಗೆ ಸಹಜ ಸ್ಪರ್ಶ ನೀಡಿದ ದಲಿತ ಕಾವ್ಯವು, ಕಾವ್ಯದ ಪಾರಂಪರಿಕ ಮೌಲ್ಯಗಳನ್ನು ಬದಿಗೆ ತಳ್ಳಿ ತನ್ನ ಸಮುದಾಯದ ಮೇಲೆ ನಿರಂತರ ನಡೆದ ದಬ್ಬಾಳಿಕೆ, ದೌರ್ಜನ್ಯಗಳನ್ನು ಅಭಿವ್ಯಕ್ತಿಸಿತು. ಕನ್ನಡ ಕಾವ್ಯ ಪರಂಪರೆಯು ಮಡಿವಂತಿಕೆಯ ಹೆಸರಿನಲ್ಲಿ ದೂರ ಸರಿಸಿದ್ದನ್ನು ಮೊದಲ ಬಾರಿಗೆ ದಲಿತ ಕಾವ್ಯ ಮುಂಚೂಣಿಗೆ ತಂದಿತು. ಪುಸ್ತಕವೆಂಬ ಸರಸ್ವತಿಗೆ ಮೈಲಿಗೆಯ ನೆಪವೊಡ್ಡಿ ಅನೇಕ ಪದಗಳು ಅಗೋಚರಕ್ಕೆ ಒಳಗಾಗಿದ್ದವು. ಇಂತಹ ಪದಗಳು ದಲಿತರ ಕ್ರೂರ ಬದುಕನ್ನು ಬಿಚ್ಚಿಡಲು ಇಲ್ಲಿ ಬಳಕೆಯಾದವು.

ನಮ್ಮ ಹೇಲ್ ತಿನ್ನೊ ನಾಯ್ನ ಕ್ವಾಣೆವಳೀಕ್ ಬುಟ್ಕತ್ತಾರೆ
ನಾವ್ ಬೆಳೆದಿತ್ ತಿಂತಾರೆ ನಾವ್ ದುಡುದಿತ್ ತಗತ್ತಾರೆ
ನಾವ್ ಮಾತ್ರ ಬ್ಯಾಡಾ[೨೫]

ನಾ ಮೂಳೆ, ನಾ ಇಂಗೇ ಇರಲ್ಲ
ಕೂಗ್ತಿನಿ, ಸಿಡಿತಿನಿ, ಮನುಷ ಆಯ್ತಿನಿ[೨೬]

ಇಲ್ಲಿ ಬರುವ ಹೇಲು ಉಚ್ಚೆಗಳು, ಮೂಳೆ, ಗಂಟ್ಮೂಳೆಗಳು ಇಡೀ ಸಾಹಿತ್ಯ ಲೋಕದಲ್ಲಿ ಮೂಡಿರಲೇ ಇಲ್ಲ. ಇದ್ದರೂ ಇವುಗಳಿಂದ ಅಸಹ್ಯ ಲೇಪನ ಬರದ ಹಾಗೆ ಉಪಯೋಗವಾಗುತ್ತಿದ್ದವು. ಇವುಗಳ ನಡುವೆಯೇ ಕರಗುತ್ತಿದ್ದ ದಲಿತರ ಬದುಕು ದಲಿತ ಕಾವ್ಯಕ್ಕೆ ಸಹಜವಾಗೇ ವಸ್ತುವಿನ ಪರಿಕರಗಳಾದವು. ಅವಾಸ್ತವ ಕಲ್ಪನಾಲೋಕದಿಂದ ಅದ್ಭುತವಾದುದನ್ನು ಸೃಷ್ಟಿಸುತ್ತೇವೆಂಬ ಭ್ರಮೆ ಈ ಕವಿಗಳದ್ದಲ್ಲ. ಬದಲಾಗಿ ಬದುಕು ಪ್ರತಿಬಿಂಬಿಸುವ ಅನುಭವ ಇವರದು. ಅದಕ್ಕೆ ಈ ಕವಿಗಳು ಮನುಷ್ಯನನ್ನೆ ತನ್ನ ಕಾವ್ಯದ ಮುಖ್ಯ ಕೇಂದ್ರಕ್ಕೆ ತಂದರು. 'ಸಂಬಂಜ ಅನ್ನೋದು ದೊಡ್ಡು ಕನಾ' ಎಂಬ 'ಕುಸುಮಬಾಲೆ'ಯ ಆಶಾವಾದಿತನದಿಂದ ಹೊರಟ ನೆಲೆಗಳಿವು. ತಮ್ಮ ದಿನನಿತ್ಯದ ಆಡುಭಾಷೆಯನ್ನೇ ಕಾವ್ಯದ ಭಾಷೆಯನ್ನಾಗಿ ಪರಿವರ್ತಿಸುತ್ತಾ ಮೂಡಿ ಬಂದದ್ದೇ ದಲಿತ

ಕಾವ್ಯ. ಒಡಲೊಳಗಿನ ತವಕ ಹೊರ ಬಿದ್ದಾಗ ಅರ್ಥವಾಗುವುದು ಮತ್ತು ಅರ್ಥೈಸಲು ನೆರವಾಗುವುದು ತನ್ನ ದಿನನಿತ್ಯದ ಆಡುಭಾಷೆ. ತನ್ನ ಜನರಿಗೆ ತಲುಪಲು ದಲಿತ ಕವಿಗಳು ಕಂಡುಕೊಂಡ ಮಾರ್ಗವಿದು.

ದಲಿತ ಕಾವ್ಯ ಹೆಸರೇ ಹೇಳುವಂತೆ ನೊಂದವರ ಅಭಿವ್ಯಕ್ತಿಯ ಸಂಕೇತವಾಗಿ ಹುಟ್ಟುಕೊಂಡ ಕಾವ್ಯ. ಅದಕ್ಕೆ ಅದು ಸದಾ ಹಸಿದ ಒಡಲಿನ ಸುತ್ತಾ ಸುತ್ತುತ್ತಿರುತ್ತದೆ. ಹಸಿದವರ ಆರ್ತನಾದ ಕಾವ್ಯದ ನಿರೂಪಣೆಯನ್ನು ರೂಪಿಸಿದೆ. ಸ್ವರೂಪಕ್ಕೊಂದು ಹೊಸತನ ಒದಗಿಸಿದೆ. ಇದರಿಂದಾಗಿಯೇ ದಲಿತ ಕವಿಗಳು ತಾವು ಕಾವ್ಯ ಬರೆಯುವುದು ಯಾರಿಗಾಗಿ ಎಂಬುದನ್ನು ತಮ್ಮ ಕಾವ್ಯ ಮುಖೇನವೇ ಘೋಷಿಸಿಕೊಳ್ಳುತ್ತಾರೆ. ಎಲ್. ಹನುಮಂತಯ್ಯ ಅವರ 'ಕವಿತೆ ಬರೆಯುತ್ತೇನೆ' ಕವನ ಇದಕ್ಕೊಂದು ಸ್ಪಷ್ಟ ನಿದರ್ಶನ. ಅದು ನಿರೂಪಿತಗೊಂಡಿರುವುದು ಹೀಗೆ;

ನಾನು ಕವಿತೆ ಬರೆಯುತ್ತೇನೆ
ಹಸಿದ ಕಂಗಳ ತುಂಬ ಕೊತಕೊತ
ಕುದಿವ ಅನ್ನದ ಮಡಿಕೆಯ
ಹೊತ್ತವರ ಬಗ್ಗೆ
ನಾನು ಕವಿತೆ ಬರೆಯುತ್ತೇನೆ
ಮಡಿಮೈಲಿಗೆಗಳ ಶಾಪಕ್ಕೆ
ಮನುವೆಂಬ ರಾಕ್ಷಸನ
ಕುರೂಪಗಳಿಗೆ ಖಡ್ಗಗಳಾಗಿ
ನರಳುವ ನಿತ್ಯ ಸುಮಂಗಲಿಯರ ಬಗ್ಗೆ[೨೭]

ಕವಿತೆಯನ್ನು ಬರೆಯುವುದರ ಧ್ಯೇಯ ಮತ್ತು ಯಾರಿಗಾಗಿ ಬರೆಯಬೇಕೆಂಬುದರ ದೃಢ ನಿಲುವು ಇಲ್ಲಿ ಗಟ್ಟಿಯಾಗಿದೆ. ಆದರೆ ತಾನು ಆರಿಸಿಕೊಂಡಿರುವ ವಿರೋಧಿ ಗುಂಪು ಮಾತ್ರ ದಲಿತ ಕೂಲಿಯ ನೆಲೆಗಳಿಂದ ಹುಟ್ಟಿಲ್ಲವೆಂಬುದನ್ನು ತೋರಿಸಿಕೊಡುತ್ತಿದೆ. ಏಕೆಂದರೆ ದಲಿತರ ಶತೃಗಳು ವಾಸ್ತವದಲ್ಲಿ ಬೇರೆಯೇ ಇದ್ದಾರೆ. ಆದರೆ ದಲಿತ ಕಾವ್ಯ ಇಲ್ಲಿ ಒಬ್ಬರನ್ನು ಮಾತ್ರ ಕೇಂದ್ರೀಕರಿಸಿದೆ. ಇಂತಹ ಅಪಾಯಗಳಿಂದ ಬಿಡುಗಡೆಯಾಗಬೇಕಾದ ಅನಿವಾರ್ಯತೆಯೂ ಇಂದು ಇದೆ.

ದಲಿತ ಕಾವ್ಯದಲ್ಲಿ ಪ್ರಾದೇಶಿಕವಾದ ಹೆಜ್ಜೆ ಗುರುತುಗಳಿವೆ. ಒಂದೊಂದು ಪ್ರದೇಶದ ಶೋಷಣೆಯನ್ನು ಅಲ್ಲಲ್ಲಿನ ಕವಿಗಳು ಹಾಡಿನ ಮೂಲಕ ಕಟ್ಟಿಕೊಟ್ಟಿದ್ದಾರೆ. ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಆಯಾ ಪ್ರದೇಶದ ಶೋಷಣೆಗಳು ಒಬ್ಬೊಬ್ಬ

ಕವಿಯನ್ನು ಹುಟ್ಟುಹಾಕಿವೆ. ಇನ್ನೊಂದು ಆಯಾಮದಲ್ಲಿ ಆಯಾ ಪ್ರದೇಶದಲ್ಲಿನ ದೌರ್ಜನ್ಯ ದಬ್ಬಾಳಿಕೆಗಳೇ ಕಾವ್ಯವನ್ನು ರೂಪಿಸಿವೆ ಮತ್ತು ಅಕ್ಷರ ರೂಪ ಪಡೆದಿವೆ. ಆದ್ದರಿಂದಲೇ ದಲಿತ ಕವಿಗಳು ತಾವು ನಿಂತ ನೆಲದಿಂದ ಕಾವ್ಯವನ್ನು ರೂಪಿಸುತ್ತಾರೆ. ಇದನ್ನು ಮಲ್ಲಿಕಾರ್ಜುನ ಆಮ್ಲೆ ಅವರ 'ನನ್ನ ಕವನಗಳು' ನಿರೂಪಿಸುವ ಬಗೆ ಹೀಗಿದೆ;

ನನ್ನ ಕವನಗಳು
ಅನ್ಯಾಯ ಅತ್ಯಾಚಾರ ಅಸಮಾನತೆಯ ವಿರುದ್ಧ
ಕಿಡಿಕಾರುವ ಸಿಡಿಮದ್ದುಗಳು
ಸಮಾನತೆ ಸೋದರತ್ವ ಬೆಳೆಸುವ
ಪ್ರೇಮದ ಬಳ್ಳಿಗಳು
....
ನನ್ನ ಕವನಗಳು
ಬೀದರ ನಾಡಿನ ತಿರುಕನ ಮನೆಯಲ್ಲಿ
ಹುಟ್ಟುತ್ತಿರುವ ಅನಾಥ ಮಕ್ಕಳು
ಅನ್ನ ನೀರು ಬಟ್ಟೆ ಇಲ್ಲದೆ
ಬೆತ್ತಲೆ ತಿರುಗುತ್ತಿರುವ
ಬೀದಿ ಭಿಕಾರಿಗಳು[೨೮]

ಇಲ್ಲಿ ಕವನ ಅಸಹಾಯಕರ ಪರ ನಿಂತಿದೆ ಮತ್ತು ಅಸಹಾಯಕರನ್ನು ಕುರಿತು ಹಾಡುತ್ತಿದೆ. ದಲಿತ ಕಾವ್ಯ ಯಾರ ಪರ ಎಂಬುದು ಮೇಲಿನ ನಿರೂಪಣೆಯಲ್ಲೆ ಅವಿತುಕೊಂಡಿದೆ. ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯ ಮತ್ತು ದಲಿತರ ವಸ್ತುಸ್ಥಿತಿ ಇಲ್ಲಿ ಕವನವನ್ನು ರೂಪಿಸಿವೆ. ಇರುವ ವ್ಯವಸ್ಥೆಯನ್ನು ನಿರೂಪಿಸುತ್ತಲೇ ಬದಲಾಗಬೇಕಾದ ಅನಿವಾರ್ಯತೆಯನ್ನೂ ಅದು ಮನಗಾಣಿಸುತ್ತಿದೆ.

ಸಾಂಸ್ಕೃತಿಕ ದಾಖಲೆಗಳಾಗಿ, ಅನುಭವದ ತೀವ್ರತೆಯಿಂದ ಸಮಾಜ ಬದಲಾವಣೆಯ ಆಶಯ ಹೊತ್ತು ಹೊರಟ ದಲಿತ ಕಾವ್ಯಗಳು ಮೊದಮೊದಲು ಆಯುಧಗಳಂತೆ ಕಂಡರೂ ನಂತರದ ತಲೆಮಾರಿನವರು ಬಿಂಬಿಸಿದ ಕಾವ್ಯ ಎದುರಾಳಿಯ ಮನಸ್ಸನ್ನು ಆತ್ಮ ವಿಮರ್ಶೆಗೆ ಒಡ್ಡುವ ರೀತಿಯಲ್ಲಿ ಮೂಡಿಬಂತು. ಯಾವುದನ್ನು ಕಾವ್ಯವಲ್ಲ, ಅದು ವಾಚ್ಯ ಎಂದು ದೂರುತ್ತಿದ್ದರೋ ಅಂತಹ ಮಹಾನ್ ಕವಿಗಳಿಗೆ ಉತ್ತರ ನೀಡಲೋ ಎಂಬಂತೆ ದಲಿತರು ಕಾವ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಲು ಪ್ರಾರಂಭಿಸಿದರು. ಎನ್.ಕೆ.

ಹನುಮಂತಯ್ಯ, ಸುಬ್ಬು ಹೊಲೆಯಾರ್, ಆನಂದ್, ಮೂಡ್ನಾಕೂಡು ಚಿನ್ನಸ್ವಾಮಿ, ಸತ್ಯಾನಂದ ಪಾತ್ರೋಟ, ಅನಸೂಯ ಕಾಂಬಳೆ, ಮೊಗಳ್ಳಿ ಗಣೇಶ್, ಹಂಪಣ್ಣ, ರಾಮಪ್ಪ ಮಾದಾರ್, ಶಿವಕುಮಾರ್ ಕಂಪ್ಲಿ ಮುಂತಾದವರು ವಾಚ್ಯತನದಿಂದ ಕಳಚಿಕೊಂಡು ಕಾವ್ಯದ ನಡಿಗೆಗೆ ಹೊಸ ಶಕ್ತಿಯನ್ನು ತುಂಬುತ್ತಿರುವುದಕ್ಕೆ ಪ್ರಬಲ ಸೂಚನೆ. ಆದರೆ ಇದು ಮತ್ತೆ ಬೌದ್ಧಿಕತೆಯ ಕೇಂದ್ರವಾಗದೆ ಜನತೆಯ ಮುಂದೆ ನಿಲ್ಲಬೇಕಾದ ಅನಿವಾರ್ಯತೆಯನ್ನು ಮನಗಾಣಬೇಕಿದೆ.

ದಲಿತ ಕಾವ್ಯದ ವ್ಯಾಪ್ತಿ ಕೇವಲ ಪುಸ್ತಕ ರೂಪದಲ್ಲಿ ದಾಖಲುಗೊಂಡ ಕಾವ್ಯ ಕೃತಿಗಳಷ್ಟೇ ಅಲ್ಲ. ಬದಲಾಗಿ ದಲಿತರು ಕೂಗಿದ ಘೋಷಣೆಗಳಾದಿಯಾಗಿ ಅನ್ಯಾಯ, ದೌರ್ಜನ್ಯ, ದಬ್ಬಾಳಿಕೆ, ಅತ್ಯಾಚಾರ, ಶೋಷಣೆ ಮುಂತಾದವುಗಳ ವಿರುದ್ಧ ದನಿ ತೆಗೆದು ಹೋರಾಟಗಳಲ್ಲಿ ಹಾಡಿದ ಹಾಡುಗಳು, ದಲಿತರ ಸ್ವಾಭಿಮಾನ ಸ್ಫೂರ್ತಿಯಾದ ಅಂಬೇಡ್ಕರ್ ಅವರನ್ನು ದಲಿತ ಕೇರಿಗಳಿಗೆ ಪರಿಚಯಿಸುವ ನಿಟ್ಟಿನಲ್ಲಿ ಕಟ್ಟಿದ ಸ್ವಾಭಿಮಾನಿ ಗೀತೆಗಳು, ಬೀದಿ ನಾಟಕಗಳಲ್ಲಿ ಪ್ರತಿಧ್ವನಿಗೊಂಡ ಹಾಡುಗಳು, ಭಾರತದಾದ್ಯಂತ ನಡೆದ ದೌರ್ಜನ್ಯಗಳ ವಿರುದ್ಧ ಪದ ಕಟ್ಟಿ ಹಾಡಿ ಎಚ್ಚರಿಕೆ ಮೂಡಿಸಿದ ಹೋರಾಟದ ಹಾಡುಗಳು, ಮುದ್ರಣ ರೂಪ ಕಾಣದೆ ದಲಿತರ ಎದೆಯಾಳದಲ್ಲಿ ಅವಿತಿರುವ ಹಾಡುಗಳು, ವಿದ್ವಾಂಸ– ವಿಮರ್ಶಕರ ವಿಮರ್ಶೆಗೆ ಹೆದರಿ ಬರೆದ ಗೀತೆಗಳನ್ನು ಹೊರತರಲಾಗದೆ ಬಚ್ಚಿಟ್ಟುಕೊಂಡಿರುವ ಅನೇಕ ದಲಿತರ ಒಡಲೊಳಗಿನ ಕಿಡಿಗಳು ದಲಿತ ಕಾವ್ಯದ ವ್ಯಾಪ್ತಿಯೊಳಗೆ ನಿಲ್ಲುತ್ತವೆ.

ಇನ್ನು ದಲಿತ ಕಾವ್ಯದ ಒಟ್ಟಾರೆ ಸ್ವರೂಪವನ್ನು ಹಿಡಿಯಲು ಹೊರಟರೆ ಅದಕ್ಕೆ ಸೀಮಿತ ಚೌಕಟ್ಟು ಹಾಕಿಕೊಂಡಂತಾಗುತ್ತದೆ. ಆದರೂ ಇಲ್ಲಿ ಗ್ರಹಿಕೆಗೆ ಸಿಕ್ಕಷ್ಟು ಚರ್ಚಿಸಲು ಪ್ರಯತ್ನಿಸಲಾಗಿದೆ. ದಲಿತ ಕಾವ್ಯ ತನ್ನ ಆಂತರ್ಯದಲ್ಲಿ ವರ್ಣವ್ಯವಸ್ಥೆ, ಜಾತಿ, ದೇವರು, ಸಂಸ್ಕೃತಿ ಮುಂತಾದವುಗಳನ್ನು ಅನಾವರಣಗೊಳಿಸಿದೆ. ಹಾಗೂ ಭೂರ್ಜ್ವಾ, ಭೂಮಾಲಿಕ, ಬಂಡವಾಳಶಾಹಿ, ಪುರೋಹಿತಶಾಹಿ ಮುಂತಾದವುಗಳ ವಿರುದ್ಧ ತನ್ನ ಅಸಹನೆಯನ್ನು ಹೊರಹಾಕಿದೆ. ಈ ಅಸಹನೆಯನ್ನು ಹೊರಹಾಕುತ್ತಲೇ ದಲಿತರು ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಶೋಷಣೆಗೊಳಗಾದ ಕಾರಣಗಳನ್ನು ಕಂಡುಹಿಡಿಯಲು ಮುಂದಾಗಿದೆ. ಅದಕ್ಕೆ ತನ್ನದೇ ಪರ್ಯಾಯಗಳನ್ನು ಸೃಷ್ಟಿಸಿದೆ. ಮತ್ತು ಇತಿಹಾಸ, ಪುರಾಣ, ಪರಂಪರೆಗಳಿಗೆ ಮುಖಾಮುಖಿಯಾಗಿ ದಲಿತ ಸಂಸ್ಕೃತಿ, ದಲಿತ ಪರಂಪರೆಯ ವೈಶಿಷ್ಟ್ಯವನ್ನು ನಿರೂಪಿಸಿದೆ. ಜೊತೆಗೆ ನಾಡಿನಾದ್ಯಂತ ದಲಿತ ಪರವಾದ ಹೋರಾಟವನ್ನು ಸೃಷ್ಟಿಸಿದೆ.

ದಲಿತ ಕಾವ್ಯದಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ ದಲಿತ ಕವಿಗಳು ತಮ್ಮ ಕವನ ಸಂಕಲನಗಳಿಗೆ ಇಟ್ಟಿರುವ ಶೀರ್ಷಿಕೆಗಳು ಕೂಡ ಸಾಹಿತ್ಯ ಅಭಿವ್ಯಕ್ತಿಗಿಂತ ಆಚೆ ನಿಂತು ದಲಿತರ ಪರವಾದ ಆಲೋಚನೆಗಳನ್ನೇ ನಮ್ಮ ಮುಂದಿಡುತ್ತವೆ. ಡಾ. ಬಿ.ಎಂ. ಪುಟ್ಟಯ್ಯನವರು ಗುರುತಿಸಿರುವ ಹಾಗೆ ಕನ್ನಡ ಸಾಹಿತ್ಯದ ಯಾವ ಪರಂಪರೆಯಲ್ಲೂ

ಮನುಷ್ಯಸೂಚಕ ಹೆಸರುಗಳೇ ಇಲ್ಲ. ಅವೆಲ್ಲಾ ಚಂಪೂ, ರಗಳೆ, ಷಟ್ಪದಿ, ಕಂದ, ವಚನ, ನವೋದಯ, ಪ್ರಗತಿಶೀಲ, ನವ್ಯ ಮುಂತಾದವುಗಳ ಹೆಸರಿನಲ್ಲಿ ಸಾಹಿತ್ಯ ಲೋಕದೊಳಗಿನ ಗರ್ಭದಿಂದಲೇ ಜನಿಸಿರುವಂತಹುಗಳು. ಇಲ್ಲೆಲ್ಲೂ ಮನುಷ್ಯ ಸೂಚಕದ ಸಾಹಿತ್ಯದ ಪ್ರಸ್ತಾಪವೇ ಇಲ್ಲ. ಆದರೆ ದಲಿತ ಮತ್ತು ಮಹಿಳಾ ಸಾಹಿತ್ಯ ಮಾತ್ರ ಮನುಷ್ಯ ಕೇಂದ್ರಿತ ಸೂಚಕ ಸಾಹಿತ್ಯದ ಶೀರ್ಷಿಕೆಯನ್ನು ಹೊತ್ತು ಸಾಹಿತ್ಯಕ್ಕಿಂತಲೂ ಮನುಷ್ಯರನ್ನು ಹಾಗೂ ಅವರ ಸಂಬಂಧಗಳ ಸಾಮಾಜಿಕ, ರಾಜಕೀಯ ವ್ಯವಸ್ಥೆಯನ್ನು ಪ್ರಧಾನವೆಂದು, ಮುಖ್ಯವೆಂದು, ಕೇಂದ್ರವೆಂದು ಪರಿಗಣಿಸಲು ಒತ್ತಾಯಿಸುತ್ತದೆ.

ಇಂತಹ ಮನುಷ್ಯ ಸೂಚಕ ಸಾಹಿತ್ಯ ತನ್ನ ಕೃತಿಗಳಿಗೆ ಹೊಲೆಮಾದಿಗರ ಹಾಡು, ಕಪ್ಪು ಕಾಡಿನ ಹಾಡು, ಕಪ್ಪು ಕಾವ್ಯ, ಮೂಕನಿಗೆ ಬಾಯಿ ಬಂದಾಗ, ಚಾಂಡಾಲರ ಕೂಗು, ಬೆಂಕಿಯೊಳಗಿನ ಬದುಕು, ಚಿತ್ರದ ಬೆನ್ನು, ಮಾದಾರ ತಾಯಿ, ನೊಂದವರ ಹಾಡು, ಕಲ್ಲಿಗೂ ಗೊತ್ತಿರುವ ಕತೆ, ಕರಿ ನೆಲದ ಕಲೆಗಳು, ಬೂದಿ ಗೊಬ್ಬರದ ಹಾಡು, ಮಣ್ಣಲ್ಲಿ ಬಿರಿದ ಅಕ್ಷರ, ಹೋರಾಟದ ಹಾಡುಗಳು, ಕೆಂಡದ ನಡುವೆ, ನಾನೊಂದು ಮರವಾಗಿದ್ದರೆ, ಬಿಸಿಲ ಭೂಮಿಯ ಕೋಗಿಲೆ, ಕಾಡು ಕಣಿವೆಯ ಹಕ್ಕಿ, ಕೆರಹೊತ್ತ ಬಸವ, ಹೊಲಗೇರಿಯ ಬೆಳದಿಂಗಳು, ಅಗ್ನಿ ಕಿರೀಟ, ಸೂಜಿಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು ಮುಂತಾದ ಶೀರ್ಷಿಕೆಗಳನ್ನು ಕೊಟ್ಟುಕೊಂಡಿತು. ಇಂತಹ ಶೀರ್ಷಿಕೆಗಳೇ ಕಾವ್ಯದ ನಡಿಗೆಯನ್ನು ತೋರಿಸಿಕೊಟ್ಟವು.

ಹಾಗೆಯೇ ದಲಿತ ಕಾವ್ಯದಲ್ಲಿ ಹಾಸುಹೊಕ್ಕಾಗಿರುವ ಪ್ರಧಾನ ಲಕ್ಷಣವೆಂದರೆ ದಲಿತ ಕಾವ್ಯ ಸಂವಾದಿಸುವ ಅಭಿವ್ಯಕ್ತಿ ಕ್ರಮಗಳು. ಕನ್ನಡ ಕಾವ್ಯ ಪರಂಪರೆ ಇದುವರೆಗೂ ಅಭಿವ್ಯಕ್ತಿಸದ ಅಣ್ಣಂದಿರೆ, ತಮ್ಮಂದಿರೆ, ಅಕ್ಕಂದಿರೆ, ತಂಗ್ಯವ್ವ, ಅವ್ವಂದಿರೆ ಮುಂತಾದ ಸಂಬಂಧವಾಚಕ ಪದಗಳು ದಲಿತ ಕಾವ್ಯದಲ್ಲಿ ನಿರೂಪಣೆಗೊಂಡವು. ಈ ಸಂಬಂಧ ಸೂಚಕ ಪದಗಳೇ ದಲಿತ ಕಾವ್ಯ ತನ್ನ ಅಭಿವ್ಯಕ್ತಿಯೊಳಗಿನ ಧೋರಣೆಗಳು ಜನಪರ ಮತ್ತು ಜನರ ಸಾಮಾಜಿಕ, ರಾಜಕೀಯಾರ್ಥಿಕ ನೆಲೆಗಳಿಗೆ ಸಂಬಂಧಿಸಿದವುಗಳೆಂದು ಸಾಬೀತುಪಡಿಸಿದವು.

ದಲಿತ ಕಾವ್ಯದೊಳಗಿನ ಭಾಷೆಯೂ ಕೂಡ ಭಿನ್ನ ನೆಲೆಯಲ್ಲಿ ಮೂಡಿಬಂದಿತು. ದಲಿತ ಕೇರಿಯ ದಿನನಿತ್ಯದ ಆಡುಭಾಷೆ ಇಲ್ಲಿ ಕಾವ್ಯ ಮತ್ತು ಸಾಹಿತ್ಯದ ರೂಪ ತಾಳಿತು. ಅನಕ್ಷರಸ್ಥ ದಲಿತರನ್ನು ತಲುಪುವ ಬಗೆಗೆ ಹೆಚ್ಚು ಒತ್ತು ಕೊಟ್ಟ ದಲಿತ ಕವಿಗಳು ತಮ್ಮ ಕಾವ್ಯಗಳಲ್ಲಿ ಆದಷ್ಟು ಆಡುಭಾಷೆಗೆ ಒತ್ತು ನೀಡಿದರು. ಕನ್ನಡ ಕಾವ್ಯ ಪರಂಪರೆಯಲ್ಲಿ ಅಗೋಚರವಾಗಿದ್ದ ದಲಿತ ಲೋಕದ ಪದಗಳೆಲ್ಲಾ ದಲಿತ ಲೋಕವನ್ನು ಪರಿಚಯಿಸುವ ತೆರದಿ ಕಾವ್ಯಗಳಲ್ಲಿ ಕಾಣಿಸಿಕೊಂಡವು. ಒಂದು ಸಂಸ್ಕೃತಿಯ ಅನಾವರಣ ಅಲ್ಲಿನ ಭಾಷೆಯ

ಮೇಲೆಯೂ ಅವಲಂಬಿತವಾಗಿರುತ್ತದೆ. ಆದರೆ ಭಾಷೆ ಸಂಸ್ಕೃತಿಯನ್ನು ಮೇಲು-ಕೀಳಿನ ಪರಿಭಾಷೆಯನ್ನು ಕಟ್ಟಿಕೊಡುತ್ತದೆಂದು ಇದುವರೆಗೂ ನಂಬಿಸಲಾಗಿತ್ತು. ಆದರೆ ಯಾವ ಭಾಷೆ, ಸಂಸ್ಕೃತಿಯನ್ನು ಕನಿಷ್ಠವೆಂದು ಕರೆದು ಅವಮಾನಗೊಳಿಸಲಾಗುತ್ತಿತ್ತೊ ಅವುಗಳನ್ನೇ ತಮ್ಮ ಶ್ರೇಷ್ಠತೆಯ ಹೆಗ್ಗುರುತುಗಳನ್ನಾಗಿ ಮಾಡಿಕೊಂಡ ದಲಿತ ಕಾವ್ಯ ತನ್ನ ಅಸ್ತಿತ್ವದ ಪ್ರಶ್ನೆಯಾಗಿ ಅವುಗಳನ್ನು ಮುಂಚೂಣಿಗೆ ತಂದಿತು.

ಭಾಷಿಕ ಅಭಿವ್ಯಕ್ತಿಯೆಂಬುದು ಸಾಮಾಜಿಕ ಮತ್ತು ಆರ್ಥಿಕ ನೆಲೆಗಳಿಂದಲೇ ಆವೃತಗೊಂಡಿರುತ್ತದೆ. ವರ್ಗತಾರತಮ್ಯ ಭಿನ್ನಭಿನ್ನ ನೆಲೆಯಲ್ಲಿ ನೆಲೆಗೊಂಡಿರುವಂತೆ ಭಾಷೆಯೂ ಭಿನ್ನಭಿನ್ನ ರೀತಿಯಲ್ಲಿ ಅಭಿವ್ಯಕ್ತಗೊಳ್ಳುತ್ತಿರುತ್ತದೆ. ಇದಕ್ಕೆ ಸಾಹಿತ್ಯದಲ್ಲಿ ನಿರೂಪಣೆಗೊಳ್ಳುವ ವಿವಿಧ ವರ್ಗದ ಜನಸಾಮಾನ್ಯರ ಅಭಿವ್ಯಕ್ತಿಗಳೇ ಉತ್ತಮ ಉದಾಹರಣೆ. ವರ್ಗ ತಾರತಮ್ಯಗಳು ಯಾವಾಗಲೂ ಭಿನ್ನಭಿನ್ನ ಬಗೆಯಲ್ಲಿ ತಮ್ಮ ಅಭಿವ್ಯಕ್ತಿಯನ್ನು ಹೊರಹಾಕುತ್ತವೆ. ವರ್ಗದ ಮೇಲ್ಪದರದವರಿಗೆ ಭಾಷೆ ತಮ್ಮ ಶೋಷಣೆಯ ನೆಲೆಗಳನ್ನು ನಿರೂಪಿಸಿದರೆ ವರ್ಗದ ತಳ ಸಮುದಾಯಕ್ಕೆ ಧಿಕ್ಕಾರದ ದನಿಯೇ ಪ್ರಧಾನ ಅಭಿವ್ಯಕ್ತಿಯಾಗಿ ನಿರೂಪಣೆಗೊಳ್ಳುತ್ತದೆ.

ದಲಿತ ಕಾವ್ಯದ ಲಕ್ಷಣಗಳಲ್ಲಿ ಪ್ರಧಾನವಾಗಿ ಗಮನಿಸಬೇಕಾಗಿರುವ ಅಂಶವೆಂದರೆ ಅದು ತನ್ನ ಅಭಿವ್ಯಕ್ತಿಗಾಗಿ ಕಂಡುಕೊಂಡಿರುವ ಲಯದ ಪರಿಭಾಷೆ. ಪಾರಂಪರಿಕ ಲಯದ ಪರಿಭಾಷೆಯನ್ನು ಬದಿಗೆ ತಳ್ಳಿದ ದಲಿತ ಕಾವ್ಯ ಓವನಿಗೆ, ಒನಕೆವಾಡು ಜಾನಪದ ಮಟ್ಟುಗಳನ್ನು ಬಳಸಿಕೊಂಡಿದೆ. ಹಾಗೆಯೇ ಆಡುಮಾತಿನ ಲಯ, ಜನಪದ ಮಹಾಕಾವ್ಯಗಳ ನಿರೂಪಣಾ ಕ್ರಮ, ಜನಪದ ಗೀತೆಗಳ ಹಾಡಿನ ಲಯ, ವಚನ ಪರಂಪರೆಯ ವಾಚನ ಲಯ ಮುಂತಾದ ಅಭಿವ್ಯಕ್ತಿ ಕ್ರಮಗಳು ಇಲ್ಲಿ ಬಳಕೆಯಾಗಿವೆ. ದಲಿತ ಕಾವ್ಯದ ಈ ವಾಚನ ಮತ್ತು ವಾಚ್ಯ ಗುಣಗಳೇ ಕಾವ್ಯವನ್ನು ಜನತೆಯ ಹತ್ತಿರ ಕೊಂಡೊಯ್ಯಲು ಸಾಧ್ಯವಾಯಿತು. ಇದರೊಳಗಿನ ಜಾನಪದ ಮಟ್ಟುಗಳು ಜನತೆಯ ಬಾಯಲ್ಲಿ ಬಹುಬೇಗ ಕಾವ್ಯ ನೆಲೆಗೊಳ್ಳುವಂತೆ ಮಾಡಿದವು. ಇದರಿಂದಾಗಿ ಹೋರಾಟ ಹೆಚ್ಚು ತೀವ್ರಗೊಳ್ಳಲು ಸಾಧ್ಯವಾಯಿತು.

ದಲಿತ ಕಾವ್ಯ ತನ್ನ ಅಭಿವ್ಯಕ್ತಿಯ ಮೂಲಕ ನಿರೂಪಿಸಿರುವ ಆಲೋಚನೆಗಳು ದಲಿತರ ಹಿತಾಸಕ್ತಿ ಕಾಪಾಡುವಲ್ಲಿ ಯಾವ ರೀತಿಯ ನೆಲೆಗಟ್ಟನ್ನು ಒದಗಿಸಿಕೊಟ್ಟು ಹೋರಾಟಕ್ಕೆ ಮತ್ತು ಪ್ರತಿನಿರ್ಮಾಣಕ್ಕೆ ಯಾವ ರೀತಿಯ ದಾರಿ ಒದಗಿಸುತ್ತವೆ ಎಂಬುದು ಬಹಳ ಮುಖ್ಯ. ಈ ಹಿನ್ನೆಲೆಯಲ್ಲಿ ದಲಿತ ಕಾವ್ಯವನ್ನು ಚರ್ಚಿಸುವ ವಿಧಾನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

*****

ಕೊನೆ ಟಿಪ್ಪಣಿಗಳು

೧. ದಲಿತಪ್ರಜ್ಞ, ಸಂ. ಡಾ.ಅರ್ಜುನ್ ಗೊಳಸಂಗಿ, ೨೦೦೦, ಪುಟ ೨೩೦

೨. ಕನ್ನಡ ಕಾವ್ಯ ತತ್ವ ಚಿಂತನೆ, ಡಾ.ಜಿ.ಎಸ್. ಶಿವರುದ್ರಪ್ಪ, ೨೦೦೭, ಪುಟ ೨೩

೩. ಹೋರಾಟದ ಹಾಡುಗಳು, ದಲಿತ ಸಂಘರ್ಷ ಸಮಿತಿ ಪ್ರಕಟಣೆ, ೧೯೮೦, ಪುಟ ೪೬

೪. ಸ್ವಾಭಿಮಾನದ ಬೀಡಿಗೆ, ವಿ. ಮುನಿವೆಂಕಟಪ್ಪ, ೧೯೯೬, ಪುಟ ೨೫

೫. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೧೧೯

೬. ಅದೇ ಪುಟ ೧೨೦

೭. ಸ್ವಾಭಿಮಾನದ ಬೀಡಿಗೆ, ವಿ. ಮುನಿವೆಂಕಟಪ್ಪ, ೧೯೯೬, ಪುಟ ೧೮

೮. ಜಿ.ಎಸ್. ಶಿವರುದ್ರಪ್ಪ ಸಮಗ್ರ ಕಾವ್ಯ, ಜಿ.ಎಸ್. ಶಿವರುದ್ರಪ್ಪ, ೧೯೯೭, ಪುಟ ೩೩

೯. ಕಪ್ಪು ಕಾವ್ಯ, ಡಾ. ಅರವಿಂದ ಮಾಲಗತ್ತಿ, ೧೯೮೫, ಪುಟ ೨೩

೧೦. ಕನ್ನಡ ಕಾವ್ಯ ತತ್ವ ಚಿಂತನೆ, ಡಾ.ಜಿ.ಎಸ್. ಶಿವರುದ್ರಪ್ಪ, ೨೦೦೭, ಪುಟ ೧೭೬

೧೧. ಚಂದಿರನ ಕಣ್ಣು ಇಂಗಲಾರದ ಹುಣ್ಣು (ಆಯ್ದ ಕವಿತೆಗಳು), ಮೂಡ್ನಾಕೂಡು ಚಿನ್ನಸ್ವಾಮಿ, ೨೦೦೪, ಪುಟ. ೩೪

೧೨. ಬಡವರ ನಗುವಿನ ಶಕ್ತಿ, (ಸಂ) ಹೆಚ್. ದಂಡಪ್ಪ, ೨೦೦೧, ಪುಟ ೧೬೭

೧೩. ಕದಡು (ಸಾಹಿತ್ಯ ಸಂಸ್ಕೃತಿ ವಿಮರ್ಶೆ), ಡಾ.ಬಿ.ಎಂ. ಪುಟ್ಟಯ್ಯ, ೨೦೦೮, ಪುಟ ೧೬೪

೧೪. ಹೋರಾಟದ ಹಾಡುಗಳು, ದಲಿತ ಸಂಘರ್ಷ ಸಮಿತಿ ಪ್ರಕಟಣೆ, ೧೯೮೦ ಪುಟ ೫೬

೧೫. ಕದಡು (ಸಾಹಿತ್ಯ ಸಂಸ್ಕೃತಿ ವಿಮರ್ಶೆ), ಡಾ.ಬಿ.ಎಂ. ಪುಟ್ಟಯ್ಯ, ೨೦೦೮, ಪುಟ ೧೬೩

೧೬. ಕದಡು (ಸಾಹಿತ್ಯ ಸಂಸ್ಕೃತಿ ವಿಮರ್ಶೆ), ಡಾ.ಬಿ.ಎಂ. ಪುಟ್ಟಯ್ಯ, ೨೦೦೮, ಪುಟ ೧೬೩

೧೭. ದಲಿತ ಕಾವ್ಯ, (ಸಂ) ಕೆ.ಬಿ. ಸಿದ್ದಯ್ಯ, ಎಚ್. ಗೋವಿಂದಯ್ಯ, ನಟರಾಜ ಬೂದಾಳ್, ೧೯೯೬, ಪುಟ ೭

೧೮. ಧರೆ ಹತ್ತಿ ಉರಿದೊಡೆ, ಮಂಜುಳಾ ವೆಂಕಟೇಶಯ್ಯ, ೨೦೦೩, ಪುಟ ೩೯

೧೯. ದಲಿತ ಕಥನ, ಡಾ. ಮೊಗಳ್ಳಿ ಗಣೇಶ್, ೨೦೦೬, ಪುಟ ೮೦

೨೦. ಕಾಡುಕಣಿವೆಯ ಹಕ್ಕಿ, ಡಾ.ವಿ. ಮುನಿವೆಂಕಟಪ್ಪ, ೧೯೯೯, ಪುಟ ೯

೨೧. ದಲಿತ ಬಂಡಾಯ ಕಾವ್ಯ ವಿಚಾರವಾದಗಳು, ಪ್ರಾಹ್ಲಾದ ಅಗಸನಕಟ್ಟೆ, ೨೦೦೪ ಪುಟ. ೧೩೨

೨೨. ಹೋರಾಟದ ಹಾಡುಗಳು, ದಲಿತ ಸಂಘರ್ಷ ಸಮಿತಿ ಪ್ರಕಟಣೆ, ೧೯೮೦ ಪುಟ ೫

೨೩. ಕದಡು (ಸಾಹಿತ್ಯ ಸಂಸ್ಕೃತಿ ವಿಮರ್ಶೆ), ಡಾ.ಬಿ.ಎಂ. ಪುಟ್ಟಯ್ಯ, ೨೦೦೮, ಪುಟ ೧೬೪

೨೪. ಅಮರಚಿಂತ ಕಾವ್ಯ, ಜಂಬಣ್ಣ ಅಮರಚಿಂತ, ೧೯೯೩, ಪುಟ ೬೨

೨೫. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೫೯

೨೬. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೫೮

೨೭. ಅಕ್ಷರ ಅಕ್ಷರವೇ, ಎಲ್. ಹನುಮಂತಯ್ಯ, ೨೦೦೨, ಪುಟ ೩೭

೨೮. ಕೆಂಪು ಸೂರ್ಯ ಮತ್ತು ಇತರೆ ಕವನಗಳು, ಮಲ್ಲಿಕಾರ್ಜುನ ಜೆ. ಆಮ್ಮೆ, ೧೯೯೭, ಪುಟ. ೫೫

ಅಧ್ಯಾಯ ಐದು

ದಲಿತ ಕಾವ್ಯ : ಕಾವ್ಯತತ್ವ

೫.೧. ದಲಿತ ಕಾವ್ಯ : ವಾಚ್ಯದ ಹೊದಿಕೆ

೫.೨. ದಲಿತ ಕಾವ್ಯ : ಪ್ರತಿಮೆಗಳ ಹೊದಿಕೆ

೫

ದಲಿತ ಕಾವ್ಯ : ಕಾವ್ಯತತ್ವ

ಕಾವ್ಯತತ್ವಕ್ಕೆ ಒಂದು ನಿರ್ದಿಷ್ಟ ಮಾನದಂಡದ ಅಳತೆಗೋಲಿಟ್ಟು ಅಳೆಯುವುದು ಸಾಂಪ್ರದಾಯಿಕ ಕಾವ್ಯ ವಿಶ್ಲೇಷಣೆಯ ಮಾದರಿಗಳಲ್ಲೊಂದು. ಕಾವ್ಯವನ್ನು ಸಾಮಾಜಿಕ ನೆಲೆಯಲ್ಲಿಟ್ಟು ಅಳೆಯುವುದು ಮತ್ತೊಂದು ವಿಮರ್ಶೆಯ ವಿಧಾನ. ಈ 'ಅಳೆಯುವುದು' ಎಂಬ ಪದ ಮಾರುಕಟ್ಟೆಯ ಲೆಕ್ಕಾಚಾರವಾದೀತು. ಆದರೆ ಇದುವರೆಗೆ ಆ ಕೆಲಸವನ್ನು ಕೆಲವು ವಿಮರ್ಶೆಗಳು ಮಾಡಿವೆ. ಇನ್ನೂ ಕೆಲವು ವಿಮರ್ಶೆಗಳು ಕಾವ್ಯದ ವಿಸ್ತಾರತೆಯನ್ನು ತೋರಿಸಿಕೊಡುವಲ್ಲಿ ತಮ್ಮದೇ ಆದ ಕೊಡುಗೆ ನೀಡಿವೆ. ಮೇಲಿನ ಈ ಚರ್ಚೆಯ ಉದ್ದೇಶ ದಲಿತ ಕಾವ್ಯವನ್ನು ಮೇಲಿನ ಎರಡೂ ನೆಲೆಗಟ್ಟಿನಲ್ಲಿ ನೋಡಲಾಗಿದೆ. ಆ ಮೂಲಕ ಕಾವ್ಯದ ಸಾಧ್ಯಾಸಾಧ್ಯತೆಗಳನ್ನು ಕುರಿತು ತೀರ್ಮಾನಿಸಲಾಗಿದೆ. ಕಾವ್ಯವೆಂದರೆ 'ಹೀಗೇ ಇರಬೇಕು' ಎಂದುಕೊಂಡಿದ್ದ ಸಾಂಪ್ರದಾಯಿಕ ಮಾರ್ಗಕ್ಕೆ ಭಿನ್ನ ರೀತಿಯಲ್ಲಿ ನಿಂತು ನಿರೂಪಿಸಿದ ದಲಿತ ಕಾವ್ಯ ಕಾವ್ಯದ ಚೌಕಟ್ಟಿಗೆ ಹೊಸತನ ತಂದಿತು. ಅಥವಾ ಇನ್ನೊಂದು ಮಗ್ಗುಲಲ್ಲಿ ಚರ್ಚಿಸುವುದಾದರೆ 'ಕಾವ್ಯ' ದಲಿತರೆಡೆಗೆ ಬಂದ ತಕ್ಷಣವೇ ತನ್ನ ರೂಪ, ಸ್ವರೂಪವನ್ನು ಬದಲಾಯಿಸಿಕೊಂಡಿತು. ಏಕೆಂದರೆ ದಲಿತರು ಕಾವ್ಯ ಮುಖೇನ ತಮ್ಮ ಎದೆಯ ನೋವುಗಳನ್ನು, ಶತಮಾನದ ಸಂಕಷ್ಟಗಳನ್ನು ಹೊರಹಾಕಿದ್ದರು. ಇಲ್ಲಿ ನೋವು ಕಾವ್ಯವಾಗಿ ಮೈದಾಳುವಾಗ ಅದು ತನ್ನ ಹಿಂದಿನ ಎಲ್ಲಾ ಗಡಿಗಳನ್ನು ಮೀರಿ ಕಾವ್ಯಕ್ಕೇ ಒಂದು ಹೊಸದಾದ ನಿರೂಪಣಾ ಶಕ್ತಿಯನ್ನು ಒದಗಿಸುತ್ತದೆ. ಇದು ದಲಿತ ಕಾವ್ಯದಲ್ಲಿ ಬಹು ಮುಖ್ಯವಾಗಿ ನಡೆದಿದೆ.

ಕಾವ್ಯ ವಿಶ್ಲೇಷಣೆಯಲ್ಲಿ ರೂಪ ಸ್ವರೂಪಗಳ ಚರ್ಚೆ ಬಹಳ ಮುಖ್ಯ. ಆದರೆ ಇವುಗಳು ಕಾವ್ಯದ ಆಶಯ ಮತ್ತು ಅಭಿವ್ಯಕ್ತಿಯ ಉದ್ದೇಶವನ್ನು ಗೌಣಗೊಳಿಸಬಾರದು. ಕಾವ್ಯಕ್ಕಾಗಿ ಕಾವ್ಯ ಅಥವಾ ಓದಿ ಆನಂದಿಸಲಿಕ್ಕೆ ಅಂದರೆ ಚರ್ಚೆಯ ವಿಷಯವೇ ಬೇರೆ. ಆದರೆ ಕಾವ್ಯ ಸಾಮಾಜಿಕ ಬದಲಾವಣೆಗೆ ಸನ್ನದ್ದವಾದಾಗ ಅದರ ಚರ್ಚಿತ ವಿಷಯವೇ ಬೇರೆ. ಇವೆರಡೂ ಮೂಲದಲ್ಲಿ ಅಥವಾ ಆಳದಲ್ಲಿ ಬಹಳ ಭಿನ್ನತೆಯನ್ನು ಹೊಂದಿವೆ. ಒಂದರ ನೆಲೆಯಲ್ಲಿ ನಿಂತು ಮತ್ತೊಂದನ್ನು ವಿಶ್ಲೇಷಿಸಲು ಬರುವುದಿಲ್ಲ. ಇಲ್ಲಿ ಈ ಮಾತುಗಳನ್ನು ಬರೆಯುತ್ತಿರುವುದರ ಹಿಂದಿನ ಉದ್ದೇಶ ದಲಿತ ಕಾವ್ಯ ಚರ್ಚೆಗೆ ಅಗತ್ಯ ಪರಿಕರಗಳ

ಹುಡುಕಾಟಕ್ಕಾಗಿ. ಈ ಹುಡುಕಾಟ ಕಾವ್ಯದ ಪರಂಪರೆಗಳಿಗೆ ದಲಿತ ಕಾವ್ಯ ಕೊಟ್ಟ ಪ್ರತಿಕ್ರಿಯೆಗಳ ಹುಡುಕಾಟವೂ ಆಗಿದೆ. ಈ ಹಿನ್ನೆಲೆಯಲ್ಲಿ ದಲಿತ ಕಾವ್ಯದಲ್ಲಿ ಪ್ರಧಾನವಾಗಿ ನೆಲೆನಿಂತ ವಾಚ್ಯ ಮತ್ತು ಆ ವಾಚ್ಯದೊಳಗೆಯೇ ನೆಲೆನಿಂತ ಪ್ರತಿಮೆ ಪ್ರತೀಕಗಳ ಚರ್ಚೆ ಈ ಅಧ್ಯಾಯದ ವಿಶ್ಲೇಷಣೆಯನ್ನು ರೂಪಿಸಿದೆ.

ದಲಿತ ಕಾವ್ಯದಲ್ಲಿ ಕಾವ್ಯತತ್ವದ ಚರ್ಚೆ ಮತ್ತದೇ ಸಾಂಪ್ರದಾಯಿಕ ವಿಮರ್ಶಾ ನೋಟಗಳ ಅಪಾಯಕ್ಕೆ ಸಿಲುಕಬಹುದೆಂಬ ಗುಮಾನಿ ಇದೆ. ಆದರೂ ಕಾವ್ಯದ ರೂಪ ಮತ್ತು ಸ್ವರೂಪದ ಚರ್ಚೆ ಅತ್ಯಗತ್ಯ. ಏಕೆಂದರೆ ಕಾವ್ಯಕ್ಕೆ ಒಂದು ರೂಪವಿರುತ್ತದೆ. ಅದು ಆ ರೂಪದ ಮೂಲಕವಾಗೇ ತನ್ನ ಅಸ್ತಿತ್ವವನ್ನು ನಿರೂಪಿಸುತ್ತಿರುತ್ತದೆ. ದಲಿತ ಕಾವ್ಯದ ಚರ್ಚೆಯಲ್ಲಿ ಕಾವ್ಯವೆಂದರೆ ಹೀಗೇ ಇರಬೇಕೆಂಬ ಮಾನದಂಡದಲ್ಲಿ ನೋಡಲು ಹೋದರೆ ಕೆಲವೇ ಕೆಲವು ಕೃತಿಗಳು ಮಾತ್ರ ಈ ಪರಿಧಿಯೊಳಗೆ ನಿಲ್ಲುತ್ತವೆ. ಬಹುತೇಕ ಕೃತಿಗಳು ಈ ಪರಿಧಿಯಿಂದಾಚೆ ನಿಂತು ಅಭಿವ್ಯಕ್ತಿಸಿಕೊಂಡಿವೆ. ಆದ್ದರಿಂದ ಮೌಲ್ಯನಿರ್ಣಯದ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ದಲಿತರ ಆಶಯಗಳೇ ಇಲ್ಲಿ ಪ್ರಧಾನ. ನೋವುಗಳೇ ಇಲ್ಲಿ ಕಾವ್ಯದ ರೂಪವಾಗಿ ಮೈದಾಳಿವೆ. ಶತಮಾನಗಳ ಶೋಷಣೆ ಇಲ್ಲಿನ ಕಾವ್ಯದ ಸ್ವರೂಪವನ್ನು ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ದಲಿತ ಕಾವ್ಯವನ್ನು ನೋಡುವುದು ಅತ್ಯವಶ್ಯಕವಾಗಿದೆ. ಈ ಚರ್ಚೆಯನ್ನು ಬೇರೊಂದು ನೆಲೆಯಲ್ಲಿ ನಿರೂಪಿಸುವುದಾದರೆ ದಲಿತ ಕಾವ್ಯದಲ್ಲಿ ಕಾವ್ಯಕ್ಕೆ ಬೇಕಾದ ಪರಿಕರಗಳು ಇಲ್ಲ ಎಂದು ಸಾರಾಸಗಟಾಗಿ ತಿರಸ್ಕರಿಸಲಾಗುವುದಿಲ್ಲ. ಆದರೆ ಸಾಂಪ್ರದಾಯಿಕ ದೃಷ್ಟಿಕೋನಗಳಿಂದ ದಲಿತ ಕಾವ್ಯ ನೋಡಿದರೆ ಅದರ ಅಭಿವ್ಯಕ್ತಿಯ ಹಿಂದಿನ ಉದ್ದೇಶ ಅರ್ಥವಾಗುವುದಿಲ್ಲ. ಆದ್ದರಿಂದ ದಲಿತ ಕಾವ್ಯದ ಕಾವ್ಯತತ್ವವನ್ನು ಅದರ ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯ ವಸ್ತುಸ್ಥಿತಿಯೊಂದಿಗೆ ಅವಲೋಕಿಸಬೇಕಾಗಿದೆ. ಏಕೆಂದರೆ ಈ ಮೊದಲೇ ಹೇಳಿದಂತೆ ದಲಿತರ ವಸ್ತುಸ್ಥಿತಿಯೇ ಕಾವ್ಯದ ರೂಪ ಮತ್ತು ಸ್ವರೂಪವನ್ನು ಬದಲಾಯಿಸಿದೆ. ಈ ಹಿನ್ನೆಲೆಯಲ್ಲಿ ದಲಿತ ಕಾವ್ಯ ನೋಡುವುದು ಅತ್ಯವಶ್ಯಕ. ಪ್ರಸ್ತುತ ಈ ಅಧ್ಯಾಯದಲ್ಲಿ ದಲಿತ ಕಾವ್ಯದ ಎರಡು ನೆಲೆಗಳನ್ನು ಕುರಿತು ಚರ್ಚಿಸುತ್ತಾ ದಲಿತ ಕಾವ್ಯದ ಕಾವ್ಯತತ್ವದ ಕೇಂದ್ರಪ್ರಜ್ಞೆಯನ್ನು ಹಿಡಿದಿಡುವ ಪ್ರಯತ್ನ ಮಾಡಲಾಗಿದೆ.

೫.೧ ದಲಿತ ಕಾವ್ಯ : ವಾಚ್ಯದ ಹೊದಿಕೆ

ದಲಿತ ಕಾವ್ಯ ವಾಚ್ಯವನ್ನು ಹೊದಿಕೆಯನ್ನಾಗಿ ಮಾಡಿಕೊಂಡಿದೆಯೋ ಅಥವಾ ವಾಚ್ಯವೇ ದಲಿತ ಕಾವ್ಯವನ್ನು ಆವರಿಸಿದೆಯೋ? ಒಟ್ಟಿನಲ್ಲಿ ದಲಿತ ಕಾವ್ಯದಲ್ಲಿ ವಾಚ್ಯವಿದೆ. ವಾಚ್ಯವಿಲ್ಲದೆ ಬೇರೇನೂ ಇಲ್ಲ ಎನ್ನುವುದು ದಲಿತ ಕಾವ್ಯದ ಅಭಿವ್ಯಕ್ತಿಗೇ ಹಿನ್ನಡೆ ನೀಡಿದಂತೆ. ಇಲ್ಲಿ ಪ್ರಮುಖವಾಗಿ ಕಾವ್ಯತತ್ವವನ್ನು ವಾಚ್ಯ ಕಟ್ಟಿರುವ ಬಗೆ ಮತ್ತು ಅದರ ಮೂಲಕ ಅನಾವರಣಗೊಂಡಿರುವ ಸಾಮಾಜಿಕ ನೆಲೆಗಟ್ಟುಗಳನ್ನು ಕುರಿತು ಚರ್ಚಿಸಲಾಗುವುದು.

ವಾಚ್ಯದ ಮೂಲಕವೇ ಅದು ಅಭಿವ್ಯಕ್ತಿಯಾಗಲು ಇದ್ದ ಕಾರಣಗಳು ಹಾಗೂ ಇದರೊಳಗಿನ ಮಿತಿ ಮತ್ತು ವೈರುಧ್ಯಗಳನ್ನು ಕುರಿತು ಚರ್ಚಿಸುವ ಉದ್ದೇಶವೂ ಇಲ್ಲಿದೆ. ಎಲ್ಲಕ್ಕಿಂತ ಹೆಚ್ಚಾಗಿ ಇದರಿಂದಾಗಿ ದಲಿತ ಕಾವ್ಯಕ್ಕೆ ದಕ್ಕಿದ ವಿಶೇಷತೆ ಏನು ಎಂಬುದನ್ನು ಮುಂದೆ ಚರ್ಚಿಸಲಾಗುವುದು.

ದಲಿತ ಕಾವ್ಯವನ್ನು ಇದುವರೆಗೂ ಎರಡು ನೆಲೆಯಲ್ಲಿ ವ್ಯಾಖ್ಯಾನ ಮಾಡಲಾಗಿದೆ. ಒಂದು ಆಸ್ವಾದನಾ ಮತ್ತು ಆರಾಧನಾ ನೆಲೆಯಲ್ಲಿ. ಎರಡನೆಯದಾಗಿ ಅಸಹನೆ ಮತ್ತು ಅಸಮಾಧಾನದ ನೆಲೆಯಲ್ಲಿ ವ್ಯಾಖ್ಯಾನಿಸಲಾಗಿದೆ. ಇವೆರಡಕ್ಕೂ ಕಲೆಯ ನೆಲೆಗಟ್ಟಿನ ಮಾನದಂಡಗಳನ್ನೇ ಉಪಯೋಗಿಸಲಾಗಿದೆ. ಆದರೆ ದಲಿತ ಕಾವ್ಯ ನೋಡುವಾಗ ಈ ಮಾನದಂಡಗಳು ಎಷ್ಟು ಪ್ರಸ್ತುತ ಎಂಬುದು ಬಹಳ ಮುಖ್ಯ. ದಲಿತರ ಸಮಗ್ರ ಅಭಿವ್ಯಕ್ತಿಯನ್ನು ನೋಡಲು ಇವು ಅಡ್ಡಗಾಲು ಹಾಕಿ ನಿಂತಿವೆ. ಭಾಷಿಕವಾಗಿ ಏನನ್ನು ಹೇಳಲಾಗಿದೆಯೋ ಅದಷ್ಟೇ ಸತ್ಯ ಎಂದು ನಂಬುವುದೂ ಕೂಡ ಅಷ್ಟೇ ಅಪಾಯಕಾರಿ. ಏಕೆಂದರೆ ಇಲ್ಲಿ ಒಬ್ಬ ಒಳ್ಳೆಯ ಕವಿಯಾಗಿ ಒಂದು ಒಳ್ಳೆಯ ಕವಿತೆ ರಚಿಸಿದರೆ ಸಾಕು ಎಂಬ ಸೀಮಿತ ದೃಷ್ಟಿಕೋನದಿಂದ ಕೂಡಿದ ಕಾವ್ಯ ದಲಿತ ಕಾವ್ಯವಲ್ಲ. ಬದಲಾಗಿ ಇಲ್ಲಿ ಸಾರ್ವಕಾಲಿಕಗೊಳಿಸುವ ನೋವಿನ ನಿವೇದನೆಗಳಿವೆ. "ಹಿಂಸೆ ಮತ್ತು ಅವಮಾನಗಳನ್ನು ಬದುಕಿನ ಸಂದರ್ಭದಲ್ಲಿ ಅಸ್ಪೃಶ್ಯನೊಬ್ಬ ಇತಿಹಾಸವಾಗಿಯೂ, ವರ್ತಮಾನವಾಗಿಯೂ ಅನುಭವಿಸುತ್ತ ತನ್ನ ಹುಟ್ಟು ಮತ್ತು ಅದರಿಂದ ಪ್ರಾಪ್ತವಾಗುವ ವೃತ್ತಿ, ನಂಬಿಕೆ, ಧಾರ್ಮಿಕ ಆಚರಣೆ, ಹಾಡುಗಬ್ಬಗಳ ಸೃಜನಶೀಲ ಗುಣಗಳ ಬಗ್ಗೆ ಅಭಿಮಾನಪಡುತ್ತಾ ತನ್ನೊಳಗಿನ ಮನುಷ್ಯತ್ವವನ್ನು ತಿರಸ್ಕರಿಸುವ ಉಚ್ಚಜಾತಿಯವರ ವಿಕೃತ ಮನೋಭಾವಗಳನ್ನು ಪ್ರತಿಭಟಿಸುತ್ತ ಬರೆಯುವ ಸಾಹಿತ್ಯಕ್ಕೆ ಸಾರ್ವಕಾಲಿಕ ಸತ್ಯವನ್ನು ಹಿಡಿದಿಡುವ ವಿಶಿಷ್ಟ ಗುಣವಿರುತ್ತದೆ".[೧]

ಕವಿತೆ : ನಾ ಚಿಮ್ಮುವೆ

ಮಲ್ಲಿಗೆಯ ಮೊಗ್ಗು ಕಂಪ ಸೂಸುವಲ್ಲಿ
ಕಾರಂಜಿಯಾಗುವೆ ಶೃಂಗಾರ ಪುಷ್ಪಗಳು ಮಕರಂದ ಬೀರುವಲ್ಲಿ
ಹಿಮಗಿರಿ ಕಂದರ ನದಿತೊರೆ ತೀರಗಳಲ್ಲಿ ನರ್ತಿಸುವೆ
ಚಂದ್ರ ತಾರೆಯರ ಒಡನಾಟ ನನಗೆ
ಯಕ್ಷ ಕಿನ್ನರ ಲೋಕದ ಮಧುರ ವಿಹಾರಿ ನಾನು.
ನಾನು: ಒಮ್ಮೆ ನೋಡು ದೇವಿ
ಹರುಕು ಮುರುಕುಟ್ಟ ಚಿಂದಿ ಜನರ ಕಡೆಗೆ
ಬಣ್ಣಿಸುವೆ ನಿನ್ನಿಂದ ಸುಟ್ಟು ಕರಕಾದ ಜನರ

ಹೊತ್ತಿಗೂಟ ಕಾಣದೆ ಸತ್ತ ನೋಟವಿತ್ತವರ
ಎಂಜಲು ತಂದುಕಾಲುತುಯ್ಯುವ ಭಿಕ್ಷುಕ ಮಂದಿಯ
ಕಸದ ಬುಟ್ಟಿಯ ಕೆದಕಿ ರುಚಿ ಹುಡುಕುವ ಬಸದಿವಯರ[೧]

ಬೆಳದಿಂಗಳು, ಶೀತಲ ಮಂದಮಾರುತ, ಬೆಳಗು, ಬೈಗು, ಚಂದ್ರ, ತಾರೆ, ಮೊಗ್ಗು, ಹೂವು, ಹಿಮಗಿರಿ ಕಂದರ, ನದಿತೊರೆ, ತೀರ ಸಾಗರ, ಮಲ್ಲಿಗೆ ಮುಂತಾದವುಗಳ ವರ್ಣನೆಗಳಲ್ಲಿ ಮೈಮರೆತ ಕವಿತೆಯನ್ನು ಸಮುದಾಯದ ಕಾವ್ಯ ಹರಕು ಚಿಂದಿ ಜನರ ಕಡೆಗೆ ತಿರುಗಿಸಿ ಅವರ ನೋವುಗಳನ್ನು ಕವಿತೆಯ ಮೂಲಕ ಹೊರಹೊಮ್ಮಿಸಲು ಪ್ರಾರಂಭಿಸುತ್ತದೆ. ದಲಿತ ಕಾವ್ಯದ ಸ್ಪಷ್ಟ ನಡಿಗೆ ಯಾವ ಕಡೆಗೆ? ಎಂಬುದು ಮೇಲಿನ ಮಾತುಗಳಲ್ಲಿಯೇ ತಿಳಿಯುತ್ತದೆ.

ಹರಕು ಮುರುಕುಟ್ಟ ಚಿಂದಿಜನ, ಸುಟ್ಟುಕರಕಾದ ಜನ, ಹೊತ್ತಿಗೂಟ ಕಾಣದೆ ಸತ್ತನೋಟವಿರುವ ಜನ, ಎಂಜಲು ತಿಂದು ಕಾಲುತುಯ್ಯುವ ಭಿಕ್ಷುಕ ಮಂದಿ, ಕಸದ ಬುಟ್ಟಿ ಹುಡುಕಿ ಕೆದಕಿ ತಿನ್ನುವ ಮಂದಿ, ಹೊಲಗೇರಿ–ಮಾದಿಗಕೇರಿಯ ಕೊಳಕು, ಹೆಂಡ, ಸುಟ್ಟು ಬಾಡಿನ ಗಂಧ, ಹೇತಲ್ಲೇ ಕೂತುಣ್ಣುವವರ ಕಥೆ, ಮೈಯೆಲ್ಲ ರಣಗಾಯವಾಗಿರುವವರ ಚರಿತ್ರೆ ಬಿಚ್ಚಿಡಲೊರಟ ಕವಿತೆಯನ್ನು ಭಾರತೀಯ ಕಾವ್ಯ ಮೀಮಾಂಸೆ ಮತ್ತು ಕನ್ನಡ ಕಾವ್ಯ ಮೀಮಾಂಸೆಗಳ ನೆಲೆಯಲ್ಲಿ ವ್ಯಾಖ್ಯಾನ ಮಾಡಲು ಹೊರಟರೆ ಇದು ಆಸ್ವಾದನಾ ಪರಂಪರೆಗೆ ಮತ್ತೊಂದು ಸಮರ್ಥನೆಯೇ ಹೊರತು ದಲಿತರ ಸಮಗ್ರ ಬದುಕಿನ ಒಳನೋಟ ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ದಲಿತ ಕಾವ್ಯ ದಲಿತ ವರ್ಗದ ಹಿತಾಸಕ್ತಿಯಿಂದ ಮೂಡಿರುವಂತಹುದು ಮತ್ತು ದಲಿತ ಕಾವ್ಯ ನೋಡುವುದೆಂದರೆ ದಲಿತರ ಸಮಗ್ರ ಬದುಕಿನ ಯಾತನಾಮಯ ಜೀವನವೇ ಹೊರತು ಬೇರೇನೂ ಅಲ್ಲ.

ಕೆರಮೆಟ್ಟು ಹೊಲೆಯುವಂತ ಕಸುಬಣ್ಣ ನಮ್ಮದು
ಸತ್ತ ದನವ ಹೊರುವಂಥ ಕಾಯಕಪ್ಪ ನಮ್ಮದು
ಗುಳಿ ತೋಡಿ ಹೆಣ ಮುಚ್ಚೊ ಕಾರ್ಯವಪ್ಪ ನಮ್ಮದು
ಊರುಕೇರಿ ಕಾಯುವಂಥ ತಳವಾರ್ರು ನಾವು
ಹೇಲೆತ್ತಿ ಕಸ ಗುಡಿಸೊ ಭಂಗಿಗಳು ನಾವು
ಇಂಥ ಜನರ ಬದುಕಿಗೆಲ್ಲಾ
ಮಣ್ಣಾಕಿ ದೋಚಿಕೊಂಡು
ತಾಯಿ ಗಂಡ ಸೂಳೆ ಮಕ್ಕಳು ದಿನದಿನಕೂ ಬಲಿತು ಹೋದ್ರು[೨]

ಇಲ್ಲಿ ವಸ್ತುಸ್ಥಿತಿಯೇ ಪ್ರಧಾನ. ವಸ್ತುಸ್ಥಿತಿಯನ್ನು ಹೇಳಲಿಕ್ಕೆ ಸಹಜ ಮಾತುಗಳು ಸಾಕು. ವಸ್ತುಸ್ಥಿತಿಯನ್ನು ಬಣ್ಣ ಹಚ್ಚಿ ಹೇಳಬೇಕಾದರೆ ಅದಕ್ಕೆ ವಕ್ರೋಕ್ತಿ ಲೇಪನ ಬೇಕು. ಹೇಳುವುದನ್ನು ನೇರವಾಗಿ ಹೇಳದೆ ಸುತ್ತಿ ಬಳಸಿ ಹೇಳುವುದು ಕಾವ್ಯವಾದರೆ, ಹೇಳುವುದನ್ನು ನೇರವಾಗಿ ಹೇಳುವುದು ನೋವಿನ ಕಥೆಯಾಗುತ್ತದೆ. ಉಂಡ ನೋವನ್ನು ಉಂಡಂತೆಯೆ ಹೇಳುವುದರ ಮೂಲಕ ಕಾವ್ಯ ಕಟ್ಟಿದವರು ದಲಿತರು. ಜನಪದರ ಬಾಯಿಂದ ಸಹಜವಾಗಿ ಹೊಮ್ಮುವ ಪದಗಳಂತೆ ಇದು. ತಾನಿರುವ ಪರಿಸ್ಥಿತಿಯನ್ನು, ತನಗಾಗಿರುವ ದುಃಸ್ಥಿತಿಯನ್ನು ಹೇಳಿಕೊಳ್ಳುತ್ತಿರುವ ಮೇಲಿನ ಹೋರಾಟದ ಹಾಡು ವಾಚ್ಯತನದಿಂದಲೇ ದಲಿತರ ಬದುಕನ್ನು ಹಿಡಿದಿಟ್ಟಿದೆ.

ವಚನ ಸಾಹಿತ್ಯದ ಅಭಿವ್ಯಕ್ತಿ ಕ್ರಮವನ್ನು ಸಂಪೂರ್ಣವಾಗಿ ಬಳಸಿಕೊಂಡಿರುವ ಮೇಲಿನ ಕವಿತೆ 'ನಮಗೆ' ಎನ್ನುವಾಗ ದಲಿತರ ಕಾಯಕವನ್ನು 'ನಾವು' ಎನ್ನುವಾಗ ದಲಿತರಿರುವ ಪರಿಸ್ಥಿತಿಯನ್ನು ಕಟ್ಟಿಕೊಡುತ್ತಿದೆ. "ಕ್ರಾಂತಿಕಾರಿ ರಾಜಕೀಯ ಪ್ರಜ್ಞೆಯುಳ್ಳ ಕವಿ ಹೊಸ ಅನುಭವ, ಭಾಷೆಯನ್ನು ಸೃಷ್ಟಿಸಬಲ್ಲ. ಆಗ ಕಾವ್ಯ ಸ್ವಗತವಾಗುವ ಅಪಾಯದಿಂದ ತಪ್ಪಿಸಿಕೊಂಡು ಜನಮುಖಿಯಾಗುತ್ತದೆ. ವಸ್ತುವಿನ ಗ್ರಹಿಕೆ ಮತ್ತು ನಿರೂಪಣೆಯಲ್ಲಿ ಗಮನಾರ್ಹವಾದ ಬದಲಾವಣೆ ಸಾಧ್ಯವಾಗುತ್ತದೆ."[೪]

ಏನ್ಮಾಡಿದ್ರೋ ನಿಮ್ಗೇನ್ಮಾಡಿದ್ರೊ
ನಮ್ಮಪ್ಪ ಅವ್ವ ಹೆತ್ತವ್ರೆಲ್ಲ ಏನ್ಮಾಡಿದ್ರೋ
ಯಾಕಿಂಗ್ಮಾಡಿದ್ರೋ ನಮಗ್ಯಾಕಿಂಗ್ ಮಾಡಿದ್ರೋ[೫]

ಆಧುನಿಕ ಶಿಕ್ಷಣದ ಅರಿವಿನಲ್ಲಿ ಹೊಸ ಮಾರ್ಗ ಕಂಡುಕೊಂಡ ದಲಿತರು ತಮ್ಮ ಸಾಮಾಜಿಕ ಸ್ಥಿತಿಗತಿಗಳಿಗೆ ಕಾರಣಗಳನ್ನು ತಿಳಿಯಲು ಪ್ರಾರಂಭಿಸಿದರು. ತಿಳಿದು ಪ್ರಶ್ನಿಸಲು ಮುಂದಾದರು. ಈ ಪ್ರಶ್ನೆಯ ಫಲವೇ ಮೇಲಿನ ಕವಿತೆ. ನಿಮ್ಗೇನ್ಮಾಡಿದ್ರೋ, ನಮ್ಗೇನ್ಮಾಡಿದ್ರೋ' ಎನ್ನುವ ಎರಡು ಬಹುವಚನ ಪದಗಳೇ ಕಾರಣ ಪರಿಣಾಮಗಳ ಹುಡುಕಾಟದಲ್ಲಿ ತೊಡಗಿವೆ. ಹತಾಶಾ ಸ್ಥಿತಿಯೇ ಇಲ್ಲಿ ಕಾವ್ಯವಾಗಿ ಹೊರಹೊಮ್ಮಿದೆ.

'ದಲಿತ ಕಾವ್ಯದಲ್ಲಿ ವಾಚ್ಯವಿದೆ ಧ್ವನಿಯಿಲ್ಲ' ಎಂಬುದು ಕೆಲವರ ಅಭಿಪ್ರಾಯ. ಮತ್ತೆ ಕೆಲವರು ದಲಿತ ಕಾವ್ಯ ಕಾವ್ಯವೇ ಅಲ್ಲ ಎಂದರು. ಕಾವ್ಯವನ್ನು ಕಾವ್ಯ ಮೀಮಾಂಸೆಯ ಹಿನ್ನೆಲೆಯಲ್ಲಿ ನೋಡುವ ಪ್ರತಿಯೊಬ್ಬರೂ ಈ ತೀರ್ಮಾನಕ್ಕೆ ಬರುವುದು ಸಹಜ. ಆದರೆ ದಲಿತ ಕಾವ್ಯವನ್ನು ಮತ್ತು "ದಲಿತ ಸಾಹಿತ್ಯವನ್ನು ಸಾಮಾಜಿಕ ಸಂದರ್ಭದಲ್ಲಿ ಅರ್ಥಮಾಡಿಕೊಳ್ಳುವುದು ಹೆಚ್ಚು ಔಚಿತ್ಯಪೂರ್ಣವಾದುದು. ಸಾಂಪ್ರದಾಯಿಕ ವಿಮರ್ಶಾ ಮಾನದಂಡಗಳು ಬದಲಾಗಬೇಕು ಈ ಸಾಲು ಸಪ್ಪೆಯಾಗಿದೆ, ಈ ಪಂಕ್ತಿ ಖಾರವಾಗಿದೆ ಎಂದು ಭೋಜನ ಪರಿಭಾಷೆಯಲ್ಲಿ ದಲಿತ ಸಾಹಿತ್ಯ ವಿಮರ್ಶೆ ನಡೆಯುತ್ತಿರುವುದು

ವಿಷಾಧನೀಯ. ನಮ್ಮ ವಿಮರ್ಶೆಯಲ್ಲಿ ಸಾಮಾಜಿಕ ಪರಿಭಾಷೆ ರೂಪುಗೊಳ್ಳುವವರೆಗೂ ದಲಿತ ಸಾಹಿತ್ಯಕ್ಕೆ ನ್ಯಾಯ ಸಿಕ್ಕುವುದಿಲ್ಲ[೬]

ಶಬ್ದವಿಲ್ಲದಾ ನಮ್ಮಯ ಹಾಡಿಗೆ
ಉಸಿರುವ ಉಸಿರೆ ಸ್ವರಗಳು
ಚಂಡೆ ಮದ್ದಳೆ ವಾದ್ಯವಿಲ್ಲದಾ
ಕಣ್ಣ ರೆಪ್ಪೆಗಳೆ ತಾಳಗಳು
ಹಾಡು ಹಾಡಿನಲಿ ದೀಪ ಹಚ್ಚುವೆವು
ಒಣಗಿದೆದೆಯಲಿ ಕೆಚ್ಚ ತುಂಬುವೆವು
ವಜ್ರ ಕರಗಿಸಿ ನೀರ ಮಾಡುವೆವು
ನೀರನೆ ಹೆರಿಸಿ ಮಳೆ ತರಿಸುವೆವು[೭]

ಹೋರಾಟವಾಗಲಿ, ಸಾಹಿತ್ಯವಾಗಲಿ, ಅದು ತನ್ನ ಹಿಂದಿನ ಪರಂಪರೆಗೆ ಮುಖಾಮುಖಿಯಾಗದ ಹೊರತು ಹೊಸತನ್ನು ಬೀರಲಾರದು. ಹಿಂದಿನ ಪರಂಪರೆ ಯಾವುದರ ಪರ? ಎಂಬುದನ್ನು ಮೊದಲು ಅರಿಯಬೇಕು. ಆನಂತರವೇ ಅದನ್ನು ಮುಂದುವರಿಸಬೇಕೋ, ಕಿತ್ತೊಗೆದು ಬೇರೊಂದು ಸೃಷ್ಟಿಸಬೇಕೋ ಎಂಬ ಸಂಕಲ್ಪಕ್ಕೆ ಬರಲು ಸಾಧ್ಯ. ಇಲ್ಲಿ ದಲಿತ ಕವಿಗಳಿಗೆ ಹಿಂದಿನ ಪರಂಪರೆಯ ಅರಿವಿದೆ. 'ಇತಿಹಾಸವನ್ನು ತಿಳಿಯದವರು ಇತಿಹಾಸವನ್ನು ಸೃಷ್ಟಿಸಲಾರರು' ಎಂಬಂತೆ ದಲಿತ ಕಾವ್ಯ ತನ್ನ ಹಿಂದಿನ ಕಾವ್ಯದ ಧೋರಣೆಯನ್ನು ಈ ಹೋರಾಟದ ಹಾಡು ಬಿಚ್ಚಿಟ್ಟಿದೆ. ವಾಚ್ಯದೊಂದಿಗೆ ಮೈದಾಳಿರುವ ಈ ಕಾವ್ಯದ ಸಾಲುಗಳು ಅಂತರಾಳದಲ್ಲಿ ಮೊನಚಾದ ವ್ಯಂಗ್ಯ ಧ್ವನಿಯಿಂದ ಪರಂಪರೆಗೆ ಪ್ರತಿರೋಧ ಒಡ್ಡಿವೆ. ಇದರೊಳಗಿನ ಧ್ವನಿ ಇದುವರೆಗೂ ನಡೆದು ಬಂದ ಕಾವ್ಯ ಪರಂಪರೆಯನ್ನು ತಿರಸ್ಕರಿಸುವತ್ತ ಸಾಗಿದೆ. ನೋವುಗಳನ್ನು ಹೇಳಲು ಶಬ್ದದ ಹಂಗಿಗೆ ಒಳಪಡಬೇಕಿಲ್ಲ. ಇಂತಹ ಶಬ್ದವಿಲ್ಲದ ಹಾಡುಗಳು ದಲಿತ ಕಾವ್ಯದಲ್ಲಿ ಮನೆಮಾಡಿವೆ. ಇಂತಹ ಶಬ್ದಗಳ ಮೂಲಕ ಮುಂದಿನ ದಾರಿಗಳನ್ನು ದಲಿತ ಕಾವ್ಯ ಹುಡುಕುತ್ತಿದೆ. ವಾಚ್ಯದೊಳಗಿಂದಲೇ ವಿಡಂಬನಾತ್ಮಕವಾಗಿ ಬಂದ ಈ ಹಾಡು ಕಾವ್ಯತತ್ವವನ್ನು ಸಾಮಾಜಿಕ ನೆಲೆಯಿಂದಲೇ ಪ್ರತಿಷ್ಠಾಪಿಸಿದೆ. ಕಾವ್ಯಕ್ಕೆ ಸಮಾಜವೇ ಮುಖ್ಯ ಎಂಬುದನ್ನು ಒತ್ತಿ ಹೇಳಿದೆ.

ಬರಹಗಾರರಿಗೆ ಒಂದು ಸಾಮಾಜಿಕ ಜವಾಬ್ದಾರಿ ಇದೆ ಎಂಬುದನ್ನು ಮೇಲಿನ ಸಾಲುಗಳು ಒತ್ತಿ ಹೇಳುತ್ತಿವೆ. 'ನೊಂದ ಜನರನ್ನೆಂದಿಗೂ ಮಬ್ಬಿನಲಿ ದೂಡೆವು' ಎನ್ನುವ ಸಾಲು ಇದುವರೆಗಿನ ಸಾಹಿತ್ಯದ ಕೆಲಸವನ್ನು ಸರಳವಾಗಿಯೇ ಬಿಚ್ಚಿಟ್ಟಿದೆ. ಆದರೆ ಕಸದ ಸಾಹಿತ್ಯ ಎನ್ನುವುದು ಆತುರದ ನಿರ್ಧಾರದಂತೆ ಕಾಣುತ್ತದೆ. ಏಕೆಂದರೆ ಹಿಂದೆ ಅನೇಕ

ಮಿತಿಗಳ ನಡುವೆ ವಚನಕಾರರು ಮತ್ತು ಕನಕದಾಸನಂತವರು ಸಮಾಜಮುಖಿ ನೆಲೆಯಲ್ಲಿ ಸಾಹಿತ್ಯ ರಚನೆ ಕೈಗೊಂಡಿರುವುದನ್ನು ಗಮನಿಸಬಹುದಾಗಿದೆ.

ಕಾವ್ಯದಲ್ಲಿ ಕುಸುರಿಗೆಲಸವನ್ನು ಬಯಸುವ ಕಣ್ಣುಗಳಿಗೆ ಕಾವ್ಯದೊಳಗಿನ ಸಿಟ್ಟಾಗಲಿ, ಆವೇಶವಾಗಲಿ, ಹತಾಶೆಗಳಾಗಲಿ ತಿಳಿಯುವುದಿಲ್ಲ. ಏಕೆಂದರೆ ಕಾವ್ಯ ಇರುವುದೇ ಆನಂದವನ್ನು ಉಂಟುಮಾಡಲಿಕ್ಕೆ ಎಂಬ ನಿಲುವು ಇವರದು. ಆದರೆ...

ಕೋಟಿ ಕೋಟಿ ಬಾದೆಗಳಲ್ಲಿ
ಲಕ್ಷಾಂತರ ನೋವುಗಳಲ್ಲಿ
ನೀ ಹುಟ್ಟಿ ಬೆಳೆದೆಯಮ್ಮ
ನನ ತಂಗಿ ಅನಸೂಯ
....
ನಿನಗಾದ ಅನ್ಯಾಯ
ನಮ್ಮೆದೆಗೆ ಚೂರಿ ಇರಿತ
ಗಾಯವ ಮರೆತು ಬದುಕಲಾರೆವು
ನನ ತಂಗಿ ಅನಸೂಯ । ಕೋಟಿ[೮]

ಎಂಬ ಹೋರಾಟದ ಹಾಡು ಮಾಲೂರು ತಾಲೂಕಿನ ಹುಣಸೆಕೋಟೆಯ ಬಡಕುಂಬಾರನ ಮಗಳಾದ ಅನಸೂಯಮ್ಮನ ಮಾನಭಂಗದ ಕಥೆಯನ್ನು ಹೇಳುವಾಗ ಯಾವ ಕಾವ್ಯದ ನಡಿಗೆಗೆ ಒತ್ತಾಸೆಯಾಗಿ ನಿಲ್ಲಬೇಕು? ಕಣ್ಣೀರಿನ ಕಥೆಗೆ ಕಾವ್ಯದ ಲೇಪನ ಬೇಕೆ? ಅದು ಜನರ ಮನದಾಳಕ್ಕೆ ಇಳಿದರೆ ಸಾಲದೆ? ಇಲ್ಲಿ ಕೋಟಿ ಕೋಟಿ ಬಾಧೆಗಳಿವೆ, ಲಕ್ಷ ಲಕ್ಷ ನೋವುಗಳಿವೆ. ಇವುಗಳೊಳಗೇ ಜನಿಸಿದ ಹೆಣ್ಣುಮಗಳೊಬ್ಬಳ ಹತಾಶಾ ಸ್ಥಿತಿಯಿದೆ. ಈ ಹೆಣ್ಣುಮಗಳ ನೋವನ್ನು ತನ್ನ ನೋವೆಂದುಕೊಂಡು ಸಮುದಾಯದ ಕವಿಗಳು ಕಾರಣಗಳನ್ನು ಹುಡುಕಿ ಅದರ ವಿರುದ್ಧ ನಿಲ್ಲುವ ಎದೆಗಾರಿಕೆ ತೋರುತ್ತಾರೆ. ಇದು ನೋವುಂಡ ಸಮುದಾಯಗಳಿಂದ ಮಾತ್ರ ಸಾಧ್ಯ.

ಇಲ್ಲಿ ಅನ್ಯಾಯಕ್ಕೆ ಒಳಗಾದ ನೋವಿದೆ, ಹತಾಶ ಬದುಕಿನ ತೀವ್ರ ಸಂವೇದನೆಯಿದೆ. ಈ ನೋವನ್ನು ಹೇಳುವಾಗ, ಹಾಡುವಾಗ ಯಾವ ಕಾವ್ಯತತ್ವ ಬೇಕು? ಬದಲಾಗಿ ಇಲ್ಲಿಯ ಹತಾಶಾ ನೋವೇ ಕಾವ್ಯವಾಗಿ, ಹಾಡಾಗಿ ಪರಿಣಮಿಸಿದೆ. ನೋವುಗಳನ್ನು ಹೇಳುವವನ ಹತ್ತಿರ ರಸಾತ್ಮಕವಾಗಿ, ಕಿವಿಗಿಂಪಾಗುವಂತೆ ಹೇಳು ಎನ್ನುವುದು ಎಷ್ಟು ಹಾಸ್ಯಾಸ್ಪದವೋ ದಲಿತ ಕಾವ್ಯಗಳಲ್ಲಿ ಕಲಾತ್ಮಕ ಭಿನ್ನಚಹರೆ ಹುಡುಕುವುದು ಅಷ್ಟೇ ಹಾಸ್ಯಾಸ್ಪದ. ಏಕೆಂದರೆ "ದಲಿತರು ತಮ್ಮ ಅಭಿವ್ಯಕ್ತಿಗಳಲ್ಲಿ ತಮ್ಮ ಸಮುದಾಯದ ಮುಗ್ಧತೆ, ನೋವು, ಸಂಕಟ,

ಅಪಮಾನ, ಶೋಷಣೆಗಳನ್ನು ಹೊರಹಾಕಿದ್ದರು"[೯] ಇವುಗಳನ್ನು ನೋಡುವಾಗ ಕಾವ್ಯದ ಧೋರಣೆ ಬಯಸುವುದು ಬರದ ನಾಡಿನಲ್ಲಿ ನಿಂತು ಸಿಹಿ ನೀರಿನ ವರ್ಣನೆಗೋಸ್ಕರ ಕಾಣುವ ಕಲ್ಪನೆ ಕನಸುಗಳಂತೆಯೇ ಸರಿ. ದಲಿತರ ನೋವು ಉಳ್ಳವರಿಗೆ ಆನಂದದ ಚಿಲುಮೆ. ಕಷ್ಟ ಮತ್ತು ಸಂತೋಷಗಳು ಎರಡು ನೆಲೆಯಲ್ಲಿ ನಿಂತಿರುವ ಬಗೆ ಇದು. ಇದನ್ನು ಒಂದು ದಲಿತ ಕಾವ್ಯ ಅಭಿವ್ಯಕ್ತಿಸುವ ಬಗೆ ಹೀಗಿದೆ;

ದುಡಿವ ಕೈ ಅವರ ಮೈ
ಬೆಟ್ಟ ಬಾನು ಸಾಗರ
ಹೊಟ್ಟೆಗಿಲ್ಲ ಬಟ್ಟೆಗಿಲ್ಲ
ಮಾತು ಮೌನ ಸುಂದರ
ನೋವಿನಲ್ಲೂ ಸಾವಿನಲ್ಲೂ
ಇವರ ಮೊಗವು ಚಂದಿರ
ಕಾಲ ದೇಶ ನಾಡು ಭಾಷೆ
ಇಲ್ಲಿ ಇಲ್ಲ ಕಂದರ
ಅವರ ಮನೆಗೆ ಇವರ ಮನವೆ
ದಿನವು ಹಸಿರು ಹಂದರ
ಕನಸು ತಿಳಿಯು ಮನಸು ಕೊಳವು
ಉಂಟು ಇಲ್ಲಿ ಸಡಗರ[೧೦]

ಇಲ್ಲಿ ದುಡಿಯುವ ಜನರ ವಿಸ್ತಾರವಾದ ದುಡಿಮೆಯ ಗುರುತುಗಳಿವೆ. ತಮಗೆಷ್ಟೇ ನೋವಿದ್ದರೂ ಉಳ್ಳವರ ಪಾಲಿಗೆ ಸದಾ ಬೆಳದಿಂಗಳಿವರು. ಇಂತಹ ಬದುಕಿನ ಅಗಾಧತೆಯನ್ನು ಕಾವ್ಯ ಸಹಜ ನೆಲೆಯಲ್ಲೇ ನಿರೂಪಿಸಿದೆ. ಆದರೆ ಕಾವ್ಯದಲ್ಲಿ ಬಂದಿರುವ ಬೆಟ್ಟ, ಬಾನು, ಸಾಗರಗಳು ವಿಶಾಲ ಮತ್ತು ದೃಢತೆಯ ನೆಲೆಯುಳ್ಳವು. ಇವುಗಳ ಹಾಗೆಯೇ ದಲಿತರ ಬದುಕು ದುಡಿಮೆಯಲ್ಲಿ ನಡೆದಿರುವುದನ್ನು ಕಾಣಬಹುದಾಗಿದೆ. ದಲಿತ ಕಾವ್ಯದ ಶಕ್ತಿ ಹೆಚ್ಚು ಇಂತಹ ವಾಚ್ಯತನದಲ್ಲಿಯೇ ಅಡಗಿದೆ. ಆದರೆ ಇಲ್ಲಿ ವಾಚ್ಯವಷ್ಟೇ ಇಲ್ಲ. ಬದಲಾಗಿ ವಾಚ್ಯದೊಳಗಿನ ಧ್ವನಿ ದಲಿತರ ಬದುಕಿನ ವಿವಿಧ ಮಜಲುಗಳನ್ನು ಕಣ್ಣೆದುರು ನಿಲ್ಲಿಸುತ್ತದೆ.

"ಹುಟ್ಟಿದ್ದು ಕೆಳವರ್ಗದಲ್ಲಿ. ಬೆನ್ನಟ್ಟಿ ಬಂದದ್ದು ಬಡತನ. ಸುತ್ತಲಿದ್ದುದು ಮಡಿವಂತಿಕೆಯಿಂದ ತುಂಬಿ ಜಿಡ್ಡುಗಟ್ಟಿ ನಾರುವ ವ್ಯವಸ್ಥೆ. ಇದು ಶೋಷಣೆ ಮಾಡಿ, ನನ್ನ, ನನ್ನಂತಹವರ ಮೌಲ್ಯಗಳನ್ನು ಹಿಂಡಿ ಹತ್ತಿಕ್ಕಲು ಪ್ರಯತ್ನಿಸಿದಾಗ; ನನಗೆ, ನನ್ನ ಜನರಿಗೆ ಆಗುತ್ತ ಬಂದ

ಆಘಾತ, ಅನುಭವಿಸುತ್ತ ಬಂದ ಎದೆಯಾಳದ ನೋವು ಅಪಾರ. ಹಾಗೆ ಒಟ್ಟೈಸಿ ನಿಂತ ನೋವೆ ಈ ಕಾವ್ಯ. ಆ ಎದೆಗುದಿಯನ್ನು ನಾನು ತೋಡಿಕೊಂಡಿರುವುದೇ ಈ ಮೂಲಕ."[೧೧] ಎಂದು ಕವಿಯೊಬ್ಬ ತನ್ನ ಕಾವ್ಯದ ಮೊದಲು ಹೇಳಿಕೊಂಡಿರುವುದು ಅರ್ಥಪೂರ್ಣವಾಗಿದೆ. ಏಕೆಂದರೆ ದಲಿತ ಕವಿಯ ನೋವು, ಅಳಲುಗಳು ವೈಚಾರಿಕ ನೆಲೆಗಳಲ್ಲಿ ಹೊಸದೊಂದು ಕಾವ್ಯತತ್ವವನ್ನು ಸೃಷ್ಟಿಸಿವೆ. ಆದರೆ ಕವಿಗೆ ಕ್ರಾಂತಿ ಮಾಡುವ ಕನಸುಗಣ್ಣಿಲ್ಲ. ಕಾವ್ಯಕ್ಕೆ ಆ ಶಕ್ತಿ ತುಂಬಿದ್ದಾನೆ. ಏಕೆಂದರೆ ಇಲ್ಲಿ ಅನುಭವದ ನರಕಯಾತನೆ ಇದೆ.

ದಲಿತ ಕಾವ್ಯವನ್ನು ಅಭ್ಯಸಿಸಿದ ಕೆಲವರು ದಲಿತ ಕಾವ್ಯ ಹೇಗೆ ಬಂದಿದೆ ಎಂಬುದನ್ನು ನೋಡಿದ್ದಾರೆ. 'ಹೇಗೆ' ಎಂಬುದು ನಮ್ಮ ಕನ್ನಡ ಕಾವ್ಯ ಪರಂಪರೆ ಕಟ್ಟಿಕೊಂಡ ವಿಧಾನವೂ ಕೂಡ ಹೌದು. ಏಕೆಂದರೆ ರಸ, ಧ್ವನಿ, ಔಚಿತ್ಯ, ವಕ್ರೋಕ್ತಿ, ಅಲಂಕಾರ ಮುಂತಾದವುಗಳ ನೆಲೆಯಲ್ಲೇ ಪರಿಪಾಕಗೊಂಡ ತತ್ವವಿದು. "ಕವಿಗೆ ಮೈದುಂಬಿದ ಉಸಿರೆ ಕಾವ್ಯ. ಇದು ಕಾವಾಗಿ, ಬೆಳಕಾಗಿ, ಮಿಂಚಾಗಿ ಮೈದಾಳುತ್ತದೆ. ಕಾವ್ಯದ ಮೈಯು ಬಾನು. ಅದರ ಸ್ಪರ್ಶ ನಕ್ಷತ್ರದಂತೆ ನವಿರು"[೧೨] ಇದೇ ರೀತಿಯ ಕಾವ್ಯ ಹುಟ್ಟುವಿಕೆಯನ್ನು ಕನ್ನಡ ಕಾವ್ಯ ಪರಂಪರೆ ಕಾವ್ಯ ನಂಬಿತ್ತು. ಇದರಿಂದಾಗಿ ಹೇಗೆ ಬಂದಿದೆ ಎಂಬುದನ್ನೇ ಸಾಂಸ್ಕೃತಿಕ ವಿಮರ್ಶೆಯ ಮುಂಚೂಣಿಗೆ ತಂದಿತು.

ಇಕ್ರಲಾ ವದೀರ್ಲಾ
ಈ ನನ್ ಮಕ್ಕಳ ಚರ್ಮ ಎಬ್ರಲಾ
ದೇವ್ರು ಒಬ್ನೇ ಅಂತಾರೆ
ಓಣಿಗೊಂದೊಂದ್ ತರಾ ಗುಡಿ ಕಟ್ಸವ್ರೆ
ಎಲ್ಲಾರೂ ದೇವ್ರ ಮಕ್ಳು ಅಂತಾರೆ
ಹೊಲೇರ್ನ ಕಂಡ್ರೆ ಹಾವ್ ಕಂಡಂಗಾಡ್ತಾರೆ[೧೩]

ಈ ಕವಿತೆಯಲ್ಲಿ ಆಕ್ರೋಶವಿದೆ; ಹತಾಶೆಯಿದೆ. ಇಲ್ಲಿ ಕಾವ್ಯ ಹೇಗೆ ಬಂದಿದೆ? ಎಂಬುದು ಮುಖ್ಯವಾದರೆ ಇದರೊಳಗಿನ ಆಕ್ರೋಶ, ಆವೇಶದ ಹಿಂದಿನ ಉದ್ದೇಶಗಳು ಕಣ್ಮರೆಯಾಗುತ್ತವೆ. ಬದಲಾಗಿ ಇದು ಏಕೆ ಬಂದಿದೆ? ಮತ್ತು ಏನು ಹೇಳುತ್ತಿದೆ? ಎಂಬುದೇ ಮುಖ್ಯವಾಗಬೇಕು. ಏಕೆಂದರೆ ಇಲ್ಲಿ ಸಿಟ್ಟಿದೆ, ಧಗಧಗಿಸುವ ಆಕ್ರೋಶವಿದೆ. ಅದೂ ತನ್ನನ್ನು ತುಳಿಯುತ್ತಿರುವ ಸಂಸ್ಕೃತಿಯನ್ನು ಧಿಕ್ಕರಿಸುವ ದೃಢತೆ ಇದೆ. ಇದರ ಹಿಂದೆ ನಿರಂತರ ದರ್ಪ ದೌರ್ಜನ್ಯಕ್ಕೆ ಒಳಗಾಗುತ್ತಿರುವ ಮನುಷ್ಯನ ಬುಗಿಲೆದ್ದ ಸಿಟ್ಟಿನ ಜ್ವಾಲಾಮುಖಿಗಳಿವೆ. ಇದನ್ನು ಅರ್ಥಮಾಡಿಕೊಳ್ಳಬೇಕಾದರೆ ಇದು ಏಕೆ ಬಂದಿದೆ? ಎಂಬುದು ಸಾಂಸ್ಕೃತಿಕ ವಿಮರ್ಶೆಯ ಅಡಿಪಾಯವಾಗಬೇಕು. ಇದನ್ನೇ ದಲಿತ ಕಾವ್ಯ ಮತ್ತು ಕವಿ ಕಟ್ಟಿದ ಕಾವ್ಯತತ್ವ, ಸಮಾಜಮುಖಿ ಕವಿಯೊಬ್ಬ ಕಟ್ಟುವ ಪರಿಣಾಮಕಾರಿ ತತ್ವವಿದು.

ಜಾತಿ, ವರ್ಣ, ವರ್ಗಗಳ ತಾರತಮ್ಯಗಳನ್ನು ಏಕಕಾಲದಲ್ಲಿ ನಿರೂಪಿಸುತ್ತಿರುವ ಮೇಲಿನ ಕವಿತೆ ನೊಂದವರ ಅಂತಿಮ ಮನಸ್ಥಿತಿಯನ್ನು ಹೇಳುತ್ತಿದೆ. ಬೈಗುಳದ ಪರಿಭಾಷೆಯಲ್ಲಿ ಅಭಿವ್ಯಕ್ತಗೊಂಡಿರುವ ಇಲ್ಲಿನ ಸಾಲುಗಳು ಬಂಡವಾಳಶಾಹಿ ಮತ್ತು ಭೂರ್ಜ್ವಾ ಸಂಸ್ಕೃತಿ ಆರಾಧಕರಿಗೆ ಸವಾಲೆನಿಸಿತು. ಆದ್ದರಿಂದ ತಕ್ಷಣವೇ ಅದು ಮುಂದಾಗಬಹುದಾದ ಪರಿಣಾಮಗಳನ್ನು ಊಹಿಸಿತು. ಇದರ ಪರಿಣಾಮ ಮೇಲಿನ ಕಾವ್ಯವನ್ನು ಓದುಗರಲ್ಲಿ ಕೇವಲ ಕಾವ್ಯದೊಳಗಿನ ಪದಗಳನ್ನಷ್ಟೇ ಕುರಿತು ಚರ್ಚಿಸುವಂತೆ ಮಾಡುವ ಹುನ್ನಾರ ನಡೆಸಿತು. ಇದರೊಂದಿಗೆ 'ಇದು ಕಾವ್ಯವೇ ಅಲ್ಲ' ಎನ್ನುವ ತೀರ್ಮಾನವನ್ನು ನೀಡಿತು. ಆದರೆ ಕಾವ್ಯ ಮಾತ್ರ ನಾಡಿನಾದ್ಯಂತ ಹಲವು ಕವಿಗಳನ್ನು ಹುಟ್ಟುಹಾಕಿತು.

ಕಾವ್ಯದ ಸಾಂಪ್ರದಾಯಿಕ ನೆಲೆಗಳಲ್ಲೇ ಹೊರಟ ವಿಮರ್ಶಕರಿಗೆ ಕಾವ್ಯ ಅಲ್ಲವೆಂದು ಕಂಡಿದ್ದರಲ್ಲಿ ಸೋಜಿಗವೇನಿಲ್ಲ. ಸತತ ದೌರ್ಜನ್ಯ, ದಬ್ಬಾಳಿಕೆ, ಶೋಷಣೆಗೆ ಒಳಗಾದ ಸಮುದಾಯಗಳು ಇಲ್ಲಿವೆ. ಇಂತಹ ಸಮುದಾಯದಿಂದ ಹೊರಹೊಮ್ಮುವ ಆವೇಶ, ಆಕ್ರೋಶ, ಕೋಪ, ಕಿಚ್ಚಿನ ನುಡಿಗಳಿಗೆ ಯಾವುದೇ ಕಾವ್ಯ ಮೀಮಾಂಸೆಯ ಹಂಗು ಬೇಕಿಲ್ಲ. ನೋವು ನೋವಾಗಿಯೇ ಪ್ರತಿಬಿಂಬಿತವಾಗಬೇಕು. ಆಗ ಮಾತ್ರ ಅದು ಅರ್ಥದ ಹಲವು ಮುಖಗಳನ್ನು ಹುಟ್ಟುಹಾಕಲು ಸಾಧ್ಯ. ಇಂತಹ ಆಕ್ರೋಶದಲ್ಲಿ ವಾಚ್ಯವೇ ಪ್ರಧಾನವಾಗಿ ತುಂಬಿರುತ್ತದೆ. ಈ ವಾಚ್ಯ ದಲಿತರೆದೆಯೊಳಗಿನ ಧಗಧಗಿಸುವ ಸಿಟ್ಟನ್ನು ಬಿಚ್ಚಿಟ್ಟಿದೆ. ಇಂತಹ ಹತಾಶಾ ಆಕ್ರೋಶದ ನಿರೂಪಣೆಗಳೇ ದಲಿತ ಕಾವ್ಯದ ಸ್ವರೂಪ ಮತ್ತು ವಿನ್ಯಾಸವನ್ನು ಕಟ್ಟಿಕೊಟ್ಟಿವೆ.

'ಇಕ್ರಲಾ ವದೀರ್ಲಾ!' ಎಂಬ ಘೋಷಣೆ ದಲಿತರ ಸಾಮಾಜಿಕ ಹಿತಾಸಕ್ತಿಯಿಂದ ಮೂಡಿಬಂದ ಕಾವ್ಯ. ಇದನ್ನು ವಿಮರ್ಶಿಸುವಾಗ ಈ ಸಮಾಜದ ಅರಿವು ಮತ್ತು ಪ್ರಜ್ಞೆ ಇದ್ದರೆ ಇವುಗಳೊಳಗಿನ ತಳಮಳಗಳನ್ನು ಗ್ರಹಿಸಲು ಸಾಧ್ಯ. ಆದರೆ ದಲಿತೇತರ ಸಾಮಾಜಿಕ ಹಿತಾಸಕ್ತಿಯಿಂದ ಹುಟ್ಟುವ ವಿಮರ್ಶೆ ಮತ್ತು ಕಾವ್ಯವನ್ನು ಕಾವ್ಯವಾಗಿಯೇ ಓದಿ ಪ್ರತಿಕ್ರಿಯಿಸುವ ವಿಧಾನಗಳು ಈ ಕಾವ್ಯವನ್ನು ಕಾವ್ಯವಲ್ಲ ಎಂಬ ಹೇಳಿಕೆಯನ್ನು ನೀಡಿವೆ. ಇಲ್ಲಿ ಕವನ ಹೌದು, ಅಲ್ಲ ಎನ್ನುವ ಸಾಂಸ್ಕೃತಿಕ ವಿಮರ್ಶೆಯ ಮುಂಚೂಣಿಗಿಂತ ಅದರೊಳಗಿನ ವೇದನೆಗಳ ನಿವೇದನೆಯೇ ಮುಖ್ಯ. ಏಕೆಂದರೆ ದುಡಿವ ಸಮುದಾಯದಿಂದ ಎದ್ದು ಬಂದ ಕಾವ್ಯ ಇದು. ಇದರ ವಿಶ್ಲೇಷಣೆ ಅಲ್ಲಿಂದಲೇ ಆಗಬೇಕು.

ಆದರೆ ಇಂತಹ ಕವಿತೆಯ ಅಭಿವ್ಯಕ್ತಿ, ಧೋರಣೆಯಲ್ಲಿ ಮೂಡಿರುವ ದಲಿತರ ವಾಸ್ತವ ನೆಲೆಗಳೇನು ಎಂಬುದು ಹಲವು ವಿಮರ್ಶಕರ ಚರ್ಚಿತ ಆಯ್ಕೆಯೇ ಆಗಲಿಲ್ಲ. ಅವರು ಕಾವ್ಯದ ರೂಪದ ಕಡೆಗೆ ತಮ್ಮ ಗಮನ ಕೇಂದ್ರೀಕರಿಸಿದರು. ಇದಕ್ಕೆ ಉದಾಹರಣೆಯೆಂಬಂತೆ ದೊ.ರುಕ್ಕೋಜಿಯವರು 'ಸಾವಿರಾರು ನದಿಗಳು : ದಶಾಂಶದಿಂದ ಶತಾಂಶ ಸಿದ್ದಿಯತ್ತ'

ಎನ್ನುವ ಲೇಖನದಲ್ಲಿ "ಒಡಲುರಿಯ ತಾಪ ತಾಳದೆ ಒಣನೆಲದ ಬಿರುಕುಗಳಿಂದ ಹೊರಟ ಈ ಹೊಸ ದನಿಗಳು ಹಳೆಯ ಕಾವ್ಯದ ಮೂಲಕ್ಕೆ ಕೊಡಲಿ ಹಾಕಿದ್ದಲ್ಲದೇ, ಕಾವ್ಯದ ಘನತೆಯನ್ನು ಎತ್ತರಿಸಿ ಸಾಮಾನ್ಯರ ಹೊಸ್ತಿಲವರೆಗೂ ವಿಸ್ತರಿಸಿದವು"[೧೪] ಎನ್ನುವುದರ ಮೂಲಕ ಕಾವ್ಯ ಭಾಷೆಗಿರಬಹುದಾದ ಸಾಮಾಜಿಕ ಪರಿಭಾಷೆಯನ್ನು ಸೀಮಿತಗೊಳಿಸಿದರು. ಇದನ್ನು ಇಲ್ಲಿ ಪ್ರಸ್ತಾಪಿಸಿದ ಉದ್ದೇಶ ದಲಿತ ಕಾವ್ಯವನ್ನು ಕುರಿತು ವಿಮರ್ಶಿಸಿದ ಬಹುಪಾಲು ವಿಮರ್ಶಕರು ಈ ಏಕತಾನತೆಯ ನೆಲೆಗೇ ಅಂಟಿಕೊಂಡಿದ್ದಾರೆ.

ಶ್ಯಾರಿ ಗಂಜಿಗಾಗಿ
ಸೇರುಬೆವರು ಸುರಿಸುತಾ
ಊರೂರು ತಿರುಗುವರ್‍ಯಾರಯ್ಯ
ಈ ನಾಡ ಕಟ್ಟಿದೋರು ನಾವೆಲ್ಲಿಗೋಗಬೇಕು
ಕೂಲಿಯವರು ನಾವು ಕೇಳಯ್ಯ[೧೫]

ಕೇಳಿಸುವ ಮತ್ತು ಹಾಡಿಸುವ ಜಾಯಮಾನವೇ ದಲಿತರದ್ದು. ದುಡಿಮೆಗೆ ಪ್ರತಿಫಲ ಸಿಗದ ಅಸಹಾಯಕತೆಯ ನಿರೂಪಣೆಯೇ ಕಾವ್ಯವಾಗಿದೆ. "ತನಗೆ ತಾನೇ ಒಳಮುಖಿಯಾಗಿದ್ದ ಕಾವ್ಯ ನಿರೂಪಣೆಯ ಜನಮುಖಿಯಾಯಿತು."[೧೬] "ಸಾರ್ವಜನಿಕ ಕಾವ್ಯ ತನ್ನ ಅತ್ಯುತ್ತಮ ಕ್ಷಣಗಳಲ್ಲಿ ಒಂದು ಆದಿಮ ಸಮಷ್ಟಿಯನ್ನು ಸೃಷ್ಟಿಸುತ್ತದೆ. ಒಂದು ರೀತಿಯ ಭಾವುಕ ಏಕತೆ ಕವಿ ಮತ್ತು ಸಮಷ್ಟಿಯನ್ನು ಜೋಡಿಸುತ್ತದೆ."[೧೭] ಈ ಸಮಷ್ಟಿಯ ಜೊತೆಗೆ ಕಾವ್ಯ ಬೆರೆತಾಗಲೇ ಕ್ರಾಂತಿ ಆಗಲು ಸಾಧ್ಯ. ಇದು ಬಹುಪಾಲು ದಲಿತ ಕವಿಗಳ ಮೂಲ ಧ್ಯೇಯ. ಶೋಷಿತ ಸಮುದಾಯದ ಸಾಮಾಜಿಕ ಅಗತ್ಯಕ್ಕಾಗಿ ಹುಟ್ಟಿಕೊಂಡ ಈ ಹಾಡುಗಳು ದುಡಿವ ಸಮುದಾಯದ ಒಡಲಾಳದ ವೇದನೆಗಳನ್ನು ಹೊರಹಾಕಿವೆ. ಈ ಕವಿತೆಯ ಹಿಂದೆ ದುಡಿವ ಸಮುದಾಯಕ್ಕೆ ನ್ಯಾಯ ಸಿಗಬೇಕೆಂಬ ಆಶಯವಿದೆ. ಈ ಆಶಯವೇ ಇಲ್ಲಿ ಕಾವ್ಯವಾಗಿ ಮಾರ್ಪಾಡುಗೊಂಡಿದೆ.

ಜನಪದರ ಹಾಡುಗಾರಿಕೆಯ ಲಯವನ್ನು ಬಳಸಿ ನಿರೂಪಿತಗೊಂಡಿದೆ. ಮೇಲಿನ ಕವಿತೆ ಈ ದೇಶ ದುಡಿಯದೇ ತಿನ್ನುವವರ ಸ್ವತ್ತಾಗಿದೆ ಎಂಬುದನ್ನು ಹೇಳುತ್ತಿದೆ. ದುಡಿಯುವ ಸಮುದಾಯ ಒಕ್ಕೊರಲಿನಿಂದ ಹಾಡಿದಾಗ ಅದು ಹೊರಹಾಕಬಹುದಾದ ಶೋಷಣೆಯ ಅಭಿವ್ಯಕ್ತಿಯೇ ಮೇಲಿನ ಕಾವ್ಯ.

ದಲಿತರು ಬರುವರು ದಾರಿಬಿಡಿ
ದಲಿತರ ಕೈಗೆ ರಾಜ್ಯಕೊಡಿ[೧೮]

ಇಲ್ಲಿ ಘೋಷಣೆಯಿದೆ, ಘೋಷಣೆಯೇ ಕಾವ್ಯವಾಗಿ ಮೈದಾಳಿದೆ. ಈ ಘೋಷಣೆ ಉದ್ಭವವಾಗಲು ಒಂದು ಚಾರಿತ್ರಿಕ ತುರ್ತು ಇದೆ. ಈ ತುರ್ತಿನ ಹಿಂದಿನ ಉದ್ದೇಶ ಕಾವ್ಯದ ಇರುವಿಕೆಯನ್ನು ಪ್ರತಿಪಾದಿಸಿದೆ, ಇಲ್ಲಿ ದಲಿತರ ಬಗೆಗಿನ ಹಿತಾಸಕ್ತಿಯಿದೆ. ಈ ಹಿತಾಸಕ್ತಿಯೇ ಕಾವ್ಯವನ್ನು ವಾಚ್ಯವಾಗಿಸಿದೆ. ವಾಚ್ಯ ಕಾವ್ಯದ ಸ್ವರೂಪವನ್ನು, ರೂಪವನ್ನು ನಿರ್ಧರಿಸಿದೆ. ಇದರ ವಿಶ್ಲೇಷಣೆ ಚಾರಿತ್ರಿಕ ಮತ್ತು ಸಾಮಾಜಿಕ ಅಗತ್ಯಗಳ ನಡುವೆ ಉಂಟಾಗಬೇಕೇ ಹೊರತು ಕಾವ್ಯವನ್ನು ಆಸ್ವಾದನೆ ಮತ್ತು ಆರಾಧನೆಯ ನೆಲೆಯಲ್ಲಿ ನಂಬಿದ ಮನೋಭಾವದಿಂದಲ್ಲ.

ದಲಿತ ಕಾವ್ಯದಲ್ಲಿ ವಾಚ್ಯವೇ ಪ್ರಧಾನವಾಗಿದ್ದರೂ ಅದು ಅಂತರಾಳದಲ್ಲಿ ಒಂದು ಹೊಸ ಬಗೆಯ ಹಾಡುಗಾರಿಕೆಯನ್ನು ಹುಟ್ಟುಹಾಕುತ್ತದೆ. ಈ ಹಾಡುಗಾರಿಕೆಗಾಗಿ ಅದು ಜಾನಪದದಿಂದ ಲಯದ ವಿನ್ಯಾಸಗಳನ್ನೂ, ಗೇಯತೆಯನ್ನೂ ಪಡೆದುಕೊಳ್ಳುತ್ತದೆ. ಮೇಲೆ ಉಲ್ಲೇಖಿಸಿರುವ ಕವನದಲ್ಲಿ 'ದ' ಕಾರ ಮತ್ತು 'ರ' ಕಾರಗಳು ಮತ್ತೆ ಮತ್ತೆ ಪುನರಾವರ್ತನೆಗೊಂಡು ಕಾವ್ಯಕ್ಕೆ ಒಂದು ಗೇಯತೆಯನ್ನು ತಂದುಕೊಟ್ಟಿವೆ. ಈ ಗೇಯತೆ ಕವನವನ್ನು ಹಾಡುಗಾರಿಕೆಗೆ ಒಳಪಡಿಸುತ್ತಿದೆ. ಈ ಹಾಡುಗಾರಿಕೆ ಜನತೆಯ ಮನಗಳನ್ನು ತಲುಪುತ್ತದೆ. ದಲಿತ ಕಾವ್ಯದ ನಿಜವಾದ ಉದ್ದೇಶ ಸಾರ್ಥಕವಾಗುವುದು ಈ ನೆಲೆಗಟ್ಟಿನಲ್ಲಿಯೇ. ಬೇರೊಂದು ನೆಲೆಯಲ್ಲಿ ಹೇಳುವುದಾದರೆ ದಲಿತ ಕಾವ್ಯಕ್ಕೆ ಅಂತಿಮ ಯಶಸ್ಸು ಸಿಗುವುದು ಜನರ ಬಾಯಲ್ಲಿ ಅನುರಣಿಸಿದಾಗ ಮಾತ್ರ. ಇದನ್ನು ಹೋರಾಟದ ಹಾಡುಗಳಿಗೆ ವಿಸ್ತರಿಸುವುದಾದರೆ, ಹೋರಾಟದ ಹಾಡುಗಳಿಗೆ ಹಾಡುವಿಕೆಯೇ ಜೀವಾಳ. ಹಾಡುಗಾರಿಕೆಗೆ ಬೇಕಾದ ಎಲ್ಲ ಪರಿಕರಗಳನ್ನು ಅದು ಪರಂಪರೆಯಿಂದ ಮತ್ತು ವರ್ತಮಾನದಿಂದ ಪಡೆದುಕೊಳ್ಳುತ್ತಲೇ ಸಾಗುತ್ತದೆ.

ಕಾವ್ಯ ವಾಚ್ಯ ಆಯಿತು ಎನ್ನುವುದು ದಲಿತೇತರ ಸಾಮಾಜಿಕ ಹಿತಾಸಕ್ತಿಯಿಂದ ಬಂದಿದೆ. ಜೊತೆಗೆ ಇದು ಕಾವ್ಯದ ಪರಂಪರಾಭ್ಯಾಸಿಗಳಿಂದ ಹೊರಟ ಮಾತು. ಆದರೆ ಕಾವ್ಯ ಯಾರೋ ನಿರ್ಮಿಸಿದ ಚೌಕಟ್ಟುಗಳಿಗೆ ಬಂಧಿತವಾಗಿ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹರಣ ಮಾಡಿಕೊಂಡು ಹುಟ್ಟಿದರೆ ಅದಕ್ಕೆ ಜಗತ್ತಿನಲ್ಲಿ ಅಸ್ತಿತ್ವವಿಲ್ಲ. ಅಸ್ತಿತ್ವದ ಪ್ರಶ್ನೆ ಅದರ ಪ್ರಾಮಾಣಿಕ ನಿವೇದನೆಗಳ ಮೇಲೆಯೇ ನಿಂತಿರುತ್ತದೆ. ಅಭಿವ್ಯಕ್ತಿಯನ್ನು ಯಾರದೋ ಮರ್ಜಿಗಾಗಿ ಬಳಸಿದರೆ ಅಲ್ಲಿ ಸಿಟ್ಟು, ಆವೇಶ, ಹತಾಶೆ, ಆರ್ದ್ರತೆ, ಸಹಜ ಪ್ರೀತಿ, ಪ್ರೇಮ ಅನುರಾಗಗಳು ಬರಲು ಸಾಧ್ಯವಿಲ್ಲ. ಆದ್ದರಿಂದ ದಲಿತ ಕಾವ್ಯ ತನ್ನ ಅಭಿವ್ಯಕ್ತಿಯಲ್ಲಿ ಮಾನವೀಯತೆಯನ್ನು ತುಂಬಿ ತನಗೆ ವಿರುದ್ಧವಾದುದನ್ನು ಪ್ರತಿಭಟಿಸುತ್ತಾ ಬಂದಿದೆ. ಆದ್ದರಿಂದಲೇ ಇಲ್ಲಿ ನೋವಿನ ಜೊತೆಜೊತೆಯಲ್ಲೇ ಮಾನವೀಯತೆಯ ಆಶಯಗಳು ರೂಪುಗೊಂಡಿವೆ.

"ಅಸ್ಪೃಶ್ಯತೆಯ ನೋವಿನ ವಿವಿಧ ಮಜಲುಗಳನ್ನು ಬಿಚ್ಚಿ ತೋರಿಸುತ್ತ ಎದುರಾಳಿಯ ಮನಸ್ಸನ್ನು ಕಲಕುವ ಆತ್ಮ ವಿಮರ್ಶೆಗೆ ಹಚ್ಚುವ ವಸ್ತುವಿನ ಆಯ್ಕೆ ಮತ್ತು ಬರವಣಿಗೆಯ ಶೈಲಿ ಇಲ್ಲಿ ಮನೆಮಾಡಿಕೊಂಡಿದೆ".[೧೯] ಕನ್ನಡ ಕಾವ್ಯ ಪರಂಪರೆ ಕೇವಲ ಅಕ್ಷರ ಕಲಿತ ವರ್ಗಕ್ಕಷ್ಟೇ ತನ್ನ ಅಭಿವ್ಯಕ್ತಿಯನ್ನು ಹಿಡಿದಿರಿಸಿತ್ತು. ಆದರೆ ದಲಿತ ಕವಿಗಳಿಗೆ ತಮ್ಮ ಕಾವ್ಯಗಳನ್ನು ಕೇವಲ ಅಕ್ಷರಸ್ಥರನ್ನು ತಲುಪುವ ಬಗೆಗಷ್ಟೇ ಆಸಕ್ತಿಯಿರಲಿಲ್ಲ. ಅವರು ಆದಷ್ಟು ಅನಕ್ಷರಸ್ಥರ ಬಳಿಗೆ ತಲುಪಬೇಕೆಂಬ ನಿಲುವು ಅವರದಾಗಿತ್ತು. ಅದಕ್ಕೆ ಅವರು ತಮ್ಮ ಕಾವ್ಯ ಕೇಳಲು ಕರೆ ಕೊಡುತ್ತಾರೆ. ಇದರ ಅಭಿವ್ಯಕ್ತಿ ನಿರೂಪಿತಗೊಳ್ಳುವ ರೀತಿ ಹೀಗಿದೆ;

ಗುಡ್ಡಕ್ಕೆಲ್ಲ ಸೊಡ್ಡು ಹೊಡೆದು ! ಕಲ್ಲಿನೊಡನೆ ಕುಸ್ತಿ ಹಿಡಿದು
ಖಣಲ್ ಖಣಲ್ ಹಾರಿ ನಾದ ! ದಡಲ್, ದಡಲ್ ಸುತಿಗಿ ಪೆಟ್ಟು
ತಿಂದ ಮೇಲೆ ನಗುವರು ! ಗಟ್ಟಿ ಎದೆಯ ಕಲಿಗಳು
ದಡ್ಡರಂತಪ್ಪೋ ಇವರು ಒಡ್ಡ ಜನಗಳು
ಜೀವ ಕೊಟ್ಟ ನಿಮಗೆ ಇವರು ಕಪ್ಪು ಜನಗಳು
ಬಿಸಿಲು ಮಳೆಯ ಚಳಿಯ ಒದ್ದು ! ಸುರೆಯ ದೇವಿಯ ಸೆರಗು ಹಿಡಿದು
ಹರಕು ಕೌದಿಯಲ್ಲಿ ಕನಸು ! ಮುರುಕು ಗುಡಿಸಲಲ್ಲಿ ಕೊರಗು
ಬದುಕುತಿಹರು ಉಸಿರುಗೈದು ! ಗಂಧದಂತೆ ಜೀವ ತೆಯ್ದು
ದಡ್ಡರಂತಪ್ಪೋ ಇವರು ಒಡ್ಡ ಜನಗಳು
ಜೀವ ಕೊಟ್ಟ ನಿಮಗೆ ಇವರು ಕಪ್ಪು ಜನಗಳು[೨೦]

ಇಲ್ಲಿ ಹಾಡುವಿಕೆಯೇ ಪ್ರಧಾನ. ಮೌಖಿಕ ನೆಲೆಯಿಂದ ಬಂದ ದಲಿತರು ಆದಷ್ಟು ಓದುವುದನ್ನು ನಿರಾಕರಿಸುತ್ತಾರೆ. ಓದುವುದಾದರೂ ಗಟ್ಟಿಯಾಗಿ ಓದಲು ಹೇಳುತ್ತಾರೆ. ಓದುವಾಗ ಹೊಳೆಯದ ಅರ್ಥಗಳು ಹಾಡಿದಾಗ ಹೊಳೆಯುತ್ತವೆ. ಅದಕ್ಕೆ ಅನೇಕ ದಲಿತ ಕವಿಗಳು ತಮ್ಮ ಕವನಗಳಿಗೆ ಪದಗಳೆಂದು ಕರೆದು ಮೌಖಿಕಗೊಳಿಸಲು ಯತ್ನಿಸಿದ್ದಾರೆ. ಏಕೆಂದರೆ ದಲಿತ ಕಾವ್ಯದಲ್ಲಿ ಬರೀ ವ್ಯಕ್ತಿಯ ಅಂತರಂಗ ನಿವೇದನೆಯಿಲ್ಲ, ಬದಲಾಗಿ ಸಮುದಾಯದ ತಲ್ಲಣಗಳಿವೆ. ಇದು ಎಲ್ಲರಿಗೂ ಅರ್ಥವಾಗಿ, ಬದಲಾವಣೆಯ ಹಾದಿಗೆ ಮುನ್ನುಗ್ಗಬೇಕು. ಮೇಲಿನ ಸಾಲುಗಳಲ್ಲಿ ನಿಸ್ಸಾಹಾಯಕ ಸ್ಥಿತಿಯೊಂದರೊಳಗಿಂದ ಎದ್ದ ಅಸಹನೆಯ ಹಾಡು ಹೊರಹೊಮ್ಮಿದೆ. ಇಲ್ಲಿನ ಅಸಹನೆ ಹಾಡಾಗಿ ಅದು ಎದೆಯ ಗೂಡು ಸೇರಲು ಮುಂದಾಗಿದೆ. ಅದಕ್ಕೆ ಇದು ಕಚ್ಚಾ ರೂಪದಲ್ಲಿದೆ. ಯಾವುದೇ ಮುಖವಾಡಗಳಿಲ್ಲದ ಈ ಕಚ್ಚಾರೂಪ ದಲಿತರೆದೆಯ ನೋವನ್ನು ಬಿಚ್ಚಿಟ್ಟಿದೆ. ನೋವು ಹಾಡಾಗುವಾಗ ಅದಕ್ಕೆ ಕಲೆಬೆಲೆಗಳ ಹಂಗೇಕೆ?

ಇಲ್ಲಿ ತಮ್ಮ ದುಡಿಮೆಯ ಮಹತ್ವವನ್ನು ಹಾಡುತ್ತಲೇ ಅದನ್ನು ಕೇಳುವಂತೆ ಕರೆಕೊಡಲಾಗುತ್ತಿದೆ. ಹಾಡು ಮೌಖಿಕ ನೆಲೆಯ ಅಭಿವ್ಯಕ್ತಿ. ಅದು ದುಡಿಯುವ ಜನರನ್ನು ತಲುಪುವ ಶಕ್ತಿಯನ್ನು ಉಳ್ಳಂತದ್ದು. ಹೋರಾಟದ ಹಾಡುಗಳಿಗಿರುವ ಶಕ್ತಿ ಈ ಬಗೆಯದು. ಮೇಲಿನ ಕವನ 'ದ' ಕಾರ ಮತ್ತು 'ಡ' ಕಾರಗಳನ್ನು ಬಳಸಿ ಕಾವ್ಯಕ್ಕೆ ಗೇಯತೆ ಒದಗಿಸಿದೆ. ಅದೇ 'ದ' ಕಾರ ಮತ್ತು 'ಡ' ಕಾರದಿಂದ ಹುಟ್ಟಿರುವ ಪದಗಳು ದುಡಿಯುವವರ ಬದುಕನ್ನು ಬಿಚ್ಚಿಟ್ಟಿವೆ.

ದಲಿತ ಕಾವ್ಯದ ವಾಚ್ಯತನಕ್ಕೆ ಕನ್ನಡಿ ಹಿಡಿವಂತೆ ಅನೇಕ ನಾಟಕದ ಗೇಯತೆಯುಳ್ಳ ಶೈಲಿಯ ಕಾವ್ಯ ರಚನೆಗೊಂಡಿವೆ. ಸಂವಾದದ ಶೈಲಿಯನ್ನು ಅಳವಡಿಸಿಕೊಂಡಿರುವ ಈ ಕಾವ್ಯಗಳು ಒಂದು ಕಾವ್ಯಾತ್ಮಕ ನಾಟಕ ತತ್ವವನ್ನು ಬಿತ್ತಿವೆ. ಬಿತ್ತುತ್ತಲೇ ದಿನನಿತ್ಯದ ದಲಿತರ ಕ್ರೂರ ಬದುಕನ್ನು ಅನಾವರಣಗೊಳಿಸಿವೆ. ಇದಕ್ಕೆ 'ಹಣೆಬರಹವು ಎಂಬ ನಾಟಕವು' ಕವನ ಉತ್ತಮ ಉದಾಹರಣೆ. ಹೆಸರೇ ಇಲ್ಲದ 'ಅ', 'ಆ' ಪಾತ್ರಗಳು ಸಂಭಾಷಣೆ ನಡೆಸುತ್ತವೆ. ಪರಸ್ಪರ ಸಂಭಾಷಣೆಯೇ ಇಲ್ಲಿ ಕಾವ್ಯವಾಗಿ ಮಾರ್ಪಟ್ಟಿವೆ. ಗುಡಿ, ಗುಂಡಾರ, ಮನೆ, ಮಠ ಕಟ್ಟಿ ಇವುಗಳಿಂದ ಹೊರಗೆ ನಿಂತ 'ಅ' ನ ಸ್ಥಿತಿ ಕಂಡು 'ಆ' ಪ್ರಶ್ನೆ ಕೇಳುತ್ತಲೆ ಕೊನೆಗೆ

ಬರ‍್ರಲಾ ಕೇಳಾನ ನ್ಯಾಯಾವ ಕೇಳಾನ
ತಿದ್ದಾನ ಹಣೆಬರವಾ[೨೧]

ಎಂದು ಮುಕ್ತಾಯವಾಗುತ್ತದೆ. ಇಲ್ಲಿ ಹೆಸರಿಲ್ಲದೆ 'ಅ' 'ಆ' ಪಾತ್ರಗಳ ಮೂಲಕ ನಿರೂಪಿತಗೊಂಡಿರುವ ಕಾವ್ಯ ದಲಿತರ ಬದುಕನ್ನು ಸಮಾಜ ಕಡೆಗಣಿಸಿರುವ ರೀತಿಯನ್ನು ಹೇಳಿದೆ. ಅಲ್ಲದೆ ಕನ್ನಡ ವರ್ಣಮಾಲೆಯಲ್ಲಿ ಮೊದಲ ಅಕ್ಷರಗಳಾದ ಇವುಗಳು ದಲಿತರೇ ಈ ದೇಶದ ಮೂಲನಿವಾಸಿಗಳು ಎಂಬುದನ್ನು ಒತ್ತಿ ಹೇಳುತ್ತಿರಬಹುದೆಂಬ ಆಲೋಚನೆಯೂ ಬರುತ್ತದೆ. ಇಲ್ಲಿ ಕಾವ್ಯವನ್ನು ಕಾವ್ಯದ ಯಾವ ನೆಲೆಗಟ್ಟಿನಿಂದ ನೋಡಿದರೂ ಕಾವ್ಯವಾಗಿ ಕಾಣಿಸಲು ಸಾಧ್ಯವಿಲ್ಲ. ಅದಕ್ಕೇ ಮೊದಲು ಹೇಳಿದ್ದು ಇದು ನಾಟಕ ಕಾವ್ಯ ಎಂದು. ಆದರೆ ಇಲ್ಲಿ ಶೋಷಣೆಯ ಅಭಿವ್ಯಕ್ತಿಯನ್ನೇ ಕವನ ಮೂಲಧ್ಯೇಯವನ್ನಾಗಿ ಮಾಡಿಕೊಂಡಿದೆ. ಅಥವಾ ಶೋಷಣಾ ತೀವ್ರತೆಯ ಅಭಿವ್ಯಕ್ತಿಗಳೇ ಕಾವ್ಯದ ರೂಪ ಪಡೆದುಕೊಂಡಿವೆ. ಆದ್ದರಿಂದ ದಲಿತ ಕಾವ್ಯ ಏನು ಹೇಳುತ್ತಿದೆ ಎಂಬುದು ಮುಖ್ಯವೇ ಹೊರತು ಹೇಗೆ ಹೇಳುತ್ತಿದೆ ಎಂಬುದು ಮುಖ್ಯವಲ್ಲ.

ನ್ಯಾಯ ಕೇಳಲು ದಲಿತರನ್ನು ಅವರ ದುಡಿಮೆಯ ಜಾಗದಲ್ಲಿರುವ ಒಡೆಯರ ಬಳಿ ಕಾವ್ಯ ಕರೆಯುತ್ತಿದೆ. ಆದರೆ ನೆಲದ ಒಡೆಯರು ತಮ್ಮ ವಿರುದ್ಧವಾಗಿ ನ್ಯಾಯ ಹೇಳುವುದು ಸುಳ್ಳು. ಹಾಗೆಯೇ ಅವರಿಂದಲೇ ನಮ್ಮ ಬದುಕು ಬದಲಾಗಬೇಕೆಂಬ ಆಶಯ 'ತಿದ್ದಾನ ಹಣೆಬರಾನ' ಎನ್ನುವ ಮಾತಿನಲ್ಲಿ ಅಡಗಿರಬಹುದೆಂಬ ಗುಮಾನಿಯೂ ಕಾಡುತ್ತದೆ. ಆದರೆ

ಹೋರಾಟದ ಹಾಡುಗಳು ಬಂದೂಕಿನ ನಳಿಗೆಯಲ್ಲಿ ಬದಲಾವಣೆ ಬಯಸುವ ಕ್ರಮ ಇದಕ್ಕಿಂತ ಉತ್ತಮವಾದ ದಾರಿಯೇ ಆಗಿದೆ.

ಸಂವಾದ ಜನಪದರ ಮೂಲ ಅಭಿವ್ಯಕ್ತಿ ಕ್ರಮ. ಜನಪದರು ಸಂವಾದದ ಶೈಲಿಯಲ್ಲಿ ತಮ್ಮ ಮಹಾಕಾವ್ಯಗಳನ್ನು ಕೇಳುಗರ ಮುಂದೆ ಪ್ರಸ್ತುತಪಡಿಸುತ್ತಿದ್ದರು. ಜನತೆಯ ಮನದಾಳದಲ್ಲಿ ಮೌಖಿಕವಾಗೇ ನೆಲೆನಿಲ್ಲುವುದು ಜನಪದ ಕಾವ್ಯಗಳ ಪ್ರಧಾನ ಲಕ್ಷಣಗಳಲ್ಲಿ ಒಂದು. ಇದು ದಲಿತ ಕಾವ್ಯದಲ್ಲೂ ಕಾಣಿಸಿಕೊಂಡಿತು. ದಲಿತರು ಮೌಖಿಕ ನೆಲೆಯಿಂದಲೇ ಬಂದವರು. ಆ ಮೂಲಕವೇ ವಾಸ್ತವತೆಯ ಅರಿವು ಮೂಡಿಸುವ ತವಕ ಇಲ್ಲಿನ ಅನೇಕ ದಲಿತ ಕವಿಗಳಿಗೆ ಮತ್ತು ಅವರ ಕಾವ್ಯಗಳಿಗೆ ಇದೆ. ಇಲ್ಲಿಯ ಅನೇಕ ಕಾವ್ಯಗಳು ಸಂವಾದದ ಶೈಲಿಯಲ್ಲಿ ನಿರೂಪಿತಗೊಂಡಿವೆ. ನಿರೂಪಿತಗೊಳ್ಳುತ್ತಲೇ ಚರಿತ್ರೆ ಮತ್ತು ವರ್ತಮಾನದ ನಡುವಿನ ಕೊಂಡಿಗಳನ್ನು ವಾಸ್ತವದ ಹಿನ್ನೆಲೆಯಲ್ಲಿ ಕಟ್ಟಿಕೊಟ್ಟಿವೆ. ಇದಕ್ಕೆ ಪೂರಕವೆಂಬಂತೆ ಇಲ್ಲಿನ ನಾಟಕ ಕಾವ್ಯದ ಅಲೋಚನೆಗಳೂ ಹೊರಬಂದಿವೆ.

ನಾಟಕ ಬಹುಜನ ಪ್ರಿಯವಾದ ಶ್ರವ್ಯ ಮತ್ತು ದೃಶ್ಯ ಮಾಧ್ಯಮ. ಲಿಖಿತ ಪಂರಂಪರೆಗಿಂತ ಹೆಚ್ಚಾಗಿ ಬಹುಜನರನ್ನು ಬೇಗನೇ ತಲುಪುವ ಶಕ್ತಿ ಈ ಕಲೆಗಿದೆ. ಇವತ್ತಿನ ಸಿನಿಮಾ ಮಾಧ್ಯಮವನ್ನು ಈ ನಿಟ್ಟಿನಲ್ಲಿ ಅರ್ಥ ಮಾಡಿಕೊಳ್ಳಬೇಕಾಗಿದೆ. ದಲಿತರಲ್ಲಿ ಅಕ್ಷರ ಬಲ್ಲವರಿಗಿಂತ, ಗೊತ್ತಿಲ್ಲದವರೇ ಹೆಚ್ಚು. ಇವರಿಗೆ ಮೂಲಭೂತ ಅವಶ್ಯಕತೆಗಳನ್ನು ಪಡೆದುಕೊಳ್ಳಲು ಹೋರಾಟ ಅನಿವಾರ್ಯವಾಗಿದೆ. ಆದರೆ ಈ ಹೋರಾಟದ ಕಿಚ್ಚು ಹಚ್ಚುವುದು ಕೇವಲ ಲಿಖಿತ ಪರಂಪರೆಯಿಂದ ಸಾಧ್ಯವಿಲ್ಲ. ಈ ಲಿಖಿತ ಪರಂಪರೆ ಮೌಖಿಕಗೊಳ್ಳದ ಹೊರತು ಅದರ ಮೂಲ ಉದ್ದೇಶ ಸಾಧಿಸಲು ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿಯೇ ದಲಿತರು ತಮ್ಮ ಅಭಿವ್ಯಕ್ತಿಯನ್ನು ಆದಷ್ಟು ಮೌಖಿಕಗೊಳಿಸಲು ಯತ್ನಿಸಿದರು. ಇದರ ಪರಿಣಾಮದಿಂದಾಗಿಯೇ ಅನೇಕ ಸಂವಾದ ಶೈಲಿಯ ನಾಟಕ ರೂಪದ ಕಾವ್ಯಗಳು ಹೊರಬಂದವು. ಜೊತೆಗೆ ಅನೇಕ ಕಾವ್ಯಗಳು ಬೀದಿ ನಾಟಕಗಳಾಗಿ ಪರಿವರ್ತನೆಗೊಂಡವು. ಈ ಪ್ರಕ್ರಿಯೆಯಿಂದಾಗಿಯೇ ಜನರ ಮನದಲ್ಲಿ ಹೋರಾಟದ ಮನೋಭಾವವನ್ನು ಬಿತ್ತಲು ಸಾಧ್ಯವಾಯಿತು.

ದಲಿತ ಕಾವ್ಯ ಏಕೆ ಮತ್ತು ಏನು ಹೇಳಬೇಕು? ಎಂಬಿವುಗಳು ಹೇಗೆ ಹೇಳಬೇಕು? ಎಂಬುದನ್ನು ನಿರ್ಧರಿಸಿವೆ. ಆದರೆ ದಲಿತ ಕಾವ್ಯ ನೋಡುವಾಗ "ದಲಿತ ಲೋಕದ ಅನಾವರಣ ಎಷ್ಟರಮಟ್ಟಿಗೆ ಭಾಷಿಕವಾಗಿ ಯಶಸ್ವಿಯಾಗಿದೆ ಅಥವಾ ಯಶಸ್ವಿಯಾಗಿಲ್ಲ ಎಂದು ಅಳೆದು ತೂಗಿ ನೋಡುವ ಮಾರುಕಟ್ಟೆಯ ಲೆಕ್ಕಾಚಾರ ವಿಮರ್ಶೆಯಲ್ಲಿ ಮುಂಚೂಣಿಗೆ ಬಂತು. ಇದು ದಲಿತರ ಅಭಿವ್ಯಕ್ತಿಯನ್ನು ಸಮಗ್ರವಾಗಿ ನೋಡಲು ಅಡ್ಡಿಪಡಿಸಿತು."[೨೨]

ಕವಿತೆ ಆದಷ್ಟು ಮಾತಿನ ರೂಪಕ್ಕೆ ಒಳಗಾಗಬೇಕು. ಇದು ಅನೇಕ ದಲಿತ ಕವಿಗಳ ಇಚ್ಛೆ. ಏಕೆಂದರೆ ಮಾತು ಕೇಳುವವರನ್ನು ಅಪೇಕ್ಷಿಸುವಂತಹುದು. "ಬರವಣಿಗೆ ಎಂದ ಮೇಲೆ ಅದನ್ನು ಓದಬೇಕು. ಆದರೆ ಅದು ತನ್ನ ಓದನ್ನು ನಿರಾಕರಿಸಿ ಮಾತಾಗಿಸಲು ಒತ್ತಾಯಿಸುವುದು ತುಂಬಾ ಆಸಕ್ತಿಯ ವಿಷಯ. ಓದುವಿಕೆ ತಾತ್ವಿಕವಾಗಿ ಪ್ರಭುತ್ವ ಪ್ರಣೀತ ವಿಧಾನ. ಮಾತು ಜನತೆಯ ಒಡಲಾಳದ್ದು. ಮಾತು ಆಲಿಸುವವರನ್ನು ಉದ್ದೇಶಿಸಲ್ಪಟ್ಟದ್ದು ಪ್ರತಿಕ್ರಿಯೆಯನ್ನು ತಕ್ಷಣ ಅಪೇಕ್ಷಿಸುವಂತಹುದು."[೨೩] ಇದೇ ದಲಿತ ಕಾವ್ಯದ ತಿರುಳೂ ಕೂಡ ಹೌದು. ಆದ್ದರಿಂದಲೇ ದಲಿತ ಕಾವ್ಯ ತನ್ನನ್ನು ಗಟ್ಟಿಯಾಗಿ ಓದಿಸಿಕೊಳ್ಳಲು ನಿವೇದಿಸಿಕೊಳ್ಳುತ್ತದೆ.

ಮೂಡ್ನಾಕೂಡು ಅವರ 'ಹಣೆಬರಹ' ಕವನ ಕೂಡ ಈ ಸಂಭಾಷಣೆಯ ನೆಲೆಯಲ್ಲೇ ನಿರೂಪಿತಗೊಂಡಿದೆ. ಮಗ ಮತ್ತು ಅಪ್ಪನ ನಡುವೆ ನಡೆಯುವ ಸಂಭಾಷಣೆ ವರ್ಗವ್ಯವಸ್ಥೆಯ ಪದರುಗಳನ್ನು ಬಿಚ್ಚಿಟ್ಟಿದೆ. ಜೊತೆಗೆ ದುಡಿವ ವರ್ಗದ ಅನೇಕ ನೆಲೆಗಳನ್ನು ಅನಾವರಣಗೊಳಿಸಿದೆ. ಆಧುನಿಕತೆಯ ಪ್ರತಿನಿಧಿಯಾದ ಮಗ, ಜೀತದ ಪ್ರತಿನಿಧಿಯಾಗಿ ಅಪ್ಪ ಈ ಕವನದಲ್ಲಿ ಸಂವಾದಿಸುತ್ತಾರೆ. ಇಲ್ಲಿ ಯಾವುದೇ ಕಿಚ್ಚಿಲ್ಲ, ಆವೇಶವಿಲ್ಲ. ಆದರೆ ಕಾವ್ಯ ಅಸಹಾಯಕತೆಯನ್ನೇ ಅಭಿವ್ಯಕ್ತಿಯನ್ನಾಗಿಸಿಕೊಂಡಿದೆ. ಮಾತೇ ಕಾವ್ಯವಾಗಿ ಸಂವಾದವೇ ಅದರ ಶಕ್ತಿಯಾಗಿ ಸಂಭಾಷಣೆಯೇ ಅದರ ನಿರೂಪಣೆಯಾಗಿ ದಲಿತ ಕಾವ್ಯ ಕಾವ್ಯತತ್ವವನ್ನು ಕಟ್ಟಿದೆ.

ಜನಪದರ ಅಭಿವ್ಯಕ್ತಿಗಳ ಮೂಲ ಬೇರುಗಳಲ್ಲಿ ಕಥನವೂ ಒಂದು. ಕೇಳಿಸಿಕೊಳ್ಳುವುದಕ್ಕೆ ಮತ್ತೆ ಮತ್ತೆ ಒತ್ತಾಯಿಸುವುದು ಈ ಕಥನ ಕ್ರಮ. ಆಯಾಸ ಪರಿಹಾರದ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಈ ಕಥನ ಕವನಗಳು ಸಾಂಸ್ಕೃತಿಕ ನೆಲೆಗಟ್ಟುಗಳನ್ನು ಬಚ್ಚಿಟ್ಟುಕೊಂಡಿರುತ್ತಿದ್ದವು. ಇಂತಹ ಕಥಾ ದಾಟಿ ದಲಿತ ಕಾವ್ಯದಲ್ಲೂ ಮುಂದುವರಿದಿದೆ. ಕಥೆ ಕೇಳುವುದು ಆಸಕ್ತಿಯ ವಿಷಯಗಳಲ್ಲಿ ಒಂದು. ಹೇಳುವವರ ಮೇಲೆ ಈ ಕಥೆಯ ಸ್ವರೂಪ ಅಡಗಿರುತ್ತದೆ. ಕಥೆ ವಯಸ್ಸಿನ ಭೇದವಿಲ್ಲದೆ ಎಲ್ಲರನ್ನೂ ಸೆಳೆಯುತ್ತದೆ. ಮೌಖಿಕಗೊಳ್ಳಲು ಬಯಸುವ ದಲಿತ ಕಾವ್ಯ ಈ ಕಥಾ ಶೈಲಿಯನ್ನು ಸೂಕ್ತವಾಗಿ ಬಳಸಿಕೊಂಡಿದೆ.

ಮಧುಗಿರಿ ಪಟ್ಟಣಕೆ ಸಿದ್ದಯ್ಯನೆಂಬಗಸ
ಯಂಡರು ಮಕ್ಕಳಿಲ್ಲ ಏಕಾಕಿ । ಸಿದ್ದಯ್ಯ
ಕತ್ತೆಯು ಅವುನ ಒಡನಾಡಿ[೨೪]

ಇಲ್ಲಿ ಕಥೆ ಹೇಳುವ ಶೈಲಿಯಿದೆ. ದೈಹಿಕ ಪ್ರಧಾನವಾದ ದುಡಿಮೆಯನ್ನು ಕಾವ್ಯ ಹುಡುಕುತ್ತಿದೆ. ದುಡಿಮೆಯಲ್ಲಿ ಕೇವಲ ವ್ಯಕ್ತಿಯಷ್ಟೇ ಅಲ್ಲ. ಅಲ್ಲಿ ಪ್ರಾಣಿಗಳ ಪಾತ್ರವೂ ಇದೆ. ಎಂಬುದನ್ನು ಒತ್ತಿ ಹೇಳುತ್ತಿದೆ. ದುಡಿಮೆ ಎಂದ ತಕ್ಷಣ ಮನುಷ್ಯರೇ ಕೇಂದ್ರಬಿಂದುವಾಗುತ್ತಾರೆ. ಆದರೆ ಮನುಷ್ಯರ ಎಷ್ಟೋ ದುಡಿಮೆಯ ಹಿಂದೆ ಅನೇಕ ಪ್ರಾಣಿಗಳ ಶ್ರಮವಿರುತ್ತದೆ. ಇವುಗಳನ್ನು ಪರಿಗಣಿಸುವ ವ್ಯವಧಾನವೂ ಇವರಿಗಿರುವುದಿಲ್ಲ. ಆದರೆ ಕಾವ್ಯ ಈ ದುಡಿಮೆಯ ನೆಲೆಗಳನ್ನು ಅನಾವರಣಗೊಳಿಸುತ್ತಿದೆ.

ಬಟ್ಟೆಯ ಹೇರಿಕೊಂಡು ಹೊಂಟರೆ ಬೀದೀಲಿ
ದೇವೇಂದ್ರನಾ ಕುದುರೆ ಸಮನಲ್ಲ । ರಾಜನ
ಪಟ್ಟದ ಕುದುರೆ ಚಟ್ಟಂತು[೨೫]

ಇಂತ ಕತ್ತೆ ಸತ್ತು ಗೋರಿಯಾದಾಗ ಧಾರ್ಮಿಕತೆ ತಲೆದೋರುತ್ತದೆ. ಪೂಜೆ ಪುನಸ್ಕಾರ ಪ್ರಾರಂಭವಾಗುತ್ತದೆ. ಹಣ ಗಳಿಸುವ ದಂಧೆಯಾಗಿ ಮಾರ್ಪಡುತ್ತದೆ. ವಾರಸುದಾರರಲ್ಲದವರು ಒಡೆಯರಾಗಿದ್ದಾರೆ. ಸಿದ್ದಯ್ಯನ ಕಳೆದುಕೊಳ್ಳುವಿಕೆ ಉಳಿದವರ ಗಳಿಕೆಗೆ ಕಾರಣವಾಗಿದೆ. ದುಡಿಮೆಯನ್ನು ಕಿತ್ತುಕೊಳ್ಳುವ ಅಸಹಾಯಕತೆಯ ಚಿತ್ರಣ ಇಲ್ಲಿ ಮಡುಗಟ್ಟಿದೆ. ರಾಜನ ಪಟ್ಟದ ಕುದುರೆ ಮೆರವಣಿಗೆಗೆ ಮಾತ್ರ ಸೀಮಿತ. ಆದರೆ ಸಿದ್ದಯ್ಯನ ಕತ್ತೆ ಶ್ರಮಕ್ಕೆ ಸಂಕೇತ. ಇಂತಹ ಕತ್ತೆ ಸತ್ತು ಸಮಾಧಿಯಾಗಿದೆ. ಸಮಾಧಿ ದೇವಸ್ಥಾನವಾಗಿ ಕೊಳ್ಳೆ ಸಂಸ್ಕೃತಿಗೆ ಹಾದಿಯಾಗಿದೆ. ಈ ಹಾದಿಯಲ್ಲಿ ಹೋಗುತ್ತಿರುವವರನ್ನು ಕುರಿತು ಕಾವ್ಯ ನಿರೂಪಿಸುವುದು ಹೀಗೆ;

ಕೈಚಾಚಿ ಭಿಕ್ಷದೋರು । ಮೈಚಾಚಿ ಸೂಳೇರು
ಭಕ್ತೀಲಿ ಕುಡದು ಕುಣಿಯೋರು । ಸೇರವ್ರೆ
ಬಿಳಿಟೋಪಿಯೋರ ಬೆಳಕೇಲಿ[೨೬]

ಅಮಾರ್ಗದ ಅನೈತಿಕ ಗಳಿಕೆಗೆ ಸಮಾಧಿ ಕಾರಣವಾಗುತ್ತಿದೆ. ಅಕ್ರಮ ಆರ್ಥಿಕ ಚಟುವಟಿಕೆಗಳ ಕೇಂದ್ರವಾಗಿದೆ. ಪ್ರಭುತ್ವ ಅದನ್ನು ತನ್ನ ಅಂಕೆಯಲ್ಲಿಟ್ಟುಕೊಂಡು ಅದರ ಮೇಲೆ ತನ್ನ ಅಸ್ತಿತ್ವ ಸಾಧಿಸುತ್ತದೆ. ಗೋರಿ ದೇವಸ್ಥಾನವಾಗಿ ಮಾರ್ಪಾಡು ಹೊಂದಿ ಜನಪ್ರಿಯತೆಯ ತುದಿಗೇರಿದೆ. ಈ ಜನಪ್ರಿಯತೆ ಗೋರಿಗೆ ಕಾರಣವಾದವರನ್ನೇ ದೂರವಿಡುತ್ತದೆ. ಕೊನೆಗೆ ಈ ಕಥಾ ಕವನ ಮುಗಿಯುವುದು

ದೇಸಾಂತ್ರ ಹೋಗಿದ್ದ ಸಿದ್ದಯ್ಯ ಕತ್ತೇಯ
ಹೂತ ಜಾಗವ ನೋಡೋ ಆಸೇಲಿ । ಬಂದವ್ನೆ
ಹುಡುಕುತ ನಿಂತವ್ನೆ ಹೂತ ಜಾಗ[೨೭]

ಕವನ ಅನೇಕ ಮುಖಗಳನ್ನು ಕಥಾರೂಪದಲ್ಲಿ ಅನಾವರಣಗೊಳಿಸಿದೆ. ಈ ಕಥೆ ಹೇಳಲು ಬಳಸಿಕೊಂಡ ಮಾರ್ಗವೂ ಕೂಡ ತ್ರಿಪದಿ ಸಾಲುಗಳಿಂದ ಬಿಂಬಿತಗೊಂಡಿದೆ. ಜನಪದರ ಅತ್ಯುನ್ನತ ಕೊಡುಗೆ ಇದು. ಇಲ್ಲಿ ದುಡಿಯುವ ಅನೇಕ ನೆಲೆಗಳ ಶೋಧವಿದೆ. ಕಾವ್ಯ ಶೋಧನೆ ಮಾಡುತ್ತಲೇ ಧರ್ಮ, ಅನೈತಿಕತೆ, ನೈತಿಕತೆ, ಆರ್ಥಿಕತೆ, ಮುಂತಾದವುಗಳೊಂದಿಗೆ ಮುಖಾಮುಖಿಯಾಗಿದೆ. ತಣ್ಣಗೆ ನಿರೂಪಣೆಗೊಳ್ಳುತ್ತಲೇ ವಿಡಂಬನಾತ್ಮಕವಾಗಿ ಸಾಮಾಜಿಕ ವ್ಯವಸ್ಥೆಯನ್ನು ಅನಾವರಣಗೊಳಿಸಿದ ಕವನ ಇದು.

ಭಾರತದಾದ್ಯಂತ ದಲಿತರ ಮೇಲೆ ನಡೆದ ಅನೇಕ ದೌರ್ಜನ್ಯ, ದಬ್ಬಾಳಿಕೆಗಳನ್ನು ದಲಿತ ಕಾವ್ಯ ಕಥನ ದಾಟಿಯಲ್ಲೇ ಹಿಡಿದಿಟ್ಟಿದೆ. ದೌರ್ಜನ್ಯಕ್ಕೆ ಕಾರಣ, ಅದರ ಪರಿಣಾಮ, ಮುಂದೆ ಸಾಗಬೇಕಾದ ಹಾದಿ ಎಲ್ಲವನ್ನೂ ಕಥಾ ದಾಟಿಯಲ್ಲಿ ನಿರೂಪಿಸಿ ಹಾಡಾಗಿಸಿ ಮನಮನದಲ್ಲಿ ದಲಿತ ಕವಿಗಳು ಬಿತ್ತಿದ್ದಾರೆ.

ದಲಿತ ಕಾವ್ಯ ತನ್ನ ಅಭಿವ್ಯಕ್ತಿಗಾಗಿ ಸಾಂಪ್ರದಾಯಿಕ ಅನೇಕ ಶೈಲಿಗಳನ್ನು ಮುರಿದಿದೆ. ತನ್ನ ಆಶಯಕ್ಕೆ ತಕ್ಕ ಹಾಗೆ ಲಯ, ಗೇಯತೆಗಳನ್ನು ಮೈಗೂಡಿಸಿಕೊಂಡಿದೆ. ನಿರೂಪಣಾ ವಿಧಾನವನ್ನು ಬದಲಾಯಿಸಿದೆ. ಇಲ್ಲಿ ವ್ಯಕ್ತಿ ಕೇಂದ್ರಿತ ನೆಲೆಗಿಂತ ಸಮೂಹ ಕೇಂದ್ರಿತ ನೆಲೆಯೇ ಪ್ರಧಾನವಾಗಿದೆ.

ಬರುತಿಹೆವು ನಾವು ಬರುತಿಹೆವು
ಬರುತಿಹೆವು ನಾವು ಬರುತಿಹೆವು
ಯುಗಯುಗಳಿಂದ ನೀವ್ ತುಳಿದ ಜನಗಳ
ಕೊರಳ ದನಿಗಳು ನಾವು[೨೮]

ಇಲ್ಲಿ ದುಡಿಮೆಯ ಲಯವಿದೆ. ಹತಾಶೆಯ ಜೊತೆಗೆ ಕ್ರಾಂತಿಗೆ ಮುನ್ನುಗ್ಗುವ ತುಡಿತದ ಲಯ ಪ್ರಧಾನವಾಗಿ ನೆಲೆನಿಂತಿದೆ. ಸಿದ್ಧ ಮಾದರಿಯ ಲಯ ಬಿಟ್ಟು ಹೊಸ ಮಾದರಿಯ ಲಯವನ್ನು ದಲಿತ ಕಾವ್ಯ ಕಂಡುಕೊಂಡಿದೆ. ಇಲ್ಲಿ ತಮಟೆಯ ಲಯಕ್ಕೆ ಅನುಗುಣವಾಗಿ ರಚನೆಯಾದ ಕವನಗಳಿವೆ.

೫.೨ ದಲಿತ ಕಾವ್ಯ : ಪ್ರತಿಮೆಗಳ ಹೊದಿಕೆ

ಉಪಮೇಯ ಉಪಮಾನ
ಪ್ರತಿಮೆ ಪ್ರತೀಕಗಳು
ಬೇಡ ನನ್ನ ನಿರಾಡಂಬರ ಕಾವ್ಯಕ್ಕೆ
ಅಸಹಾಯಕ ಸ್ಥಿತಿಯಲ್ಲಿ
ನರಳುತ್ತಿರುವ ನನ್ನವರ
ಯಥಾಸ್ಥಿತಿಯ ಬದುಕೇ ಸಾಕು
ನೊಂದ ನನ್ನವರ ಕಾವ್ಯಕ್ಕೆ[೨೯]

ಪ್ರತಿಮೆ ಸಂಕೇತ ಇವು ಕಾವ್ಯದ ಅಂಗಗಳಲ್ಲಿ ಬಹುಮುಖ್ಯವಾದವುಗಳು. ಲಿಖಿತ ಕಾವ್ಯದಲ್ಲಿ ಇವುಗಳು ಅಭಿವ್ಯಕ್ತಗೊಂಡಿದ್ದ ಪರಿಣಾಮ ವ್ಯಾಖ್ಯಾನವನ್ನು ಬಯಸುತ್ತವೆ.

ಕಾವ್ಯದಲ್ಲಿ ಏನಿರಬೇಕು, ಏನಿರಬಾರದು, ಹೇಗಿರಬೇಕು ಎಂಬ ಚರ್ಚೆ ಇವತ್ತಿನದಲ್ಲ, ಕಾವ್ಯ ಮೌಖಿಕತೆಯಿಂದ ಲಿಖಿತದ ಕಡೆ ಯಾವಾಗ ಜಾರಿಕೊಂಡಿತೋ ಅಂದಿನಿಂದಲೇ ಇದರ ಚರ್ಚೆಗಳು ಪ್ರಾರಂಭವಾದವು. ಈ ಚರ್ಚೆಯ ಹಿಂದೆ ಬೌದ್ಧಿಕ ಸಂಸ್ಕೃತಿಯ ಆರಾಧನೆಯೂ ಇತ್ತು. ಲಿಖಿತ ಪರಂಪರೆ ಎಂಬುದೇ ಬೌದ್ಧಿಕತೆಯ ಕೊಡುಗೆಯಾದ್ದರಿಂದ ಅನಿವಾರ್ಯವಾಗಿ ಇದರ ಸಾಧಕ ಬಾಧಕಗಳ ಕಡೆ ಚರ್ಚೆ ಕೇಂದ್ರೀಕರಿಸಲ್ಪಡುತ್ತದೆ. ಆದರೆ ಮೌಖಿಕ ಪರಂಪರೆಗೆ ಅಥವಾ ಕಾವ್ಯಕ್ಕೆ ಈ ತರದ ಚರ್ಚೆ ಅನವಶ್ಯಕ. ಏಕೆಂದರೆ ಅದು ಜನರ ನಡುವೆಯೇ ಮೂಡಿರುತ್ತದೆ. ಲಿಖಿತ ಕಾವ್ಯದ ಈ ತರದ ಅಭಿವ್ಯಕ್ತಿ ಇಲ್ಲದ ಕಾರಣ ಅದು ಹಲವು ಅರ್ಥಗಳನ್ನು ಹೊಮ್ಮಿಸುವ ಪದಮಂಜಗಳನ್ನು ತನ್ನ ಬೌದ್ಧಿಕ ಕಸರತ್ತಿನ ಮೂಲಕ ಹಿಡಿದಿಡುತ್ತದೆ. ಇದು ದಲಿತ ಕಾವ್ಯಕ್ಕೂ ಅನ್ವಯಿಸುತ್ತದೆ. ಆದ್ದರಿಂದ ಇವುಗಳು ದಲಿತ ಸಮಾಜವನ್ನು ನೋಡಿರಬಹುದಾದ ಸಾಧ್ಯಾಸಾಧ್ಯತೆಗಳು ಮತ್ತು ಮಿತಿಗಳನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

ಕಾವ್ಯಕ್ಕೂ ಪ್ರತಿಮೆಗೂ ಒಂದು ಅವಿನಾಭಾವ ಸಂಬಂಧವಿದೆ. ಇದು ಲಿಖಿತ ಕಾವ್ಯ ಪರಂಪರೆಯಲ್ಲಷ್ಟೇ ಕಂಡುಬರುವಂತಹುದಲ್ಲ. ಮೌಖಿಕ ನೆಲೆಯಿಂದಲೂ ಇದು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಆದರೆ ಅಭಿವ್ಯಕ್ತಿಯ ವಿಧಾನದಲ್ಲಿ ವ್ಯತ್ಯಾಸವಿರಬಹುದು, ಹಾಗೂ ಮೌಖಿಕತೆಯಲ್ಲಿ ಅದು ನಿರೂಪಣೆಗೊಳ್ಳುವುದು ದುಡಿಮೆಯ ನೆಲೆಯಲ್ಲಿ ಅಥವಾ ಜನರ ಜೊತೆಯಲ್ಲಿ, ಲಿಖಿತ ಪರಂಪರೆಗೆ ಈ ಅವಕಾಶವಿಲ್ಲ. ಅದು ಜೀವನವನ್ನು ದೂರ ನಿಂತು ನೋಡಿದಂತೆ ಕಂಡುಬಂದರೂ ಜೀವನವನ್ನೇ ಕೇಂದ್ರೀಕರಿಸಿಕೊಂಡಿರುತ್ತದೆ. ಇದು ಒಂದೊಂದು ಕಾವ್ಯ ಪ್ರಕಾರಕ್ಕೂ ವಿಭಿನ್ನತೆಯನ್ನು ಒದಗಿಸುತ್ತದೆ. ಈ ಅಧ್ಯಯನವು ದಲಿತ ಕಾವ್ಯವನ್ನು ಚರ್ಚಿಸುತ್ತಿರುವ ಉದ್ದೇಶ ಎಲ್ಲ ಕಾವ್ಯ ಪ್ರಕಾರಗಳಂತೆ ದಲಿತ ಕಾವ್ಯದಲ್ಲೂ ಪ್ರತಿಮೆ, ಪ್ರತೀಕ, ರೂಪಕಗಳಿವೆ. ಆದರೆ ಇವುಗಳಿಂದ ಹೊರಹೊಮ್ಮಬಹುದಾದ ಸಾಮಾಜಿಕ ನೆಲೆಗಟ್ಟುಗಳು ವಿಭಿನ್ನವಾಗಿವೆ. ಒಂದನ್ನೊಂದು ತೌಲನಿಕವಾಗಿ ಚರ್ಚಿಸುತ್ತಾ ಹೋದರೆ ಪ್ರತ್ಯೇಕ ಅಧ್ಯಯನವೇ ಮಾಡಿದಂತಾಗುತ್ತದೆ. ಆದ್ದರಿಂದ ದಲಿತ ಕಾವ್ಯದ ಹೊದಿಕೆಯಲ್ಲಿ ಒಂದಾಗಿರುವ ಪ್ರತಿಮೆಗಳು ಹೊರಡಿಸುವ ಸಾಮಾಜಿಕ ವಸ್ತುಸ್ಥಿತಿಯನ್ನು ಚರ್ಚಿಸುವ ಉದ್ದೇಶದಿಂದ ಇವುಗಳನ್ನು ಪ್ರಧಾನವಾಗಿ ಪರಿಗಣಿಸಲಾಗಿದೆ.

೧೯೭೦ರ ದಶಕದಲ್ಲಿ ಬಂದ ದಲಿತ ಕಾವ್ಯ ಪರಂಪರೆ (ಮೇಲಿನ ಕವಿತೆಯ ಸಾಲುಗಳಂತೆ) ಇಂತಹ ಒಂದು ನೆಲೆಗಟ್ಟಿನ ಆಧಾರದ ಮೇಲೆಯೇ ತನ್ನ ಕಾವ್ಯ ರಚನೆಯನ್ನು ಕೈಗೊಂಡಿತು. ಅಸಹಾಯಕ ಜನರ ಅಳಲುಗಳನ್ನು ಹೇಳುವುದಕ್ಕೆ ಉಪಮೇಯ, ಉಪಮಾನ, ಪ್ರತಿಮೆ, ಪ್ರತೀಕಗಳು ಬೇಕೆ? ಏಕೆಂದರೆ ನೊಂದ ಜನರ ನೋವನ್ನು ಪ್ರತಿಬಿಂಬಿಸುವಾಗ ಕಾವ್ಯವೂ ಕೂಡ ನೋವನ್ನೇ ಆವರಿಸಿಕೊಂಡು ಜನ್ಮ ತಾಳುತ್ತದೆ. ಇದಕ್ಕೆ ಕಲಬೆಲೆಗಳ ಹಂಗೇಕೆ? ಅದಕ್ಕೆ ಅಭಿವ್ಯಕ್ತಿಯೊಂದೇ ಸಾಕು. ಆ ಅಭಿವ್ಯಕ್ತಿಯೂ ಕೂಡ ಸಹಜವಾಗಿ

ಹೊರಬರುವಂತಹುದು. ಜನಪದರ ಬಾಯಿಂದ ಉದುರುವ ಆ ಕ್ಷಣದ ಪ್ರತಿಕ್ರಿಯೆಯಂತೆ ಇನ್ನೂ ಸರಳಗೊಳಿಸುವುದಾದರೆ ಅಳುವ ಕಂದನ ತುಟಿಯಲ್ಲಿ ಹವಳದ ಕುಡಿ ಕಂಡಂತೆ, ಕುಡಿಹುಬ್ಬಿನಲ್ಲಿ ಬೇವಿನೆಸಳು ಕಂಡಂತೆ.

ಮೇಲಿನ ಸಾಲುಗಳು ಕಾವ್ಯದ ಮಡಿವಂತಿಕೆಯನ್ನು ತಿರಸ್ಕರಿಸುತ್ತಲೇ ವಚನದ ವಾಚನಾ ಪರಂಪರೆಯ ಹಿನ್ನೆಲೆಯಲ್ಲಿ ಕಾವ್ಯವಾಗಿ ಮೂಡಿದೆ. ಕಾವ್ಯ ಸೊಗಸಿನಿಂದ ಕೂಡಿರಬೇಕಾದರೆ ಅದರಲ್ಲಿ ಉಪಮೇಯ, ಉಪಮಾನ, ಪ್ರತಿಮೆ, ಪ್ರತೀಕ ಮುಂತಾದವುಗಳು ತಕ್ಕ ರೀತಿಯಲ್ಲಿ ಮೇಳೈಸಿರಬೇಕು ಎಂದು ನಂಬಿದ್ದ ಕನ್ನಡ ಕಾವ್ಯ ಪರಂಪರೆಗೆ ದಲಿತ ಕಾವ್ಯ ಇವೆಲ್ಲವೂ ಅಂದಚೆಂದಕ್ಕಾಗಿ ಬಳಸುವ ಕಾಸ್ಮೆಟಿಕ್ ಇದ್ದ ಹಾಗೆ, ಇದು ದೇಹವನ್ನು ಅಲಂಕಾರಗೊಳಿಸಲು ಉಪಯೋಗಿಸುವ ಆಭರಣಗಳಿದ್ದಂತೆ, ಕನ್ನಡ ಸಾಹಿತ್ಯ ಈ ಆಭರಣಗಳಿಗೇ ವಿಶೇಷ ಒಲವನ್ನು ವ್ಯಕ್ತಪಡಿಸಿದೆ. ಆದರೆ ದೇಹ ಮುಖ್ಯವೇ ಹೊರತು ಆಭರಣಗಳಲ್ಲ ಎಂಬುದನ್ನು ತೋರಿಸಿಕೊಟ್ಟಿತು.

ಕಾವ್ಯದಲ್ಲಿ ಏನಿರಬೇಕು? ಏನಿದ್ದರೆ ಅದು ಕಾವ್ಯ ಎನಿಸಿಕೊಳ್ಳುತ್ತದೆ? ಎಂಬ ಚರ್ಚೆ ಬಹಳ ಹಿಂದಿನಿಂದಲೂ ಚರ್ಚಿತ ವಿಷಯವೇ. ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯ ಮೀಮಾಂಸಕರಾದಿಯಾಗಿ ಇಂದಿನ ವಿಮರ್ಶಕರವರೆಗೂ ಅದು ವಿಭಿನ್ನ ವಲಯಗಳಲ್ಲಿ ಮಂಡಿಸಲ್ಪಡುತ್ತಿದೆ. ಕಾವ್ಯದ ಒಳಮೈ ಮತ್ತು ಹೊರಮೈ ಹೀಗಿದ್ದರೆ ಅದು ಓದುಗನ ಅಂತರಾಳದಲ್ಲಿ ನೆಲೆಯೂರಲ್ಪಡುತ್ತದೆಂಬ ಸೌಂದರ್ಯಾತ್ಮಕ ಪರಿಕಲ್ಪನೆಗೆ ಹೆಚ್ಚು ಒತ್ತನ್ನು ಮೀಮಾಂಸಕರು ನೀಡಿರುವುದನ್ನು ಗಮನಿಸಬಹುದು. ಕಾವ್ಯ ಆಸ್ವಾದನೆಗೆ ಒಳಗಾಗಬೇಕಾದರೆ ಅದು ತನ್ನೊಳಗೆ ಏನೆಲ್ಲವನ್ನು ಒಳಗೊಂಡಿರಬೇಕೆಂಬ ಚರ್ಚೆಯೇ ಮೀಮಾಂಸಕರದು.

'ಶಬ್ದಾರ್ಥೌ ಸಹಿತೌ ಕಾವ್ಯಂ' ಎಂಬ ಭಾಮಹನ ಹೇಳಿಕೆಯಿಂದ ಪ್ರಾರಂಭವಾಗಿ 'ಗುಡಿಸಲಿನಲ್ಲಿ ಅರಳುವ ಗುಲಾಬಿ ನಕ್ಷತ್ರ ನನ್ನ ಕವನ' ಎಂಬ ಸಿದ್ಧಲಿಂಗಯ್ಯನವರ ಕಾವ್ಯ ಧ್ವನಿಯವರೆಗೂ ಕಾವ್ಯದ ವಿಸ್ತಾರತೆ ಹರಡಿಕೊಂಡಿದೆ. ಆದರೆ ಶಬ್ದ ಮತ್ತು ಅರ್ಥಗಳ ಜಾಡು ಹಿಡಿದು ಹೊರಟ ಭಾರತೀಯ ಅಲಂಕಾರರಿಗಿಂತ ವಾಚ್ಯವೆನಿಸಿಕೊಳ್ಳುತ್ತಲೇ ಸಮಾಜಮುಖಿ ನೆಲೆಯಲ್ಲಿ ಕಾವ್ಯ ರಚನೆ ಕೈಗೊಂಡ ದಲಿತ ಕವಿಗಳು ಕನ್ನಡ ಕಾವ್ಯ ಲೋಕದಲ್ಲಿ ಒಂದು ಹೊಸ ಸಂಚಲನ ಉಂಟುಮಾಡಿದರು.

ಕಾವ್ಯ ತನ್ನ ಅಂತರಂಗದ ಧ್ವನಿಗಳನ್ನು ಹೊರಹಾಕಲಿಕ್ಕೆ ಉಪಮೆ, ರೂಪಕಗಳ ಮೊರೆ ಹೋಗುವುದು ಅನಿವಾರ್ಯ. ಏಕೆಂದರೆ ಕೇವಲ ಒಂದೇ ಒಂದು ರೂಪಕ ಕವಿಯ ಇಡೀ ಆಶಯಗಳನ್ನು ಪ್ರತಿಬಿಂಬಿಸುವಲ್ಲಿ ಯಶಸ್ವಿಯಾಗುತ್ತಿದ್ದು, ಪ್ರಾಚೀನದಿಂದ ಆಧುನಿಕತೆವರೆಗೆ ಇಂತಹ ಪ್ರತಿಮೆಗಳನ್ನು ಬಳಸಿಕೊಂಡ ಕವಿಗಳು ಸೌಂದರ್ಯ, ಸಂತೋಷಗಳಿಗಾಗಿ ಮತ್ತು

ಆ ಮೂಲಕ ಹುಟ್ಟುವ ಜೀವನ ಮೌಲ್ಯಗಳಿಗಾಗಿ ಬಳಸಿದರು. ಭಾಮನನಂತಹ ಆಲಂಕಾರಿಕನೂ ಕೂಡ ಜೀವನ ಮೌಲ್ಯಗಳನ್ನು ಆನಂದದ ಮೂಲಕ ಕಾವ್ಯ ಎತ್ತಿ ಹಿಡಿಯಬೇಕು ಎನ್ನುತ್ತಾನೆ.

ಮಾತು ಮಾತು ಮಥಿಸಿ ಬಂದ ನಾದದ ನವನೀತಾ
ಹಿಗ್ಗ ಬೀರಿ ಹಿಗ್ಗಲಿತ್ತು ತನ್ನ ತಾನೆ ಪ್ರೀತಾ
ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತಾ
ಭೃಂಗದ ಬೆನ್ನೇರಿ ಬಂತು....[೩೦]

ಬೇಂದ್ರೆ ಅವರ ಈ ಸಾಲುಗಳು ಕಾವ್ಯ ಹೊರಹೊಮ್ಮುವ ಸಂದರ್ಭ ಅದೊಂದು ನಾದದ ನವನೀತದಂತೆ ಹಾಗೂ ಸಂತೋಷದ ಸಂದರ್ಭಗಳೆಂದು ಹೇಳಿವೆ. ಆದರೆ ಕಾವ್ಯವು ಅರ್ಥವಿಲ್ಲದೆ, ಸ್ವಾರ್ಥವಿಲ್ಲದೆ ಬರಿಯ ಭಾವಗೀತೆಗಳಾಗಿ ಉಳಿಯಲು ಸಾಧ್ಯವೆ? ಇದನ್ನು ಪ್ರಶ್ನಿಸಿಕೊಂಡರೆ ದಲಿತ ಕಾವ್ಯದ ಅಭಿವ್ಯಕ್ತಿಯ ಹಿಂದಿನ ಉದ್ದೇಶಗಳು ಅರ್ಥವಾಗಲು ಸಾಧ್ಯ. ಕಾವ್ಯವನ್ನು ಸಾಮಾಜಿಕ ಬದಲಾವಣೆಗೆ ಹೆಚ್ಚು ತುಡಿಯುವಂತೆ ಮಾಡಿದ ದಲಿತ ಕವಿಗಳು ಮೇಲಿನ ಆಶಯಕ್ಕಿಂತ ಭಿನ್ನ ನೆಲೆಗೆ ತಲುಪಿರುವುದನ್ನು ಕಾಣಬಹುದಾಗಿದೆ. ಕಾವ್ಯದ ಹೊರಹೊಮ್ಮುವಿಕೆ ಕುರಿತು ಅನೇಕ ಕವಿತೆಗಳು ಬಳಸಿರುವ ಉಪಮೆಯೂ ಕೂಡ ಸೌಂದರ್ಯದ ಆರಾಧನೆಯಲ್ಲೇ ತೊಡಗಿವೆ. ಉದಾಹರಣೆಗೆ 'ಬಳ್ಳಿಯೊಡಲ ಕುಸುಮದಂತೆ ಕಾವ್ಯ ಹುದುಗಿದೆ' ಎನ್ನುವಾಗ ಬಳ್ಳಿ, ಕುಸುಮ, ನಿಸರ್ಗದೊಳಗಿನ ಚೆಲುವ ತಾಣಗಳು. ಹೂವು, ಗಂಧ, ದುಂಬಿ, ಜೇನು, ಮಕರಂದ, ಬೆಳಗು, ಬೈಗು, ಕಾಡು, ಬೆಟ್ಟ, ನದಿ, ಸಮುದ್ರ, ಮರ, ಗಿಡ, ಬಳ್ಳಿ, ಇವೆಲ್ಲವೂ ಇಡೀ ಕಾವ್ಯ ಪ್ರಪಂಚವನ್ನೇ ಆವರಿಸಿವೆ. ಆವರಿಸಿ ಚೆಲುವ ಸೂಸಿವೆ. ಮುದುಡಿದ ಮನಗಳಿಗೊಂದಿಷ್ಟು ಚೇತನದ ಚಿಲುಮೆಯಾಗಿವೆ. ಆದರೆ ಕ್ರಾಂತಿ ಕವಿಗಳಲ್ಲಿ ಇವು ಇದಕ್ಕಿಂತ ಭಿನ್ನವಾದ ನೆಲೆಯಲ್ಲಿ ಮೂಡಿಬಂದಿವೆ. ಪ್ರತಿಮೆಗಳನ್ನು ಪಲ್ಲಟಿಸುತ್ತಲೇ ಭಾಷೆಯನ್ನು ಹೊಸದಾಗಿ ಕಟ್ಟುವ ಪ್ರಯತ್ನ ಇಲ್ಲಿದೆ. ಈ ಪ್ರಯತ್ನದೊಂದಿಗೆ ಸಾಮಾಜಿಕ ಬದಲಾವಣೆಯ ಕಡೆಗೆ ಸಂಘಟಿಸುವುದು ಇವರ ಧ್ಯೇಯವೂ ಆಗಿದೆ.

ಮಾವು ಚಿಗುರಿದಂತೆ
ಚಿಗುರಬೇಕು
ಹೂವು ಅರಳಿದಂತೆ
ಅರಳಬೇಕು
ಹಕ್ಕಿ ಹಾಡಿದಂತೆ

ಹಾಡಾಗಬೇಕು

ರವಿ ಬೆಳಗಿದಂತೆ

ಬೆಳಗಬೇಕು೩೧

ಮಾವು, ಹೂವು, ಹಕ್ಕಿ, ರವಿಯನ್ನು ಉಪಮೇಯವಾಗುಳ್ಳ ಈ ಕವಿತೆಯ ಸಾಲುಗಳು ಸಹಜತೆಗೆ ಹೆಚ್ಚು ಒತ್ತು ನೀಡಿವೆ. ಕವಿತೆ ಕಟ್ಟುವುದು ಅತ್ಯಂತ ಧ್ಯಾನಸ್ಥಸ್ಥಿತಿ ಎಂಬುದಕ್ಕಿದು ಭಿನ್ನತೆಯೊಡ್ಡಿದೆ. ಇದು ದಲಿತ ಕಾವ್ಯ ಕಂಡ ಸಹಜತೆಯೂ ಹೌದು. ತನ್ನ ದುಡಿಮೆಯ ಅವಧಿಯಲ್ಲಿ ಅಂತರಾಳದಿಂದ ಹಾಡುಗಳ ಹೊಮ್ಮಿಸಿ, ಮೌಖಿಕ ಪರಂಪರೆಯಲ್ಲೇ ಮುಂದುವರೆಸಿಕೊಂಡು ಬಂದ ಜನಪದರ ಕಾವ್ಯ ಗತ್ತು ಮತ್ತೊಮ್ಮೆ ತೆರೆಗೆ ಬಂದಂತೆ ಹೊಸರೂಪದಲ್ಲಿ ದಲಿತ ಕಾವ್ಯ ಕಾಣಿಸಿಕೊಂಡಿದೆ. ಮಾವು, ಹೂವು, ಹಕ್ಕಿ ಸೂರ್ಯ ಮುಂತಾದ ಉಪಮೆಗಳು ನಿಸರ್ಗದ ರಮಣೀಯತೆಯಲ್ಲಿ ತಲ್ಲೀನತೆ ಹೊಂದಿ ಆನಂದ ಹೊಮ್ಮಿಸುತ್ತಿದ್ದಂತಹುಗಳು. ಇವುಗಳಿಗೆ ಸಹಜ ಸ್ಪರ್ಶ ನೀಡಿ ಕಾವ್ಯ ರೂಪ ನೀಡಿದಾಗ ಉಂಟಾಗುವ ಪರಿವರ್ತಿತ ಸಹಜತೆಯ ಕಡೆಗೆ ಕಾವ್ಯ ಪ್ರತಿಮೆಗಳು ಮುಖ ಮಾಡಿದವು.

ಕಾವ್ಯದಲ್ಲಿ ಬಳಸಲ್ಪಡುವ ಉಪಮೆ, ರೂಪಕ, ಪ್ರತಿಮೆಗಳು ಕವಿಯಿಂದ ಕವಿಗೆ ಭಿನ್ನ ಮತ್ತು ಕಾಲದಿಂದ ಕಾಲಕ್ಕೆ ಅವುಗಳು ಭಿನ್ನರೂಪದಲ್ಲಿ ಹೊರಬರುವುದು ಸಹಜ. ಈ ರೀತಿಯ ಭಿನ್ನತೆಗೆ ಕವಿಯ ಕಾಲ, ದೇಶ, ಸಾಮಾಜಿಕ ಪರಿಸರವೂ ಕಾರಣವಿರಬಹುದು. ಅಥವಾ ಕಂಡ ಜಗತ್ತೇ ಆಗಿರಬಹುದು. ಲೋಕದ ಜಡತ್ವಗಳನ್ನೆಲ್ಲಾ ತನ್ನ ಕಾವ್ಯ ಮುಖೇನ ಚೇತನಗೊಳಿಸುವ ಕವಿಗೂ, ಅಸಹಾಯಕ ಜನರ ಅಂತರಾಳದ ನೋವುಗಳಿಗೆ ಮಿಡಿದು ಕ್ರಾಂತಿಗೆ ಕರೆಕೊಡುವ ಕವಿಗೂ ಮೂಲಭೂತವಾಗಿ ಅನೇಕ ವ್ಯತ್ಯಾಸಗಳಿವೆ. ೧೦ನೇ ಶತಮಾನದ ಕಾವ್ಯ ಪರಂಪರೆಗೂ ೧೨ನೇ ಶತಮಾನದ ಕಾವ್ಯ ಪರಂಪರೆಗೂ ಇರುವ ವ್ಯತ್ಯಾಸ ಗಮನಿಸಿದರೆ ಸಾಕು ಇದರ ಒಳಾರ್ಥ ತೆರೆದುಕೊಳ್ಳುತ್ತದೆ.

ಎಜ್ರಾಪೌಂಡ್ ಹೇಳುವ ಮಾತು ಇಲ್ಲಿ ನೆನಪಾಗುತ್ತಿದೆ 'ಬೃಹತ್ ಕೃತಿಗಳನ್ನು ಉತ್ಪಾದಿಸುವುದಕ್ಕಿಂತ ಒಂದು ಅಪ್ಪಟ ಪ್ರತಿಮೆಯನ್ನು ನಿರ್ಮಿಸುವುದು ಮೇಲು' ಎನ್ನುವುದರ ಜೊತೆಯಲ್ಲೇ ನೆನಪಾಗುವ ಮತ್ತೊಂದು ಮಾತು, ಎನ್.ಕೆ. ಹನುಮಂತಯ್ಯನವರ 'ಚಿತ್ರದ ಬೆನ್ನು' ಕೃತಿಗೆ ಮುನ್ನುಡಿ ಬರೆಯುತ್ತಾ ನಟರಾಜ್ ಹುಳಿಯಾರ್ ಅವರು 'ಈಚಿನ ದಿನಗಳಲ್ಲಿ ಗೋವು ತಿಂದು ಗೋವಿನಂತಾದವನು ಎನ್ನುವಷ್ಟು ಒರಿಜಿನಲ್ ಆದ ರೂಪಕವೊಂದನ್ನು ನಾನು ಕಂಡಿರಲಿಲ್ಲ' ಎಂದಿದ್ದಾರೆ. ಇಲ್ಲಿ ಕಾಡುವ ಪ್ರಶ್ನೆಯೆಂದರೆ ಈ ಒರಿಜಿನಲ್ ಯಾವಾಗ ಬರುತ್ತದೆ. ಬಹುಶಃ ಕವಿ ತನ್ನ ಕಾಲ ದೇಶ ಸ್ಥಿತಿಗತಿ ಮುಂತಾದವುಗಳಿಂದ ದೂರವಾಗಿ ಮೈಮರೆವಿನ ಹಾಡು ಬರೆಯುತ್ತಾ, ತಕ್ಷಣದ ಬಿಡುಗಡೆಗೆ ಒಂದು ಅದಮ್ಯ ಲೋಕದ ಕಲ್ಪನಾಜಗತ್ತಿನಲ್ಲಿ ಕಾಲ ಕಳೆಯುತ್ತಾ, ಕಾವ್ಯದಲ್ಲಿ ಆ ಕಲ್ಪನಾ ಜಗತ್ತನ್ನು ದಾಖಲಿಸುವ

ಪ್ರಕ್ರಿಯೆಯೊಳಗೆ ಈ ತರದ ಒರಿಜಿನಾಲಿಟಿ ಆದ ಉಪಮೆಗಳು ಬರಲು ಸಾಧ್ಯವಿಲ್ಲವೇನೋ. ಆದರೆ ವಾಸ್ತವದ ಕವಿ ಹೇಳುವುದು

ದೊಡ್ಡಗೌಡರ ಬಾಗಿಲಿಗೆ
ನಮ್ಮ ಮೂಳೆಯ ತ್ವಾರಣ
ನಮ್ಮ ಜನಗಳ ಕಾಲುಕಯ್ಯಿ
ಕಂಬ ಅವರ ಹಟ್ಟಿಗೆ[೩೨]

'ತೋರಣ' ಶುಭ ಸೂಚಕದ ಸಂಕೇತ. ಹಬ್ಬ-ಹರಿದಿನಗಳಲ್ಲಿ ಬಹುಮುಖ್ಯವಾಗಿ ಪರಿಗಣಿಸಲ್ಪಡುವ ವಸ್ತು. ಆದರೆ ಇಲ್ಲಿ ಮೂಳೆ ತೋರಣವಾಗಿದೆ. ಎಲೆಗಳಿಂದ ಸಿಂಗರಿಸಿಕೊಂಡ ತೋರಣ ಶುಭ ನುಡಿದರೆ, ಮೂಳೆಗಳಿಂದ ಸಿಂಗರಿಸಿಕೊಂಡ ತೋರಣ ಅಸಹಾಯಕತೆಯ ಜೊತೆಗೆ ದುಡಿವ ಜನರ ಬದುಕು ಬಿಚ್ಚಿಟ್ಟಿದೆ. ಹಾಗೆಯೇ 'ಮೂಳೆ' ದೌರ್ಜನ್ಯಗಳ ಪರಾಕಾಷ್ಠತೆಯ ಸೂಚನೆ. ಮೇಲ್ನೋಟಕ್ಕೆ ಕವಿತ್ವದ ನೆಲೆಯಲ್ಲಿ ಓದುವ ಪಂಡಿತರಿಗೆ ಇದು ಉತ್ಪ್ರೇಕ್ಷಾಲಂಕಾರಕ್ಕೆ ಉತ್ತಮ ಉದಾಹರಣೆಯಾಗಬಹುದು. ಆದರೆ ತನ್ನ ತಂದೆಯ ಹೆಗಲ ಮೇಲೆ ನೊಗ ನೋಡಿದ ಕವಿ ಸಿದ್ಧಲಿಂಗಯ್ಯನಂತವರಿಗೆ ಇದು ಶೋಷಣೆ ಬಿಚ್ಚಿಡುವ ಸಾಲುಗಳಾಗೇ ನಿಲ್ಲುತ್ತವೆ. ಈ ಕವಿತೆಯ ಮುಂದಿನ ಸಾಲುಗಳು ಹೀಗಿವೆ.

ಅವರ ತೆಂಗಿನ ತೋಟದಲ್ಲಿ
ನಮ್ಮ ರಕ್ತದ ಎಳನೀರು
ಅವರ ಅಮಲಿನ ಗುಂಗಿನಲ್ಲಿ
ಕೂಲಿ ಹೆಣ್ಣಿನ ಕಣ್ಣೀರು[೩೩]

ತೆಂಗಿನಲ್ಲಿ ರಕ್ತದ ಎಳನೀರು ಕಂಡ ಮೊದಲ ನೋಟ ದಲಿತ ಕವಿಗಳದು. ಇಲ್ಲಿ ಬರುವ ಸಾಲುಗಳನ್ನು ಉತ್ಪ್ರೇಕ್ಷಾಲಂಕಾರ ಎನ್ನುವುದಾದರೆ ಅದು ವಸ್ತುಸ್ಥಿತಿ ಅಲ್ಲ ಎಂದಾಗುತ್ತದೆ. ಕವಿಗಿರುವ ಸಾಮಾಜಿಕ ಒತ್ತಡ ಮತ್ತು ಕಂಡುಂಡ ಪರಿಸ್ಥಿತಿ ಇಂತಹ ಪ್ರತಿಮೆಗಳನ್ನು ಬಳಸಲು ಅನುವಾಗುತ್ತಿದೆ. ತಮ್ಮ ಶೋಷಣೆಯ ತೀವ್ರ ನೆಲೆಗಳನ್ನು ತನ್ನನ್ನು ಸುತ್ತುವರೆದಿರುವ ಸಮಾಜದ ಮೂಲಕವಾಗಿ ಕಟ್ಟಿಕೊಡುವ ಧ್ಯೇಯ ದಲಿತ ಕವಿಗಳದ್ದು.

ವರ್ಗ ವೈರುಧ್ಯದ ಭೀಕರ ಪರಿಣಾಮಗಳನ್ನು ಸಮಂಜಸವಾಗಿ ಕಟ್ಟಿಕೊಡುತ್ತಿರುವ ಮೇಲಿನ ಕವಿತೆ ದಲಿತ ಲೋಕದ ಶತಶತಮಾನಗಳ ಬದುಕನ್ನು ಅಭಿವ್ಯಕ್ತಗೊಳಿಸಿದೆ. ಇಂತಹ ಕವನವನ್ನು ಡಿ.ಆರ್. ನಾಗರಾಜ ಅವರು ಉತ್ಪ್ರೇಕ್ಷಾಲಂಕಾರದ ನೆಲೆಯಲ್ಲಿ ನೋಡಿದರೆ,

'ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬಂಡಾಯ' ಕೃತಿಯಲ್ಲಿ ಡಾ. ಚಂದ್ರಕಾಂತ್ ಚವ್ಹಾಣ್ ಅವರು "ಊರಗೌಡರ ಹಟ್ಟಿ ನಿಂತಿರುವುದು ದುಡಿಯುವ ಜನಗಳ ದುಡಿಮೆಯ ಆಧಾರದ ಮೇಲೆ, ಶ್ರೀಮಂತರ ಬೇಕು ಬೇಡಗಳಿಗೆ ದುಡಿಮೆಗಾರರ ಬದುಕು ವಸ್ತುವಾಗಿರುವುದನ್ನು ಬಹು ಸುಂದರವಾಗಿ ವರ್ಣಿಸಲಾಗಿದೆ."[೩೪] ಎಂದಿದ್ದಾರೆ. ಇಲ್ಲಿ ತಟ್ಟನೆ ಹಿಡಿದು ನಿಲ್ಲಿಸುವುದು ಯಾವುದು ಉತ್ಪ್ರೇಕ್ಷಾಲಂಕಾರ ಮತ್ತು ಯಾವುದು ಸುಂದರ. ಈ ಆಲೋಚನೆಗಳು ದುಡಿಯುವ ಸಮುದಾಯದ ನೆಲೆಗಳಿಂದ ಹುಟ್ಟಲಿಕ್ಕೆ ಸಾಧ್ಯವೇ ಇಲ್ಲ. ಇಲ್ಲಿ ಸುಂದರ ಎನ್ನುವುದು ಕಾವ್ಯವೋ, ಕಾವ್ಯ ಬಂಧವೋ ಅಥವಾ ದಲಿತ ಹತಾಶಾ ಸ್ಥಿತಿಯೋ ಗೊತ್ತಿಲ್ಲ. ಇಂತಹ ಅಪಾಯಕಾರಿ ವಿಶ್ಲೇಷಣೆಗಳೇ ದಲಿತ ಕಾವ್ಯವನ್ನು ಸಮಗ್ರವಾಗಿ ನೋಡುವುದಕ್ಕೆ ತಡೆಯನ್ನುಂಟುಮಾಡಿವೆ. ಪಾರಂಪರಿಕ ನೆಲೆಗಟ್ಟಿನ ವಿಮರ್ಶಾ ದೃಷ್ಟಿಕೋನ ಎಂದು ಇವುಗಳನ್ನು ಸೀಮಿತಗೊಳಿಸುವುದಕ್ಕಿಂತ ದಲಿತ ಜಗತ್ತಿನ ಹೊರ ಆವರಣದಿಂದ ಹುಟ್ಟಿದ ಆಲೋಚನೆಗಳೆಂದು ವಿಸ್ತರಿಸುವುದು ಮೇಲು.

ಅಲಂಕಾರ ಎಂದರೆ ಜೋಡಿಸುವುದು ತೊಡಿಸುವುದು ಎಂಬರ್ಥವಿದೆ. ಹಾಗಾಗಿಯೇ ಕಾವ್ಯದ ಸೌಂದರ್ಯವೇ ಅಲಂಕಾರ ಎಂಬ ಮಾತು ಚಾಲ್ತಿಯಲ್ಲಿದೆ. ಆದರೆ ಸಹಜ ಸೌಂದರ್ಯ ಇಲ್ಲದಿದ್ದರೆ ಎಷ್ಟೇ ತೊಡಿಸಿದರೂ, ಜೋಡಿಸಿದರೂ ಅದು ನಿರರ್ಥಕ ಎಂಬ ಮಾತು ಅದರ ಜೊತೆಯಲ್ಲೇ ಇದೆ. ಇಂತಹ ಅಲಂಕಾರಗಳನ್ನು ಬಳಸುವಾಗ ಕವಿಯ ಉದ್ದೇಶ ಯಾವುದರ ಕಡೆಗಿರುತ್ತದೆ ಎಂಬುದೂ ಮುಖ್ಯ. ತನ್ನ ಉದ್ದೇಶ ಸಾಧನೆಗಾಗಿ ಪ್ರತಿಮೆಗಳ ಮೊರೆಹೋಗುವ ಕವಿಗೂ, ಪ್ರತಿಮೆಗಳ ಸಹಜತೆಯಲ್ಲಿಯೇ ತನ್ನ ಉದ್ದೇಶ ಮಂಡಿಸುವ ಕವಿಗೂ ಮೂಲಭೂತ ವ್ಯತ್ಯಾಸವಿದೆ. ಇದಕ್ಕೆ ಅವರು ನಿಂತ ನೆಲೆಯೂ ಕಾರಣವಾಗಿರಬಹುದು.

ಇವರು ಬೆವರಿನ ನದಿಯ
ಮೈಗೆ ಸುತ್ತಿಕೊಂಡು ಮಣ್ಣ ಮುಟ್ಟಿದರೆ
ಹುಟ್ಟುವುದು
ನೆಲದ ಕಾವಲುಗಾರರ ಹೊಟ್ಟೆಗಿಷ್ಟು
ಕೂಳು[೩೫]

ಇಲ್ಲಿ ಬೆವರಿನ ನದಿಯನ್ನು ಮೈಗೆ ಸುತ್ತಿಕೊಂಡ ಜನರಿದ್ದಾರೆ. ಈ ನದಿಯ ಫಲವನುಣ್ಣ ನೆಲದ ಕಾವಲುಗಾರರೂ ಇದ್ದಾರೆ. ಇವರ ನಡುವಿನ ಶೋಷಣೆಯ ತೀವ್ರತೆಯನ್ನು ಕವಿ 'ಬೆವರಿನ ನದಿ' ರೂಪಕದ ಮೂಲಕ ಹಿಡಿದಿಟ್ಟಿದ್ದಾರೆ. 'ನದಿ' ಚಲನಶೀಲತೆಯ ಸಂಕೇತ. ಹಾಗೂ ಜೀವದಾತೆಯ ಸಂಕೇತ. ಇಂತಹ ನದಿ ಬಹಳ ಹಿಂದಿನಿಂದಲೂ ಎಲ್ಲ ಕಾಲದ

ಕವಿಗಳಲ್ಲೂ ಹರಿಯುತ್ತಲೆ ಸಾಗುತ್ತಿದೆ. ಆದರೆ ದಲಿತ ಕಾವ್ಯ ಬಂದ ಕೂಡಲೇ ಆ ನದಿಗೆ ಬೆವರು ಸೇರ್ಪಡೆಗೊಂಡಿದೆ ಎಂದಲ್ಲ; ಬೆವರೇ ನದಿಯಾಗಿ ಹರಿಯಲು ಪ್ರಾರಂಭಿಸಿದೆ. ಇಲ್ಲಿ ಕವಿ ಹಳೆಯ ರೂಪಕ ಮುರಿದು ಹೊಸ ಪರಿಭಾಷೆಯನ್ನು ಸೃಷ್ಟಿಸಿದ್ದಾರೆ.

ಮೇಲಿನ ಈ ಚರ್ಚೆ ಕೇವಲ ಉಪಮೆಗಳ ಒಳಗಣ್ಣಿಡಿದು ವಿಶ್ಲೇಷಿಸುವ ಮಿತಿಗಷ್ಟೇ ಸೀಮಿತಗೊಳ್ಳುವ ಅಪಾಯವೂ ಇರುತ್ತದೆ. ಏಕೆಂದರೆ ಮೇಲಿನ ಕವಿತೆಯ ಸಾಲುಗಳಲ್ಲಿರುವ ಪ್ರತಿಮೆಗಳು ಎಷ್ಟು ಮುಖ್ಯವೋ ಅದರಿಂದ ಹೊರಹೊಮ್ಮುವ ಆಶಯಗಳೂ ಅಷ್ಟೇ ಮುಖ್ಯ. ಬೆವರಿನ ನದಿಯನ್ನು ಮೈಗೆ ಸುತ್ತಿಕೊಂಡ ಜನರೂ ಇದ್ದಾರೆ, ನೆಲದ ಕಾವಲುಗಾರರೂ ಇದ್ದಾರೆ. ದುಡಿಯದ ಜನ, ದುಡಿಮೆಯ ಪ್ರತಿಫಲವನ್ನು ಅನುಭೋಗಿಸುತ್ತಿರುವ ವಾಸ್ತವ ಚಿತ್ರಣವನ್ನು ಕಾವ್ಯ ಕಟ್ಟಿಕೊಡುತ್ತಿದೆ, ಆದರೆ ನೆಲದ ಕಾವಲುಗಾರನ ಹೊಟ್ಟೆಗಿಷ್ಟು ಕೂಳು ಎನ್ನುವುದು ದಲಿತರ ದುಡಿಮೆಯನ್ನು ಸೀಮಿತ ನೆಲೆಯಲ್ಲಿ ನೋಡಿದಂತೆ ಭಾಸವಾಗುತ್ತದೆ. ಏಕೆಂದರೆ ಸಂಪತ್ತಿನ ಉತ್ಪಾದಕ ವರ್ಗವೇ ಇಂದು ಕೋಟ್ಯಾಧಿಪತಿಗಳಾಗಿ ಮೆರೆಯುತ್ತಿರುವವರಿಗೆ ಕಾರಣಕರ್ತರಾಗಿದ್ದಾರೆ. ಈ ಸಂಗತಿಯೇ ಬಹುಮುಖ್ಯವಾಗಿ ಬೆಳಕಿಗೆ ಬರಬೇಕಾಗಿರುವುದು.

ದಲಿತ ಕಾವ್ಯ ಮೂಲತಃ ಸಮುದಾಯದ ಕಾವ್ಯ. ದುಡಿಯುವ ಜನರ ದುಡಿಮೆ ಕಾವ್ಯ. ಇಲ್ಲಿಂದಲೇ ಬಂದ ಕವಿ ತನ್ನ ಶೋಷಣೆಯ ನೆಲೆಗಳನ್ನು ಅನಾವರಣಗೊಳಿಸಲು ತನ್ನ ಬದುಕಿನ ಸುತ್ತಲಿನ ವಾಸ್ತವತೆಯನ್ನು ಪ್ರತಿಮೆಗಳನ್ನಾಗಿ ಸೃಷ್ಟಿಸುತ್ತಾನೆ. ಅದಕ್ಕೆ ಇಲ್ಲಿ ಬೆವರಿನ ರೂಪಕಗಳಿವೆ. ಬೆವರನ್ನೇ ಭೂಮಿಗಿಳಿಸಿ ಬೆಳೆಬೆಳೆದು ಹಸಿವಿನಿಂದ ಕಂಗಾಲಾದ ಹತಾಶಾ ಭಾವಗಳ ಎಳೆಗಳಿವೆ. ಅಂತರಂಗದ ತುಡಿತಗಳಿವೆ.

ದಲಿತ ಕಾವ್ಯ ತನ್ನ ಅಂತರಂಗದಲ್ಲಿ ಶೋಷಣೆ, ಅವಮಾನ ಮತ್ತು ಪ್ರತಿಭಟನೆಯನ್ನೇ ಮುಖ್ಯ ಅಭಿವ್ಯಕ್ತಿಯನ್ನಾಗಿ ಮಾಡಿಕೊಂಡಿದೆ. ಇದಕ್ಕೆ ತಾನು ನಿಂತ ನೆಲದ ಒತ್ತಡವೂ ಕಾರಣವಿರಬಹುದು. ಆದ್ದರಿಂದ ಈ ಶೋಷಕ ಮತ್ತು ಶೋಷಿತರ ನೆಲೆಗಳಿಂದ ಹೊರಟ ಪ್ರತಿಮೆಗಳು ಸಹಜವಾಗೇ ಭಿನ್ನತೆಯಿಂದ ಕೂಡಿರುತ್ತವೆ. ಶೋಷಕರ ಸ್ಥಾನದಲ್ಲಿದ್ದು ಶೋಷಿತರ ಬಗ್ಗೆ ಬರೆವ ಅನುಕಂಪಪೂರಿತ ಬರವಣಿಗೆಯೂ ಕೂಡ ವಾಸ್ತವದ ಅರಿವು ಮೂಡಿಸುವಲ್ಲಿ ತನ್ನ ಅಸಹಾಯಕತೆಯನ್ನು ಖಂಡಿತವಾಗಿ ತೋರ್ಪಡಿಸಿಕೊಳ್ಳುತ್ತದೆ. ಏಕೆಂದರೆ 'ದುಡಿ'ಯ ಮೂಲಕ ತನ್ನ ಅಸಹಾಯಕತೆ ಮತ್ತು ನೋವನ್ನು ಹೊರಹಾಕುತ್ತಿದ್ದ ಚೋಮ ಇಂದು ಪ್ರತಿಭಟಿಸಲು ಮುಂದಾಗಿದ್ದಾನೆ. ಬಿ.ಎಂ. ಪುಟ್ಟಯ್ಯನವರು ಹೇಳುವ ಹಾಗೆ "ಮಾನವರಿಂದ ಮಾನವರ ಶೋಷಣೆಯ ವ್ಯಾಪ್ತಿಯ ಹೊರಗಿನಿಂದ ಪ್ರತಿಮೆ ರೂಪಕಗಳನ್ನು ಕನ್ನಡ ಕಾವ್ಯ ಹೊಂದಿತ್ತು. ದಲಿತ ಕಾವ್ಯ ಮಾನವರಿಂದ ಮಾನವರ ಶೋಷಣೆಯ ವ್ಯಾಪ್ತಿಯಲ್ಲೇ ಪ್ರತಿಮೆ ರೂಪಕಗಳನ್ನು ಸೃಷ್ಟಿಸಿತು."[೨೬] ಹಾಗಾಗಿ ಆ ರೂಪಕ ಮತ್ತು ಪ್ರತಿಮೆಗಳು ಶೋಷಣೆಯ ವಿನ್ಯಾಸವನ್ನು ಬಿಚ್ಚಿಟ್ಟವು.

ಕಾವ್ಯ ಆಸ್ವಾದನೆಗೆಂದು ನಂಬಿದ್ದ ಜಗತ್ತಿನಲ್ಲಿ ಆಶ್ಚರ್ಯಕರ ರೀತಿಯಲ್ಲಿ ಅದನ್ನು ಮುರಿದು ಕಾವ್ಯ ಕಟ್ಟಿದವರು ದಲಿತರು, ಕಾವ್ಯ 'ಆನಂದಾಯ' ಎನ್ನುವ ಸಾಂಪ್ರದಾಯಿಕ ದೃಷ್ಟಿಕೋನಕ್ಕೆ ಪೆಟ್ಟುಕೊಟ್ಟರು. ಏಕೆಂದರೆ ದಲಿತರಿಗೆ ಕಾವ್ಯದ ತಂತ್ರಗಾರಿಕೆಗಿಂತ ಶೋಷಣೆಯ ನೆಲೆಗಳನ್ನು ಬಿಚ್ಚಿಡಬೇಕಿತ್ತು. ಬಿಚ್ಚಿಟ್ಟು ಅನ್ಯಾಯದ ವಿರುದ್ಧ ಜನರನ್ನು ಎಚ್ಚರಗೊಳಿಸಬೇಕಾಗಿತ್ತು.

ಎಲ್ಲಿದ್ದರೋ ಅವರು ಯಂಗಿದ್ದರೋ ಅವರು
ಎಚ್ಚೆತ್ತ ಸಿಂಹಗಳು ನನ್ನ ಜನರು
ಎಷ್ಟು ಲೋಕದ ಕನಸು ಕಾಣುತ್ತಿದ್ದರೋ ಅವರು
ಎದ್ದ ಬಿರುಗಾಳಿಗಳು ನನ್ನ ಜನರು[೩೭]

ದಲಿತ ಕಾವ್ಯಕ್ಕೆ ಜನರ ಎಚ್ಚರಿಕೆಯೇ ಮುಖ್ಯ. ಇಲ್ಲಿ ಬಂದಿರುವ ಎಚ್ಚೆತ್ತ ಸಿಂಹಗಳು ಹಾಗೂ ಎದ್ದ ಬಿರುಗಾಳಿಗಳು ವಿನಾಶದ ಸಂಕೇತ. ಆದರೆ ವಿನಾಶದ ನಂತರ ಉಂಟಾಗುವ ಸೃಷ್ಟಿಯ ಹೊಸತನಗಳೇ ದಲಿತ ಕಾವ್ಯಕ್ಕೆ ಮುಖ್ಯ. ಅದಕ್ಕೆ ಇಲ್ಲಿ ಬರುವ ಬಿರುಗಾಳಿ, ಎಚ್ಚೆತ್ತ ಸಿಂಹಗಳು, ಗುಡುಗು, ಮಿಂಚು, ಭೂಕಂಪನ, ಹಸಿದ ಹುಲಿ, ಬೆಂಕಿ, ಕಚ್ಚುವ ಹಾವುಗಳು, ರಕ್ತದೋಕುಳಿ, ಹತ್ತಿ ಉರಿವ ಮನಸು, ಸಿಡಿಮದ್ದು, ಬಾಂಬು ಮುಂತಾದ ರೂಪಕಗಳು ಹೊಸ ಸೃಷ್ಟಿಯ ಸಂಕೇತಗಳಾಗಿ ಮಾರ್ಪಟ್ಟಿವೆ.

ದಲಿತರು ಶೋಷಣೆಯ ವಿನಾಶಕ್ಕೆ ನಾಂದಿ ಹಾಡಬೇಕೆಂಬುದು ಕವಿತೆಯ ಮುಖ್ಯ ಉದ್ದೇಶ. ಆದರೆ ಅದು ಆರಿಸಿಕೊಳ್ಳಬೇಕಾಗಿರುವ ಕ್ರಮದ ಕುರಿತು ಸ್ಪಷ್ಟ ಅರಿವಿಲ್ಲ. ಕನಸು ಒಮ್ಮೆಲೇ ಬಿರುಗಾಳಿಯೋಪಾದಿಯಲ್ಲಿ ಎದ್ದಾಗ ಎದುರಿಗಿನ ವಸ್ತುಗಳೆಲ್ಲಾ ಚೆಲ್ಲಾಪಿಲ್ಲಿಯಾಗುತ್ತವೆ. ಈ ಬದಲಾವಣೆ ಸಮಾಜದಲ್ಲಿ ಆಗಬೇಕು. ನಿಂತ ಜಡತ್ವವೆಲ್ಲಾ ಬದಲಾಗುತ್ತಲೇ ಚೇತನಗೊಳ್ಳಬೇಕು. ಅದು ದಲಿತರಿಂದ ಸಾಧ್ಯ ಎಂಬುದು ಮೇಲಿನ ಕವಿತೆ ನಿರೂಪಿಸುತ್ತಿದೆ. ಇಲ್ಲಿ ಹುಲಿಗಳು, ಸಿಂಹಗಳು, ಇರುವೆಗಳು, ಹಾವುಗಳು ಮುಂತಾದ ಸಂಕೇತಗಳ ಮೂಲಕ ದಲಿತರನ್ನು ಕಟ್ಟಿಕೊಡಲಾಗಿದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಇವುಗಳಿಗೆ ಯಾವುದಕ್ಕೂ ಮಾತು ಬರುವುದಿಲ್ಲ, ಆದರೆ ಒಂದು ಧ್ವನಿ ಇದೆ. ಈ ಧ್ವನಿಯೇ ಸಮಸ್ತವನ್ನು ಚೇತನಗೊಳಿಸುತ್ತದೆ. ಇರುವೆಗೆ ಈ ಧ್ವನಿಶಕ್ತಿ ಇಲ್ಲದಿದ್ದರೂ ತನ್ನದೇ ಆದ ಸ್ಪರ್ಶದಿಂದ ಸಂಘಟನೆಯನ್ನು ಮಾಡಬಲ್ಲ ಶಕ್ತಿಯನ್ನು ಹೊಂದಿದೆ. ಇಂತಹ ಶಕ್ತಿ ದಲಿತರಲ್ಲಿ ಅಡಗಿದೆ ಎಂಬ ಮನೋಭಾವವನ್ನು ಅನೇಕ ಕಾವ್ಯಗಳು ಅಭಿವ್ಯಕ್ತಿಸಿವೆ.

ಪ್ರತಿಮೆಗಳನ್ನು ಪಲ್ಲಟ ಮಾಡುವುದು ಕ್ರಾಂತಿ ಕವಿಗಳ ಲಕ್ಷಣ. ಪ್ರತಿಮೆಗಳನ್ನು ಪಲ್ಲಟ ಮಾಡುತ್ತಲೆ ಭಾಷೆಯನ್ನು ಹೊಸದಾಗಿ ಹುಟ್ಟಿಸುವ ಕೆಲಸವನ್ನು ಆರಂಭಿಸುತ್ತಾರೆ. ದಲಿತ

ಕವಿಗಳೂ ಕೂಡ ಇದಕ್ಕೆ ಹೊರತಲ್ಲ. ತಾವು ನಿರೀಕ್ಷಿಸುವ ಆಶಯವನ್ನು ರೂಪಕ ಪ್ರತಿಮೆಗಳ ಮೂಲಕ ಹೇಳಿದರೆ ಅದು ತಟ್ಟದಿರಬಹುದೆಂಬ ಎಚ್ಚರಿಕೆಯೂ ಇದೆ. ಅಥವಾ ತಾವು ನಿರೀಕ್ಷಿಸುವ ಆಶಯವನ್ನು ರೂಪಕ ಪ್ರತಿಮೆಗಳು ಸಮರ್ಥವಾಗಿ ಅಭಿವ್ಯಕ್ತಪಡಿಸಲಾರವು ಎಂಬ ಗುಮಾನಿಯೂ ಇರಬಹುದು. ಅದಕ್ಕೆ ಅವರು ನಿರಾಡಂಬರ ಕಾವ್ಯಕ್ಕೆ ಹೆಚ್ಚು ಒತ್ತು ನೀಡಿದ್ದಾರೆ. ಆದರೂ ಕಾವ್ಯ ಹುಟ್ಟುವಾಗ ತನಗೇ ಗೊತ್ತಿಲ್ಲದಂತೆ ಅನೇಕ ಉಪಮೆಗಳೊಂದಿಗೆ ಜನ್ಮ ತಾಳುತ್ತದೆ. ಅದೂ ತನ್ನ ಪರಿಸರದ ನಿತ್ಯ ನಿರಂತರತೆಯಲ್ಲೇ ಹೋಲಿಕೆಗಳನ್ನು ಸಹಜವಾಗಿ ಪಡೆದುಕೊಳ್ಳುತ್ತದೆ. ಇದು 'ಹೊಳೆದಂಡೆಲಿರುವ ಕರಕೀಯ ಕುಡಿಯಂಗ ಹಬ್ಬುವಾಗೆ ತನ್ನ ತವರುಮನೆ ಹಬ್ಬಲಿ' ಎಂದುಕೊಳ್ಳುವ ಜನಪದ ಮಹಿಳೆಯೊಳಗೆ ಹುಟ್ಟಿದ ಉಪಮೆಯಂತೆ. ಇದು ದಲಿತ ಕವಿಗಳಲ್ಲಿ ಅಕ್ಷರಶಃ ಮೈದಾಳಿದೆ.

> ಬೆಟ್ಟಗಳಾ ಒಡೆದವು
> ಬಂಡೆಗಳಾ ಹಿಂಡಿದೆವು
> ನಮ್ಮ ರಕ್ತ ಜಲ್ಲಿ ಮಾಡಿ
> ಪ್ರಾಜೆಕ್ಟು ಕಟ್ಟಿದೆವು
> ಸಿರಿಯು ಯಾರಿಗೊ ಶ್ರಮವು ಯಾರಿಗೊ
> ನೇಗಿಲುಗಳ ಹಿಡಿದೆವು ಹೊಲಗಳೆಲ್ಲ ಉತ್ತೆವು
> ನಮ್ಮ ಬೆವರ ನಾಲೆ ಮಾಡಿ ಗದ್ದೆಗಳಿಗೆ ಕಳಿಸಿದೆವು
> ಬೆಳೆಯು ಯಾರಿಗೋ ಗಂಜಿ ಯಾರಿಗೋ[೩೮]

> ಬೆವರಿನಲ್ಲಿ ಜಲ್ಲಿ ಕಲಸಿ
> ರಕ್ತದಲ್ಲಿ ಇಟ್ಟಿಗೆ ಅದ್ದಿ
> ಅಂದವಾದ ಮನೆಯ ಕಟ್ಟಿದೋ ಓ ರಾಮಣ್ಣ
> ಒಡೆಯ ಬಂದು ಒಳಗೆ ನಿಂತನೋ[೩೯]

ಇಲ್ಲಿ ಬರುವ ಬೆಟ್ಟ, ಬಂಡೆ, ರಕ್ತ, ಜಲ್ಲಿ, ಬೆವರು, ಇಟ್ಟಿಗೆ, ಎಲ್ಲವೂ ಒಂದಕ್ಕೊಂದು ಸಂಬಂಧವಿಲ್ಲದಂತಹವು. ಆದರೆ ದಲಿತ ಕಾವ್ಯದಲ್ಲಿ ಇವು ಶ್ರಮದ ನೆಲೆಯನ್ನು ಅನಾವರಣಗೊಳಿಸಲು ಒಂದಾಗಿವೆ. 'ಬಂಡೆ' ನವೋದಯದಲ್ಲಿ ದೃಢತೆ ಮತ್ತು ಕಷ್ಟದ ಸಂಕೇತವಾಗಿ ನಿಂತರೆ ಇಲ್ಲಿ 'ಬಂಡೆಗಳಾ ಹಿಂಡಿದೆವು' ಎನ್ನುವಾಗ ಅದು ಶ್ರಮದ ಪ್ರತೀಕವಾಗಿ ಮಾರ್ಪಾಡು ಹೊಂದಿದೆ. ದಲಿತರು ದಿನನಿತ್ಯ ಇವುಗಳ ಜೊತೆಯೇ ಬದುಕುತ್ತಿರುವುದು. ಬೆವರಿನಲ್ಲಿ ಜಲ್ಲಿ ಕಲಸಿ, ರಕ್ತದಲ್ಲಿ ಇಟ್ಟಿಗೆ ಅದ್ದಿ' ಎನ್ನುವುದು ಉತ್ಪ್ರೇಕ್ಷೆ

ತರ ಕಂಡರೂ ದಲಿತರ ದಿನನಿತ್ಯದ ಶ್ರಮ ಹರಿದು ಬೇರೆಯವರ ಪಾಲಾಗುವ ದುಃಸ್ಥಿತಿಯನ್ನು ಬಿಚ್ಚಿಡುತ್ತದೆ. ಆದ್ದರಿಂದಲೇ ದಲಿತ ಕಾವ್ಯ ನೋಡುವಾಗ ಸಾಮಾಜಿಕ ಅರಿವು ಮುಖ್ಯ.

ಮೇಲಿನ ಹೋರಾಟದ ಹಾಡುಗಳಲ್ಲಿ ಬಂದಿರುವ ಕ್ರಿಯಾಪದಗಳನ್ನು ಗಮನಿಸಬೇಕು. ಒಡೆದೆವು, ಹಿಂಡಿದೆವು, ಕಟ್ಟಿದೆವು, ಉತ್ತೆವು, ಬಿತ್ತೆವು, ತೆಗೆದೆವು, ನೇಯ್ದೆವು, ಬೆಳೆದೆವು ಹೀಗೆ ಭೂತಕಾಲದ ಕ್ರಿಯಾಪದಗಳಿಂದಲೇ ಕವನ ರಚನೆಗೊಂಡಿದೆ. ಆದರೆ ವರ್ತಮಾನದಲ್ಲಿ ನಿಂತು ಅವು ತನ್ನ ಅಸ್ತಿತ್ವವನ್ನು ಕಂಡುಕೊಳ್ಳುತ್ತಿವೆ. ಇದು ಶ್ರಮಸಂಸ್ಕೃತಿ ಎಲ್ಲಿಯವರೆಗೆ ಇರುತ್ತದೋ ಅಲ್ಲಿಯವರೆಗೆ ಜನತೆಯನ್ನು ಎಚ್ಚರಗೊಳಿಸುವ ಕಾರ್ಯವನ್ನು ಮಾಡುತ್ತಲೇ ಇರುತ್ತದೆ. ಈ ಚರ್ಚೆಯ ಮುಖ್ಯ ಉದ್ದೇಶ ದಲಿತ ಸಾಹಿತ್ಯಕ್ಕೆ ಹೆಚ್ಚಿನ ಆಯುಷ್ಯವಿಲ್ಲ ಎನ್ನುವ ವಿಮರ್ಶಕರು ಶ್ರಮಿಕರ ಬವಣೆಯನ್ನು ತಾತ್ಕಾಲಿಕ ಎಂದು ಭಾವಿಸಿರುವಂತಿದೆ. ಇದಕ್ಕೆ ಪೂರಕವೆಂಬಂತೆ ಸಿದ್ಧಲಿಂಗಯ್ಯನವರ ಆಯ್ದ ಕವಿತೆಗಳಿಗೆ ಮುನ್ನುಡಿ ಬರೆಯುತ್ತಾ ಡಿ.ಆರ್. ನಾಗರಾಜ ಅವರು 'ಸಿದ್ಧಲಿಂಗಯ್ಯ ಈವರೆಗಿನ ಸಾರ್ವಜನಿಕ ಕವಿ' ಎನ್ನುವುದರ ಹಿಂದಿನ ಉದ್ದೇಶ ಇದೇ ಆಗಿರಬಹುದೇನೋ...

'ಬಂಡೆ' ದಲಿತ ಕಾವ್ಯದಲ್ಲಿ ಅದರಲ್ಲೂ ಹೋರಾಟದ ಹಾಡುಗಳಲ್ಲಿ ಹೆಚ್ಚು ಬಳಕೆಗೊಂಡಿರುವ ಪದ. ಯಾವುದಕ್ಕೂ ಜಗ್ಗದ ಈ ಬಂಡೆ ಬಂದ ಕಷ್ಟಗಳನ್ನೆಲ್ಲಾ ಎದುರಿಸುವ ದೃಢತೆಯ ಸಂಕೇತವಾಗಿ ಕನ್ನಡ ಕಾವ್ಯದಲ್ಲಿ ಹಾಸುಹೊಕ್ಕಾಗಿ ನಿಂತಿದೆ. ಆದರೆ 'ಬಂಡೆಗಳಾ ಒಡೆದೆವು' ಎಂದು ಹೇಳುವಾಗ ದಲಿತ ಕಾವ್ಯದಲ್ಲಿ ಶ್ರಮದ ಸಂಕೇತವಾಗಿ ಹೆಚ್ಚು ಬಳಕೆಗೊಂಡಿರುವುದನ್ನು ಕಾಣಬಹುದು. ದಲಿತರು ಇರುವ ಮತ್ತು ಆಗುವ ನೆಲೆಗಳನ್ನು ಈ ಒಂದು ಉಪಮೆ ಶೋಧಿಸುತ್ತದೆ.

ದಲಿತ ಕಾವ್ಯದ ಉದ್ದೇಶ ಸಫಲವಾಗುವುದು ಅದು ವರ್ಗ ವೈರುಧ್ಯವನ್ನು ಕಟ್ಟಿಕೊಡುವಾಗ. ಏಕೆಂದರೆ ಈ ಚರ್ಚೆ ವಿಸ್ತಾರತೆಗೆ ಕೊಂಡೊಯ್ದು ಪರ್ಯಾಯ ಆಲೋಚನೆಗೆ ತೊಡಗುತ್ತದೆ. ವರ್ಣ, ಜಾತಿ, ಧರ್ಮಗಳ ನೆಲೆಗಿಂತ ಇದು ಹೆಚ್ಚು ಆಲೋಚನೆಗೆ ದಾರಿಮಾಡಿಕೊಡುತ್ತದೆ.

ದಲಿತರು ತಾವು ಎಲ್ಲೆಲ್ಲಿ ಶೋಷಣೆ, ನೋವುಗಳನ್ನು ಅನುಭವಿಸುತ್ತಿದ್ದರೋ ಅಲ್ಲಿಂದಲೇ ತಮ್ಮ ಕಾವ್ಯಕ್ಕೆ ಉಪಮೆ, ರೂಪಕ, ಪ್ರತಿಮೆ, ಪ್ರತೀಕಗಳನ್ನು ತಂದರು. ಕಾಣದ ಲೋಕದ ಕೈವಾಡದಲ್ಲಿ ಅವರಿಗೆ ನಂಬಿಕೆ ಇರಲಿಲ್ಲ. ಬೆವರು ಮತ್ತು ಬೆವರಿನ ಪ್ರತಿಫಲ ಉಣ್ಣುವ ಜನತೆಯನ್ನು ಅನೇಕ ಹೋರಾಟದ ಹಾಡುಗಳು ತಮ್ಮ ಹಾಡುಗಳಲ್ಲಿ ರೂಪಕಗಳಾಗಿ ಬಳಸಿವೆ.

ಎದೆಯ ಬೆಂಕಿಯು ಜ್ವಾಲೆಯಾಗಿ
ಒಡಲ ಕುಲುಮೆ ಕುಂಡವಾಗಿ

ಕಿಡಿ ಬಾನಾಚೆಗೂ ಸಿಡಿದವೋ
ಸಮಸಮಾಜ ಹುಟ್ಟಿಗಾಗಿ
ಅಸಮತೆಯ ಸುಟ್ಟವೋ
ಕೈಯೆ ಬೆರಳೆ ಕೊಡಲಿಯಾಗಿ
ಬೆರಳ ಉಗುರೆ ಚೂರಿಯಾಗಿ
ಸಿರಿವಂತರ ಬಗೆದವೋ
ಬೊಗಸೆ ಬೊಗಸೆ ನೆತ್ತರನು
ಮೊಗೆದು ಮೊಗೆದು ಕುಡಿದವೋ[೪೦]

ದಲಿತರು ತಮ್ಮ ಮಿತ್ರ ಯಾರು? ಶತೃ ಯಾರು? ಎಂಬುದನ್ನು ಗ್ರಹಿಸಿದಾಗ ಉಂಟಾಗುವ ಪರಿಣಾಮಗಳೇ ಈ ಕವನ. ರಾಜಕೀಯ, ಸಾಮಾಜಿಕ ಸ್ಥಾನಮಾನ ನೆಲೆಗಟ್ಟಿನ ಪ್ರಜ್ಞೆ ಇರುವ ಕವಿ ಮಾತ್ರ ಇಂತಹ ಹೋರಾಟದ ಹಾಡನ್ನು ಬರೆಯಬಲ್ಲ. ಇಲ್ಲಿ ಬೆಂಕಿ ಇದೆ. ಆ ಬೆಂಕಿಯ ಜ್ವಾಲೆ ಹಬ್ಬುವ ರೀತಿ ಇದೆ. ಬೆಂಕಿಯ ಕೆಲಸ ಸುಡುವುದು ಮತ್ತು ಸರ್ವನಾಶಗೊಳಿಸುವುದು. ಆದರೆ ಇಲ್ಲಿ ಅದು ಸುಡುವುದು ಅಸಮಾನತೆ ಬಿತ್ತುವವರನ್ನು ಮತ್ತು ಬೆಳೆಸುವವರನ್ನು. ಸಮಸಮಾಜದ ಹುಟ್ಟಿಗಾಗಿ ಬಾನಾಚೆಗೂ ಅದು ಹರಡುತ್ತದೆ. ಪ್ರಪಂಚದಾದ್ಯಂತ ಇಂತಹ ಶೋಷಕರ ಸರ್ವನಾಶಕ್ಕೆ ಅದು ನಾಂದಿ ಹಾಡಲು ಹೊರಟಿದೆ. ಬೆಂಕಿ ನಾಶದ ಸಂಕೇತವೂ ಹೌದು. ಬೆಳಕಿನ ಸಂಕೇತವೂ ಹೌದು. ಅಸಮಾನತೆಗಳು ನಾಶವಾದರೆ ಬೆಳಕು ಮೂಡುತ್ತದೆಂಬ ಭರವಸೆ ಈ ಕವಿತೆಯದು. ಹಾಗೆಯೇ ಅಸಮಾನತೆ ಹೋಗಲಾಡಿಸಲು ಕವಿ ಕಾಣುವ ಉಗ್ರರೂಪ ಭಯಾನಕವಾಗಿದೆ. ಕೊಡಲಿ, ಚೂರಿ, ಇವುಗಳ ಕೆಲಸ ಬಗೆಯುವುದು, ಕತ್ತರಿಸುವುದು, ರಕ್ತದೋಕುಳಿ ಆಡುವುದು. ಇಲ್ಲಿ ಅದೇ ಇದೆ. ಆದರೆ ಅದು ಕತ್ತರಿಸಲು ತನ್ನ ಶತ್ರುವನ್ನು ಆಯ್ಕೆ ಮಾಡಿಕೊಂಡಿದೆ. ಅವರೇ ಸಿರಿವಂತರು. ವರ್ಗ ಪ್ರಜ್ಞೆಯ ನೆಲೆಯ ಪರಿಚಯವುಳ್ಳ ಕವಿಗೆ ಕೈ ಬೆರಳು ಕೊಡಲಿಯಾಗುವುದು, ಬೆರಳ ಉಗುರು ಚೂರಿಯಾಗುವುದು. ವರ್ಗ ಪ್ರಜ್ಞೆಯ ನೆಲೆಯ ಪರಿಚಯವಿರದ ಕವಿಗೆ ಇದು ಆಗದ ಮಾತು. ಅವನು ಅವುಗಳಲ್ಲಿ ಹೂವಿನ ದಳಗಳನ್ನು, ಚಿಗುರಿದ ಎಲೆಗಳನ್ನು ಕಾಣುವಷ್ಟು ಪ್ರಕೃತಿ ಪ್ರೇಮಿಯಾಗಿ ಬಿಡುತ್ತಾನೆ.

ಕವಿ ಸಮಾಜದೊಂದಿಗೆ ನಿಕಟಾನುವರ್ತಿಯಾದಾಗ ಅವನು ತರುವ ಎಲ್ಲಾ ಉಪಮೆ ಹೋಲಿಕೆಗಳು ಅಲ್ಲಿಂದಲೇ ಜನ್ಮಿಸುತ್ತವೆ. ಆದರೆ ಅದರಲ್ಲೂ ಸೂಕ್ಷ್ಮದೃಷ್ಟಿಯ ಸಂವೇದನಾಶೀಲರಿಗೆ ಇನ್ನೂ ಆಪ್ತವಾಗಿ ಗೋಚರಿಸುತ್ತವೆ. ಕವಿ ಸಮಾಜದಲ್ಲಿ ಇರುವ ಪರಿಸ್ಥಿತಿಯೂ ಕೂಡ ಅವನ ಕಾವ್ಯಕ್ಕೆ ಪ್ರೇರಕವಾಗುತ್ತದೆ. ಶೋಷಕರ ವರ್ಗದಲ್ಲಿರುವ ಕವಿಗೂ, ಶೋಷಿತರ ವರ್ಗದಲ್ಲಿರುವ ಕವಿಗೂ ಅನೇಕ ವಿಧಗಳಲ್ಲಿ ವ್ಯತ್ಯಾಸಗಳಿವೆ. ಇಬ್ಬರೂ ಕಾಣುವ ಸಮಾಜದ

ಕನಸು ಭಿನ್ನವಾಗಿರುತ್ತದೆ. ಇದರಲ್ಲಿ ಸಮಾಜವನ್ನು ಇರುವ ಹಾಗೆಯೆ ಇರಬೇಕು ಎಂಬುದು (ಎಲ್ಲರನ್ನು ಈ ಪರಿಧಿಯಲ್ಲಿ ತಂದು ನಿಲ್ಲಿಸಲು ಸಾಧ್ಯವಿಲ್ಲದಿದ್ದರೂ) ಒಂದು ವರ್ಗದ ಕವಿಗಳದಾದರೆ ಇದ್ದುದನ್ನು ಬದಲಿಸಬೇಕೆಂಬ ನಿಲುವು ಇನ್ನೊಂದು ವರ್ಗದ್ದು, ಈ ಇನ್ನೊಂದು ವರ್ಗದಲ್ಲಿ ದಲಿತ ಕವಿಗಳು ಪ್ರಮುಖರು

ಬೆಳಕು ಹೊತ್ತವರ
ಕಾಲು ಕತ್ತಲೆ
ಅವರ ಕಾಲ ಕತ್ತಲೆ[೪೧]

ಹೀಗೆ ಪ್ರಾರಂಭವಾದ ಕವಿತೆ ಕೊನೆಗೊಳ್ಳುವುದು

ಗಡಿಯಲ್ಲಿನ ಎಲ್ಲಾ ಯುದ್ಧಗಳು ನಿಂತರೂ
ನಿಲ್ಲಬಹುದು
ನಿಲ್ಲುವುದಿಲ್ಲ ದಿನನಿತ್ಯ
ನಡೆಯುವ ನನ್ನ ಕೇರಿಯ ಮೇಲಿನ ಯುದ್ಧ[೪೨]

ಕವನ ಸಣ್ಣ ಘಟನೆಯಿಂದ ಪ್ರಾರಂಭವಾಗಿ ಅಂತ್ಯದಲ್ಲಿ ಭೀಕರ ಚಿತ್ರಣದೊಂದಿಗೆ ಮುಗಿಯುತ್ತದೆ. ಬೆಳಕು ಜ್ಞಾನದ ಸಂಕೇತ. ಕತ್ತಲೆ ಅಜ್ಞಾನದ ಸಂಕೇತವಾಗಿ ಇದುವರೆಗೂ ಪ್ರತಿಬಿಂಬಿತಗೊಂಡಿತ್ತು. ಆದರೆ ಇಲ್ಲಿ ಬೆಳಕು ದಲಿತರ ಪ್ರತಿನಿಧಿಯಾಗಿದೆ. ಉಳ್ಳವರು ಸುಖದ ಸುಪ್ಪತ್ತಿಗೆಯಲ್ಲಿ ತೇಲಲು ದಲಿತರ ದುಡಿಮೆಯೇ ಕಾರಣ ಎಂಬುದನ್ನು ಕವಿತೆ ಒತ್ತಿ ಹೇಳುತ್ತಿದೆ. ಬೆಳಕನ್ನೆ ಹೊತ್ತ ಅವರು ತನ್ನ ಕಾಲನ್ನೂ ಕಾಲವನ್ನೂ ಕತ್ತಲೆಯಲ್ಲಿಟ್ಟುಕೊಂಡಿದ್ದಾರೆ. ಏಕೆಂದರೆ ಅವರು ಬೆಳಕು ಹೊತ್ತಿದ್ದರೂ ಆ ಬೆಳಕಿನ ಉಪಯೋಗ ಮಾತ್ರ ಗೌಡನದಾಗಿದೆ. ಹೊಲವನುತ್ತು ಬೆಳೆಯ ಬೆಳೆಯುವವರು ಅವರು ಅದರ ಪ್ರತಿಫಲ ಉಣ್ಣುವವರು ಕೆಲವರು. ಇದು ಈ ಕಾವ್ಯದ ಅಂತರಾಳದಲ್ಲಿ ಅಡಗಿದೆ.

ಇನ್ನು ಕೊನೆಯ ಸಾಲುಗಳು ಕಟ್ಟಿಕೊಟ್ಟಿರುವ ಚಿತ್ರಣ ಇನ್ನೂ ಭೀಕರವಾಗಿದೆ. ಯುದ್ಧವೆಂದ ಕೂಡಲೇ ಅದು ಗಡಿಗಳ ನಡುವೆ ನಡೆಯುವ ಗುಂಡಿನ ಚಕಮಕಿಯೆಂದೋ, ದೇಶ–ದೇಶಗಳ ನಡುವಿನ ತಿಕ್ಕಾಟವೆಂದೋ, ರಾಜ–ರಾಜರ ನಡುವಿನ ಸಾಮ್ರಾಜ್ಯಶಾಹಿ ದಾಹವೆಂದೂ ಪರಿಗಣಿಸಲ್ಪಡುತಿತ್ತು. 'ಯುದ್ಧ' ವಿನಾಶದ ಸಂಕೇತ. ಅದರ ಕೆಲಸ ಕೊಲ್ಲುವುದಷ್ಟೇ ಅಲ್ಲ ತನ್ನ ಶಕ್ತಿ, ಸಾಮರ್ಥ್ಯ ಪ್ರದರ್ಶಿಸಿ ನಿರ್ನಾಮಗೊಳಿಸುವುದು. ಆದರೆ ಇಲ್ಲಿ ಕವಿ ಗಡಿ ಯುದ್ಧವೂ ಒಂದೇ, ನನ್ನ ಕೇರಿಯ ಮೇಲಿನ ಯುದ್ಧವೂ ಒಂದೇ ಎಂದಿದ್ದಾನೆ. ಏಕೆಂದರೆ ಅಲ್ಲಿಯೂ ಸಾವಿದೆ. ಇಲ್ಲಿಯೂ ಸಾವಿದೆ. ಆದರೆ ಕೇರಿಯ ಸಾವಿಗೆ

ಯುದ್ಧದ ಹೆಸರಿಲ್ಲ. ಬದಲಾಗಿ ಮರೆಮಾಚುವ ಕೊಲೆಗಡುಕತನವಿದೆ. ಜಾತಿ, ಮತ, ವರ್ಗದಿಂದಾಗಿ ಹತರಾಗುತ್ತಿರುವ ದಲಿತರ ಬದುಕಿನ ವಾಸ್ತವ ಚಿತ್ರಣ 'ನಿಲ್ಲುವುದಿಲ್ಲ ನನ್ನ ಕೇರಿಯ ಮೇಲೆ ದಿನನಿತ್ಯ ನಡೆಯುವ ಯುದ್ಧ' ಎಂಬ ಸಾಲು ಪ್ರಸ್ತುತಪಡಿಸುತ್ತಿದೆ. ದಿನನಿತ್ಯ ದಲಿತರ ಬದುಕು ಹತವಾಗುತ್ತಿರುವ ಬಗೆಯನ್ನು ಇಡೀ ಕವಿತೆ ಬಿಂಬಿಸುತ್ತಿದೆ.

ಯುದ್ಧ ಆಗಬೇಕು ಅದೂ ಹಸಿದವರಿಗೆ ಅನ್ನ ನೀಡಲು, ಬುದ್ಧನೂ ಕೂಡ ಯುದ್ಧ, ಸತ್ಯ ಮತ್ತು ನ್ಯಾಯಕ್ಕಾಗಿ ನಡೆದರೆ ಒಳ್ಳೆಯದು ಎನ್ನುತ್ತಾನೆ. ದುಡಿಯುತ್ತಿದ್ದರೂ ನಿತ್ಯ ಹಲ್ಲೆಗೊಳಗಾಗುವ ಸಮುದಾಯಕ್ಕೆ ಯುದ್ಧ ಎನ್ನುವ ಪರಿಕಲ್ಪನೆ ತೀರಾ ಹೊಸತೇನೂ ಅಲ್ಲ. ದಲಿತರಿಗೆ ಯುದ್ಧ ಆಗಬೇಕು ಯಾವುದರ ಪರವಾಗಿ ದಲಿತ ಕಾವ್ಯ ಅಭಿವ್ಯಕ್ತಿಸುವ ರೀತಿ ಹೀಗಿದೆ.

ಎಚ್ಚರದ ನೆತ್ತಿ ಮೇಲೆ
ಅನಿಶ್ಚಿತದ ತೂಗು ಕತ್ತಿ
ತಪ್ಪಿಸುವ ಕೆಚ್ಚಿದೆಯೆ?
ಯುದ್ಧ ಮಾಡಿರೋ
ಹಸಿದವರಿಗೆ ನೀಡೆ ಬುತ್ತಿ
ಬೆಟ್ಟದಲಿ ಬೀಜ ಬಿತ್ತುವ ಯುದ್ಧ ಮಾಡಿರೋ
ಒಣಭೂಮಿಯ ದಣಿದವರಿಗೆ
ಮುಗಿಲ ಕೊಚ್ಚಿ ನೀರಡಿಸಲು ಯುದ್ಧ ಮಾಡಿರೋ[೪೩]

ಯುದ್ಧ ಸಾಗಬೇಕಾದ ನೆಲೆ ಇದಿಷ್ಟೇ ಆದರೆ ಚೆನ್ನ. ಇದೇ ದಲಿತ ಕಾವ್ಯದ ಆಶಯವೂ ಹೌದು. ಹಸಿದವರ ಹಾಹಾಕಾರ ನೀಗಿಸುವ ಪರಿ ಇಲ್ಲಿದೆ. ಬೆಟ್ಟದಲಿ ಬೀಜ ಬಿತ್ತಿ ಹಸಿವು ನೀಗಿಸಲು ಹೊರಟ ದಲಿತರದು ಮಾತೃ ಹೃದಯದ ನಿರಂತರ ಹುಡುಕಾಟ.

ಬೆಳಕು ನೀಡುವ ಸೂರ್ಯ ಚಂದ್ರರೂ ಕೂಡ ದಲಿತ ಕವಿಗಳಲ್ಲಿ ಹೊಸ ಬಗೆಯ ನೋಟಕ್ಕೆ ಒಳಗಾಗಿದ್ದಾರೆ. ಮುಡ್ನಾಕೂಡು ಚಿನ್ನಸ್ವಾಮಿಯವರ 'ಸೂರ್ಯಚಂದ್ರರೆಂಬ ಗುಲಾಮರು' ಕವನ ಪ್ರಾರಂಭವಾಗುವ ಬಗೆ ಹೀಗಿದೆ.

ಮುಂಜಾನೆ
ಸೂರ್ಯ
ಎಲ್ಲರಿಗಿಂತ ಮುಂಚೆ ಏಳುತ್ತಾನೆ
ಗುಡಿಸಲುಗಳ ತಟ್ಟಿ

ಧಣಿಗಳ ಮನೆಯ ಕೊಟ್ಟಿಗೆ ಬಾಗಿಲು ನೂಕಿ
ದುಡಿವ ಜನರನೆಚ್ಚರಿಸುತ್ತಾನೆ
....
....
ದಿನವೆಲ್ಲ ದುಡಿದು
ಸೊರಗಿ ಸುಣ್ಣವಾಗಿ ಸಂಜೆ
ತಿರೆಯ ಚಾಕರಿ ಕಿರಿಕಿರಿಯಾಗಿ
ಸಾರಾಯಿ ಹೀರಿ
ಕೆಂಗಣ್ಣನಾಗಿ
ಇಳಿಯುತ್ತಾನೆ ಈಗ ನನ್ನ
ಪಾಳಿ ಮುಗಿಯಿತೆಂದು
ರಾತ್ರಿ
ಚಂದ್ರ
ಲಾಂದ್ರ ಹಿಡಿದು ಬರುತ್ತಾನೆ
ಹಗಲ ಬೆವರನ್ನೆಲ್ಲ
ಮಂದ ಮಾರುತದಲ್ಲಿ
ಒರೆಸುತ್ತಾನೆ
ಕರೆಯುತ್ತಾನೆ
ಗಸ್ತು ತಿರುಗುತ್ತಾನೆ
ಮನೆಮಠ ಗಟಾರವೆನ್ನದೆ
ಬೆಳಗಾಗುವುದರೊಳಗೆ
ಬಸವಳಿದು
ವಿರಮಿಸುತ್ತಾನೆ[೪೪]

ಸೂರ್ಯ, ಚಂದ್ರ, ಭಾರತೀಯರಿಗೆ ಒಂದು ರೀತಿಯ ದೇವರೇ ಸರಿ. ನಮ್ಮ ಹಿಂದಿನ ಕವಿಗಳಿಗಂತೂ ಅವು ಸೃಷ್ಟಿಯ ಅದ್ಭುತ ಶಕ್ತಿಗಳು. ಅದಕ್ಕೆ ಸೂರ್ಯೋದಯ ಕುರಿತು ಅದೆಷ್ಟೋ ಪದ್ಯಗಳು ಬಂದಿವೆ ಮತ್ತು ಚಂದ್ರನ ಬೆಳದಿಂಗಳು ಕುರಿತು ವರ್ಣನೆಗಳು ಸಾಕಷ್ಟಿವೆ. ಆದರೆ ದಲಿತ ಕವಿಗಳಲ್ಲಿ ಸೂರ್ಯ ಚಂದ್ರ ಗುಲಾಮರಂತೆ ಕಂಗೊಳಿಸುತ್ತಾರೆ. ಇಲ್ಲಿ ಇಬ್ಬರೂ ದಲಿತರ ಪ್ರತಿನಿಧಿಗಳಂತೆ ತಿರೆಯ ಚಾಕರಿ ಮುಗಿಸುತ್ತಾರೆ. ದುಡಿವ ಜನತೆಯ ನಿತ್ಯ ಬದುಕಿನ

ಬವಣೆಯಲ್ಲೇ ಸೂರ್ಯ ಚಂದ್ರರು ಅಭಿವ್ಯಕ್ತಗೊಂಡಿದ್ದಾರೆ. ಬೇಂದ್ರೆಗೆ 'ಬೆಳಗು' ಮೂಡಲ ಮನೆಯಲ್ಲಿ ಮುತ್ತಿನ ನೀರಿನ ಎರಕ ಹೊಯ್ದಂತೆ ಕಂಡರೆ, ಕುವೆಂಪುಗೆ 'ಕುಂಕುಮ ಧೂಳಿಯ ದಿಕ್ತಟ ವೇದಿಕೆ ಓಕುಳಿಯಲ್ಲಿ ಮಿಂದೇಳುವನು' ಕಂಬಾರರಿಗೆ 'ಮೂಡಣದ ಮುದಿಕುರು ಒಡೆದು ನೆತ್ತರು ಕೀವು ಸೋರಿದಂತೆ' ಕಾಣುತ್ತದೆ. ಆದರೆ ದಲಿತ ಕವಿಗಳಲ್ಲಿ ದುಡಿವ ಜನರನ್ನೆಚ್ಚರಿಸುವ ಗುಲಾಮನಾಗುತ್ತಾನೆ.

ದಲಿತ ಕಾವ್ಯ ದುಡಿವ ಜನರ ನೋವುಗಳುಳ್ಳ ಕಾವ್ಯ. ಇಲ್ಲಿ ರೊಚ್ಚಿದೆ, ಆವೇಶವಿದೆ, ಆರ್ಭಟವಿದೆ. ಇದರ ನಡುವೆಯೇ ಮಿಡಿಯುವ ಮಾನವೀಯ ಹೃದಯವಿದೆ. ಇಲ್ಲಿ ಇರುವಿಕೆ ಮತ್ತು ಆಗುವಿಕೆ ಎರಡನ್ನೂ ಒಳಗೊಂಡ ಕಾವ್ಯ ಸತ್ವವಿದೆ. ಈ ಸತ್ವ ಸಾಧನೆಗಾಗಿ ದಲಿತ ಕಾವ್ಯ ತಾನಿರುವಿಕೆಯ ನೆಲೆಗಳಿಂದಲೇ ಹೋಲಿಕೆಗಳನ್ನು ಬಳಸಿ ಕಾವ್ಯಕ್ಕೆ ಅರ್ಥವಂತಿಕೆ ತುಂಬಿದೆ. ಈ ಇರುವಿಕೆ ಮತ್ತು ಆಗುವಿಕೆಯ ಹೋರಾಟದ ದಾರಿಗೆ ಸಿದ್ಧಲಿಂಗಯ್ಯನವರ 'ಸಾವಿರಾರು ನದಿಗಳು' ಕವನ ಉತ್ತಮ ಉದಾಹರಣೆ. ಕವನದ ಹೆಸರೇ ಸೂಚಿಸುವ ಹಾಗೆ ಇಲ್ಲಿ 'ನದಿ' ಇದೆ. ಒಂದಲ್ಲ, ಎರಡಲ್ಲ, ಸಾವಿರಾರು. 'ನದಿ' ಚಲನಶೀಲತೆಯ ಸಂಕೇತ. ಪಾವಿತ್ರ್ಯದ ಸಂಕೇತ ಆದರೆ ದಲಿತ ಕಾವ್ಯಕ್ಕೆ ಬಂದ ತಕ್ಷಣವೇ ಇದು ಸಮೂಹದ ಸಂಕೇತವಾಗುತ್ತದೆ. ನದಿ ಉಗಮವಾಗುವುದು ಒಂದು ನಿರ್ದಿಷ್ಟ ಸ್ಥಳದಲ್ಲಿ, ಕಡಿಮೆ ಜಾಗದಲ್ಲಿ, ಕ್ರಮೇಣ ಬೆಳೆಯುತ್ತಾ ದೊಡ್ಡದಾಗಿ ಸಮುದ್ರ ಸೇರುತ್ತದೆ. ಹಾಗೇ ಸಂಘಟನೆ ಒಂದು ನಿರ್ದಿಷ್ಟ ಸ್ಥಳದಲ್ಲಿ ಉಂಟಾದರೂ ಬೆಳೆದು ದೊಡ್ಡದಾಗುತ್ತಾ ಇಡೀ ದೇಶವನ್ನೇ ವ್ಯಾಪಿಸುವ ನೆಲೆಯಲ್ಲೇ ದಲಿತರು ಕಾವ್ಯದಲ್ಲಿ ನದಿಯ ರೂಪಕ ತಂದರು.

ನೆನ್ನೆ ದಿನ
ನನ್ನ ಜನ
ಬೆಟ್ಟದಂತೆ ಬಂದರು
ಕಪ್ಪು ಮುಖ ಬೆಳ್ಳಿಗಡ್ಡ ಉರಿಯುತಿರುವ ಕಣ್ಣುಗಳು
ಹಗಲು ರಾತ್ರಿಗಳನು ಸೀಳಿ ನಿದ್ದೆಯನ್ನು ಒದ್ದರು
ಕಂಬಳಿಗಳು ಕೊರಗಿದವು ಎದ್ದೇಳುವ ರೊಚ್ಚಿಗೆ
ಭೂಕಂಪನವಾಯಿತು ಅವರು ಕುಣಿದ ಹುಚ್ಚಿಗೆ
ಇರುವೆಯಂತೆ ಹರಿವ ಸಾಲು ಹುಲಿಸಿಂಹದ ದನಿಗಳು
ಧಿಕ್ಕಾರ ಧಿಕ್ಕಾರ ಅಸಮಾನತೆಗೆ
ಎಂದೆಂದಿಗು ಧಿಕ್ಕಾರ ಶ್ರೀಮಂತರ ಸೊಕ್ಕಿಗೆ
ಲಕ್ಷಾಂತರ ನಾಗರುಗಳು ಹುತ್ತಬಿಟ್ಟು ಬಂದಂತೆ

ಊರ ತುಂಬ ಹರಿದರು
ಪಾತಾಳಕೆ ಇಳಿದರು
ಆಕಾಶಕೆ ನೆಗೆದರು[೪೫]

ಭೂತಕಾಲದ ನೆನಪಿನೊಂದಿಗೆ ಪ್ರಾರಂಭವಾಗುವ ಈ ಕವನ ಬೆಟ್ಟದಂತೆ ಜನ ಬಂದರೆಂದು ಹೇಳಿದೆ. ಬೆಟ್ಟ ಅಚಲತೆಯ ಸಂಕೇತ. ಚಲನರಹಿತ ಸಂಕೇತ. ಆದರೆ ಇಲ್ಲಿ 'ಬೆಟ್ಟ' ಚಲನೆಗೆ ಒಳಗಾಗಿದೆ. ದೊಡ್ಡಮಟ್ಟದಲ್ಲಿ ಕ್ರಾಂತಿಗೆ ಒಗ್ಗೂಡುವ ಜನತೆಯ ಸಂಕೇತಕ್ಕಾಗಿ ಬೆಟ್ಟ ಇಲ್ಲಿ ಬಳಕೆಯಾಗಿದೆ. ಈ ಕ್ರಾಂತಿಯ ಜನ ಮುನ್ನುಗ್ಗುವಾಗ ಆಗುವ ಬದಲಾವಣೆ ಈ ರೀತಿ ಇದೆ. ಇವರಿಗೆ ಕಪ್ಪು ಮುಖ, ಬೆಳ್ಳಿಗಡ್ಡ, ಉರಿಯುತಿರುವ ಕಣ್ಣುಗಳು, ಇವರಿಗೆ ಅರಿವು ಬಂದ ಕೂಡಲೇ 'ಹಗಲು ರಾತ್ರಿಗಳನು ಸೀಳಿ ನಿದ್ದೆಯನ್ನು ಒದ್ದರು' ಇಲ್ಲಿ ಶೋಷಣಾ ತೀವ್ರತೆ ಅರಿತ ಕೂಡಲೇ ನಿದ್ದೆ ದಲಿತರಿಂದ ಓಡಿಹೋಗಿ ಕ್ರಾಂತಿ ದಿನಕ್ಕಾಗಿ ಕಾಯುವಂತಾಗಿದೆ... ಇವರು ಕುಣಿವ ಹುಚ್ಚಿಗೆ ಭೂಕಂಪನವಾಗಿದೆ. ಭೂಕಂಪ ವಿನಾಶದ ಸಂಕೇತ. ಆದರೆ ಇಲ್ಲಿ ಪ್ರಳಯದ ನಂತರ ಉಂಟಾಗುವ ಸೃಷ್ಟಿಯ ಕಡೆಗೆ ದಲಿತ ಕಾವ್ಯದ ಒಲವಿದೆ. ಈ ಬೆಟ್ಟದಂತ ಜನರಲ್ಲಿ ಒಗ್ಗಟ್ಟಿದೆ ಅದೂ ಇರುವೆಯಂತೆ ಹರಿವ ಸಾಲು, ಹುಲಿಸಿಂಹದ ದನಿಗಳು' ಇಲ್ಲಿ ಇರುವೆ ಒಗ್ಗಟ್ಟಿನ, ಮುಂಗಾಣ್ಕೆಗೆ, ಹೆಚ್ಚುಭಾರ ಹೊರುವುದಕ್ಕೆ ಸಂಕೇತ. ಇದು ದಲಿತರ ಒಗ್ಗೂಡುವಿಕೆಯ ತೀವ್ರತೆಯನ್ನು ಹೇಳುತ್ತದೆ. ಇರುವೆ ಅತ್ಯಂತ ಸಣ್ಣ ಜೀವಿ. ಅತ್ಯಂತ ಕಡೆಗಣಿಸಲ್ಪಟ್ಟ ಜೀವಿ. ಇದು ಹೇಗೋ ಹಾಗೆ ದಲಿತನೂ ಸಮಾಜದ ಕಟ್ಟಕಡೆಯ ಜೀವಿ. ಅಸ್ತಿತ್ವವಿದ್ದರೂ ಇಲ್ಲದ ಹಾಗೆ ಇರುವವನು. ಇಂತಹ ಸಮುದಾಯದಲ್ಲಿ ಅಡಗಿರುವುದು ಎಂತಹ ದನಿ ಅದೂ ಹುಲಿಸಿಂಹದ ದನಿಗಳು. ಹುಲಿಸಿಂಹದ ದನಿ ಅರಣ್ಯವನ್ನೇ ನಡುಗಿಸುವಂತಹುದು. ಸಕಲ ಜೀವಿಗಳನ್ನು ಬೆಚ್ಚಿ ಬೀಳಿಸುವಂತಹುದು. ನಿಶ್ಯಬ್ದತೆಯನ್ನೇ ಸೀಳಿ ಸಂಚಲನ ಉಂಟುಮಾಡುವ ಶಕ್ತಿ ಇವುಗಳದ್ದು. ಅದೇ ಧ್ವನಿ ದಲಿತರದು ತಮ್ಮ ಗತಕಾಲದ ನೋವುಗಳನ್ನೆಲ್ಲಾ ಒಗ್ಗೂಡಿಸಿ ಚೀರಿದರೆ ವ್ಯವಸ್ಥೆಯೇ ಅದಲುಬದಲಾಗುತ್ತದೆಂಬ ನಂಬಿಕೆ ದಲಿತ ಕವಿಗಳದ್ದು, ಹಾಗೂ ಅದು ಎಚ್ಚರಿಕೆಯ ಕರೆಯೂ ಹೌದು.

ಇರುವೆಯಂತೆ ಹರಿವ ಸಾಲಿನಲ್ಲಿ ಹುಲಿಸಿಂಹದ ದನಿಗಳೊಂದಿಗೆ ಅಸಮಾನತೆಗೆ ಧಿಕ್ಕಾರ ಕೂಗಲು ಬಂದ ದಲಿತರು 'ಲಕ್ಷಾಂತರ ನಾಗರುಗಳು ಹುತ್ತ ಬಿಟ್ಟು ಬಂದಂತೆ' ಬಂದರೆಂದು ಕಾವ್ಯ ನಿರೂಪಿಸಿದೆ. ಹಾವು ಶಿಷ್ಟ ಕಾವ್ಯದಲ್ಲಿ ಕಾಮದ ಸಂಕೇತ. ಹಾಗೆಯೇ ಸಮಾಜದಲ್ಲಿ ದೈವದ ಸಂಕೇತವೂ ಮತ್ತು ಭಯದ ಸಂಕೇತವೂ ಹೌದು. ಇಲ್ಲಿ ದಲಿತರೇ ಹಾವುಗಳಾಗಿದ್ದಾರೆ; ಅಗೋಚರ ಲೋಕದಿಂದ ಎದ್ದು ಬಂದಿದ್ದಾರೆ. ಹಾವು ವಿನಾಶದ ಸಂಕೇತವಾಗಿ ಬಿಂಬಿತಗೊಂಡಿದೆ. ಇಲ್ಲಿ ವಿನಾಶವಲ್ಲ ಬದಲಾಗಿ ಅಸಮಾನತೆ ವಿನಾಶ

ಹೊಂದಿ ಸಮಾನತೆ ತರುವ ಆಶಯ ಇಲ್ಲಿದೆ. ಹೀಗೇ ಬಂದ ಜನ 'ಎಲ್ಲೆಲ್ಲೂ ನೀರಿನಂತೆ ನಿಂತರು' ನೀರು ಜೀವದಾತೆಯ ಸಂಕೇತ. ಹರಿವ ನೀರಿಗೆ ಎಲ್ಲಿಲ್ಲದ ಮೌಲ್ಯ, ಆದರೆ ಇಲ್ಲಿ ನೀರು ನಿಂತಿದೆ. ನಿಂತ ನೀರು ಸಮಾನತೆಯ ಸಂಕೇತ. ಹಾಗೆಯೇ ನಿಂತ ನೀರು ಒಮ್ಮೆಲೆ ಚಲಿಸಲು ಪ್ರಾರಂಭಿಸಿದರೆ ಆಗುವ ಪರಿಣಾಮವೇ ದಲಿತರ ಒಗ್ಗೂಡುವಿಕೆ. ಇದು ಇಡೀ ಕವನದಲ್ಲಿ ಬಿಂಬಿತಗೊಂಡಿದೆ.

ಬೆಟ್ಟದೋಪಾದಿಯಲ್ಲಿ ಒಗ್ಗಟ್ಟಾದ ದಲಿತರಿಗೆ ಪ್ರಜ್ಞಾಸ್ಫೋಟವಾದ ಕೂಡಲೇ ಅವರು ಕ್ರಿಯೆಗೆ ಮುಂದಾಗುತ್ತಾರೆ. ಅದರ ಪರಿಣಾಮವೇ 'ಛಡಿ ಏಟು ಹೊಡೆದವರ ಕುತ್ತಿಗೆಗಳ ಹಿಡಿದರು; ತನಗೆ ವಿರುದ್ಧವಾದುದೆಲ್ಲವನ್ನೂ ತರಗೆಲೆಕಸಕಡ್ಡಿಯಾಗಿ ತೇಲಿ ತೇಲಿ ಹರಿಯುವಂತೆ ಮಾಡಿದರು. ಜಮೀನ್ದಾರಿ ವ್ಯವಸ್ಥೆ ತನ್ನ ಕ್ರೂರ ದಬ್ಬಾಳಿಕೆಗಳಿಂದಲೇ ಬಡವರನ್ನು ಹಿಡಿತದಲ್ಲಿಟ್ಟುಕೊಂಡು ಬಂದ ಸಂಗತಿಯನ್ನು ಕಾವ್ಯ ತೆರೆದಿಟ್ಟಿದೆ. ಇಡೀ ಕವನ ಜನರ ನಡುವಿನ ಶೋಷಣೆಯ ತೀವ್ರತೆಯಲ್ಲಿ ಉಪಮೆ ರೂಪಕಗಳ ಮೂಲಕ ನೋವನ್ನು ಮತ್ತು ಕ್ರಾಂತಿಯ ಮನೋಭಾವವನ್ನು ಸಮರ್ಥವಾಗಿ ಹಿಡಿದಿಟ್ಟಿದೆ.

ಬಹುಪಾಲು ದಲಿತ ಕಾವ್ಯಗಳಲ್ಲಿ ಬೆಟ್ಟ, ನದಿ, ಸಾಗರ, ಮಳೆ ಉಪಮೆಗಳಾಗಿ ಬರುತ್ತವೆ. ಇವು ಸಮಷ್ಟಿಯ ಸಂಕೇತ. ಅದರಲ್ಲೂ ಮಳೆ ಕ್ರಾಂತಿಗೆ ಜನ ಒಗ್ಗೂಡುವ ಅನಿವಾರ್ಯತೆಯನ್ನು ಒತ್ತಿ ಹೇಳುತ್ತಲೇ ಬಂದಿದೆ. ಇಲ್ಲಿ ಮಳೆಯನ್ನು 'ಇಳಿದು ಬಾ ತಾಯಿ, ಇಳಿದು ಬಾ, ಹರನ ಮುಡಿಯಿಂದ, ಹರಿಯ ನಡುವಿಂದ, ಋಷಿಯ ತೊಡೆಯಿಂದ', ಎನ್ನುವ ಧೈನ್ಯತೆ ಇಲ್ಲ. ಬದಲಾಗಿ ಇಲ್ಲಿ 'ಎಲ್ಲೆಲ್ಲೂ ನನ್ನ ಜನ ನೀರಿನಂತೆ ನಿಂತರು' ಎಂದು ಸಮಾನತೆಯ ನೆಲೆಯನ್ನು ದಲಿತ ಕಾವ್ಯ ಹೇಳುತ್ತದೆ. ಆದರೂ ಈ ಚರ್ಚೆಯನ್ನು ಬೇರೊಂದು ನೆಲೆಯಲ್ಲಿ ಕೊಂಡೊಯ್ಯುವುದಾದರೆ ನಿಂತ ನೀರು ಕೊಳೆಯುತ್ತದೆ, ಹಲವು ಕ್ರಿಮಿಕೀಟಗಳು ಬಂದು ಸೇರುತ್ತವೆ, ಆದರೆ ಇದೇ ನಿಂತ ನೀರು ಒಮ್ಮೆಲೇ ಚಲಿಸಲು ಪ್ರಾರಂಭಿಸಿದರೆ ಮುಂದಿನದೆಲ್ಲವೂ ಅಸ್ತಿತ್ವವನ್ನು ಕಳೆದುಕೊಳ್ಳುತ್ತವೆ. ಇದೇ ದಲಿತ ಹೋರಾಟದ ತಾತ್ವಿಕ ನೆಲೆಯಾಗಬೇಕೆಂದು ಈ ಉಪಮೆಗಳು ಹೇಳುತ್ತವೆ.

ದಲಿತರಿಗೆ ಪ್ರಜ್ಞೆ ಬಂದಾಗ ಅವರು ತನ್ನವರ ಬಗ್ಗೆ ಯೋಚಿಸಲು ಪ್ರಾರಂಭಿಸುತ್ತಾರೆ. ತನ್ನವರ ಸ್ಥಿತಿಗತಿಗಳಿಗೆ ಕಾರಣಗಳನ್ನು ಹುಡುಕಲು ಮುಂದಾಗುತ್ತಾರೆ. ತಾನಿರುವ ಸ್ಥಿತಿ, ತನ್ನವರಿಗಾಗುತ್ತಿರುವ ಗತಿ ಎಲ್ಲಾ ಅವರ ಅಭಿವ್ಯಕ್ತಿ ಮುಖೇನ ಹೊರಬರಲು ಪ್ರಾರಂಭಿಸುತ್ತವೆ.

ಏನು ಮಾಡಲಿ ಈಗ
....
....

ಎಣ್ಣೆ ಪಣತಿಯ ಕೆಳಗೆ ಜಿಡ್ಡುಗಟ್ಟಿದ ತೆರದಿ
ಕುಂತರೂ ಏಳದ ನನ್ನ ದಲಿತ ಜನರು
ಒದ್ದಾಡಿ ಗುದ್ದಾಡಿ ಗೌಡರ ಬಾಗಿಲಿಗೆ
ಬಾಳೆಯ ಗೊನೆಯಂತೆ ಬಾಗಿ ನಿಲ್ಲುವ ಬಂಗಿ[೪೬]

ಎಣ್ಣೆ ಪಣತಿಯಲ್ಲಿನ ಬೆಳಕಿನ ಕಡೆಗೆ ಎಲ್ಲರ ನೋಟ. ಸಮಾಜವನ್ನು ಹೇಗೆ ಮೇಲ್ವರ್ಗಗಳ ನೆಲೆಯಲ್ಲಿ ನಿಂತು ವಿವರಿಸಿ ಅದು ಎಲ್ಲರ ಸಮಾಜ ಎಂಬುದನ್ನು ಬಿಂಬಿಸುವ ಸಂಚು ಶತಮಾನಗಳಿಂದ ನಡೆದು ಬಂದಿದೆಯೋ ಹಾಗೆ ಕನ್ನಡ ಕಾವ್ಯವೂ ಕೂಡ ಬೇರನ್ನು ಕಡೆಗಣಿಸಿ ಹೂವನ್ನೇ ಬಣ್ಣಿಸಿದೆ. ಇದಕ್ಕೆ ಪೂರಕವೆಂಬಂತೆ ಮೇಲಿನ ಕಾವ್ಯದಲ್ಲಿ ಎಲ್ಲರ ನೋಟ ಎಣ್ಣೆ ಪಣತಿಯ ಬೆಳಕಿನ ಕಡೆಗಿದ್ದರೂ, ದಲಿತ ಕವಿ ಅದರ ಕೆಳಗಿನ ಜಿಡ್ಡಿನ ಕಡೆಗೆ ಗಮನ. ದಲಿತರ ಬದುಕು ಹೀಗೇ ದಿನನಿತ್ಯ ಕಮರಿ ಹೋಗುತ್ತಿದೆ. ಹೀಗೆ ಕಮರಿ ಹೋಗುತ್ತಿರುವ ಜನ ಗೌಡರ ಬಾಗಿಲ ಮುಂದೆ ಬಾಳೆಗೊನೆಯಂತೆ ಬಾಗಿ ನಿಲ್ಲುವ ರೀತಿ ಶೋಚನೀಯ. 'ಬಾಳೆಗೊನೆ' ಮೃದುತ್ವಕ್ಕೆ, ಫಲವಂತಿಕೆಗೆ, ಹೊಟ್ಟೆ ಹಸಿವಿನ ನಿತ್ರಾಣಕ್ಕೆ ಸಂಕೇತ. ಇಲ್ಲಿ ಎಲ್ಲವೂ ದಲಿತರೇ ಆಗಿದ್ದಾರೆ. ಇವರ ಮೃದುತ್ವ ಶೋಷಕರ ಪ್ರಭುತ್ವಕ್ಕೆ ಕಾರಣವಾಗಿದೆ.

ಕ್ವರುಗ್ತಿನಿ ಕ್ವನೆಗೊಂದ್ಸಲ ಕೂಗ್ತಿನಿ
ಬಡ್ಡೀ ದುಡ್ಡೋನ್ ಬಂಗ್ಲೆ ಕ್ಯಳ್ಗೆ
ತಳಾದೀಗ್ ಸುಕ್ಕಿರೋ ಮೂಳೆ
....
....
ಸೌದೆ ಸಿಗಿದಂಗ್ ಸಿಗಿತಿನಿ, ಸಾವ್ಕರಿ ಮಯ್ಯ
ಕಳ್ಳು ಪಚ್ಚಿ ಬಗಿತಿನಿ, ಕುಟ್ತಿನಿ
ಗಂಟ್ಮೂಳೆ ಕೊಬ್ಬ
ಕುಡಿತಿನಿ ಗಟಗಟನೆ, ಹ್ಯಂಡ ಕುಡ್ದಂಗೆ
ಸಾವ್ಕಾರಿ ರಕ್ತನ
ನಾ ಮೂಳೆ, ನಾ ಇಂಗೇ ಇರಲ್ಲ
ಕೂಗ್ತಿನಿ, ಸಿಡಿತಿನಿ, ಮನುಷ ಆಯ್ತಿನಿ[೪೭]

ಮೂಳೆ, ಗಂಟ್ಮೂಳೆ, ಕಳ್ಳುಪಚ್ಚಿ, ರಕ್ತ ಇವೆಲ್ಲವೂ ಮಾಂಸಾಹಾರದ ವಸ್ತುಗಳು, ಸಸ್ಯಾಹಾರಿ ಮತ್ತು ಮಾಂಸಾಹಾರಿ ಸಮಾಜವನ್ನು ಬೇರ್ಪಡಿಸುವ ಸೂಕ್ತ ಪದಗಳು. ತಾನಿರುವ

ಸಮಾಜದಿಂದಲೇ ಪರಿಕರಗಳನ್ನು ಆಯ್ಕೆಮಾಡಿಕೊಂಡು 'ನಾ ಮೂಳೆ' ಎಂದಿರುವ ಕವಿ ತನ್ನದೆಲ್ಲವನ್ನೂ ಕಳೆದುಕೊಂಡ ಹತಾಶಸ್ಥಿತಿ ಇದು. ಅಸ್ತಿತ್ವದ ನೆಲೆಯೇ ಇಲ್ಲದ ಪರಿಸ್ಥಿತಿ ಅಥವಾ ಅಸ್ತಿತ್ವದ ಹುಡುಕಾಟದಲ್ಲಿ ಈ ಕವನ ಸಾಗಿದೆ. ತನ್ನನ್ನು, ತನಗೆ ವಿರುದ್ಧವಾದುದನ್ನು ಕವಿ ತನ್ನ ಪರಿಸರದ ಪರಿಕರಗಳಿಂದಲೇ ಕಟ್ಟಿಕೊಟ್ಟಿದ್ದಾನೆ. ಕಳ್ಳುಪಚ್ಚಿ ಬಗೆಯೋದು, ಗಂಟ್ಮೂಳೆ ಕೊಬ್ಬ ಗಟಗಟನೆ ಕುಡಿಯೋದು, ಹ್ಯಂಡ ಇವೆಲ್ಲಾ ದಲಿತರ ಆಹಾರ ಪದ್ಧತಿಗೆ ಹಿಡಿದ ಕನ್ನಡಿ.

ಎಳೆವ ಎತ್ತಾಗಿ ಹೊರುವ ನೊಗವಾಗಿ
ಸಿಗಿವ ಗುಳವಾಗಿ ಬೆಳೆವ ಮರವಾಗಿ
ಬದುಕಿದೆನು ಹಟ್ಟಿಯಲಿ ಕೊಟ್ಟಿಗೆಯ ಕರುವಾಗಿ
ಹುಲ್ಲಾಗಿ ನೀರಾಗಿ ಬೇವಾಗಿ ಮೇವಾಗಿ
ಬದುಕಿದೆನು ಬಸವಳಿದು ನಿಮ್ಮ ಹಟ್ಟಿಯ ಒಳಗೆ[೪೮]

ದಲಿತನೊಬ್ಬನ ಜೀತ ಬದುಕಿನ ಪ್ರತಿಯೊಂದು ಮಜಲನ್ನು ಮೇಲಿನ ಕವನದ ಸಾಲುಗಳಲ್ಲಿರುವ ಎಲ್ಲಾ ಉಪಮೆಗಳು ಕಟ್ಟಿಕೊಡುತ್ತಿವೆ. ಇವು ಕಲ್ಪನಾಲೋಕದಿಂದ ಎದ್ದು ಬಂದವುಗಳಲ್ಲ. ತನ್ನ ಸ್ಪರ್ಶಾನುಭವದಿಂದ ಹುಟ್ಟಿದ ಹೋಲಿಕೆಗಳಿವೆ. ಬರೀ ಹೋಲಿಕೆಗಳಷ್ಟೇ ಅಲ್ಲ ಅವು ದಲಿತರ ಬದುಕನ್ನು ಬಿಚ್ಚಿಡುವ ಅಸ್ತ್ರಗಳೂ ಕೂಡ ಹೌದು. ಎಳೆವ ಎತ್ತು, ಹೊರುವ ನೊಗ, ಸಿಗಿವ ಗುಳ, ಎಲ್ಲವೂ ಶ್ರಮ ಸಂಸ್ಕೃತಿಯ ಸಂಕೇತ. ಬೆಳೆವ ಮರ, ಕೊಟ್ಟಿಗೆಯ ಕರು ಪ್ರತಿರೋಧ ಒಡ್ಡದ ಅಸಹಾಯಕ ಸ್ಥಿತಿಯಲ್ಲಿ ಇರುವಂತಹವು. ಎರಡೂ ಉಳ್ಳವರ ಗಾಳಕ್ಕೆ ತಕ್ಕ ಹಾಗೆ ತಿರುಗುವಂತಹುಗಳು. ಇಡೀ ಕವನ ಶ್ರಮ ಸಂಸ್ಕೃತಿಯ ನೆಲೆಗಳ ಅನಾವರಣದ ಜೊತೆಗೆ ಆ ಸಂಸ್ಕೃತಿಯ ಬದುಕಿಗೆ ಕಾರಣವಾಗುವ ನೆಲೆಗಳ ಅನಾವರಣವೂ ಇದೆ. ಹುಲ್ಲು, ನೀರು, ಬೇವು, ಮೇವು ಇವಿಲ್ಲದೆ ಮನುಷ್ಯನಾಗಲಿ, ಪ್ರಾಣಿಗಳಾಗಲಿ ಬದುಕಲು ಸಾಧ್ಯವಿಲ್ಲ. ಶ್ರಮದಿಂದಾಗಿ ಇವುಗಳು ಸಕಾಲಕ್ಕೆ ಸರಿಯಾದ ಸ್ಥಳಕ್ಕೆ ಸೇರುತ್ತವೆ. ಇದರಲ್ಲಿ ದಲಿತನ ಕೈಗಳ ಶ್ರಮವಿದೆ. ತಿನ್ನುವ ಪ್ರತಿಯೊಂದು ಅಗಳಿನಲ್ಲೂ ಶ್ರಮದ ಬೆವರುಗಳಿವೆ.

ಕ್ರಾಂತಿ ಕವಿಗಳು ಪ್ರತಿಮೆಯನ್ನು ಪಲ್ಲಟಗೊಳಿಸುವುದಷ್ಟೇ ಅಲ್ಲ. ಹೊಸದನ್ನು ಕಟ್ಟಿಕೊಡುತ್ತಾರೆ. ಹಾಗೆ ಕಟ್ಟಿಕೊಡುವಾಗ ಅವರಿಗೆ ಪರಂಪರೆಯ ಅರಿವು ಇರುತ್ತದೆ. ತನ್ನ ವಿರುದ್ಧ ಪರಂಪರೆಯನ್ನು ಧಿಕ್ಕರಿಸದ ಹೊರತು ಅವರು ಏನನ್ನೂ ಹುಟ್ಟುಹಾಕಲಾರು. ನಂಬಿದ, ನಂಬಿಸಿರುವ ಜಗತ್ತಿನ ಅನೇಕ ಮೋಸದ ಪೊರೆಯನ್ನು ಹರಿದು ಹೊಸ ಬೆಳಕಿನೊಂದಿಗೆ ಹೊಸ ಹೆಜ್ಜೆಯನ್ನಿಡಬೇಕಾದ ಸಂದಿಗ್ಧತೆ ಅವರ ಮುಂದಿದೆ. ಇದರ ನೆಲೆಯಲ್ಲೇ ಅನೇಕ ದಲಿತ ಕವಿಗಳು ಮುನ್ನುಗ್ಗಿದರು.

ಹಸಿವೊಂದೇ ಧರಿಸಿದಾಭರಣ
ಸಾಲವೊಂದೇ ಪಿತ್ರಾರ್ಜಿತ ಆಸ್ತಿ
ಉಳಿಸಿಕೊಂಡೆವದನೆ ನಾವು
ತಲತಲಾಂತರದಿಂದ[೪೯]

ಹಸಿವು ಬಡವರ ಮೂಲ ಶತ್ರು. ನಿತ್ಯ ಬದುಕು ಅನೇಕ ರೀತಿಯಲ್ಲಿ ಪಲ್ಲಟವಾಗುತ್ತಿರುವುದೇ ಈ ಹಸಿವಿನಿಂದ. ಹಸಿವು ದಲಿತರ ಬದುಕನ್ನು ದಿನನಿತ್ಯ ಕಿತ್ತು ತಿನ್ನುತ್ತಿದೆ. ಅವರ ಮೂಲಭೂತ ಸಮಸ್ಯೆ ಇರುವುದು ಇಲ್ಲಿಯೇ. 'ಆಭರಣ' ಅಲಂಕಾರದ ಸಾಧನ. ಸೌಂದರ್ಯವನ್ನು ಇಮ್ಮಡಿಗೊಳಿಸುವ ಸಾಧನ. ಆದರೆ ದಲಿತರಿಗೆ ಹಸಿವೇ ಆಭರಣವಾಗಿದೆ. ಇಲ್ಲಿ ಹಸಿವಿನ ಆಭರಣ ಎಂಬ ಮಾತು ದಲಿತರ ಗೋಳಿನ ಬದುಕನ್ನು ಬಿಚ್ಚಿಟ್ಟಿದೆ. ಅದರ ಜೊತೆಗೆ ಮೇಲ್ವರ್ಗದ ದಬ್ಬಾಳಿಕೆಗೆ ಪ್ರತಿನಿಧಿಯೆಂಬಂತೆ ಸಾಲ ಪಿತ್ರಾರ್ಜಿತ ಆಸ್ತಿಯಾಗಿ ಬಂದಿದೆ, ಅವೆರಡೂ ದಲಿತರ ಬದುಕನ್ನು ದಿನನಿತ್ಯ ಕಂಗಾಲಾಗಿಸಿವೆ. ಕೂಲಿ ಹೆಸರಿನಲ್ಲಿ ಕೊಲೆಗಳಾಗಿವೆ. ಜೀತದ ಹೆಸರಿನಲ್ಲಿ ದೌರ್ಜನ್ಯಗಳು ನಡೆಯುತ್ತಿವೆ. ಇದರ ಅರಿವೇ ಕಾವ್ಯದಲ್ಲಿ ವಸ್ತುವಾಗಿ ಪರಿಣಮಿಸಿದೆ.

ಅಕ್ಷರ ನೆರವಿನಿಂದ ಅರಿವು ಮೂಡಿಸಿಕೊಂಡ ದಲಿತರಿಗೆ ತನ್ನ ಸಂಸ್ಕೃತಿಯು ಪ್ರತಿಷ್ಠೆಯ ಸಂಕೇತವಾಗುತ್ತದೆ. ತನ್ನ ಗತಕಾಲದ ಪರಂಪರೆಯನ್ನು ಶೋಧಿಸಿ ಅವರು ಅದನ್ನು ಮುಂಚೂಣಿಗೆ ತರುತ್ತಾರೆ. ಅದು ಅವರ ಸ್ವಾಭಿಮಾನಿ ಪ್ರಶ್ನೆಯೂ ಆಗುತ್ತದೆ. ಇದರಲ್ಲಿ ಆಹಾರ ಪದ್ಧತಿಯೂ ಒಂದು. ಎನ್.ಕೆ. ಹನುಮಂತಯ್ಯನವರ 'ಗೋವು ತಿಂದು ಗೋವಿನಂತಾದವನು' ಎಂಬ ಕವನ ಇದಕ್ಕೊಂದು ಸ್ಪಷ್ಟ ನಿದರ್ಶನ.

ಅಸ್ಪೃಶ್ಯ !
ಹೌದು ; ನಾನು ವಿದ್ಯುತ್ತಿನ ಹಾಗೆ
ನಿಮ್ಮ ತಣ್ಣನೆಯ ಸ್ಪರ್ಶಕ್ಕೆ
ಸಿಕ್ಕಲಾರೆ[೫೦]

ಹೀಗೆ ಪ್ರಾರಂಭಗೊಂಡ ಕವನ ಮುಕ್ತಾಯವಾಗುವ ಬಗೆ ಈ ಕೆಳಗಿನಂತಿದೆ

ಅಸ್ಪೃಶ್ಯ !
ಹೌದು ; ನಾನು ಗೋವು ತಿಂದು
ಗೋವಿನಂತಾದವನು
ನೀವು ನೀಡುವ ಮೇವು ತಿಂದು

ನಿಮ್ಮಂಥ ಮನುಷ್ಯನಾಗಲಾರೆ
ಮನುಷ್ಯರನ್ನು ತಿನ್ನಲಾರೆ.[೫೧]

ನಾನು ಅಸ್ಪೃಶ್ಯ ಎಂದು ಹೇಳಿಕೊಳ್ಳುವುದೇ ದಲಿತರಿಗೆ ಇಂದು ಸ್ವಾಭಿಮಾನದ ಸಂಕೇತವಾಗಿದೆ. ಇದೇ ಮುಟ್ಟಿಸಿಕೊಳ್ಳದವರ ಬದುಕನ್ನು ಶ್ರೇಷ್ಠತೆಯ ಮಟ್ಟಕ್ಕೆ ಕೊಂಡೊಯ್ಯುತ್ತದೆ. ನೀವು ಮುಟ್ಟುವುದಿಲ್ಲ ಎಂಬುದಕ್ಕಿಂತ ನಿಮ್ಮ ಕೈಯಲ್ಲಿ ಮುಟ್ಟಲಾಗುವುದಿಲ್ಲ ಎಂಬುದೇ ದಲಿತರ ಎಚ್ಚರದ ಪ್ರಜ್ಞೆಯಾಗಿದೆ. 'ಗೋವು' ಮೂಕಪ್ರಾಣಿ, ಹಾಲು ಕೊಡುವ ಕಾರಣ ಶ್ರೇಷ್ಠ ಪ್ರಾಣಿ, ಕೆಲವೊಂದು ಜನಾಂಗಕ್ಕಂತೂ ಇದು ದೇವರ ಪ್ರತಿರೂಪ. ಅದರ ಕೆಚ್ಚಲಿನಲ್ಲಿ ಮುಕ್ಕೋಟಿ ದೇವತೆಗಳೇ ಅಡಗಿಕೊಂಡಿದ್ದಾರೆ ಎಂಬ ಧಾರ್ಮಿಕ ದೃಷ್ಟಿಕೋನ ಹೊಂದಿ ಅದಕ್ಕೆ ಪವಿತ್ರ ಸ್ಥಾನವನ್ನು ನೀಡಿದ್ದಾರೆ. ಆದರೆ ದಲಿತರಿಗೆ ಅದೇ ಆಹಾರವಾಗಿ ಪರಿಣಮಿಸಿದೆ. ಅವರಿಗೆ ಯಾವುದು ಪೂಜ್ಯವೋ, ಅದೇ ಇವರಿಗೆ ಆಹಾರವಾಗಿ ಮಾರ್ಪಟ್ಟಿದೆ. ಅದರೆ ಗೋವು ತಿಂದ ದಲಿತ ಗೋವಿನಂತಾಗಿದ್ದಾನೆ. ಗೋವು ತಿನ್ನದವನು ಮನುಷ್ಯರನ್ನು ತಿನ್ನುವವರಾಗಿ ಪರಿಣಮಿಸಿದ್ದಾರೆ. ಹಾಗಾಗಿ ನಿಮಗಿಂತ ನಾವೇ ಮೇಲು ಎನ್ನುವ ದೃಢತೆ ಇಲ್ಲಿ ಮನೆ ಮಾಡಿದೆ. ಶತಮಾನಗಳಿಂದಲೂ ದಲಿತರು ಗೋವಿನ ರೀತಿಯಲ್ಲೇ ಬದುಕಿದ್ದಾರೆ. ಗೋವು ಶ್ರಮಕ್ಕೆ ಸಂಕೇತ. ಶ್ರಮದ ಜೊತೆಗಿನ ದಲಿತರು ಅದರ ವಾರಸುದಾರರು. ಹಾಗಾಗಿ ಅದನ್ನು ತಿನ್ನುವುದು ನಮ್ಮ ಸಂಸ್ಕೃತಿ ಎಂದೇ ಭಾವಿಸುತ್ತಾರೆ. ಇನ್ನು ಮುಟ್ಟಿಸಿಕೊಳ್ಳಲಾರದಕ್ಕೆ ಕೊಟ್ಟಿರುವ ಎಲ್ಲಾ ರೂಪಕಗಳೂ ಕೂಡ ಮನುಷ್ಯ ಮುಟ್ಟದ ನೆಲೆಗಳೇ ಆಗಿವೆ. ಮನುಷ್ಯನಿಂದ ಸಾಧ್ಯವಾಗದ ಆ ಜಾಗಗಳನ್ನು ಮುಟ್ಟಿದರೆ ಅಲ್ಲೊಂದು ಬದಲಾವಣೆ ಸಾಧ್ಯ. ಹಾಗೆಯೇ ದಲಿತರನ್ನು ದಲಿತೇತರರು ಮುಟ್ಟಿದರೆ ಅಲ್ಲೊಂದು ಬದಲಾವಣೆ ಸಾಧ್ಯ ಎಂಬುದು ಕವಿತೆಯ ಆಶಯವಾಗಿದೆ.

ದಲಿತರ ಬದುಕು ಕತ್ತಲೆಯ ಬದುಕು. ಈ ಕತ್ತಲೆಯಿಂದ ಬೆಳಕಿನೆಡೆಗೆ ಸಾಗಲು ಅನೇಕ ಅಡೆತಡೆಗಳಿವೆ. ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ, ಆರ್ಥಿಕವಾಗಿ ದಲಿತರು ಮೇಲೇಳದ ಹೊರತು ಕತ್ತಲೆಯಿಂದ ಬಿಡುಗಡೆ ಸಾಧ್ಯವಿಲ್ಲ. ಆ ಬದಲಾವಣೆ ಎಡೆಗೇ ದಲಿತ ಚಳುವಳಿ, ಕಾವ್ಯ ಎಲ್ಲವೂ ಸಾಗಬೇಕು. ಇದರ ತತ್ವ ಅರಿತೇ ದಲಿತ ಕಾವ್ಯ ಬೆಳಕನ್ನು ಉಳ್ಳವರಿಗೆ ಹೋಲಿಸಿ, ಕತ್ತಲೆಯನ್ನು ದಲಿತರ ಸಮಸ್ತ ಬದುಕಿನ ಸಂಕೇತವಾಗಿ ನಿಲ್ಲಿಸಿದ್ದಾರೆ. ಇದರ ನಡುವೆ ನೆಮ್ಮದಿ ಹುಡುಕುವ ಮನಸ್ಥಿತಿಗಳೂ ಕೂಡ ಇವೆ.

ಹೊತ್ತನು ಅರಿಯದ ದಿಕ್ಕನು ಕಾಣದ
ಸೀಳುದಾರಿಯ ಪಯಣಿಗರು
ನೋವಿನ ಹಾಡಿನ ಕತ್ತಲ ನಾಡಿನ
ಬೆಳಕನು ಅರಸುವ ಹಕ್ಕಿಗಳು[೫೨]

‘ಹಕ್ಕಿ’ ಸ್ವಾತಂತ್ರ್ಯದ ಸಂಕೇತವೂ ಹೌದು, ಸ್ವಾವಲಂಬನೆಯ ಸಂಕೇತವೂ ಹೌದು. ಈ ರೂಪಕವನ್ನು ಬಳಸಿಕೊಂಡು ಅನೇಕರು ಅನೇಕ ರೀತಿಯಲ್ಲಿ ತಮ್ಮ ನಿಲುವುಗಳನ್ನು ಅಭಿವ್ಯಕ್ತಿಸಿದ್ದಾರೆ. ಬೇಂದ್ರೆ ಹಕ್ಕಿಯನ್ನು ಕಾಲಸೂಚಕವಾಗಿ ಬಳಸುತ್ತಾರೆ. “ಕಣವಿಯಲ್ಲಿ ಮಧುರಗಾನಕ್ಕೆ ಸಂಕೇತ, ಬೇಂದ್ರೆಯವರಲ್ಲಿ ಲಹರಿತನಕ್ಕೆ ಸಂಕೇತ, ಅಡಿಗ, ಲಂಕೇಶ್, ತೇಜಸ್ವಿಯವರಲ್ಲಿ ವ್ಯಕ್ತಿ ಸ್ವಾತಂತ್ರ್ಯದ ಸಂಕೇತ”.[೫೩] ಆದರೆ ದಲಿತರಲ್ಲಿ ಇದು ಬೆಳಕನರಸಿ ಹೊರಟ ಪಯಣಿಗನಾಗಿದೆ. ಅದು ದಿಕ್ಕು ಕಾಣದ ಹಕ್ಕಿ. ಹಾಡು ಸಂಪ್ರದಾಯದ ಈ ಹಕ್ಕಿ ನೋವಿನ ಹಾಡಿನ ಕತ್ತಲ ನಾಡಿನ ಬೆಳಕು ಅರಸುತ್ತಾ ಹೊರಟಿದೆ.

“ಹನುಮಂತಯ್ಯನವರ ಕವಿತೆಗಳಲ್ಲಿ ಕಾಣುವ ಇನ್ನೊಂದು ಮುಖ್ಯರೂಪಕ ಹಕ್ಕಿಗಳದ್ದು. ಅವು ಗಿಳಿ, ಪಾರಿವಾಳ, ಹದ್ದು, ಗರುಡ ಇಂತಹ ಹಕ್ಕಿಗಳ ರೂಪಕ ಲೋಕವೂ ಸಂದಿಗ್ಧವಾದದ್ದೇ. ಕನ್ನಡ ಕಾವ್ಯ ಸಂವಾದದಲ್ಲಿ ಹಕ್ಕಿಗಳು ಸ್ವಾತಂತ್ರ್ಯದ ಸಂಕೇತವಾಗಿದ್ದರೆ ಈ ಕವಿತೆಗಳಲ್ಲಿ ಅವು ಸ್ವಾತಂತ್ರ್ಯದೊಡನೆ ದುರ್ಬಲ ಅಸಹಾಯಕತೆಯನ್ನೂ ಸೂಚಿಸುವಂತಿದೆ. " ಪಂಜರದ ಗಿಳಿ ಗುನುಗುತ್ತಿದೆ ಬಿಡುಗಡೆಯ ರಾಗ’ (ಆಕಾಶ), ನಿನ್ನ ಆಗಸದ ಹಕ್ಕಿಗಳು\ ರೆಕ್ಕೆ ಮುರಿದರೂ ಫೀನಿಕ್ಷನಂತೆ ಹಾರಾಡಿವೆ’ (ಅಕ್ಕಾ), ತಾಯ್ಗಿಳಿಗೆ ಆತಂಕ\ ಗಿಡುಗ ಬಡಿದೀತೆಂಬ ಭಯದ ಗಾಳಿ (ಬ್ಯಾಸಿಗೆ), ಮನೆಬಿಟ್ಟು ಹೊರಟಾಗಲೆಲ್ಲ\ ನೆತ್ತಿಯ ಹುಡುಕಿ ಗಿಡುಗ ಹಾರಿತ್ತು\ ಕಿತ್ತುಕೊಳ್ಳಲು ನನ್ನ ಪ್ರಾಣಪಕ್ಷಿಯ ಜೀವ (ಮಾತನಾಡುವ ಗಿಳಿ), ಕೋಗಿಲೆಯ ಕಂಠದೊಳಗೆ ಶಾಸಕರು\ ಬಿಟ್ಟ ಬಾಣಗಳು ನೆಟ್ಟಿದ್ದ ಕಂಡೆ’ (ಪ್ರತಿಮೆ), ಇಂಥ ಸಾಲುಗಳು ಮತ್ತೆ ಮತ್ತೆ ಎದುರಾಗುತ್ತವೆ. ಸ್ವಾತಂತ್ರ್ಯ ಎಂದಿಗೂ ಭಯಮಿಶ್ರಿತವೇ ಆಗಿರುತ್ತದೆಯೋ ಏನೋ!”[೫೪]

ದಲಿತ ಕಾವ್ಯದಲ್ಲಿ ಗಙ್ಡ, ಪಾರಿವಾಳ, ಕಾಗೆ, ಗೂಬೆ, ಗಿಳಿ, ಗಿಡುಗ, ಗುಬ್ಬಚ್ಚಿ, ಕೋಗಿಲೆ ಮುಂತಾದ ಹಕ್ಕಿಗಳು ಅನೇಕ ರೂಪಕಗಳಲ್ಲಿ ಅಭಿವ್ಯಕ್ತಗೊಂಡಿವೆ. ಕೆಲವೊಂದು ಶೋಷಕರ ಶೋಷಣೆಯ ತೀವ್ರತೆಯನ್ನು ಅಭಿವ್ಯಕ್ತಿಸಿದರೆ, ಇನ್ನೂ ಕೆಲವು ಶೋಷಿತರ ಅಸಹಾಯಕತೆಯನ್ನು ನಿರೂಪಿಸಿವೆ. ದಲಿತ ಕಾವ್ಯ ಯಾವಾಗಲೂ ತನ್ನವರ ಸ್ಥಿತಿಯನ್ನು ಹೇಳುತ್ತಲೇ ಆ ಸ್ಥಿತಿಗೆ ಕಾರಣರಾದವರನ್ನು ಅಂತರಾಳದಲ್ಲಿ ಅಥವಾ ಉಪಮೆಗಳ ಮೂಲಕ ನಿರೂಪಿಸುತ್ತದೆ. ಇಲ್ಲಿ ಕಾಗೆ ದಲಿತರ ಪ್ರತಿನಿಧಿಯಾದರೆ, ಗಙ್ಡ ಶೋಷಕರ ಪ್ರತಿನಿಧಿಯಾಗಿ ನಿಲ್ಲುತ್ತದೆ. ಹಾಗೆಯೇ ಇನ್ನಿತರ ಉಪಮೆ ರೂಪಕಗಳು.

*****

ಕೊನೆ ಟಿಪ್ಪಣಿಗಳು

೧. ದಲಿತ ಬಂಡಾಯ ಕಾವ್ಯ ವಿಚಾರವಾದಗಳು, ಪ್ರಾಹ್ಲಾದ ಅಗಸನಕಟ್ಟೆ ೨೦೦೪, ಪುಟ ೬೯

೨. ಚಂದಿರನ ಕಣ್ಣು ಇಂಗಲಾರದ ಹುಣ್ಣು (ಆಯ್ದ ಕವಿತೆಗಳು), ಮೂಡ್ನಾಕೂಡು ಚಿನ್ನಸ್ವಾಮಿ, ೨೦೦೪, ಪುಟ ೩೦

೩. ಹೋರಾಟದ ಹಾಡುಗಳು, ದಲಿತ ಸಂಘರ್ಷ ಸಮಿತಿ ಪ್ರಕಟಣೆ, ೧೯೮೦ ಪುಟ ೩೦

೪. ಉರಿ ಕಂಡಾಯ, ಡಾ. ಸಿದ್ಧಲಿಂಗಯ್ಯ, ೨೦೦೯, ಪುಟ ೩೦

೫. ಮತ್ತೆ ಮಳೆ ಬರುವ ಮುನ್ನ, ಮೂಡ್ನಾಕೂಡು ಚಿನ್ನಸ್ವಾಮಿ, ೨೦೦೦, ಪುಟ ೩೯

೬ ಉರಿ ಕಂಡಾಯ, ಡಾ. ಸಿದ್ಧಲಿಂಗಯ್ಯ, ೨೦೦೯, ಪುಟ ೩೯

೭ ಕಪ್ಪು ಕಾವ್ಯ, ಅರವಿಂದ ಮಾಲಗತ್ತಿ, ೧೯೮೫, ಪುಟ ೭

೮. ಹೋರಾಟದ ಹಾಡುಗಳು, ದಲಿತ ಸಂಘರ್ಷ ಸಮಿತಿ ಪ್ರಕಟಣೆ, ೧೯೮೦, ಪುಟ ೫೯

೯. ಕಲ್ಲಿಗೂ ಗೊತ್ತಿರುವ ಕತೆ, ಸತ್ಯಾನಂದ ಪಾತ್ರೋಟ, ೧೯೯೪, ಪುಟ ೬೪

೧೦. ಕದಡು (ಸಾಹಿತ್ಯ ಸಂಸ್ಕೃತಿ ವಿಮರ್ಶೆ), ಡಾ. ಬಿ.ಎಂ. ಪುಟ್ಟಯ್ಯ, ೨೦೦೮, ಪುಟ ೧೬೪

೧೧. ಕರಿ ನೆಲದ ಕಲೆಗಳು, ಸತ್ಯಾನಂದ ಪಾತ್ರೋಟ, ೧೯೮೫, ಅರಿಕೆ

೧೨. ಆಧುನಿಕ ಕನ್ನಡ ಕಾವ್ಯ ಮೀಮಾಂಸೆ, ಡಾ. ಎಂ.ಎಸ್. ಹಿರೇಮಠ, ೨೦೦೨, ಪುಟ ೧೨೭

೧೩. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೫೯

೧೪. ಬಡವರ ನಗುವಿನ ಶಕ್ತಿ (ಸಂ), ದಂಡಪ್ಪ. ಹೆಚ್., ೨೦೦೧, ಪುಟ ೧೭೩

೧೫. ರಕ್ತದ ರಂಗೋಲಿ, ಆರ್. ಮಾನಸಯ್ಯ, ೨೦೦೭, ಪುಟ ೨೪

೧೬. ಕದಡು (ಸಾಹಿತ್ಯ ಸಂಸ್ಕೃತಿ ವಿಮರ್ಶೆ), ಡಾ. ಬಿ.ಎಂ. ಪುಟ್ಟಯ್ಯ, ೨೦೦೮, ಪುಟ ೧೬೪

೧೭. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೧೫

೧೮. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೮೯

೧೯. ದಲಿತ ಸಾಹಿತ್ಯ ಪ್ರವೇಶಿಕೆ, ಡಾ. ಅರವಿಂದ ಮಾಲಗತ್ತಿ, ೧೯೯೭, ಪುಟ ೧೮

೨೦. ಕರಿನೆಲದ ಕಲೆಗಳು, ಸತ್ಯಾನಂದ ಪಾತ್ರೋಟ, ೧೯೮೫, ಪುಟ ೯

೨೧. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೭೧

೨೨. ಕದಡು (ಸಾಹಿತ್ಯ ಸಂಸ್ಕೃತಿ ವಿಮರ್ಶೆ), ಡಾ. ಬಿ.ಎಂ. ಪುಟ್ಟಯ್ಯ, ೨೦೦೮, ಪುಟ ೫೪

೨೩. ಅದೇ ಪುಟ ೫೭

೨೪. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೯೨

೨೫. ಅದೇ ಪುಟ ೯೨

೨೬. ಅದೇ ಪುಟ ೯೩

೨೭. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೯೪

೨೮. ಹೋರಾಟದ ಹಾಡುಗಳು, ದಲಿತ ಸಂಘರ್ಷ ಸಮಿತಿ ಪ್ರಕಟಣೆ, ೧೯೮೦, ಪುಟ ೧

೨೯. ನೊಂದವರ ನೋವುಗಳು, ರಾಜಶೇಖರ ಮಾಂಗ್, ೨೦೦೬, ಪುಟ ೭

೩೦. ಸಮಕಾಲೀನ ಕನ್ನಡ ಕವಿತೆ, (ಸಂ) ಜಿ.ಎಸ್. ಶಿವರುದ್ರಪ್ಪ, ಚಿ. ಶ್ರೀನಿವಾಸರಾಜು (೧೯೮೦) ೧೯೯೯, ಪುಟ ೨೩

೩೧. ಕಾಡುಕಣಿವೆಯ ಹಕ್ಕಿ, ಡಾ.ವಿ. ಮುನಿವೆಂಕಟಪ್ಪ, ೧೯೯೯, ಪುಟ ೮

೩೨. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೮೭

೩೩. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೮೭

೩೪. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬಂಡಾಯ, ಚಂದ್ರಕಾಂತ್ ವಿ. ಚವ್ಹಾಣ್, ೨೦೦೪, ಪುಟ. ೧೫೮

೩೫. ಚಿತ್ರದ ಬೆನ್ನು : ಎನ್.ಕೆ. ಹನುಮಂತಯ್ಯ, ೨೦೦೬, ಪುಟ ೩೧

೩೬. ಕದಡು (ಸಾಹಿತ್ಯ ಸಂಸ್ಕೃತಿ ವಿಮರ್ಶೆ), ಡಾ. ಬಿ.ಎಂ. ಪುಟ್ಟಯ್ಯ, ೨೦೦೮, ಪುಟ ೧೬೪

೩೭. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೮೮

೩೮. ಹೋರಾಟದ ಹಾಡು, ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್ ಪ್ರಕಾಶನ, ೨೦೦೬, ಪುಟ ೪೧

೩೯. ಅದೇ ಪುಟ ೧೩

೪೦. ಹೋರಾಟದ ಹಾಡುಗಳು, ದಲಿತ ಸಂಘರ್ಷ ಸಮಿತಿ ಪ್ರಕಟಣೆ, ೧೯೮೦, ಪುಟ ೬೮

೪೧. ಸೂಜಿಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು, ಸುಬ್ಬು ಹೊಲೆಯಾರ್, ೨೦೦೩, ಪುಟ ೧೩

೪೨. ಸೂಜಿಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು, ಸುಬ್ಬು ಹೊಲೆಯಾರ್, ೨೦೦೩, ಪುಟ ೧೪

೪೩. ಮತ್ತೆ ಮಳೆ ಬರುವ ಮುನ್ನ, ಮೂಡ್ನಾಕೂಡು ಚಿನ್ನಸ್ವಾಮಿ, ೨೦೦೦, ಪುಟ ೪೧

೪೪. ಮತ್ತೆ ಮಳೆ ಬರುವ ಮುನ್ನ, ಮೂಡ್ನಾಕೂಡು ಚಿನ್ನಸ್ವಾಮಿ, ೨೦೦೦, ಪುಟ ೭

೪೫. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೮೫

೪೬. ಮುಳ್ಳುಕಂಟಿಯಾ ನಡುವೆ, ಅನಸೂಯ ಕಾಂಬಳೆ, ೧೯೯೯, ಪುಟ ೯

೪೭. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೫೮

೪೮. ಕಪ್ಪು ಕಣ್ಣಿನ ಹುಡುಗಿ, ಎಲ್. ಹನುಮಂತಯ್ಯ, ೧೯೯೧, ಪುಟ ೧

೪೯. ಸ್ವಾಭಿಮಾನದ ಬೀಡಿಗೆ, ವಿ. ಮುನಿವೆಂಕಟಪ್ಪ, ೧೯೯೬, ಪುಟ ೨೧

೫೦. ಚಿತ್ರದ ಬೆನ್ನು, ಎನ್.ಕೆ. ಹನುಮಂತಯ್ಯ, ೨೦೦೬, ಪುಟ ೩

೫೧. ಚಿತ್ರದ ಬೆನ್ನು, ಎನ್.ಕೆ. ಹನುಮಂತಯ್ಯ, ೨೦೦೬, ಪುಟ ೫

೫೨. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೩೪

೫೩. ಇಲ್ಲಿ ಯಾರೂ ಮುಖ್ಯರಲ್ಲ, ರಹಮತ್ ತರೀಕೆರೆ, ೨೦೦೫, ಪುಟ ೨೦೪

೫೪. ಅಕ್ಷಾರ ಅಕ್ಷಾರವೇ, ಡಾ. ಎಲ್. ಹನುಮಂತಯ್ಯ, ೨೦೦೨, ಪುಟ ೧

ಅಧ್ಯಾಯ ಆರು

ದಲಿತ ಕಾವ್ಯ : ಸಾಮಾಜಿಕ ತತ್ವ

೬.೧. ದಲಿತ ಕಾವ್ಯ : ಘಟನೆಗಳ ಮೂಲಕ ಸಾಮಾಜಿಕ ವಸ್ತುಸ್ಥಿತಿ

೬.೨. ದಲಿತ ಕಾವ್ಯ : ಮಹಿಳೆ, ಪುರುಷ ಮತ್ತು ಹೋರಾಟ

೬.೩. ದಲಿತ ಕಾವ್ಯ : ಅಪೇಕ್ಷಿತ ಸಮಾಜ

೬

ದಲಿತ ಕಾವ್ಯ : ಸಾಮಾಜಿಕ ತತ್ವ

೧೯೭೦ರ ದಶಕ ಕರ್ನಾಟಕದಲ್ಲಿ ಒಂದು ಹೊಸ ಬಗೆಯ ಸಂಚಲನೆ ಉಂಟಾದಂತಹ ಸಂದರ್ಭ. ೧೯೭೩ರಲ್ಲಿ 'ಮಲ ಹೊರುವ ಪದ್ಧತಿ ಕುರಿತ ಚರ್ಚೆ' ಇದೇ ಸಂದರ್ಭದಲ್ಲಿ ಲೋಹಿಯಾ ಮಂಚ ವೇದಿಕೆ ವತಿಯಿಂದ ನಡೆದ ಜಾತಿವಿನಾಶ ಸಮ್ಮೇಳನ, ೧೯೭೪ರಲ್ಲಿ ಬಸವಲಿಂಗಪ್ಪನವರ ಬೂಸಾ ಪ್ರಕರಣ, ಇದರ ಕಾವಿನಲ್ಲೇ ಜನ್ಮ ತಾಳಿದ 'ಕರ್ನಾಟಕ ದಲಿತ ಸಂಘರ್ಷ ಸಮಿತಿ' ೧೯೭೫ರಲ್ಲಿ ಬಂದ 'ದಲಿತ ಬರಹಗಾರರ ಯುವ ಸಂಘಟನೆ' ಮತ್ತು 'ರೈತ ಚಳುವಳಿ'ಗಳು ಕರ್ನಾಟಕದಲ್ಲಿ ಒಂದು ರೀತಿಯ ಚಲನಶೀಲತೆಯನ್ನು ತಮ್ಮ ಹೋರಾಟದ ಮೂಲಕ ಉಂಟುಮಾಡಿದವು. ಸಾಹಿತ್ಯೇತರ ಕಾರಣಗಳಿಗಾಗಿ ಹುಟ್ಟಿಕೊಂಡ ಈ ಚಳುವಳಿಗಳು ಸಮಾಜ ಮತ್ತು ಸಾಹಿತ್ಯದ ಮೇಲೆ ತೀವ್ರತರವಾದ ಪರಿಣಾಮವನ್ನು ಬೀರಿದವು.

ಸ್ವಾತಂತ್ರ್ಯ ಚಳುವಳಿ, ಕರ್ನಾಟಕ ಏಕೀಕರಣ ಚಳುವಳಿ ಮತ್ತು ಕನ್ನಡ ಭಾಷಾ ಚಳುವಳಿಗಳು ನವೋದಯ ಸಾಹಿತ್ಯದ ಮೇಲೆ ತೀವ್ರತರವಾದ ಪರಿಣಾಮಗಳನ್ನು ಬೀರಿದ ಹಾಗೆ, ೧೯೭೦ರ ದಶಕದಲ್ಲಿ ಉಂಟಾದ ದಮನಿತರ ಒಗ್ಗೂಡುವಿಕೆಯ ಹೋರಾಟಗಳು ದಲಿತ ಮತ್ತು ಬಂಡಾಯ ಸಾಹಿತ್ಯದ ಮೇಲೆ ತೀವ್ರತರವಾದ ಪರಿಣಾಮವನ್ನು ಬೀರಿದವು. ಸಾಹಿತ್ಯ ಮತ್ತು ಹೋರಾಟ ಇವೆರಡೂ ಹೋರಾಟಗಾರರಲ್ಲಿ ಅವಿಭಾಜ್ಯ ಅಂಗಗಳಾಗಿ ಮಾರ್ಪಟ್ಟವು. ದಮನಿತರು ತಮ್ಮ ದಬ್ಬಾಳಿಕೆಯ ವಿರುದ್ಧ ಸಂಘಟಿತರಾಗಲು ಪ್ರಯತ್ನಿಸಿದ್ದರಿಂದ ಅದು 'ಕರ್ನಾಟಕ ದಲಿತ ಸಂಘರ್ಷ ಸಮಿತಿ'ಯಾಗಿ ರೂಪ ಪಡೆದು, ಡಿ.ಎಸ್.ಎಸ್. ಎಂದೇ ಪ್ರಚಾರ ಪಡೆಯಿತು.

ಯಾವುದೇ ಒಂದು ಸಂಘಟನೆಯಾಗಲಿ, ಚಳುವಳಿಯಾಗಲಿ ಇದ್ದಕ್ಕಿದ್ದಂತೆ ಉದ್ಭವವಾಗುವುದಿಲ್ಲ. ಅದಕ್ಕೊಂದು ಸಾಮಾಜಿಕ, ರಾಜಕೀಯ ತುರ್ತು ಮತ್ತು ಹಿನ್ನೆಲೆಗಳಿರುತ್ತವೆ. ಕರ್ನಾಟಕದಲ್ಲಿ ಡಿ.ಎಸ್.ಎಸ್.ಗಿಂತ ಮೊದಲು ಜಯಭೀಮ ಸಂಘ, ಅಂಬೇಡ್ಕರ್ ಸಂಘ, ಹರಿಜನ ಭಜನಾ ಮಂಡಳಿ, ಭೀಮಸೇನೆ ಮುಂತಾದ ಸಂಘಟನೆಗಳು ದಲಿತರ ಪರವಾದ ಹೋರಾಟದ ಆಲೋಚನೆಯಲ್ಲಿ ಮುನ್ನಡೆದಿದ್ದವು. ಇವುಗಳಿಗೆ ಭಾರತದಾದ್ಯಂತ ಮುಂಚೂಣಿಗೆ ಬಂದ ಅಸ್ಪೃಶ್ಯರ ಸಂಘಟನೆಗಳು ಪ್ರೇರಣೆ ನೀಡಿದ್ದವು. ಉದಾ:– ಪಂಜಾಬಿನ ಅದ್ ಧರ್ಮ

ಚಳುವಳಿ, ಬಂಗಾಳದಲ್ಲಿ ನಾಮ ಶೂದ್ರ ಚಳುವಳಿ, ತಮಿಳುನಾಡಿನಲ್ಲಿ ಆದಿದ್ರಾವಿಡ ಚಳುವಳಿ, ಉತ್ತರ ಪ್ರದೇಶದಲ್ಲಿ ಆದಿ ಹಿಂದೂ ಚಳುವಳಿ, ಕೇರಳದಲ್ಲಿ ಪೊಲೆಯಾ ಮತ್ತು ಚಮ್ಮಾರ ಚಳುವಳಿ, ಮಹಾರಾಷ್ಟ್ರದಲ್ಲಿ ಅಸ್ಪೃಶ್ಯ ಚಳುವಳಿ ಮುಂತಾದವುಗಳು ಭಾರತದಾದ್ಯಂತ ದಲಿತರು ಒಗ್ಗೂಡಿ ಹೋರಾಡಲು ಪ್ರೇರಣೆ ನೀಡಿದವು.

ಕರ್ನಾಟಕ ಕಂಡ ದಲಿತರ ಪರವಾದ ದೊಡ್ಡ ಸಂಘಟನೆ ಎಂದರೆ 'ದಲಿತ ಸಂಘರ್ಷ ಸಮಿತಿ'. ಅಂಬೇಡ್ಕರ್, ಫುಲೆ, ಮಾರ್ಕ್ಸ್, ಪೆರಿಯಾರ್ ಮುಂತಾದವರ ಹೋರಾಟಗಳಿಂದ ಪ್ರೇರಣೆ ಪಡೆದ ಸ್ವಾತಂತ್ರ್ಯ ನಂತರದ ಅಕ್ಷರ ಕಲಿತ ಮೊದಲ ತಲೆಮಾರಿನ ದಲಿತರು ಡಿ.ಎಸ್.ಎಸ್. ಸಂಘಟನೆಯಲ್ಲಿ ಒಗ್ಗೂಡಿದರು. ಕರ್ನಾಟಕದಾದ್ಯಂತ ಎಲ್ಲೆಲ್ಲಿ ದಲಿತರ ಮೇಲೆ ದೌರ್ಜನ್ಯ, ಅವಮಾನಗಳಾಗುತ್ತಿದ್ದವೋ ಅಲ್ಲಿ ನಿಂತು ಪ್ರತಿಭಟನೆ ಮಾಡಿ ನ್ಯಾಯ ಕೇಳಲು ಮುಂದಾದರು. ಭೂ ಹೋರಾಟ ಮತ್ತು ವಸತಿಗೆ ಸಂಬಂಧಿಸಿದ ಹೋರಾಟಗಳು ಪ್ರಾರಂಭದಲ್ಲಿ ಹೆಚ್ಚು ನಡೆದವು. ಇದರ ಪರಿಣಾಮದಿಂದಾಗಿ ೧೯೭೬ರಲ್ಲಿ ಭದ್ರಾವತಿಯ ಸಿದ್ದಾಪುರದ ಭೂಹೋರಾಟ, ಕರ್ನಾಟಕದಲ್ಲಿ ಭೂ ಪರಭಾರೆ ನಿಷೇಧ ಕಾಯ್ದೆ ಜಾರಿಗೆ ತರುವುದಕ್ಕೆ ಕಾರಣವಾಯಿತು. ಡಿ.ಎಸ್.ಎಸ್. ಹಾಸನ ಜಿಲ್ಲೆಯ ಬಿದಿರೆ ಕಾವಲಿನಲ್ಲಿ ನಡೆದ ಭೂ ಆಕ್ರಮಣ ಚಳುವಳಿಯಿಂದ ೪೦೦ ಎಕರೆ ಭೂಮಿಯನ್ನು ಹೋರಾಟದಿಂದ ಪಡೆದುಕೊಂಡಿತು. ಅಲ್ಲದೆ ಅಸ್ಪೃಶ್ಯರು ಮತ್ತು ಸ್ಪೃಶ್ಯರು ಎಂಬ ಭೇದ ಭಾವ ಇಲ್ಲದೆಯೆ ಎಲ್ಲ ಜಾತಿಯ ಬಡವರಿಗೂ ಭೂಮಿಯನ್ನು ಹಂಚಿಕೊಟ್ಟಿದೆ.

ದಲಿತರ ಮೂಲಭೂತ ಸಮಸ್ಯೆ ಹಸಿವು ಮತ್ತು ಬಡತನ. ಇವೆರಡೂ ದಲಿತರನ್ನು ದಿನನಿತ್ಯ ಕಿತ್ತು ತಿಂದಿವೆ. ಹಸಿವಿನ ಸಮಸ್ಯೆಯಿಂದಾಗಿಯೇ ದಲಿತರು ಕೂಲಿ ಮತ್ತು ಜೀತ ಪದ್ಧತಿಗಳಿಗೆ ಶರಣಾಗಬೇಕಾಯಿತು. ಕೂಲಿ, ಜೀತ ಪದ್ಧತಿಗಳು ದಲಿತರನ್ನು ಅವಮಾನ, ಅತ್ಯಾಚಾರ, ಶೋಷಣೆ, ದೌರ್ಜನ್ಯ, ದಬ್ಬಾಳಿಕೆಗಳಿಗೆ ಅನುವು ಮಾಡಿದವು. ಇದನ್ನರಿತ ಡಿ.ಎಸ್.ಎಸ್. ದಲಿತರಿಗೆ ಭೂಮಿ ಇಲ್ಲದಿರುವುದೇ ದೊಡ್ಡ ಸಮಸ್ಯೆ ಎಂದು ಪರಿಗಣಿಸಿ ಕರ್ನಾಟಕದಲ್ಲಿ ಅನೇಕ ಭೂ ಹೋರಾಟಗಳನ್ನು ಹುಟ್ಟುಹಾಕಿತು. ಹಾಸನದ ಬಿದಿರೆ ಕಾವಲು, ಹೆಗ್ಗಡದೇವನ ಕೋಟೆಯ ದೇವಲಾಪುರ, ಕೋಲಾರ ಜಿಲ್ಲೆಯ ನಾಗಸಂದ್ರ, ರಾಯಚೂರಿನ ಮೆದಕಿನಾಳ, ದಕ್ಷಿಣ ಕನ್ನಡದ ಪೇಜಾವರ, ಚಿಕ್ಕಮಗಳೂರಿನ ಚಂಡುಗೋಡು ಮುಂತಾದ ಕಡೆಗಳಲ್ಲಿ ಮೊದಲು ಭೂಹೋರಾಟ ಕೈಗೊಂಡಿತು. ಅಲ್ಲಿ ಸಾಕಷ್ಟು ಜಯವನ್ನು ಸಾಧಿಸಿತು.

ಕರ್ನಾಟಕದಲ್ಲಿ ಡಿ.ಎಸ್.ಎಸ್. ಇಂತಹ ಹೋರಾಟಗಳನ್ನು ನಡೆಸುತ್ತಿರುವ ಸಂದರ್ಭದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿಯೂ ಹೊಸ ಬದಲಾವಣೆಗಳು ಮೂಡಲು ಶುರುವಾದವು. ಹೋರಾಟದ ಕಾವಿನಲ್ಲೇ ಮೂಡಿಬಂದ ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು' ಮತ್ತು ದೇವನೂರರ 'ದ್ಯಾವನೂರು' ಕಥಾ ಸಂಕಲನಗಳು ಸಾಹಿತ್ಯ ಕ್ಷೇತ್ರದಲ್ಲಿ ಹೊಸದಾದ

ದಾರಿಯನ್ನು ಸೃಷ್ಟಿಸಿದವು. ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು' ಕವನ ಸಂಕಲನ ಕರ್ನಾಟಕದಾದ್ಯಂತ ಅನೇಕ ಅಕ್ಷರ ಕಲಿತ ದಲಿತರನ್ನು ಪ್ರಭಾವಿಸಿ ಅವರು ಕಾವ್ಯ ರಚಿಸುವಂತೆ ಪ್ರೇರೇಪಿಸಿತು. ಶತಮಾನಗಳಿಂದ ತಮ್ಮೊಳಗೇ ಅದುಮಿಟ್ಟಿದ್ದ ಆಕ್ರೋಶ, ಆವೇಶ, ಕೋಪ, ತಾಪ, ನೋವು, ನಲಿವು, ದುಃಖ, ದುಮ್ಮಾನಗಳನ್ನು ಸಾಹಿತ್ಯದ ಮೂಲಕ ತೆರೆದಿಡಲು ಮುಂದಾದರು. ಚಳುವಳಿಯ ಕಾವು ಇವರನ್ನು ಸಾಹಿತ್ಯ ರಚಿಸುವಂತೆ ಪ್ರೇರೇಪಿಸಿದರೆ, ಸಾಹಿತ್ಯ ಚಳುವಳಿಯನ್ನು ಮುನ್ನಡೆಸಲು ಪ್ರೇರಕ ಶಕ್ತಿಯಾಗಿ ನಿಂತಿತು.

ಶೋಷಣೆಯ ವಿರುದ್ಧ ಕೂಗಿದ ಅದೆಷ್ಟೋ ಪ್ರತಿಭಟನೆಯ ಧಿಕ್ಕಾರಗಳು ಹಾಡಾಗಿ ಹೊರಹೊಮ್ಮಿದವು. ನಿರ್ವಾತದಲ್ಲಿ ಸಾಹಿತ್ಯ ಸೃಷ್ಟಿಯಾಗುತ್ತದೆ ಎಂಬ ನಂಬಿಕೆಯನ್ನೇ ಬುಡಮೇಲು ಮಾಡಿದ ಈ ಹಾಡುಗಳು ಸಾಮಾಜಿಕ ಸಾಂಸ್ಕೃತಿಕ ನೆಲೆಗಳಿಂದ ಜನ್ಮತಾಳಿದವು. "ಸಾಹಿತ್ಯ ಮಾನವೀಯವಾಗಬೇಕು; ಕಾವ್ಯ ಮಾನವೀಯತೆಯ ಮಿಡಿತವಾಗಬೇಕೆಂಬುದು ನಮ್ಮ ಆಶೆ. ಇಂಡಿಯಾ ಉರಿಯುತ್ತಿದೆ ದಲಿತರ ಕೊಲೆಯಾಗದ ಅವರ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಮಾಡದ ಅವರ ಗುಡಿಸಲುಗಳಿಗೆ ಬೆಂಕಿಯಿಡದ ಒಂದು ದಿನವೂ ನೀವು ಇಂಡಿಯನ್ ಚರಿತ್ರೆಯಲ್ಲಿ ಹುಡುಕಲಾರಿರಿ. ರಕ್ತಸಿಕ್ತವಾದ ಇಂಡಿಯಾದ ಇತಿಹಾಸದ ಪುಟಗಳಲ್ಲಿ ಮನುಷ್ಯನ ದರ್ಶನ ದುರ್ಲಭವಾದುದು. ಜಮೀನುದಾರಿ ಮತ್ತು ಬಂಡವಾಳಶಾಹಿ ಪದ್ಧತಿಯ ಸೈಜುಗಲ್ಲಿನಡಿಯಲ್ಲಿ ಸಿಕ್ಕಿ ಜಜ್ಜಿಹೋಗುತ್ತಿರುವ ಮಾನವೀಯತೆಯನ್ನು ರಕ್ಷಿಸುವ ಜವಾಬ್ದಾರಿ ಸಾಹಿತಿಗಳ ಮೇಲಿದೆ. ಯಾಕೆಂದರೆ ಸಾಹಿತಿ ಸಮಾಜದ ಅವಿಭಾಜ್ಯ ಅಂಗ, ಭಾರತದ ಜಾತಿ ಪದ್ಧತಿ ಮನುಷ್ಯರಲ್ಲಿ ಪರಸ್ಪರ ಪ್ರೀತಿ ವಿಶ್ವಾಸವನ್ನು ಅಸಾಧ್ಯವಾಗಿಸಿದೆ. ಇದರ ವಿರುದ್ಧ ಉಗ್ರ ಹೋರಾಟ ಆಗಬೇಕಾಗಿದೆ. ಮೂಲಭೂತ ಬದಲಾವಣೆಗಾಗಿ ಕ್ರಿಯಾಶೀಲನಾಗುವುದು ಸಾಹಿತಿಯ ಜವಾಬ್ದಾರಿ. ಬರವಣಿಗೆ ಮೂಲಕ ನಡೆಯುವ ನಮ್ಮ ಹೋರಾಟ ಹೆಚ್ಚು ಪರಿಣಾಮಕಾರಿಯಾದುದು."[೧] ಎಂದಿರುವ ಸಿದ್ಧಲಿಂಗಯ್ಯ ಅವರ ಮಾತುಗಳು ಸಾಹಿತ್ಯ ಮತ್ತು ಸಾಹಿತಿಯ ಜವಾಬ್ದಾರಿಯನ್ನು ಕುರಿತು ಮನದಟ್ಟು ಮಾಡುತ್ತವೆ. ೧೯೭೦ರ ದಶಕದಲ್ಲಿ ಮೂಡಿಬಂದ ದಲಿತ ಸಾಹಿತ್ಯ ಮತ್ತು ಹೋರಾಟದ ತೀವ್ರ ಸ್ವರೂಪವನ್ನು ಮೇಲಿನ ಮಾತುಗಳು ಸಮಂಜಸವಾಗಿ ಕಟ್ಟಿಕೊಡುತ್ತವೆ.

ದಲಿತ ಸಂಘಟನೆಗಳಾಗಲೀ, ದಲಿತ ಕಾವ್ಯವಾಗಲೀ ತನ್ನ ಪ್ರತಿರೋಧವನ್ನು ವರದಕ್ಷಿಣೆ, ಜನಸಂಖ್ಯಾ ಸಮಸ್ಯೆ, ಲಂಚ, ಕೋಮುವಾದ, ಭ್ರಷ್ಟಾಚಾರ, ಭಾಷಾ ಸಮಸ್ಯೆ, ನಾಡು-ನುಡಿ, ಬೆಳೆದ ಬೆಳೆಗೆ ನಿಗದಿತ ಬೆಲೆ ಮುಂತಾದವುಗಳ ಬಗ್ಗೆ ಹೆಚ್ಚು ಗಮನ ಹರಿಸಲಿಲ್ಲ. ಆದರೆ ಮೇಲಿನ ಸಮಸ್ಯೆಗಳನ್ನು ಕುರಿತು ದಲಿತ ಕಾವ್ಯ ಏನನ್ನೂ ನಿರೂಪಿಸಲಿಲ್ಲ ಎಂದು ಸಾರಾಸಗಟಾಗಿ ಹೇಳಲು ಬರುವುದಿಲ್ಲ. ಮೇಲಿನ ಎಲ್ಲಾ ಸಮಸ್ಯೆಗಳು ಹುಟ್ಟಿದ್ದು ಜಮೀನ್ದಾರೀ ವ್ಯವಸ್ಥೆಯ ಗರ್ಭದಿಂದಲೇ ಹೊರತು ದಲಿತರ ಸಾಮಾಜಿಕ ಹಿತಾಸಕ್ತಿಯಿಂದ ಹುಟ್ಟಿದವುಗಳಲ್ಲ. ದಲಿತರಿಗೆ ಅನ್ನ, ಹಸಿವು, ಅವಮಾನ, ಕೂಲಿ ಇವುಗಳೇ ಪ್ರಧಾನ ಸಮಸ್ಯೆಗಳಾಗಿದ್ದರಿಂದ

ಇವುಗಳ ವಿರುದ್ಧವಾಗಿ ಹೋರಾಡಬೇಕಾದ ಅನಿವಾರ್ಯತೆ ಇತ್ತು. ಆದರೆ ಭೂಮಾಲೀಕ ವರ್ಗ ಮಾತ್ರ ತನ್ನ ಸಮಸ್ಯೆಗಳನ್ನು ದಲಿತರ ಸಮಸ್ಯೆಗಳೆಂಬಂತೆ ಬಿಂಬಿಸಿ ದಲಿತ ಹೋರಾಟವನ್ನು ದಿಕ್ಕುತಪ್ಪಿಸಿತು. ಇದು ಒಂದು ರೀತಿಯಲ್ಲಿ ದಲಿತರು ಇಡಿಯಾಗಿ ನಿಂತು ವ್ಯವಸ್ಥೆಯ ವಿರುದ್ಧ ಧಿಕ್ಕರಿಸಲು ತಡೆಯಾಯಿತು. ಇಂತಹ ಶತಮಾನಗಳ ನೋವುಗಳು ಕಾವ್ಯದಲ್ಲಿ ಅಭಿವ್ಯಕ್ತಿ ಪಡೆದವು.

ಶತಮಾನದ ನೋವು ಹಾಡಾಗಿ ಹೊರಹೊಮ್ಮಿ ದಲಿತ ಕಾವ್ಯದ ಸ್ವರೂಪ ಪಡೆದು ಕಾವ್ಯದ ಪರಂಪರಾ ನೆಲೆಗಟ್ಟುಗಳನ್ನು ಧಿಕ್ಕರಿಸಿತು. ದುಡಿಯುವ ದಲಿತರು ನಾಡನ್ನು ಕಟ್ಟಿದರು. ಹಾಗೆಯೇ ಅಕ್ಷರ ಕಲಿತ ದಲಿತರು ಒಡೆದ ಮನಸುಗಳನ್ನು ಕಟ್ಟಲು ಪ್ರಯತ್ನಿಸಿದರು. ಈ ಕಟ್ಟುವಿಕೆಯೇ ಜಗತ್ತನ್ನು ಬದಲಾಯಿಸುತ್ತದೆಂಬ ನಿಲುವು ದಲಿತ ಕವಿಗಳದು. ಇದನ್ನು ಕೆಳಗಿನ ಹಾಡು ನಿರೂಪಿಸುವುದು ಹೀಗೆ;

ಕಟ್ಟುತ್ತೇವ ನಾವು ಕಟ್ಟುತ್ತೇವ ನಾವು
ಕಟ್ಟೇ ಕಟ್ಟುತ್ತೇವ
ಒಡೆದ ಮನಸುಗಳ ಕಂಡ ಕನಸುಗಳ
ಕಟ್ಟೇ ಕಟ್ಟುತ್ತೇವ ನಾವು
ಕನಸ ಕಟ್ಟುತ್ತೇವ ನಾವು ಮನಸ ಕಟ್ಟುತ್ತೇವ
ಗೋಳಿಲ್ಲದ ಗುಂಡಿಲ್ಲದ ನಾಡ ಕಟ್ಟುತ್ತೇವ
ಕೋಟಿ ಮನಸಿನ ನೂರು ಕನಸಿನ
ಹಾಡ ಬರೆಯುತೇವ
ಈ ನೆಲದ ಹಾಡ ಬರೆಯುತೇವ[೨]

ಇಂತಹ ಕನಸುಗಳೆ ಕಾವ್ಯ ಸೃಷ್ಟಿಯ ಮೊದಲ ಪ್ರೇರಕಗಳು. ಕನ್ನಡ ಲಿಖಿತ ಸಾಹಿತ್ಯದಲ್ಲಿ ಅಸ್ಪೃಶ್ಯ ಕವಿಗಳು ಬರವಣಿಗೆಯಲ್ಲಿ ಕಾಣಿಸಿಕೊಂಡಿದ್ದೇ ೧೨ನೇ ಶತಮಾನದಲ್ಲಿ. ವಚನಕಾರರು ಸಾಹಿತ್ಯಕವಾಗಿ ಮತ್ತು ಸಾಂಸ್ಕೃತಿಕವಾಗಿ ಒಂದು ಚಳುವಳಿಯನ್ನೇ ಪ್ರಾರಂಭಿಸಿದರು. ಅಲ್ಲಿಂದ ಪ್ರಾರಂಭವಾದ ಅಸ್ಪೃಶ್ಯ ಲೋಕದ ಬರವಣಿಗೆ ಪ್ರಖರವಾಗಿ ಗುರುತಿಸಿಕೊಂಡದ್ದು ಆಂಗ್ಲರ ಆಗಮನದಿಂದ ಉಂಟಾದ ಆಧುನಿಕ ಶಿಕ್ಷಣದಿಂದ. ಸತತ ದಬ್ಬಾಳಿಕೆಗಳಿಂದ ನಲುಗಿದ್ದ ಜನತೆ ಕಾವ್ಯದ ಇರುವಿಕೆಯನ್ನು ಬದಲಿಸುವುದರ ಜೊತೆಗೆ ಕಾವ್ಯದ ಅಂತಿಮ ಕೆಲಸ ಮಾನವೀಯತೆಯ ಮಿಡಿತವಾಗಬೇಕೆಂಬುದನ್ನು ಒತ್ತಿ ಹೇಳಿದರು.

"ಬೆಳಕಿಲ್ಲದ ದಾರಿಯಲ್ಲಿ ಹೋಗಬಹುದು, ಆದರೆ ಕನಸುಗಳಿಲ್ಲದ ದಾರಿಯಲ್ಲಿ ಸಾಗಲಾಗದು."[೩] ಆದರೆ ಕನಸುಗಳು ಸಮಾಜಮುಖಿಯಾಗಿರಬೇಕೆಂಬ ಒತ್ತಾಯವೇ ದಲಿತ ಕಾವ್ಯದ ತಿರುಳು. ಅದಕ್ಕೆ ಅದು ಸಂಘಟನೆ ಹೋರಾಟ ಚಳುವಳಿಯೊಂದಿಗೆ ಮೂಡಿಬಂದದ್ದು.

ಅಪ್ಪಾ
ನಾನೀಗ ಸಂಘ ಸೇರಿದ್ದೀನಿ
ಸಂಗೀತ ಹಾಡುತ್ತೀನಿ
ಹೊಸಮಾತಿನ ಹೊಸ ರಾಗದ
ಹಾಡು ಹಾಡುವ ಸಂಗೀತಗಾರರ
ಸಂಘ ಸೇರಿದ್ದೀನಿ
ಬರುವಾಗ
ಕರೆದು ತರುತ್ತೇನೆ
ಗೌಡನ ಹೊಲದ ತುಂಬ
ನಿನ್ನ ಹೆಜ್ಜೆ ಗುರುತುಗಳ[೪]

ಪತ್ರ ಬರೆಯುವುದು ಯೋಗಕ್ಷೇಮ ವಿಚಾರಿಸಲಿಕ್ಕೆ ಅಥವಾ ಯೋಗಕ್ಷೇಮ ಹೇಳಲಿಕ್ಕೆ ಅಥವಾ ಯಾವುದೋ ಬೇಡಿಕೆಗಾಗಿ. ಆದರೆ ಇಲ್ಲಿ ಗೌಡನ ಹೊಲದ ತುಂಬಾ ತುಂಬಿರುವ ಅಪ್ಪನ ಹೆಜ್ಜೆ ಗುರುತುಗಳನ್ನು ತೋರಲು ಸಂಘ ಸೇರಿರುವ ಹೋರಾಟಗಾರ ತನ್ನ ನಿಲುವನ್ನು ತಂದೆಗೆ ತಿಳಿಸುತ್ತಿದ್ದಾನೆ. ಇಲ್ಲಿ ಹೊಸ ಮಾತಿದೆ. ಹೊಸ ಹಾಡಿದೆ, ಆ ಹಾಡಿಗೆ ತಕ್ಕ ಹಾಗೆ ಹೊಸ ರಾಗವಿದೆ. ದುಡಿಯುವ ಜನತೆಯ ಎದೆಯಾಳದ ಅಳಲಿನ ಧಿಕ್ಕಾರದ ದನಿಯಿದೆ.

ಹಾಡುಗಾರಿಕೆಯನ್ನು ಪ್ರಧಾನವಾಗಿ ಅವಲಂಬಿಸಿರುವ ಮೇಲಿನ ಕವಿತೆಯು ಹಾಡಿನ ಹೊಸದೊಂದು ರಾಗಕ್ಕೆ ಹಾತೊರೆಯುತ್ತಿದೆ. ದಲಿತ ಕಾವ್ಯ ಮೌಖಿಕ ಕಾವ್ಯವಲ್ಲ. ಅದು ಅಕ್ಷರಗಳಿಂದ ಅಭಿವ್ಯಕ್ತಿಯನ್ನು ಪಡೆದುಕೊಂಡಿರುವಂತಹುದು. ಈ ಅಭಿವ್ಯಕ್ತಿ ಜನರ ಅಭಿವ್ಯಕ್ತಿಯಾಗಿ ರೂಪುಗೊಳ್ಳಬೇಕಾದರೆ ಅದಕ್ಕೆ ಹಾಡಿನ ಲಯ ಮತ್ತು ಗೇಯತೆ ಅನಿವಾರ್ಯವಾಗಿ ಬೇಕಾಗುತ್ತದೆ. ಹೊಸ ಮಾತಿಗೆ ಹೊಸ ರಾಗವನ್ನು ಕಲಿತಿರುವ ಯುವಕ ತನ್ನ ಅಭಿವ್ಯಕ್ತಿಯನ್ನು ಹೊರಹಾಕಲಿಕ್ಕೆ ದಲಿತ ಸಂಘವನ್ನು ಸೇರಿದ್ದಾನೆ. ಅಕ್ಷರ ಕಲಿಯದ ದಲಿತರಿಗೂ, ಅಕ್ಷರ ಕಲಿತು ಬರವಣಿಗೆಯಲ್ಲಿ ತೊಡಗಿಸಿಕೊಂಡಿರುವ ದಲಿತರಿಗೂ, ಸಂಘಟನೆಗೂ, ಆ ಸಂಘಟನೆಯ ಒಳಗಿಂದ ಮೂಡಿಬಂದ ಹಾಡಿಗೂ ಇರುವ ಸಂಬಂಧದ ಎಳೆಗಳನ್ನು ಕಾವ್ಯ ಕಟ್ಟಿಕೊಡುತ್ತಿದೆ.

ಕನ್ನಡದ ಬಹುಪಾಲು ಕವಿಗಳು ತಮ್ಮ ಕಾಲದ ಅಂದಂದಿನ ಸಾಮಾಜಿಕ, ರಾಜಕೀಯ ಸ್ಥಿತಿಗತಿಗಳನ್ನು ಕಾವ್ಯದಲ್ಲಿ ಹಿಡಿದಿಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ಸಾಮಾಜಿಕ, ರಾಜಕೀಯ ರಹಿತ ನೆಲೆಗಳ ಅನಾವರಣ ಕಾವ್ಯದಲ್ಲಿ ಹುಡುಕಲಿಕ್ಕೆ ಸಾಧ್ಯವೇ ಇಲ್ಲ. ಆದರೆ ಇದು

ಕವಿಯಿಂದ ಕವಿಗೆ ಭಿನ್ನವಾಗಿರುತ್ತದೆ. ಏಕೆಂದರೆ ಕವಿಗಳು ತಾವು ನಿಂತ ನೆಲದಿಂದ ಪ್ರೇರಣೆಗೊಂಡಿರುತ್ತಾರೆ. ಕವಿಗೂ–ಕಾವ್ಯಕ್ಕೂ–ಸಮಾಜಕ್ಕೂ ಒಂದು ಅವಿನಾಭಾವ ಸಂಬಂಧವಿರುತ್ತದೆ. ಈ ಸಂಬಂಧವೇ ಕವಿಯೊಳಗಿನ ಸಾಮಾಜಿಕ ಪ್ರಜ್ಞೆಯನ್ನು ಕಾವ್ಯವಾಗಿಸಿ ಹೊರಹೊಮ್ಮಿಸುತ್ತದೆ. ಈ ಕಾರಣದಿಂದಾಗಿಯೇ ಪಂಪನಿಂದ ಮೊದಲುಗೊಂಡು ಇಂದಿನ ಕವಿಗಳವರೆಗೂ ಸಾಮಾಜಿಕ ಪ್ರಜ್ಞೆಯು ತನ್ನನ್ನು ತಾನು ಕಾವ್ಯದ ಮೂಲಕ ಅನಾವರಣಗೊಳಿಸಿಕೊಂಡಿದೆ.

ಒಡಲುಗೊಂಡವ ಹಸಿವ
ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು
ನೀನೆನ್ನ ಜರಿದೊಮ್ಮೆ ನುಡಿಯದಿರ
ನೀನೆನ್ನಂತೆ ಒಮ್ಮೆ ಒಡಲುಗೊಂಡು ನೋಡಾ
ರಾಮನಾಥ[೫]

ಎಂದು ಕೇಳುವ ದಿಟ್ಟತನ ಸಾಮಾಜಿಕ ನೆಲೆಯೊಳಗಿಂದಲೇ ಪ್ರಾರಂಭವಾಯಿತು. ಹಸಿವು, ಬಡತನ, ಶೋಷಣೆ, ಅಹಂಕಾರ, ದೌರ್ಜನ್ಯ, ಮೌಢ್ಯತೆ, ಮೇಲು–ಕೀಳು ಮುಂತಾದವುಗಳಿಂದ ಮಾರಕವೇ ಹೊರತು ಪೂರಕವಲ್ಲವೆಂದು ಅರಿತ ವಚನಕಾರರು ವಚನಗಳಲ್ಲಿ ತಮ್ಮದೇ ಆದ ಪ್ರತಿರೋಧಗಳನ್ನು ಒಡ್ಡಿದರು. ಸಾಹಿತ್ಯದ ಅಂತಿಮ ಕೆಲಸ ಸಾಮಾಜಿಕ ಬದಲಾವಣೆಯ ತುಡಿತ ಎಂಬುದನ್ನು ತೋರಿಸಿದರು. ಆದರೆ ಎಲ್ಲವನ್ನು ದೈವದ ನೆಲೆಯಲ್ಲೇ ನೋಡುವ ದೃಷ್ಟಿಕೋನವನ್ನು ವಚನಕಾರರು ರೂಪಿಸಿಕೊಂಡರು. ಶರಣರನ್ನು ಮೇಲ್ಮಟ್ಟದ ಪ್ರಜ್ಞೆಯಿಂದ ನೋಡುವ ದೃಷ್ಟಿ ಇವರಲ್ಲಿ ಮೈಗೂಡಿತು. ಸಮಾಜದ ಅಷ್ಟೂ ಅನಿಷ್ಟಗಳ ವಿರುದ್ಧ ಬಂಡಾಯದೋಪಾದಿಯಲ್ಲಿ ಪ್ರತಿಭಟಿಸಿದ ವಚನಕಾರರು ಅಂತಿಮವಾಗಿ ಅದರ ಸಾಧಕ ಬಾಧಕಗಳನ್ನು ದೈವದ ನೆಲೆಗೆ ತಳ್ಳಿ ಅಲ್ಲಿಂದಲೇ ಬದಲಾವಣೆಯಾಗುತ್ತದೆಂಬ ಆಶಯದಲ್ಲಿ ಮೈಮರೆತರು. ಆದರೂ ಅಂದು ವಚನಕಾರರು ಸಮಾಜಕ್ಕೆ ಕೊಟ್ಟ ಕೊಡುಗೆ ಅದ್ವಿತೀಯವಾದದ್ದು. ಸಾಹಿತ್ಯ ಮತ್ತು ಸಾಮಾಜಿಕ ಸಂಬಂಧಗಳು ಹೇಗಿರಬೇಕೆಂಬ ಜಿಜ್ಞಾಸೆಗೆ ಕಾರಣಕರ್ತರಲ್ಲಿ ಬಹುಮುಖ್ಯರಾದವರು. ೧೨ನೇ ಶತಮಾನದ ಮೌಢ್ಯತೆಯ ಯುಗದಲ್ಲಿ ಎಲ್ಲಾ ಕಾರ್ಯ ಚಹರೆಯುಳ್ಳ ಚಿಂತಕರು ಒಗ್ಗೂಡಿ ಸಮಾಜದ ಬದಲಾವಣೆಗೆ ಮುನ್ನುಡಿ ಬರೆದದ್ದು ಒಂದು ವಿಶಿಷ್ಟವೇ ಸರಿ.

ಆನಂತರ ೧೬ನೇ ಶತಮಾನದಲ್ಲಿ ಭಕ್ತಿ ಮತ್ತು ಸಮಾಜವನ್ನು ಮೈಗೂಡಿಸಿಕೊಂಡ ಕೀರ್ತನಕಾರರು ವಚನಕಾರರ ಪ್ರಭಾವದಿಂದಲೋ ಎಂಬಂತೆ ಸಾಹಿತ್ಯ ಕ್ಷೇತ್ರದಲ್ಲಿ ಕಾಣಿಸಿಕೊಂಡರು. ಭಕ್ತಿ ಪರಾಕಾಷ್ಠತೆಯಲ್ಲಿ ಸಮಾಜವನ್ನು ನೋಡಿದರೂ ಕೂಡ ಸಮಾಜದ ಅಂಕುಡೊಂಕುಗಳನ್ನು ತಮ್ಮದೇ ಆದ ರೀತಿಯಲ್ಲಿ ವಿಮರ್ಶಿಸಿದರು.

ಕುಲಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರಾ[೧]

ಸಮಾಜದಲ್ಲಿನ ಎಲ್ಲ ನೆಲೆಗಳನ್ನು ಕುರಿತು ಹಾಡಿದರು ಮತ್ತು ಸಮಾಜದ ಅಂಕುಡೊಂಕುಗಳನ್ನು ಭಕ್ತಿಯ ಮಾರ್ಗದಲ್ಲೇ ತಿದ್ದಲು ಪ್ರಯತ್ನಿಸಿದರು. ಲೋಕದ ಕಟು ವಿಮರ್ಶಕರಾದ ಇವರು ತೋರಿಕೆಯ ಭಕ್ತಿಯಿಂದ ಹಿಡಿದು ಆಡಂಬರದ ನೆಲೆಗಳ ಆಚರಣೆಯವರೆಗೂ ತಮ್ಮದೇ ರೀತಿಯಲ್ಲಿ ಪ್ರತಿರೋಧ ಒಡ್ಡಿದರು. ಸಮಾಜ ಬದಲಾವಣೆಯಾಗಬೇಕೆಂಬ ಮಹತ್ವದ ಉದ್ದೇಶದಿಂದ ಕೀರ್ತನೆಗಳ ಮೂಲಕ ಹಾಡಿ ಹರಸಿದರು. ಆದರೆ ಇಷ್ಟೆಲ್ಲಾ ಲೋಕದ ಡೊಂಕುಗಳನ್ನು ತಿದ್ದಲು ಹೊರಟ ಇವರು ಅಂತಿಮವಾಗಿ;

ತಲ್ಲಣಿಸದಿರು ಕಂಡ್ಯ ತಾಳು ಮನವೆ
ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ[೨]

ಎಲ್ಲವನ್ನೂ ದೈವದ ಕೃಪೆಗೆ ತಳ್ಳಿ ಅಲ್ಲಿಂದಲೇ ತೀರ್ಮಾನಗೊಳ್ಳುವುದೆಂದು ಭಕ್ತಿ ಭ್ರಮೆಯಲ್ಲಿ ಮೈಮರೆತರು. ಲೋಕದ ಸಮಸ್ತವನ್ನೂ ತಮ್ಮ ವಿಚಾರ ಕ್ರಾಂತಿಯ ಮೂಸೆಯಲ್ಲಿ ವಿಮರ್ಶಿಸಿದ ಕೀರ್ತನಕಾರರು ಅಂತಿಮವಾಗಿ ದೈವದ ಶಕ್ತಿಯ ಮೇಲೆ ನಂಬಿಕೆ ಇಟ್ಟಿದ್ದು ವಿಪರ್ಯಾಸವೇ ಸರಿ. ಆದರೆ ಶೋಷಣೆಯ ಪ್ರಜ್ಞೆಯನ್ನು ಅರಿವಿಗೆ ತರುವ ನಿಟ್ಟಿನಲ್ಲಿ ಶ್ರಮಿಸಿದ ಇವರ ಕೊಡುಗೆ ಅಪಾರ.

ಇದನ್ನು ಹೊರತುಪಡಿಸಿದರೆ ಬಹಳ ಹಿಂದೆ ಜನಪದರು ತಮ್ಮ ಕಾಯಕದ ಮೂಲಕವೇ ಕಾವ್ಯ ಕಟ್ಟಿ ಹಾಡಿದರು.

ಹಾದೀಲಿ ಹೋಗೋರೆ ಹಾಡೆಂದು ನಿಲಬೇಡಿ
ಹಾಡಲ್ಲ ನನ್ನ ಒಡಲುರಿ । ದೇವರೆ
ಬೆವರಲ್ಲ ನನ್ನ ಕಣ್ಣೀರು

ಸಮಾಜದ ಅತ್ಯಂತ ಕ್ರೂರ ವಾಸ್ತವವನ್ನು ಸಮರ್ಪಕ ಪದಗಳಲ್ಲಿ ಹಿಡಿದಿಟ್ಟಿರುವ ಜನಪದರ ಒಡಲೊಳಗಿನ ಬೇಗೆ, ಕಲ್ಪನೆ, ಕನಸುಗಳ ಲೋಕದಲ್ಲಿ ಕಂಡುದಲ್ಲ. ಬದಲಾಗಿ ವಾಸ್ತವದಲ್ಲಿ ಉಂಡದ್ದು. ಅದಕ್ಕೆ ಇಲ್ಲಿ ತೀವ್ರ ವೇದನೆಯಿಂದ ಅರಳಿದ ತ್ರಿಪದಿ ಸಾಲು ಹೊರಹೊಮ್ಮಿದೆ. ಒಡಲೊಳಗಿನ ತವಕ ತಲ್ಲಣಗಳನ್ನೇ ಹಾಡಾಗಿ ಹಾಡಿದ ಜನಪದರು ಸಮಾಜದ ಬಹುಮುಖ ನೆಲೆಗಳನ್ನು ಕಥೆ, ಗೀತೆ, ತ್ರಿಪದಿ, ಒಗಟು, ಗಾದೆ, ಲಾವಣಿ ಮುಂತಾದವುಗಳ ಮೂಲಕ ಹೊರಹೊಮ್ಮಿಸಿದರು. ಆದರೆ ಇವರೂ ಸಹ ದೈವದ

ನೆಲೆಯಿಂದಾಚೆಗೆ ಯೋಚಿಸಲು ಅಶಕ್ತರಾದರು. ಪ್ರತಿಭಟನೆಯಲ್ಲೇ ರಾಜಿಯನ್ನು ಹೊಂದುವ ಮನೋಭಾವ ಇವರಲ್ಲಿ ಮೈದುಂಬಿದೆ. ಎಲ್ಲದಕ್ಕೂ ಕಾಲ ಬರಬೇಕು ಎಂಬ ಆಶಾಭಾವನೆ ಇವರಲ್ಲಿ ಮನೆಮಾಡಿತು. ಒಡಲುರಿಯನ್ನೇ ಹಾಡಾಗಿಸಿ ಸಾಮಾಜಿಕ ಸ್ಥಿತಿಗತಿಯನ್ನು ಹಿಡಿದಿಟ್ಟ ಜನಪದರು ಸಾಹಿತ್ಯ ರಚನೆ ಎನ್ನುವುದು ಉತ್ಪಾದನಾ ಚಟುವಟಿಕೆಗಳ ಒಳಗಿಂದಲೇ ಮೂಡಬೇಕೆಂಬುದನ್ನು ತೋರಿಸಿಕೊಟ್ಟರು.

೬.೧ ದಲಿತ ಕಾವ್ಯ : ಘಟನೆಗಳ ಮೂಲಕ ಸಾಮಾಜಿಕ ವಸ್ತುಸ್ಥಿತಿ

ನಡೆದ ಘಟನೆಗಳನ್ನು ಆಧರಿಸಿ ಕಾವ್ಯ ರಚನೆಯಾಗಿದೆ. ಸಾಹಿತ್ಯವು ಘಟನೆಯನ್ನು ವಿವರಿಸುವಾಗ ಅದರಲ್ಲೂ ಶೋಷಿತ ಸಮುದಾಯವೊಂದು ತನ್ನ ಶೋಷಣೆಯ ನೆಲೆಯನ್ನು ಹೇಳುವಾಗ ಕೇವಲ ಆ ದಿನದ ಅಥವಾ ಆ ಸಂದರ್ಭದ ವರದಿಗಷ್ಟೇ ಸೀಮಿತವಾಗಿರುವುದಿಲ್ಲ. ಇಲ್ಲಿ ಈ ಅಂಶವನ್ನು ಚರ್ಚಿಸುತ್ತಿರುವ ಮುಖ್ಯ ಉದ್ದೇಶ ಘಟನೆಗಳು ಪ್ರದೇಶದಿಂದ ಪ್ರದೇಶಕ್ಕೆ, ಸಮುದಾಯದಿಂದ ಸಮುದಾಯಕ್ಕೆ ಭಿನ್ನವಾಗಿರುತ್ತವೆ. ಆದರೆ ದಲಿತ ಸಮುದಾಯ ತನ್ನ ಸಮುದಾಯದ ಮೇಲಾದ ದೌರ್ಜನ್ಯದ ಘಟನೆಗಳನ್ನು ಹೇಳುವುದರ ಮೂಲಕ ಏನನ್ನು ಪ್ರತಿಪಾದಿಸಿದೆ ಹಾಗೂ ಆ ಘಟನೆಗಳು ಕೇವಲ ಯಾವುದೋ ಒಂದು ಅವಧಿಗೆ ಸೀಮಿತಗೊಂಡವುಗಳೇ? ಅಥವಾ ಆ ಘಟನೆಗಳು ಹಿಂದಿನ ಪರಂಪರೆಯೊಂದಿಗೆ ಹೇಗೆ ತಳಕು ಹಾಕಿಕೊಂಡಿವೆ? ಮತ್ತು ಅದು ಮುಂದಿನ ದಾರಿಗಳನ್ನು ಹೇಗೆ ಸೂಚಿಸುತ್ತಿದೆ? ಎಂಬುದನ್ನು ಚರ್ಚಿಸುವ ಉದ್ದೇಶ ಇಲ್ಲಿದೆ.

ಭಾರತಕ್ಕೊಂದು ಚರಿತ್ರೆಯಿದೆ. ಆ ಚರಿತ್ರೆಯ ತುಂಬಾ ಆಳಿದವರ ನೆಲೆಯ ಹೆಜ್ಜೆಗುರುತುಗಳಿವೆ. ಸಾಮ್ರಾಜ್ಯ ದಾಹಗಳ, ಯುದ್ಧಗಳ, ರಾಜ ರಾಣಿಯರ, ಮೇಲ್ವರ್ಗ, ಪ್ರಭುತ್ವ ಪಾಂಡಿತ್ಯಗಳ, ವರ್ಣನೆಗಳ ಆಗರವನ್ನೇ ನಮಗೆ ಇತಿಹಾಸ ಎಂಬುದಾಗಿ ತಿಳಿಸಿಕೊಡಲಾಗಿದೆ. ಅಕಾಡೆಮಿಕ್ ವಲಯದ ಪಠ್ಯಪುಸ್ತಕಗಳಲ್ಲಿ ಇವು ಪಠ್ಯಕ್ರಮಗಳಾಗಿ ವ್ಯಾಪಿಸಿವೆ. ರಾಜರಾಣಿಯರ ಇತಿಹಾಸವೇ ನಮ್ಮೆಲ್ಲರ ಇತಿಹಾಸ ಎಂಬುದಾಗಿ ಎಲ್ಲರ ತಲೆಗೆ ತುರುಕಲಾಗಿದೆ. ಆಳುವ ಮತ್ತು ಮೇಲ್ವರ್ಗಗಳ ಆಳ್ವಿಕೆಯನ್ನೇ ಚರಿತ್ರೆಯ ಪುಟಗಳಲ್ಲಿ ದಾಖಲಿಸಿದ ಚರಿತ್ರೆ ಬರಹಗಾರರು ಅವರೇ ಸಮಸ್ತ ಜನತೆಯ ಪ್ರತಿನಿಧಿಗಳೆಂಬಂತೆ ಬಿಂಬಿಸಿದರು. ಅಂದರೆ ಇತಿಹಾಸ ಸಮಸ್ತ ದುಡಿಯುವ ಜನತೆಯನ್ನು ಕಡೆಗಣಿಸಿತು. ಅದರಲ್ಲೂ ಚರಿತ್ರೆ, ಇತಿಹಾಸ, ಪುರಾಣ, ಪರಂಪರೆ ಎಲ್ಲವುಗಳಿಂದಲೂ ಕಡೆಗಣಿಸಲ್ಪಟ್ಟ ದಲಿತರನ್ನು ಊರ ಹೊರಗೆ ಇರಿಸಿದ ಇಲ್ಲಿನ ಆಳುವ ವರ್ಗ ಕನಿಷ್ಠ ಮಾನವೀಯತೆಯನ್ನು ತೋರದೆ ಸಾರ್ವಕಾಲಿಕ ಗುಲಾಮಗಿರಿಗೆ ತಳ್ಳಿತು. ಇತಿಹಾಸವಷ್ಟೇ ಅಲ್ಲ ಸಾಹಿತ್ಯವೂ ಕೂಡ ಜನ ಸಾಮಾನ್ಯರ ನೋವಿನ ಕಡೆ ಕಣ್ಣು ತೆರೆದದ್ದು ತೀರಾ ಕಡಿಮೆ. ಇದನ್ನು ಒಂದು ದಲಿತ ಕಾವ್ಯ ಹೀಗೆ ನಿರೂಪಿಸಿದೆ.

ಗೆಳೆಯಾ–
ಬಿಡು, ಊಹೆ ವಿಮಾನದಲಿ ಕುಳಿತು
ಉಪಮೆ ಅಲಂಕಾರದ ಉಪ್ಪು ಖಾರ ಹಚ್ಚಿದ–
ನುಡಿ– ಟೈಂಪಾಸು ಬಟಾಣಿಯಂತೆ ಮೆಲ್ಲುತ
ಪ್ರಕೃತಿಯನು ವರ್ಣಿಸುತ
ಶುದ್ಧ ಅಶುದ್ಧ ಸಿದ್ಧ ವಸ್ತುಗಳ 'ಬುಸಾ' ತಯಾರಿಕೆಯ
ಸಾಕು, ತಣ್ಣನೆಯ ತಿಂಗಳ ತಂಗಳ ಸಾಹಿತ್ಯ ಸಾಕು
ಈಗ ಸೂರ್ಯಸೃಷ್ಟಿ ಬೇಕು
ಬಿಳಿಹಾಳೆಯ ಮೇಲೆ ಕಪ್ಪು ಅಕ್ಷರದ ರಾಜಿ ಬರಹ–
ಬರೆಯುತ, ಯಾರದೋ ಕುಶಾಮತ್ತಿಗೆ, ಹೊಗಳಿಕೆಗೆ
ಆಗದಿ ವಂದಿ ಮಾಗದ ಉದ್ದಾಮ ಮುದ್ದಾಮ–
ಪಂಡಿತನಾಗುತ, ಅಂತರ್ಲಾಗ ಹಾಕುತ
ವಿರೋಧಾಭಾಸದ ಡಿಗ್ಗಿ ಡಿಗ್ಗಿ
ಬನಿಯಾ ಮಾರ್ವಾಡಿ ಖಾತೆ–ಸಾಹಿತ್ಯ ಸಾಕು
ಸದಾ ಬಚ್ಚಲು ಕೋಣೆ ಜಗತ್ತಿನ ಬಾಗಲಿಗೆ
ಮೆತ್ತಿಕೊಂಡಿರುವ
ಕಣ್ಣು ಕಿತ್ತಿಕೊಂಡ, ಶುದ್ಧ ಬುದ್ಧ ಹೃದಯದಿಂದ
ನೀನು ನಿಂತಿರುವ ಈ ನೆಲೆಯನು, ಈ ನೆಲವನು
ಬೆದಕು, ಕೆದಕು
ಕಂಡರೆ ಕಂಡೀತು
ಧಗಾಬಿದ್ದ ನಮ್ಮ ಅಧೋಜಗತ್ತಿನ ಅಕಾವ್ಯ[೮]

ಕೆಲವೊಂದು ಕಾವ್ಯ ಊಹೆಯ ವಿಮಾನದಲ್ಲಿ ಕುಳಿತಿದೆ. ಉಪಮೆ ಅಲಂಕಾರಗಳೊಂದಿಗೆ ಕಾಣದ ಜಗತ್ತಿನ ವರ್ಣನೆಯಲ್ಲಿ ತೊಡಗಿದೆ. ಇಂತಹ ಕಾವ್ಯವನ್ನು ಮೇಲಿನ ಕವಿತೆ ವಿಮರ್ಶಿಸುತ್ತಾ ನಿಂತ ನೆಲದ ಕಡೆ ಕರೆಯುತ್ತಿದೆ. ಸಾಹಿತ್ಯದ ದೃಷ್ಟಿ ಇದಾದರೆ ಇನ್ನು ಇತಿಹಾಸದ್ದು ಬೇರೊಂದು ದೃಷ್ಟಿ. ರಾಜರಾಣಿಯರ ಕಥೆಯನ್ನು ಚರಿತ್ರೆಯೆಂದು ನಂಬಿಸುತ್ತಾ, ಅವರನ್ನೇ ಎಲ್ಲರ ಪ್ರತಿನಿಧಿಗಳೆಂದು ಕರೆಯುತ್ತಾ ಚರಿತ್ರೆ ಬರೆದಿರುವ ಒಂದು ವರ್ಗ, ಚರಿತ್ರೆಯನ್ನು ವರ್ಗ ಪಕ್ಷಪಾತಿ ನೆಲೆಯಲ್ಲಿ ಪ್ರತಿಪಾದಿಸಿತು. ಇದರಿಂದಾಗಿ ತನಗೇ ಗೊತ್ತಿಲ್ಲದಂತೆ ಅಕ್ಷರ ಕಲಿತು ದುಡಿಯುವವರ ನೆಲೆಯೊಳಗೆ ಬಂದವರಿಂದ ಅವಹೇಳನಕ್ಕೆ

ತುತ್ತಾಯಿತು. ಕಾನೂನುಗಳು ಅಮಾಯಕರ ರಕ್ತ ಹೀರಲು ಸೃಷ್ಟಿಯಾಗಿವೆ; ಎನ್ನುವ ಮೇಲಿನ ಕವಿತೆ ಚರಿತ್ರೆ ಮೂಲಕ ನಡೆದು ಬಂದ ಸಾಮಾಜಿಕ ವ್ಯವಸ್ಥೆಯನ್ನು ಪ್ರತಿಪಾದಿಸುತ್ತಿದೆ. ಹಾಗೂ ಅಂತಹ ಸಮಾಜದ ವಾಸ್ತವತೆಯನ್ನು ಬಿಂಬಿಸುತ್ತಿದೆ. ಹಾಗೆಯೇ ದೋಚುವವರ ನೆಲೆಗಳಿಂದ ಹೊರಹೊಮ್ಮಿದ ಲಿಖಿತ ಪಠ್ಯಕ್ರಮಗಳು ಎಲ್ಲರಿಗೂ ಇದೇ ವಾಸ್ತವ ಎಂದು ಬಿಂಬಿಸುತ್ತಿರುವುದರ ಬಗ್ಗೆಯೂ ವಿರೋಧ ವ್ಯಕ್ತಪಡಿಸುತ್ತಿದೆ. ಈ ವಿರೋಧ ಕ್ಷಣಿಕವಾದುದಾಗಿರಬಾರದು. ಆದ್ದರಿಂದ ಇವುಗಳ ವಿರುದ್ಧ ಆಯುಧಗಳನ್ನು ಹರಿತ ಮಾಡಿದ ಗುರಿ ನಿರಂತರವಾಗಿರಬೇಕೆಂಬ ಸೂಚನೆಯನ್ನೂ ನೀಡುತ್ತಿದೆ.

ಡಾ. ಅಂಬೇಡ್ಕರ್ ಅವರು ಈ ಕಡೆಗಣಿಸಲ್ಪಟ್ಟ ಸಮುದಾಯದಿಂದ ಬಂದವರು. ಆದ್ದರಿಂದಲೇ ದೇಶದ ಇತಿಹಾಸದ ತಳಸ್ಪರ್ಶಿ ಅಧ್ಯಯನ ನಡೆಸಿ ಭಾರತದ ಚರಿತ್ರೆಯಲ್ಲಿ ದಲಿತರ ವಸ್ತುಸ್ಥಿತಿಯನ್ನು ತೋರಿಸಿಕೊಟ್ಟರು. ದಲಿತರನ್ನು ಸಾಮಾಜಿಕ, ಆರ್ಥಿಕ, ರಾಜಕೀಯವಾಗಿ ಮೇಲ್ಪದರಕ್ಕೆ ಒಯ್ಯಲು ತಮ್ಮ ಹೋರಾಟವನ್ನು ಕೈಗೊಂಡರು. ಈ ಹೋರಾಟದ ಫಲವಾಗಿ ದಲಿತರಿಗೆ ಸಂವಿಧಾನಾತ್ಮಕ ಹಕ್ಕುಗಳನ್ನು ಒದಗಿಸಿಕೊಟ್ಟರು. ಅವರೇ ಹೇಳುವಂತೆ "ಭಾರತದ ಪ್ರಾಚೀನ ಇತಿಹಾಸದ ಬಹುಭಾಗವು ಇತಿಹಾಸವೇ ಅಲ್ಲ. ಹೀಗೆಂದರೆ ಪ್ರಾಚೀನ ಭಾರತಕ್ಕೆ ಇತಿಹಾಸವಿಲ್ಲ ಎಂದು ಹೇಳಿದಂತಲ್ಲ. ಅದಕ್ಕೆ ವಿಪುಲವಾದ ಇತಿಹಾಸವುಂಟು. ಆದರೆ ಅದು ವಿರೂಪಗೊಂಡಿದೆ. ಅದು ಸ್ತ್ರೀಯರನ್ನೂ, ಮಕ್ಕಳನ್ನೂ ರಂಜಿಸಲೆಂದು ರಚಿಸಿದ ಪುರಾಣವಾಗಿಬಿಟ್ಟಿದೆ. ಬ್ರಾಹ್ಮಣ ಲೇಖಕರು ಬುದ್ಧಿಪೂರ್ವಕವಾಗಿ ಹೀಗೆ ಮಾಡಿರಬೇಕೆಂದು ಅನ್ನಿಸುತ್ತದೆ."[೯]

ಚರಿತ್ರೆಯನ್ನು ನೋಡುವಾಗ ನಾವು ಸಮಾಜದ ಯಾವ ವರ್ಗದ ನೆಲೆಯಿಂದ ನೋಡುತ್ತೇವೆ ಎಂಬುದೂ ಬಹಳ ಮುಖ್ಯ. ಇಲ್ಲವಾದರೆ ಒಂದು ವರ್ಗದ ಆಲೋಚನೆಗಳೇ ಎಲ್ಲರ ಆಲೋಚನೆಗಳಾಗುವ ಅಪಾಯವಿರುತ್ತದೆ. ಇದುವರೆಗೂ ಚರಿತ್ರೆಯನ್ನು ಮೇಲ್ವರ್ಗಗಳ ದೃಷ್ಟಿಯಿಂದಲೇ ನೋಡಲಾಗಿದೆ. ಅಂಬೇಡ್ಕರ್ ಅವರು ಇದರ ಮಿತಿ ಮತ್ತು ಅಪಾಯಗಳನ್ನು ಕುರಿತು ಚರ್ಚಿಸಿದರು. ಅವರು ಕೆಳಸ್ತರದ ನೆಲೆಯಿಂದ ಚರಿತ್ರೆಯನ್ನು ಗ್ರಹಿಸಿದ್ದರಿಂದ ತುಳಿತಕ್ಕೊಳಪಟ್ಟ ಜನತೆಗೆ ಸಾಮಾಜಿಕ ಅವಕಾಶಗಳನ್ನು ಕುರಿತು ಚರ್ಚಿಸಲು ಸಾಧ್ಯವಾಯಿತು. "ಜಾತಿ ಮನುಷ್ಯನನ್ನು ನಿರ್ವೀರ್ಯಗೊಳಿಸುತ್ತದೆ. ಅನರ್ಹಗೊಳಿಸುವ ಪ್ರಕ್ರಿಯೆಯೂ ಆಗಿದೆ. ಸ್ವತಂತ್ರ ಹಾಗೂ ಪೂರ್ಣವಾದ ಮನುಷ್ಯತ್ವವನ್ನು ಒಬ್ಬ ವ್ಯಕ್ತಿ ಸಾಧಿಸಲು ಅವನಿಗೆ ಶಿಕ್ಷಣ, ಸಂಪತ್ತು ಮತ್ತು ದುಡಿಮೆ ಇವೆಲ್ಲವುಗಳ ಅಗತ್ಯವೂ ಇದೆ. ಐಶ್ವರ್ಯ ಮತ್ತು ಉದ್ಯೋಗ ತಂದುಕೊಡದ ಕೇವಲ ಶಿಕ್ಷಣದಿಂದಲೂ ಪ್ರಯೋಜನವಿಲ್ಲ. ಶಿಕ್ಷಣ ರಹಿತ ಐಶ್ವರ್ಯ ಪಶುಸಮಾನವಾದುದು. ಪ್ರತಿಯೊಂದೂ ಉಳಿದವುಗಳಿಗೆ ಅಗತ್ಯವಾಗಿದೆ. ಮಾನವನ ಪ್ರಗತಿಗೆ ಅವುಗಳ ಅಗತ್ಯವಿದೆ."[೧೦] ಎಂದು ಅಂಬೇಡ್ಕರ್ ಈ ದೇಶದ ಅವಮಾನಿತರಿಗೆ ಸ್ವಾಭಿಮಾನಿ ಸಂಕೇತವಾಗಿ ನಿಂತು ಹೋರಾಟದ ಕೆಚ್ಚನ್ನು ತುಂಬಿದರು.

ಯಾವ ವರ್ಗಕ್ಕೆ ಲಿಖಿತ ಚರಿತ್ರೆ ಇಲ್ಲವೊ ಆ ವರ್ಗವು ಚರಿತ್ರೆಯೊಳಗೆ ದಾಖಲಾಗುವ ರೀತಿ ಬಹಳ ವಿಶಿಷ್ಟವಾಗಿರುತ್ತದೆ. ಏಕೆಂದರೆ ಚರಿತ್ರೆಯೇ ಇಲ್ಲದ ವ್ಯಕ್ತಿ ಏಕಕಾಲದಲ್ಲಿ ವರ್ತಮಾನ ಮತ್ತು ಭೂತಕಾಲದ ನಡುವಿನ ಕೊಂಡಿಯನ್ನು ಸ್ಥಾಪಿಸಿ ಒಂದು ಹೊಸ ಬದುಕಿಗೆ, ಭವಿಷ್ಯದ ಹಾದಿಗೆ ಮುನ್ನುಡಿ ಬರೆಯುತ್ತಾನೆ. ಹಾಗೆ ನೋಡುವಾಗ ಆ ವ್ಯಕ್ತಿಗೆ ಹಿಂದಿನ ಘಟನೆಗಳಿಂದ ಪ್ರಾರಂಭಗೊಂಡು ಇಂದಿನ ಘಟನೆಗಳವರೆಗೂ ಒಂದಕ್ಕೊಂದು ಸಂಬಂಧವುಳ್ಳವೆಂಬ ಅರಿವು ಇರಬೇಕಾಗುತ್ತದೆ. ದಲಿತರು ಅಕ್ಷರ ಶಿಕ್ಷಣ ಕಲಿಯಲು ಅಂಬೇಡ್ಕರ್ ಅವರ ಪ್ರಭಾವ ಕೂಡ ಕೆಲಸ ಮಾಡಿದೆ. ಈ ಪ್ರಭಾವ ದಲಿತರ ಮೇಲೆ ಹೇಗೆ ಆಗಿದೆ ಮತ್ತು ಆಗುತ್ತಿದೆ ಎಂಬುದನ್ನು ಘಟನೆಗಳ ಹಿನ್ನೆಲೆಯಲ್ಲಿ ನಿರೂಪಿಸಲು ಸಾಧ್ಯವಾಯಿತು.

ಅಂಬೇಡ್ಕರ್ ಅವರ ಹೋರಾಟದ ಹಾದಿಗಳಿಂದ ಅನೇಕ ಅಕ್ಷರ ಕಲಿತ ದಲಿತರು ಸ್ಫೂರ್ತಿ ಪಡೆದರು. ಈ ಸ್ಫೂರ್ತಿಯೊಂದಿಗೆ ಮಾರ್ಕ್ಸ್‌ನ ವಿಚಾರಗಳಿಂದ ಪ್ರಭಾವಿತಗೊಂಡರು. ಇದರಿಂದಾಗಿ ದೇಶದಾದ್ಯಂತ ಅನೇಕ ಸಂಘಟನೆಗಳನ್ನು ಹುಟ್ಟುಹಾಕಿ ಹೋರಾಟಕ್ಕೆ ಸಾವಿರಾರು ನದಿಗಳು ಸೇರುವಂತೆ ಸೇರಿದರು. ಇಂತಹ ಸಾಗರದೊಳಗೆ ಕರ್ನಾಟಕದಲ್ಲಿ ಹುಟ್ಟಿದ 'ದಲಿತ ಸಂಘರ್ಷ ಸಮಿತಿ'ಯೂ ಒಂದು. ದಲಿತರ ಹಕ್ಕು ಬಾಧ್ಯತೆಗಳಿಗಾಗಿ ತೀವ್ರತರವಾದ ಹೋರಾಟವನ್ನು ಈ ಸಂಘಟನೆ ಕೈಗೊಂಡಿತು. ಜೊತೆಗೆ ಕರ್ನಾಟಕದಲ್ಲಿ ದಲಿತರು ಎಚ್ಚತ್ತುಕೊಳ್ಳುವಂತೆ ಮಾಡುವಲ್ಲಿ ತನ್ನದೇ ಆದ ಕೊಡುಗೆ ನೀಡಿತು. ಈ ಸಂಘಟನೆಯ ಮಹತ್ವವನ್ನು ಒಂದು ಹೋರಾಟದ ಹಾಡು ಹೀಗೆ ನಿರೂಪಿಸಿದೆ.

ಸಂಘದವರು ಬಂದಿದ್ರು ಮಾವ
ನಮಗೆ ಸಂಗತಿಗಳ ಹೇಳವ್ರೆ ಮಾವ
ಊರೂರು ಸುತ್ತಿಕೊಂಡು
ಕೇರಿ ಕೇರಿ ಅಲೆದುಕೊಂಡು
ಕತ್ತಲಾದ ನಮ್ಮ ಬದುಕು
ಕಳಚಿ ಮುಂದೆ ಒಯ್ಯಲಿಕ್ಕೆ
ಸಿರಿವಂತ್ರು ಸಾಹುಕಾರ್ರು
ಕಾಂಗ್ರೆಸ್ಸಿನವರಂತೆ
ಜಮೀನುದಾರರು ಹಣವಂತರು
ಜನತಾ ಪಕ್ಷದವರಂತೆ
ಜಾತಿ ತುಳಿತ ಕಾಣದವರು

ಕುರುಡು ಕಮ್ಯುನಿಷ್ಟರಂತೆ
ಈ ಸ್ವಾಮಿಗಳ ರಾಜ್ಯದಲ್ಲಿ
ದುಡಿವರೆಲ್ಲ ಬಡವರಂತೆ
ಕಷ್ಟಪಟ್ಟು ದುಡಿದರೂನೆ
ಹಸಿವು ತೀರಲಿಲ್ಲವಂತೆ
ನಮ ರಕ್ತ ಕುಡಿದು ಕುಡಿದು
ಸಾಹುಕಾರ್ರು ಹೆಂಗಾದ್ರೊ
ಹಣವ ಹೇಗೆ ದೋಚಿದರೊ
ವಿವರವಾಗಿ ಹೇಳಿದರು
ಊರೂರು ಕೊಬ್ಬಿನಿಂತ
ಜಮೀನುದಾರರು ಹಣವಂತರು
ಬಡವರನ್ನು ಸಿಗಿಯುತ್ತಿರುವ
ಸೀಳು ನಾಯಿಗಳಂತೆ
ಹೋರಾಟವು ಒಂದೇನೆ
ಬಡವರಿಗೆ ದಾರಿಯಂತೆ
ಹೋರಾಡದೆ ಬಡವರಿಗೆ
ಅನ್ನ ಕೂಡ ದಕ್ಕದಂತೆ[೧೧]

ಕತ್ತಲೆಯಲ್ಲಿ ಬದುಕುತ್ತಿದ್ದ ಜನರು ಅಂಬೇಡ್ಕರ್ ದಾರಿದೀಪದಲ್ಲಿ ಮುನ್ನುಗ್ಗಿದರು. ಸಂಘಟನೆ ಕಟ್ಟಿ ದಲಿತರ ಬದುಕು ಸಮಾಜದಲ್ಲಿ ಯಾವ ರೀತಿ ಇದೆ ಎಂಬುದನ್ನು ತೋರಿಸಿದರು. ಇದಕ್ಕಾಗಿ ಘಟನಾಧಾರಿತ ಹಿನ್ನೆಲೆಯನ್ನು ದಲಿತ ಕವಿಗಳು ತಮ್ಮ ಬರಹಗಳಲ್ಲಿ ದಾಖಲಿಸಿದರು. ದಾಖಲಿಸುತ್ತಲೇ ಅದರ ವಿರುದ್ಧ ಹೋರಾಡಬೇಕಾದ ಅನಿವಾರ್ಯತೆಯನ್ನು ಹುಟ್ಟುಹಾಕಿದರು. ಅದರಲ್ಲೂ ದಲಿತ ಕಾವ್ಯ ಈ ಸಂಘಟನೆಯ ಆರಂಭದಲ್ಲಿ ರಾಜ್ಯದ ಮೂಲೆಮೂಲೆಯನ್ನು ತಲುಪಿ ಹೋರಾಟದ ಕಿಡಿಯನ್ನು ಹಚ್ಚಿತು. ಇದರಿಂದಾಗಿಯೇ ಬೀದರ್‌ನಿಂದ ಬೆಂಗಳೂರಿನವರೆಗೂ, ಬೆಳಗಾಂನಿಂದ ಕೋಲಾರದವರೆಗೂ ಎಲ್ಲಿ ದಲಿತರ ಮೇಲೆ ದೌರ್ಜನ್ಯ ನಡೆದರೂ ಅಲ್ಲಿ ಪ್ರತಿಭಟನೆ ನಡೆಸಲು ಎಲ್ಲರೂ ಒಗ್ಗೂಡುತ್ತಿದ್ದರು.

ದಲಿತ ಸಂಘರ್ಷ ಸಮಿತಿಯ ಚಟುವಟಿಕೆ ಆರಂಭದಲ್ಲಿ ಯಾವ ರೀತಿ ಇದ್ದವೆಂಬುದಕ್ಕೆ 'ಊರೂರು ಸುತ್ತಿಕೊಂಡು, ಕೇರಿಕೇರಿ ಅಲೆದುಕೊಂಡು, ಸಂಘದವರು ಬಂದಿದ್ರು' ಎನ್ನುವ ಸಾಲುಗಳು ತೋರಿಸಿಕೊಡುತ್ತವೆ. ಆಳುವ ವರ್ಗದ ವಿರುದ್ಧ ತಿರುಗಿ ಬೀಳಲು ದಲಿತರಿಗೆ

ಉಳಿದಿರುವುದು ಹೋರಾಟ ಒಂದೇ. ಇದನ್ನು ಮೇಲಿನ ಕವನದ ಕೊನೆಯ ಸಾಲುಗಳು ಸೂಕ್ಷ್ಮವಾಗಿ ತಿಳಿಸಿಕೊಟ್ಟಿವೆ. ಹೋರಾಟವು ನೊಂದವರ ಆಯ್ಕೆಯಾಗದಿದ್ದರೆ ತಿನ್ನಲಿಕ್ಕೆ ಅನ್ನವೂ ಸಿಗುವುದಿಲ್ಲವೆಂಬ ಎಚ್ಚರಿಕೆ ಇಲ್ಲಿ ಧ್ವನಿತವಾಗಿದೆ.

"ಕ್ರಾಂತಿ ಎಂದರೆ ಸಾಮಾನ್ಯ ಜನ ಸಿಡಿದೇಳುವ ಕ್ರಿಯೆ, ಅದೊಂದು ದಂಗೆ, ಜನ ಸಿಟ್ಟಿನಿಂದ ಒಮ್ಮೆಗೇ ಸ್ಫೋಟಿಸುವ ಜ್ವಾಲಾಮುಖಿ ಕ್ರಿಯೆ. ಕ್ರಾಂತಿಯ ಈ ಸರಳ ಕಲ್ಪನೆಗೆ ಅನುಗುಣವಾಗಿಯೇ ಕಾವ್ಯವೂ ಇರುತ್ತದೆ. ಹೀಗಾಗಿ ಕ್ರಾಂತಿ ಕಾವ್ಯ ಎಂದರೆ ಕನ್ನಡದಲ್ಲಿ ಹಾಡುಗಬ್ಬ ಅಥವಾ ಹಾಡಿನ ಲಯಗಳಿಗೆ ಹತ್ತಿರವಿರುವಂತಹದ್ದು. ಕನ್ನಡದ ಲಯ ಶರೀರದಲ್ಲಿ ಕ್ರಾಂತಿ ಮಿಡಿಯುವುದೇ ಹಾಡಿನಲ್ಲಿ"[೧೨]. ಇಂತಹ ಹಾಡನ್ನು ಅಭಿವ್ಯಕ್ತಿಯ ಬಹುಮುಖ್ಯ ಮಾಧ್ಯಮವನ್ನಾಗಿ ಮಾಡಿಕೊಂಡ ದಲಿತರು ಜನತೆಯಲ್ಲಿ ಅರಿವು ಮತ್ತು ಎಚ್ಚರವನ್ನು ಮೂಡಿಸಲು ಮುಂದಾದರು. ವಾಸ್ತವದಲ್ಲಿ ದಲಿತರ ಮೇಲೆ ನಡೆಯುತ್ತಿರುವ ದಬ್ಬಾಳಿಕೆಗಳು ಮತ್ತು ಅವುಗಳಿಗೆ ಕಾರಣ ಹಾಗೂ ಅದರ ಪರಿಣಾಮಗಳನ್ನು ಕುರಿತು ಹಾಡಿನ ಮೂಲಕ ಮೂಲೆಮೂಲೆಗೆ ತಲುಪಿಸಿದರು. ಇದರ ಪರಿಣಾಮವೇ ದಲಿತರ ಮೇಲಿನ ದೌರ್ಜನ್ಯದ ಘಟನೆಗಳು ಕಾವ್ಯದಲ್ಲಿ ಮೂಡಲು ಕಾರಣವಾಯಿತು.

ಧರ್ಮದೇಜೆಂಟರುಗಳೇ
ನೀವು ಕಾಣಿರಿ ನೀವು ಕಾಣಿರಿ
ಕರ್ಮದ ಕಂತ್ರಾಟುದಾರರೇ
ನೀವು ಕಾಣಿರಿ ನೀವು ಕಾಣಿರಿ
ಪೋಲೀಸು ಕೋರ್ಟುಗಳೇ
ನೀವು ಕಾಣಿರಿ ನೀವು ಕಾಣಿರಿ
ಮಂತ್ರಿ ಮೆಂಬರುಗಳೇ
ನೀವು ಕಾಣಿರಿ ನೀವು ಕಾಣಿರಿ
ಗೇದ ಕೂಲಿ ಕೇಳಿದ
ಹೊಲೆಮಾದಿಗರನು
ಎಲ್ಲಿ ಕೊಂದರೆಂಬುದ ಕಂಡರೆ
ನನ್ನೊಮ್ಮೆ
ಕರೆದು ತೋರಿರಿ ಕರೆದು ತೋರಿರಿ[೧೩]

ಇದು ದಲಿತರ ವಾಸ್ತವ ಮತ್ತು ಇತಿಹಾಸದ ಕುರುಹು. ಸಮಾಜಮುಖಿ ನೆಲೆಯ ಆಶಯವುಳ್ಳ ವ್ಯಕ್ತಿಯ ತನ್ನತನದ ಹುಡುಕಾಟ ಇಲ್ಲಿದೆ. "ಕಾವ್ಯ ಬದುಕಿನ ಶೋಧನೆ, ಆ ಬದುಕು ಸಮಾಜದಲ್ಲಿದೆ, ಸಮಾಜ ರಾಜಕೀಯಕ್ಕೆ ಅಧೀನವಾದದ್ದು".[೧೪] ಇಂತಹ ಬದುಕಿನ ಅನಾವರಣಗಳೇ ದಲಿತ ಕಾವ್ಯದ ಕೇಂದ್ರ ಬಿಂದು. ಆದರೆ ಬದುಕನ್ನು ನೋಡುವ ಬಗೆ ಮಾತ್ರ ವಿಭಿನ್ನ. ಅದಕ್ಕೆ ನಿಂತ ನೆಲದ ಅರಿವು ಮುಖ್ಯ. ಈ ಅರಿವಿನಿಂದಾಗಿಯೇ ದಲಿತನೊಬ್ಬ ಹೀಗೆ ಘೋಷಿಸಿಕೊಳ್ಳಲು ಸಾಧ್ಯವಾಯಿತು. ಯಾರಿಗೆ ತಾನು ತುಳಿತಕ್ಕೊಳಗಾದ ಬಗೆಯ ಅರಿವು ಬರುತ್ತದೋ ಅವರು ಅದರಿಂದ ಎಚ್ಚರಗೊಂಡು ಅದರ ವಿರುದ್ಧ ಹೋರಾಡಲು ಮುಂದಾಗುತ್ತಾರೆ. ಅಕ್ಕನ ವಚನವನ್ನು ನೆನಪಿಸುವ ಮೇಲಿನ ಕವಿತೆ ದಲಿತರ ಕೊಲೆಯ ಕಾರಣಗಳನ್ನು ಹಿಡಿದಿಟ್ಟಿದೆ. ಗೇದ ಕೂಲಿ ಕೇಳಿದ್ದಕ್ಕೆ ದಲಿತರು ಕೊಲೆಯಾಗುತ್ತಿದ್ದಾರೆ. ಇದು ಇಂಡಿಯಾದಂತಹ ಸುಸಂಸ್ಕೃತ ದೇಶಕ್ಕೆ ಹಿಡಿದ ಕನ್ನಡಿ. ಹೀಗೆ ಕೊಲೆಯಾದ ದಲಿತರ ಅಸ್ತಿತ್ವವೇ ಸಿಗದ ಹಾಗೆ ಆಳುವ ವರ್ಗ ನಿಯಂತ್ರಿಸುತ್ತದೆ. ಇದಕ್ಕೆ ಪೂರಕವಾಗಿ ಕಥಾ ಸಾಹಿತ್ಯ ನೋಡಿದರೆ 'ಕುಸುಮಬಾಲೆ' ಕಾದಂಬರಿಯಲ್ಲಿ ಚಿತ್ರಿಸಿರುವ ಚೆನ್ನನ ಕೊಲೆ ಸ್ಪಷ್ಟ ನಿದರ್ಶನ.

ಮೇಲಿನ ಕವನಕ್ಕೆ ಪೂರಕವೆಂಬಂತೆ ಹೋರಾಟದ ಹಾಡನ್ನು ಚರ್ಚಿಸಬಹುದು. 'ಈ ನಾಡ ಮಣ್ಣಲ್ಲಿ ಮಣ್ಣಾದ ಜನಗಳ ಕತೆಯನು ಹೇಳುತೀವಿ, ಕಿವಿಗೊಟ್ಟು ಕೇಳಿರಣ್ಣ ನೋವಿನ ರಾಗವನ್ನು' ಹಾಡಿನಲ್ಲಿ ಕವನವನ್ನು ಹೇಳುತ್ತಿಲ್ಲ; ಬದಲಾಗಿ ಕಥೆಯನ್ನು ಹಾಡಾಗಿ ಹಾಡಲಾಗುತ್ತಿದೆ. ಕಥೆ ಲಿಖಿತ ಪರಂಪರೆಯಲ್ಲಿ ಗದ್ಯ ನಿರೂಪಣೆಯನ್ನು ಬಯಸುತ್ತದೆ. ಆದರೆ ಇಲ್ಲಿನ ಕಥೆ ಹಾಡನ್ನು ಬಯಸುತ್ತಿದೆ. ಅದಕ್ಕೆ ನೋವಿನ ರಾಗ ಸೇರಿಸಿ ಹಾಡಲಾಗುತ್ತಿದೆ. ಜೊತೆಗೆ ಇಲ್ಲಿ ದಲಿತರು ಎಂಬುದು ನಿರೂಪಣೆಯಲ್ಲಿಲ್ಲ. ಆದರೆ ನೊಂದ ಜನರ ನೋವನ್ನು ಹಾಡಲು ಬಯಸುತ್ತಿರುವ ಈ ಕವನ ದುಡಿಯುವವರನ್ನೇ, ದಲಿತರನ್ನೇ ಕೇಂದ್ರೀಕರಿಸಿಕೊಂಡಿರುವುದು ವಾಸ್ತವ. ದಲಿತ ಕಾವ್ಯ ಎಂದ ಕೂಡಲೇ ಅಲ್ಲಿ ನೋವಿರುವುದು ಸಾಮಾನ್ಯ ಸಂಗತಿಯಲ್ಲ; ಅದು ವಾಸ್ತವ. ಆದರೆ ಕೆಲವು ವಿಮರ್ಶೆಗಳು ದಲಿತ ಕಾವ್ಯದಲ್ಲಿ ಸಂತೋಷದ ಅನಾವರಣವನ್ನು ಅಪೇಕ್ಷೆ ಪಡುತ್ತವೆ. ವಿಮರ್ಶಕರಾದ ಹೆಚ್.ಎಸ್. ರಾಘವೇಂದ್ರರಾವ್ ಅವರು ಎಲ್. ಹನುಮಂತಯ್ಯ ಅವರ 'ಕರ್ಣರಾಗ' ಕೃತಿಯ ಬಗ್ಗೆ ವಿಮರ್ಶೆ ಬರೆಯುತ್ತಾ "ಸಂತೋಷವನ್ನೇ ಮೂಲ ನೆಲೆಯಾಗಿ ಹೊಂದಿರುವ ಒಂದೇ ಒಂದು ಕವಿತೆಯೂ ಇಲ್ಲಿ ಇಲ್ಲವೆನ್ನಬಹುದು. ಇದು ಈ ಕವಿ ಒಬ್ಬರ ಸಮಸ್ಯೆಯಲ್ಲ. ಇದು ಯಾಕೆ ಹೀಗೆ? ಸಂತೋಷವು ಕವಿತೆಯ ವಸ್ತುವಾಗಲಾರದೇ? ಅಥವಾ ಕವಿಯ ಸಾಮಾಜಿಕ ಧೋರಣೆಗಳು ಅಂತಹ ಅನುಭವಗಳನ್ನು ಸೆನ್ಸಾರ್ ಮಾಡಬೇಕೆಂದು ಹಟ ತೊಟ್ಟಿರುತ್ತವೆಯೇ? ಇಲ್ಲಿನ ಪ್ರೀತಿಗೂ ಕಣ್ಣೀರಿನ ಲೇಪನವಿರುತ್ತದೆ. ಕಾಮ, ನಮ್ಮ ಕಣ್ಣೆದುರುಗಿನ ವಸ್ತುಲೋಕ, ನಮ್ಮ ಇತಿಹಾಸ. ಲಘುವಾದ ಹಾಸ್ಯ ಮುಂತಾದವು ಈ

ಕವಿತೆಗಳ ಒಳಗೆ ಸುಳಿಯುವುದಿಲ್ಲ. ಹೀಗಾದರೆ ಜೀವನ ಮತ್ತು ಕವಿತೆ ಎರಡೂ ಕೊಂಚ ಒಣಗಿದಂತೆ ಕಾಣುವುದಿಲ್ಲವೇ?"[೧೫] ಎಂದು ಪ್ರಶ್ನಿಸುತ್ತಾರೆ. ಈ ಆಲೋಚನೆ ಕಾವ್ಯವನ್ನು ಆಸ್ವಾದನಾ ನೆಲೆಯಲ್ಲಿ ನಿಂತು ನೋಡುವ ದೃಷ್ಟಿಕೋನದಿಂದ ಮತ್ತು ಮೇಲ್ವರ್ಗದ ಹಿತಾಸಕ್ತಿಯ ಆಲೋಚನೆಗಳಿಂದ ಬಂದವುಗಳೇ ಹೊರತು ದಲಿತ ಕಾವ್ಯವನ್ನು ನೋಡುವ ದುಡಿಮೆ ನೆಲೆಗಳಿಂದಂತೂ ಖಂಡಿತಾ ಬಂದಿಲ್ಲ. ಬಹುಶಃ ಹನುಮಂತಯ್ಯನವರ ಸಾಮಾಜಿಕ ಪರಿಸ್ಥಿತಿ ಕುರಿತು ಈ ಪ್ರಶ್ನೆ ಸೀಮಿತಗೊಂಡಿದ್ದರೆ ಒಪ್ಪಬಹುದಿತ್ತೇನೋ. ಆದರೆ ಇದು ಇಡೀ ದಲಿತ ಕಾವ್ಯವನ್ನು ನೋಡುವ ಹಾಗೆ ವಿಸ್ತರಿಸಿಕೊಂಡಿದೆ. ಈ ಕ್ರಮ ಸಮಂಜಸವಾದುದಲ್ಲ.

ದಲಿತರ ಯಾವುದೇ ಹೋರಾಟಕ್ಕೆ ಜನಸಾಗರ ಬಹಳ ಮುಖ್ಯ. ತಮ್ಮತನದ ಅರಿವು ಮತ್ತು ವಾಸ್ತವತೆ ಗೊತ್ತಾಗದ ಹೊರತು ದಂಗೆ ಏಳಲು ಸಾಧ್ಯವಿಲ್ಲ. ಸಮುದಾಯವನ್ನು ಸಾಮಾಜಿಕ ನೆಲೆಯಲ್ಲಿ ನಿಂತು ನೋಡುವ ದೃಷ್ಟಿಕೋನ ದಲಿತ ಕವಿಗಳ ಕಾವ್ಯಗಳಲ್ಲಿ ಅಭಿವ್ಯಕ್ತಿಯ ರೂಪ ಪಡೆದವು. ಶೋಷಣೆ ತುಂಬಿದ ಈ ಜಗತ್ತನ್ನು ಶೋಷಕರು ಮತ್ತು ಶೋಷಿತರಿಗೆ ಏಕಕಾಲದಲ್ಲಿ ತಲುಪಿಸಿ ಬದಲಾವಣೆ ಹಾದಿಗೆ ಕೊಂಡೊಯ್ಯುವ ತರಾತುರಿ ಅವರದು. ಅದಕ್ಕೆ ದೇಶಾದ್ಯಂತ ನಡೆದ ಘಟನೆಗಳನ್ನು ಹಾಡಿನ ಮೂಲಕ ಬಿಂಬಿಸುತ್ತಾರೆ.

ಭಾರತ ದೇಶದಲ್ಲಿ
ಬಿಹಾರ ರಾಜ್ಯದ
ಬೆಲ್ಚಿಯ ಗ್ರಾಮದಲ್ಲಿ
ಹನ್ನೊಂದು ಜನ ದಲಿತರನ್ನು
ನಿನ್ನಣ್ಣ ತಮ್ಮಂದಿರನ್ನು
ಹಾಡು ಹಗಲಿನಲ್ಲೇ
ಸುಟ್ಟು ಬೂದಿ ಮಾಡಿದರಲ್ಲೋ....
ಕರ್ನಾಟಕ ರಾಜ್ಯದಲ್ಲಿ
ತುಮಕೂರು ಜಿಲ್ಲೆಯ
ದಾಸನಪುರದಲ್ಲಿ
ಚಿಕ್ಕತಿಮ್ಮಯ್ಯನೆಂಬ
ನನ್ನಣ್ಣ ದಲಿತನನ್ನು
ಸಾಲದ ಮಾತಿಗಾಗಿ
ಹೀನಾಮಾನ ಬಡಿದರಲ್ಲೋ

ಏಟು ತಿಂದು ನೊಂದ ದಲಿತ
ಪೋಲಿಸಿಗೆ ದೂರು ಕೊಡಲು
ಅವಮಾನ ಆಯಿತೆಂದು
ದೂರ್ತ ಗೌಡರು ಸೇರಿ
ಮಾರನೆ ದಿವಸ ರಾತ್ರಿ
ಕಲ್ಲು ನೀರು ಕರಗೋವತ್ತು
ದಲಿತನ ಗುಡಿಸಲು ನುಗ್ಗಿ
ನಾಯಂಗೆ ಎಳೆದು ತಂದು
ಅಲ್ಲೊಂದು ಕಣದಲಿ ಹಾಕಿ
ತುಂಡು ತುಂಡು ಮಾಡಿದರಲ್ಲೊ..........
ರಕ್ತವ ಚೆಲ್ಲಿದರಲ್ಲೊ........
ಗುಡಿಸಲಿನಲಿ ಗುಡ್ಡೇ ಹಾಕಿ
ಸುಟ್ಟು ಬೂದಿ ಮಾಡಿದರಲ್ಲೋ....[೧೬]

ಮೇಲಿನ ಕವಿತೆ ಎರಡು ಘಟನೆಗಳನ್ನು ಕುರಿತು ಹೇಳುತ್ತಿದೆ. ಭಾರತದಲ್ಲಿ ಶೋಷಿತರ ಮೇಲೆ ನಡೆದ ಅಮಾನವೀಯ ದೌರ್ಜನ್ಯಗಳಲ್ಲಿ ಬೆಲ್ಚಿಯಲ್ಲಿ ನಡೆಸಿದ ಘಟನೆಯೂ ಒಂದು. ಇದರ ಕುರಿತು ಅನೇಕ ಹೋರಾಟದ ಹಾಡುಗಳು ಹುಟ್ಟಿಕೊಂಡಿವೆ. ಇಲ್ಲಿ ಶೋಷಕ ವ್ಯವಸ್ಥೆ ಇದೆ. ಆ ಶೋಷಕ ವ್ಯವಸ್ಥೆ ತನಗೆ ವಿರುದ್ಧವಾದುದೆಲ್ಲವನ್ನು ಹೇಗೆ ನಾಶಪಡಿಸುತ್ತದೆ ಎಂಬುದಕ್ಕೆ ಮೇಲಿನ ಎರಡು ಘಟನೆಗಳು ಸಾಕ್ಷಿ. ಇಂತಹ ಘಟನೆಗಳ ಅನಾವರಣವಾಗದಿದ್ದರೆ ಅದರ ಕರಾಳ ಕೈಗಳು ಹಾಗೇ ಮುಂದುವರೆಯುತ್ತವೆ. ಅದರ ವಿರುದ್ಧ ಧಿಕ್ಕರಿಸಲು ಅದರ ಹಲವು ಮುಖಗಳ ಅನಾವರಣದ ಅವಶ್ಯಕತೆ ಇದೆ. ದಲಿತ ಕಾವ್ಯ ಇಂತಹ ಕ್ರೂರಮುಖಗಳನ್ನು ಕುರಿತು ನಿರೂಪಿಸಿತು.

ಸಾಲದ ಮಾತಿಗಾಗಿ ಬಡಿಸಿಕೊಂಡ ದಲಿತನ ಕಥೆ ಒಂದು ಊರಿನದಲ್ಲ. ದಲಿತರು ಎಲ್ಲೆಲ್ಲಿ ಕೂಲಿಮಾಡುತ್ತಾ ಬದುಕುತ್ತಿದ್ದಾರೋ ಅಲ್ಲೆಲ್ಲಾ ಈ ಕ್ರೂರ ಪರಿಸ್ಥಿತಿ ಇದ್ದೇ ಇದೆ. ಈ ಘಟನೆ ವರ್ಗ ತಾರತಮ್ಯಗಳಿಂದ ಕೂಡಿರುವ ಸಮಾಜವನ್ನು ಅನಾವರಣಗೊಳಿಸುತ್ತಿದೆ. ವರ್ಗತಾರತಮ್ಯ ಎಲ್ಲಿರುತ್ತದೋ ಅಲ್ಲಿ ಶೋಷಣೆ ನಿರಂತರ. ಈ ವರ್ಗವಿಲ್ಲದ ರಾಜ್ಯದ ಕಲ್ಪನೆ ದಲಿತರದು. ವರ್ಗಸಹಿತ ರಾಜ್ಯದ ಕಲ್ಪನೆ ಶೋಷಕರದು. ಇದಕ್ಕೆ ವಿರುದ್ದವಾದುದನ್ನು ಅವರು ಯಾವ ರೀತಿ ನಾಶಗೊಳಿಸುತ್ತಾರೆ ಎಂಬುದೇ ಮೇಲಿನ ಕವಿತೆಯಲ್ಲಿ ಅಭಿವ್ಯಕ್ತಗೊಂಡಿದೆ. ವಾಸ್ತವತೆಯನ್ನು ಬಿಂಬಿಸುತ್ತಲೇ ಅದರ ತೀವ್ರತೆಗಳನ್ನು ಕಟ್ಟಿಕೊಡುವ ಹಾಡುಗಳ ಸಾಲಿನಲ್ಲಿ ಈ ಕವಿತೆಯೂ ಒಂದು.

"ಮನುಷ್ಯ ಸಮಾಜದ ಬೆಳವಣಿಗೆಯನ್ನು ಅವಲಂಬಿಸಿಕೊಂಡೇ ಕಾವ್ಯ ತನ್ನ ರೂಪ ಮತ್ತು ಆಶಯಗಳನ್ನು ನಿರ್ಮಿಸಿಕೊಂಡಿದೆ. ಕಾವ್ಯವೂ ಕೂಡ ಸಮಾಜದ ಸೃಜನಶೀಲ ಉತ್ಪನ್ನ. ಅದಕ್ಕೆ ಯಾವ ಸಾಮಾಜಿಕ ಕ್ರಿಯೆ ಇದೆ ಎನ್ನುವುದೇ ಅದರ ಪಾತ್ರವನ್ನು ನಿರ್ಧರಿಸುತ್ತದೆ."[೧೭] ದಲಿತ ಕಾವ್ಯಕ್ಕೆ ದಲಿತರ ದುಡಿಮೆಯೊಂದಿಗಿನ ದೌರ್ಜನ್ಯಗಳ ಅಭಿವ್ಯಕ್ತಿಯೇ ಅದರ ಮೂಲ ಧ್ಯೇಯ. ಇದರ ಪರಿಣಾಮವೇ ೧೯೭೫ ಮತ್ತು ೧೯೭೭ರಲ್ಲಿ ಬಿಹಾರದ ಬೆಲ್ಚಿಯಿಂದ ಹಿಡಿದು ದೇಶದ ಮೂಲೆಮೂಲೆಯಲ್ಲಿ ದಲಿತರ ಮೇಲೆ ನಡೆಸಲಾದ ದೌರ್ಜನ್ಯಗಳನ್ನು ಎತ್ತಿ ಹಿಡಿಯಲು ಸಾಧ್ಯವಾದದ್ದು.

"ಬೆಲ್ಚಿ, ಪಂತ್‌ನಗರ, ವಿಲ್ಲುಪುರ, ಕಂಜವಾಲ ಹೀಗೆ ನಾಡಿನ ಮೂಲೆಮೂಲೆಯಲ್ಲಿ ದಲಿತರನ್ನು ಸುಟ್ಟಸುದ್ದಿಯನ್ನು ಓದಿ ರೊಚ್ಚಿಗೇಳದವನು ಮನುಷ್ಯನೆ? ಮಾನವತೆಯ ಹತ್ಯೆಯ ಈ ಸಂದರ್ಭದಲ್ಲಿ ಸಾಹಿತಿ ಅಂತರ್ಮುಖಿ ಆಗುವುದಾದರೆ ಆತ ಖಂಡಿತವಾಗಿಯೂ ಸಾಮಾಜಿಕ ಅಪರಾಧಿ ಆಗುತ್ತಾನೆ. ಬದುಕಿನ ಬಗ್ಗೆ ಅಪಾರ ಪ್ರೀತಿ ಮತ್ತು ನಿಷ್ಠೆಯಿಂದ ಕೂಡಿದ ಸಾಹಿತ್ಯ ನಮಗೆ ಬೇಕಾಗಿದೆ. ಅದನ್ನು ಕ್ರಾಂತಿಕಾರಿ ಸಾಹಿತಿಗಳು ಮಾತ್ರ ಕೊಡಬಲ್ಲರು."[೧೮] ಈ ಬದುಕಿನ ಬಗ್ಗೆ ಅಪಾರ ಪ್ರೀತಿ ಮತ್ತು ನಿಷ್ಠೆಯಿಂದ ಕಾವ್ಯ ಬರೆದು ಆ ಮೂಲಕ ಶೋಷಕರ ಮನಸ್ಥಿತಿಯ ಮೇಲೆ ಪ್ರಭಾವ ಬೀರುವ ನೆಲೆಗಳು ದಲಿತ ಕಾವ್ಯದ ನಡಿಗೆಯಲ್ಲಿವೆ.

ಬಂಡವಾಳಶಾಹಿ ಮತ್ತು ಭೂಮಾಲೀಕ ವರ್ಗದ ಹಿತಾಸಕ್ತಿಗಳಿಗನುಗುಣವಾಗಿ ಹುಟ್ಟುವ ಸಾಹಿತ್ಯಕ್ಕೂ, ಇವರಿಂದ ಶೋಷಣೆಗೆ ಒಳಗಾದ ಜನರ ಹಿತಾಸಕ್ತಿಯಿಂದ ಹುಟ್ಟುವ ಸಾಹಿತ್ಯಕ್ಕೂ ಮೂಲಭೂತವಾಗಿ ವ್ಯತ್ಯಾಸವಿದೆ. ಸಮಾಜವನ್ನು ಹೇಗಿದೆಯೋ ಹಾಗೆ ಉಳಿಸಿಕೊಂಡು ಹೋಗಬೇಕೆನ್ನುವುದು ಬಂಡವಾಳಶಾಹಿ ಮತ್ತು ಭೂಮಾಲೀಕ ವರ್ಗದ ಹಿತಾಸಕ್ತಿಯಾದರೆ, ಆ ನೆಲೆಗಳನ್ನು ಛಿದ್ರಗೊಳಿಸಿ ಅಲ್ಲಿ ಹೊಸದೊಂದು ಹುಟ್ಟಿಗೆ, ಸಾಮಾಜಿಕ ಬದಲಾವಣೆಗೆ ದುಡಿಯುವವರ ಸಾಹಿತ್ಯ ಒತ್ತಾಯಿಸುತ್ತದೆ. ಅದಕ್ಕಾಗಿಯೇ ಅದು ಕಟ್ಟಲು ಬಯಸುವ ಸಮಾಜದ ಕ್ರೂರ ವಾಸ್ತವ ಭೀಕರವಾಗಿರುತ್ತದೆ. ಬೆಲ್ಚಿ ಘಟನೆ ಕುರಿತ ಈ ಕ್ರಾಂತಿ ಕಾವ್ಯವನ್ನೇ ಗಮನಿಸಿದರೆ ಅದು ಗೊತ್ತಾಗುತ್ತದೆ.

ದೊಡ್ಡಗೌಡರ ಬಾಗಿಲೀಗೆ
ನಮ್ಮ ಮೂಳೆಯ ತ್ವಾರಣ
ನಮ್ಮ ಜನಗಳ ಕಾಲು ಕಯ್ಯಿ
ಕಂಬ ಅವರ ಹಟ್ಟಿಗೆ
ಅವರ ಬೇಟೆಗೆ ನಾವು ಮೊಲಗಳು

ನಮ್ಮ ಬಾಳೇ ಬಂಗಲೆ
ಅವರ ಬಂಗಲೆಯಂಗಳಕ್ಕೆ
ನಮ್ಮ ರಕ್ತದ ರಂಗಾಲೆ
ಅವರ ತೋಟದ ತೆಂಗಿನಲ್ಲಿ
ನಮ್ಮ ರಕ್ತದ ಎಳನೀರು
ಅವರ ಅಮಲಿನ ಗುಂಗಿನಲ್ಲಿ
ಕೂಲಿ ಹೆಣ್ಣಿನ ಕಣ್ಣೀರು
ಯಾವ ಪಾಪವ ಮಾಡಲಿಲ್ಲ
ಯಾರ ತಲೆಯನು ಹೊಡೆಯಲಿಲ್ಲ
ಕರಗಿ ನಮ್ಮಯ ಬಾಳಕತ್ತಲು
ಕಾಣಲಾರವೆ ಹಗಲನು"

ದಲಿತ ಕಾವ್ಯ ಎರಡು ಸ್ತರಗಳ ಸಾಮಾಜಿಕ ನೆಲೆಗಳನ್ನು ಪ್ರತಿನಿಧಿಸುತ್ತದೆ. ಒಂದು ತನ್ನ ಆಶಯಕ್ಕೆ ಅನುಗುಣವಾಗಿ ಬದಲಾಗಬೇಕಾಗಿರುವ ಸಮಾಜ ಮತ್ತು ಈ ಸಮಾಜಕ್ಕೆ ನಿರಂತರವಾಗಿ ಕಂಟಕವಾಗಿರುವ ಭೂಮಾಲೀಕ ವರ್ಗ. ಭಾರತ ದೇಶದಲ್ಲಿ ದಲಿತರ ಶತೃ ಪುರೋಹಿತ ವರ್ಗ ಅಥವಾ ಬ್ರಾಹ್ಮಣಶಾಹಿ ವರ್ಗ ಎಂದು ನಿರಂತರವಾಗಿ ದಿಕ್ಕು ತಪ್ಪಿಸಲಾಗುತ್ತಿರುವ ಸಂದರ್ಭದಲ್ಲಿ ಇಂತಹ ಕ್ರಾಂತಿ ಗೀತೆಗಳು ದಲಿತರ ನಿಜವಾದ ಶತೃ ಯಾರೆಂಬುದನ್ನು ತೋರಿಸಿಕೊಟ್ಟಿವೆ. ಬೆಲ್ಚಿ, ಪಂತ್‌ನಗರ, ಕಂಜವಾಲ, ಕಂಬಾಲಪಲ್ಲಿ, ಹುಣಸೆಕೋಟೆ, ಕರಂಚೇಡು, ಜಝೂರ್, ಚಂಡೂರು, ಖೈರ್ಲಾಂಜಿ, ಮೇಲವಲಾವು, ತತ್ತೂರು, ಬೆಂಡಿಗೇರಿ ಮುಂತಾದ ಕಡೆಗಳಲ್ಲಿ ದಲಿತರು ದೌರ್ಜನ್ಯಕ್ಕೆ ಒಳಗಾಗಿರುವುದು ಬಂಡವಾಳಶಾಹಿ ಮತ್ತು ಭೂಮಾಲೀಕ ವರ್ಗದವರಿಂದಲೇ ಹೊರತು ಯಾವ ಬ್ರಾಹ್ಮಣ ವರ್ಗದವರಿಂದಲೂ ಅಲ್ಲ. ಇದನ್ನು ಅನೇಕ ದಲಿತ ಕಾವ್ಯಗಳು ನಿರೂಪಿಸಿವೆ.

ಮೇಲಿನ ಕವಿತೆ ದಲಿತ ಮಹಿಳೆ ಮತ್ತು ಪುರುಷ ಏಕಕಾಲದಲ್ಲಿ ದೌರ್ಜನ್ಯಕ್ಕೆ ಒಳಗಾಗುವ ಬಗೆಯನ್ನು ಕಟ್ಟಿಕೊಟ್ಟಿದೆ. ಅಸಹಾಯಕ ಜನರನ್ನೇ ಅಸ್ತ್ರಗಳನ್ನಾಗಿ ಬಳಸಿಕೊಂಡು ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಂಡು ಬಂದಿರುವ ಮೇಲ್ವರ್ಗದ ಹುನ್ನಾರಗಳನ್ನು ಕಾವ್ಯ ಬಯಲು ಮಾಡುತ್ತಿದೆ.

ನ್ಯಾಯ ಕೊಡುವ ಜನ, ರಾಜ್ಯವಾಳುವ ಜನ
ಧರ್ಮ ಕೊಡುವ ಜನ, ತೀರ್ಥ ಹಾಕುವ ಜನ
ಓನಾಮ ಕಲಿಸುವ ಜನ, ಶಿಕ್ಷೆ ಕೊಡುವ ಜನ

ಕಾಳು ಬೆಳೆದ ದಲಿತರಿಗೆ ದ್ರೋಹ ಬಗೆದ ಜನ
ದುಡಿಸಿಕೊಂಡ ಜನ, ತೀಟೆ ತೀರಿಸಿಕೊಂಡ ಜನ
ಹೊಲಸು ತೊಳೆಸಿಕೊಂಡ ಜನ, ಓಟು ಪಡೆದ ಜನ
ಸುಲಿದು ಸುಖ ಪಡೆದ ಜನ, ಆಸ್ತಿ ನುಂಗಿದ ಜನ
ದಲಿತರಿಗೆ ದ್ರೋಹ ಬಗೆದ ಜನ[೨೦]

ಇದು ಪ್ರತಿ ಹಳ್ಳಿಹಳ್ಳಿಯ ಚಿತ್ರಣ. ಮೂಲಭೂತ ಸೌಕರ್ಯಗಳಾದಿಯಾಗಿ ಅಧಿಕಾರದವರೆಗೂ ತನ್ನ ಪ್ರಾಬಲ್ಯವನ್ನು ಭೂಮಾಲೀಕ ವರ್ಗ ಉಳಿಸಿಕೊಳ್ಳುತ್ತದೆ. ಇದರಿಂದಾಗಿ ಭೂಮಾಲೀಕ ವರ್ಗ ತನ್ನ ಇಚ್ಛೆಗನುಸಾರವಾಗಿ ಇಡೀ ವ್ಯವಸ್ಥೆಯನ್ನು ಮಾರ್ಪಡಿಸುತ್ತದೆ. ಇಂತಹ ಆಳುವ ನೆಲೆಗಳನ್ನು ಮೇಲಿನ ದಲಿತ ಕಾವ್ಯ ಕಟ್ಟಿಕೊಟ್ಟಿದೆ. 'ಭೂಮಾಲೀಕ' ಇದು ಕೇವಲ ಪದ ಮಾತ್ರವಲ್ಲ. ಸಾಮಾಜಿಕ ವ್ಯವಸ್ಥೆಯ ಎಲ್ಲಾ ಮಜಲುಗಳನ್ನು ಹಿಡಿದಿಟ್ಟುಕೊಂಡಿರುವ ಶಕ್ತಿಯೂ ಹೌದು. ಈ ಶಕ್ತಿಯ ಕೆಳಗೆ ನಲುಗುತ್ತಿರುವ ದಲಿತರ ಬದುಕಿನ ಕರಾಳ ಕತೆಗಳ ಅನಾವರಣ ಮೇಲಿನ ದಲಿತ ಕಾವ್ಯದ ಅಂತರಾಳದಲ್ಲಿ ಧ್ವನಿಸಿದೆ.

ದಲಿತರ ನಿಜವಾದ ಸಮಸ್ಯೆ ಇರುವುದೇ ಭೂಮಿಯೊಂದಿಗೆ. ಏಕೆಂದರೆ ಇವರು ಅದಕ್ಕೆ ಹಕ್ಕುದಾರರಲ್ಲ. ಅವರು ಹಕ್ಕುದಾರರಾಗದಂತೆ ಹಿಂದಿನಿಂದ ನಿರಂತರವಾಗಿ ಕಾನೂನು ಕಟ್ಟಳೆ, ಪುರಾಣ, ಪರಂಪರೆಗಳನ್ನು ಸೃಷ್ಟಿಸಲಾಗಿದೆ. ಅದರೆ ಇವರು ನಿರಂತರವಾಗಿ ದುಡಿಯುವ ಕೇಂದ್ರವೂ ಭೂಮಿಯೇ ಆಗಿದೆ. ಬಿ.ಎಂ. ಪುಟ್ಟಯ್ಯ ಅವರು ಹೇಳುವ ಹಾಗೆ 'ದಲಿತರ ಸಮಗ್ರ ಯಾತನಾಮಯ ಬದುಕನ್ನು ಕೂಲಿ ಮಾಡುವ ಸ್ಥಳಗಳಲ್ಲಿ ನೋಡಬೇಕಾಗಿದೆ'.

"ರಾಷ್ಟ್ರೀಯ ಮಟ್ಟದಲ್ಲಿ ಕೈಗೊಂಡ ಒಂದು ಸಮೀಕ್ಷೆಯಂತೆ ಪ್ರತಿಗಂಟೆಗೆ ಇಬ್ಬರು ದಲಿತರು ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಪ್ರತಿದಿನ ಮೂರು ಮಹಿಳೆಯರ ಮೇಲೆ ಅತ್ಯಾಚಾರಗಳಾಗುತ್ತಿವೆ. ಹಾಗೆಯೇ ಪ್ರತಿದಿನ ಮೂರು ದಲಿತರ ಕಗ್ಗೊಲೆ ಮತ್ತು ಎರಡು ದಲಿತ ಮನೆಗಳು ಭಸ್ಮವಾಗುತ್ತಿವೆ. ಲೋಕಸಭೆಯಲ್ಲಿ ನೀಡಿದ ವರದಿ ಪ್ರಕಾರ ೩೦,೩೧೫ ದೌರ್ಜನ್ಯ ಪ್ರಕರಣಗಳು ದಾಖಲೆಯಾಗಿ ೧,೨೧ಳಕ್ಕೆ ಶಿಕ್ಷೆಯಾಗಿವೆ."[೨೧] ಕರ್ನಾಟಕದಲ್ಲಿ ಬಳ್ಳಾರಿ, ಚಿಕ್ಕಮಗಳೂರು, ಕೋಲಾರ, ಹಾಸನ ಜಿಲ್ಲೆಗಳಲ್ಲಿ ಹೆಚ್ಚು ದೌರ್ಜನ್ಯಗಳು ನಡೆಯುತ್ತಿರುವುದು ದಾಖಲಾಗಿದೆ. ಈ ಎಲ್ಲಾ ಘಟನೆಗಳು ನಡೆಯುತ್ತಿರುವುದು ಜಾತಿ, ಮತ, ಧರ್ಮದ ಹೆಸರಿನಲ್ಲಿ ಮತ್ತು ಇವೆಲ್ಲವುಗಳಿಗಿಂತ ಹೆಚ್ಚಾಗಿ ಒತ್ತಾಯ ಜೀತ, ಒತ್ತಾಯ ಕೂಲಿ, ಬಿಟ್ಟಿ ಚಾಕರಿ ಮುಂತಾದವುಗಳಿಗಾಗಿ ನಡೆದಿರುವುದೇ ಹೆಚ್ಚು.

'ಹಳ್ಳಿ ಒಗ್ಗಟ್ಟಿನ ಕೇಂದ್ರ' ಎಂದು ಹೇಳಿ 'ಹಳ್ಳಿಗಳ ಉದ್ಧಾರವೇ ದೇಶದ ಉದ್ಧಾರ' ಎಂದು ಹೇಳುತ್ತಾ ಇರುವ ವೈರುಧ್ಯಗಳನ್ನು ಮುಚ್ಚಿ ವೈವಿಧ್ಯತೆಗಳನ್ನು ಮಾತ್ರ ಹೇಳುವ

ಸಾಂಪ್ರದಾಯಿಕ ಚಿಂತಕರಿಗೆ ಹಳ್ಳಿಯೊಳಗಿನ ಯಾವುದೇ ಶೋಷಣೆಯು ಕಣ್ಣಿಗೆ ಬೀಳುವುದಿಲ್ಲ. ಬಿದ್ದರೂ ಅವು ಸಾಮಾನ್ಯ ಎನಿಸಿಬಿಡುತ್ತವೆ. ೨೦೦೩ರಲ್ಲಿ ತಮಿಳುನಾಡಿನ ತಿರುಚಿ ಜಿಲ್ಲೆಯ ತಿಣ್ಣಿಯಾಮ್ ಎಂಬ ಹಳ್ಳಿಯಲ್ಲಿ ಒಬಿಸಿ ಸಮುದಾಯಕ್ಕೆ ಸೇರಿದ ದೇವರ್ ಜಾತಿಯವರು ದಲಿತರಿಬ್ಬರಿಗೆ ಒಣಗಿದ ಮಲ ತಿನ್ನಿಸಿದರು ಹಾಗೂ ೧೯೮೬ ಮತ್ತು ೧೯೯೧ರಲ್ಲಿ ತತ್ತೂರು ಮತ್ತು ಬೆಂಡಿಗೇರಿಯಲ್ಲಿ ಲಿಂಗಾಯತ ಭೂಮಾಲೀಕರು ಮತ್ತು ರೆಡ್ಡಿ ಭೂಮಾಲೀಕರು ದಲಿತರಿಗೆ ಮಲ ತಿನ್ನಿಸಿದರು. ಆ ಮೂಲಕ ಈ ದೇಶದ ಸಾಂಸ್ಕೃತಿಕ ಪ್ರತಿಷ್ಠೆಯನ್ನು ಮೆರೆದಿದ್ದಾರೆ ಹಾಗೂ ಭಾರತದಲ್ಲಿ ಬಡವರಾದ ದಲಿತರಿಗೂ ಮತ್ತು ಇನ್ನಿತರ ಭೂಮಾಲೀಕ ವರ್ಗಕ್ಕೂ ಇರುವ ಸಂಬಂಧವನ್ನು ಎತ್ತಿ ತೋರಿಸಿದ್ದಾರೆ.

ಈ ಘಟನೆಗಳ ಪಟ್ಟಿ ವರದಿಯಂತೆ ಕಂಡುಬಂದರೂ ದಲಿತರ ಮೇಲಿನ ದೌರ್ಜನ್ಯಗಳಿಗೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿಕೊಡುತ್ತವೆ. ದಲಿತರ ನಿಜವಾದ ಶತೃ ಯಾರೆಂಬುದನ್ನು ಈ ಘಟನಾಧಾರಿತ ನೆಲೆಯಿಂದ ಮೂಡಿರುವ ದಲಿತ ಕಾವ್ಯಗಳು ಅಭಿವ್ಯಕ್ತಿಸಿವೆ. ದಲಿತರ ಮೇಲಿನ ಇಂತಹ ಕ್ರೂರ ಘಟನೆಗಳನ್ನು ನೋಡುತ್ತಾ ಕುಳಿತಿರುವ ಆಳುವ ವರ್ಗದ ಹಿತಾಸಕ್ತಿಗಳು ಈ ಮೂಲಕ ಹೊರಬೀಳುತ್ತವೆ. ಇಂತಹ ಘಟನೆಗಳು ಆಗದಿರಲೆಂದೇ ಅಂಬೇಡ್ಕರ್ ತಮ್ಮ ಹೋರಾಟವನ್ನು ದಲಿತರ ಸಾಮಾಜಿಕ ರಕ್ಷಣೆ ಮತ್ತು ಸಮಾನತೆಯನ್ನು ತಂದುಕೊಡಬೇಕೆಂದು ಹೋರಾಡಿದ್ದು. ಅದರೂ ಸಾಮಾಜಿಕ ರಕ್ಷಣೆ ಪುಸ್ತಕದ ಪುಟಗಳಲ್ಲಿಯೇ ಉಳಿದುಕೊಂಡಿದೆ.

ಹಳ್ಳಿಗಳನ್ನು ಇದುವರೆಗೂ ಎರಡು ರೀತಿಯಲ್ಲಿ ವ್ಯಾಖ್ಯಾನ ಮಾಡಲಾಗಿದೆ. ಒಂದು ಹಳ್ಳಿಯನ್ನು ಆದರ್ಶ ನೆಲೆಯಲ್ಲಿ ನೋಡುವ ನೆಪದಿಂದ ಇಲ್ಲಿ ಎಷ್ಟೇ ತಾರತಮ್ಯಗಳಿದ್ದರೂ ಒಂದಾಗಿ ಬಾಳುತ್ತಾರೆ. ಇನ್ನೊಂದು ಸುಸಂಸ್ಕೃತಿ ಎನ್ನುವುದು ಇಂದು ಹಳ್ಳಿಗಳಲ್ಲಿಯೇ ಜೀವಂತವಾಗಿರುವುದು. ಆದರೆ ಇವೆರಡಕ್ಕೂ ತದ್ವಿರುದ್ಧ ಸ್ಥಿತಿ ಹಳ್ಳಿಗಳಲ್ಲಿದೆ. ಒಗ್ಗಟ್ಟು ಎನ್ನುವುದು ಆಳುವ ವರ್ಗ ಮಾಡಿಕೊಂಡ ತಾತ್ಕಾಲಿಕ ಒಡಂಬಂಡಿಕೆಯೇ ಹೊರತು ಶಾಶ್ವತವಲ್ಲ. ಏಕೆಂದರೆ ತಮ್ಮ ಜಮೀನುಗಳಲ್ಲಿ ದುಡಿಯಲು ಇವರಿಗೆ ಆಳುಗಳ ಅವಶ್ಯಕತೆ ಇದೆ. ಇನ್ನು ಸುಸಂಸ್ಕೃತಿ ಎನ್ನುವ ಪರಿಕಲ್ಪನೆಯೇ ಮೇಲ್ವರ್ಗ ಪ್ರಣೀತ ನೆಲೆಗಳಿಂದ ಹೊರಟಿರುವುದೇ ಹೊರತು ದುಡಿಯುವ ನೆಲೆಗಳಿಂದಲ್ಲ. ಈ ದೇಶದ ಸಂಸ್ಕೃತಿ ಕೊಂಡಾಡುವವರು ಹಿಂದೂ ಧಾರ್ಮಿಕತೆಯನ್ನು ತಲೆಯಲ್ಲಿ ಹೊತ್ತು ಮೆರೆಸುವವರನ್ನೇ. 'ದುಡಿಯುವ ಜನತೆಗೊಂದು ಸಂಸ್ಕೃತಿ ಇದೆ' ಎನ್ನುವುದು ಇವರ ಯಾವ ಆಲೋಚನೆಗಳನ್ನು ಪ್ರಭಾವಿಸುವುದೇ ಇಲ್ಲ. ಇಂತವರಿಂದ ರಚನೆಯಾದ ಸಾಹಿತ್ಯ, ಕಲೆ, ಇತಿಹಾಸ, ಮುಂತಾದವುಗಳೆಲ್ಲವೂ ಕೂಡ ಆಳುವ ವರ್ಗದ ಆಲೋಚನೆಗಳಲ್ಲಿಯೇ ತನ್ನ ಅಸ್ತಿತ್ವವನ್ನು ಸುತ್ತಿಕೊಂಡಿವೆ.

ಹಳ್ಳಿಗಳಲ್ಲಿ ದಲಿತರಿಗೆ ಒಂದು ರೀತಿಯ ಶೋಷಣೆ ನಡೆದರೆ ನಗರದಲ್ಲಿ ಈ ಶೋಷಣೆಯ ವಸ್ತುಸ್ಥಿತಿ ಬೇರೆ ರೀತಿ ಇರುತ್ತವೆ. ನಗರಗಳಲ್ಲಿ ಬಾಡಿಗೆ ಮನೆ ಪಡೆಯಲು ಪರದಾಡುವ ಪರಿಸ್ಥಿತಿ, ತಾವು ಕೆಲಸ ಮಾಡುವ ಜಾಗಗಳಲ್ಲಿ ಎದುರಿಸುವ ಜಾತಿ ನಿಂದನೆ, ಜಾತಿ ಹೆಸರಿನಲ್ಲಿ ನಡೆಯುವ ಲೈಂಗಿಕ ಕಿರುಕುಳ, ಗುಂಪುಗಾರಿಕೆ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವುದು, ಹಲ್ಲೆ ಮುಂತಾದವುಗಳು ನಡೆಯುತ್ತಲೇ ಇರುತ್ತವೆ. ಇವೂ ದಲಿತರ ಸಮಸ್ಯೆಗಳಲ್ಲಿ ಬಹಳ ಮುಖ್ಯವಾದವುಗಳು. ಆದರೆ ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಇವು ದಲಿತರಲ್ಲೇ ಯಾವ ಸ್ತರದಲ್ಲಿರುವವರಿಗೆ ಅನ್ವಯಿಸುತ್ತವೆ ಎಂಬುದು. ಈ ಶೋಷಣೆ ಮಧ್ಯಮ ವರ್ಗಕ್ಕೆ ಸಂಬಂಧಿಸಿದವುಗಳು. ಆದರೆ ಈ ಶೋಷಣೆಯನ್ನೇ ಎಲ್ಲರ ಶೋಷಣೆ ಎಂಬುದಾಗಿ ಹೇಳುತ್ತಾ ದಲಿತ ಹೋರಾಟವನ್ನು ದಿಕ್ಕು ತಪ್ಪಿಸಲಾಯಿತು. ನಗರದಲ್ಲಿ ಕೇವಲ ಮಧ್ಯಮ ವರ್ಗದ ದಲಿತರಷ್ಟೇ ಇಲ್ಲ. ದುಡಿಯುವ ಸಮುದಾಯವೂ ಇದೆ. ಅದರ ಸಮಸ್ಯೆಗಳು ಬೇರೆ ರೀತಿಯೇ ಇದೆ ಎಂಬುದನ್ನು ಈ ಕೆಳಗಿನ ಹೋರಾಟದ ಹಾಡು ನಿರೂಪಿಸುವುದು ಹೀಗೆ.

ಟರ್ಕ್‌ಮನ್ ಗೇಟು ಬಳಿ ನಡೆದ ಕತೆಯು ಗೊತ್ತೆ
ಗೇಟುಸುತ್ತ ಬಡವರ ಸೋಗೆ ಗುಡಿಸಲಿದ್ದವೋ
ಹೊಟ್ಟೆ ಬಟ್ಟೆಗಿರದಂತ ಕೂಲಿಯವರ ಕೇರಿಯದು
ನಗರವನ್ನು ಸುಂದ್ರ ಮಾಡಲು
ಇಂದ್ರಿಗಾಂಧಿ ಪುತ್ರ ಬಂದು
ಸೋಗೆ ಸೂರು ಗುಡಿಸಲೇಕೆ
ಬುಲ್ಡೋಜರು ತರಿಸಿ ಅವನು ಭೂಮಿ ಮಟ್ಟ ಮಾಡಿದನೊ ॥ಯಾತಕ್ಕೋ॥
ಗುಡಿಸಲು ಕೀಳೊವಾಗ ಅಡ್ಡ ಬಂದ ಜನರನು
ಹಿಂಡಿ ಹಕ್ಕಿ ಸುಡುವ ರೀತಿ
ಗುಂಡಿಟ್ಟು ಸುಟ್ಟು ಬಿಟ್ಟು
ಹಳ್ಳದಲ್ಲಿ ಅವರ ತಳ್ಳಿ ಟಾರು ರೋಡು ಮಾಡಿ ಹೋದ್ರು
....
ಭೂಮಿಯೆಲ್ಲ ಸುಲಿಗೆಕೋರರ ಸ್ವತ್ತಾಗಿದೆಯಣ್ಣ
ನ್ಯಾಯ ನೀತಿ ಮೋಸಗಾರರ ವಶವಾಗಿದೆಯಣ್ಣ
ನಮ್ಮ ಮೈಯ ರಕ್ತವೆಲ್ಲ
ಹಿಂಗೋಗಿ ಸಾಯೋ ಮುನ್ನ
ಸಂಘಟಿತರಾಗದೆ ಬೇರೆ ದಾರಿ ಇಲ್ಲವಣ್ಣ[೨೨]

ಇದು ದಲಿತರ ಚರಿತ್ರೆ, ದಲಿತರು ಬರೀ ಹಳ್ಳಿಯಲ್ಲಷ್ಟೇ ಅಲ್ಲ ನಗರಗಳಲ್ಲೂ ಶೋಷಿತರಾಗುತ್ತಿರುವುದಕ್ಕೆ ಮೇಲಿನ ಘಟನೆಯೇ ಸಾಕ್ಷಿ. ನಗರಗಳ ಸೌಂದರ್ಯದ ಹೆಸರಿನಲ್ಲಿ ಬಂಡವಾಳಶಾಹಿಗಳಿಗೆ ಮಣೆ ಹಾಕಲು ಆಳುವ ಸರ್ಕಾರಗಳು ಗುಡಿಸಲುಗಳನ್ನು ಎತ್ತಂಗಡಿ ಮಾಡಿಸುವ ಕ್ರೂರ ವಾಸ್ತವತೆ ದಿನನಿತ್ಯ ನಡೆಯುತ್ತಿದೆ. ಸ್ಲಂಗಳನ್ನು, ಕೆರೆಯ ಜಾಗಗಳನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಗುತ್ತಿಗೆಗೆ ಕೊಡುವ ಸರ್ಕಾರಕ್ಕೆ ಬಡವರ ಬದುಕು ಕಾಣಿಸುವುದಿಲ್ಲ. ವೈಜ್ಞಾನಿಕತೆಯ ಆರ್ಭಟದಲ್ಲಿ ಯಂತ್ರ ನಾಗರೀಕತೆಯು ಬಡವರ ಕೂಲಿಯನ್ನು ಕಿತ್ತುಕೊಂಡು ಅವರ ಹೊಟ್ಟೆಗೆ ಹಸಿವನ್ನು ಶಾಶ್ವತವಾಗಿ ನೀಡಲು ಮುಂದಾಗಿದೆ.

ಮೇಲಿನ ಹೋರಾಟದ ಹಾಡು ಸಂಘಟನೆಯ ಅನಿವಾರ್ಯತೆಯನ್ನು ಕುರಿತು ಹೇಳುತ್ತಿದೆ. ಕ್ರಾಂತಿಯ ಸ್ವರೂಪ ಇಲ್ಲಿದೆ, ಆದರೆ ಕ್ರಾಂತಿಗೆ ಅಗತ್ಯವಾದ ಮುನ್ನೋಟದ ಸ್ಪಷ್ಟ ಪರಿಕಲ್ಪನೆ ಇಲ್ಲ. ಆದರೂ ಭೂಮಿಯ ಅಸಮಾನ ಹಂಚಿಕೆಯನ್ನು ನಿರೂಪಿಸುತ್ತಲೇ ದಲಿತರ ಹೋರಾಟ ಎತ್ತ ಸಾಗಬೇಕೆಂಬುದನ್ನು ನಿರೂಪಿಸಿದೆ. ನ್ಯಾಯ ನೀತಿ ಕೆಲವರ ಸ್ವತ್ತಾಗಿರುವುದನ್ನು ಮೇಲಿನ ಕವಿತೆ ಹಾಡುತ್ತಿದೆ. ಇದನ್ನೇ ಇನ್ನೊಂದು ನೆಲೆಯಲ್ಲಿ ಚರ್ಚಿಸಿದರೆ, ನ್ಯಾಯ ನೀತಿ ಉಳ್ಳವರ ಗಾಳಕ್ಕೆ ಸಿಕ್ಕಿವೆ. ಇದರಿಂದಾಗಿ ಉಳ್ಳವರ ಆಶಯಕ್ಕೆ ತಕ್ಕ ಹಾಗೆ ಸದಾ ಬದಲಾವಣೆಯ ಹಾದಿಯಲ್ಲಿ ನಡೆಯುತ್ತಿರುತ್ತವೆ.

ಮೇಲಿನ ಕವನದ ಅಭಿವ್ಯಕ್ತಿಗಿಂತ ದುಡಿಯುವ ಜನತೆಯ ನೆಲೆಯನ್ನು ಕಟ್ಟಿಕೊಡುವಲ್ಲಿ ಸಿದ್ಧಲಿಂಗಯ್ಯ ಅವರ 'ಹಾವುಗಳೇ ಕಚ್ಚಿ' ಕವನ ದಲಿತರ ವಾಸ್ತವತೆಯನ್ನು ಅಭಿವ್ಯಕ್ತಿಸುವ ರೀತಿ ಹೀಗಿದೆ;

ನೆಲ ನೆಲದಲಿ ಜಲವುಕ್ಕಿಸಿ
ಬೆಳ್ಳಿ ಬೆಳೆಯ ಬೆಳೆದವರೆ
ದುಡಿದು ದುಡಿದು ಧೂಳಾದವರೆ
ಹಸಿವನುಂಡ ಜನಗಳೆ

ಯಜಮಾನರ ಬೆತ್ತಗಳಿಗೆ
ಭುಜಬೆನ್ನನು ತೆತ್ತವರೆ
ಬಂದೂಕದ ತುದಿಗೆದೆಯನು
ಒಡ್ಡುವವರೆ ಬನ್ನಿರಿ

ಮಂತ್ರಗಳಲಿ ಮಲಗಿದವರೆ ಸತ್ಯಗಳಲಿ ಸತ್ತವರೆ
ಕಿಚ್ಚುಗಳೇ ಕೆರಳಿ
ಎಚ್ಚರವನು ತಪ್ಪಿದವರೆ ಮಚ್ಚರವನು ಮುಚ್ಚಿದವರೆ
ಹಾವುಗಳೇ ಕಚ್ಚಿ[೨೩]

ಇರುವ ಪರಿಸ್ಥಿತಿಯನ್ನು ತಕ್ಕ ನಿರೂಪಣೆಯಲ್ಲಿ ಕಟ್ಟಿಕೊಡುತ್ತಿರುವ ಈ ಕವಿತೆ ದಲಿತರ ವಸ್ತುಸ್ಥಿತಿಯನ್ನು ಮತ್ತು ದಲಿತರ ಎಚ್ಚರದ ಅನಿವಾರ್ಯತೆಯನ್ನು ಸಮಂಜಸವಾಗಿ ಹಿಡಿದಿಟ್ಟಿದೆ. ದುಡಿದು ಧೂಳಾಗುವ ಇವರು ಬಂದೂಕಿನ ತುದಿಗೆ ಎದೆಯನ್ನು ಒಡ್ಡಬಲ್ಲ ಶಕ್ತಿಯುಳ್ಳವರು. ಇಂತಹ ಜನರಿಗೆ ಮಂತ್ರ ತಂತ್ರದ ಹೆಸರಿನಲ್ಲಿ ಮೂಕರನ್ನಾಗಿ ಮಾಡಲಾಗಿದೆ. ಇಂತವರ ಎಚ್ಚರ ಮೇಲಿನವರಿಗೆ ಮಚ್ಚರ. ಅದಕ್ಕೇ ಕಾವ್ಯ ಎಚ್ಚರವಾಗಿ ಎಂದು ದಲಿತರಿಗೆ ಕರೆ ಕೊಡುತ್ತಿದೆ.

ಇದು ಊರು ಮತ್ತು ನಗರವಾಸಿ ದಲಿತರ ಸ್ಥಿತಿಯಾದರೆ ವಿವಿಧ ಯೋಜನೆಗಳ ಹೆಸರಿನಲ್ಲಿ ಆದಿವಾಸಿಗಳನ್ನು, ಬುಡಕಟ್ಟು ಜನರನ್ನು, ಕಾಡುಜನರನ್ನು ಒಕ್ಕಲೆಬ್ಬಿಸುವ ಕೆಲಸ ದಿನನಿತ್ಯ ಸಾಗುತ್ತಿದೆ. ಅವರಿಗೆ ಬದುಕುವ ಹಕ್ಕುಗಳೇ ಇಲ್ಲದಂತೆ ಮಾಡಲಾಗುತ್ತಿದೆ. ಬಂಡವಾಳಶಾಹಿ ಮತ್ತು ಭೂಮಾಲಿಕ ವರ್ಗಗಳು ಆಳುವ ನೆಲೆಯಲ್ಲಿವೆ. ಈ ಕಾರಣದಿಂದ ಅವುಗಳು ತಮಗೆ ಹೇಗೆ ಬೇಕೋ ಹಾಗೆ, ತನ್ನ ಉದ್ಧಾರಕ್ಕೆ ತಕ್ಕ ಹಾಗೆ ಸುಲಿಗೆ ಮಾಡುತ್ತಿರುತ್ತವೆ. ಆದರೆ ಸಮಾಜಕ್ಕೆ 'ನಾವು ನಿಮಗಾಗಿ' ಎಂದು ನಂಬಿಸುವ ಕೆಲಸ ಮಾಡುತ್ತಿವೆ. ಈ ಮೂಲಕ ತಾವು ಮಾಡುವ ಸುಲಿಗೆಯನ್ನು ಮುಚ್ಚಿ ಹಾಕಲು ನೋಡುತ್ತಿರುತ್ತವೆ. ಇದನ್ನೆ ಕಾವ್ಯ ಇಂತಹ ಬಂಡವಾಳಿಗರ ವಿವಿಧ ಮುಖಗಳನ್ನು ಹಾಡಿನ ಮೂಲಕ ಹೊರಹಾಕಿದೆ. ವರ್ಗ ಶತ್ರುಗಳ ಇಂತಹ ಕುತಂತ್ರಗಳನ್ನು ಸಂಘಟಿತ ದಲಿತರು ಮನಗಂಡರು. ಇದರಿಂದಾಗಿ ತಮ್ಮ ನಿಜವಾದ ಹೋರಾಟ ಸಮಾಜದ ಬದಲಾವಣೆಗೆ ಮತ್ತು ಸಮಸಮಾಜದ ನಿರ್ಮಾಣಕ್ಕೆ ಎಂದು ಘೋಷಿಸಿಕೊಂಡರು. ಆರಂಭದಲ್ಲಿ ಬಂಡಾಯ ಸಾಹಿತ್ಯ ಹೊರಡಿಸಿದ ಕರಪತ್ರ ಇದಕ್ಕೆ ಸ್ಪಷ್ಟ ನಿದರ್ಶನ. "ಇದು ಭೂ ಕಂಪನಗಳ ಯುಗ. ಗುಡಿಸಲುಗಳೇ ಚೂರುಚೂರಾಗುತ್ತಿವೆ. ಇನ್ನು ಕವಿಗಳ ದಂತಗೋಪುರದ ಪಾಡೇನು? ನಮ್ಮ ದೇಶದ ಚರಿತ್ರೆಯಲ್ಲಿ ಈಚೆಗೆ ನಡೆದ ವಿದ್ಯಮಾನಗಳು ಸಾಹಿತ್ಯದಲ್ಲಿ ಎರಡು ಲೋಕಗಳನ್ನು ಸೃಷ್ಟಿಸಿವೆ. ಒಂದು ಸಮಕಾಲೀನ ಬದುಕಿಗೆ ಪ್ರತಿಸ್ಪಂದಿಸಿ, ಅದರ ಬದಲಾವಣೆಗೆ ಹೋರಾಡುವ ಸಾಹಿತಿಗಳದು. ಮತ್ತೊಂದು ಸಮಕಾಲೀನತೆಯನ್ನು ಬದುಕಿನ ದಿನನಿತ್ಯ ಘಟನೆಗಳಲ್ಲಿ ಗುರುತಿಸದೆ ತಂತಮ್ಮ ಭ್ರಮೆಗಳಲ್ಲಿ ತೇಲಾಡುವ ಸಾಹಿತಿಗಳದು. ಈ ಗುಂಪಿನವರು ತಮ್ಮ ಸುತ್ತಮುತ್ತಲಿನ ಕ್ರೂರ ವಾಸ್ತವಗಳಾದ ಪೊಲೀಸರ ಮತ್ತು ಸೈನ್ಯದ ಗುಂಡಿನ ಸುರಿಮಳೆ, ಸಾಮೂಹಿಕ ನರಹತ್ಯೆ, ದಲಿತರ ಕಗ್ಗೊಲೆ, ವಿವಿಧ ಶೋಷಣೆಗಳ ರುದ್ರ ಕುಣಿತ, ಪ್ರಜಾಪ್ರಭುತ್ವದ ವಿನಾಶ ಈ ಎಲ್ಲಾ ಭಯಾನಕ ಸತ್ಯಗಳ ಕಡೆಗೆ ಕಣ್ಣುಮುಚ್ಚಿದ್ದಾರೆ. ಬೆಂಕಿಯ ಸಾಗರದ ಮಧ್ಯೆ ಮಂಜಿನ ಗೋಪುರಗಳನ್ನು ಕಟ್ಟಿಕೊಳ್ಳುವ ಯತ್ನ ನಡೆಸಿದ್ದಾರೆ."[೨೪]

ಸಾಹಿತ್ಯ ಮತ್ತು ಸಮಾಜಕ್ಕೆ ಇರಬೇಕಾದ ನಿಕಟ ಸಂಬಂಧವನ್ನು ಮೇಲಿನ ಕರಪತ್ರದ ಸಾಲುಗಳು ಅತ್ಯಂತ ಸಮಂಜಸವಾಗಿ ಹಿಡಿದಿಟ್ಟಿವೆ. ದಲಿತ ಕಾವ್ಯ ವಾಸ್ತವದ ಘಟನೆಗಳನ್ನು ನಿರೂಪಿಸುತ್ತದೆ. ನಿರೂಪಿಸುತ್ತಲೇ ಜನತೆಯಲ್ಲಿ ಅರಿವು ಮತ್ತು ಎಚ್ಚರಗೊಳ್ಳುವಂತೆ ಮಾಡುತ್ತದೆ.

ಈ ಎಚ್ಚರದ ಮೂಲಕ ಹೋರಾಟಕ್ಕೆ ದಾರಿ ತೋರುವ ದಲಿತ ಕಾವ್ಯ ಸಮಾಜ ಮುಖೇನವೇ ಜನ್ಮ ತಳೆದ ಜನಪದ ಪರಂಪರೆಯ ಕೂಸು. ಅದಕ್ಕೆ ಇದರಲ್ಲಿ ಜಾನಪದ ಲಯ ಮತ್ತು ಗೇಯತೆಗಳು ಹಾಸುಹೊಕ್ಕಾಗಿವೆ.

ಮೊದಲೇ ಚರ್ಚಿಸಿದ ಹಾಗೆ ದಲಿತರ ಸಮಸ್ಯೆ ಕೇವಲ ಸಾಮಾಜಿಕ ಸಮಸ್ಯೆಯಲ್ಲ. ಅದು ಆರ್ಥಿಕತೆಯೊಂದಿಗೆ ತಳಕುಹಾಕಿಕೊಂಡಿದೆ. ದಲಿತರ ದಿನನಿತ್ಯದ ಬದುಕು ಭೂಮಿಯೊಂದಿಗೆ ಬೆಸೆದುಕೊಂಡಿದೆ. ಇವರು ಭೂಮಿಗೆ ಒಡೆಯರಲ್ಲ. ಆದರೆ ಭೂಮಿಯ ಕೃಷಿ ಉತ್ಪನ್ನದ ದುಡಿಮೆಗಾರರು ಇವರೇ. ದಿನನಿತ್ಯ ಕೃಷಿಯೊಂದಿಗಿನ ಕೂಲಿಯ ಒಡನಾಟ ಇವರದು. ಕಾರಂತರ 'ಚೋಮನ ದುಡಿ' ಕಾದಂಬರಿಯ ಚೋಮ ತಾನು ಕೊನೆಯ ತನಕ ಭೂಮಿಯ ಒಡೆತನಕ್ಕೆ ಪಟ್ಟಪಾಡು ಎಲ್ಲ ದಲಿತರ ಸಮಸ್ಯೆಯಾಗಿಯೇ ಮುಂದುವರಿದಿದೆ. ಭೂಮಿಗೆ ಒಡೆಯರಾಗಲೋದ ಒಂದು ಹಳ್ಳಿಯ ಘಟನೆಯನ್ನು ಹೋರಾಟದ ಹಾಡು ಈ ರೀತಿ ಮಂಡಿಸುತ್ತದೆ.

ಮೆದಕಿನಾಳದ ದಲಿತರ ಮೇಲೆ
ಧಣಿಗಳ ದರ್ಬಾರ ಕೇಳಿದ ಜನಮನ ಮರಮರ ।

ರಾಯಚೂರು ಜಿಲ್ಲೆ ಲಿಂಗಸ್ಗೂರು ತಾಲೂಕು
ಮಸ್ಕಿ ಹೋಬಳಿ ನಾಲ್ಕರ ದಾರಿ
ದೂರೈತಿ ಮೆದಕಿನಾಳ ಬಡವರ ಪಾಲಿಗೆ ಕರಾಳ
ಬ್ಯಾಗಾರು ಮಾದಾರು ಒಡ್ಡರು ಕೊರವರು
ಹಗಲಿರುಳು ದುಡಿಯುವ ಜೀತಗಾರರು
ದುಡಿಯುವವರು ದಲಿತರು
ಕುಂತು ತಿನ್ನುವರು ಬಲಿತರು[೨೫]

ಇಲ್ಲಿ ದುಡಿಯುವ ಕೊರವರು, ಮಾದರು, ಬ್ಯಾಗಾರು ಮುಂತಾದವರು ಧಣಿಗಳಿಗೆ ಬಿಟ್ಟಿ ಚಾಕರಿ ಮಾಡಬೇಕು. ಮಾಡದಿದ್ದರೆ ಚಾಟಿಯ ಏಟು ತಪ್ಪಿದ್ದಲ್ಲ. ಇಂತಹ ಸಂದರ್ಭದಲ್ಲಿ ಒಬ್ಬರಿಗೆ ನಲವತ್ತು ಎಕರೆ ಎಂದು ಕಾನೂನು ಹೇಳುವ ಅಧಿಕಾರಿಗಳು ಅರವತ್ತೆಂಟೆಕರೆ ಭೂಮಿಯನ್ನು ಧಣಿಗಳಿಗೆ ಬಾಡಿಗೆಗೆ ಕೊಟ್ಟಿದ್ದಾರೆ. ಇದನ್ನು ಮೆದಕಿನಾಳದ ಘಟನೆಗಷ್ಟೇ ಸೀಮಿತಗೊಳಿಸಲು ಬರುವುದಿಲ್ಲ. ಏಕೆಂದರೆ ಆಳುವ ವರ್ಗದ ಆಸ್ತಿ ಇಂಡಿಯಾದಾದ್ಯಂತ ಗುಣಾಕಾರ ಲೆಕ್ಕದಲ್ಲಿ ಬೆಳೆಯುತ್ತಿದೆ. ಇದು ನಿರಂತರವಾಗಿ ಸಂಪತ್ತಿನ ಕ್ರೋಢೀಕರಣಕ್ಕೆ ದಾರಿಯಾಗಿದೆ. ಇದರಿಂದ ಅಸಮಾನತೆ ಹೆಚ್ಚಿದೆ. ಶೋಷಣೆ ಮುಕ್ಕಾಗದಂತೆ ನೋಡಿಕೊಳ್ಳಲು

ತನ್ನದೇ ಆದಂತಹ ಪಾತ್ರವನ್ನು ವಹಿಸಿದೆ. ಮೆದಕಿನಾಳದ ಆಳುವ ವರ್ಗ ಮತ್ತಷ್ಟು ಬಲಗೊಂಡು ಎರಡು ಬಸ್ಸು ಕೊಂಡು ಅದರ ಲಾಭದಲ್ಲಿ ಮೆರೆಯುತ್ತಿರುವಾಗ, ಒಂದು ದಿನ ಎಚ್ಚರಗೊಂಡ ಅಲ್ಲಿನ ದಲಿತರು,

ಧಣಿಗೆ ಕೊಟ್ಟ ಭೂಮಿ ನಮ್ಗೆ ಕೊಡಿರೆಂದು
ಹೋರಾಡಿ ಬೇಡುತಾರ ಬಡವರು ಬಂದು
ಧಣಿಗಳ ಕಡೆಯಿಂದ ದುಡ್ಡು ತಿಂದು
ಬಂದಿತು ನಮಗೆ ಕುಂದು
ಸರಕಾರ ಕಾನೂನ
ರಕ್ಷಣೆ ಮಾಡೋದು ಹೊಣೆ ಇನ್ನಾ
ಎಂದು ಹೇಳುವ ತಹಸೀಲ್ದಾರರು
ಆಜ್ಞೆ ಮಾಡ್ಯಾರ ನರ ರಕ್ಕಸರು
ದಲಿತರ ಉದ್ಧಾರ
ಮಾಡ್ತಾರ ಇಂಥ ತಹಸೀಲ್ದಾರ ।

ಭೂಮಿ ಕೇಳಿದರೆಂಬ ಕನಸಿನ ಮೇಲೆ
ಬೆಂಕಿ ಕಾರಿದ ಗುಡಿಸಿಲೆ ಮೇಲೆ
ಗುಡಿಸಲು ಸುಡುತರ ಧಣಿಯವರು
ಮುಂದೆ ನಿಂತು ಅಳುತಾರ ಬಡವರು
ಪೊಲೀಸ್ ವ್ಯವಸ್ಥೆ ಇತ್ತು ಅಂದಿನ ರಾತರಿ
ಕುಡಿದು ಮಲಗಿತ್ತು ಬೇಮಾರಿ
ಪೊಲೀಸ್ ವ್ಯವಸ್ಥೆ ಯಾಕೋ
ಬಡವರಿಗೆ ಸಂಘಟನೆ ಒಂದೇ ಸಾಕು।[೨೬]

ಬಡವರಿಗೆ ಸಂಘಟನೆಯಾಗುವುದು ಎಷ್ಟು ಮುಖ್ಯವೋ, ಆಳುವ ವರ್ಗಕ್ಕೆ ಬಡವರು ಸಂಘಟನೆಯಾಗದಂತೆ ತಡೆಯುವುದೂ ಅಷ್ಟೇ ಮುಖ್ಯವಾಗಿರುತ್ತದೆ. ಇತಿಹಾಸದಿಂದ ಇಂದಿನವರೆಗೂ ಆಳುವ ವರ್ಗ ಈ ತಂತ್ರವನ್ನು ಚಾಚೂ ತಪ್ಪದೆ ಮಾಡುತ್ತಲೇ ಬರುತ್ತಿದೆ. ಇದು ಮೆದಕಿನಾಳದ ಘಟನೆಯಲ್ಲಿ ಮುಂದುವರೆದಂತೆ ಕಾಣುತ್ತದೆ. ಮೆದಕಿನಾಳದಲ್ಲಿ ಸಂಘಟನೆಗೊಂಡ ದಲಿತರನ್ನು ಕಂಡು ಧಣಿಗಳು ರೊಚ್ಚಿಗೆದ್ದರು. ಇಲ್ಲಸಲ್ಲದ ಆರೋಪದ ಮೇಲೆ ಊರಿನ ದುಡಿವ ಜನತೆಯ ಮೇಲೆ ಒಂದಿಲ್ಲೊಂದು ಸೇಡು ತೀರಿಸಿಕೊಳ್ಳಲು

ಪ್ರಾರಂಭಿಸಿದರು. ಇಂತಹ ಸಂದರ್ಭದಲ್ಲಿ ದುಡಿಯುವ ೩೭ ಜನರನ್ನು ಬಂದಿಖಾನೆಗೆ ಕಳುಹಿಸಿದ ಪೊಲೀಸ್ ವ್ಯವಸ್ಥೆ ಮತ್ತು ಕಾನೂನು ಯಾರ ಪರವಾಗಿವೆ ಎಂಬುದನ್ನು ಕಾವ್ಯ ಒತ್ತಿ ಹೇಳಿದೆ. ದಲಿತರಿಗೆ ಸಮಾಜದಲ್ಲಿ ಸಮಾನವಾಗಿ ಬದುಕಲು ಭೂಮಿಯ ಅವಶ್ಯಕತೆ ಎಷ್ಟಿದೆ ಎಂಬುದನ್ನು ಈ ಹೋರಾಟ ಮತ್ತು ಹೋರಾಟದ ಹಾಡು ಸ್ಪಷ್ಟವಾಗಿ ತಿಳಿಸಿದೆ. ಅದೂ ಅಲ್ಲದೆ ೧೯೮೪ ರಿಂದ ೧೯೮೭ ರವರೆಗೆ ನಡೆದ ಈ ಮೆದಕಿನಾಳದ ಭೂ ಹೋರಾಟವು ರಾಜ್ಯದ ದಲಿತ ಚಳುವಳಿಯ ಹೋರಾಟದ ದಿಕ್ಕನ್ನೇ ಬದಲಾಯಿಸುವಷ್ಟು ಶಕ್ತಿಶಾಲಿಯಾಗಿತ್ತು. ಇಂತಹ ಪೋಲಿಸ್ ಮತ್ತು ರಕ್ಷಣಾ ವ್ಯವಸ್ಥೆಗೆ ದಲಿತರ ಹಿತಾಸಕ್ತಿಗಳು ಕಣ್ಣಿಗೆ ಕಾಣುವುದಿಲ್ಲ. ಅದಕ್ಕೆ ಅದು ಇಂತಹ ವ್ಯವಸ್ಥೆಯ ವಿರುದ್ಧವಾಗಿ ತನ್ನ ಲೇಖನಿಯನ್ನು ಬಳಸುತ್ತದೆ.

ಖಾಕಿ ತೊಟ್ಟು ತಲೆಗೆ ರಕ್ಷಣೆಯ ಹ್ಯಾಟು ಇಟ್ಟು
ಲಾಠಿ ತಿರುವಿ ಲಂಚ ಪಡೆದು ಮಂಚ
ಏರುವ ನರವಂಚಕರ ಕಂಡು ಬರೆಯಲೇ
ಇಲ್ಲ ಅವರ ಕರ್ತವ್ಯ ಮರೆತು ಹೀನ ಕೃತ್ಯ
ಎಸಗುವ ದೃಶ್ಯಕಂಡು ಬರೆಯಲೇ
ನಾ ಹೇಗೆ ಬರೆಯಲಿ ಗೆಳೆಯ ಕವನ?[೨೭]

ಇಲ್ಲಿ ಒಂದು ರಕ್ಷಣಾ ವ್ಯವಸ್ಥೆ ಇದೆ. ಈ ವ್ಯವಸ್ಥೆ ನ್ಯಾಯದ ಪರವಾಗಿ ಮತ್ತು ಶೋಷಿತರ ಪರವಾಗಿದೆ ಎಂಬುದನ್ನು ದಿನನಿತ್ಯ ಹೇಳಲಾಗುತ್ತಿದೆ. ಆದರೆ ಪೊಲೀಸ್ ವ್ಯವಸ್ಥೆ ಮಾತ್ರ ನಿರಂತರವಾಗಿ 'ಉಳ್ಳವರ ಪರ' ಎಂಬುದನ್ನು ಸಾಬೀತುಪಡಿಸಿದೆ. ಎಷ್ಟೋ ದಲಿತರ ಮೇಲಿನ ದೌರ್ಜನ್ಯಗಳನ್ನು ಪೊಲೀಸರು ದಾಖಲಿಸಿಕೊಳ್ಳುವುದಿರಲಿ ಕನಿಷ್ಠ ಕೇಳಿಸಿಕೊಳ್ಳುವುದೂ ಇಲ್ಲ. ನಿರಂತರವಾಗಿ ಅಧಿಕಾರಿಶಾಹಿಗಳ ಮತ್ತು ರಾಜಕಾರಿಣಿಗಳ ಕೈ ಗೊಂಬೆಯಾಗಿರುವ ಇವರು ದಲಿತರ ಪಾಲಿಗೆ ಮುಳ್ಳುಗಳೇ ಸರಿ. ಮೇಲಿನ ಕಾವ್ಯದ ಪ್ರಶ್ನೆ ಬಡವರ ವಿರೋಧಿಗಳಿಗೆ ತನ್ನ ಅಭಿವ್ಯಕ್ತಿಯಲ್ಲಿ ಸ್ಥಾನ ಇಲ್ಲ ಎಂಬುದನ್ನು ಒತ್ತಿ ಹೇಳುತ್ತಿದೆ.

ಇನ್ನು 'ನ್ಯಾಯಾಲಯದಲ್ಲಿನ ನ್ಯಾಯ ಎಲ್ಲಾ ಜನರಿಗೂ ಒಂದೇ' ಎಂದುಕೊಂಡರೆ ಅದೂ ಸಹ ತನ್ನ ವಿವಿಧ ಮುಖಗಳನ್ನು ಪ್ರದರ್ಶಿಸುತ್ತಲೇ ಇದೆ. ಇದಕ್ಕೆ ಸಾಕ್ಷಿಯೆಂಬಂತೆ ೧೯೯೨ರಲ್ಲಿ ಭನ್ವಾರಿ ದೇವಿಯೆಂಬ ದಲಿತ ಮಹಿಳೆಯೊಬ್ಬರನ್ನು ಮೇಲ್ಜಾತಿ ಜನ ಸಾಮೂಹಿಕ ಅತ್ಯಾಚಾರ ಮಾಡಿದಾಗ ರಾಜಸ್ತಾನದ ಕೆಳಹಂತದ ನ್ಯಾಯಾಲಯವೊಂದು ಆಕೆ ದಲಿತಳಾಗಿರುವುದರಿಂದ ಮೇಲ್ಜಾತಿಯವರು ಆಕೆಯ ಮೇಲೆ ಅತ್ಯಾಚಾರ ಮಾಡಿರುವ ಸಂಭವವಿಲ್ಲವೆಂಬ ತೀರ್ಮಾನಕ್ಕೆ ಬಂದಿತು. ಇಂತಹ ಅದೆಷ್ಟೋ ಘಟನೆಗಳು ಇಂಡಿಯಾದಲ್ಲಿ ನಡೆದಿವೆ; ನಡೆಯುತ್ತಲೇ ಇವೆ. ಇತ್ತೀಚೆಗೆ ಬಂದ ಕಂಬಾಲಪಲ್ಲಿ ನ್ಯಾಯ ತೀರ್ಪು ಕೂಡ ಈ ಧೋರಣೆಯನ್ನೇ ಎತ್ತಿ ಹಿಡಿದಿದೆ. ಮನೆಗಳಿಗೆ ಬೆಂಕಿ ಇಟ್ಟು ತಮ್ಮ ತಮ್ಮ ಮನಗಳನ್ನು

ಬೆಚ್ಚಗಾಗಿಸಿಕೊಂಡು ಮಾನವೀಯತೆ ಎಂಬುದನ್ನೇ ಧೂಳೀಪಟ ಮಾಡಿದ ಅಮಾನವೀಯ ಹೃದಯಗಳಿಗೆ ನ್ಯಾಯ ವರವಾಗಿ ಪರಿಣಮಿಸಿದೆ. ಇಂತಹ ಹೇಯ ಕೃತ್ಯಕ್ಕೆ ಹೋರಾಡಬೇಕಿದ್ದ ದಲಿತ ಮನಸ್ಸುಗಳು ಸುಮ್ಮನೆ ಕುಳಿತಿವೆ. ಆದರೆ ಕಾವ್ಯ ಮಾತ್ರ ತನ್ನ ಪ್ರತಿರೋಧವನ್ನು ಹೊರಹಾಕುತ್ತ ದಲಿತರ ಪರವಾದ ದನಿ ಇಲ್ಲಿದೆ ಎಂಬುದನ್ನು ಸಾಬೀತುಪಡಿಸಿದೆ. ಘಟನೆ ಕುರಿತ ದಲಿತ ಕಾವ್ಯದ ನಿಲುವು ನಿರೂಪಿತಗೊಂಡ ಬಗೆ ಹೀಗಿದೆ;

ಕಂಬಾಲಪಲ್ಲಿ ಎಂದರೆ ಕೇವಲ
ಒಂದು ಹಳ್ಳಿಯಲ್ಲ
ಅದು,
ನ್ಯಾಯ ನೀತಿ ಸತ್ಯ ಧರ್ಮ
ಅಹಿಂಸೆ
ಮಾನವತೆಯ ನಿರ್ನಾಮದ ಸಂಕೇತ!

ಕಂಬಾಲಪಲ್ಲಿ ಎಂದರೆ ಕೇವಲ
ಒಂದು ಘರ್ಷಣೆಯಲ್ಲ
ಅದು,
ದರ್ಪ ದೌರ್ಜನ್ಯ ದಬ್ಬಾಳಿಕೆ ಹಿಂಸೆ
ಶೋಷಣೆ
ಮೃಗೀಯತೆಯ ಪುನರ್ಜನ್ಮದ ಸೂಚನೆ![೨೮]

ಇಲ್ಲಿ ಕಂಬಾಲಪಲ್ಲಿಯ ಘಟನೆಯನ್ನು ಕವನದ ಸಾಲುಗಳೇ ನಿರೂಪಿಸಿರುವ ಹಾಗೆ ಒಂದು ಪ್ರದೇಶಕ್ಕೆ ಸೀಮಿತಗೊಳಿಸಲು ಬರುವುದಿಲ್ಲ. ಇದು ದಲಿತರು ದುಡಿಯುವ ಕಡೆ ನಿರಂತರವಾಗಿ ನಡೆಯುತ್ತಿದೆ. ಕವನವೇ ಅಭಿವ್ಯಕ್ತಿಸುವಂತೆ ಮಾನವೀಯತೆಯ ನಿರ್ನಾಮದ ಸಂಕೇತದಂತೆ ನಡೆದ ಈ ಘಟನೆ ಮುಂದೆಯೂ ನಡೆಯುವ ಸೂಚನೆಗಳನ್ನು ಹೊರಹಾಕಿದೆ. ಮಾನವೀಯತೆಯನ್ನು ನಿರ್ನಾಮ ಮಾಡಿದ ಜನತೆಯನ್ನು ನಿರ್ದೋಶಿಗಳೆಂದು ನ್ಯಾಯಾಲಯ ಬಿಡುಗಡೆ ಮಾಡಿರುವುದು ಚಾರಿತ್ರಿಕ ವ್ಯಂಗ್ಯವೇ ಸರಿ.

ದಲಿತರು ತಮ್ಮ ಮೇಲಿನ ದಬ್ಬಾಳಿಕೆಗಳ ವಿರುದ್ಧ ಹೋರಾಡುವುದೊಂದೇ ದಾರಿ. ಇದನ್ನು ಎಲ್ಲಾ ಕ್ರಾಂತಿಗೀತೆಗಳು, ಹೋರಾಟದ ಹಾಡುಗಳು, ದಲಿತ ಕಾವ್ಯಗಳು ಒತ್ತಿ ಒತ್ತಿ ಹೇಳಿವೆ. ಪ್ರಜಾಪ್ರಭುತ್ವ ವ್ಯವಸ್ಥೆ, ಪೊಲೀಸ್ ವ್ಯವಸ್ಥೆಯಲ್ಲಿ ನಂಬಿಕೆಯಿಲ್ಲದ ದಲಿತರು ಪರ್ಯಾಯ ವ್ಯವಸ್ಥೆಗೆ ಮುನ್ನುಗ್ಗುವಂತೆ ಕರೆಕೊಡುತ್ತಾರೆ. ಅದಕ್ಕೆ ಅವರು ತಮ್ಮ ಕಾವ್ಯಗಳಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹಾಗೂ ಅಧಿಕಾರದ ದಾಹವನ್ನು ನಿರೂಪಿಸುವುದು ಹೀಗೆ;

ಶತೃಗಳು ಹೊರಗಷ್ಟೇ ಅಲ್ಲ
ಒಳಗೂ ಇರುವರು
ಅಪಾಯಕಾರಿ ಅವರಿಗಿಂತ ಇವರೇ!
ಹಣ ಅಧಿಕಾರದ ಮತ್ತಿನಲಿ
ಮೇರೆ ಮೀರಿದೆ ಇವರ ಆಟ!
ಬಡವರ ಬದುಕೆಂದರೆ
ಕಾಲ್ಚೆಂಡಿನಾಟ ಇವರಿಗೆ
ಖುಷಿಪಡುತ್ತಾರೆ ಅತ್ತಿತ್ತ ಒದೆದು!
ಪ್ರಜಾಪ್ರಭುತ್ವದ ಹೆಸರಿನಲಿ
ದೇಶ ದೇಶವೇ ಲೂಟಿ!
ಬರಿದಾಗುತ್ತಿದೆ ಸಂಪತ್ತು
ಎಂದೆಂದೂ ತೀರದ ಇವರ ದಾಹಕ್ಕೆ!
ಯಾರು ಸತ್ತರೇನು, ಯಾರು ಇದ್ದರೇನು
ದೇಶ ಅಳಿದರೇನು, ದೇಶ ಉಳಿದರೇನು
ಇವರಿಗೆ ಅಧಿಕಾರದ ಒಂದೆ ಚಿಂತೆ![೨೯]

ಇಂತಹ ನಿರ್ಧಾರಕ್ಕೆ ಬರಲು ಕಾರಣವೂ ಇತ್ತು. ಅದು ದಲಿತರ ಮೇಲೆ ಭಾರತದಾದ್ಯಂತ ನಿರಂತರವಾಗಿ ನಡೆದ ದೌರ್ಜನ್ಯಗಳು. ಅವುಗಳಲ್ಲಿ ಜನಕ್ಕೆ ಕಾಣಿಸಿಕೊಂಡವುಗಳೆಂದರೆ, ೧೯೬೮ ತಮಿಳುನಾಡಿನ ಕಿಲ್ವನ್ಮಣಿಯಲ್ಲಿ ೪೪ ದಲಿತರ ಸಜೀವ ದಹನ, ಬಿಹಾರದ ಬೆಲ್ಚಿಯಲ್ಲಿ ೧೭ ಜನರ ದಹನ, ಸರ್ಕಾರ ಮಾರಿಚ್ ಝಾನ್ಸಿಯಲ್ಲಿ ನೂರಾರು ನಿರಾಶ್ರಿತರನ್ನು ಹತ್ಯೆ ಮಾಡಿದ್ದು, ಆಂದ್ರಪ್ರದೇಶದ ಕರಂಚೇಡಿನಲ್ಲಿ ೬ ದಲಿತರ ಹತ್ಯೆ, ಮೂರು ಮಹಿಳೆಯರ ಮಾನಭಂಗ. ಚಂಚೂರು (೧೯೯೧) ನಲ್ಲಿ ೮ ದಲಿತರ ಕಗ್ಗೊಲೆ, ತಮಿಳುನಾಡಿನ ಮೆಲುವುಲಾವು (೧೯೯೭) ನಲ್ಲಿ ಒಬ್ಬ ಚುನಾಯಿತ ಪ್ರತಿನಿಧಿ ಕೊಲೆ ಮತ್ತು ಆರು ಬೆಂಬಲಿಗರ ಹತ್ಯೆ. ಕರ್ನಾಟಕದ ಕಂಬಾಲಪಲ್ಲಿಯಲ್ಲಿ (೨೦೦೦) ಆರು ದಲಿತರ ಸಜೀವ ದಹನ, ಹರಿಯಾಣದ ಜಜ್ಜಾರ್‌ನಲ್ಲಿ ಐದು ದಲಿತರ ಕೊಲೆ, ಮಹಾರಾಷ್ಟ್ರದ ಖೈರ್ಲಾಂಜಿಯಲ್ಲಿ ದಲಿತ ಕುಟುಂಬದ ನಿರ್ನಾಮ ಇನ್ನು ಮುಂತಾದವು. ಈ ಘಟನೆಗಳೇ ದಲಿತರನ್ನು ಎಚ್ಚೆತ್ತುಕೊಳ್ಳುವಂತೆ ಮಾಡಿ ಸಾಮಾಜಿಕ ವ್ಯವಸ್ಥೆಯ ವಸ್ತುಸ್ಥಿತಿಯನ್ನು ಸರಿಯಾಗಿ ತಿಳಿದುಕೊಳ್ಳುವಂತೆ ಮಾಡಿತು. ಅದಕ್ಕೆ ದಲಿತ ಕಾವ್ಯವು ದಲಿತರಿಗೆ ಹೋರಾಟವೊಂದೇ ದಾರಿ ಎಂಬುದನ್ನು ಸಾಬೀತುಪಡಿಸಿದೆ.

ಹೋರಾಟದ ಹಾಡುಗಳು ಸಮುದಾಯವನ್ನು ಹೋರಾಟಕ್ಕೆ ಮುನ್ನುಗ್ಗುವಂತೆ ಪ್ರೇರೇಪಿಸಿದರೆ ದಲಿತ ಕಾವ್ಯಗಳು ಇರುವ ವಸ್ತುಸ್ಥಿತಿಯನ್ನು ತಣ್ಣಗೆ ಅಭಿವ್ಯಕ್ತಿಸುತ್ತಲೇ ಬದಲಾವಣೆಗೆ ಎಲ್ಲರೂ ಒಂದಾಗಬೇಕೆಂಬ ಮನೋಭೂಮಿಕೆಯನ್ನು ಬಿತ್ತುತ್ತವೆ. ಇವೆರಡೂ ಮೇಲ್ನೋಟಕ್ಕೆ ಬೇರೆ ಬೇರೆಯಂತೆ ಕಂಡುಬಂದರೂ ಆಳದಲ್ಲಿ ಉದ್ದೇಶ ಒಂದೇ ಆಗಿರುತ್ತದೆ. ಪಿಪ್ರಾ ಘಟನೆ ಕುರಿತು ದಲಿತ ಕಾವ್ಯ ನಿರೂಪಿಸುವುದು ಹೀಗೆ;

ನನ್ನ ಜನರ ಸಾವುಗಳು
ಮುಗಿಲು ಮುಟ್ಟಿವೆ
ನನ್ನ ಜನರ ನೋವುಗಳು
ನೋಡದಾಗಿವೆ.

ಪಿಪ್ರಾದಲ್ಲಿ ನನ್ನ ಜನರು
ಕೂಲಿಸಾಲದೆಂದರು
ಜಮೀನುದಾರ ರಾಕ್ಷಸರು
ಗುಂಡು ಹೊಡೆದು ಕೊಂದರು.

ಭೂ ಒಡೆಯರ ಭೂಮಿಯಲ್ಲಿ
ದುಡಿಮೆಯ ದಾರಿಯಲ್ಲಿ
ರಕುತವೆಲ್ಲಾ ಚೆಲ್ಲಿದರು
ಮೂಳೆಯಾಗಿ ನಿಂತರು.

....

ನನ್ನ ಜನರು ಇಂದು ಅವರು
ಎಲ್ಲ ತಿಳಿಯುತ್ತಿರುವರು
ಸಾವು ನೋವು ಸುಡಲು ಅವರು
ಮೇಲೆ ಏಳುತ್ತಿರುವರು[೩೦]

ಇಲ್ಲಿ ಘಟನೆಯೂ ಇದೆ. ಈ ಘಟನೆಯಿಂದ ಎಚ್ಚೆತ್ತ ದಲಿತರ ಚಿತ್ರಣವೂ ಇದೆ. ಕವನದಲ್ಲಿ ಮತ್ತೆ ಮತ್ತೆ ಬರುವ 'ನನ್ನ ಜನ' ಎನ್ನುವ ಪದ ದುಡಿಯುವ ವರ್ಗದ ನೆಲೆಗಳನ್ನು ಶೋಧಿಸುತ್ತಿದೆ. ಈ ಕವನದ ಒಟ್ಟು ಆಶಯವೇ ದುಡಿಯುವ ವರ್ಗದ ಪರವಾಗಿದೆ. ಎಲ್ಲಿಯವರೆಗೆ ಶೋಷಣೆಗೆ ಒಳಗಾಗುವ ಜನರಿರುತ್ತಾರೋ ಅಲ್ಲಿಯವರೆಗೆ ಶೋಷಣೆ ಇದ್ದೇ ಇರುತ್ತದೆ ಎನ್ನುವ ಧೋರಣೆ ಈಗ ಇಲ್ಲ. ಬದಲಾಗಿ ಎಲ್ಲಿಯವರೆಗೆ

ದುಡಿಯುವವರು ತಮ್ಮ ದುಡಿಮೆಯ ಪ್ರತಿಫಲವನ್ನು ಅನುಭವಿಸುವುದಿಲ್ಲವೋ ಅಲ್ಲಿಯವರೆಗೆ ಶೋಷಣೆ ನಿರಂತರವಾಗಿ ನಡೆಯುತ್ತಿರುತ್ತದೆ. ಈ ಒಳ ನೋಟಗಳನ್ನೇ ಅನೇಕ ದಲಿತ ಕಾವ್ಯಗಳು ನಿರೂಪಿಸಿವೆ.

ದಲಿತರ ಮೇಲೆ ನಡೆಸಲಾಗುತ್ತಿರುವ ದೌರ್ಜನ್ಯಗಳಲ್ಲಿ ಲೈಂಗಿಕ ಶೋಷಣೆಯೂ ಒಂದು. ದಲಿತ ಪುರುಷ ಮತ್ತು ದಲಿತ ಮಹಿಳೆ ಇಬ್ಬರೂ ನಿರಂತರವಾಗಿ ಬಂಡವಾಳಶಾಹಿಗಳ ಕೈಕೆಳಗೆ ದುಡಿಯಬೇಕಾದ ಅನಿವಾರ್ಯತೆ ಇದೆ. ಈ ಕಾರಣದಿಂದ ಪುರುಷನಿಗಿಂತ ಸ್ತ್ರೀ ಮಾನಸಿಕವಾಗಿ ಮತ್ತು ದೈಹಿಕವಾಗಿ ಶೋಷಣೆಗೆ ಒಳಗಾಗುತ್ತಿದ್ದಾಳೆ. ಹೆಣ್ಣನ್ನು ಪೂಜ್ಯ ಭಾವನೆಯಿಂದ ಕಾಣುತ್ತೇನೆಂದು ಬೊಗಳೆಬಿಡುವ ಮಂದಿ ಇಲ್ಲಿದೆ. ಇಂತವರಿಗೆ ದಲಿತರು ಇಲ್ಲಿನ ದೌರ್ಜನ್ಯಗಳ ಸರಮಾಲೆಯನ್ನಿಟ್ಟು ಸಮಾಜದ ವಾಸ್ತವ ಸ್ಥಿತಿಯನ್ನು ವಿವರಿಸಿದರು.

ಹುಣಸೂರು ತಾಲ್ಲೂಕು ಗೌಡ್ಗೆರೆ ಹೋಬಳಿ ಚಿಟ್ಟಕ್ಯಾತನೆಂಬ ಹಳ್ಳಿ. ಇಲ್ಲಿ ಗೌಡ ಥೆರ್ಮನ್ ಒಬ್ಬ, ನೀರಿಗೆ ಹೋಗಿದ್ದ ಚೆನ್ನಿಯ ಶೀಲವನ್ನು ಹಾಳುಮಾಡಿದನು. ಇದರಿಂದ ಅವಳು ಗರ್ಭಿಣಿಯಾಗುವಂತೆ ಮಾಡಿ ಅವಳ ಸಾವಿಗೆ ಕಾರಣನಾದನು, ಚೆನ್ನಿಯ ಅಣ್ಣ ಗೌಡನ ಮನೆಯ ಜೀತದಾಳು. ಯಾವ ಪ್ರತಿರೋಧ ಒಡ್ಡಲೂ ಅವನು ಅಸಹಾಯಕ.

....

ಮಾನಸ್ಥೆ ಚೆನ್ನಿಯು ಅಣ್ಣನಿಗೆ ಹೇಳಿದಳು
ಕೋಪ ದುಃಖದಿಂದ ನಡುಗ್ಯಾನು ನಡುಗ್ಯಾನು
ಬಡ್ಡಿ ಮಗ ಗೌಡನ್ಹಟ್ಟಿ ಜೀತದವನು ನಾನು
ಮತ್ತೆ ಸಾಲ ಹೊತ್ತ ಕರ್ಮಗೇಡಿ ಅಣ್ಣ ಕಾಣೇ
ಗುಟ್ಟು ರಟ್ಟಾಗಿ ಊರ್‍ಗೆಲ್ಲ ಗೊತ್ತಾಗಿ
ಗೌಡ ಜಂಗಮರೆಲ್ಲಾ ಅವಮಾನ ಪಡಿಸ್ಯಾರು
ಮೂರು ತಿಂಗಳು ಬಸುರಿ ಚೆನ್ನಿ ಗರ್ಭವ ನೋಡಿಯಾಳು
ಮತ್ತೆ ಗೌಡನ ನೆನೆದಾಳೋ ನೆನೆದಾಳೋ
ಗೌಡನ ನೆನೆದಾಳೋ ಬಾವಿಗೆ ನಡೆದಾಳೋ
ಗೌಡನ್ಹಟ್ಟಿ ಬಾವಿಗೆ ದೇಹ ಬಲಿ ಕೊಟ್ಟಾಳೋ[೩೧]

ದಲಿತರಿಗೆ ಆರ್ಥಿಕ ಸ್ವಾವಲಂಬನೆ ಇಲ್ಲ. ಈ ಕಾರಣದಿಂದಲೇ ಪರಾವಲಂಬಿ ಜೀವನ ಸಾಗಿಸಬೇಕಾದ ಅನಿವಾರ್ಯತೆ ಇದೆ. ಈ ಪರಾವಲಂಬಿತನ ಹೆಣ್ಣು ಮಕ್ಕಳನ್ನು ಲೈಂಗಿಕವಾಗಿ ಶೋಷಿಸಿದೆ. ಗಂಡಸರನ್ನು ದಬ್ಬಾಳಿಕೆಯಲ್ಲಿ ದೌರ್ಜನ್ಯಕ್ಕೆ ಒಳಗಾಗುವಂತೆ ಮಾಡಿದೆ. ಇಲ್ಲಿ

ಆರ್ಥಿಕ ಪರಾವಲಂಬಿತನ ಪ್ರತಿಭಟಿಸುವ ಶಕ್ತಿಯನ್ನೇ ಕಿತ್ತುಕೊಂಡಿದೆ. ಇದಕ್ಕಿರುವುದು ಒಂದೇ ದಾರಿ ಸಮುದಾಯದ ಸಂಘಟಿತ ಹೋರಾಟ. ಇಲ್ಲವೇ ಬಂದೂಕಿನ ನಳಿಗೆಯ ಮೂಲಕ ನೀಡುವ ಗುಂಡಿನ ಉತ್ತರ. ಕಥೆ ಹೇಳುವ ಶೈಲಿಯಲ್ಲಿ ದುರಂತದ ಎಳೆಯನ್ನು ಇಲ್ಲಿನ ಘಟನೆ ಬಿಚ್ಚಿಟ್ಟಿದೆ. ದಲಿತ ಪುರುಷ-ಮಹಿಳೆ ಇಬ್ಬರೂ ಏಕಕಾಲದಲ್ಲಿ ದೌರ್ಜನ್ಯಕ್ಕೆ ಒಳಗಾದ ಬಗೆಯನ್ನು ತಿಳಿಸುತ್ತಿದೆ. ಇಲ್ಲಿನ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆ ದಲಿತರ ಬದುಕನ್ನು ಅತಂತ್ರಗೊಳಿಸಿದೆ. ಇಂತಹ ಅತಂತ್ರ ಬದುಕನ್ನು ಎಷ್ಟೋ ದಲಿತ ಕಾವ್ಯಗಳು ಮತ್ತು ಹೋರಾಟದ ಹಾಡುಗಳು ಘಟನೆಗಳ ನಿರೂಪಣೆಯ ಮೂಲಕ ಸಾಬೀತುಪಡಿಸಿವೆ. ಯಲಬುರ್ಗ ತಾಲೂಕಿನಲ್ಲಿ ನಡೆದ ಇನ್ನೊಂದು ಘಟನೆ ಇಂತಹ ದೌರ್ಜನ್ಯಕ್ಕೆ ಮತ್ತೊಂದು ಸಾಕ್ಷಿ.

ಮಠ ಮಂದಿರಗಳಲ್ಲಿ
ಹಂದಿ ನಾಯಿಗಳು ಒಳಹೊಕ್ಕು
ಮೂತ್ರ ಮಾಡಿದರೂ ತಿರುಗಿ ನೋಡದೆ
ಮೂಸು ನೋಡುತ ಪುರಾಣ ಪಂಚಾಂಗ
ಪಠಿಸುತ್ತ ಕುಳಿತಿರುವಿರಿ।[೨೨]

ಹೀಗೆ ಮಠದ ಬಗ್ಗೆ ಮತ್ತು ಅಲ್ಲಿರುವ ಸೋಗಲಾಡಿಗಳ ಬಗ್ಗೆ ದಲಿತ ಕಾವ್ಯಕ್ಕೆ ಪ್ರತಿರೋಧವಿದೆ. ಮೇಲಿನ ಕವಿತೆಯ ಸಾಲುಗಳು ಮಠಗಳ ಒಳಗಿನ ಮರ್ಮಗಳನ್ನು ಬಯಲುಗೊಳಿಸುತ್ತಿವೆ. ಏಕೆಂದರೆ ಧಾರ್ಮಿಕತೆಯ ಸೋಗು ಹಾಕಿಕೊಂಡು ಬಡವರನ್ನು ಬಲಿ ತೆಗೆದುಕೊಳ್ಳುವ ಈ ಮಠಮಾನ್ಯಗಳು ಯಾರ ಪರವಾಗಿವೆ ಎಂಬುದು ದಲಿತ ಕಾವ್ಯಕ್ಕೆ ತಿಳಿದಿದೆ. ಇದಕ್ಕೆ ಉದಾಹರಣೆಯೆಂಬಂತೆ ಒಂದು ಹೋರಾಟದ ಹಾಡು ಯಲಬುರ್ಗ ತಾಲೂಕಿನ ಕುದುರೆಮೋತಿ ಊರಿನ ಶಿವಶರಣನೆನಿಸಿಕೊಂಡ ಮಹಾಂತಯ್ಯನ ಹಗರಣವನ್ನು ನಿರೂಪಿಸುವ ರೀತಿ ಹೀಗಿದೆ; ಊರಿನ ಸರಕಾರಿ ಶಾಲೆಯ ಮೇಸ್ತ್ರ ಹೆಂಡತಿ ತನ್ನ ಆಶ್ರಮಕ್ಕೆ ಬರಲು....

ಪೂಜೆ ಮಾಡುವ ತಾತನ ಕಣ್ಣು ಬಿತ್ತಾಕಿ ಮ್ಯಾಲೆ
ಎದ್ದನು ದಿಡಗಿಲೇ ಗುದ್ದಿದ ಬಾಗಿಲೆ
ಹೋಗಿ ಕುಂತನು ಸ್ವಾಮೀಜಿ ಗರ್ಭ ಗುಡಿಯಲ್ಲೇ।
ಗುರುವಿನ ಮಕ್ಕಳಿಗೆ ಗುರು ಹೇಳುತಾನ ಶಿಷ್ಯ
ಪಾರ್ವತೆಮ್ಮಳಿಗೆ ಕೊಡಬೇಕು ದೀಕ್ಷಾ

ಮಠದಲ್ಲಿ ಗದ್ದಲ ಜನ ಲಕ್ಷಲಕ್ಷ.....
ಯಾರಿಲ್ದಲಿ ಕೊಡಬೇಕು ಸುಂದರಿಗೆ ಮೋಕ್ಷ
ಮಾಡಬೇಡ ನಿರ್ಲಕ್ಷ ಕಳಿಸೋ ನನ ಶಿಷ್ಯ
ಮಠ ಬಿಟ್ಟು ಮಂದೆಲ್ಲ ಹೊರಟೋಯ್ತು ಪಾಶಾ
ಗುರುವಿನ ಹತ್ತಿರ ಕರೆದೊಯ್ದರು ಪಾರ್ವತೆಮ್ಮನ
ಬಾಗಿಲ ಮುಚ್ಚಿ ಹೊರಗೆ ನಿಂತರು ಮಾಡಿ ದುರ್ಗುಣ,
ಕಾವಿ ಬಟ್ಟೆಯ ಸುತ್ತಿ ಕಟ್ಟಿದರಾಕಿನ್ನಾ.....
ಮೈಮೇಲೆ ಕೈ ಎಳೆಯುತಾ ತೆಕ್ಕಿಲೆ ಬಡಿದಾನ
ಕೆಡಸು ಬ್ಯಾಡೋ ನನ್ನ ಮುಗಿವೆನು ಕೈನಾ
ಕಾಲಿಡಿದು ಬೇಡಿಕೊಂಡ್ರು ಕೆಡಸೀದಾ ಬೇಮಾನ।[೩೩]

ಮಠಗಳ ಆಸ್ತಿ ಕೋಟಿ ಲೆಕ್ಕದಲ್ಲಿದೆ. ಮಠಾಧೀಶರು ಕೋಟ್ಯಾಧಿಪತಿಗಳಾಗಿದ್ದಾರೆ. ಮಠಗಳು ನಡೆಸುವ ವಿದ್ಯಾಸಂಸ್ಥೆಗಳು, ಡೊನೇಶನ್ ಮೂಲಕ ಕೋಟಿಗಟ್ಟಲೆ ಹಣವನ್ನು ಲೂಟಿ ಮಾಡುತ್ತಿವೆ. 'ತಮ್ಮದು ಇಲ್ಲದವರ ಪರ' ಎಂದು ಹೇಳಿಕೊಳ್ಳುತ್ತಲೇ ಒಣ ವೇದಾಂತಗಳನ್ನು ಬಡವರ ತಲೆಗೆ ತುಂಬುತ್ತಿವೆ. ಜಾತಿ ಹೆಸರಿನ ಸಂಘವನ್ನು ಕಟ್ಟಿಕೊಂಡು ತನ್ನ ಜಾತಿಯವರಿಗೆ ವಿವಿಧ ಹುದ್ದೆಗಳನ್ನು ನೀಡುತ್ತಾ, ನಾಯಿಕೊಡೆಗಳಂತೆ ಸಂಸ್ಥೆಗಳನ್ನು ಹುಟ್ಟುಹಾಕುತ್ತಾ, ಧಾರ್ಮಿಕತೆಯ ಹೆಸರಿನಲ್ಲಿ ಅಖಂಡ ರಾಜಕೀಯದ ಹಿಡಿತ ಹೊಂದಿರುವ ಮಠಗಳು ತಾವು ಏನು ಮಾಡಿದರೂ ಸರಿ ಎಂಬ ಭ್ರಮೆಯಲ್ಲಿ ಒಳ್ಳೆಯತನವೆಂಬ ಸೋಗಿನ ಮೂಲಕ ದಲಿತರನ್ನು ಶೋಷಿಸಿವೆ. ಇದಕ್ಕೆ ಮಠಗಳ ಒಳಗೆ ನಡೆದ ಅವಮಾನ ಅತ್ಯಾಚಾರಗಳೇ ಸಾಕ್ಷಿಯಾಗಿವೆ. ಮಠಗಳು ಜನಪರವಾಗಿ ಇರುವವುಗಳೇ ಆಗಿದ್ದರೆ ಮಠಾಧೀಶರು ಹೆಲಿಕ್ಯಾಪ್ಟರ್‌ನಲ್ಲಿ ಓಡಾಡುತ್ತಿರಲಿಲ್ಲ ಮತ್ತು ಸಾಯಿಬಾಬಾನ ಬೆಡ್‌ರೂಮಿನಲ್ಲಿ ಕೋಟ್ಯಾಂತರ ಮೌಲ್ಯದ ಹಣ, ಚಿನ್ನ, ಬೆಳ್ಳಿ ಇರುತ್ತಿರಲಿಲ್ಲ.

'ಮಠಮಾನ್ಯಗಳು ಜನರುದ್ಧಾರಕ್ಕಾಗಿ' ಎಂದು ನಂಬಿಸುತ್ತಲೆ ಮಠ ಮಾನ್ಯಗಳು ತಮ್ಮ ತೀಟೆ ತೀರಿಸಿಕೊಳ್ಳುತ್ತವೆ. ಮಠದ ಮಾನ್ಯರುಗಳ ಇಂತಹ ಕಾಮುಕ ಮುಖಗಳನ್ನು ಮೇಲಿನ ಹೋರಾಟದ ಹಾಡು ಅನಾವರಣಗೊಳಿಸುತ್ತಿದೆ. ಈ ಮೂಲಕ ಜನಸಾಮಾನ್ಯರು ಇದುವರೆಗೂ ನಂಬಿಕೊಂಡು ಬಂದಿರುವ ಮೂಢನಂಬಿಕೆಗಳನ್ನು ಬಯಲು ಮಾಡುತ್ತಿದೆ. ಇಂತಹ ಸ್ಥಿತಿಯನ್ನು ಅರಿತೇ ಬಹಳ ಹಿಂದೆಯೇ ಜೇಡರ ದಾಸಿಮಯ್ಯ ಮಠಮಾನ್ಯರನ್ನು ಕುರಿತು 'ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯ್ತು ಕಾಣಾ ರಾಮನಾಥ' ಎಂದು ಎಚ್ಚರಿಸಿದ್ದ. ಈ ಮೌಢ್ಯತೆಯನ್ನೇ ಬಂಡವಾಳ ಮಾಡಿಕೊಂಡ ಮಠಗಳು ಜನರನ್ನು ಮತ್ತಷ್ಟು ಮೂಢನಂಬಿಕೆಗಳಿಗೆ ನೂಕಿದವು. ಇದರಿಂದ ತನ್ನ ಆಸ್ತಿ ಮತ್ತು ಸಂಪತ್ತನ್ನು ಕ್ರೋಢೀಕರಿಸಿ

ಜನರನ್ನು ಸುಲಿಯಲು ಪ್ರಾರಂಭಿಸಿದವು. ಅದರಲ್ಲೂ ಬಡವರನ್ನು, ದಲಿತರನ್ನು ದೇವದಾಸಿ ಪದ್ಧತಿಯ ಹೆಸರಿನಲ್ಲಿ, ಬೆತ್ತಲೆ ಸೇವೆ ಹೆಸರಿನಲ್ಲಿ, ತಮ್ಮ ತೀಟೆ ತೀರಿಸಿಕೊಳ್ಳಲು ಧಾರ್ಮಿಕವಾದ ಸುಳ್ಳು ನಂಬಿಕೆಗಳನ್ನು ಅವರ ತಲೆಗೆ ತುಂಬಿದವು. ಇಂತಹ ನಂಬಿಕೆಗಳು ಅಳಿಯಬೇಕು. ದಲಿತರ ಬದುಕು ಉಳಿಯಬೇಕು. ಅದಕ್ಕೆ ದಲಿತ ಕವಿಗಳು ಇಂತಹ ಮಠಗಳೊಳಗೆ ನಡೆದ ದೌರ್ಜನ್ಯ, ದಬ್ಬಾಳಿಕೆ, ಅತ್ಯಾಚಾರಗಳನ್ನು ಹಾಡುಗಳ ಮೂಲಕ ಬಯಲಿಗೆಳೆದು ಜನರನ್ನು ಎಚ್ಚರಿಸಿದರು. ಮಠಗಳ ದೌರ್ಜನ್ಯ ಕುರಿತು ದಲಿತ ಕಾವ್ಯ ನಿರೂಪಿಸುವ ರೀತಿ ಹೀಗಿದೆ;

ಸಾಲಾಗಿ ನಿಲ್ಲಿ ಹೇಳುವುದಿದೆ;
ಹಗಲು ಹಾದರಗಳು ಮುಸುಕಿನಲಿ
ಅಭೂತ ಕಲ್ಪನೆಗಳು ನೆಲ ಬಿಟ್ಟು ಹಾರುವಷ್ಟು
ತಿರಗದಂತ ನಿರ್ಣಯಗಳು ಗತ್ತಿನಿಂದ ನಿಂತಿವೆ
ಇಲ್ಲಗಿಲ್ಲ ಎಂದರೆ ಬಾಯಿ ಮುಚ್ಚಿಸುತ್ತವೆ

ಕಾಲಕಾಲಕ್ಕೂ ಸುಳ್ಳಿನ
ಮಂಚಕಟ್ಟಿ ತೂಗಿಸಿಕೊಂಡರೇನ್ರೋ
ಪಲ್ಲಕ್ಕಿಯಲಿ ಹೊರೆಸಿಕೊಂಡರೇನ್ರೋ
ನಿಮಗೆ ಬೇಕು ನಮ್ಮ ಶರಣಾಗತಿ; ಸಾವು[೩೪]

ಇಂತಹ ಸಾಧುಸಂತರ ಕಾಪಾಡಲಿಕ್ಕೆ ಸರಕಾರವೂ ಬೆಂಬಲಕ್ಕೆ ನಿಂತಿರುತ್ತದೆ. ಅಲ್ಲದೆ ಮೇಲ್ವರ್ಗಗಳು ಮತ್ತು ಬಂಡವಾಳಶಾಹಿಗಳು ಇದರ ತಪ್ಪುಗಳನ್ನೆಲ್ಲಾ ಸಮರ್ಥಿಸಲಿಕ್ಕೆ ತುದಿಗಾಲಿನಲ್ಲೇ ನಿಂತಿರುತ್ತವೆ. ಇದಕ್ಕೆ ಸ್ಪಷ್ಟ ನಿದರ್ಶನ ಪಾರ್ವತಮ್ಮನನ್ನು ಅವಳದೇ ತಪ್ಪು ಎಂದು ತೀರ್ಮಾನಿಸಿ ಊರಿನ ಹಿರಿಯರು ಸೀರೆ ಬಿಚ್ಚಿ ಬೆತ್ತಲೆ ಮಾಡಿದ್ದು ಮತ್ತು ಸರಕಾರ ಸನ್ಯಾಸಿ ಪರ ನಿಂತದ್ದು. ಕರ್ನಾಟಕದಲ್ಲಿ ಇಂತಹದ್ದೇ ಇನ್ನೊಂದು ಪ್ರಕರಣ ನಡೆದದ್ದು ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಟೇಕಲ್ಲು ಹೋಬಳಿ ಹುಣಸೆಕೋಟೆಯಲ್ಲಿ. ಬಡಕುಂಬಾರನ ಮಗಳಾದ ಅನುಸೂಯಮ್ಮನ ಮೇಲೆ ನಡೆದ ಅತ್ಯಾಚಾರದ ಘಟನೆ. ಅಲ್ಲಿ ಪಾರ್ವತಮ್ಮ ಮಠಾಧಿಪತಿಗಳಿಂದ ಅತ್ಯಾಚಾರಕ್ಕೊಳಗಾದರೆ, ಇಲ್ಲಿ ಅನುಸೂಯಮ್ಮ ಗೌಡರ ದಬ್ಬಾಳಿಕೆಗೆ ಒಳಗಾದಳು.

ಮುಳ್ಳು ಕಂಟಿಯ ನಡುವೆ ಅರಳಿರುವ ಹೂ ನಾನು
ಮನದ ಮೂಲೆಯ ತುಂಬ ಅವಮಾನದ ಗಾಯವು
ಶತಮಾನದುದ್ದಕ್ಕೂ ಶೋಷಣೆಯ ಶೃಂಗಾರವು॥[೩೫]

ಹೀಗೆ ಮುಳ್ಳು ಕಂಟಿಗಳ ನಡುವೆ ಅರಳುವ ದಲಿತರ ಬದುಕಿನಲ್ಲಿ ಕೋಟಿ ಕೋಟಿ ಬಾಧೆ, ಲಕ್ಷ ಲಕ್ಷ ನೋವುಗಳು ನೆಲೆನಿಂತಿರುತ್ತವೆ. ಬಡವರ ಮನೆಯಲ್ಲಿ ಹುಟ್ಟುವ ಪ್ರತಿ ಹೆಣ್ಣಿನ ಹಿಂದಿನ ಕತೆಯೂ ಇದೇ ಆಗಿರುತ್ತದೆ. ಬಡವರ ಮನೆಯ ಹೆಣ್ಣು, ಇದ್ದ ಮನೆ ಮತ್ತು ಸೇರಿದ ಮನೆ ಎರಡರಲ್ಲೂ ಅನುಭವಿಸುವ ನೋವಿನ ಸರಮಾಲೆಯನ್ನು ಮೇಲಿನ ಸಾಲುಗಳು ಕಟ್ಟಿಕೊಡುತ್ತಿವೆ. ಇಂತಹ ವ್ಯವಸ್ಥೆಯಲ್ಲಿ ಅನಸೂಯಮ್ಮ ಹದಿನೈದು ವರ್ಷಕ್ಕೆ ವಿಧವೆಯ ಪಟ್ಟ ಹೊತ್ತು ತವರಿಗೆ ಮರಳಲು ಆ ಊರಿನ ಕೃಷ್ಣೇಗೌಡ, ವೆಂಕಟೇಶ, ನಂಜುಂಡ ಮುಂತಾದವರು ಅವಳನ್ನು ಕೆಡಿಸಿ, ಹಿಂಸಿಸಿತು. ಇದರ ಬಗ್ಗೆ ಕಾನೂನು, ಸರ್ಕಾರಗಳು ಕಣ್ಣು ಮುಚ್ಚಿದವು. ಆದರೆ ದಲಿತ ಸಂಘರ್ಷ ಸಮಿತಿ ಇದನ್ನು ನಾಡಿನ ಮೂಲೆ ಮೂಲೆಗೆ ತಲುಪಿಸಿ ಹೋರಾಟದ ಕಿಚ್ಚನ್ನು ಹಚ್ಚಿತು. ಆಗ ಹುಟ್ಟಿದ ಹಾಡೇ 'ನನ ತಂಗಿ ಅನುಸೂಯ'

....

ಕಾಮುಕರು
ಒಂದಾಗಿ ಮೇಲೆ
ದರದರನೆ ಎಳೆದಾಡಿ
ಸೀರೆ ರವಿಕೆ ಹರಿದಾಕಿ
ನಿನ ಶೀಲವ ಕೆಡಿಸಿ ಹೋದರಮ್ಮ
ನನ ತಂಗಿ ಅನುಸೂಯ

ನಿನಗಾದ ಅನ್ಯಾಯ
ನಮ್ಮೆದೆಗೆ ಚೂರಿ ಇರಿತ
ಗಾಯವ ಮರೆತು ಬದುಕಲಾರೆವು
ನನ ತಂಗಿ ಅನುಸೂಯ[೩೬]

ದಲಿತರಿಗೆ ತನ್ನ ಸಾಮಾಜಿಕ ಹೋರಾಟಕ್ಕೆ ಎಲ್ಲರನ್ನು ಒಗ್ಗೂಡಿಸುವ ಅನಿವಾರ್ಯತೆ ಇದೆ. ಅನ್ಯಾಯವನ್ನು ಪ್ರತಿಭಟಿಸಿ, ನ್ಯಾಯಕ್ಕಾಗಿ ಹೋರಾಡಿ, ಸಮಾನತೆಯ ಸಮಾಜ ಕಟ್ಟುವ ಕನಸುಗಳಿವೆ. ಇಂತಹ ಕನಸುಗಳೇ ಮೇಲಿನ ಹಾಡು ಹುಟ್ಟಲಿಕ್ಕೆ ಕಾರಣಗಳಾಗಿವೆ. ಈ ತರದ ಅದೆಷ್ಟು ಘಟನೆಗಳು ಬೆಳಕಿಗೆ ಬಾರದೆ ಕುಳಿತಿದ್ದಾವೋ ಗೊತ್ತಿಲ್ಲ. ಬೆಳಕಿಗೆ ಬಂದಂತಹ ಘಟನೆಗಳನ್ನು ದಲಿತ ಕವಿಗಳು ಕಥೆ ಹೇಳುವ ಶೈಲಿಯಲ್ಲಿ ಹಾಡಿಗೆ ಅಳವಡಿಸಿ ಹಾಡಿದರು. ಹಾಡುತ್ತಲೇ ಬೀದಿಬೀದಿಗೆ ಘಟನೆಗಳನ್ನು ಪರಿಚಯಿಸಿ ಅದರ ವಿರುದ್ಧ ಹೋರಾಟ ಮಾಡುವಂತೆ ಕರೆಕೊಟ್ಟರು.

ದಲಿತ ಕವಿಗಳು ಈ ಘಟನಾಧಾರಿತ ಹಾಡುಗಳ ಮೂಲಕ ಸಾಮಾಜಿಕ ವ್ಯವಸ್ಥೆಯ ವಿಭಿನ್ನ ಮುಖಗಳನ್ನು ಪರಿಚಯಿಸಿದರು. ಕಾನೂನು, ನ್ಯಾಯ, ಪೊಲೀಸ್ ಇವೆಲ್ಲವೂ ದಲಿತರ ಬದುಕಿಗೆ ಮುಳ್ಳುಗಳು ಎಂಬುದನ್ನು ಸಾಬೀತುಪಡಿಸಿದರು. ಪ್ರಜಾಪ್ರಭುತ್ವ ವ್ಯವಸ್ಥೆ ದಲಿತರ ಬದುಕನ್ನು ಹಸನುಗೊಳಿಸುವುದಿಲ್ಲ ಎಂದು ತೋರಿಸಿಕೊಟ್ಟರು. ದಲಿತರ ಮೇಲಿನ ದಿನನಿತ್ಯ ದೌರ್ಜನ್ಯಕ್ಕೆ ಬಂಡವಾಳಶಾಹಿ ಮತ್ತು ಭೂಮಾಲೀಕ ವರ್ಗದ ಕಾಣಿಕೆ ಹೆಚ್ಚು ಎಂಬುದನ್ನು ತಿಳಿಸಿದರು. ಹಸಿವು, ಅವಮಾನ, ಅನ್ನ, ಭೂಮಿ ಇವು ದಲಿತರ ಬದುಕಿನ ಅವಿಭಾಜ್ಯ ಅಂಗಗಳು. ಇವುಗಳಲ್ಲಿ ಹಸಿವು, ಅವಮಾನಗಳನ್ನು ಅಳಿಸಲು, ಅನ್ನ ಮತ್ತು ಭೂಮಿಯನ್ನು ಗಳಿಸಲು ಹೋರಾಟ ಮಾಡಬೇಕೆಂದು ಅಂತಿಮವಾಗಿ ದಲಿತ ಕಾವ್ಯಗಳು ಕರೆಕೊಟ್ಟವು.

ಉಪದೇಶವು ನಮಗೆ ಬೇಡ
ಬೇಕು ನಮಗೆ ಅನ್ನವು
ಗುರುವುಗಿರುವು ನಮಗೆ ಬೇಡ
ಬೇಕು ವಸತಿ ವಸನವು

ಭಯಭೀತಿಯ ಬೇರು ಸಹಿತ
ಕಿತ್ತು ಮುಂದೆ ನಡೆವೆವು
ವಿಷಜಂತುವ ಹುಡುಕಿ ತಡಕಿ
ಹಿಡಿದು ತಂದು ಕಡಿವೆವು[೩೭]

ದಲಿತರ ಮೇಲಿನ ಈ ದೌರ್ಜನ್ಯದ ಘಟನೆಗಳು ಕೂಲಿ ಜೀತದ ನೆಲೆಗಳಿಗಷ್ಟೇ ಸೀಮಿತವಾಗಿರಲಿಲ್ಲ. ಅದು ದಲಿತರ ಸಮಸ್ತ ಲೋಕವನ್ನೂ ಆವರಿಸಿಕೊಂಡಿತ್ತು. ಜಮೀನ್ದಾರರ ಮನೆಯ ಕೂಲಿಯ ಹೆಣ್ಣು ಬೇರೆ ಊರಿಗೆ ಮದುವೆಯಾಗಿ ಹೋದರೆ ಕೂಲಿ ಆಳು ಕಡಿಮೆಯಾಗುತ್ತದೆಂಬ ಹಿನ್ನೆಲೆಯಲ್ಲಿ ಅವರ ಪ್ರೀತಿ, ಪ್ರೇಮ, ಸ್ನೇಹ, ಬಾಂಧವ್ಯ ಮುಂತಾದವುಗಳೊಂದಿಗೆ ಆಟವಾಡುವುದಲ್ಲದೆ, ಇದಕ್ಕೆ ವಿರುದ್ಧವಾಗಿ ನಡೆದುಕೊಂಡರೆ ಬಲವಂತವಾಗಿ ಎಳೆದು ತರುವ ಅಮಾನವೀಯ ಕೃತ್ಯಗಳೂ ನಡೆಯುತ್ತಿದ್ದವು. ಶಾಲೆಯ ಕಲಿಕೆಯಲ್ಲಿ ದಲಿತ ವಿದ್ಯಾರ್ಥಿಗಳು ಹೆಚ್ಚು ಅಂಕ ಗಳಿಸಿ ಪಾಸಾದರೆ ಅದನ್ನು ಸಹಿಸದ ಭೂಮಾಲಿಕ ವರ್ಗ ಅಂತಹ ವಿದ್ಯಾರ್ಥಿಗಳನ್ನು ಕೊಲೆಮಾಡಿಸುವುದರ ಮೂಲಕವಾಗಿಯೋ ಅಥವಾ ಇಲ್ಲ ಸಲ್ಲದ ಆರೋಪಗಳನ್ನು ಹೊರಿಸಿಯೋ ಅವರನ್ನು ಮೂಲೆಗುಂಪು ಮಾಡುವ ಅನೇಕ ಹುನ್ನಾರಗಳು ರಾಜ್ಯಾದ್ಯಂತ ನಡೆದಿವೆ. ಗಂಗಾರಾಂ ಚಂಡಾಲರ 'ತಮ್ಮನೆ ಮುನಿವೆಂಕಟಾ' ಎನ್ನುವ ಕವನ ಈ ದೌರ್ಜನ್ಯದ ಪರಾಕಾಷ್ಠತೆಯನ್ನು ಸರಿಯಾಗಿ

ಹಿಡಿದಿಟ್ಟಿದೆ. ಮುಳುಬಾಗಿಲು ತಾಲ್ಲೂಕು ಅರಹಳ್ಳಿ ಗ್ರಾಮದ ಮುನಿವೆಂಕಟ ಪಿಯುಸಿಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾದನು. ಈ ಕಾರಣದಿಂದ ಆ ಊರಿನ ಗೌಡ ಇವನನ್ನು ಕೊಲ್ಲಿಸಿ ತನ್ನ ಮಗನ ಫೇಲಿಗೆ ಪ್ರತಿಕಾರವೆಂಬಂತೆ ಸೇಡು ತೀರಿಸಿಕೊಂಡನು. ಇಂತಹ ಘಟನೆಗಳು ಇಂಡಿಯಾ ದೇಶದಲ್ಲಿ ಅದೆಷ್ಟು ನಡೆದಿವೆಯೋ, ನಡೆಯುತ್ತಿರುವವೋ ತಿಳಿಯದು. ಈ ಘಟನೆಯನ್ನು ಕವನ ನಿರೂಪಿಸುವುದು ಹೀಗೆ;

ತಮ್ಮನೆ ಮುನಿವೆಂಕಟಾ
ನೀನು ಸಾಯಲಿಲ್ಲವೋ
ಸಾಯಿಸಿದವೋ ನಿನ್ನ
ಸಾವಕಾರಿ ಕೈಗಳೆಲ್ಲ ।ತಮ್ಮ।

ಹೊಲೆಯರ ಮಗನಾಗಿ ನೀನು
ಪ್ರಥಮ ದರ್ಜೆಲಿ ಪಾಸಾದೆಯೆಂದು
ತನ್ನ ಮಗನು ಫೇಲಾದನೆಂದು
ಅವಮಾನ ಆಯಿತೆಂದು
ಮೀಸೆಗಳ ಮೇಲಕ್ಕೇರಿಸಿ
ಹಗೆ ಬೆಳೆಸಿಕೊಂಡನವನು
ಒಳಗೊಳಗೆ ಕತ್ತಿ ಮಸೆದು
ಸಾಯಿಸಲು ಯೋಚಿಸಿದರೋ ।ತಮ್ಮ।[೩೮]

ಕಾಗೆ, ಗೂಬೆಗಳ ಕುರಿತು ಪುಟಗಟ್ಟಲೆ ಬರೆಯುವ ಸಂಸ್ಕೃತಿ ಚಿಂತಕರು ಇಲ್ಲಿದ್ದಾರೆ. ಇವರಿಗೆ ಇಲ್ಲಿನ ಅಮಾನುಷ ಕ್ರೌರ್ಯದ ವ್ಯಥೆಗಳು ಕಾಣಿಸುವುದೇ ಇಲ್ಲ. ಸುತ್ತಲೂ ಕೊಳೆತು ನಾರುತ್ತಿರುವ ದುರ್ಗಂಧ ಬೀರುವ ವ್ಯವಸ್ಥೆ ಇದೆ. ಇದರ ನಡುವೆಯೇ ಕೈಲಾಸಗಿರಿಯಲ್ಲಿ ಕಾಣದ ಪಾರಿಜಾತದ ವರ್ಣನೆ ಮಾಡುವ ಇಲ್ಲಿನ ಕವಿಗಳಿಗಂತೂ ಇದು ಸರ್ವೇ ಸಾಮಾನ್ಯ. 'ಯೋಗಿಯ ಫಲ ಯೋಗಿಗೆ, ಜೋಗಿಯ ಫಲ ಜೋಗಿಗೆ' ಎಂಬ ತತ್ವವನ್ನು ಸಾರುವುದರಲ್ಲಿ ನಿಸ್ಸೀಮರು ಇವರೆ. ಆದರೆ ಇವರೇ ಈ ದೇಶದ ಅಭಿವ್ಯಕ್ತಿ ಮೂಲವಾಗಿ ಪರಿಣಮಿಸಿದ್ದು ಈ ದೇಶದ ದೌರ್ಭಾಗ್ಯವೇ ಸರಿ.

ಇಂಡಿಯಾದಲ್ಲಿ ದಲಿತರ ಮೇಲಿನ ದೌರ್ಜನ್ಯಕ್ಕೆ ದಲಿತರ ಭೂಮಿಯೊಂದಿಗಿನ ಸಂಬಂಧವಷ್ಟೇ ಮುಖ್ಯವಾಗಿರಲಿಲ್ಲ. ಬದಲಾಗಿ ವ್ಯವಸ್ಥೆ ವಿರುದ್ಧ ತಿರುಗಿ ಬಿದ್ದ ಅನೇಕರು ಕೂಡ ಈ ದಬ್ಬಾಳಿಕೆಯಲ್ಲಿ ನಲುಗಿ ಹೋಗಿದ್ದಾರೆ. 'ಕುಸುಮಬಾಲೆ'ಯಲ್ಲಿ ಚೆನ್ನನ ಕೊಲೆ

ನಿಗೂಢವಾಗಿ ನಡೆದುಹೋಗುವಂತೆ ಅನೇಕ ದಲಿತರನ್ನು ಇಲ್ಲಿನ ಆಳುವ ವ್ಯವಸ್ಥೆ ಬಲಿತೆಗೆದುಕೊಂಡಿದೆ. ಇದು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನ ಭಿನ್ನ ಕಾರಣಗಳಿಗಾಗಿ ನಡೆದುಹೋಗಿದ್ದಾವೆ. ಇವುಗಳನ್ನೇ ಅಕ್ಷರ ಕಲಿತ ದಲಿತರು ತಮ್ಮ ಕಾವ್ಯ ಮುಖೇನ ಪರಿಚಯಿಸಲು ಮುಂದಾದರು. ಇದರ ಪರಿಣಾಮವಾಗಿ ದೇಶದ ಮೂಲೆ ಮೂಲೆಯಲ್ಲಿ ದಲಿತರ ಮೇಲಿನ ದೌರ್ಜನ್ಯಗಳು ಬೆಳಕಿಗೆ ಬರಲು ಸಾಧ್ಯವಾಯಿತು. ೧೯೯೨ ರಲ್ಲಿ ಅಳ್ಳಗಿಯಲ್ಲಿ ವ್ಯವಸ್ಥೆ ವಿರುದ್ಧ ತಿರುಗಿ ಬಿದ್ದ ದಲಿತ ನಾಯಕನ ಕತೆ ಅಂತ್ಯವಾದುದನ್ನು ಒಂದು ಕವಿತೆ ನಿರೂಪಿಸುವ ಬಗೆ ಹೀಗಿದೆ;

ಅಳ್ಳಗಿ ಭೀಮಶಾನ ಕಥೆಯ
ದಂತಕಥೆಯು ಅಲ್ಲವಯ್ಯ
ಕಿವಿಗೊಟ್ಟು ಕೇಳಿರಣ್ಣ
ನೋವಿನ ರಾಗವನ್ನ
....
ಲಕ್ಷ್ಮೀ ಜಾತ್ರೆ ನಿಲ್ಲಿಸಿದವನ........
ಕ್ವಾಣಾ ಕಡಿಯೋದು ಖಂಡಿಸಿದವನ.......
ಪೋಲೀಸರಿಗೆ ತಿಳಿಸಿದವನ_.........
ನ್ಯಾಯವನ್ನು ಬೇಡಿದವನ........
ಜೀವಕ್ಕೆ ಅಂಜದೆ, ಜೋರಾಗಿ ನಿಂತವನ......
ಜಾತಿಗೆ ಜೋತುಬಿದ್ದು
ಆನಿಗೆ ಹಿಡಿದಾಂಗ, ಹಿಂಡುಗಟ್ಟಿ ಹಿಡಿದಾರ
ಇಲಿಗಳು ಒಟ್ಟು ಗೂಡಿ, ಬಲೆ ಹಾಕಿ ಹೊಡೆದಾವ
ಹುಲಿಯಾಗಿ ಹಾರಿದ್ದಿ, ಸಿಂಹವಾಗಿ ಸಿಡಿದೆದ್ದಿ
ಕೊಡಲಿ ಇಂದ ಕಡಿದಾರ
ಖಡ್ಗದಿಂದ ಕತ್ತರಸ್ಯಾರ
ಕೋಣಿಗೆ ಕಡಿದಾಂಗ, ಕುತ್ತಿಗೆನೆ ಹಾರಾಸ್ಯಾರ,
ನಿನ್ನ ವಿಚಾರ ಹಾರಿಲ್ಲ, ಗಟ್ಯಾಗಿ ನಿಂತಾದ
ಕ್ರಾಂತಿಯ ಕೂಗು ಹೊಡೆದು
ಹೂವಾಗಿ ಅರಳಿದ್ದಿ ನೀನು
ಸೆಡ್ಡು ಹೊಡೆದು ಸವಾಲು ಹಾಕಿ

ದಲಿತ ಸಮಾಜದಿಂದ ಸಿಡಿಲಾಗಿ ಸಿಡಿದೆದ್ದಿ
ದಲಿತ ಹೋರಾಟದ, ಹುತಾತ್ಮನಾಗಿದ್ದಿ[೩೯]

ಕವನವೇ ಅಂತರಾಳದಲ್ಲಿ ಧ್ವನಿಸುವಂತೆ ಸಾಮಾಜಿಕ ಪರಿವರ್ತನೆಯ ಹಾದಿಯಲ್ಲಿ ನಡೆಯುವವರನ್ನು ಒಂದು ವ್ಯವಸ್ಥೆ ಬಗ್ಗು ಬಡಿಯಬಹುದು. ಆದರೆ ಆ ಸಾಮಾಜಿಕ ಪರಿವರ್ತನಾಕಾರರ ವಿಚಾರಗಳನ್ನು ನಾಶಗೊಳಿಸಲು ಸಾಧ್ಯವಾಗುವುದಿಲ್ಲ. ಈ ವಿಚಾರಗಳೇ ಮುಂದೊಂದು ದಿನ ಜಗತ್ತನ್ನು ರೂಪಿಸುತ್ತವೆ. ಇಲ್ಲಿಯೇ ಲಿಖಿತ ಪರಂಪರೆ ಮಾಧ್ಯಮವಾಗಿ ಕೆಲಸ ಮಾಡುವುದು. ಇದನ್ನೇ ದುಡಿಯುವ ನೆಲೆಗಳಿಂದ ಮೂಡಿದ ಕಾವ್ಯವೂ ಮಾಡುವುದು.

೬.೨ ದಲಿತ ಕಾವ್ಯ : ಮಹಿಳೆ–ಪುರುಷ ಮತ್ತು ಹೋರಾಟ

ನಿನ್ನ ಕಣ್ಣೀರು ನನ್ನ ಕಣ್ಣೀರು ಕಣ್ಣೀರ ಹಿಂದಣ ಕಥೆಯು ಒಂದೇ
ಒಂಟಿಯಾಗಿ ಕಣ್ಣೀರಿಡುವ ಚಿಕ್ಕ ತಂಗ್ಯಮ್ಮ
ಜಂಟಿಯಾಗಿ ಹೋರಾಡುವ ಬಾರೇ ಚಿಕ್ಕ ತಂಗ್ಯಮ್ಮ ।ಚಿಕ್ಕ ತಂಗ್ಯಮ್ಮ।[೪೦]

ದಲಿತ ಕಾವ್ಯ ತನ್ನ ಅಭಿವ್ಯಕ್ತಿಯಲ್ಲಿ ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಸೇರುವಂತೆ ಪುರುಷ ಮಹಿಳೆ ಎನ್ನದೆ ಒಂದಾಗಬೇಕಾದ ಅನಿವಾರ್ಯತೆಯನ್ನು ಹೇಳಿದೆ. ಇಲ್ಲಿರುವ ಸಮಸ್ಯೆಯೆಂದರೆ ಈ ಇಬ್ಬರ ಸಮಸ್ಯೆಗಳು ಒಂದೇ ಅಥವಾ ಬೇರೆಯೇ? ಸಮಸ್ಯೆಗಳ ಸ್ವರೂಪದಲ್ಲಿ ಏಕತೆ ಇದೆಯೇ? ಇದ್ದರೆ ಇವರಿಬ್ಬರೂ ಒಂದಾಗಿ ಹೋರಾಡಬೇಕಾದ ಅನಿವಾರ್ಯತೆಯೇನು? ಒಂದಾಗಿ ಹೋರಾಡುವಂತೆ ಪ್ರೇರೇಪಿಸುವ ಅಂಶಗಳಾವುವು? ದೌರ್ಜನ್ಯ, ದಬ್ಬಾಳಿಕೆಗಳು ಇಬ್ಬರಿಗೂ ಭಿನ್ನವೇ ಅಥವಾ ಒಬ್ಬರ ದಬ್ಬಾಳಿಕೆ ಮತ್ತೊಬ್ಬರವೇ? ಎಂಬುದನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷ ಮಹಿಳೆಯನ್ನು ಬೇರ್ಪಡಿಸುವ ಅನೇಕ ಸಂಗತಿಗಳು ಚಾಲ್ತಿಯಲ್ಲಿವೆ. ಮಹಿಳೆ ಮತ್ತು ಪುರುಷನ ಸ್ಥಾನಮಾನಗಳನ್ನು ಅವಲೋಕಿಸಿದರೆ ಎಲ್ಲ ಸಮುದಾಯಗಳಲ್ಲೂ ಪುರುಷನೇ ಮೇಲುಗೈ ಸಾಧಿಸಿರುವುದು ಕಂಡುಬರುತ್ತದೆ. ಸಾಮಾಜಿಕ, ಆರ್ಥಿಕ, ರಾಜಕೀಯ ವ್ಯವಸ್ಥೆಯನ್ನು ತನಗೆ ಹೇಗೆ ಬೇಕೊ ಹಾಗೆ ಪುರುಷ ಪ್ರಧಾನ ವ್ಯವಸ್ಥೆ ರಚಿಸಿಕೊಂಡಿದೆ. ಇದರಿಂದಾಗಿ ಈ ವ್ಯವಸ್ಥೆ ಮಹಿಳೆಯರನ್ನು ಎಲ್ಲ ಕಾಲದಲ್ಲೂ ದ್ವಿತೀಯ ಲಿಂಗವಾಗಿ ಪರಿಗಣಿಸುವಂತೆ ಮಾಡಿದೆ. ಅಲ್ಲೊಂದು ಇಲ್ಲೊಂದು ಮಾತೃಪ್ರಧಾನ ಕುಟುಂಬಗಳಿದ್ದರೂ ಅವುಗಳಲ್ಲಿನ ಮಹಿಳೆಯರೂ ಕೂಡ ಪುರುಷನ ಸರ್ವಾಧಿಕಾರದಲ್ಲೆ ಬದುಕುತ್ತಿರುವ ಪರಿಸ್ಥಿತಿ ಇದೆ.

ಜಾತಿ, ಧರ್ಮ, ವರ್ಣಗಳು ದಲಿತರನ್ನು ಕಡೆಗಣಿಸಿರುವಂತೆ ಎಲ್ಲ ಮಹಿಳೆಯರು ಪುರುಷರಿಂದ ಶೋಷಿತರಾಗಿದ್ದಾರೆ. "ಜಾತಿ ಪದ್ಧತಿಯು ಭಾರತೀಯ ಮಹಿಳಾ ಲೋಕವನ್ನು

ಹೇಯವಾಗಿ ಸೀಳಿದೆ. ಮಹಿಳೆಯರ ಸ್ವಾತಂತ್ರ್ಯವನ್ನು ಜಾತಿ ಬಹಳವಾಗಿ ತುಂಡರಿಸಬಲ್ಲದು. ವರ್ಣಾಶ್ರಮದ ಮೌಲ್ಯಗಳೆಲ್ಲವೂ ಜಾತಿ ಹಾಗೂ ಪುರುಷ ಸೂತಕದಿಂದಲೇ ಮಹಿಳೆಯರನ್ನು ಅಸ್ಪೃಶ್ಯರನ್ನಾಗಿಸಿವೆ."[೪೧] ಆದರೆ ದಲಿತ ಮಹಿಳೆಯರನ್ನು ಅವು ಮತ್ತೂ ಕ್ರೂರವಾಗಿ ದಂಡಿಸಿವೆ. ಇಲ್ಲಿ ಎಲ್ಲಾ ಜಾತಿ ಹಾಗೂ ಧರ್ಮದಲ್ಲೂ ಮಹಿಳೆಯರಿದ್ದರೂ ಎಲ್ಲರ ಸಮಸ್ಯೆಗಳು ಒಂದೇ ಆಗಿರುವುದಿಲ್ಲ. ಪುರುಷಾಧಿಪತ್ಯ ಎಲ್ಲರನ್ನೂ ಶೋಷಿಸಿರಬಹುದು. ಆದರೆ ದಲಿತ ಮಹಿಳೆಯರ ಮೇಲಾಗುವ ದೌರ್ಜನ್ಯಗಳು ಮೇಲ್ಜಾತಿಯ ಮಹಿಳೆಯರಿಗೆ ಹೋಲಿಸಿದರೆ ಎಲ್ಲ ಬಗೆಯ ಅಧಿಕಾರಗಳು ಅವಳನ್ನು ತುಳಿಯುತ್ತಿವೆ ಮತ್ತು ನಿಯಂತ್ರಿಸುತ್ತಿವೆ.

"ಊಳಿಗಮಾನ್ಯ ಸಮಾಜದ ಹಳೆಯ ಮೌಲ್ಯಗಳು ಜಾತಿ ಪದ್ಧತಿಯಲ್ಲಿ ಆಳವಾಗಿ ಬೇರುಬಿಟ್ಟ ಕಾರಣದಿಂದಲು ದಲಿತ ಮಹಿಳೆಯ ಅಸ್ತಿತ್ವವನ್ನು ಮೇಲು ಜಾತಿಯ ಸ್ತ್ರೀಯರ ಮೂಲಕ ಗುರುತಿಸಿಕೊಳ್ಳಲು ಬರುವುದಿಲ್ಲ"[೪೨] ಎಂದಿರುವ ಮೊಗಳ್ಳಿಯವರ ಮಾತು ಒಪ್ಪತಕ್ಕದ್ದೇ. ಏಕೆಂದರೆ ದಲಿತ ಮಹಿಳೆ ದಮನಿತಳಾಗಲು ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಆಯಾಮಗಳಿರುತ್ತವೆ. ಮನೆಯ ನಾಲ್ಕು ಗೋಡೆಯ ಮಧ್ಯದಿಂದ ಹಿಡಿದು ಜಮೀನ್ದಾರಿ ಮನೆಗಳಲ್ಲಿ, ಹೊಲಗಳಲ್ಲಿ ಕೂಲಿ ಜೀತದ ಸಂದರ್ಭದಲ್ಲಿ ನಡೆಯುವ ದೌರ್ಜನ್ಯಗಳವರೆಗೂ ಇವು ವಿಸ್ತರಿಸಿಕೊಂಡಿರುತ್ತವೆ.

ಯಾವುದೇ ವ್ಯವಸ್ಥೆಯಲ್ಲಿ ಅಸಹನೆ ಮತ್ತು ಅತೃಪ್ತಿಗಳು ಇದ್ದರೆ ಅಲ್ಲಿ ಪ್ರತಿರೋಧ ಹುಟ್ಟುತ್ತದೆ. ಇದು ಮಹಿಳಾ ಜಗತ್ತಿನಲ್ಲಿಯೂ ನಡೆಯುತ್ತಾ ಬಂದಿದೆ. ಪ್ರಶ್ನಿಸುವ ಹಕ್ಕನ್ನೇ ಹೊಂದದ ಮಹಿಳೆಯು ಅಲ್ಲಲ್ಲಿ ತನ್ನ ಪ್ರತಿರೋಧಗಳನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ಇದಕ್ಕೆ ಜನಪದ ತ್ರಿಪದಿಗಳಲ್ಲಿ ವ್ಯಕ್ತವಾಗಿರುವ ಮಹಿಳೆಯ ಆಕಾಂಕ್ಷಿತ ಆಶಯಗಳೇ ಸಾಕ್ಷಿ. "ಪುರುಷ ದನಿಯ ಗದ್ದಲದಲ್ಲಿ ಬಹುಪಾಲು ಎಲ್ಲ ಮಹಿಳೆಯರ ದನಿಯೂ ಉಡುಗಿ ಗಾಢವಾದ ವಿಷಾದದ ಮೌನವು ಪರಂಪರೆಗಳಲ್ಲಿ ಮಡುಗಟ್ಟಿದೆ. ಮೌಖಿಕ ಪರಂಪರೆಯಲ್ಲಿ ಮಹಿಳೆಗೆ ಹಾಡಿಕೊಳ್ಳುವ ಸ್ವಾತಂತ್ರ್ಯವಿತ್ತೇ ಹೊರತು ಪ್ರಶ್ನಿಸುವ ಅಧಿಕಾರವಿರಲಿಲ್ಲ".[೪೩] ಈ ಹಾಡಿಕೊಳ್ಳುವ ಮೂಲಕವಾಗಿಯೇ ಮಹಿಳೆ ತನ್ನಂತರಂಗದ ವೇದನೆಗಳನ್ನು ಹೊರಹಾಕುತ್ತಿದ್ದಳು. ಸ್ವಾತಂತ್ರ್ಯ ಮತ್ತು ಆಧುನಿಕ ವಿದ್ಯಾಭ್ಯಾಸ ಅವಳಿಗೆ ಪ್ರಶ್ನಿಸುವ ಅಧಿಕಾರ ಮತ್ತು ಸಮಾನ ನ್ಯಾಯದ ಸ್ಥಿತಿಯನ್ನು ತಂದುಕೊಡುತ್ತದೆಂಬುದು ಹುಸಿಯಾಯಿತು. ಈ ಹುಸಿ ಕಲ್ಪನೆಗಳು ದೂರವಾಗಿ ಮತ್ತೊಮ್ಮೆ ಪುರುಷಾಧಿಪತ್ಯವು ಅವಳನ್ನು ಆಕ್ರಮಿಸಿತು. ಆದರೆ ಜಗತ್ತಿನಾದ್ಯಂತ ಉಂಟಾದ ಮಹಿಳಾ ಜಾಗೃತಿ ಮಹಿಳೆಯರಲ್ಲೊಂದು ಹೊಸ ಆತ್ಮವಿಶ್ವಾಸವನ್ನು ಹುಟ್ಟುಹಾಕಿತು. ಇದರಿಂದಾಗಿ ಸಂಘಟನೆ, ಪ್ರತಿಭಟನೆ, ಮತ್ತು ಹೋರಾಟ ಇವು ಮಹಿಳಾ ಜಗತ್ತಿನ ಒಳ ಹೊಕ್ಕವು. ಇದರ ಫಲದಿಂದಾಗಿಯೇ ಮಹಿಳಾ ಸಂಘಟನೆಗಳು ಅಸ್ತಿತ್ವಕ್ಕೆ ಬಂದವು.

ಎಲ್ಲಿ ಶೋಷಣೆ ಇರುತ್ತದೋ ಅಲ್ಲಿ ಹೋರಾಟವೊಂದೇ ಶೋಷಿತರಿಗೆ ದಾರಿ. ಇಂತಹ ಶೋಷಣೆಯ ವಿರುದ್ಧ ದಲಿತ ಸಂಘರ್ಷ ಸಮಿತಿ ಹೋರಾಟವನ್ನು ಕೈಗೊಂಡಿತು. ಸಾಮಾನ್ಯವಾಗಿ ಹೇಳುವಾಗ ಈ ಸಂಘಟನೆಯ ಹೋರಾಟ ಹೆಚ್ಚು ಪುರುಷ ಕೇಂದ್ರಿತ

ಎಂದು ಹೇಳಲಾಗುತ್ತದೆ. ಆದರೆ ಸಂಘಟನೆ ಮತ್ತು ಆ ಸಂಘಟನೆಯಿಂದ ಮೂಡಿಬಂದ ಹಾಡುಗಳನ್ನು ಗಮನಿಸಿದರೆ ಪುರುಷ ಮಹಿಳೆಯೆಂಬ ಭೇದಗಳು ಕಂಡುಬರುವುದಿಲ್ಲ. ಆರಂಭದಲ್ಲಿ ಉಲ್ಲೇಖಿಸಿರುವ ಕವನದ ಸಾಲುಗಳು ಇದಕ್ಕೊಂದು ಸ್ಪಷ್ಟ ನಿದರ್ಶನ.

ಮೇಲಿನ ಹಾಡಿನ ಒಳದನಿಯನ್ನು ಗಮನಿಸಿದರೆ ದಲಿತ ಕಾವ್ಯ ಯಾವ ಮಹಿಳೆಯನ್ನು ಕುರಿತು ಹಾಡುತ್ತಿದೆ ಎಂಬುದು ಮುಖ್ಯ. ಇಲ್ಲಿ ದುಡಿಯುವ, ಗುಡಿಸಲಿನಲ್ಲಿ ಬದುಕುವ, ಶೋಷಣೆಯನ್ನು ಅನುಭವಿಸುತ್ತಿರುವ, ಕೂಲಿ ಮಾಡುತ್ತಿರುವ ಹೆಣ್ಣಿನ ಬಗ್ಗೆ ಹಾಡಿದೆ. ಈ ಮಹಿಳೆಯ ಮತ್ತು ಅದೇ ನೆಲೆಯಲ್ಲಿ ಬದುಕುತ್ತಿರುವ ಪುರುಷನ ಶೋಷಣೆಗಳು ಏಕಮುಖವಾಗಿರುತ್ತವೆ. ಈ ಎರಡೂ ಶೋಷಣೆಯನ್ನು ಬೇರ್ಪಡಿಸಿ ನೋಡಲು ಇದು ವರದಕ್ಷಿಣೆ ಕುರಿತ ಸಮಸ್ಯೆಯೋ, ವ್ಯಭಿಚಾರ ಕುರಿತ ಸಮಸ್ಯೆಯೋ ಅಲ್ಲ. ಬದಲಾಗಿ ಇದು ದಲಿತ ಪುರುಷ ಮತ್ತು ಮಹಿಳೆ ಇಬ್ಬರೂ ಏಕಕಾಲದಲ್ಲಿ ಕೂಲಿ ಮಾಡುವ ಸ್ಥಳಗಳಲ್ಲಿ ಅನುಭವಿಸುತ್ತಿರುವ ಶೋಷಣೆಯ ತೀವ್ರತೆ. ಇದನ್ನೇ ದಲಿತ ಕಾವ್ಯ ತನ್ನ ಅಭಿವ್ಯಕ್ತಿಯಲ್ಲಿ ಹೊರಹಾಕಿರುವುದು.

ಇಂಡಿಯಾ ದೇಶದಲ್ಲಿ ಆಳುವ ವರ್ಗಗಳ ಹುನ್ನಾರಗಳು ತೀವ್ರತರವಾಗಿ ಕೆಲಸ ಮಾಡಿವೆ. ಈ ಹುನ್ನಾರಗಳು ಮಹಿಳಾ ಹೋರಾಟವನ್ನು ರಾಜಕೀಯಾರ್ಥಿಕ ನೆಲೆಯ ಹೋರಾಟವನ್ನಾಗಿ ರೂಪುಗೊಳ್ಳಲು ಬಿಡಲೇ ಇಲ್ಲ. ಸ್ತ್ರೀ ಕೇಂದ್ರಿತ ಹೋರಾಟಗಳು ಎಷ್ಟು ಹುಟ್ಟಿಕೊಂಡವೋ ಅವುಗಳಲ್ಲಿ ಬಹುಪಾಲು ಹೋರಾಟಗಳು ಸಾಮಾಜಿಕ ನೆಲೆಯ ತಾರತಮ್ಯಗಳನ್ನೇ ಪ್ರಧಾನವೆಂದು ಪರಿಗಣಿಸಿದವು. ಇಡಿಯಾಗಿ ಪುರುಷರನ್ನು ದ್ವೇಷಿಸುವಷ್ಟು ಆಲೋಚನೆಗಳು ಅವರ ಮನವನ್ನು ಆಕ್ರಮಣ ಮಾಡಿದವು. ಇದು ಮಹಿಳಾ ಪರವಾದ ಎಲ್ಲಾ ಹೋರಾಟಗಳ ಅಜೆಂಡವಾಯಿತು. ಆದರೆ ಇಂತಹ ಸಾಮಾಜಿಕ ತಾರತಮ್ಯದ ಹೊರಗಡೆ ನಿಂತು ದಲಿತ ಕಾವ್ಯಗಳು ಸ್ತ್ರೀಯನ್ನು ರಾಜಕೀಯ ಮತ್ತು ಆರ್ಥಿಕ ಅಸಮಾನತೆ ಹಿನ್ನೆಲೆಯಲ್ಲಿ ಕಟ್ಟಲು ಪ್ರಯತ್ನಿಸಿದವು. ರಾಜಕೀಯ ಮತ್ತು ಆರ್ಥಿಕ ಅಸಮಾನತೆ ಮಹಿಳೆಯನ್ನು ಮೂಲೆಗುಂಪು ಮಾಡಿವೆ. ಈ ಅಸಮಾನತೆ ತೊಲಗಬೇಕು. ಇದು ಎಲ್ಲ ಮಹಿಳಾ ಪರ ಆಲೋಚನೆಗಳ ಜೀವಾಳವಾಗದಿದ್ದರೆ ಹೋರಾಟ ಕೇವಲ ಹಾರಾಟವಾಗುತ್ತದೆ.

ಪ್ರಧಾನ ಸಂಸ್ಕೃತಿ ಮತ್ತು ಆಳುವ ವರ್ಗಗಳು ದಲಿತರನ್ನು ಸಾಮೂಹಿಕವಾಗಿ ಕೊಲೆಗೈದಿವೆ. ಅವರ ಬದುಕುಗಳನ್ನು ನಾಯಿಗಿಂತಲೂ ಕಡೆಯಾಗಿಸಿವೆ. ಇಲ್ಲಿ ಮಹಿಳೆಯ ಪಾಲೆಷ್ಟು, ಪುರುಷನ ಪಾಲೆಷ್ಟು ಎಂದು ನೋಡಲು ಬರುವುದಿಲ್ಲ. ಇಲ್ಲಿ ಯಾರೊಬ್ಬರು ಶೋಷಣೆಗೆ ಒಳಗಾದರೂ ಅವು ಪರೋಕ್ಷವಾಗಿ ಮತ್ತು ಪ್ರತ್ಯಕ್ಷವಾಗಿ ಇನ್ನೊಬ್ಬರವೂ ಆಗಿರುತ್ತಿದ್ದವು. ದೇವನೂರರ 'ಮಾರಿಕೊಂಡವರು' ಕತೆಯಲ್ಲಿ ಬರುವ ಬೀರ ಮತ್ತು ಲಚುಮಿ. ಕುವೆಂಪು ಕಾದಂಬರಿಗಳಲ್ಲಿ ಮೂಡಿಬಂದಿರುವ ಹೊಲೆಯ ಮತ್ತು ಬೇಲರ ಕೂಲಿ ಮಾಡುವ ಹೆಣ್ಣು ಗಂಡುಗಳು, ಬರಗೂರು ರಾಮಚಂದ್ರಪ್ಪ ಅವರ ಕೃತಿಗಳಲ್ಲಿ ಕಾಣಸಿಗುವ ಕೂಲಿಯಾಳುಗಳು ಈ ಸಾಮೂಹಿಕ ಶೋಷಣೆಯ ತೀವ್ರತೆಯನ್ನು ಹಿಡಿದಿಟ್ಟಿವೆ.

ಹಸಿವಿನಿಂದ ಸತ್ತೋರು ಸೈಜುಗಲ್ಲು ಹೊತ್ತೋರು
ವದೆಸಿಕೊಂಡು ವರಗಿದೋರು ನನ್ನ ಜನಗಳು
ಕಾಲು ಕಯ್ಯಿ ಹಿಡಿಯೋರು ಕೈ ಮಡಗಿಸಿಕೊಳ್ಳೋರು
ಭಕ್ತರಪ್ಪ ಭಕ್ತರೋ ನನ್ನ ಜನಗಳು
ಹೊಲವನುತ್ತು ಬಿತ್ತೋರು ಬೆಳೆಯ ಕುಯ್ದು ಬೆವರೋರು
ಬಿಸಿಲಿನಲಿ ಬೇಯೋರು ನನ್ನ ಜನಗಳು
ಬರಿಗೈಲೆ ಬಂದೋರು ಉಸ್ಸೆಂದು ಕೂತೋರು
ಹೊಟ್ಟೆ ಬಟ್ಟೆ ಕಟ್ಟಿದೋರು ನನ್ನ ಜನಗಳು[೪೪]

ಇಲ್ಲಿ ಯಾರ ದುಡಿಮೆಯ ಪಾಲು ಎಷ್ಟು ಎಂದು ನೋಡಿದರೆ ಮಾರುಕಟ್ಟೆ ಲೆಕ್ಕಾಚಾರವಾದೀತು. ಇಲ್ಲಿ ಶ್ರಮದ ನೆಲೆಗಳ ಶೋಧವಿದೆ. ಈ ಕವನದಲ್ಲಿರುವ 'ನನ್ನ ಜನಗಳು' ಎಂಬ ಬಹುವಚನ ರೂಪವೇ ಪುರುಷ ಮತ್ತು ಮಹಿಳೆಯನ್ನು ಒಂದೇ ಹಿಡಿಯಲ್ಲಿ ಇಟ್ಟು ನೋಡಿದೆ. ಹಾಗೆಯೇ ಇಲ್ಲಿ ಅನಾವರಣಗೊಂಡಿರುವ ದುಡಿಮೆಯ ನೆಲೆಗಳು ಪುರುಷನವೋ, ಮಹಿಳೆಯವೋ ಎಂದು ವಿಭಾಗಿಸಲು ಹೋದರೆ ಅದು ಯಾಂತ್ರಿಕವಾಗುತ್ತದೆ. ಈ ಎಲ್ಲಾ ದುಡಿಮೆಯ ನೆಲೆಗಳಲ್ಲಿ ಇಬ್ಬರ ಪಾತ್ರವೂ ಸಮಾನವಾಗಿರುತ್ತದೆ ಮತ್ತು ದುಡಿಮೆಯ ನೆಲೆಗಳಲ್ಲಿ ನಡೆಯುವ ಶೋಷಣೆಯೂ ಸಮಾನವಾಗಿರುತ್ತದೆ.

"ದಲಿತರ ಸಮಸ್ಯೆ ಎಂಬುದು ಕೇವಲ ಜಾತಿಯ ವಿಷಯಕ್ಕೆ ಸೀಮಿತವಾದುದಲ್ಲ, ಅದರ ಹಿಂದೆ ಬಲವಾದ ಆರ್ಥಿಕ ಆಯಾಮವಿದೆ"[೪೫] ಎಂಬುದನ್ನು ಬಹುಪಾಲು ಹೋರಾಟದ ಹಾಡುಗಳು ಮತ್ತು ದಲಿತ ಕಾವ್ಯಗಳು ಸಾಬೀತುಪಡಿಸಿವೆ. ಆರ್ಥಿಕ ಹಿಂಜರಿಕೆಯೇ ದಲಿತರು ಕೂಲಿ, ಜೀತಗಳಲ್ಲಿ ಬದುಕುವಂತಾಯಿತು. ದಲಿತರು ಮಾಡುವ ಪ್ರತಿಯೊಂದು ದುಡಿಮೆಯ ಹಿಂದೆ ಎರಡೂ ಕೈಗಳ ಸಮಬಲವಿದೆ. ಪುರುಷನ ಕೆಲಸದ ಹಿಂದೆ ಮಹಿಳೆಯ ಬಲವೂ, ಮಹಿಳೆಯ ಕೆಲಸದ ಹಿಂದೆ ಪುರುಷನ ಬಲವೂ ಅಡಗಿರುತ್ತದೆ. ಅದರಲ್ಲೂ "ದಲಿತ ಕುಟುಂಬಗಳ ಆದಾಯ ಮತ್ತು ನಿರ್ವಹಣೆ ಮುಖ್ಯವಾಗಿ ಮಹಿಳೆಯರನ್ನೇ ಅವಲಂಬಿಸಿದೆ."[೪೬] ಆದರೆ ಈ ಎರಡೂ ಬಲವೂ ಭೂಮಾಲೀಕರಿಗಾಗಿಯೇ ವಿನಿಯೋಗವಾಗುತ್ತಿರುವುದು ದುರದೃಷ್ಟಕರ. ಇದನ್ನು ಒಂದು ಕವನ ಹೀಗೆ ಪ್ರಸ್ತುತಪಡಿಸುತ್ತಿದೆ.

ಕಿರ್ರನೆ
ಕಾಕಾಗ್ಯೆಯುವ
ಕಾಗೆಗಳ ಸದ್ದಿಗೆ
ನಮ್ಮಪ್ಪ ಎದ್ದು, ಅಮ್ಮೀ

ಎಂದಾಗ ಬೆಳ್ಳನೆ
ಬೆಳಕಾಗುತ್ತದೆ.
ಹಾಸಿಕೊಂಡಿದ್ದನ್ನೇ ಮತ್ತೆ ಹೊದ್ದು
'ಕರು ಕಿತ್ತು ಕೊಂಡಾತು' ಎಂದು
ದೌಡಾಯಿಸುತ್ತಾನೆ
ಗೌಡರ ಹಟ್ಟಿಗೆ

ಅವ್ವ ಕೈ ಹಿಡಿದವಳಲ್ಲವೇ
ಹಿಂದೆ ದುಂಬಾಲು ಬೀಳುತ್ತಾಳೆ
ಕೊಟ್ಟಿಗೆ ಗುಡಿಸಿ
ಸಾರಿಸಿ ಗೊಬ್ಬರ ಹೊತ್ತ ಬಳಿಕ
ಹಲ್ಲುಜ್ಜಿ
ಗಿಂಜಿಕೊಂಡಾಗ
ಮಡಿಲು ತುಂಬುವುದು
ತಂಗಳು ಮುದ್ದೆ[೪೭]

ಇದು ದಲಿತರ ಕೌಟುಂಬಿಕ ದುಡಿಮೆಯ ಸ್ಥಿತಿ. ಇಡೀ ಕುಟುಂಬವೇ ತನ್ನದಲ್ಲದ ಮನೆಯ ದುಡಿಮೆಗಾರರು. ತಂಗಳು ಮುದ್ದೆಗಾಗಿ ಹಗಲಿರುಳೂ ದುಡಿಯುವ ದಲಿತರ ಶ್ರಮವೆಲ್ಲ ಬೇರೆಯವರ ಉದ್ಧಾರಕ್ಕಾಗಿಯೇ ಸವೆದು ಹೋಗುತ್ತಿರುವುದು ವಿಷಾದನೀಯ. ದಲಿತರು ತಮ್ಮ ದುಡಿಮೆಯ ನೆಲೆಗಳನ್ನು ಅನಾವರಣಗೊಳಿಸುವಾಗ ಮತ್ತು ಶೋಷಣೆಯ ತೀವ್ರತೆಯನ್ನು ಅಭಿವ್ಯಕ್ತಿಸುವಲ್ಲಿ ಪುರುಷ-ಮಹಿಳೆ ಎಂಬ ಇಬ್ಭಾಗವಿಲ್ಲದೆ ಅಭಿವ್ಯಕ್ತಿಸಿದ್ದಾರೆ. ಮಹಿಳೆ ಸಮಾನಳಾಗಿ ಬಾಳಬೇಕೆಂದು ಎಷ್ಟೋ ದಲಿತರ ಹಾಡುಗಳು ಒತ್ತಿ ಹೇಳಿವೆ. ಹೋರಾಟದ ಹಾಡು ಸಮಾನತೆಗಾಗಿ ಕಟ್ಟುವ ಆಶಯ ಹೀಗಿದೆ.

ಸಮಾನತೆಯ ಸಂಸ್ಕೃತಿ ಇಂದು ನಮಗೆ ಬೇಕಿದೆ
ಹೆಣ್ಣು ಪೂರ್ಣ ರೀತಿಯಲ್ಲಿ ಮುಕ್ತಳಾಗಬೇಕಿದೆ
ಹುಟ್ಟಿನಿಂದಲೇ ಹೆಣ್ಣಿಗೇಕೆ ಈ ಭೇದವು
ಮಗನಾದ್ರೆ ವಂದನೆ ಮಗಳಾದ್ರೆ ನಿಂದನೆ
ಹೆಣ್ಣು ಭಾರವೆಂಬ ನಿಮಗೆ ನಮ್ಮ ಧಿಕ್ಕಾರವು
....

ಹೆಸರಿನ ಬದಲಾವಣೆ ವಧುವಿಗೇಕೆ ಸೀಮಿತ
ಅಲ್ಲಿ ಇಲ್ಲಿ ಎಲ್ಲೆಲ್ಲೂ ಗಂಡಿಗೇಕೆ ಆದ್ಯತೆ
ಪ್ರಧಾನತೆಯ ಸಂಸ್ಕೃತಿ ನಮಗೆ ಬೇಡವಾಗಿದೆ
ಸಮಾನತೆಯ ಸಂಸ್ಕೃತಿ ಇನ್ನು ಮುಂದೆ ಬೇಕಿದೆ[೪೪]

ಜಗತ್ತಿನ ಹಲವು ಶೋಷಣೆಗಳನ್ನು ಕುರಿತು ಮಾತನಾಡುವ ಮಾತುಗಾರರಿದ್ದಾರೆ. ಇವರಿಗೆ ತಮ್ಮ ಮನೆಗಳಲ್ಲಿ ದಿನನಿತ್ಯ ನಡೆಯುತ್ತಿರುವ ಮಹಿಳೆಯ ಬಗೆಗಿನ ಶೋಷಣೆಗಳು ಕಣ್ಣಿಗೆ ಬೀಳುವುದಿಲ್ಲ. ಸ್ವಾತಂತ್ರ್ಯ ಎನ್ನುವ ಪದ ಹುಟ್ಟಿದ್ದೇ ಪುರುಷರಿಗಾಗಿಯೇ ಇರಬೇಕು. ಆದ್ದರಿಂದಲೇ ಎಲ್ಲಾ ವಲಯಗಳಲ್ಲಿ ಅವರಿಗೇ ಮೊದಲ ಆದ್ಯತೆ. ನಿತ್ಯ ಪಠ್ಯಗಳ ಮೂಲಕ ಹಾಗೂ ಭಾಷಣಗಳ ಮೂಲಕ ರಾಣಿ ಅಬ್ಬಕ್ಕದೇವಿ, ಝಾನ್ಸಿರಾಣಿ ಲಕ್ಷ್ಮಿಬಾಯಿ, ಜೀಜಾಬಾಯಿ, ನಾಟ್ಯರಾಣಿ ಶಾಂತಲೆ, ಅತ್ತಿಮಬ್ಬೆ, ಚಾಂದಬೀಬಿ, ಬೆಳವಾಡಿ ಮಲ್ಲಮ್ಮ, ಕಿತ್ತೂರುರಾಣಿ ಚೆನ್ನಮ್ಮ ಮುಂತಾದವರ ಸಾಧನೆಗಳನ್ನು ಕೊಂಡಾಡುವ ಮಂದಿಗೆ ಸಮಾನತೆ ಎಂಬುದು ಆಗದ ಮಾತು. ಇಂತಹ ಅಸಮಾನತೆಯನ್ನು ಧಿಕ್ಕರಿಸುತ್ತಲೇ ಸಮಾನತೆಯ ಸಂಸ್ಕೃತಿಗಾಗಿಯೇ ದಲಿತ ಕಾವ್ಯ ತನ್ನ ಅಭಿವ್ಯಕ್ತಿಯನ್ನು ಮುಡಿಪಾಗಿಟ್ಟಿದೆ. ಯಾವುದೇ ಒಂದು ಸಂಘಟನೆ ತನ್ನ ಹೋರಾಟದ ಹಾದಿಯಲ್ಲಿ ಮಹಿಳೆಯರನ್ನು ಕಡೆಗಣಿಸಿದರೆ ಅದರ ಹೋರಾಟ ಯಶಸ್ವಿಯಾಗಲು ಸಾಧ್ಯವಿಲ್ಲ. ಇದನ್ನು ದಲಿತ ಕವಿಗಳು ಮನಗಂಡರು. ಏಕೆಂದರೆ ಪುರುಷ ಮಹಿಳೆಯ ಶೋಷಣೆಯ ನೆಲೆಗಳು ಇಲ್ಲಿ ಒಂದೇ ಆಗಿದ್ದವು. ಆದಕಾರಣ ಇಬ್ಬರೂ ಜೊತೆಗೂಡಿಯೇ ಸಂಘಟಿತರಾಗಬೇಕೆಂಬ ಮನೋಭಾವ ತಾಳಿದರು.

ದಲಿತ ಚಳುವಳಿಗಳಲ್ಲಿ ಮತ್ತು ಹೋರಾಟಗಳಲ್ಲಿ ಮಹಿಳೆಯರ ಪಾತ್ರ ತೀರಾ ಕಡಿಮೆಯೆಂಬುದು ಮೇಲ್ನೋಟದ ಸತ್ಯ. ಏಕೆಂದರೆ ದಲಿತ ಮಹಿಳೆಯರು ಹೋರಾಟದ ಬೇರೆ ಬೇರೆ ಹಂತಗಳಲ್ಲಿ ತೊಡಗಿಸಿಕೊಂಡಿರುವುದು ಅಷ್ಟೇ ಸತ್ಯ. ಆದರೆ ಅವರ ಸಾಮಾಜಿಕ ವಲಯದಲ್ಲಿನ ಅನೇಕ ಕಾರಣಗಳು ಅವರನ್ನು ಚಳುವಳಿಯಲ್ಲಿ ನೇರವಾಗಿ ಭಾಗವಹಿಸಲು ತಡೆ ಒಡ್ಡಿರಲೂಬಹುದು. ಇವುಗಳ ನಡುವೆಯೂ ಅನೇಕ ಮಹಿಳೆಯರು ಸಂಘಟನೆಯಲ್ಲಿ ತೊಡಗಿಸಿಕೊಂಡು ಸಮಾನತೆಗಾಗಿ ಶ್ರಮಿಸಿರುವ ನಿದರ್ಶನಗಳು ಸಾಕಷ್ಟು ಇವೆ. ದಲಿತ ಹೋರಾಟದಲ್ಲಿ ದಲಿತ ಮಹಿಳೆಯರ ಪಾತ್ರ ಕಡಿಮೆ ಇಲ್ಲ. ಇದರಿಂದಾಗಿಯೆ ದಲಿತ ಕಾವ್ಯಗಳು ರಾಜಕೀಯ, ಸಾಮಾಜಿಕ, ಆರ್ಥಿಕ ನೆಲೆಯಲ್ಲಿ ಇಬ್ಬರ ಶೋಷಣೆಯ ನೆಲೆಗಳನ್ನು ಅನಾವರಣಗೊಳಿಸಿ ಹೋರಾಟದ ಹಾದಿಯ ಅನಿವಾರ್ಯತೆಯನ್ನು ಕಟ್ಟಿಕೊಟ್ಟಿವೆ.

ದಲಿತರ ಮೇಲಿನ ದೌರ್ಜನ್ಯದಲ್ಲಿ ಲೈಂಗಿಕ ಶೋಷಣೆಯು ಅತ್ಯಂತ ಪ್ರಧಾನವಾದುದು. ಈ ಶೋಷಣೆಗೆ ಹಲವು ಮುಖಗಳಿವೆ. ಈ ಮುಖಗಳಿಗೆ ತುತ್ತಾಗಿದ್ದು ಪ್ರಮುಖವಾಗಿ ದಲಿತ ಮಹಿಳೆ. ಧರ್ಮ, ಜಾತಿ, ವರ್ಣ, ವರ್ಗಗಳು ಮಹಿಳೆಯನ್ನು ಲೈಂಗಿಕ ದೌರ್ಜನ್ಯಕ್ಕೆ

ಗುರಿಮಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ. ಧಾರ್ಮಿಕವಾಗಿ ನಡೆಯುವ ಲೈಂಗಿಕ ಶೋಷಣೆಯು ಧರ್ಮದ ಮುದ್ರೆಯನ್ನು ಒತ್ತಿಕೊಂಡೇ ದೇವದಾಸಿ ಪದ್ಧತಿ, ಬೆತ್ತಲೆ ಸೇವೆ ಮುಂತಾದವುಗಳನ್ನು ಹುಟ್ಟುಹಾಕಿತು. ಊಳಿಗಮಾನ್ಯಶಾಹಿಯ ಭೂಮಾಲೀಕ ವರ್ಗವಂತೂ ಕೂಲಿ ಹೆಣ್ಣುಗಳನ್ನು ತನ್ನ ಸ್ವೇಚ್ಛಾಚಾರಕ್ಕೆ 'ಆಜನ್ಮಸಿದ್ದ ಹಕ್ಕು' ಎಂಬಂತೆ ಕಾಮತೃಷೆಗಾಗಿ ಬಳಸಿಕೊಂಡಿತು. ಈ ಎರಡೂ ಶೋಷಣೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಇವುಗಳ ಜೊತೆಗೆ ಅಭಿವೃದ್ಧಿಯ ಹೆಸರಿನಲ್ಲಿ ಹುಟ್ಟಿಕೊಂಡ ಬಂಡವಾಳಶಾಹಿ ಪದ್ಧತಿ ತನ್ನ ಬಂಡವಾಳದ ಮೂಲಕ ಯಾವ ಎಗ್ಗಿಲ್ಲದೆ ಮಹಿಳೆಯರನ್ನು ಲೈಂಗಿಕವಾಗಿ ಬಳಸಿಕೊಳ್ಳುತ್ತಲೆ ಬರುತ್ತಿದೆ. ದುಡಿಯುವ ಮಹಿಳೆ ತನ್ನ ದುಡಿಮೆಯ ಸ್ಥಳಗಳಲ್ಲಿ ದಿನನಿತ್ಯ ಶೋಷಣೆಗೆ ಒಳಗಾಗುತ್ತಿದ್ದಾಳೆ. ಈ ಎಲ್ಲಾ ಶೋಷಣೆಯನ್ನು ಕೇವಲ ಮಹಿಳೆಗಷ್ಟೇ ಸೀಮಿತ ಮಾಡಲು ಬರುವುದಿಲ್ಲ. ಇದನ್ನು ಒಂದು ಹೋರಾಟದ ಹಾಡು ನಿರೂಪಿಸುವುದು ಹೀಗೆ,

> ....
>
> ಗಂಡ ಹೆಂಡತಿ ಕೂಡಿ ಸಿನಿಮಾ ನೋಡಲು ಹೋದ್ರೆ
>
> ರಕ್ಷಕ ಭಟರೆಂದು ಭಕ್ಷಕರು ಬಂದುಬಿಟ್ರು
>
> ಖಾಕಿ ಬಟ್ಟೆಯವರು ಕನಿಕರವೇ ಇಲ್ಲದವರು
>
> ನಿನ ಗಂಡನಾ ಕೊಂದರೊ ತಂಗ್ಯವ್ವ
>
> ನಿನ ಮಾನ ದೋಚಿದರೊ ತಂಗ್ಯವ್ವ[67]

ಇಲ್ಲಿ ಶೋಷಣೆಗೆ ಒಳಗಾಗಿರುವವರು ಮತ್ತು ಶೋಷಿಸಿದವರು ಇಬ್ಬರೂ ಇದ್ದಾರೆ. ಆದರೆ ಶೋಷಕರ ಮುಖವಾಡ ಮಾತ್ರ ಬೇರೆ ಇದೆ. ಇಲ್ಲಿ 'ರಕ್ಷಕ ಭಟರೆಂದು ಭಕ್ಷಕರು ಬಂದುಬಿಟ್ರು' ಎಂದು ಕವನ ನಿರೂಪಿಸುತ್ತಿದೆ. ಅಂದರೆ ಇಲ್ಲಿ ಸರಕಾರಿ ನೇಮಿತ ರಕ್ಷಕ ಪಡೆ ಇದೆ. ಆದರೆ ಆ ರಕ್ಷಕ ಪಡೆ ಬಡವರ ಪಾಲಿನ ಭಕ್ಷಕರೇ ಹೊರತು ರಕ್ಷಕರಲ್ಲ ಎಂಬುದನ್ನು ಘಟನೆ ಮೂಲಕ ಕಾವ್ಯ ಸಾಬೀತುಪಡಿಸುತ್ತಿದೆ. ಏಕೆಂದರೆ ಗಂಡ ಹೆಂಡತಿ ಸಿನಿಮಾ ನೋಡಲು ಹೋದರೆ ಇವರು ಗಂಡನನ್ನು ಕೊಂದು, ಆ ಹೆಣ್ಣಿನ ಮಾನ ಕಳೆದಿದ್ದಾರೆ. ಇದನ್ನು ನೋಡಿದರೆ ಸರಕಾರಿ ಅಧೀನದ ಕಾನೂನು, ನ್ಯಾಯ, ಪೊಲೀಸ್, ಎಲ್ಲವೂ ಬಡವರ ಪಾಲಿಗೆ ಶೋಷಿಸುವ ಮತ್ತೊಂದು ಮುಖಗಳೇ ಹೊರತು ಬೇರೇನೂ ಅಲ್ಲ. ಇವು ಶೋಷಕರ ಮುಖವಾಡಗಳು. ಇವರಿಂದ ಶೋಷಣೆಗೊಳಗಾದವರು ಅದರ ತೀವ್ರತೆಯಲ್ಲೇ ಬದುಕು ಮುಗಿಸುವಂತಾಗಿದೆ. ಗಂಡನನ್ನು ಕಳೆದುಕೊಂಡ ಹೆಣ್ಣು ದಿಕ್ಕಿಲ್ಲದ ಪರದೇಶಿಯಾಗುತ್ತಾಳೆ. ಇದರೊಂದಿಗೆ ಆ ಹೆಣ್ಣಿನ ಮೇಲಿನ ಲೈಂಗಿಕ ದೌರ್ಜನ್ಯವು ಇಡೀ ಕುಟುಂಬದ ಮೇಲೆ ವ್ಯತಿರಿಕ್ತವಾದ ಪರಿಣಾಮವನ್ನು ಬೀರುತ್ತದೆ. ಇಲ್ಲಿ ಯಾರ ಪಾಲು ಎಷ್ಟು ಎಂದು ನೋಡಲು ಬರುವುದಿಲ್ಲ. ಶೋಷಣೆ ಎಂಬುದೇ ದಲಿತರ ಸಮಗ್ರ ಬದುಕನ್ನು

ನಾಶಮಾಡಿಬಿಡುತ್ತದೆ ಎಂಬುದಷ್ಟೇ ಸತ್ಯ. ಮೇಲ್ವರ್ಗಗಳು, ಬಂಡವಾಳಶಾಹಿಗಳು, ಭೂಮಾಲೀಕರು ಮುಂತಾದವರಿಂದ ಅಷ್ಟೇ ಅಲ್ಲ. ಖಾಕಿ, ಖಾವಿ, ಖಾದಿಗಳಿಂದಲೂ ಕೂಡ ದಲಿತರ ಮೇಲಿನ ದೌರ್ಜನ್ಯ ತಪ್ಪಿದ್ದಲ್ಲ ಎಂಬುದನ್ನು ದಲಿತ ಕಾವ್ಯ ಮತ್ತು ಹೋರಾಟದ ಹಾಡುಗಳು ತಮ್ಮ ಅಭಿವ್ಯಕ್ತಿಯಲ್ಲಿ ನಿರೂಪಿಸಿವೆ. ಅದಕ್ಕೆ ಅವು ಕರೆಕೊಡುವ ರೀತಿ ಹೀಗಿದೆ,

ಸೆರಗು ಸೊಂಟಕ್ಕೆ ಸುತ್ತಿಕೋ ತಂಗ್ಯವ್ವ
ಕುಡುಗೋಲು ಕೈಗೆತ್ತಿಕೋ ತಂಗ್ಯವ್ವ
ಹಸುಗೂಸು ಅತ್ತರೂ ಹಾಲು ಉಣಿಸಲು ಬಿಡರು
ನಡು ಮುರಿದು ಹೋದರೂ ನಾಟ್ಯಾಕು ಅಂತಾರೆ
ದಿನವಿಡೀ ನೀ ದುಡಿದರೂ ತಂಗ್ಯವ್ವ
ದಿನವೆಲ್ಲ ಉಪವಾಸ ತಂಗ್ಯವ್ವ
....
ದೋಚುವ ದೊರೆಗಳು ಇರುವಷ್ಟು ಕಾಲವು
ಗಂಡಸರ ಹಿರಿತನದ ಬಂಧನವು ಇರೋತನಕ

ಉತ್ಪತ್ತಿಯಲಿ ನಿನಗೆ ಹಕ್ಕು ಸಿಗುವ ತನಕ
ನಿನ ಬಾಧೆ ತೀರೊಲ್ಲ ನಿನ ಗೋಳು ತಪ್ಪೊಲ್ಲ
ಬಂಧನವ ನೀ ಕಳಚಿಕೋ ತಂಗ್ಯವ್ವ
ಬಂದೂಕು ಕೈಗೆತ್ತಿಕೋ ತಂಗ್ಯವ್ವ[೫೦]

"ಪರಿಸ್ಥಿತಿಯನ್ನು ಬಿಂಬಿಸುವುದು ಮತ್ತು ಪರ್ಯಾಯವನ್ನು ರೂಪಿಸುವುದು ಈ ಹಾಡುಗಳ ಪ್ರಧಾನ ಜಾಯಮಾನ. ಮಾಡುವುದು ಮತ್ತು ಆಗುವುದು ಎರಡೂ ಜೊತೆ ಜೊತೆಯಲ್ಲೇ ನಡೆಯುವ ಪ್ರಕ್ರಿಯೆಗಳು. ಇರುವಿಕೆಯ ಸಮಸ್ಯೆಯನ್ನು ಮತ್ತು ಆಗುವಿಕೆಯ ಸವಾಲನ್ನು ಒಟ್ಟೊಟ್ಟಿಗೇ ಇಲ್ಲಿಯ ಹಾಡುಗಳು ಬೆಸೆಯುತ್ತವೆ. ಅಥವಾ ಈ ಎರಡೂ ಅಂಶಗಳು ಪ್ರತ್ಯೇಕ ಪ್ರತ್ಯೇಕವಾಗಿ ನಿಲ್ಲದೆ ಒಂದರೊಳಗೊಂದು ಕೂಡಿರುತ್ತವೆ."[೫೧]

ಪುರುಷರಾಗಲಿ, ಮಹಿಳೆಯರಾಗಲೀ ತಮ್ಮ ದಬ್ಬಾಳಿಕೆ ಕೊನೆಗೊಳಿಸಿಕೊಳ್ಳಬೇಕಾದರೆ ಬಂದೂಕಿನ ಅನಿವಾರ್ಯತೆ ಇದೆ ಎಂಬುದನ್ನು ಕಾವ್ಯ ಒತ್ತಿ ಹೇಳುತ್ತಿದೆ. ಇದು ಉತ್ಪತ್ತಿಯನ್ನು ಕಿತ್ತು ತಿಂದ ಗೋಳಿನ ಕಥೆ. ಈ ಉತ್ಪತ್ತಿಯಲ್ಲಿ ಇಬ್ಬರಿಗೂ ಸಮಾನ ಸ್ಥಾನ. ಭೂಮಿ ಉತ್ತು ಬಿತ್ತು ಹಸನು ಮಾಡಿ ಬೆಳೆ ತೆಗೆಯುವವರು ಇವರು. ಬೆಳೆದ ಬೆಳೆಯ ತಿನ್ನುವವರು ಬೇರೆಯವರು. ಈ ತಾರತಮ್ಯದ ಸಾಮಾಜಿಕ ನೆಲೆಗಳನ್ನು ಅನಾವರಣಗೊಳಿಸುತ್ತಲೇ

ದಲಿತ ಕಾವ್ಯ ಹೋರಾಟಕ್ಕೆ ಕರೆಕೊಡುತ್ತದೆ. ಅದರಲ್ಲೂ ಮಹಿಳೆ ಹೋರಾಟದ ಮುಂಚೂಣಿಗೆ ಬರಬೇಕೆಂದು ಒತ್ತಾಯಿಸುತ್ತದೆ. ಬಹುಶಃ ಮಹಿಳೆಯನ್ನು ಹೋರಾಟದ ಮುಂಚೂಣಿಗೆ ತರಲೇಬೇಕೆಂಬ ತೀವ್ರ ಸಂಕಲ್ಪವನ್ನು ತೊಟ್ಟಿದ್ದು ದಲಿತ ಸಂಘಟನೆಗಳೇ ಮೊದಲು ಇರಬಹುದು.

ಬರುವುದು ನಮ್ಮ ಜನಗಳ ದಂಡು
ಘೋಷಣೆ ಹಾಕುತ ನಿಮ್ಮ ಬಳಿ
ಕೈಗೆ ಎಟುಕದ ಬಾಯಿಗೆಟುಕದ
ನೀವು ಕೊಡುವ ಕೂಲಿ

ಕಲ್ಲು ಮುಳ್ಳುಗಳ ತುಳಿದು ಬರಲಿದೆ
ಹರಿದ ಬಟ್ಟೆ ತೊಟ್ಟು
ಬಿಸಿಲು ಸುರಿದರೂ ಹರಿದು ಬರುವುದು
ತಾಯಂದಿರ ಹಿಂಡು
ಎಡವಿದ ಕಾಲ್ಗಳ ಸರಿಗುರಿಪಡಿಸಿ
ಬುದ್ಧಿಯ ಬೆವರಲಿ ಅದ್ದುತಲಿ
ಕಾಡು ಮೇಡುಗಳ ಗೂಢಲೋಕದಲೂ
ಕೈಗಳ ಜೊತೆ ತಲೆ ಎತ್ತರಿಸಿ[೫೨]

ದುಡಿಯುವ ಪುರುಷ ಮತ್ತು ಮಹಿಳೆ ಇಬ್ಬರೂ ಕೂಡಿ ಹೋರಾಡಬೇಕಾದ ಅನಿವಾರ್ಯತೆಯನ್ನು ಈ ಕವನ ಸ್ಪಷ್ಟಪಡಿಸುತ್ತಿದೆ. ಹರಿದ ಬಟ್ಟೆಯಲ್ಲಿಯೇ ಕಲ್ಲು ಮುಳ್ಳು ತುಳಿದು ನ್ಯಾಯ ಕೇಳುವ ಈ ಸಮುದಾಯ ಪುರುಷ ಮಹಿಳೆಯೆನ್ನದೆ ಒಂದಾಗಬೇಕೆಂದು ಕರೆ ಕೊಡುತ್ತಿದೆ. ಏಕೆಂದರೆ ಅನ್ಯಾಯಕ್ಕೆ ನ್ಯಾಯ ಸಿಗಲು ಕೋರ್ಟು, ಕಛೇರಿ, ಕಾನೂನು, ನ್ಯಾಯಾಲಯ, ಪೊಲೀಸ್ ಎಲ್ಲಾ ಇವೆ ಎಂದು ನಂಬಿಸಲಾಗಿದೆ. ಆದರೆ ಇವು ಜನಸಾಮಾನ್ಯರಿಗೆ ಯಾವತ್ತೂ ನಿಲುಕುವುದಿಲ್ಲ. ಯಾವಾಗಲೂ ಉಳ್ಳವರ ಗಾಣಕ್ಕೆ ತಿರುಗುವ ಎತ್ತುಗಳಂತೆ ಇವು. ಸಮಾನತೆಯ ಬಾಳು ಬರಬೇಕಾದರೆ ಕ್ರಾಂತಿಯಾಗಬೇಕು. ಆ ಕ್ರಾಂತಿ ಶಾಂತಿ ಮಂತ್ರದ ಉಚ್ಚಾರಣೆಯಿಂದ ಸಾಧ್ಯವಿಲ್ಲ. ಕಳೆ ಕೀಳುವ ಕೈಗಳು ಕುಡುಗೋಲನ್ನೇ ಅಸ್ತ್ರವಾಗಿ ಬಳಸಿಕೊಳ್ಳಬೇಕು ಮತ್ತು ಹೊಲವನುತ್ತು ಬಿತ್ತುವ ಕೈಗಳಲ್ಲಿ ಬಂದೂಕು ಬರಬೇಕು. ಇದು ಎಷ್ಟೋ ದಲಿತ ಹಾಡುಗಳ ಜೀವಾಳ. ಅದಕ್ಕೆ ಗಂಡು ಹೆಣ್ಣು ಕೂಡಿಯೇ ಹೋರಾಟದ ಕಹಳೆ ಊದಬೇಕೆನ್ನುತ್ತದೆ ದಲಿತ ಕಾವ್ಯ. ಆದ್ದರಿಂದಲೆ ಗುಡಿಸಲಿನಲ್ಲಿ ಅವಿತು ಕುಳಿತ ತಾಯಿ, ತಂಗಿಯನ್ನು ಸಂಘಟನೆಯಲ್ಲಿ ಒಂದಾಗಲು ದಲಿತ ಕವಿಗಳು ಕರೆಕೊಡುತ್ತಾರೆ.

ಸಂಘಟನೆಯಾಗುವ ದಲಿತ ಪುರುಷ ಮಹಿಳೆಯನ್ನು ಇಬ್ಬಾಗ ಮಾಡುವ ತಂತ್ರ ಮೇಲ್ವರ್ಗಕ್ಕೆ ಗೊತ್ತಿದೆ. ಅದಕ್ಕೆ ಅದು ಬಂದೂಕಿಗಿಂತ ರಾಜಕೀಯ ಅಧಿಕಾರ ಮುಖ್ಯ ಎಂದು ನಂಬಿಸುತ್ತದೆ. ಏಕೆಂದರೆ ದಲಿತರು ಅಧಿಕಾರ ಚುಕ್ಕಾಣಿ ಹಿಡಿಯುವುದು ಕಷ್ಟ ಎಂಬುದು ಅವರಿಗೆ ತಿಳಿದಿದೆ. ಅದಕ್ಕಾಗಿ 'ಓಟಿನಿಂದ ಬದುಕು ಬದಲಾವಣೆ ಸಾಧ್ಯ' ಎಂದು ನಂಬಿಸುತ್ತದೆ. ಇಂತಹ ಹುನ್ನಾರ ನಡೆಸುವವರಿಗೆ ದಲಿತ ಕಾವ್ಯ ಕೊಡುವ ಉತ್ತರ ಹೀಗಿದೆ;

ಬದುಕಿನ ಬಯಲಾಗ ನನ್ನವರು ।ಅಣ್ಣ।
ಓಟು ಕೊಟ್ಟಾರ ನನ್ನವರು
ಬದುಕಿನ ಬಯಲಾಗ ಓಟು ಕೊಟ್ಟಾರ
ಭಾಷಣ ಪಡದಾರ ನನ್ನವರು

ಓಟನ್ನ ನಂಬ್ಯಾರ ನನ್ನವರು ।ತಮ್ಮ।
ಎತ್ತಂಗ ದುಡುದಾರ ನನ್ನವರು
ಓಟನ್ನ ನಂಬ್ಯಾರ ಎತ್ತಂಗ ದುಡುದಾರ
ದಿಕ್ಕೆಟ್ಟು ತಿರುಗ್ಯಾರ ನನ್ನವರು
....[೫೩]

ಓಟು ದುಡಿಯುವವರಿಗೆ ಕೊಡುವ ಲಾಭವನ್ನು ಮೇಲಿನ ಕಾವ್ಯದ ಸಾಲುಗಳು ಹಿಡಿದಿಟ್ಟಿವೆ. ಎತ್ತಿನ ದುಡಿಮೆಯಲ್ಲಿ ಒಡೆಯನ ಬಾರುಕೋಲು ಕೆಲಸ ಮಾಡುವಂತೆ ದಲಿತರ ಓಟಿನ ಹಿಂದೆ ಭಾಷಣಗಳು ಕೆಲಸ ಮಾಡುತ್ತವೆ. ಆದರೆ ಭಾಷಣ ಕೇವಲ ಭರವಸೆಗಳಿಗಷ್ಟೆ ಸೀಮಿತ. ಇದು ದಲಿತರ ಬದುಕನ್ನು ಹಸನುಗೊಳಿಸುವುದಿಲ್ಲ ಎಂಬುದನ್ನು ಮೇಲಿನ ಸಾಲುಗಳು ನಿರೂಪಿಸುತ್ತಿವೆ. ಇಂತಹ ಭಾಷಣಗಳ ಹುನ್ನಾರವನ್ನು ಅನೇಕ ದಲಿತ ಕಾವ್ಯಗಳು ಬಯಲು ಮಾಡಿವೆ. ಭಾಷಣ, ದುಡಿಯುವ ಪುರುಷ ಮಹಿಳೆಯನ್ನು ಕುರಿಗಳನ್ನಾಗಿಸಿದೆ. ಈ ಹಿನ್ನೆಲೆಯಲ್ಲಿ ದಕ್ಷಿಣ ಆಫ್ರಿಕಾದ ಡರ್ಬಾನ್‌ನಲ್ಲಿ ನಡೆದ ವರ್ಣಭೇದ ನೀತಿಯನ್ನು ಖಂಡಿಸಿ ಜಾಗತಿಕ ಅಧಿವೇಶನ ನಡೆಯಿತು. ಇದನ್ನು ಕುರಿತ ದಲಿತ ಕಾವ್ಯದ ಪ್ರತಿಕ್ರಿಯೆ ಹೀಗಿದೆ;

ಇವೆಲ್ಲ ಹುಟ್ಟುಹಾಕಿದವರು ಡರ್ಬಾನ್‌ನಲ್ಲಿ ಕುಳಿತು
ಮಾತನಾಡುತ್ತಿದ್ದೀರಿ, ಕೇಳಿ ಮತ್ತು ನೋಡಿ:
ನಾಳೆ ಕೂಡ ನನ್ನ ಕೇರಿ ಅಲ್ಲೇ ಇರುತ್ತದೆ
ಇನ್ನಷ್ಟು ಹೆಸರಾಗುತ್ತೀರಿ ನೀವುಗಳೆಲ್ಲ
ಅಭಿನಂದಿಸುತ್ತೇವೆ ಅದಕ್ಕಾಗಿ ನಾವೆಲ್ಲ
ಮಲ ಮುಕ್ಕಿಸಿಕೊಂಡವರ ಜನಾಂಗವಾಗಿ

....

ವರ್ಣದ ಅಧಿವೇಶನದ
ಸೆಮಿನಾರ್ ಹಕ್ಕಿಗಳೇ, ಆಡದೆ ಉಳಿದ ಮಾತಿದ್ದರೆ
ಭಾಷಣವಿದ್ದರೆ ಕಳುಹಿಸಿಕೊಡಿ; ಕೊಂಡೊಯ್ಯುತ್ತೇನೆ
ನಾನು ತೀರಿಕೊಂಡಾಗ ನನ್ನ ಜೊತೆ[೫೪]

ಪ್ರಜಾಪ್ರಭುತ್ವ ವ್ಯವಸ್ಥೆಯಿಂದ ಎಲ್ಲರಿಗೂ ಸಮಾನ ಸ್ಥಾನಮಾನ ದೊರಕುತ್ತದೆಂಬುದು ಕನಸಿನ ಮಾತಾಯಿತು. ಪ್ರಜಾಪ್ರಭುತ್ವದ ಹೆಸರಿನಲ್ಲಿ ಪ್ರಭುಪ್ರಭುತ್ವ ರೂಪುಗೊಂಡಿದೆ. ಬಂಡವಾಳಶಾಹಿ ಮನಸ್ಥಿತಿಗೆ ಅನುಗುಣವಾಗಿಯೇ ಇಲ್ಲಿನ ಎಲ್ಲಾ ಕಾನೂನುಗಳು ರೂಪಿತಗೊಳ್ಳುತ್ತಿರುತ್ತವೆ. ಹೀಗಿರುವಾಗ ದುಡಿಯುವವರ ಬದುಕು ಹಸನಾಗಲು ಸಾಧ್ಯವಿಲ್ಲ. ಹಣ, ಹೆಂಡದಿಂದ ಇಲ್ಲಿನ ಓಟುಗಳನ್ನು ಖರೀದಿ ಮಾಡಿದ ಆಳುವ ಜನತೆ, ಪ್ರಜಾಪ್ರತಿನಿಧಿಗಳೆಂದು ಹೇಳಿಕೊಳ್ಳುತ್ತಲೆ ತಮ್ಮ ವಂಶ ಪೂರ್ತಿ ಕೂತುಣ್ಣುವಷ್ಟು ಸಂಪತ್ತನ್ನು ಲೂಟಿ ಮಾಡಿ ಸಂಗ್ರಹಿಸುತ್ತಿದ್ದಾರೆ. ದುಡಿಯುವವರಿಗೆ ಕನಿಷ್ಠ ಕೂಲಿಯೂ ಸಿಗದ ಹಾಗೆ ಯಂತ್ರ ನಾಗರೀಕತೆಯನ್ನು ಹೇರಲಾಗುತ್ತಿದೆ. ಇಂತಹ ವ್ಯವಸ್ಥೆಯಲ್ಲಿ ದಲಿತರಿಗೆ ನ್ಯಾಯ ಸಿಗುವುದಾದರೂ ಎಲ್ಲಿ. ಅದಕ್ಕೆ ಅವರು ಹೋರಾಟದ ಮೂಲಕ ಕಾರ್ಮಿಕ ರಾಜ್ಯದ ಕನಸು ಕಾಣುತ್ತಾರೆ.

ಓಟು ಎಲ್ಲರ ಬದುಕನ್ನು ಹಸನು ಮಾಡುತ್ತದೆ ಎಂಬುದು ಈಗಾಗಲೇ ಸುಳ್ಳಾಗಿದೆ. ಇದಿಷ್ಟೇ ಆಗಿದ್ದರೆ ತೊಂದರೆ ಹೆಚ್ಚಿನದೇನೂ ಆಗುತ್ತಿರಲಿಲ್ಲ. ಆದರೆ ಬಂಡವಾಳದ ಸುಲಿಗೆ ಸಂಸ್ಕೃತಿಯು ಮಹಿಳೆಯನ್ನು ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳಲು ಬಳಸಿಕೊಳ್ಳುತ್ತಿದೆ. ಇದರ ಫಲವಾಗಿ ಮಹಿಳೆಯರ ಮಾರಾಟ, ದೇಹ ಪ್ರದರ್ಶನ ಮುಂತಾದವುಗಳ ಮೂಲಕ ಸರಕುಗಳೋಪಾದಿಯಲ್ಲಿ ಅವರನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ. ಇದಕ್ಕೆ ದುಡಿಯುವ ವರ್ಗದ ಮಹಿಳೆಯರು ಬಹಳ ಸುಲಭವಾಗಿ ಬಲಿಯಾದರು. ಇದಕ್ಕೆ ಸ್ವದೇಶಿ ಮತ್ತು ವಿದೇಶಿ ಬಂಡವಾಳಿಗರ ಕೊಡುಗೆ ಅಪಾರ. ಇವರು ತಮ್ಮ ಯಂತ್ರ ನಾಗರಿಕತೆಯಿಂದ ಬಡಜನರ ಬದುಕನ್ನು ಬೀದಿ ಪಾಲು ಮಾಡುತ್ತಿದ್ದಾರೆ. ಈ ಬಗೆಯನ್ನು ದಲಿತ ಕಾವ್ಯ ಬಿಂಬಿಸುವ ರೀತಿ ಹೀಗಿದೆ;

ಬೆಳಕಾದರೂನು ಬೆತ್ತಲೆ ಬಯಸೊ ಕಣ್ಣಿರುವಾಗ
ಗುಡಿಯಾದರೇನಂತೆ ರವಿಕೆ ಸರಿಯಾಗಿದೆಯೇ ಇಣುಕಬೇಕು
ಹೆಣ್ಣ ಬಣ್ಣಗಳೆಲ್ಲಾ ಜಾಗತೀಕರಣಕ್ಕೆ ಸರಕು
ಚರಿತೆ ಸರಿದರೂ ಮತ್ತೆ ಬಡಜನರೇ ಬೇಕು ಬಲಿಗೆ ॥

ಕಾಡು, ನೆಲ, ನೀರೆಲ್ಲಾ ಯಂತ್ರಗಳ ಕೈಸೇರಿ
ದುಡಿದು ತಿನ್ನುವ ಜನರು ಗುಳೆ ಎದ್ದು ಹೋದಾಗ
ಒಂಟಿ ಬಾಣತಿ ಕೂಸು ನಾಯಿ ಬಾಯಿಯ ತುತ್ತು
ಜೀವ ಹನಿ ಹನಿಯಾಗಿ ಕೆರೆಹಳ್ಳ ನಡುಗಿತ್ತು.[೫೫]

ಈ ದೇಶವನ್ನು ಮಹಿಳಾ ಪ್ರಧಾನಮಂತ್ರಿಯೊಬ್ಬರು ಆಳಿದ್ದಾರೆ, ಕೆಲವೊಂದು ರಾಜ್ಯಗಳಲ್ಲಿ ಮಹಿಳಾ ಮುಖ್ಯಮಂತ್ರಿಗಳು ಆಳ್ವಿಕೆ ನಡೆಸುತ್ತಿದ್ದಾರೆ. ಆದರೆ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳು ಮಾತ್ರ ಇನ್ನೂ ಸಂಪೂರ್ಣವಾಗಿ ನಾಶವಾಗಲಿಲ್ಲ. ಹಳ್ಳಿಗಳಲ್ಲಿನ ಗ್ರಾಮ ಪಂಚಾಯತ್ ಅಧ್ಯಕ್ಷೆ ತನ್ನ ಗಂಡನ ಹಿಡಿತದಿಂದ ತಪ್ಪಿಸಿಕೊಳ್ಳಲಾಗುತ್ತಿಲ್ಲ. ತನ್ನ ಪ್ರತಿಯೊಂದು ತೀರ್ಮಾನಕ್ಕೂ ಅವನನ್ನೇ ಕೇಳುವ ಅವಲಂಬಿತನ ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಹಾಗೆಯೇ ಆಳುವ ಪಕ್ಷಗಳ ಕೈಗೊಂಬೆಯಾಗಿ ರಾಜ್ಯಭಾರ ನಡೆಸುವ ಮಹಿಳೆಯರು ಇಲ್ಲಿದ್ದಾರೆ. ಇವರೂ ಕೂಡ ತಮ್ಮ ದನಿಯನ್ನು ಯಾವುದೋ ಮಸೂದೆ ಮಂಡನೆಗೆ ಮೀಸಲಿಡುತ್ತಿದ್ದಾರೆ. ಇದರ ಹೊರತಾಗಿ ಮಹಿಳೆಯರ ಹಕ್ಕು ಬಾಧ್ಯತೆಗಳಿಗೆ ಹೋರಾಡುವ ಮನೋಭಾವ ಇವರಲ್ಲಿಲ್ಲ. ಇಂತಹ ವ್ಯವಸ್ಥೆಯನ್ನು ನಂಬಿ ಓಟಿನಿಂದ ಬದುಕು ಬದಲಾವಣೆಯಾಗುವುದಿಲ್ಲವೆಂಬ ಸತ್ಯ ಸ್ವಾತಂತ್ರ್ಯ ಬಂದ ೬೦ ವರ್ಷಗಳಿಂದಲೇ ಸಾಬೀತಾಗಿದೆ.

ಕಾರ್ಮಿಕ ರಾಜ್ಯ ದಲಿತರ ಕನಸು. ಈ ಕಾರ್ಮಿಕ ಎನ್ನುವ ಪದದಲ್ಲಿಯೇ ದುಡಿಯುವವರೆಲ್ಲರ ಬದುಕು ಅಂಟಿಕೊಂಡಿದೆ. ಇಲ್ಲಿ ಪುರುಷ ಮಹಿಳೆಯರೆಂಬ ಬೇಧವಿಲ್ಲ. ಕಾರ್ಮಿಕ ರಾಜ್ಯ ಎಲ್ಲರಿಗೂ ಸಮಸಮಾಜದಲ್ಲಿ ಬದುಕಲು ಅನುವು ಮಾಡಿಕೊಡುತ್ತದೆಂಬ ನಿಲುವು ದಲಿತ ಕವಿಗಳದು. ಸಧ್ಯದ ದಲಿತರ ಸಾಮಾಜಿಕ ಪರಿಸ್ಥಿತಿಯನ್ನು ಮತ್ತು ದೇಶದ ದೇಶಭಕ್ತರ ಮಾನಾಪಮಾನದ ಪ್ರಶ್ನೆಯನ್ನು ಒಂದು ಕವಿತೆ ಮಂಡಿಸುವ ರೀತಿ ಹೀಗಿದೆ.

ಓ ದೇಶ ನಾಯಕರೆ
ನಾನು, ಎಲ್ಲೋ ಬಿದ್ದ
'ಬಾವುಟ'ದ ಅರಿವೆಯ ಹರಿದು, ತೊಳೆದು
ಬುತ್ತಿಯ ಕಟ್ಟಿಕೊಂಡು
ಊರಿನ ಕಸಗುಡಿಸಲು ಹೊರಟಾಗ
'ಅಯ್ಯಾ ದೇಶಕೆ ಅಪಮಾನ' !
ಎಂದು ನನ್ನೊದ್ದಿರಿ ಹೊಡೆದಿರಿ ಬಡೆದಿರಿ
ಕೈಗೆ ತೋಳ ತೊಡಿಸಿದಿರಿ
ಚಿಂತಿಸಲಾರೆ ಎಂದೆಂದು

ಅದೇ ಬಾವುಟದರಿವೆಯ ಇನ್ನೊಂದು ತುಂಡಿಂದ
ನನ್ನವಳ ತೊಡೆದಡಗಳನ್ನು ಮುಚ್ಚಿರುವೆ

ಓ ದೇಶ ನಾಯಕರೆ
ಓ ದೇಶ ನಾಯಕರೆ
ಕಿತ್ತುಕೊಳ್ಳಿ ನಿಮ್ಮ ದೇಶದ ಮಾನ
ತೋರಿಸಿ ವಿಶ್ವಕ್ಕೆಲ್ಲ
ನಿಮ್ಮ ದೇಶದ ಮಾನ
ಕಣ್ಣುತುಂಬ ನೋಡಲಿ[೫೬]

ದೇಶದ ಮಾನಾಪಮಾನದ ಪ್ರಶ್ನೆ ಒಂದು ಕಡೆ; ಅದೇ ದೇಶದಲ್ಲಿ ಬಡವರ ಸಮಸ್ಯೆ ಮತ್ತೊಂದು ಕಡೆ. ಈ ದೇಶದ ಹೆಮ್ಮೆಯ ಹೆಗ್ಗುರುತು 'ಬಾವುಟ'. ಅದು ಸ್ವಾತಂತ್ರ್ಯ ಬಂದಿದೆ ಎಂಬುದರ ಸಂಕೇತವೂ ಹೌದು. ಅದೇ ಬಾವುಟ ದೇಶಭಕ್ತರಿಗೆ ಪ್ರತಿಷ್ಠೆಯ ಸಂಕೇತ. ದುಡಿವ ಜನತೆಯನ್ನು ಈ ದೇಶ ತಿನ್ನುವ ಅನ್ನಕ್ಕಾಗಿ ಪರದಾಡುವ ಪರಿಸ್ಥಿತಿಯಲ್ಲಿ ನಿಲ್ಲಿಸಿದೆ. ಉಟ್ಟುಕೊಳ್ಳಲು ಬಟ್ಟೆ ಇಲ್ಲದ ಈ ಜನರು ಬಾವುಟದ ಅರಿವೆಯಿಂದ ಮಾನಮುಚ್ಚಲು ಹೋದರೆ ದೇಶಭಕ್ತರಿಂದ ಬೇಕಾದರೆ ಕೊಲೆಗಳೇ ಆಗುತ್ತವೆ. ಇಂತಹ ಮೇಲ್ವರ್ಗದವರ ಮನಸ್ಥಿತಿಗಳನ್ನು ಕಾವ್ಯ ಬಿಚ್ಚಿಟ್ಟಿದೆ. ದೇಶದಲ್ಲಿ ಹೊಟ್ಟೆಗೆ ಊಟವಿಲ್ಲದೆ, ತೊಡಲು ಬಟ್ಟೆಯಿಲ್ಲದೆ ಬದುಕುವ ಜನರ ಬಗ್ಗೆ ಚಿಂತಿಸಲೂ ಆಗದ ಇವರು ದೇಶದ ಪ್ರತಿಷ್ಠೆಯ ಬಗ್ಗೆ ಮಾತನಾಡುತ್ತಾರೆ. ಆದರೆ ಇವರಿಂದ ಶೋಷಣೆಗೊಳಗಾದ ದಲಿತರಿಗೆ ಮಾತ್ರ ಈ ದೇಶದ ಸಂಸ್ಕೃತಿಯನ್ನು ಪುನರ್ ನಿರ್ಮಿಸಬೇಕಾದ ಅನಿವಾರ್ಯತೆ ಇದೆ. ಅದಕ್ಕೆ ಶತೃಗಳ ದಾಳಿಯನ್ನು ಎಲ್ಲ ಮುಖಗಳಲ್ಲು ಎದುರಿಸಲು ಪುರುಷ ಮಹಿಳೆಯರೆನ್ನದೆ ಒಂದಾಗುವ ಅನಿವಾರ್ಯತೆ ಇದೆ ಎಂಬುದು ದಲಿತ ಕಾವ್ಯ ಬಿತ್ತಿದ ಸಾಮಾಜಿಕ ವಾಸ್ತವತೆ.

ಮೇಲಿನ ಕವಿತೆಯಲ್ಲಿ ದುಡಿಯುವ ಪುರುಷ ಮತ್ತು ಮಹಿಳೆಯ ವಸ್ತುಸ್ಥಿತಿ ಅಡಗಿದೆ. ತನ್ನನ್ನು ನಂಬಿದವಳ ಮಾನ ಮುಚ್ಚಲು ಹೆಣಗಾಡುವ ದಲಿತ, ಆತನೊಂದಿಗೆ ಬದುಕು ಕಳೆಯಲು ಸಿದ್ಧಳಿರುವ ಮಹಿಳೆ, 'ಇವರೆಲ್ಲಾ ನಮ್ಮವರೇ' ಎನ್ನುವ ಆಳುವ ವರ್ಗ. ಈ ಮೂವರ ನಡುವೆ ಇಂಡಿಯಾದ ಬಹುಪಾಲು ಸತ್ಯ ಅಡಗಿದೆ. ಇದನ್ನು ಇನ್ನೂ ವಿಸ್ತರಿಸುವುದಾದರೆ ಕೆಲವರಿಗೆ ಮಾನಾಪಮಾನದ ಪ್ರಶ್ನೆ. ಇನ್ನೂ ಕೆಲವರಿಗೆ ಪ್ರತಿಷ್ಠೆಯ ಪ್ರಶ್ನೆ. ಇವೆರಡರ ನಡುವೆ ಇಂಡಿಯಾದ ದಲಿತರ ಬದುಕು ನಲುಗುತ್ತಿದೆ. ಇಂತಹ ಸ್ಥಿತಿಯನ್ನು ವ್ಯಂಗ್ಯಭರಿತ ನೆಲೆಯಲ್ಲಿ ಮೇಲಿನ ಕಾವ್ಯ ನಿರೂಪಿಸುತ್ತಿದೆ.

“ಯಾವ ಚಳುವಳಿಯಲ್ಲಿ ಮಹಿಳೆಯರ ಪಾತ್ರ ನಗಣ್ಯವಾಗಿರುತ್ತದೋ ಆ ಚಳುವಳಿ ಪ್ರಬುದ್ಧಾವಸ್ಥೆ ತಲುಪಿಲ್ಲವೆಂದೇ ಹೇಳಬೇಕು.”[೫೭] ಇಂತಹ ಒಂದು ಎಚ್ಚರಿಕೆ ದಲಿತ ಹೋರಾಟಗಾರರಿಗೆ ಇತ್ತು. ಅದಕ್ಕೆ ಅವರು ತಮ್ಮ ಕಾವ್ಯಗಳಲ್ಲಿ ಮಹಿಳೆಯರ ಶೋಷಣೆಯ ನೆಲೆಗಳನ್ನು ಮತ್ತು ಪುರುಷರ ಶೋಷಣೆಯ ನೆಲೆಗಳನ್ನು ಮೇಳೈಸಿ ಬದಲಾವಣೆಗೆ ಮುಂದಾಗುವಂತೆ ಕರೆಕೊಡುತ್ತಾರೆ.

ನಿನಗಾದ ಅನ್ಯಾಯ
ನಮ್ಮೆದೆಗೆ ಚೂರಿ ಇರಿತ
ಗಾಯವ ಮರೆತು ಬದುಕಲಾರೆವು
ನನ ತಂಗಿ ಅನುಸೂಯ[೫೮]

ಇಲ್ಲಿ ದೌರ್ಜನ್ಯದ ನೋವು ಯಾರಿಗೆ ಎಂದರೆ ಎಲ್ಲರಿಗೂ. ಇದೇ ದಲಿತ ಕಾವ್ಯದೊಳಗಿನ ಪುರುಷ ಮಹಿಳೆಯರ ಸಾಮಾಜಿಕ ಸಂಬಂಧ. ಇಲ್ಲಿ ಲೈಂಗಿಕ ಶೋಷಣೆಗೆ ಒಳಗಾದ ಹೆಣ್ಣುಮಗಳಿದ್ದಾಳೆ. ಅವಳ ನೋವು ಅವಳೊಬ್ಬಳಿಗೆ ಸಂಬಂಧಿಸಿದ್ದಲ್ಲ. ಅದು ಇಡೀ ಮನೆತನದ ಮೇಲೆ ತೀವ್ರತರವಾದ ಪರಿಣಾಮ ಬೀರುತ್ತದೆ. ಏಕೆಂದರೆ ಲೈಂಗಿಕ ಶೋಷಣೆಗೆ ಒಳಗಾದ ಹೆಣ್ಣು ತನ್ನ ಅಸಹಾಯಕತೆಯಿಂದ ಬಳಲುತ್ತಿದ್ದರೆ, ಅದರಿಂದ ಕೋಪೋದ್ರಿಕ್ತನಾದ ಆ ಮನೆಯ ಗಂಡು ಅನಿವಾರ್ಯತೆಯಿಂದ ಬಳಲುತ್ತಾನೆ. ಏಕಕಾಲದಲ್ಲಿ ಇಬ್ಬರು ದೌರ್ಜನ್ಯಕ್ಕೆ ಒಳಗಾದ ಬಗೆಗೇ ದಲಿತ ಕಾವ್ಯ ಮಿಡಿದಿದೆ.

ದಲಿತರ ಸಾಮಾಜಿಕ ಪರಿವರ್ತನೆಯ ಹಾದಿಯಲ್ಲಿ ಮಹಿಳೆಯ ಬಗೆಗಿನ ಅನೇಕ ಹಾಡುಗಳು ನಿರೂಪಣೆಗೊಂಡಿವೆ. ಈ ಹಾಡುಗಳೇ ಶೋಷಣೆಯನ್ನು ಮುಕ್ತಗೊಳಿಸುವುದಕ್ಕೆ ಇಬ್ಬರೂ ಸೇರಬೇಕಾದ ಜರೂರನ್ನು ಹೇಳುತ್ತವೆ. ಅವ್ವಂದಿರ, ಅಕ್ಕಂದಿರ, ತಂಗ್ಯವ್ವ ಎನ್ನುವ ಈ ಸಂಬಂಧಿ ಪದಗಳೇ ಸಾಮಾಜಿಕ ಬದಲಾವಣೆಗೂ, ದಲಿತರಿಗೂ, ದಲಿತ ಮಹಿಳೆಯರಿಗೂ ಇರುವ ಸಂಬಂಧವನ್ನು ಹೇಳುತ್ತವೆ. ‘ಸಂಬಂಜ ಅನ್ನೋದು ದೊಡ್ದು ಕನಾ’ ಎನ್ನುವ ‘ಕುಸುಮಬಾಲೆ’ಯ ಆಶಯದಲ್ಲಿ ಇದು ವ್ಯಕ್ತಗೊಂಡಿದೆ. ಇಲ್ಲಿ ಕರುಳಿನ ತುಡಿತವಿದೆ. ವ್ಯವಸ್ಥೆಯ ಬದಲಾವಣೆಗೆ ಹಾತೊರೆಯುವ ಕ್ರಾಂತಿಯ ಕಿಡಿಗಳಿವೆ. ಈ ಕಿಡಿಗಳು ಪುರುಷನವೋ, ಮಹಿಳೆಯವೋ ಎನ್ನುವುದೂ ಕೂಡ ಹಾಸ್ಯಾಸ್ಪದ. ಏಕೆಂದರೆ ಸವಣೂರಿನಲ್ಲಿ ಹೆಣ್ಣೊಬ್ಬಳ ಬೆತ್ತಲೆ ಮಾಡಿದ ಪ್ರಕರಣ, ಇನ್ನೊಂದು ಸಂದರ್ಭದಲ್ಲಿ ಹೆತ್ತ ತಾಯಿಯ ಎದುರೇ ಬೆಳೆದ ಮಕ್ಕಳಿಬ್ಬರನ್ನು ತುಂಡು ತುಂಡಾಗಿ ಕೊಚ್ಚಿ ತಾಯಿಗೆ ಮಕ್ಕಳ ಸಾವನ್ನು ತೋರಿಸಲಾಗಿದೆ. ಸಾಯುತ್ತಿರುವ ಮಕ್ಕಳ ಕಣ್ಣಿಗೆ ತಾಯಿಯ ಮೊಲೆ ಕತ್ತರಿಸಿ ತೋರಿಸಲಾಗಿದೆ, ಮರ್ಮಾಂಗಕ್ಕೆ ರಿಪೀಸ್ ಪಟ್ಟಿ ತುರುಕಲಾಗಿರುವ ಹೇಯ ಕೃತ್ಯ, ಹಾಗೂ ಖೈರ್ಲಾಂಜಿಯಲ್ಲಿ

ಇಡೀ ಕುಟುಂಬವನ್ನೇ ಆಹುತಿ ತೆಗೆದುಕೊಂಡದ್ದು. ಈ ಎಲ್ಲಾ ಘಟನೆಗಳು ಯಾರ ಮೇಲೆ ಪರಿಣಾಮ ಬೀರುತ್ತವೆಂಬುದನ್ನು ಪ್ರಜ್ಞಾವಂತರೆಲ್ಲ ಪ್ರಶ್ನಿಸಿಕೊಳ್ಳಬೇಕಾಗಿದೆ. ಅದನ್ನೆಲ್ಲಾ ಮನಗಂಡೇ ದಲಿತ ಕವಿಗಳು ತಮ್ಮ ಕಾವ್ಯಗಳ ಮೂಲಕ ಸಂಘಟನೆಯ ಮಹತ್ವವನ್ನು ಸಾರಿ ಅವರಿಗೆ ಈ ರೀತಿ ಕರೆಕೊಡುತ್ತಾರೆ.

ರಾಜಕೀಯ ಬಿರುಗಾಳಿಯಲಿ
ಬಂಡವಾಳ ಜನರ ಚಂಡಮಾರುತದಲಿ
ಓಲಾಡುವ ತೇಲಾಡುವ ತಳವಿಲ್ಲದ ತವರಿನವರೆ
ತೊರೆದು ಬನ್ನಿ ಮೌಢ್ಯವ ಕರೆದು ತನ್ನಿ ಸಂಘವ[೫೫]

ಮಹಿಳೆಯರ ಮೇಲಿನ ಈ ದಬ್ಬಾಳಿಕೆಗಳನ್ನು ತಡೆಯಲು ಮಹಿಳೆಯರಲ್ಲೇ ಅನೇಕ ಸಂಘಟನೆಗಳು ಹುಟ್ಟಿಕೊಂಡಿವೆ. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಮಹಿಳಾ ಸಾಂಸ್ಕೃತಿಕ ಸಂಘಟನೆ, ಮಹಿಳಾ ವಿದ್ಯಾರ್ಥಿ ಫೆಡರೇಷನ್, ದುಡಿಯುವ ಮಹಿಳೆಯರ ಸಮನ್ವಯ ಸಮಿತಿ, ಪ್ರಜ್ಞಾ ಕಾನೂನು ಸಲಹಾ ಸಮಿತಿ, ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ, ಎಂ.ಎಸ್.ಎಸ್. ಮಹಿಳಾ ಜಾಗೃತಿ ಸಂಘಟನೆ ಮುಂತಾದವುಗಳು ಮಹಿಳೆಯರ ದೌರ್ಜನ್ಯದ ವಿರುದ್ಧ ದನಿ ಎತ್ತಿವೆ. ಎಲ್ಲೆಲ್ಲಿ ಮಹಿಳೆಯರ ಮೇಲೆ ಶೋಷಣೆ ನಡೆಯುತ್ತಿದ್ದವೋ ಅಲ್ಲಲ್ಲೇ ನಿಂತು ಪ್ರತಿಭಟಿಸಿವೆ. ಇವುಗಳ ಜೊತೆಗೆ ಸ್ವಸಹಾಯ ಗುಂಪುಗಳು ಮತ್ತು ಸ್ತ್ರೀಶಕ್ತಿ ಗುಂಪುಗಳು ಮಹಿಳೆಯನ್ನು ಒಂದೆಡೆ ಸೇರಿಸುವ ನಿಟ್ಟಿನಲ್ಲಿ ತಮ್ಮದೇ ಆದ ಕಾರ್ಯ ನಿರ್ವಹಿಸುತ್ತಿವೆ. ಆದರೂ ಕೂಡ ದೌರ್ಜನ್ಯಗಳು ಕಡಿಮೆ ಆಗುತ್ತಿಲ್ಲ. ಅದಕ್ಕೇ ದಲಿತ ಕಾವ್ಯಗಳು ವರ್ಗ ನೆಲೆಯಲ್ಲಿ ನಿಂತು ಇವುಗಳನ್ನು ವಿವರಿಸಿ ಸಮ ಸಮಾಜಕ್ಕೆ ಎಲ್ಲರೂ ಒಂದಾಗಬೇಕೆಂಬ ವಾಸ್ತವವನ್ನು ಬಿತ್ತುತ್ತವೆ.

ಮೇಲಿನ ಕವನ ತನ್ನ ನಿರೂಪಣೆಯಲ್ಲಿ ದಲಿತರು ಸಂಘಟನೆಯಾಗಲು ಕರೆಕೊಡುತ್ತಿದೆ. ಆ ಸಂಘಟನೆಯಲ್ಲಿ ಯಾರು ಯಾರು ಒಗ್ಗೂಡಬೇಕು ಎಂಬುದರ ಸ್ಪಷ್ಟ ಸೂಚನೆಯನ್ನೂ ನೀಡುತ್ತಿದೆ. ಇದು ಪುರುಷ ನೆಲೆಯಿಂದ ಹೊರಟ ಅಭಿವ್ಯಕ್ತಿಯೋ, ಮಹಿಳಾ ನೆಲೆಯಿಂದ ಹೊರಟ ಅಭಿವ್ಯಕ್ತಿಯೋ ಎಂಬುದು ಮುಖ್ಯವಲ್ಲ. ಬದಲಾಗಿ ಇದು ದಲಿತ ನೆಲೆಯಿಂದ ಹೊರಟ ಒಳಗಿನ ತುಡಿತವಿದು. ಅದಕ್ಕೆ ಇಲ್ಲಿ ಸಾಮಾಜಿಕ ಪರಿವರ್ತನೆಗೆ ಇಬ್ಬರೂ ಒಗ್ಗೂಡಬೇಕೆಂಬ ತವಕವಿದೆ.

ದಲಿತ ಚಳುವಳಿಯ ಬಹುಮುಖ್ಯ ಆರೋಪ ದಲಿತ ಸಂಘಟನೆಯಲ್ಲಿ ಮಹಿಳೆಯರ ಪಾತ್ರ ನಗಣ್ಯ ಎಂಬುದೇ ಆಗಿದೆ. ಆದರೆ ಬಿ.ಎಂ. ಪುಟ್ಟಯ್ಯ ಅವರು ಗುರುತಿಸಿರುವ ಹಾಗೆ "ಅನೇಕ ಹೋರಾಟಗಳಲ್ಲಿ ಸಾವಿರಾರು ಮಹಿಳೆಯರು ಎದೆಗಾರಿಕೆಯಿಂದ ಹೋರಾಡಿದ್ದಾರೆ. ಸಂಘಟನೆಯ ಸಂಪರ್ಕವಿರುವ ಕಾರಣಕ್ಕೆ ದಲಿತ ಮಹಿಳೆಯರ ಮೇಲೆ

ದೌರ್ಜನ್ಯಗಳು ನಡೆದಿವೆ. ಕೆಲವು ಕಡೆ ಕೂಲಿ ಕೆಲಸ ಕೊಡದಂತೆ ಬಹಿಷ್ಕಾರ ಹಾಕಲಾಗಿದೆ. ಮತ್ತೆ ಕೆಲವು ಕಡೆ ಕೆಲವು ಊರುಗಳಲ್ಲಿ ಸಾರ್ವಜನಿಕ ಸವಲತ್ತುಗಳನ್ನು ಬಳಸದಂತೆ ಬಹಿಷ್ಕಾರ ಹಾಕಿದ್ದಾರೆ. ಜಮೀನ್ದಾರಿ ವರ್ಗದವರೇ ಈ ಎಲ್ಲಾ ದೌರ್ಜನ್ಯಗಳನ್ನು ನಡೆಸಿದ್ದಾರೆ. ಅನೇಕ ಮಹಿಳೆಯರು ಹೋರಾಟಕ್ಕೆ ಇಳಿದು ಪ್ರಾಸಂಗಿಕವಾಗಿ ಪೊಲೀಸರ ಲಾಠಿ ಏಟು ತಿಂದಿದ್ದಾರೆ. ಪೊಲೀಸರ ಬಂಧನಕ್ಕೂ ಒಳಗಾಗಿದ್ದಾರೆ. ಕೆಲವರ ಮೇಲೆ ಕೋರ್ಟಿನಲ್ಲಿ ಕೇಸೂ ಕೂಡ ಇದೆ".[೬೦] ಈ ಎಲ್ಲಾ ಬೆಳವಣಿಗೆಗಳನ್ನು ಗಮನಿಸಿದರೆ ದಲಿತರ ಹೋರಾಟದಲ್ಲಿ ದಲಿತ ಮಹಿಳೆಯರ ಭಾಗವಹಿಸುವಿಕೆ ಮತ್ತು ಅವರ ಪಾತ್ರ ಕಡಿಮೆ ಎಂದು ಹೇಳಲಾಗುವುದಿಲ್ಲ.

ದಲಿತ ಮಹಿಳೆಯರು ಕೇವಲ ಮೇಲ್ವರ್ಗಗಳಿಂದಷ್ಟೇ ಶೋಷಣೆಗೆ ತುತ್ತಾಗುತ್ತಿದ್ದಾರೆಂಬುದು ಸರಳ ತೀರ್ಮಾನವಾಗುತ್ತದೆ. ದಲಿತ ಪುರುಷರಿಂದಲೂ ಶೋಷಣೆಗೆ ತುತ್ತಾಗಿದ್ದಾರೆ. ಸಾಂಸಾರಿಕ ಪರಿಧಿಯ ಒಳಗೂ ಮತ್ತು ಸಾಮಾಜಿಕ ಕಟ್ಟುಕಟ್ಟಳೆಯ ಒಳಗೂ ತೀವ್ರ ಶೋಷಣೆಯನ್ನು ಎದುರಿಸಬೇಕಾದ ಪರಿಸ್ಥಿತಿ ಮಹಿಳೆಯರಿಗಿದೆ. ಇಂತಹ ಸಂದರ್ಭದಲ್ಲಿ ಮಹಿಳೆಯರನ್ನು ಕೇವಲ ಮೇಲ್ವರ್ಗದವರ ವಿರುದ್ಧವಷ್ಟೇ ಹೋರಾಡುವಂತೆ ಪ್ರೇರೇಪಣೆ ನೀಡಿದರೆ ಅದು ಮುಂಚೂಣಿಯಲ್ಲಿ ನಿಲ್ಲಲು ಸಾಧ್ಯವಿಲ್ಲವೇನೊ.

ದಲಿತ ಮಹಿಳೆ ದಲಿತ ಸಂಘಟನೆಯಲ್ಲಿ ನೇರವಾಗಿ ಭಾಗವಹಿಸಲು ಅನೇಕ ಅಡೆತಡೆಗಳಿವೆ. ಇಂತಹ ಅಡೆತಡೆಗಳ ನಡುವೆಯೂ ದಲಿತ ಸಂಘರ್ಷ ಸಮಿತಿಯ ಅನೇಕ ಜಾಥಾಗಳಲ್ಲಿ, ಪ್ರತಿಭಟನಾ ಮೆರವಣಿಗೆಗಳಲ್ಲಿ, ಸಮಾವೇಶಗಳಲ್ಲಿ ಭಾಗವಹಿಸಿರುವುದು ಅಂದಿನ ಸಂಘಟನೆಯ ಹಾದಿಯ ಸ್ಪಷ್ಟತೆಯನ್ನು ತಿಳಿಸುತ್ತವೆ. ಆದರೆ ಛಿದ್ರಗೊಂಡಿರುವ ಇಂದಿನ ದಲಿತ ಚಳವಳಿಗಳಲ್ಲಿ ಹಿಂದಿನ ಪ್ರಕ್ರಿಯೆ ಹುಡುಕುವುದು ಕಷ್ಟದ ಕೆಲಸ.

ಎಲ್ಲರೂ ಒಗ್ಗಟ್ಟಾಗಿ ಕೈಗೆ ಕೈ ಜೋಡಿಸಿ ಹೊಸ ಜಗತ್ತನ್ನು ಕಾಣುವ ತವಕ ದಲಿತ ಕಾವ್ಯಗಳಲ್ಲಿದೆ. ಜಗತ್ತನ್ನು ಬದಲಾಯಿಸುವುದು ಅನಿವಾರ್ಯ. ಈ ಬದಲಾವಣೆಯ ಹಾದಿಗೆ ಪುರುಷ ಮಹಿಳೆಯೆನ್ನದೆ ಒಂದಾಗಬೇಕೆಂಬ ಸಂದೇಶ ದಲಿತ ಕಾವ್ಯಗಳಲ್ಲಿದೆ. ಈ ಬದಲಾವಣೆಯ ಹಾದಿಗೆ ಮುನ್ನುಗ್ಗಲು ಮಹಿಳೆಯರಿಗೆ ಕಾವ್ಯ ಕರೆಕೊಡುವ ರೀತಿ ಹೀಗಿದೆ;

ಉಸಿರು– ಹಾಕಿ ಹಾಕಿ
ದಿಙ್ಮೂಢಳಾಗಿ ಕೈ ಹೊತ್ತು ಕುಳಿತುಕೊಳ್ಳದಿರು ಗೆಳತಿ
ನಿನ್ನೀ ಉಸಿರು
ಬರೀ ಉಸಿರಾಗದಿರಲಿ ಗೆಳತಿ.
....
ಆರ್ಯನಾರಿಯರಿಂದ ಕಣ್ಣೀರಲಿ ಮಿಂದು ಮಡಿಯನುಟ್ಟು

ಅವರ ಮುಗ್ಧತೆಯಲ್ಲಿ ಜೇನಿನ ರುಚಿ ಉಂಡು
ಅವರ ಆಸೆ, ಆಕಾಂಕ್ಷೆಗಳನು ಕಾಲಲ್ಲಿ ತುಳಿದು
ಮೆಟ್ಟೊಲಿದುಕೊಂಡು
ಅಟ್ಟಹಾಸದಲಿ ನಗುವ ದುಶ್ಯಾಸನರಿಗೆ ಇಲ್ಲಿ ಬರಗಾಲವಿಲ್ಲ.
ಅದಕ್ಕೆ ನಿನ್ನೀ ಉಸಿರು ಬರೀ ಉಸಿರಾಗದಿರಲಿ
ಅನ್ನುವುದು ಗೆಳತಿ.
ಆ ಉಸಿರು ನೇಸರನಕ್ಕಿಂತಲೂ ಭಯಂಕರವಾಗಿ
ದಿಕ್ಕು- ದಿಕ್ಕಿಗೆ ಹಬ್ಬಿ
ದೌರ್ಜನ್ಯ ಶೋಷಣೆ ಅಮಾನುಷಕರನ್ನು
ಉಸಿರುಗಟ್ಟಿ ಸಾಯಿಸಲಿ[೬೧]

೬.೩ ದಲಿತ ಕಾವ್ಯ : ಅಪೇಕ್ಷಿತ ಸಮಾಜ

ಕನ್ನಡ ಸಾಹಿತ್ಯದಲ್ಲಿ ಯಾವ ಸಾಹಿತ್ಯ ಪ್ರಕಾರವೂ ಸಂಪೂರ್ಣವಾಗಿ ಇಂತಹದ್ದೇ ಸಮಾಜ ಬೇಕು ಎಂಬುದರ ಬಗ್ಗೆ ತನ್ನ ಆಶಯವನ್ನು ತೋಡಿಕೊಂಡಿಲ್ಲ. ಆದರೆ ದಲಿತ ಕಾವ್ಯ ಮಾತ್ರ ಸಂಪೂರ್ಣವಾಗಿ ಇಂತಹದ್ದೇ ಸಮಾಜ ಬೇಕು ಎಂಬುದರ ಬಗ್ಗೆ ಆಶಯವನ್ನು ಕೇಂದ್ರೀಕರಿಸಿಕೊಂಡಿದೆ. ಅದು ತನ್ನ ಅಭಿವ್ಯಕ್ತಿಯಲ್ಲಿ ಇರುವ ವ್ಯವಸ್ಥೆಯ ಬಗ್ಗೆ ಅಸಹನೆ ಮತ್ತು ಪ್ರತಿರೋಧ ಒಡ್ಡುವುದರಲ್ಲಿದೆ ಹಾಗೂ ಇದು ಹೀಗೇ ಇರಬೇಕೆಂದು ಗಟ್ಟಿದನಿಯಲ್ಲಿ ಕೇಳುವುದರ ಮೂಲಕವಾಗಿಯೂ ಇದೆ. ಇದಕ್ಕಾಗಿ ಕಾವ್ಯ ತನ್ನ ಸಾಮಾಜಿಕ ಅಪೇಕ್ಷಿತ ನೆಲೆಗಳನ್ನು ಅಭಿವ್ಯಕ್ತಿಯಲ್ಲಿ ಹೊರಹಾಕಿದೆ.

ದಲಿತರಿಗೆ ಇರುವ ವ್ಯವಸ್ಥೆಯ ಬಗ್ಗೆ ಉಗ್ರ ಪ್ರತಿರೋಧ ಉಂಟಾಗಿದೆ. ಇದರಿಂದಾಗಿ ಇಂತಹದ್ದೇ ಸಮಾಜ ಬೇಕು ಎಂಬುದರ ಬಗ್ಗೆ ಒತ್ತಾಯಿಸಿದೆ. ಏಕೆಂದರೆ ದಲಿತರಿಗೆ ಸಾಮಾಜಿಕ, ರಾಜಕೀಯ ಹಿನ್ನೆಲೆಯ ಒಂದು ಚಾರಿತ್ರಿಕ ತುರ್ತು ಇತ್ತು. ಶತಮಾನಗಳ ನೋವು ಅವರು ಈ ಸಮಾಜವನ್ನು ಬದಲಾಯಿಸಲು ಪ್ರೇರೇಪಿಸಿತು. ಪ್ರಾಚೀನದಿಂದ ಆಧುನಿಕತೆವರೆಗೂ ಸಾಹಿತ್ಯದಲ್ಲಿ ಸಮಾಜ ಅನಾವರಣಗೊಂಡಿದೆ. ಆದರೆ ಕೆಲವು ಸಾಹಿತ್ಯದಲ್ಲಿ ಅಸಮಾನತೆ ಮತ್ತು ಶೋಷಣೆ ಅಭಿವ್ಯಕ್ತಗೊಂಡಿಲ್ಲ. ಹಾಗೆಂದ ಮಾತ್ರಕ್ಕೆ, ಶೋಷಣೆಯೇ ಇಲ್ಲ ಎಂದರ್ಥವಲ್ಲ. ಯಾವ ಕಾಲಘಟ್ಟದ ಸಾಹಿತ್ಯ ಅದನ್ನು ಅಭಿವ್ಯಕ್ತಿಸಿಲ್ಲವೋ ಆ ಕಾಲಘಟ್ಟದ ಕವಿಗಳು ಅದರ ಬಗ್ಗೆ ಗಮನ ಕೊಡಲಿಲ್ಲವೆಂದು ಅರ್ಥ. ಸಮಾಜಕ್ಕೆ ನಮ್ಮ ಬರಹದಿಂದ ಏನಾದರೂ ಉಪಯೋಗ ಆಗಬೇಕು. ಈ ಭರವಸೆಯೊಂದಿಗೆ ಕಾವ್ಯ ಮತ್ತು

ಇನ್ನಿತರ ಸಾಹಿತ್ಯ ಕ್ಷೇತ್ರದಲ್ಲಿ ಬರವಣಿಗೆ ಕೈಗೊಂಡ ಬಹುತೇಕ ಬರಹಗಾರರ ಕಾಳಜಿ ಸಮಾಜವೇ ಆಗಿತ್ತು. ಪಂಡಿತರನ್ನು ಮೆಚ್ಚಿಸುವ ಸಲುವಾಗಿ ಬರೆದ ಪಾಂಡಿತ್ಯಪೂರ್ಣ ಕವಿಗಳ ದೃಷ್ಟಿ ಇದಕ್ಕಿಂತ ಭಿನ್ನ ನೆಲೆಯದು.

ನಿಮ್ಮ ಮುಟ್ಟದೆ ಹೊಸ್ತಿಲಾಚೆ ನಿಂತು
ನಮ್ಮ ಹಾದಿಗೆ ಕಲ್ಲು ಮುಳ್ಳಲ್ಲಿ ಕುಂತು
ಘೋರಂಧಕಾರದಿ ಕೊಡವಿಕೊಂಡು
ನಾವೀಗ ಬರೆಯಬೇಕಿದೆ
ಹರಿವ ತೊರೆಯಲಿ ತೇಲಿಬಿದ್ದು
ನಿಮ್ಮಗಳ ವರ್ಣ ವ್ಯವಸ್ಥೆ ಬಳಸಿ
ನಮ್ಮನ್ನು ಸುಟ್ಟು ಸುಣ್ಣ ಮಾಡಿಟ್ಟು
ನೀವು ತುಪ್ಪ ಉಂಡಿದ್ದು ಬರೆಯಬೇಕಿದೆ.[೨]

ಇಲ್ಲಿ 'ಬರೆಯಬೇಕಿದೆ' ಎಂಬ ತುಡಿತವಿದೆ. ಅದು ಯಾವುದನ್ನು ಎಂಬುದನ್ನು ಕಾವ್ಯವೇ ಹೇಳುತ್ತಿದೆ. ಬರವಣಿಗೆಯ ರೀತಿ ಮತ್ತು ಉದ್ದೇಶಗಳು ಒಬ್ಬರಿಂದ ಒಬ್ಬರಿಗೆ ಭಿನ್ನವಾಗಿರುತ್ತವೆ. ಆದರೆ ದಲಿತ ಕವಿಗಳಿಗೆ ಬರೆಯಲೇಬೇಕೆಂಬ ತುಡಿತ ಸಾಮಾಜಿಕ ಒತ್ತಡದಿಂದ ಬಂದಿದೆ. ಅದು ಸಾಂಸ್ಕೃತಿಕ ಒತ್ತಡದಿಂದ ಬಂದುದಲ್ಲ. ಸಾಮಾಜಿಕ ಒತ್ತಡದಿಂದ ಬಂದ ಸಾಹಿತ್ಯ ಸಾಮಾಜಿಕ ನೆಲೆಗಳ ಶೋಧನೆಯಲ್ಲಿ ತೊಡಗುತ್ತದೆ. ಈ ಶೋಧನೆ ಅದು ತಾನಿರುವ ಸ್ಥಳದಿಂದಲೇ ಪ್ರಾರಂಭಿಸುತ್ತದೆ. ಚರಿತ್ರೆ ಇಲ್ಲದ ಜನಕ್ಕೆ ಚರಿತ್ರೆ ಕಟ್ಟುವ ರೀತಿ ಕೂಡ ಇದು.

ಇಲ್ಲಿ ಒಂದು ವರ್ಗ ನಿರಂತರವಾಗಿ ಇಲ್ಲಿನ ವೈರುಧ್ಯಗಳನ್ನು ಮುಚ್ಚಿಹಾಕುತ್ತಲೇ ಹೋಗುತ್ತಿರುತ್ತದೆ. ದೇಶ, ಭಾಷೆ, ಸಂಸ್ಕೃತಿ ಹೆಸರು ಬಂದಾಗ ಮಾತ್ರ ಆಗಾಗ್ಗೆ ಒಗ್ಗೂಡುವ ತಂತ್ರ ನೇಯುತ್ತದೆ. ಈ ಒಗ್ಗೂಡಿಸುವಿಕೆ ಕೇವಲ ಇಷ್ಟಕ್ಕೆ ಮಾತ್ರ. ಅಸ್ಪೃಶ್ಯತೆ, ಅವಮಾನಗಳ ವಿಷಯ ಬಂದಾಗ ಈ ವರ್ಗಗಳು ತಮ್ಮ ಬಾಯಿಗೆ ಭದ್ರವಾಗಿ ಬೀಗ ಜಡಿದುಕೊಳ್ಳುತ್ತವೆ. ಇಂತವರಿಂದ ಮೂಡಿಬಂದ ಸಾಹಿತ್ಯ ಹೊಟ್ಟೆ ತುಂಬಿದ ಒಡಲೊಳಗಿನ ತವಕಗಳಾಗಿ ಆಸ್ವಾದನಾ ನೆಲೆಗೆ ಮೀಸಲಾಗುತ್ತವೆ. ಸಿದ್ಧಲಿಂಗಯ್ಯ ಅವರು ಹೇಳುವ ಹಾಗೆ "ಸಮಾಜ ಎಂತಹದೋ, ಅಂತಹದೇ ಸಾಹಿತ್ಯ ಬಂತು. ಉದ್ದೇಶಪೂರ್ವಕವಾಗಿ ಸಮಾಜದ ದೊಡ್ಡ ಪಾಲನ್ನು ಕತ್ತಲೆಯಲ್ಲಿಟ್ಟು ಅವರ ರಕ್ತ-ಮಾಂಸವನ್ನುಂಡು ಕೊಬ್ಬಿದ ಮೇಲುವರ್ಗ ತನ್ನ ಧೋರಣೆಗಳನ್ನು ಸಾಹಿತ್ಯದಲ್ಲಿ ಅಭಿವ್ಯಕ್ತಿಸಿತು. ಸಾಮಾನ್ಯರಿಂದ ಕ್ರಾಂತಿಕಾರಿಗಳಂತೆ ಸಿಡಿದು

ಬಂದವರನ್ನು ತನ್ನೊಳಗೆ ಸೇರಿಸಿಕೊಂಡು ಅವರನ್ನೂ ತಮ್ಮವರಲ್ಲಿ ಒಬ್ಬನನ್ನಾಗಿಸಿತು. ಆದ್ದರಿಂದಲೇ ಈ ದೇಶದಲ್ಲಿ ಸಾಮಾನ್ಯನ ದನಿ ಸತ್ತು ಹೋದದ್ದು, ಅದು ಆಚೆಗೆ ಬರುವಾಗ ಪಾಲಿಷ್ ಆಗಿ ಬಂದದ್ದು"[೬೩]

ಸಾಮಾನ್ಯನ ದನಿಯನ್ನು ಕಬಂಧ ಬಾಹುಗಳಿಂದ ಒಂದು ವರ್ಗ ಮುಚ್ಚಿದೆ. ಅಲ್ಲಿ ತನ್ನದೇ ಧೋರಣೆಗಳನ್ನು ಬಿತ್ತಿ ಸಾಮರಸ್ಯದ ಹೆಸರಿನಲ್ಲಿ ದಲಿತರನ್ನು ದುಡಿಸಿಕೊಳ್ಳುತ್ತಿದೆ. ಹೀಗೆ ದುಡಿಸಿಕೊಳ್ಳುತ್ತ ತನ್ನ ಶೋಷಕ ನೆಲೆಗಳನ್ನು ಹಾಗೇ ಉಳಿಸಿಕೊಳ್ಳುತ್ತಿದೆ. ಇಂತಹ ವ್ಯವಸ್ಥೆಯಲ್ಲಿ ಶೋಷಿತರು ಮಾತನಾಡಬೇಕಿತ್ತು. ಯಾವ ಹಂಗೂ ಇಲ್ಲದ ಅವರ ಮಾತಿನಲ್ಲಿ ಇಲ್ಲಿನ ಸಾಮಾಜಿಕ ವಾಸ್ತವತೆ ತೆರೆದುಕೊಳ್ಳುವ ಅವಶ್ಯಕತೆ ಇತ್ತು. ಇದಕ್ಕೆ ದನಿಯಾಗಿ ಮೂಡಿ ಬಂದದ್ದು ದಲಿತ ಕಾವ್ಯ. ಸಾಮಾಜಿಕ ಕ್ರೌರ್ಯದೊಳಗಿನ ಕವಿ ಒಗ್ಗಟ್ಟಿನ ಬಾಯಿಬಡುಕರ ನಡುವೆ ಎತ್ತುವ ಪ್ರಶ್ನೆ ನೈಜ ವಸ್ತುಸ್ಥಿತಿಯ ನೆಲೆಯಲ್ಲಿರುತ್ತದೆ.

ಈ ನಾಡು ನಮ್ಮದೆನಲೇ?
ಈ ಭೂಮಿ ನಮ್ಮದೆನಲೇ?
ನಮ್ಮದಿದ್ದರೆ ಈ ನೆಲದಲ್ಲಿ
ಮಾವೇಕೆ ಬರಲಿಲ್ಲ?
ಇಲ್ಲಿರುವ ನಗ ನಾಣ್ಯ
ನಮ್ಮದೆಂದು ಹೇಳಲೇ?
ನಮ್ಮದಿದ್ದರೆ ನಾಣ್ಯಗಳಲ್ಲಿ
ನಾವೇಕೆ ಮೂಡಲಿಲ್ಲ
ನಾವೋದುವ ಓದು
ಓದೆಂದು ಹೇಳುವಿರೇ?
ಓದಾದರೆ ನಮ್ಮ ಜೀವನದ
ಅರಿವೇಕೆ ಬರಲಿಲ್ಲ.[೬೪]

ಈ ಕವಿತೆ ನಿರೂಪಿಸುವ ಹಾಗೆ ದಲಿತರದೆನ್ನುವ ಯಾವ ಅಸ್ತಿತ್ವಗಳೂ ಇಲ್ಲ. ಓದು, ಬರಹ, ನೆಲ, ಜಲ, ಪರಂಪರೆ, ಪುರಾಣ, ನಗ, ನಾಣ್ಯ, ಸಂಪತ್ತು, ಅಧಿಕಾರ ಎಲ್ಲವೂ ಕೂಡ ಆಳುವ ವರ್ಗದ ಆಲೋಚನೆಗಳಂತೆಯೇ ನೆಲೆಗೊಂಡಿವೆ. ಇಲ್ಲಿನ ಶೈಕ್ಷಣಿಕ ವ್ಯವಸ್ಥೆಯಂತೂ ಅರ್ಥಶಾಸ್ತ್ರ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಇತಿಹಾಸ, ಚರಿತ್ರೆ, ವಿಜ್ಞಾನ, ತಂತ್ರಜ್ಞಾನ ಮುಂತಾದ ವಿಷಯಗಳ ಮೂಲಕ ಆಳುವ ವರ್ಗದ ಆಲೋಚನೆಯನ್ನೇ

ತುಂಬಿದೆ. ಆದರೆ ಇದೆಲ್ಲವೂ ನಿಮ್ಮದೇ ಎನ್ನುವ ಸಂದೇಶವನ್ನು ಮಾತ್ರ ದಲಿತರಿಗೆ ರವಾನಿಸುತ್ತದೆ. ಇಂತಹ ಸಂದರ್ಭದಲ್ಲಿ ಇವುಗಳನ್ನು ಪ್ರಶ್ನಿಸದ ಹೊರತು ದಲಿತರ ಅಸ್ತಿತ್ವ ಉಳಿಯಲು ಸಾಧ್ಯವಿಲ್ಲ.

ಈ ರೀತಿ ಕೇಳುವ ದಿಟ್ಟತನ ಬಂದದ್ದು ಸಾಮಾಜಿಕ ವಾಸ್ತವದ ಅರಿವಿನಿಂದಲೇ. ಭಾರತ ದೇಶ ಬಂಗಾರದ ದೇಶ. ಇಲ್ಲಿ ನಿತ್ಯ ಹರಿಯುವ ನದಿಗಳಿದ್ದಾವೆ, ವನಸಂಪತ್ತಿದೆ, ಮೇರು ಗಿರಿಪರ್ವತಗಳಿದ್ದಾವೆ. ಇಲ್ಲಿ ನೈಸರ್ಗಿಕವಾದ ಖನಿಜ ಸಂಪತ್ತುಗಳಿದ್ದಾವೆ. ಇದು ಪುಣ್ಯದ ಭೂಮಿ, ಇಲ್ಲಿ ಹುಟ್ಟಿರುವ ನಾವೇ ಧನ್ಯರು. ಹಲವು ಸಂಸ್ಕೃತಿಗಳ, ಹಲವು ಜನಾಂಗಗಳ, ವೈವಿಧ್ಯಮಯ ಭಾಷೆಗಳ ಕೇಂದ್ರ ಸ್ಥಾನವಿದು. ಹಾಗಾಗಿ ಇಲ್ಲಿ ಎಲ್ಲರೂ ಸಮಾನರು ಎನ್ನುವ ದೇಶಭಕ್ತರಿಗೂ, ಇದನ್ನೇ ಮೈಮೇಲೆ ದೇವರು ಬಂದಂತೆ ವರ್ಣಿಸುವ ಕವಿವರ್ಯರಿಗು ವಾಸ್ತವದ ಅರಿವು ಮೂಡಿಸುವ ಅಗತ್ಯವಿತ್ತು. ಈ ಅಗತ್ಯದ ಪರಿಣಾಮವೇ ಮೇಲಿನ ಕವನದ ಸಾಲುಗಳು.

ಯಾವ ನೆಲೆಗಟ್ಟಿನಲ್ಲಿ ನಿಂತು ನೋಡಿದರೂ ತಮ್ಮದೇ ಛಾಪನ್ನು ಒಂದು ವರ್ಗ ಬಿತ್ತಿ ಬೆಳೆಸಿದೆ. ಇಂತಹ ದೇಶಭಕ್ತರ ಮಧ್ಯೆ ಸಮಾಜದಲ್ಲಿರುವ ವರ್ಗ, ಜಾತಿ, ಮತ, ಧರ್ಮಗಳ ತಾರತಮ್ಯಗಳನ್ನು ಕುರಿತು ಬರೆಯುವುದು ಕಷ್ಟ. ಆದರೆ ಇವುಗಳಿಂದ ನಿರಂತರವಾಗಿ ದೌರ್ಜನ್ಯಕ್ಕೆ ತುತ್ತಾಗುತ್ತಿರುವ ಸಮುದಾಯಗಳನ್ನು ಉಳಿಸಬೇಕಾದ ಅನಿವಾರ್ಯತೆ ಇತ್ತು. ಇದನ್ನು ಅಂಬೇಡ್ಕರ್ ಹಾದಿಯಿಂದ, ಅಕ್ಷರ ಕಲಿತ ಕೆಲವು ದಲಿತರು ಮೊದಲ ಬಾರಿಗೆ ಪ್ರಾರಂಭಿಸಿದರು. ಈ ಪ್ರಾರಂಭದ ಉತ್ಸಾಹ ಕೆಲವರಲ್ಲಿ ಕಾವ್ಯದ ರೂಪ ಪಡೆದವು. ಶೋಷಿತನಿಂದ ಮಾತ್ರ ಶೋಷಿತರ ನೆಲೆಗಳು ಅನಾವರಣಗೊಳ್ಳಲು ಸಾಧ್ಯ ಎಂಬುದನ್ನು ತೋರಿಸಿದರು. ಈ ಹಿನ್ನೆಲೆಯಿಂದ ದಲಿತ ಕವಿಗಳು ಇಲ್ಲಿನ ನಾಗರಿಕ ಸಮಾಜ ಎನಿಕೊಂಡಿರುವುದರ ಬಗ್ಗೆ ತಿರಸ್ಕಾರದಿಂದ ನೋಡುತ್ತಾರೆ. ಇದಕ್ಕೆ ಉದಾಹರಣೆಯೆಂಬಂತೆ ದಲಿತ ಕವಿಯೊಬ್ಬ ತನ್ನ ಕವನ ಸಂಕಲನದ ಮೊದಲು ಈ ಕೆಳಗಿನಂತೆ ಹೇಳುವುದರ ಮೂಲಕ ತನ್ನ ನಡೆ ಯಾವುದರ ಕಡೆಗೆ ಎಂಬುದನ್ನು ತೋರಿಸಿದ್ದಾನೆ. “ಈ ಹೀನ ಸಮಾಜದಲ್ಲಿ ಸೂರ್ಯ ಹುಟ್ಟುವುದು ತಪ್ಪಬಹುದು. ಆದರೆ ದಲಿತರ ಮೇಲಿನ ಮಾನಸಿಕ ಹಿಂಸೆ ಮತ್ತು ಹಲ್ಲೆಗಳು ತಪ್ಪುವುದಿಲ್ಲ. ಹೀಗಿರುವಾಗ ಇಲ್ಲಿ ಮನುಷ್ಯ ಸಂಸ್ಕೃತಿ ಅಥವಾ ನಾಗರೀಕ ಸಮಾಜ ಇದೆ ಅಂತ ಯಾವ ಮುಖ ಇಟ್ಟುಕೊಂಡು ಹೇಳುತ್ತೀರಿ? ಇಂತಹ ಕಡೆ ಶೋಷಿತರು ನೆಮ್ಮದಿಯ ಸಣ್ಣ ಖುಷಿಯನ್ನು ಹೇಗೆ ಅನುಭವಿಸಲು ಸಾಧ್ಯ ಹೇಳಿ? ಇವೆಲ್ಲ ದುಃಖ ಹಾಗೂ ಒತ್ತಡಗಳೇ ಪದ್ಯವೋ ಗದ್ಯವೋ ಏನೋ ಒಂದನ್ನು ಬರೆಯಲು ನನ್ನನ್ನು ಪ್ರೇರೇಪಿಸಿದ್ದು. ‘ಕಲೆಗಾಗಿ ಕಲೆ’ ಎಂಬ ಮೂರ್ಖ ಹೇಳಿಕೆಯನ್ನು ಎಂದೂ ನಾನು ನಂಬಿದವನಲ್ಲ. ಕಲೆ ಮತ್ತು ಸಾಹಿತ್ಯ ಮನುಷ್ಯ ಮನುಷ್ಯರ ನಡುವಿನ ಪ್ರೀತಿಯಿಂದ ಅರಳುವುದು ಎಂದು ನಂಬಿದವನು ನಾನು.”[೬]

ಕಲೆ ಮತ್ತು ಸಾಹಿತ್ಯ ಇರುವುದೇ ಮಾನವನ ಒಳಿತಿಗಾಗಿ ಎಂದು ನಂಬಿದ್ದ ಸಮುದಾಯದಿಂದ ಮಾತ್ರ ಇಂತಹ ಆಲೋಚನೆಗಳು ಬರಲು ಸಾಧ್ಯ. ದಲಿತರಿಗೆ ಹೇಲು ತಿನ್ನಿಸುತ್ತಲೋ, ಮೂತ್ರ ಕುಡಿಸುತ್ತಲೋ ಅವರನ್ನು ಬಿಟ್ಟಿ ಚಾಕರಿಗೆ ಒಳಗಾಗಿಸುತ್ತಲೋ ತಮ್ಮ ಸಂಸ್ಕೃತಿಯನ್ನು ಶ್ರೇಷ್ಠವೆಂದು ಕೊಂಡಾಡುವ ಹೀನ ಸಂಸ್ಕೃತಿಯವರು ಇಲ್ಲಿದ್ದಾರೆ. ಇವರಿಗೆ ಬರೆಯುವಂತಹ ಪ್ರಕ್ರಿಯೆ ಬಂದಿದ್ದೇ ದುಃಖ ಹಾಗೂ ಒತ್ತಡಗಳ ನಡುವೆ. ಇದನ್ನು ಗುರುತಿಸುತ್ತಲೇ ದಲಿತ ಕವಿಗಳು ಈ ದೇಶದ ಸುಸಂಸ್ಕೃತಿಯ ಮತ್ತೊಂದು ಮಗ್ಗುಲನ್ನು ತಮ್ಮ ಬರವಣಿಗೆಯ ಮೂಲಕ ತೋರಿಸಿಕೊಟ್ಟರು.

ಅವರು–
ಮನುಷ್ಯತ್ವ ಮಾರಿ
ಧರ್ಮವನು ಕೊಂಡರು
ಮನಗಳನು ಕೆಡವಿ
ಮಠಗಳನು ಕಟ್ಟಿದರು
ತಮ್ಮ ದೃಷ್ಟಿಯಿಂದ
ತಾವು ಜಾರಿದಾಗ
ಕಣ್ಣುಗಳನು ಮಾರಿ
ಕಪ್ಪು ಕನ್ನಡಕ ಧರಿಸಿದರು[೬೬]

ಈ ದೇಶದಲ್ಲಿ ನಿರಂತರವಾಗಿ ಧರ್ಮಭೋದನೆ ನಡೆಯುತ್ತಿದೆ. ಧರ್ಮದ ಹೆಸರಿನಲ್ಲಿ ನಡೆಯುವ ದೌರ್ಜನ್ಯ ಮಾತ್ರ ಇವರ ಬೋಧನೆಯಲ್ಲಿರುವುದಿಲ್ಲ. ಇದು ದೌರ್ಜನ್ಯಕ್ಕೊಳಗಾದವರಿಂದಲೇ ಅನಾವರಣಗೊಳ್ಳಬೇಕು. ಏಕೆಂದರೆ ಆಳುವ ವರ್ಗ ಯಾವಾಗಲೂ ಇಂತಹ ಅನಾವರಣಗಳನ್ನು ಹತ್ತಿಕ್ಕಲು ಪ್ರಯತ್ನಿಸುತ್ತಲೇ ಇರುತ್ತದೆ. ವಾಸ್ತವತೆಗೆ ಬೆನ್ನು ತಿರುಗಿಸಿ, ಸದಾ ಅವಾಸ್ತವತೆಗೆ ಕಲ್ಪನೆಯ ಬಣ್ಣ ಹಚ್ಚಿ ಮೈಮರೆವಿನ ಹಾಡು ಬರೆಯುವ ಕವಿ ಕೊಳೆತು ನಾರುತ್ತಿರುವ ಸಮಾಜಕ್ಕೆ ಯಾವ ಕೊಡುಗೆಯನ್ನೂ ನೀಡಲಾರ. ಏಕೆಂದರೆ ಇಂತಹ ಕವಿಗಳೂ ಕೂಡ ಆಳುವ ವರ್ಗದ ಹಿತಾಸಕ್ತಿಗೆ ಪರೋಕ್ಷವಾಗಿ ಒಳಗಾಗಿರುತ್ತಾರೆ. ಇಂತಹ ನೆಲೆಯನ್ನು ಸಿ.ವೀರಣ್ಣ ಅವರು ಅತ್ಯಂತ ಸಮಂಜಸವಾಗಿ ಹಿಡಿದಿಟ್ಟಿದ್ದಾರೆ. "ಸಮಾಜದಲ್ಲಿ ತಾನು ತಟಸ್ಥನಾಗಿದ್ದೇನೆಂದು ಹೇಳಿಕೊಳ್ಳುವವನೂ ಕೂಡ ತನಗರಿವಿಲ್ಲದೆಯೇ ಆಳುವ ವರ್ಗದ ಆಲೋಚನೆಗಳಿಗೆ ವಾಹಕನಾಗಿಬಿಡುತ್ತಾನೆ. ಏಕೆಂದರೆ ವರ್ಗ ಸಮಾಜದಲ್ಲಿ ಆಳುವ ವರ್ಗವು ತನ್ನದೇ ಆದ ಮೌಲ್ಯಗಳನ್ನು ಸಾಂಸ್ಕೃತಿಕ ರಂಗದ ಮೇಲೆ ಚಾಲನೆ ಮಾಡಿರುತ್ತದೆ. ಇಂತಹ ಸಂದರ್ಭದಲ್ಲಿ ಕವಿ ತನ್ನ ಕಾಣದ ಪ್ರಮುಖ ಸಾಮಾಜಿಕ ನಡೆಗಳನ್ನು ತನ್ನ ಕಾವ್ಯದಲ್ಲಿ ಗರ್ಭೀಕರಿಸಿಕೊಳ್ಳದೆ ಹೋದರೆ, ಅದು

ಕಾಲದ ವಾಸ್ತವತೆಯಿಂದ ದೂರವಾಗುತ್ತದೆ. ಕೃತಿಗೆ ಕೇಂದ್ರವಾಗುವ ಇಂತಹ ವಾಸ್ತವವೇ ಅದರ ಆಶಯವೂ ಆಗಿರುತ್ತದೆ. ಯಾವುದೋ ಕಾಲದ ನಿಯಮಗಳನ್ನು ನಂಬಿಕೊಂಡು ವರ್ತಮಾನವನ್ನು ಕಳೆದುಕೊಳ್ಳುವ ಕವಿಯನ್ನು ಚರಿತ್ರೆ ಕ್ಷಮಿಸುವುದಿಲ್ಲ."[೬೭]

ದಲಿತ ಕವಿಗಳು ಇಂತಹ ವರ್ತಮಾನದ ನೆಲೆಗಳನ್ನು ಸಮರ್ಥವಾಗಿ ಬಳಸಿಕೊಂಡರು. ದೇಶಾದ್ಯಂತ ದಲಿತರ ಮೇಲಿನ ದೌರ್ಜನ್ಯಗಳನ್ನು ತಮ್ಮ ಬರವಣಿಗೆಗಳ ಮೂಲಕ ಖಂಡಿಸಿ ಮಂಡಿಸಿದರು. ಇದರೊಂದಿಗೆ ಕವಿಗೆ ವಾಸ್ತವದ ಅರಿವು ಎಷ್ಟು ಮುಖ್ಯ ಎಂಬುದನ್ನು ತೋರಿಸಿಕೊಟ್ಟರು. ದಲಿತರ ಮನೆಗಳ ಚಿತ್ರಣದಿಂದ ಹಿಡಿದು ದಲಿತರು ಕೂಲಿ ಮಾಡುವ ಹೊಲಗದ್ದೆಗಳವರೆಗೂ ಕಾವ್ಯದ ವಸ್ತು ವಿಸ್ತರಿಸಿತು.

> ಹೊತ್ತಾರೆ ಎದ್ದು ಗುಡ್ಡ ಬೆಟ್ಟ ಸುತ್ತಿದವರು ನಾವು
> ತುತ್ತು ಕೂಳಿಗಾಗಿ ಜೀತಕ್ಕಿದ್ದವರು
> ಕಪ್ಪು ನೆಲದಲ್ಲಿ ಮುಖವಿಟ್ಟು ಕಣ್ಣೀರಿಟ್ಟವರು ನಾವು
> ನಮ್ಮ ಬಂಧನ ಕಳಚದ ಮಂತ್ರಿಯಾತಕೋ ನಿಮ್ಮ ಸರಕಾರ ಯಾತಕೋ
>
> ಬೆವರ ಹರಿಸಿ ದುಡಿದವರು ನಾವು
> ಬಿತ್ತಿ ಬೆಳೆ ಬೆಳೆದವರು
> ಬೆಟ್ಟದಂತ ಕನಸಕಟ್ಟಿ ರಾಶಿ ಮಾಡಿದವರು ನಾವು
> ನಮ್ಮ ಬೆಳೆಗೆ ಬೆಲೆ ಕಟ್ಟಲು
> ಮಂತ್ರಿಯಾತಕೋ ಸರಕಾರ ಯಾತಕೋ[೬೮]

ಇದು ದಲಿತರ ಬದುಕು. ಇಲ್ಲಿ ವಾಸ್ತವದ ಚಿತ್ರಣ ಇದೆ. ದಲಿತರ ವಾಸ್ತವತೆಯನ್ನು ದಲಿತರೇ ಬರೆದಾಗ ಅದು ತನ್ನ ಅಸ್ತಿತ್ವವನ್ನು ಸರಿಯಾಗಿ ಕಟ್ಟಿಕೊಡುತ್ತದೆ. ಏಕೆಂದರೆ ದಲಿತೇತರರು ಬರೆದ ಅನುಕಂಪಪೂರಿತ ದಲಿತರ ಚಿತ್ರಣ ದಲಿತರ ಒಡಲೊಳಗಿನ ತಲ್ಲಣಗಳನ್ನು ಸರಿಯಾಗಿ ಬಿಚ್ಚಿಡಲು ಸಾಧ್ಯವಿಲ್ಲ. ದಲಿತರಿಂದ ಮಾತ್ರ ದಲಿತರ ನೋವುಗಳನ್ನು ಸಮಂಜಸವಾಗಿ ಕಟ್ಟಲು ಸಾಧ್ಯ ಎಂಬುದನ್ನು ಅನೇಕ ದಲಿತರ ಬರವಣಿಗೆಗಳು ತೋರಿಸಿಕೊಟ್ಟಿವೆ. ಇದರ ಜೊತೆಯಲ್ಲೇ ತಮ್ಮ ನೋವುಗಳಿಗೆ ಕಾರಣ ಮತ್ತು ಕಾರಣಕರ್ತರನ್ನು ಉಲ್ಲೇಖಿಸಿವೆ. ಇಂತಹ ಉಲ್ಲೇಖಗಳು ಆಗಬಾರದೆಂದೇ ಆಳುವ ಭೂಮಾಲಿಕ ವರ್ಗದ ಆಶಯ. ಇದಕ್ಕಾಗಿ ಅದು ಅನೇಕ ತಂತ್ರಗಳನ್ನು ಮತ್ತು ದಿಕ್ಕು ತಪ್ಪಿಸುವ ಹುನ್ನಾರಗಳನ್ನು ಹುಡುಕುತ್ತಲೇ ಇರುತ್ತದೆ. ಆದರೆ ಇವರುಗಳ ನಡುವೆಯೇ ನಿಂತ ದಲಿತ ಕಾವ್ಯ ಇಂತಹ ಹುನ್ನಾರಗಳನ್ನು ಬಯಲು ಮಾಡುತ್ತಲೇ ದಲಿತರ ಹಿತಾಸಕ್ತಿಯನ್ನು ಬಿಚ್ಚಿಟ್ಟಿತು.

ಮೇಲಿನ ಮಾತುಗಳಿಗೆ ಪೂರಕವೆಂಬಂತೆ ಬಿ.ಎಂ. ಪುಟ್ಟಯ್ಯ ಅವರ ಮಾತುಗಳು ಇಲ್ಲಿ ಉಲ್ಲೇಖಾರ್ಹ "ದಲಿತ ಸಾಹಿತ್ಯವು ಪಡೆದುಕೊಳ್ಳುವ ವ್ಯಾಪ್ತಿ ಮತ್ತು ಸಂಕೀರ್ಣ ಚಲನಶೀಲತೆಗಳು ದಲಿತರ ಸಾಮಾಜಿಕ ಪಾತಳಿಯ ಪಾತಾಳಕ್ಕೆ ನಮ್ಮನ್ನು ಕರೆದುಕೊಂಡು ಹೋಗುತ್ತವೆ. ದಲಿತರ ಒಡಲಾಳದ ಹಸಿವು, ಅಪಮಾನ, ಅಸಹಾಯಕತೆ, ಪ್ರತಿರೋಧ, ಕನಸು ಇವೆಲ್ಲವನ್ನೂ ತೋರಿಸುತ್ತವೆ. ಇವುಗಳಿಗೆ ಕಾರಣವಾಗಿರುವ ಭೂ ಸಂಬಂಧಗಳನ್ನು ಹಾಗೂ ದುಡಿಮೆಯ ಸಂಬಂಧಗಳನ್ನು ಮುಖ್ಯವೆಂದು ಎತ್ತಿ ತೋರಿಸುತ್ತವೆ. ಜಮೀನ್ದಾರಿ ವ್ಯವಸ್ಥೆ ಮತ್ತು ಸಾಮ್ರಾಜ್ಯಶಾಹಿ ವ್ಯವಸ್ಥೆಯ ವಿಷವರ್ತುಲದಲ್ಲಿ ದಲಿತರ ನಿಜವಾದ ಸಮಸ್ಯೆಗಳಿವೆ ಎಂಬುದನ್ನು ಅವು ಮನವರಿಕೆ ಮಾಡಿಕೊಡುತ್ತವೆ."[೬೯]

ದಲಿತರ ಇಡೀ ಬದುಕಿನ ಹೋರಾಟವೇ ಭೂಮಿಯ ಅಸಮಾನ ಹಂಚಿಕೆಗಳ ವಿರುದ್ಧವಾಗಿ. ಇದು ಪ್ರಧಾನವಾಗಿ ರೂಪುಗೊಂಡಿದ್ದರೆ ಬಹುಶಃ ದಲಿತರ ಹೋರಾಟ ಈಗಾಗಲೇ ಒಂದು ಸಮಾನ ಪಾತಳಿಯ ಹಂತ ತಲುಪುತಿತ್ತು. ಆದರೆ ಭೂಮಾಲಿಕ ಮತ್ತು ಬಂಡವಾಳಶಾಹಿಗಳು ಅತ್ಯಂತ ಪ್ರಜ್ಞಾಪೂರ್ವಕವಾಗಿ ಇದನ್ನು ಹತ್ತಿಕ್ಕಿ ದಲಿತ ಮುಂಚೂಣಿ ಹೋರಾಟಗಾರರನ್ನು ತಮ್ಮ ತೆಕ್ಕೆಯಲ್ಲಿ ಬಂಧಿಸಿತು. ಈ ಬಂಧನದಿಂದ ಕಳಚಿಕೊಳ್ಳಲು ಸಾಧ್ಯವಾಗದ ಎಷ್ಟೋ ದಲಿತ ಹೋರಾಟಗಾರರು ಮೇಲ್ವರ್ಗ ಪ್ರಣೀತ ಆಶಯಗಳಿಗೆ ತಕ್ಕಂತೆ ಕುಣಿಯಲು ಪ್ರಾರಂಭಿಸಿದರು. ಆ ಮೂಲಕ ದಲಿತರ ಹಿತಾಸಕ್ತಿಗಳಿಗೆ ತೇಪೆ ಹಚ್ಚುವ ಕೆಲಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಇದಕ್ಕೆ ಪೂರಕವೆಂಬಂತೆ ಕೆಲವು ದಲಿತ ಕವಿಗಳು ತಮ್ಮ ಕಾವ್ಯಗಳಲ್ಲಿ ಸಾಕ್ಷರತಾ ಆಂದೋಲನದಂತಹ ಕಾರ್ಯಕ್ರಮಗಳನ್ನು ಹೊಗಳುವ ಕೆಲಸ ಮಾಡಿದರು. ದಲಿತರ ಹಿತಶತ್ರು ಬಂಡವಾಳಿಗರು ಎಂಬುದನ್ನು ಮರೆತು ದಲಿತರ ಹಿತಶತ್ರು ಬ್ರಾಹ್ಮಣರು ಎಂದು ಬಿಂಬಿಸಿದರು. ಇದರೊಂದಿಗೆ ತಮ್ಮ ಕೃತಿಗಳನ್ನು ಬಂಡವಾಳ ಪ್ರಭುತ್ವ ಪ್ರಣೀತ ಆಳುವ ನಾಯಕರುಗಳಿಗೆ ಅರ್ಪಿಸಿದರು. ಇದೆಲ್ಲದರ ಪರಿಣಾಮವಾಗಿ ತಮ್ಮ ಹೋರಾಟ ಮನೋಭಾವಕ್ಕೆ ವಿಮುಖರಾಗಿ ತಟಸ್ಥ ಧೋರಣೆಯನ್ನು ಅನುಸರಿಸಿದರು.

ವರ್ಗ ತಾರತಮ್ಯವು ದಲಿತರನ್ನು ಕೊಂದಿದೆ. ಹಾಗೆಯೇ ಜಾತಿ ತಾರತಮ್ಯವೂ ಅವರನ್ನು ಸಮಾಜದ ಕಟ್ಟಕಡೆಗೆ ನೂಕಿದೆ. ಈ ತಾರತಮ್ಯದ ನೆಲೆಗಳನ್ನು ಕನ್ನಡ ಸಾಹಿತ್ಯ ಪರಂಪರೆ (ದಲಿತ-ಬಂಡಾಯ ಸಾಹಿತ್ಯ ಬರುವವರೆಗೂ) ಅನಾವರಣಗೊಳಿಸಿ ಅದರ ವಿರುದ್ಧ ಹೋರಾಟಕ್ಕೆ ಕರೆಕೊಡುವ ಬರವಣಿಗೆ ಬಂದದ್ದು ತೀರಾ ಕಡಿಮೆ. ಅಂತಹ ಬರವಣಿಗೆಯೇ ಬಂದಿಲ್ಲ ಎಂದು ಸಾರಾಸಗಟಾಗಿ ತಿರಸ್ಕರಿಸಲು ಸಾಧ್ಯವಿಲ್ಲ. ಕಡಿಮೆ ಎನ್ನಬಹುದು. ಇದಕ್ಕೆ ಅವರ ಸಾಮಾಜಿಕ ಪರಿಸರವೂ ಕಾರಣವಿರಬಹುದು. ಕುವೆಂಪುವಿನಂತಹ ದೊಡ್ಡ ಬರಹಗಾರರು ಈ ತಾರತಮ್ಯದ ನೆಲೆಗಳ ಬಗ್ಗೆ ತಕರಾರು ಎತ್ತಿದರು. ಆದರೆ ಅದು

ದಲಿತರ ನೆಲೆಯಿಂದ ಹೊರ ನಿಂತು ನೋಡಿದಂತಿತ್ತು. ಅವರ ಮಿತಿಯನ್ನು ಬಿ. ಕೃಷ್ಣಪ್ಪನಂತಹ ದಲಿತ ಹೋರಾಟಗಾರರು ಆಗಲೇ ಗುರುತಿಸಿ ಪರ್ಯಾಯ ಆಲೋಚನೆ ದಲಿತರಿಂದಲೇ ನಡೆಯಬೇಕೆಂದು ಮನಗಾಣಿಸಿದ್ದಾರೆ.

ನಾನೊಂದು ಮರವಾಗಿದ್ದರೆ
ಹಕ್ಕಿಗೂಡು ಕಟ್ಟುವ ಮುನ್ನ
ಕೇಳುತ್ತಿರಲಿಲ್ಲ ನೀನು ಯಾವ ಕುಲ
ಬಿಸಿಲು ನನ್ನ ಅಪ್ಪಿಕೊಂಡಾಗ
ನೆರಳಿಗಾಗುತ್ತಿರಲಿಲ್ಲ ಮೈಲಿಗೆ
ತಂಬೆಲರ ಕೂಡ ಎಲೆಗಳ ಸ್ನೇಹ
ಮಧುರವಾಗಿರುತ್ತಿತ್ತು.

ಮಳೆ ಹನಿಗಳು ನಾನು ಶ್ವಪಚನೆಂದು
ಹಿಂದೆ ಸರಿಯುತ್ತಿರಲಿಲ್ಲ, ನಾನು
ಬೇರೂರಿ ಕುಡಿಯಿಡುತ್ತಿರುವಾಗ ಭೂದೇವಿ
ಮಡಿಮಡಿ ಎಂದು ಓಡುತ್ತಿರಲಿಲ್ಲ
ಪವಿತ್ರ ಗೋವು ನನ್ನ ತೊಗಟೆಗೆ ತನ್ನ ಮೈ ಉಜ್ಜಿ
ತುರಿಕೆ ತೀರಿಸಿಕೊಳ್ಳುವಾಗ ಅದರ ಅಂಗಾಂಗಗಳಲ್ಲಿ
ಅಡರಿಕೊಂಡ ಮುಕ್ಕೋಟಿ ದೇವತೆಗಳು
ನನ್ನನ್ನು ಮುಟ್ಟಿಸಿಕೊಳ್ಳುತ್ತಿದ್ದರು[೨೦]

ಇಲ್ಲಿ ಕವನ ಮನುಷ್ಯ ಸಂಸ್ಕೃತಿಯನ್ನು ತಿರಸ್ಕರಿಸಿ, ಮರ ಸಂಸ್ಕೃತಿಯನ್ನು ಶ್ರೇಷ್ಠ ಎನ್ನುತ್ತಿದೆ. ಇಂಡಿಯಾ ಜಾತಿ ವ್ಯವಸ್ಥೆಯ ಕೂಪದಲ್ಲಿ ನರಳುತ್ತಿದೆ. ನೊಂದ ಅಸ್ಪೃಶ್ಯರ ಒಡಲಾಳದ ಪ್ರತಿರೋಧ ಇಲ್ಲಿ ಕವನದ ಸಾಲುಗಳಾಗಿ ನಿರೂಪಿತಗೊಂಡಿವೆ. ಪ್ರಕೃತಿಯ ಯಾವ ಜೀವ ಚೈತನ್ಯಗಳಲ್ಲೂ ಜಾತೀಯತೆ ಸೋಂಕಿಲ್ಲ. ಆದರೆ ಮನುಷ್ಯ ಜಾತಿ ಮಾತ್ರ ಹಲವು ಪಂಗಡ ಪಂಗಡಗಳನ್ನು ವಿಂಗಡಿಸಿದೆ. ವಿಂಗಡಿಸಿ ಸಮಾಜದ ಕಟ್ಟಕಡೆಯ ಮನುಷ್ಯರನ್ನು ಅಧೋಗತಿಗೆ ತಳ್ಳಿದೆ. ಈ ಅಧೋಗತಿಗೆ ಕಾರಣರಾದ ಕಾರಣಕರ್ತರು ಪೂರ್ವಜನ್ಮದ ಕರ್ಮಫಲಗಳ ಹೆಸರಿನಲ್ಲಿ ಈ ಜಾತೀಯತೆಯನ್ನು ನಿರಂತರವಾಗಿ ಕಾಪಾಡಿಕೊಂಡು ಬರುತ್ತಿದ್ದಾರೆ. ಬಿ.ಎಂ. ಪುಟ್ಟಯ್ಯ ಅವರು ಹೇಳುವ ಹಾಗೆ "ಕೆಲವು ಜಾತಿಗಳು ತಮ್ಮ ತಮ್ಮ ಆರ್ಥಿಕ ಹಾಗೂ ಸಾಮಾಜಿಕ ಲಾಭಗಳಿಗಾಗಿ ಈ ಜಾತಿಯನ್ನು

ಹಾಗೆ ಉಳಿಸಿಕೊಂಡು ಬಂದಿವೆ."[೨೧] ಈ ಜಾತಿ ವ್ಯವಸ್ಥೆಯ ಕರಾಳ ಮುಖಗಳನ್ನು 'ಮನುಷ್ಯ ಜಾತಿ ತಾನೊಂದೆ ವಲಂ' ಎನ್ನುವ ಪಂಪನಿಂದ ಹಿಡಿದು 'ಮನುಜ ಮತ ವಿಶ್ವ ಪಥ' ಎನ್ನುವ ಕುವೆಂಪುವರೆಗೂ ಒಂದಲ್ಲಾ ಒಂದು ರೀತಿಯಲ್ಲಿ ವಿಶ್ಲೇಷಣೆ ಮಾಡುತ್ತಲೆ ಬರಲಾಗಿದೆ. ಆದರೆ ಯಾರೂ ಇದನ್ನು ಬುಡಮೇಲು ಕೀಳಬೇಕೆನ್ನುವ ಮಹತ್ವಾಕಾಂಕ್ಷೆಯಿಂದ ತಮ್ಮ ಇಡೀ ಕೃತಿಗಳನ್ನು ಅರ್ಪಿಸಿಕೊಳ್ಳಲಿಲ್ಲ.

ಆದರೆ ಈ ಜಾತಿಯ ಕರಾಳ ಕೈಗಳಲ್ಲಿ ಬಂಧಿಯಾಗಿದ್ದು ದಲಿತರು. ಆದ್ದರಿಂದ ಜಾತಿಯ ಆಳ ವಿಸ್ತಾರಗಳನ್ನು ಸಾಹಿತ್ಯದ ಮೂಲಕ ಹೊರಹಾಕಿದರು. ಏಕೆಂದರೆ ಜಾತಿಯ ಬೆಂಕಿ ಇವರನ್ನು ಸುಟ್ಟಷ್ಟು ಮತ್ಯಾರನ್ನು ಸುಟ್ಟಿಲ್ಲ. ಇದಕ್ಕೆ ಡಾ. ಬಿ.ಆರ್. ಅಂಬೇಡ್ಕರ್ ಅವರ ಇಂಡಿಯಾ ದೇಶದ ಜಾತಿ ಮತ್ತು ಆರ್ಥಿಕ ವ್ಯವಸ್ಥೆಯ ತಳಸ್ಪರ್ಶಿ ಅಧ್ಯಯನಗಳು ಪ್ರೇರಕ ಶಕ್ತಿಯಾಗಿದ್ದವು. ಜೊತೆಗೆ ತುಳಿತಕ್ಕೊಳಗಾದವರ ಪರ ಅಂಬೇಡ್ಕರ್ ಅವರ ನಿರಂತರ ಹೋರಾಟಗಳು ದಲಿತರಲ್ಲಿ ಪ್ರಭಾವ ಮತ್ತು ಪ್ರೇರಣೆ ಉಂಟುಮಾಡಿದವು.

ಅಸ್ಪೃಶ್ಯತೆಯ ಪ್ರಪಾತದೊಳಗೆ ಬಿದ್ದು
ಅನುಭವಿಸಿದ ನೋವುಗಳನ್ನೆಲ್ಲಾ
ಮೆಲುಕು ಹಾಕುತ್ತಾ ಕುಳಿತ ಅಜ್ಜನ ಬಳಿಗೆ
ಅಡಿಯಿಟ್ಟಳು ಮೆಲ್ಲಗೆ ಭಾರತಮಾತೆ–
ಕ್ಷಮಿಸಿಬಿಡು ಮಗನೆ
ನಿನ್ನ ಸಂಕಟಗಳನ್ನೆಲ್ಲ ಕಂಡೂ ಕಾಣದಂತೆ
ಕುಳಿತಿರುವ ನನ್ನನ್ನು ಎಂದಳು[೨೨]

ಇಲ್ಲಿ ಭಾರತಮಾತೆಯಷ್ಟೇ ಅಲ್ಲ; ಭಾರತಮಾತೆಯ ಮಾನಸ ಪುತ್ರರೆನಿಸಿಕೊಂಡ ಅನೇಕ ವಿದ್ವತ್ ಪ್ರಪಂಚದ ವಾರಸುದಾರರು, ದೇಶಕ್ಕಾಗಿ ನಮ್ಮ ಪ್ರಾಣ ಬೇಕಾದರೂ ಕೊಡುತ್ತೇವೆ ಎನ್ನುವ ದೇಶಭಕ್ತರು, ಸರಸ್ವತಿಯನ್ನೇ ಧರೆಗಿಳಿಸಿ ತಮ್ಮ ಕಾವ್ಯ ಮುಖೇನ ಸಂತುಷ್ಟಿಗೊಳಿಸುವಂತವರೂ ಕೂಡ ಈ ಜಾತಿಯ ವಿಷ ಬೀಜವಾದ ಅಸ್ಪೃಶ್ಯತೆಯನ್ನು ಕಂಡೂ ಕಾಣದಂತೆ ಅಥವಾ ತಮಗೂ ಅದಕ್ಕೂ ಸಂಬಂಧವಿಲ್ಲವೆಂಬಂತೆ ಬದುಕುತ್ತಲೇ ಬಂದಿದ್ದಾರೆ. ಇವರಲ್ಲಿ ಜಾತಿಯ ಇರುವಿಕೆಯನ್ನು ಸಮರ್ಥಿಸಿಕೊಳ್ಳುವ ಮಹಾ ಮೇಧಾವಿಗಳಿಗೇನೂ ಕಡಿಮೆಯಿಲ್ಲ. ಇನ್ನೂ ಕೆಲವರು 'ನಾವು ದಲಿತರ ಪರ' ಎಂಬ ಘೋಷಣೆಗಳನ್ನು ಸದಾ ನೀಡುತ್ತಲೇ ಇರುತ್ತಾರೆ. ಇಂತವರಿಗೆ ಬೆಂಗಳೂರಿನಲ್ಲಿ ನಿರ್ಮಿಸಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅಂಬೇಡ್ಕರ್ ಹೆಸರಿಡುವುದು ಮುಖ್ಯವಾಗುತ್ತದೆ. ಆದರೆ ದಲಿತರ ಭೂಮಿಯೊಂದಿಗಿನ ಹೋರಾಟಕ್ಕೆ ಇವರು ಅಪ್ಪಿತಪ್ಪಿಯೂ ಜೊತೆ ನಿಲ್ಲುವುದಿಲ್ಲ.

ಇಂತಹ ಶೋಷಕ ವ್ಯವಸ್ಥೆಯ ಹುನ್ನಾರಗಳನ್ನು ಕುರಿತು ಅಂಬೇಡ್ಕರ್ ಅವರು ಹೀಗೆ ಗ್ರಹಿಸಿದ್ದಾರೆ. "ಶೋಷಕರು ಅನುಭವಿಸುತ್ತಿರುವ ಸವಲತ್ತುಗಳಿಗೆ ಯಾವುದೇ ಅಪಾಯವು ಬರುವ ತನಕ ಅವರು ಉತ್ತಮ ವಿಚಾರವಾದಿಗಳಾಗಿರುತ್ತಾರೆ. ಆದರೆ ಆ ಸವಲತ್ತುಗಳಿಗೆ ಆ ವಿಚಾರವಾದಗಳಿಂದ ಏನಾದರೂ ಧಕ್ಕೆ ಬರುತ್ತದೆ ಎಂದ ಕೂಡಲೇ ಅವರ ವಿಚಾರವಾದವು ಸೋತು ಹೋಗುತ್ತದೆ."[೬೩] ಇಂತವರಿಂದ ದಲಿತರ ಸಮಸ್ಯೆಗಳಿಗೆ ತೇಪೆ ಹಚ್ಚುವ ಕೆಲಸಗಳು ಸಿಗುತ್ತವೆಯೇ ಹೊರತು ಅವರ ಸಮಸ್ಯೆಗಳು ಸಂಪೂರ್ಣವಾಗಿ ಸರ್ವನಾಶ ಹೊಂದಲು ಸಾಧ್ಯವಿಲ್ಲ. ಇಂತಹ ಆಳುವ ವರ್ಗದ ಹುನ್ನಾರಗಳಿಗೆ ಶೋಷಿತರು ಬಲಿಯಾಗುವುದು ತಪ್ಪುವವರೆಗೂ ದಲಿತರಿಗೆ ಮಲ ತಿನ್ನಿಸಿ, ಮೂತ್ರ ಕುಡಿಸುವುದಾಗಲಿ, ಕೊಲೆ ಮಾಡಿಸುವುದಾಗಲೀ, ಅತ್ಯಾಚಾರ, ಅವಮಾನಗಳನ್ನು ತಡೆಯುವುದಾಗಲೀ, ಸಾಮೂಹಿಕ ದಹನವಾಗಲೀ, ಕಾಲಿಗೆ ಸರಪಳಿ ಬಿಗಿದು ಕಡ್ಡಾಯ ಜೀತಕ್ಕೆ ಒಡ್ಡಿರುವುದನ್ನಾಗಲೀ, ದಿನನಿತ್ಯ ನಡೆಯುತ್ತಿರುವ ಬಹಿಷ್ಕಾರಗಳನ್ನಾಗಲೀ ತಪ್ಪಿಸಲು ಸಾಧ್ಯವಿಲ್ಲ. ದಿನನಿತ್ಯದ ಶೋಷಣೆಯ ಬದುಕು ದಲಿತರದು. ಇವರು ಇಲ್ಲಿ ಹುಟ್ಟಿರುವುದಕ್ಕೆ ಹೆಮ್ಮೆ ಪಡಬೇಕೋ ಅಥವಾ ಇನ್ನೊಮ್ಮೆ ಇಂತಹ ಪುಣ್ಯಭೂಮಿಯಲ್ಲಿ ಹುಟ್ಟಿಬರಬೇಕೆಂಬ ಆಕಾಂಕ್ಷೆಯಿಂದ ಸಾಯಬೇಕೋ ತಿಳಿಯದು. ಅದನ್ನು ಮಲ ತಿನ್ನಿಸಿಕೊಂಡೋ ಅಥವಾ ತಿಂದ ಅಣ್ಣ ತಮ್ಮಂದಿರ ಜಾಗದಲ್ಲಿ ನಿಂತೋ ನೋಡಬೇಕಾಗಿದೆ. ಇಂತಹ ಒಂದು ಅವ್ಯವಸ್ಥೆಯನ್ನು ಮಹಾದೇವರ ಕವನ ಕಟ್ಟುವ ರೀತಿ ಹೀಗಿದೆ..

ಎಲ್ಲ ಮಕ್ಕಳೂ ಇಲ್ಲಿ
ಹೊಟ್ಟೆ ತುಂಬ ಉಂಡು, ಮೈ ತುಂಬ ಉಟ್ಟು ಕಣ್ಣಲ್ಲಿ
ನೂರಾರು ಕನಸುಗಳ ತುಂಬಿ
ಕಂಪ್ಯೂಟರಿನ ಮುಂದೆ ಕುಳಿತಿರುವಾಗ
ನಮ್ಮ ಮಕ್ಕಳು ಮಾತ್ರ
ಅರೆಬೆತ್ತಲೆಯಾಗಿ ಅರೆಹೊಟ್ಟೆಯಲ್ಲೇ ಸಂತೃಪ್ತರಾಗಿ
ಕನಸುಗಳೇ ಇಲ್ಲದ ಕಣ್ಣು ಬಿಟ್ಟು
ನೆಲಕ್ಕೆ ಅಂಡೂರಿ ಮಣ್ಣಿನಾಟವಾಡುತಿರಲು
ಸೊಗಸು ಎನ್ನಲೆ ಬದುಕನು?[೬೪]

ಇಂಡಿಯಾದಲ್ಲಿ ಇಷ್ಟೆಲ್ಲಾ ಸಮಸ್ಯೆಗಳಿದ್ದರೂ 'ಭಾರತ ಪುಣ್ಯವಂತರ ಭೂಮಿ' ಎಂದು ನಂಬಿಸಲಾಗಿದೆ. 'ಕನ್ನಡ ನಾಡು ಚಿನ್ನದ ನಾಡು' ಎಂಬುದನ್ನು ಹಾಡಿ ಹೊಗಳಲಾಗಿದೆ. ಇದು ಶಾಲೆ ಕಲಿಯಲು ಸೇರುವ ಮಗುವಿನ ಪಠ್ಯಪುಸ್ತಕ ರಚನೆಯಿಂದಲೇ ಪ್ರಾರಂಭವಾಗಿರುತ್ತದೆ.

ಇಲ್ಲಿಂದ ಹಿಡಿದು ಅದು ಓದು ಮುಗಿಸುವವರೆಗೂ ಇಂತದೇ ಆಲೋಚನೆಗಳನ್ನು ಪಠ್ಯಪುಸ್ತಕವನ್ನು ಆಕ್ರಮಿಸಿಕೊಂಡಿರುತ್ತವೆ. ಆಳುವ ವರ್ಗದ ಆಲೋಚನೆಗಳು ಇಡೀ ಶಿಕ್ಷಣದ ಪಠ್ಯವನ್ನು ಕೇಂದ್ರೀಕರಿಸಿಕೊಂಡಿವೆ. ಅದಕ್ಕೆ ಮಗುವಿಗೆ 'ಅ'–ಅರಸ ಎನ್ನುವ ರಾಜಪ್ರಭುತ್ವದ ಚಿತ್ರಣವನ್ನೇ ಕಲಿಸಲಾಗುತ್ತದೆ. ಹಾಗೆಯೇ 'ಆ'–ಆಕಳು ಎನ್ನುವಾಗ ಅದು ನಮ್ಮ ದಿನನಿತ್ಯದ ಒಡನಾಡಿ ಎಂದು ಹೇಳುತ್ತಿಲ್ಲ. ಬದಲಾಗಿ ಅದರ ದೇಹದ ಇಂಚಿಂಚಿನಲ್ಲೂ ಮುಕ್ಕೋಟಿ ದೇವತೆಗಳು ತುಂಬಿರುತ್ತವೆ ಎನ್ನುವ ಹಿಂದೂ ಧಾರ್ಮಿಕ ನೆಲೆಯಲ್ಲಿ ಕಲಿಸಲಾಗುತ್ತದೆ. ಇಂತಹ ಓದಿನ ಪರಂಪರೆಯನ್ನು ಕೊಂಡಾಡಲು ಅನೇಕ ದಲಿತ ಕವಿಗಳು ತಮ್ಮ ಕಾವ್ಯಗಳನ್ನು ಮುಡಿಪಾಗಿಟ್ಟಿರುವುದು ಒಂದು ವ್ಯಂಗ್ಯ. ಇದಕ್ಕೆ ಉದಾಹರಣೆಯೆಂಬಂತೆ ಟಿ.ಎಂ. ಭಾಸ್ಕರ್ ಅವರ ಕವನ ನಿರೂಪಣೆಗೊಂಡಿರುವುದು ಹೀಗೆ;

ಬಂತು ಇದು ಬಂತು
ಅಕ್ಷರ ಕ್ರಾಂತಿ ಹೊಸತನ ತಂತು

ಮುತ್ತಿನ ಮೂರು ಅಕ್ಷರ
ಕಲಿತು ಕಲಿಸುವ, ಉಳಿಸುವ
ಉಳಿಸಿ ಬೆಳೆಸುವ
ಬೆಳೆಸಿ ಶಾಂತಿ ಸುರಿಸುವ

ಗುಡಿಸಲು ಚೆಪ್ಪರಗಳಿಗೆ ಹೋಗೋಣ
ರೈತ ಕಾರ್ಮಿಕ ಕೂಲಿಕಾರರ ಕರೆಯೋಣ
ಬರೆಯೋಣ ನಾವು ಬರೆಸೋಣ
ಓದು ಬರಹ ನಾವು ಕಲಿಯೋಣ

ಭೇದ ಭಾವ ಮರೆಸುವ
ಮರೆಸಿ ಚೆಂದ ಕಲಿಸುವ
ಕಲಿಸುತ ಅಕ್ಷರ ಸುರಿಸುವ
ಚಂದನದ ರಸವ ಸುರಿಸುವ[೭೫]

ಅಕ್ಷರದಿಂದ ಭೇದ ಭಾವ ಹೋಗುತ್ತದೆ. ರೈತ ಕೂಲಿ ಕಾರ್ಮಿಕರ ಬದುಕು ಬದಲಾಗುತ್ತದೆ ಎನ್ನುವ ಆಲೋಚನೆಗಳು ಮೇಲಿನ ಕಾವ್ಯದ ಸಾಲುಗಳಲ್ಲಿ ನಿರೂಪಿತಗೊಂಡಿದೆ. ಅಕ್ಷರ ಆಳುವ ವರ್ಗದ ಗುಲಾಮಗಿರಿತನಕ್ಕೆ ಮತ್ತೊಂದು ಮೆಟ್ಟಿಲಾಯಿತೇ ಹೊರತು ಬಡವರ

ಬದುಕಿನ ನೋವನ್ನು ಹೋಗಲಾಡಿಸದಿರುವುದು ಚಾರಿತ್ರಿಕ ಸತ್ಯ. ದಲಿತರು ಇಂತಹ ಬೌದ್ಧಿಕ ಆಕ್ರಮಣಗಳ ವಿರುದ್ಧ ಇಡಿಯಾಗಿ ಪ್ರತಿಭಟಿಸಬೇಕಿತ್ತು. ಆದರೆ ಇದು ಅವರಿಂದ ಸಾಧ್ಯವಾಗಲೇ ಇಲ್ಲ. ಇಂತಹ ಆಲೋಚನೆಗಳನ್ನು ಆಳುವ ವರ್ಗ ಪ್ರಬಲವಾಗಿ ಬೇರೂರಿಸಿದೆ. ಇದು ನಶಿಸಲು ಸಾಧ್ಯವಿಲ್ಲವೇನೋ ಎನ್ನುವಷ್ಟರ ಮಟ್ಟಿಗೆ ಅದು ಬೇರೂರಿದೆ. ಅದು ಜನಪರವೋ ಕೆಲವೊಂದು ಜನಾಂಗಗಳ ಪರವೋ ಎಂಬುದನ್ನು ಈಗಾಗಲೇ ಅನೇಕ ದಲಿತ ಕಾವ್ಯಗಳು ಸಾಬೀತುಪಡಿಸಿವೆ. ಇಂತಹ ಕಾವ್ಯಗಳಲ್ಲಿ ಮಾನಸಯ್ಯ ಅವರ ಪದ್ಯ ಬಹಳ ಮುಖ್ಯವೆನಿಸುತ್ತದೆ.

ದಿಲ್ಲಿ ದಿಲ್ಲೆಂತಿರಿ
ಅದು ಎಂತಹ ದಿಲ್ಲಣ್ಣ
ಮುಗಿಲ ಮ್ಯಾಲೈತೊ ಕೆಳಗೈತೊ ಕೋಲೆ
ಮುಗಿಲನ್ನ ಮ್ಯಾಗಿಲ್ಲ
ಪಾತಾಳದ ಕೆಳಗಿಲ್ಲ
ನಮ್ಮ ನಿಮ್ಹೊಗಲ ಮ್ಯಾಲತೋ ಕೋಲೆ ।ಕೋಲೆ।

ಅಣ್ಣ : ಶ್ಯಾಹರದಾಗೋದಿದ ಶ್ಯಾಣವನಾದ ನನ ತಮ್ಮ
ನಮ್ಮ ರಾಷ್ಟ್ರ ಪ್ರಾಣಿಯ ಹೆಸರೇನಾ ಕೋಲೆ
ತಮ್ಮ : ಮಾಸ್ತರೇಳಿದ ಮಾತು ಪುಸ್ತಕದಾಗ ಇತ್ತು
ಹುಲಿರಾಜನೆಂದು ತಿಳಿದುಕೊಳ್ಳೊ ಕೋಲೆ
ಅಣ್ಣ : ದೇಶದ ಬಿತ್ತನೆ ಕೆಲಸ ಎತ್ತಿನ ಮ್ಯಾಲಿರುವಾಗ
ಮಣ್ಣಿನ ಮಗ ನಮ್ಮ ಬಸವಣ್ಣ ಕೋಲೆ
ಮಣ್ಣಿನ ಮಗ ನಮ್ಮ ಬಸವಣ್ಣ ಬಂಗಾರದ್ದೋರಿ
ರಾಷ್ಟ್ರಕ್ಕೆ ರಾಜನೆಂದು ಬರೆದುಕೊಳ್ಳೊ ಕೋಲೆ
ಅಣ್ಣ : ಪಟ್ಟಣದಾಗ ಓದಿದ ಪಂಡಿತ ನನ ತಮ್ಮ
ನಮರಾಷ್ಟ್ರ ಪಕ್ಷಿಯ ಹೆಸರೇನಾ ಕೋಲೆ
ತಮ್ಮ : ಮಾಸ್ತರೇಳಿದ ಮಾತು ಪುಸ್ತಕದಾಗ ಇತ್ತು
ಬಣ್ಣದ ನವಿಲೆಂದು ತಿಳಿದುಕೊಳ್ಳೊ ಕೋಲೆ
ಅಣ್ಣ : ಮೂಡಣ ಸುದ್ದಿಯ ಮುಂಗೋಳಿ ತತ್ತಿ ಹಾಕುವ ಪುತ್ಥಳಿ
ಕೋಳಿ ಕೆಂಗೋಳೆಂದು ತಿಳಿದುಕೊಳ್ಳೊ ಕೋಲೆ[೬೩]

ಅಣ್ಣ ತಮ್ಮರ ಸಂವಾದದಲ್ಲಿ ಕವನ ನಿರೂಪಿತಗೊಂಡಿದೆ. ಈ ಕವನ ಆಧುನಿಕ ಶಿಕ್ಷಣ ಮತ್ತು ಅದರ ಹಿಂದಿರುವ ತಂತ್ರಗಾರಿಕೆ ಕುರಿತು ಮಾತನಾಡುತ್ತಿದೆ. ಶಾಲೆಯಲ್ಲಿ ಓದುವ ತಮ್ಮನಿಗೆ ಸ್ವಂತ ಆಲೋಚನೆಗಳೇ ಇಲ್ಲ. ಅವನದು ಮೇಲ್ವರ್ಗ ಪ್ರಣೀತ ಆಲೋಚನೆಗಳ ಆಗರ. ಆದರೆ ಅಣ್ಣ ಮಣ್ಣಿನಾಳದ ಬೇರಿನ ಸಂಬಂಧವುಳ್ಳವನು. ಅದಕ್ಕೆ ಅವನಿಗೆ ಇಲ್ಲಿ ನಂಬಿಸಲಾಗುತ್ತಿರುವ ಅನೇಕ ಆಲೋಚನೆಗಳ ಬಗ್ಗೆ ತಕರಾರಿದೆ ಮತ್ತು ಪರ್ಯಾಯ ಆಲೋಚನೆಯೂ ಇದೆ. ತಮ್ಮ ಸುಖ ಸಂಪತ್ತಿಗೆ ಕಾರಣವಾದ ದುಡಿಯುವವರ ಬೆವರಿನ ಹನಿಗಳಿಗೆ ಬೆಲೆ ಕೊಡದ ಪ್ರಭುತ್ವಶಾಹಿಗಳು ಇಲ್ಲಿದ್ದಾರೆ. ಇವರು ದುಡಿಯುವವರನ್ನೇ ಊರ ಹೊರಗಿರಿಸಿ ತಮಗೂ ಅವರಿಗೂ ಸಂಬಂಧವೇ ಇಲ್ಲ ಎನ್ನುವಂತೆ ಬದುಕುತ್ತಿದ್ದಾರೆ. ಈ ದೃಷ್ಟಿಕೋನ ಮುಂದುವರಿದಂತೆ ಮನುಷ್ಯನ ನಿತ್ಯನಿರಂತರ ಒಡನಾಡಿಗಳಿಗೆ ಬೆಲೆ ಕೊಡದ ಇಲ್ಲಿನ ಕೆಲವರು ರಾಷ್ಟ್ರಪಕ್ಷಿ, ರಾಷ್ಟ್ರಪ್ರಾಣಿ, ರಾಷ್ಟ್ರಧ್ವಜ, ರಾಷ್ಟ್ರಭಾಷೆ ಹೆಸರಿನಲ್ಲಿ ನೆಲಕ್ಕೂ ಬೇರಿಗೂ ಸಂಬಂಧವಿಲ್ಲದ ಸಂಗತಿಗಳನ್ನು ಎಲ್ಲರ ಮೇಲೆ ಹೇರುತ್ತಾ ಬಂದಿದ್ದಾರೆ. ಇಂತಹ ದುಡಿವವರ ವಿರೋಧಿ ನೆಲೆಗಳನ್ನು ದಲಿತ ಕಾವ್ಯ ತನ್ನ ಪ್ರತಿರೋಧದ ಮೂಲಕ ಹೊರಹಾಕಿದೆ.

ಜನರಿಂದ ದೂರ ನಿಂತ ಇಂತಹ ಆಲೋಚನೆಗಳು ಭಗ್ನಗೊಳ್ಳಬೇಕು. ಇಲ್ಲದಿದ್ದರೆ ಜನಪರವಾದ ಅಸ್ತಿತ್ವಗಳು ಉಳಿಯಲಿಕ್ಕೆ ಸಾಧ್ಯವಿಲ್ಲ. ಇವುಗಳ ಬೇರು ತುಂಬಾ ಆಳದಲ್ಲಿದೆ. ಅಲ್ಲಿಂದಲೇ ಇದರ ಅಸ್ತಿತ್ವ ನಾಶ ಆಗಬೇಕು. ಇದು ಈ ದೇಶದ ಅಸ್ಪೃಶ್ಯರಿಂದ ಮಾತ್ರ ಸಾಧ್ಯವೇನೊ?. ಮೂಡ್ನಾಕೂಡು ಅವರ ಒಂದು ಕವನ ಇಂತಹ ಆಲೋಚನೆಗೆ ಪುಷ್ಟಿ ನೀಡುವ ರೀತಿ ಹೀಗಿದೆ.

ಸನಾತನ ಧರ್ಮವೊಂದು
ಮಹಾವೃಕ್ಷ
ಬ್ರಾಹ್ಮಣರೇ ಬೇರು
ಕ್ಷತ್ರಿಯ ಕಾಂಡ
ವೈಶ್ಯ ಶೂದ್ರಾದಿಗಳು
ಟೊಂಗೆ ಕೊಂಗೆಗಳು
ವೃಕ್ಷಕ್ಕೆ ಸಂಬಂಧಪಡದ
ಮತ್ತೂ ಅಲ್ಲೇ ಇರಬೇಕಾದ
ಗೆದ್ದಲು ಹುಳುಗಳು
ಅಸ್ಪೃಶ್ಯರು[೭೭]

ಅಸ್ಪೃಶ್ಯತೆಯ ತಾರತಮ್ಯವು ಭಾರತೀಯ ಸಮಾಜದಲ್ಲಿ ಹಾಸುಹೊಕ್ಕಾಗಿದೆ. ಇದು ಇಂದಿಗೂ ಸಾಮಾಜಿಕ ಜೀವನದ ಅನೇಕ ಆಯಾಮಗಳಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬರುತ್ತಿದೆ. ಇದನ್ನು ಅಳಿಸಬೇಕೆನ್ನುವ ಬಹುತೇಕ ಜನ ಗಾಂಧಿಯಂತೆ 'ಅಸ್ಪೃಶ್ಯತೆಯು ಸಮಾಜಕ್ಕಂಟಿದ ಕಳಂಕ' ಎನ್ನುವ ಮಿತಿಯಲ್ಲೆ ಆಲೋಚಿಸಿದರು. ಆದರೆ ಅದನ್ನು ಸಾಮಾಜಿಕ ಮತ್ತು ಆರ್ಥಿಕ ನೆಲೆಯಲ್ಲಿಟ್ಟು ನೋಡಲಿಲ್ಲ. ಇಂದು ಅಸ್ಪೃಶ್ಯತೆಯು ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ಎಲ್ಲಾ ಕಡೆ ಇದೆ. ಇದು ಅಳಿಯುವುದು ಅಸ್ಪೃಶ್ಯರ ಸಾಮಾಜಿಕ ಆರ್ಥಿಕ ಸಮಾನತೆಯಿಂದ ಮಾತ್ರ ಸಾಧ್ಯ.

ಅಸ್ಪೃಶ್ಯತೆಯನ್ನು ಕುರಿತ ಸಾಹಿತ್ಯದ ಇದುವರೆಗಿನ ಎಲ್ಲಾ ಆಲೋಚನೆಗಳು ಮೇಲ್ವರ್ಗದ ಹಿತಾಸಕ್ತಿಯನ್ನು ಹೊಂದಿವೆ. ಆ ಆಲೋಚನೆಗಳು ಮಹಾವೃಕ್ಷವಾಗಿ ಬೆಳೆದುನಿಂತಿವೆ. ಅದಕ್ಕೆ ಬೆಂಗಾವಲಾಗಿ ಎಲ್ಲಾ ಭೂಮಾಲೀಕ, ಬಂಡವಾಳಶಾಹಿ ಮತ್ತು ಮೇಲ್ವರ್ಗದ ಪ್ರತಿನಿಧಿಗಳು ನಿಂತಿದ್ದಾರೆ. ಇವರಿಂದ ವ್ಯವಸ್ಥೆ ಬದಲಾವಣೆ ಸಾಧ್ಯವಿಲ್ಲ. ಬದಲಾವಣೆ ಬುಡದಿಂದಲೇ ಆಗಬೇಕು. ಅಂದರೆ ಸಮಾಜದ ಕಟ್ಟಕಡೆಯ ಮನುಷ್ಯನಿಂದಲೇ ಸಾಮಾಜಿಕ ಬದಲಾವಣೆ ರೂಪುಗೊಳ್ಳಲು ಸಾಧ್ಯ. ಇದನ್ನೇ ಮೇಲಿನ ಕಾವ್ಯ ಧ್ವನಿಸುತ್ತಿದೆ. ಗೆದ್ದಲು ಹುಳುಗಳ ರೀತಿಯಲ್ಲಿ ಈ ಸಾಮಾಜಿಕ ವ್ಯವಸ್ಥೆಯ ಶ್ರೇಣೀಕೃತ ವ್ಯವಸ್ಥೆಯನ್ನು ಬುಡಸಮೇತ ನಾಶಗೊಳಿಸಬೇಕಿದೆ. ಇಂತಹ ಶಕ್ತಿ ದಲಿತರಿಗೆ ಇದೆ ಎಂಬ ಆಶಾಭಾವನೆ ದಲಿತ ಕವಿಗಳದು.

ಸಮಾಜದಲ್ಲಿ ಶ್ರೇಣೀಕೃತ ವ್ಯವಸ್ಥೆಯನ್ನು ಕಾಪಾಡಲು ಒಂದು ವರ್ಗ ನಿತ್ಯ ದುಡಿಯುತ್ತಿರುತ್ತದೆ. ಇವರ ಬೌದ್ಧಿಕತೆಗೆ ಬಹಳ ದೊಡ್ಡ ಸಾಮಾಜಿಕ ಗೌರವ ಇದೆ. ಆದರೆ ಇವರ್‍ಯಾರೂ ಕೂಡ ದೈಹಿಕವಾಗಿ ದುಡಿಮೆ ಮಾಡುವವರಲ್ಲ. ಸದಾ ಒಂದಿಲ್ಲೊಂದು ತಂತ್ರಗಳನ್ನು ಹೆಣೆಯುತ್ತಲೇ ದುಡಿವ ಜನತೆಯನ್ನು ತನ್ನ ದಾಳಗಳನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸುತ್ತಿರುತ್ತದೆ. ದಲಿತರು ಯಾವುದೋ ಒಂದು ಮಾರ್ಗದಲ್ಲಿ ಉನ್ನತಿ ಕಾಣುತ್ತಿದ್ದಾರೆ ಎಂದ ಕೂಡಲೇ ಇದು ಕ್ರಿಯಾಶೀಲವಾಗುತ್ತದೆ. ಆಳುವ ವರ್ಗದೊಂದಿಗೆ ಕೈಜೋಡಿಸಿ ಅಧೋಗತಿಗೆ ತಳ್ಳಲು ನೋಡುತ್ತಿರುತ್ತದೆ. ಇದಕ್ಕೆ ಸ್ವಾತಂತ್ರ್ಯ ಬಂದ ಇಷ್ಟು ವರ್ಷಗಳಲ್ಲಿ ದಲಿತರ ಉದ್ಧಾರದ ಹೆಸರಿನಲ್ಲಿ ನಡೆದ ಘಟನೆಗಳೇ ಸಾಕ್ಷಿ. ಇದು ದಲಿತರ ಪರ ಎನ್ನುವ ಮುಸುಕು ಧರಿಸುತ್ತಲೇ ಮೀಸಲಾತಿ ಎನ್ನುವ ದಲಿತರ ಜೀವದುಸಿರಿನ ಕತ್ತು ಹಿಸುಕಲು ನೋಡುತ್ತಿರುತ್ತದೆ.

ಇತ್ತೀಚೆಗೆ ಸಮಾಜದಲ್ಲಿ ದಲಿತರ ಕುರಿತು ಇಲ್ಲಸಲ್ಲದ ಹೇಳಿಕೆಗಳು ಸದ್ದಿಲ್ಲದೆ ಕೆಲಸ ಮಾಡಲು ಪ್ರಾರಂಭಿಸಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ 'ದಲಿತರಿಗೆ ಬೇಗ ನೌಕರಿ ಸಿಗುತ್ತದೆ', 'ನೌಕರಿ ಸಿಕ್ಕರೆ ಬೇಗ ಬಡ್ತಿ ಹೊಂದುತ್ತಾರೆ', 'ಕಾನೂನುಗಳು ಅವರ ಪರವಾಗಿಯೇ ಇವೆ', 'ಮೀಸಲಾತಿ ಎಂಬುದು ದಲಿತರಿಗೆ ಮಾತ್ರ ಉಪಯೋಗ', ಇವುಗಳ ಜೊತೆಗೆ 'ದಲಿತರು ಬೇರೆಯವರಿಗೆ ಹೋಲಿಸಿದರೆ ದಡ್ಡರು', 'ಮೀಸಲಾತಿಯಿಂದಾಗಿ ಅರ್ಹತೆ

ಇಲ್ಲದಿದ್ದರೂ ಉನ್ನತ ಹುದ್ದೆ ಅಲಂಕರಿಸುತ್ತಾರೆ' ಇತ್ಯಾದಿಗಳು ದಿನನಿತ್ಯ ಯಾವ ಮುಜುಗರವೂ ಇಲ್ಲದೆ ಬಳಕೆಗೊಳ್ಳುತ್ತಿವೆ. ಇದರ ಜೊತೆಗೆ ಸಾಮ್ರಾಜ್ಯಶಾಹಿ ಪ್ರಣೀತ ಆಳುವ ವರ್ಗ ಖಾಸಗೀಕರಣ, ಜಾಗತೀಕರಣದ ಹೆಸರಿನಲ್ಲಿ ಲೂಟಿ ಸಂಸ್ಕೃತಿಯನ್ನು ನಿರಂತರವಾಗಿ ಪೋಷಿಸಿಕೊಂಡು ಬರುತ್ತಿದ್ದರೂ ಕೂಡ 'ಜಾಗತೀಕರಣದಿಂದ ದಲಿತರ ಸಮಸ್ಯೆಗಳ ನಿರ್ಮೂಲನೆ ಸಾಧ್ಯ' ಎಂಬ ಹೇಳಿಕೆಗಳು ಬಹು ವ್ಯಾಪಕವಾಗಿ ಹರಡಿವೆ. ಇದಕ್ಕೆ ದಲಿತ ರಾಜಕಾರಣಿಗಳನ್ನು ಮತ್ತು ಕೆಲವು ಚಿಂತಕರೆನಿಸಿಕೊಂಡವರನ್ನು ಪ್ರಚಾರಕರನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ಮಾಧ್ಯಮಗಳ ಮೂಲಕ ಇವುಗಳನ್ನು ಇನ್ನೂ ಗಟ್ಟಿಗೊಳಿಸಲಾಗುತ್ತಿದೆ. ಇವನ್ನು ಜನತೆಯ ನೆಲೆಯಲ್ಲಿ ನಿಂತು ಯೋಚಿಸಿದಾಗ ಅದರಲ್ಲೂ ಸಮಾಜದ ಕಟ್ಟಕಡೆಯಲ್ಲಿ ನಿಂತು ನೋಡಿದಾಗ ಇದರ ಹಿಂದಿನ ಹುನ್ನಾರಗಳು ತಿಳಿಯುತ್ತವೆ. ಇದನ್ನು ಅನೇಕ ದಲಿತ ಕಾವ್ಯಗಳು ಬಿಂಬಿಸಿವೆ...

ನೂರೆಂಟು ಜಾತಿಗಳ ಸೇರ್ಸುದ್ರು
ಜಾತಿ ಜಾತಿಗಳನ್ನೇ ಎತ್ತಿಕಟ್ಟಿ ಕಚ್ಚಾಡಿಸಿದ್ರು
ಖಾಸಗೀಕರಣ ಅಂತ ಮಾಡಿದ್ರು
ದೊಡ್ಡ ಹುದ್ದೆಗಳಿಗೆ ಮೀಸಲಾತಿ ಇಲ್ಲ ಅಂದ್ರು
ಅಭ್ಯರ್ಥಿಗಳೇ ಇಲ್ಲ ಅಂತಹೇಳಿ
ಎಷ್ಟೋ ಹುದ್ದೆಗಳನ್ನು ಖಾಲಿ ಉಳಿಸಿದ್ರು
ಮತ್ತೆ ಹೊಸ ಐಟಂ ಹುಡ್ಕವ್ರೆ
ಅದೇ ಕೆನೆಪದರ .....ಕೆನೆಪದರ[೭೮]

ಜಾಗತೀಕರಣದ ಹುನ್ನಾರ ಕುರಿತು ದಲಿತ ಕಾವ್ಯ ಕಟ್ಟುವ ವಾಸ್ತವತೆ ಹೀಗಿದೆ.

ಜಗತ್ತನ್ನೆ ಜಗ್ಗಿಸುತ್ತಿದೆ ಜಾಗತೀಕರಣ
ಉಳ್ಳವರ ಕೊಳ್ಳಿಯಿಂದ ಭಾರತದ ದಹನ

ಬಂಡವಾಳಶಾಹಿಗಳು ಕೊಬ್ಬಿ ಮೆರೆದಿಹರು
ಭಾರತದ ಬಡವರಿಗೆ ಬೆಂಕಿ ಹಚ್ಚಿದರು
ಕೂಲಿಕಾರರ ದುಡಿಮೆ ಕಿತ್ತುಕೊಂಡಿಹರು
ಅಸಮಾನತೆ ಬೀಜವನ್ನು ಬಿತ್ತುತಲಿಹರು.
ವಿಶ್ವಬ್ಯಾಂಕ್, ಐಎಂಎಫ್ ಮುಂತಾದ ಭೂತಗಳು
ಸಾಲಕೊಡುವ ನೆಪದಲ್ಲಿ ದೇಶವನ್ನೇ ನುಂಗಿಹರು

ಲಂಗಿಲ್ಲ ಲಗಾಮಿಲ್ಲ ಅಡೆತಡೆಗಳು ಇವಕಿಲ್ಲ
ಭಾರತದ ಬಾಗಿಲನ್ನು ತೆರೆದು ಇಟ್ಟಿಹರಲ್ಲ

ನಿರುದ್ಯೋಗ, ಅನಕ್ಷರತೆ, ಬಡತನವು ಹೆಚ್ಚಾಯ್ತು
ಅನಾರೋಗ್ಯ, ಆಪತ್ತು ಎಲ್ಲೆಲ್ಲೂ ಬಲವಾಯ್ತು
ಕುಶಲ ಕೈಗಾರಿಕೆಗಳು ನೆಲಸಮವಾಗೋಯ್ತು
ಬಹುರಾಷ್ಟ್ರೀಯ ಕಂಪನಿಗೆ ತಲೆ ತಗ್ಗಿಸಿ ನಿಂತಾಯ್ತು"

ಇದು ನಿರಂತರವಾಗಿ ಈ ದೇಶದ ಅಸ್ಪೃಶ್ಯರನ್ನು ಆಳುವ ವರ್ಗ ದಿಕ್ಕುತಪ್ಪಿಸುತ್ತಿರುವ ಪರಿ. ಮೀಸಲಾತಿಯಿಂದ ದಲಿತರು ಆರ್ಥಿಕವಾಗಿ ಸಬಲರಾಗುತ್ತಾರೆ. ಇದನ್ನು ತಿಳಿದ ಆಳುವ ವರ್ಗ ತಡಮಾಡದೆ ನೂರಾರು ಜಾತಿಗಳನ್ನು ಅಸ್ಪೃಶ್ಯರ ಪಟ್ಟಿಯಲ್ಲಿ ಸೇರಿಸಿತು. ಆ ಮೂಲಕ ಇರುವ ಕನಿಷ್ಠ ಅವಶ್ಯಕತೆಗಳು ಹರಿದುಹಂಚಿ ಹೋಗುವಂತೆ ಮಾಡಿತು. ಇಲ್ಲಿನ ಕೆಲವು ವರ್ಗ, ದಲಿತರು ಒಗ್ಗೂಡಿ ಹೋರಾಡಿದರೆ ಒಂದು ಹೊಸ ಬದಲಾವಣೆ ಸಾಧ್ಯ ಎಂಬುದನ್ನು ಕಂಡುಕೊಂಡರು. ಈ ಹಿನ್ನೆಲೆಯಲ್ಲಿ ಹೊಲೆಯ ಮಾದಿಗರನ್ನು ಎರಡು ಗುಂಪುಗಳನ್ನಾಗಿ ಮಾಡಿ ತಮ್ಮ ವೋಟ್ ಬ್ಯಾಂಕ್‌ಗಳಿಗೆ ನಿರಂತರ ವಾರಸುದಾರರಾಗುವಂತೆ ಮಾಡಿಕೊಂಡರು. ಇದರ ವಿರುದ್ಧ ಹೋರಾಡಬೇಕಿದ್ದ ಮುಂಚೂಣಿ ಹೋರಾಟಗಾರರನ್ನು ಹುದ್ದೆ ಹೆಸರಿನಲ್ಲಿ ಹರಾಜಿನಲ್ಲಿ ಖರೀದಿಗಿಟ್ಟರು. ಅವರೇ ಖರೀದಿಸಿ ತೋಳ್ತೆಕ್ಕೆಯಲ್ಲಿ ಬಂಧಿಸಿಟ್ಟುಕೊಂಡರು. ಈಗ ಇದೇ ಆಳುವ ವರ್ಗ ಕೆನೆಪದರದ ಹೆಸರಿನಲ್ಲಿ ದಲಿತರ ಅಸ್ತಿತ್ವ ನಾಶ ಮಾಡಲು ಹೊರಟಿದೆ. ಇದನ್ನು ವಿರೋಧಿಸಿ ವೀರೋಚಿತ ಹೋರಾಟ ಕಟ್ಟಬೇಕಿದ್ದ ದಲಿತ ಸಂಘಟನೆಗಳು ತಮ್ಮ ದನಿಯನ್ನು ಬಿಕರಿಯಲ್ಲಿ ಹರಾಜಿಗಿಟ್ಟು ಕೊಂಡುಕೊಳ್ಳುವವರಿಗಾಗಿ ಕಾಯುತ್ತಿವೆ. ಹೀಗೆ ದಿಕ್ಕು ತಪ್ಪಿಸುತ್ತಿರುವ ಆಳುವ ವರ್ಗದ ಹುನ್ನಾರಗಳನ್ನು ದಲಿತ ಕಾವ್ಯ ನಿರೂಪಿಸಿದೆ.

ಆಳುವ ವರ್ಗದ ಹುನ್ನಾರಗಳು ಇಷ್ಟಕ್ಕೇ ನಿಲ್ಲುವುದಿಲ್ಲ. ನಾವು ದಲಿತರ ಪರ ಎಂಬುದನ್ನು ಹೆಜ್ಜೆಹೆಜ್ಜೆಗೂ ತೋರಿಸಿಕೊಳ್ಳುತ್ತವೆ. ಇದಕ್ಕಾಗಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತವೆ. ಕೆಲವು ಯೋಜನೆಗಳನ್ನು ಜಾರಿಗೆ ತರುವ ಹುನ್ನಾರ ನಡೆಸುತ್ತಿರುತ್ತವೆ. 'ವಿಜ್ಞಾನ ತಂತ್ರಜ್ಞಾನದಿಂದ ಬಡವರ ಬದುಕು ಹಸನಾಗುತ್ತದೆ' ಎಂದು ದಿನನಿತ್ಯ ಪ್ರಚಾರ ಮಾಡಲಾಗುತ್ತಿದೆ. ಆದರೆ ಇವು ದಲಿತರ ಬದುಕನ್ನು ಸ್ವಾತಂತ್ರ್ಯ ನಂತರದ ಇಷ್ಟು ವರ್ಷಗಳಲ್ಲಿ ಎಷ್ಟು ಉದ್ಧಾರ ಮಾಡಿದೆ ಎಂಬುದೇ ದೊಡ್ಡ ಪ್ರಶ್ನೆ. ಇದನ್ನು ಒಂದು ದಲಿತ ಕಾವ್ಯ ಪ್ರಶ್ನಿಸುವ ನಿರೂಪಿಸುವ ರೀತಿ ಹೀಗಿದೆ..

ಡಬ್ಲ್ಯೂ ಡಬ್ಲ್ಯೂ ಡಬ್ಲ್ಯೂ ಡಾಟ್ ಕಾಮ್
ಡಬ್ಲ್ಯೂ ಡಬ್ಲ್ಯೂ ಡಬ್ಲ್ಯೂ ಡಾಟ್ ಕಾಮ್

....

ಬೆಂಗಳೂರು ಸಿಂಗಾಪುರ ಮಾಡಲು ಪಣ ತೊಟ್ಟವರೆ
ಎಲ್ಲರಿಗೂ ಉದ್ಯೋಗ ಖಾತ್ರಿ ಕೊಡುವಿರಾ
ಘಟ್‌ಮಾತಿನ ಜನಕೆ ಮೊದಲು ಮನೆಯ ಕೊಡುವಿರಾ
ಪ್ರಶ್ನೆಯೊಂದ ಕೇಳುತೀವಿ ಹೇಳಿ ಉತ್ತರ..।ಡಬ್ಲ್ಯೂ ಡಬ್ಲ್ಯೂ।
ವಿದೇಶಿ ಕಳ್ಳರ ಕೈಗೆ ದೇಶವನ್ನು ಮಾರಿ ನೀವು

ಕಂಪ್ಯೂಟರ್‌ಗಳ ತುಂಬಿ ಕಾರ್ಮಿಕರ ಹೊಟ್ಟೆಗ್ಹೊಡೆದು
ಪ್ರಗತಿ ಪ್ರಗತಿ ಅಂತ ಬೊಗಳೆ ಬಿಡುವಿರಾ
ಪ್ರಶ್ನೆಯೊಂದ ಕೇಳುತೀವಿ ಹೇಳಿ ಉತ್ತರ । ಡಬ್ಲ್ಯೂ ಡಬ್ಲ್ಯೂ ।

ಜಾಲಾಂತರ್ಜಾಲದಲ್ಲಿ ಜಗತ್ತನ್ನೇ ನೋಡುತ್ತೀರಿ
ಇಂಟರ್ ನೆಟ್ ವೆಬ್ ಸೈಟಲಿ ಲೋಕವೆಲ್ಲ ಕಾಣ್ತೀರಿ
ಹಂಗರವಳ್ಳಿ ಕಾಣಲಿಲ್ಲ ಯಾಕೆ ಹೇಳುವಿರಾ
ಕಂಬಾಲಪಲ್ಲಿ ಕಾಣಲಿಲ್ಲ ಯಾಕೆ ಹೇಳುವಿರಾ
ಪ್ರಶ್ನೆಯೊಂದ ಕೇಳುತೀವಿ ಹೇಳಿ ಉತ್ತರ । ಡಬ್ಲ್ಯೂ ಡಬ್ಲ್ಯೂ।[೮೦]

ಪ್ರಗತಿ ಹೆಸರಿನಲ್ಲಿ ತಮ್ಮ ನಿರಂತರ ಆಳುವ ಆಕಾಂಕ್ಷೆಯನ್ನು ಆಳುವ ವರ್ಗ ಉಳಿಸಿಕೊಂಡು ಬರುತ್ತಿದೆ. ಇದರ ಹುನ್ನಾರಗಳನ್ನು ಹೋರಾಟದ ಹಾಡು ಪ್ರಶ್ನೆ ಕೇಳುವ ಮೂಲಕ ಬಯಲಿಗೆಳೆಯುತ್ತಿದೆ. ವಿದೇಶಿ ನೀತಿಗಳಿಗೆ ಬಲಿಯಾಗಿ ಜಾಗತೀಕರಣಕ್ಕೆ ದೇಶವನ್ನು ಬಲಿಕೊಟ್ಟಿರುವ ಇಲ್ಲಿನ ಆಳುವ ವರ್ಗ ನಿರಂತರ ಲೂಟಿಯನ್ನು ಮುಂದುವರಿಸಿದೆ. ದೇಶದಲ್ಲಿ ನಿರುದ್ಯೋಗ, ಅನಕ್ಷರತೆ, ಬಡತನ, ಅನಾರೋಗ್ಯ ಮುಂತಾದವುಗಳು ತಾಂಡವವಾಡುತ್ತಿವೆ. ವಿಜ್ಞಾನ, ತಂತ್ರಜ್ಞಾನಗಳು ದುಡಿವವರಿಗೆ ಕನಿಷ್ಠ ಕೂಲಿಗೂ ಕಲ್ಲಾಕುತ್ತಿವೆ. ಉದ್ಯೋಗ ಖಾತ್ರಿ ಯೋಜನೆಗಳು ವಿಫಲವಾಗುತ್ತಿವೆ, ಹಳ್ಳಿಯಿಂದ ನಗರಗಳಿಗೆ ಕೂಲಿಗಾಗಿ, ತುತ್ತು ಅನ್ನಕ್ಕಾಗಿ ವಲಸೆ ಹೋಗುವವರ ಸಂಖ್ಯೆ ದಿನೇ ದಿನೇ ಬೆಳೆಯುತ್ತಿದೆ. ಮೂಲಭೂತ ಅವಶ್ಯಕತೆಗಳು ಹಲವು ಹಳ್ಳಿಗಳನ್ನು ಇನ್ನು ತಲುಪಲೇ ಇಲ್ಲ. ದವಸ ಧಾನ್ಯದ ಬೆಲೆಗಳು ದಿನದಿಂದ ದಿನಕ್ಕೆ ಗಗನಕ್ಕೇರುತ್ತಿವೆ. ಇಂತಹ ಭೀಕರ ಪರಿಸ್ಥಿತಿಗಳು ಇಲ್ಲಿನ ಜನತೆಯನ್ನು ಕಿತ್ತು ತಿನ್ನುತ್ತಿರುವಾಗ 'ಭಾರತ ಪ್ರಕಾಶಿಸುತ್ತಿದೆ' ಎನ್ನುವುದರ ಮೂಲಕ ಆಳ್ವಿಕೆ ನಡೆಸುವ ಇಲ್ಲಿನ ಆಳುವ ವರ್ಗಗಳು ಭಾರತದ ಸರ್ವಪಾಲನ್ನು ಬದಿಗಿರಿಸಿ ಬಂಡವಾಳಗಾರರಿಗೆ ಮಣೆಹಾಕುವ ನೀತಿಯನ್ನು ಅನುಸರಿಸುತ್ತಾ ಹೋಗುತ್ತಿವೆ. ಇದರ ವಿರುದ್ಧ ಹೋರಾಟ ಅನಿವಾರ್ಯವೆಂಬ ಸಂಗತಿಯನ್ನು ಅನೇಕ ದಲಿತ ಕಾವ್ಯಗಳು ತಮ್ಮಂತರಾಳದಿಂದ ಹೊರಹಾಕಿವೆ.

ಆಳುವ ವರ್ಗದ ಆಲೋಚನೆಗಳು ಇಷ್ಟಕ್ಕೇ ನಿಲ್ಲುವುದಿಲ್ಲ. ದಲಿತರನ್ನು ಬ್ರಾಹ್ಮಣರ ವಿರುದ್ಧ ಎತ್ತಿಕಟ್ಟುತ್ತಾರೆ. ಕೋಮುವಾದ, ಭ್ರಷ್ಟಾಚಾರ, ಲಂಚ, ದೇಶ, ಭಾಷೆ, ಕಾವೇರಿ ಜಲಕ್ಕಾಗಿ ಹೋರಾಟ ಮುಂತಾದವುಗಳನ್ನು ಹಮ್ಮಿಕೊಳ್ಳಲು ಕರೆ ಕೊಡುತ್ತಾರೆ. ಆ ಮೂಲಕ ದಲಿತರು ತಮ್ಮ ಶೋಷಣೆಯ ನೆಲೆಗಟ್ಟುಗಳನ್ನೇ ಮರೆತು ಇವರೊಂದಿಗೆ ಕೈಜೋಡಿಸಬೇಕು ಹಾಗೆ ತಂತ್ರಗಳನ್ನು ಹೆಣೆಯುತ್ತಾರೆ. ದಲಿತರು ಇಂತಹ ಹುನ್ನಾರಗಳಿಂದ ದೂರ ಉಳಿಯಬೇಕಿದೆ. ಜೊತೆಗೆ ಆ ಬೀದಿಗೆ, ಈ ಬೀದಿಗೆ ಅಂಬೇಡ್ಕರ್ ಹೆಸರಿಡಿ, ಇಂಗ್ಲಿಷ್ ಶಿಕ್ಷಣ ಕಡ್ಡಾಯಗೊಳಿಸಿ ಮುಂತಾದ ಹೋರಾಟಗಳಿಗೆ ಸೀಮಿತವಾಗದೆ ದಲಿತರಿಗೆ ಬಹಳ ಮುಖ್ಯವಾಗಿ ದೊರಕಬೇಕಿದ್ದ ಭೂಮಿ, ಸಂಪತ್ತು, ರಾಜ್ಯಾಧಿಕಾರದ ಕಡೆ ತಮ್ಮ ಆಲೋಚನೆಯ ದಿಕ್ಕನ್ನು ಸಂಪೂರ್ಣವಾಗಿ ತಿರುಗಿಸಬೇಕಿದೆ. ಈ ಅನಿವಾರ್ಯತೆಯನ್ನು ದಲಿತ ಕಾವ್ಯಗಳು ಅಭಿವ್ಯಕ್ತಿಸಿವೆ.

ದಲಿತ ಕಾವ್ಯ ತನ್ನ ಶೋಧಿತ ಸಾಮಾಜಿಕ ನೆಲೆಗಳಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನ ರೀತಿಯ ಶೋಷಣಾ ನೆಲೆಗಳನ್ನು ಅನಾವರಣಗೊಳಿಸಿದೆ. ದಲಿತರು ಕರ್ನಾಟಕದ ಮೂಲೆಮೂಲೆಯಲ್ಲಿ ನೆಲೆಸಿದ್ದಾರೆ. ಇಲ್ಲಿ ಮೂಲೆಮೂಲೆಗೂ ಒಂದೊಂದು ರೀತಿಯ ಸಮಸ್ಯೆಗಳ ಆಗರವೇ ಇದೆ. ಉತ್ತರ ಕರ್ನಾಟಕದ ದಲಿತರಿಗೂ, ದಕ್ಷಿಣ ಕರ್ನಾಟಕದ ದಲಿತರಿಗೂ ಇರುವ ಸಮಸ್ಯೆಗಳ ಸ್ವರೂಪ ಬೇರೆ ಬೇರೆ. ಆದರೆ ಶೋಷಕರು ಮಾತ್ರ ಒಂದೇ. ಕೂಲಿ, ಜೀತ, ಹಸಿವು, ಅವಮಾನ ಒಂದು ಕಡೆಯಾದರೆ ಇನ್ನೊಂದು ಕಡೆ ಇವುಗಳನ್ನೂ ಒಳಗೊಂಡಂತೆ ಬೆತ್ತಲೆ ಸೇವೆ, ದೇವದಾಸಿ ಪದ್ದತಿ, ಅತ್ಯಾಚಾರ, ಕೂಲಿಗಾಗಿ ದಿನನಿತ್ಯ ಕೈಗೊಳ್ಳುವ ಗುಳೆ ಪದ್ಧತಿ ಮುಂತಾದವುಗಳು ದಲಿತರ ಸಾಮಾಜಿಕ ವಾಸ್ತವದ ನೆಲೆಗಳನ್ನು ಬಿಂಬಿಸುತ್ತವೆ. ದಲಿತ ಕಾವ್ಯ ಇಂತಹ ಸಾಮಾಜಿಕ ವಸ್ತುಸ್ಥಿತಿಯನ್ನು ಬಯಲು ಮಾಡುತ್ತಲೇ ಅದಕ್ಕೆ ತನ್ನದೇ ಆದ ಪ್ರತಿರೋಧವನ್ನೂ ಒಡ್ಡಿದೆ. ಅನಸೂಯ ಕಾಂಬಳೆಯವರ 'ಗುಡಿಯಲ್ಲಿನ ಕಲ್ಲಿನಲಿ ದೇವರಿಲ್ಲ' ಕವನ ನಿರೂಪಿಸುವ ವಸ್ತುಸ್ಥಿತಿ ಹೀಗಿದೆ;

ಏನು ಗೌಡರೇ !
ಹೇಳಿ ಕಳಿಸಿದಿರಿ !
ನಿಮ್ಮ ಹಣಮಪ್ಪನ ಓಕಳಿಗೆ
ನಮ್ಮ ಮೈನರೆದ ಹುಡುಗಿಯರೇ ಬೇಕಂತೆ
ನಿಮ್ಮ ಮಗಳು ಸಾವಿತ್ರಿ ಮೈ ನೆರೆದಿರುವಳಲ್ಲ?
ನಿಮ್ಮ ಸೊಸೆ ಪಾರ್ವತಿ ಮೊನ್ನೆಯೇ ಬಂದಿರುವಳಲ್ಲ?
ಕಪ್ಪು ಮೈಯ ನಮಗಿಂತ
ಕೆಂಪು ಮೈಯ ನಿಮ್ಮ ಹೆಣ್ಣುಗಳೇ ಚಂದ!

ಲಂಗದ ಮೇಲೆ ಬಿಡು ಹೊರಗೊಮ್ಮೆ
ಬಿರಿದ ಕಮಲಗಳಿಗೆ
ಸೂರ್ಯ ಚಂದ್ರರ ಮುಖದರ್ಶನವಾಗಲಿ.
ಕಾಲ ಚಕ್ರ ಉರುಳಿದೆ
ಮೊಲೆ ತೊಡೆಗಳನ್ನು ತೋಯಿಸಿ
ತೋರಿಸಬೇಕಾದ ಯುಗವಲ್ಲ.
................................[೮೧]

ಕನ್ನಡ ಸಾಹಿತ್ಯ ಪರಂಪರೆ ಇದುವರೆಗೂ ಪರಿಚಯಿಸದಿದ್ದ ಸಾಮಾಜಿಕ ವಾಸ್ತವತೆ ದಲಿತ ಕಾವ್ಯದಲ್ಲಿದೆ. ಎಲ್ಲ ವೈರುಧ್ಯಗಳ ನಡುವೆ ಹೊಂದಿಕೊಂಡು ಹೋಗಬೇಕೆಂದು ಹೇಳುವುದು ಆದರ್ಶ ಸಮಾಜದ ಕಲ್ಪನೆ. ಇದನ್ನು ತಲೆಗೆ ತುಂಬಿದ ಸಾಂಪ್ರದಾಯಿಕ ಮನಸ್ಸುಗಳಿಗೆ ವೈರುಧ್ಯಗಳ ಅರಿವೇ ಇಲ್ಲ. ಈ ವೈರುಧ್ಯಗಳ ನಡುವೆ ಬದುಕಿರುವ ದಲಿತರಿಗೆ ಮಾತ್ರ ಇಲ್ಲಿನ ವ್ಯವಸ್ಥೆ ಬಗ್ಗೆ ಪ್ರತಿರೋಧವಿದೆ. ಅದಕ್ಕಾಗಿ ಅವರು ಹೊಂದಿಕೊಂಡು ಹೋಗುವ ಬಗೆ ಹೇಗೆ? ಎಂದು ಪ್ರಶ್ನೆ ಮಾಡುತ್ತಾರೆ. ಇವುಗಳೆಲ್ಲದರ ಅಭಿವ್ಯಕ್ತಿ ರೂಪವಾಗಿ ಬಂದ ದಲಿತ ಕಾವ್ಯ ಸಮಾಜದಲ್ಲಿರುವ ಅಸ್ಪೃಶ್ಯತೆ, ಜಾತೀಯತೆ, ಅತ್ಯಾಚಾರ, ನಿರುದ್ಯೋಗ, ಬಡತನ, ಲಿಂಗ ತಾರತಮ್ಯ, ವರ್ಣ ತಾರತಮ್ಯ ಮುಂತಾದ ಸಾಮಾಜಿಕ ವಾಸ್ತವತೆಗಳನ್ನು ಜನತೆಯ ಮುಂದೆ ಹಾಡಿತು. ಹಾಡುತ್ತಾ ಬದಲಾವಣೆಗೆ ಮುಂದಾಗಬೇಕೆಂಬ ಕರೆಯನ್ನು ಕೊಟ್ಟಿತು.

ಜಮೀನ್ದಾರಿ ವ್ಯವಸ್ಥೆ ಹನುಮಪ್ಪನ ಹೆಸರಿನಲ್ಲಿ ಹೋಲಿ ಹಾಡುತ್ತಾ ಬಂದಿದೆ. ಈ ಮೂಲಕ ದಲಿತ ಮಹಿಳೆಯರ ದೇಹವನ್ನು ನೋಡಿ ಸವಿಯುತ್ತಿದೆ. ಅದನ್ನು ಒಂದು ಸಾಮಾಜಿಕ ಮೌಲ್ಯವೆಂಬಂತೆ ಬಿತ್ತುತ್ತಲೂ ಬಂದಿದೆ. ಇಂತಹ ಮೌಲ್ಯಕ್ಕೆ ಮೇಲಿನ ಕವಿತೆ ಪ್ರತಿರೋಧ ಒಡ್ಡಿದೆ. ವಸ್ತುಸ್ಥಿತಿಯನ್ನು ಬಿಂಬಿಸುತ್ತಲೇ ಪ್ರತಿರೋಧದ ನೆಲೆಗಳನ್ನು ಹುಟ್ಟುಹಾಕಿದೆ. ಆದರೆ ಕಾವ್ಯ ಪ್ರತಿರೋಧ ಹುಟ್ಟು ಹಾಕುವ ತರಾತುರಿಯಲ್ಲಿ ಎಡವಿದೆ ಎನಿಸುತ್ತದೆ. ಏಕೆಂದರೆ ದಲಿತ ಹೆಣ್ಣುಗಳು ಭೂಮಾಲೀಕರಿಂದ ಶೋಷಣೆಗೆ ಒಳಗಾಗುತ್ತಿದ್ದಾರೆ, ಇದಕ್ಕೆ ಪ್ರತೀಕಾರ ತೀರಿಸಬೇಕಾದರೆ ಭೂಮಾಲೀಕ ಹೆಣ್ಣುಗಳನ್ನು ಬೀದಿಗೆ ಕರೆತರುವಂತೆ ಕಾವ್ಯ ಕರೆಕೊಡುತ್ತಿದೆ. ಇದು ಪರ್ಯಾಯ ಆಲೋಚನೆಗೆ ಸ್ಪಷ್ಟ ದಾರಿಯ ಅರಿವಿರದ ನೆಲೆಯಿಂದ ಮೂಡಿಬಂದ ಆಲೋಚನೆಯೇ ಹೊರತು ಸಾಮಾಜಿಕ ಪ್ರಜ್ಞೆಯ ಒಳ ಅರಿವಿನಿಂದ ಬಂದುದಲ್ಲ.

ದಲಿತ ಹೆಣ್ಣು ಮಕ್ಕಳು ಶೋಷಣೆಗೆ ಒಳಗಾಗುತ್ತಿರುವುದೇ ಭೂಮಾಲೀಕ ಪುರುಷರಿಂದ. ಆದರೆ ಕಾವ್ಯ ಇವರನ್ನು ಹೊರತುಪಡಿಸಿ ಅಲ್ಲಿನ ಹೆಣ್ಣು ಮಕ್ಕಳನ್ನು ಗುರಿಯನ್ನಾಗಿಸಿಕೊಂಡಿದೆ. ಈ ಗುರಿ ಮೇಲ್ನೋಟಕ್ಕೆ ಸರಿ ಎನಿಸಿದರೂ, ಆಳದಲ್ಲಿ ದಿಕ್ಕು ತಪ್ಪಿದಂತೆ ಕಾಣುತ್ತದೆ.

ಏಕೆಂದರೆ ಮಹಿಳೆ ಎಲ್ಲಾ ವಲಯಗಳಲ್ಲಿ ಶೋಷಣೆಗೆ ಒಳಗಾಗಿರುವ ನೈಜ ಸ್ಥಿತಿ ವರ್ತಮಾನದಲ್ಲಿದೆ. ಇದು ದಲಿತ ಕಾವ್ಯದ ಆಲೋಚನಾ ಮಿತಿಯೂ ಇರಬಹುದು; ಇಲ್ಲವೆ ದಲಿತ ಮಹಿಳಾ ನೆಲೆಯ ಗ್ರಹಿಕೆಯ ಸ್ವರೂಪವೂ ಇರಬಹುದು.

ದಲಿತ ಕಾವ್ಯದಲ್ಲಿ ಸಾಮಾಜಿಕ ಅಪೇಕ್ಷಿತ ನೆಲೆಗಳು ಹೀಗೇ ಇರಬೇಕೆಂದು ಪ್ರತಿಪಾದಿಸುವುದರಲ್ಲಿ ಮಾತ್ರ ಇಲ್ಲ. ಬದಲಾಗಿ ತಾನು ಯಾವುದನ್ನು ತಿರಸ್ಕರಿಸುತ್ತಿದೆಯೋ ಅದರಲ್ಲೂ ತನ್ನ ಆಶಯಕ್ಕೆ ತಕ್ಕಂತಹ ಸಾಮಾಜಿಕ ಅಪೇಕ್ಷೆಯನ್ನು ಪ್ರತಿಪಾದಿಸುತ್ತದೆ. ಇಂದು ದಲಿತರು ತಮ್ಮ ಹೋರಾಟವನ್ನು ಜಾತಿ, ಧರ್ಮ, ವರ್ಗಗಳಿಗಷ್ಟೇ ಸೀಮಿತಗೊಳಿಸಿಕೊಳ್ಳುವಂತಿಲ್ಲ. ಏಕೆಂದರೆ ಇದರ ಕರಾಳ ಕೈಗಳು ಬೇರೆಬೇರೆ ವೇಷ ಬದಲಾಯಿಸಿ ದುಡಿಯುವವರನ್ನು ನುಂಗುತ್ತಿವೆ. ಇವೆಲ್ಲವುಗಳ ಅರಿವು ದುಡಿಯುವವರಿಗೆ ಆಗದಿದ್ದರೆ ದುಡಿಯುವವರ ಹಿತಾಸಕ್ತಿಗಳ ರೂಪುರೇಷೆಗಳು ತಲೆಕೆಳಗಾಗುತ್ತವೆ. ಜಾಗತೀಕರಣ, ಖಾಸಗೀಕರಣದ ಹುನ್ನಾರಗಳು ಜನಗಳ ತಿನ್ನುವ ಬಾಯಿಗೆ ಮಣ್ಣಾಕುತ್ತಿವೆ. ಸಾಮಾನ್ಯ ಜನ ಉಪಯೋಗಿಸುವ ಪ್ರತಿಯೊಂದು ವಸ್ತುವಿನ ಬೆಲೆಯೂ ಗಗನಕ್ಕೇರಿ ಬದುಕನ್ನು ಅತಂತ್ರ ಸ್ಥಿತಿಯತ್ತ ಕೊಂಡೊಯ್ದಿವೆ. ಇದರ ವಿರುದ್ಧ ಎಚ್ಚತ್ತುಕೊಳ್ಳಬೇಕಾದ ವಾಸ್ತವತೆ ಇಂದು ಎಲ್ಲ ದುಡಿಯುವವರ ಮೇಲಿದೆ. ಏಕೆಂದರೆ ಇದರ ತೀವ್ರ ಪರಿಣಾಮ ಬಡವರ ಮೇಲೆಯೇ ಆಗುವುದು. ಇದನ್ನೆಲ್ಲ ನೋಡು ನೋಡುತ್ತಲೇ ಅಧಿಕಾರಕ್ಕೆ ಬರುವ ಆಳುವ ವರ್ಗ ಹಗಲು ರಾತ್ರಿ ತನ್ನ ಅಧಿಕಾರದ ಕಡೆಯೇ ಚಿಂತಿಸುತ್ತಿರುತ್ತದೆ. ಜನಗಳು ಬರದಲ್ಲಿ ಮುಳುಗಿದರೂ ಇವರಿಗೆ ಮಾತ್ರ ತಮ್ಮ ಕುರ್ಚಿಯ ಚಿಂತೆ. ಆದರೆ ಘೋಷಣೆ ಮಾತ್ರ 'ನಾವು ಯಾವತ್ತಿದ್ದರೂ ಶ್ರಮಿಕರ ಪರ' ಇಂತಹ ಒಂದು ಹುನ್ನಾರವನ್ನು ದಲಿತ ಕಾವ್ಯ ನಿರೂಪಿಸುವ ರೀತಿ ಹೀಗಿದೆ;

ತಲೆ ಇರದ ರಾಜನಿಗೆ ಕಿವಿ ಇರದ ಮಂತ್ರಿಗಳು
ಕಣ್ಣಿರದ ಕಾಯ್ದೆಗಳು– ದಯೆಯಿರದ ಸೈನಿಕರು
ಹಗಲು ರಾತ್ರಿ ಅವರಿಗೆ ಕನವರಿಕೆ– ಬಡಬಡಿಕೆ
ಖುರ್ಚಿ ಉಳಿದರೆ ಸಾಕು –ಖುರ್ಚಿ ಸಿಕ್ಕರೆ ಸಾಕು
ಬಾರಿಸುತ್ತಿದ್ದಾರೆ ಎಲ್ಲರೂ ಬರಿ ಬುಡಬುಡಕೆ
ಸತ್ತವರು ಸಾಯಲಿ ಇದ್ದವರು ಇರಲಿ
ಹತ್ತಿದ್ದಾರೆ ಬೆನ್ನು ಬೇತಾಳವಾಗಿ
ದೆಹಲಿಯ ರಾಜನಿಗೆ ಎಲ್ಲಿರದ ಖುಷಿ
ಕುಳಿತಿದ್ದಾನೆ ಅವನು ಮಂದಸ್ಮಿತನಾಗಿ

ಸರದಿ ಮೇಲೆ ಸರದಿ ನಾರದ ಮಹರ್ಷಿ
ಅವನ ಮೇಲೆ– ಇವ– ಇವನ ಮೇಲೆ ಅವ
ಹಾವು– ಮುಂಗುಸಿಯಾಟ–ದಿನವೂ ಕಿತ್ತಾಟ
ಕುಳಿತವನ ಉರುಳಿಸಿ– ತನ್ನ ಧ್ವಜ ಹಾರಿಸಿ
ಶ್ರೀಮತಿಯ ಒಲಿಸಲು ದಿಲ್ಲಿಗೆ ಮುತ್ತಿಗೆ
....೬೨

ದೇಶವನ್ನು ಲೂಟಿ ಮಾಡಲು ಸ್ವದೇಶಿ ಮತ್ತು ವಿದೇಶಿ ಕಳ್ಳರು ಸೇರಿಕೊಂಡಿದ್ದಾರೆ. ಇವರಿಬ್ಬರ ಲೂಟಿ ಬಡ ಜನತೆಯನ್ನು ಕಿತ್ತು ತಿನ್ನುತ್ತಿದೆ. ವಿದೇಶಿ ಕಂಪನಿ ಮತ್ತು ಸ್ವದೇಶಿ ದೊಡ್ಡ ದೊಡ್ಡ ಕಂಪನಿಗಳು ಮಾರುಕಟ್ಟೆಗೆ ಎಗ್ಗಿಲ್ಲದೆ ನುಗ್ಗಿವೆ. ತಮ್ಮ ಸರಕುಗಳು ಬದುಕಿಗೆ ಬೇಕೇಬೇಕಾದವುಗಳು ಎಂಬುದನ್ನು ಜಾಹೀರಾತಿನ ಮೂಲಕ ತುಂಬುತ್ತಿವೆ. ಆ ಮೂಲಕ ತಮ್ಮ ಬಂಡವಾಳವನ್ನು ದ್ವಿಗುಣಗೊಳಿಸಿಕೊಳ್ಳುತ್ತಿವೆ. ಬೃಹತ್ ವಾಣಿಜ್ಯ ಮಳಿಗೆಗಳು ಸಣ್ಣಪುಟ್ಟ ಅಂಗಡಿಗಳನ್ನು ಮುಚ್ಚುತ್ತಿವೆ. ಪೆಪ್ಸಿ, ಕೊಕೊ ಕೋಲಾದಂತಹ ಕಂಪನಿಗಳು ವಾರ್ಷಿಕ ಲಕ್ಷ ಕೋಟಿಗಳಲ್ಲಿ ನಿವ್ವಳ ಲಾಭವನ್ನು ವಿದೇಶಕ್ಕೆ ರವಾನಿಸುತ್ತಿವೆ. ಇಲ್ಲಿನ ಖನಿಜ ಸಂಪತ್ತನ್ನು ಉಪಯೋಗಿಸಿಕೊಂಡು ಸರಕುಗಳನ್ನು ತಯಾರಿಸಿ ಅದನ್ನು ಇಲ್ಲಿಯೇ ಮಾರಿ ಲಾಭಗಳಿಸಿ ಬಂಡವಾಳವನ್ನು ತಮ್ಮ ದೇಶಕ್ಕೆ ರವಾನಿಸುತ್ತಾ ಈ ದೇಶಕ್ಕೆ ಬರೀ ಕೊಳಕು ನೀರು, ಗಾಳಿ ನೀಡುವ ಕಂಪನಿಗಳು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇವೆ. ಅಧಿಕಾರಕ್ಕೆ ಬಂದ ಹೊಸ ಹೊಸ ಪಕ್ಷಗಳು ಇದಾವುದರ ಪರಿವಿಲ್ಲದೆ ಹೊಸ ಹೊಸ ಕಂಪನಿಗಳಿಗೆ ಪರವಾನಿಗೆಯನ್ನು ನೀಡುತ್ತಲೇ ಇವೆ. ಇದು ಮಧ್ಯಮ ವರ್ಗ ಮತ್ತು ಕೂಲಿಕಾರ್ಮಿಕರ ಬದುಕನ್ನು ದಿಕ್ಕೆಡಿಸಿದೆ. ಕೂಲಿಗೆ ಕೆಲಸವೂ ಸಿಗದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಡೆಂಕಲ್, ಗ್ಯಾಟ್, ವ್ಯಾಟ್ ಪ್ರಸ್ತಾವನೆಗಳನ್ನು ತಂದು ಸುಲಿಗೆ ಸಂಸ್ಕೃತಿಯನ್ನು ಮುಂದುವರಿಸಲಾಗಿದೆ.

ದುಡಿಯುವ ಜನತೆಗೆ ನಿರಂತರವಾಗಿ ಕಾಡುತ್ತಿರುವ ಮತ್ತು ಮಾರಕವಾಗಿರುವ ಬಂಡವಾಳಶಾಹಿಗಳ, ಕೋಮು ಪ್ರತಿಪಾದಕರ ಹುನ್ನಾರವನ್ನು ಒಂದು ದಲಿತ ಕಾವ್ಯ ನಿರೂಪಿಸುವುದು ಹೀಗೆ;

ಪ್ರಜಾ ಸಾಮ್ರಾಜ್ಯಕ್ಕೆ
ಮುಳ್ಳು ಬೇಲಿಗಳ ನಿಧಿ
ಜಾತಿ ಮತಗಳ ಕೊಳಕು
ಕೋಮು ದಳ್ಳುರಿಯಲ್ಲಿ
ಮಾರಣ ಹೋಮಗಳು,

ಮತ್ತೊಂದೆಡೆ
ಮುಗ್ಧ ಮನಗಳ
ಅಸಮರ್ಥ ಕಣ್ಣೀರು
ಶತಮಾನಗಳು ಕರಗಿದರೂ
ನ್ಯಾಯಕ್ಕೆಲ್ಲಿದೆ ನ್ಯಾಯ?
ಮಾನವತೆಗೆ ಮಾರ್ಗವೆಲ್ಲಿದೆ?
ಭಯದ ಗೂಡಿನೊಳು
ನೋವಿನ ಬದುಕು

ಜೀವನವಿಡೀ ಭಯ
ಬದುಕಿನ ಸಮರದುದ್ದಕ್ಕೂ
ಭಯದ ಕರಿ ನೆರಳು
ಭಯವಿಲ್ಲದ ಗೂಡೆಲ್ಲಿದೆ?
ನೋವಿಲ್ಲದ ಬದುಕೆಲ್ಲಿದೆ?
ತಡಕಾಡಿ ಹುಡುಕು ಬಾ
ಬಾಳ ಹಕ್ಕಿಗೆ ಬೇಕಾಗಿದೆ,
ಭಯವಿಲ್ಲದ ನಿರ್ಭಯದ ಗೂಡು[೮೩]

ಇವೆರೆಲ್ಲರ ವಿರುದ್ಧ ನಿಲ್ಲಬೇಕಾದರೆ ಹೋರಾಟವೊಂದೇ ದಾರಿ. ಇದನ್ನು ಮೇಲಿನ ಕಾವ್ಯದ ಸಾಲುಗಳು ಅಭಿವ್ಯಕ್ತಿಸಿವೆ. ದುಡಿಯುವ ಜನತೆಯ ಬದುಕು ಸ್ವದೇಶಿ ಮತ್ತು ವಿದೇಶಿ ಬಂಡವಾಳಿಗರ ನಡುವೆ ಸಿಕ್ಕಿ ಹತವಾಗಬಾರದು. ಕೋಮುದಳ್ಳುರಿ ದುಡಿಯುವವರನ್ನು ದಹಿಸಬಾರದು. ಇದು ದಲಿತ ಕಾವ್ಯದ ಪ್ರಧಾನ ಆಶಯವಾಗಿ ಅಭಿವ್ಯಕ್ತಗೊಂಡಿವೆ. ದುಡಿಯುವವರೇ ಈ ದೇಶದ ನಿಜವಾದ ವಾರಸುದಾರರು. ಇದನ್ನು ಇಲ್ಲಿನ ಹಾಡುಗಳು ಅಂತರಾಳದಿಂದ ಹೊರಹಾಕಿವೆ. ದುಡಿಯುವ ಜನತೆಯ ಸಾಮಾಜಿಕ ನ್ಯಾಯ ಸಿಗಬೇಕಿದೆ. ಆ ಮೂಲಕ ಸಮಸಮಾಜ ನಿರ್ಮಾಣವಾಗಬೇಕಿದೆ. ಶೋಷಣೆ, ದಬ್ಬಾಳಿಕೆ, ದೌರ್ಜನ್ಯ ಮುಂತಾದವುಗಳ ಸರ್ವನಾಶವಾಗಬೇಕಿದೆ. ಈ ಎಲ್ಲಾ ಆಶಯಗಳು ದಲಿತ ಕಾವ್ಯದಲ್ಲಿ ಅಭಿವ್ಯಕ್ತಿಯ ರೂಪ ಪಡೆದಿವೆ.

*****

ಕೊನೆ ಟಿಪ್ಪಣಿಗಳು

೧. ಬಂಡಾಯ ಸಾಹಿತ್ಯ ಚಳುವಳಿ, ಹತ್ತು ವರ್ಷ, ಸಂ. ಡಾ. ಹೆಚ್.ಜೆ. ಲಕ್ಕಪ್ಪಗೌಡ, ೧೯೯೦, ಪುಟ ೧೩

೨. ಹೋರಾಟದ ಹಾಡುಗಳು, ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್ ಪ್ರಕಾಶನ, ೨೦೦೬, ಪುಟ ೮೩

೩. ಶಕ್ತಿ ಶಾರದೆಯ ಮೇಳ, ಡಿ.ಆರ್. ನಾಗರಾಜ, ೨೦೦೨, ಪುಟ ೧೫

೪. ಕಪ್ಪು ಕಣ್ಣಿನ ಹುಡುಗಿ, ಎಲ್. ಹನುಮಂತಯ್ಯ, ೧೯೯೧, ಪುಟ ೪೬

೫. ವಚನ ಸಾವಿರ, (ಸಂ). ಓ.ಎಲ್. ನಾಗಭೂಷಣಸ್ವಾಮಿ, ೨೦೦೪, ಪುಟ ೯೦

೬. ಕನಕದಾಸರ ಪದಗಳು, ಸು. ರುದ್ರಮೂರ್ತಿಶಾಸ್ತ್ರಿ, ೨೦೦೮, ಪುಟ ೮೨

೭. ಅದೇ ಪುಟ ೫೩

೮. ಅಮರಚಿಂತ ಕಾವ್ಯ, ಜಂಬಣ್ಣ ಅಮರಚಿಂತ, ೧೯೯೩, ಪುಟ ೬೦

೯. ಡಾ. ಬಿ.ಆರ್. ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು, (ಪ್ರ.ಸಂ) ಪ್ರಧಾನ್ ಗುರುದತ್ತ, ಸಂಪುಟ ೧, ೨೦೧೦, ಪುಟ ೧೬೫

೧೦. ಡಾ. ಬಿ.ಆರ್. ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು, (ಪ್ರ.ಸಂ) ಪ್ರಧಾನ್ ಗುರುದತ್ತ, ಸಂಪುಟ ೧, ೨೦೧೦, ಪುಟ ೭೨

೧೧. ಹೋರಾಟದ ಹಾಡುಗಳು, ದಲಿತ ಸಂಘರ್ಷ ಸಮಿತಿ ಪ್ರಕಟಣೆ, ೧೯೮೦, ಪುಟ ೬೫

೧೨. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೧೧

೧೩. ವಿದ್ರೋಹ, ಮ.ನ. ಜವರಯ್ಯ, ೨೦೦೧, ಪುಟ ೪೦

೧೪. ಕನ್ನಡ ಪ್ರತಿಭಟನೆಯ ಕಾವ್ಯ, (ಪ್ರ.ಸಂ) ಹಂಪ ನಾಗರಾಜಯ್ಯ, ೧೯೮೧, ಪುಟ ೮

೧೫. ಸಂಗಡ, ಹೆಚ್.ಎಸ್. ರಾಘವೇಂದ್ರರಾವ್, (ಸಂ) ಎಂ. ಸರಸ್ವತಿ, ೨೦೧೦, ಪುಟ ೧೩೪

೧೬. ದಲಿತ ಕಾವ್ಯ, (ಸಂ), ಕೆ.ಬಿ. ಸಿದ್ದಯ್ಯ, ೧೯೯೬, ಪುಟ ೧೬೨

೧೭. ಕನ್ನಡ ಪ್ರತಿಭಟನೆಯ ಕಾವ್ಯ, (ಪ್ರ.ಸಂ) ಹಂಪ ನಾಗರಾಜಯ್ಯ, ೧೯೮೧, ಪುಟ ೬

೧೮. ಉರಿ ಕಂಡಾಯ, ಡಾ. ಸಿದ್ಧಲಿಂಗಯ್ಯ, ೨೦೦೯, ಪುಟ ೨೯

೧೯. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೮೭

೨೦. ಕೆಂಡದ ನಡುವೆ, ವಿ. ಮುನಿವೆಂಕಟಪ್ಪ, ೧೯೮೨, ಪುಟ ೩೬

೨೧. ಖೈರ್ಲಾಂಜಿ, ಮೂಲ, ಆನಂದ್ ತೇಲ್ ತುಂಬ್ಡೆ ಲಂಕೇಶ್ ಪ್ರಕಾಶನ, ೨೦೦೯, ಪುಟ. ೯

೨೨. ಹೋರಾಟದ ಹಾಡುಗಳು, ದಲಿತ ಸಂಘರ್ಷ ಸಮಿತಿ ಪ್ರಕಟಣೆ, ೧೯೮೦, ಪುಟ ೩೩.

೨೩. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೮೨

೨೩. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೮೨

೨೪. ಸಾಹಿತ್ಯ ನೋಟ, ಡಿ. ನಾಗಣ್ಣ, ೨೦೦೫, ಪುಟ ೨೫

೨೬. ರಕ್ತದ ರಂಗೋಲಿ, ಆರ್. ಮಾನಸಯ್ಯ, ೨೦೦೭, ಪುಟ ೧೫

೨೭. ನೊಂದವರ ನೋವುಗಳು, ರಾಜಶೇಖರ ಮಾಂಗ್, ೨೦೦೬, ಪುಟ ೪

೨೮. ಬೆಂಕಿಯೊಳಗಿನ ಬದುಕು, ಮಹಾದೇವ ಕುಕ್ಕರಹಳ್ಳಿ, ೨೦೦೬, ಪುಟ ೮೩

೨೯. ಬೆಂಕಿಯೊಳಗಣ ಬದುಕು, ಮಹಾದೇವ ಕುಕ್ಕರಹಳ್ಳಿ, ೨೦೦೬, ಪುಟ ೩೨

೩೦. ದಲಿತ ಕಾವ್ಯ, (ಸಂ) ಕೆ. ಬಿ. ಸಿದ್ದಯ್ಯ, ೧೯೯೬, ಪುಟ ೧೦೨

೩೧. ಹೋರಾಟದ ಹಾಡುಗಳು, ದಲಿತ ಸಂಘರ್ಷ ಸಮಿತಿ ಪ್ರಕಟಣೆ, ೧೯೮೦, ಪುಟ ೧೪

೩೨. ಕೆಂಪು ಸೂರ್ಯ ಮತ್ತು ಇತರ ಕವನಗಳು, ಮಲ್ಲಿಕಾರ್ಜುನ ಜೆ. ಆಮ್ಮೆ, ೧೯೯೭, ಪುಟ ೫೧

೩೩. ರಕ್ತದ ರಂಗೋಲಿ, ಆರ್. ಮಾನಸಯ್ಯ, ೨೦೦೭, ಪುಟ ೨೧

೩೪. ಚಾಂಡಾಲರ ಕೂಗು, ಗಂಗಾರಾಂ ಚಾಂಡಾಲ, ೧೯೮೩, ಪುಟ ೨೪

೩೫. ಮುಳ್ಳು ಕಂಟಿಯ ನಡುವೆ, ಅನಸೂಯ ಕಾಂಬಳೆ, ೧೯೯೯, ಪುಟ ೧೦

೩೬. ಹೋರಾಟದ ಹಾಡುಗಳು, ದಲಿತ ಸಂಘರ್ಷ ಸಮಿತಿ ಪ್ರಕಟಣೆ, ೧೯೮೦, ಪುಟ ೬೦

೩೭. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೭೮

೩೮. ಚಾಂಡಾಲರ ಕೂಗು, ಗಂಗಾರಾಂ ಚಾಂಡಾಲ, ೧೯೮೩, ಪುಟ ೩೪

೩೯. ರೊಚ್ಚು, ಎಸ್.ಪಿ. ಸುಳ್ಳದ್, ೧೯೯೪, ಪುಟ ೨೨

೪೦. ಹೋರಾಟದ ಹಾಡುಗಳು, ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್ ಪ್ರಕಾಶನ, ೨೦೦೬, ಪುಟ ೧೯

೪೧. ದಲಿತ ಕಥನ, ಡಾ. ಮೊಗಳ್ಳಿ ಗಣೇಶ್, ೨೦೦೬, ಪುಟ ೧೧೧

೪೨. ಅದೇ ಪುಟ ೧೧೨

೪೩. ಅದೇ ಪುಟ ೧೨೩

೪೪. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೫೭

೪೫. ಮುಖಾಮುಖಿ, ಡಾ. ಬಿ.ಎಂ. ಪುಟ್ಟಯ್ಯ, ೨೦೦೮, ಪುಟ ೩೮

೪೬. ಅದೇ ಪುಟ ೩೫

೪೭. ಚಂದಿರನ ಕಣ್ಣು ಇಂಗಲಾರದ ಹುಣ್ಣು (ಆಯ್ದ ಕವಿತೆಗಳು), ಮೂಡ್ನಾಕೂಡು ಚಿನ್ನಸ್ವಾಮಿ, ೨೦೦೪, ಪುಟ ೩೨

೪೮. ಹೋರಾಟದ ಹಾಡುಗಳು, ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್ ಪ್ರಕಾಶನ, ೨೦೦೬, ಪುಟ ೩೩

೫೧. ಮುಖಾಮುಖಿ, ಡಾ. ಬಿ.ಎಂ. ಪುಟ್ಟಯ್ಯ, ೨೦೦೮, ಪುಟ ೩೦

೫೨. ಬೂದಿ ಗೊಬ್ಬರದ ಹಾಡು, ಸಾಸಾ ರಾಮಮೂರ್ತಿ, ೧೯೯೦, ಪುಟ ೨೯

೫೩. ದಲಿತ ಕಾವ್ಯ, (ಸಂ) ಕೆ.ಬಿ. ಸಿದ್ದಯ್ಯ, ೧೯೯೬, ಪುಟ ೨೦೦

೫೪. ಸೂಜಿಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು, ಸುಬ್ಬು ಹೊಲೆಯಾರ್ ೨೦೦೩, ಪುಟ ೨೭

೫೫. ಅಗ್ನಿ ಕಿರೀಟ, ಶಿವಕುಮಾರ ಕಂಪ್ಲಿ, ೨೦೦೭, ಪುಟ ೪

೫೬. ಅರವಿಂದ ಮಾಲಗತ್ತಿ ಅವರ ಆಯ್ದ ಕವನಗಳು, (ಸಂ) ಎಚ್.ಎಸ್. ರಾಘವೇಂದ್ರ ರಾವ್ ೨೦೦೪, ಪುಟ ೧೪೩

೫೭. ಮುಖಾಮುಖಿ, ಡಾ. ಬಿ.ಎಂ. ಪುಟ್ಟಯ್ಯ, ೨೦೦೮, ಪುಟ ೩೩

೫೮. ಹೋರಾಟದ ಹಾಡುಗಳು, ದಲಿತ ಸಂಘರ್ಷ ಸಮಿತಿ ಪ್ರಕಟಣೆ, ೧೯೮೦, ಪುಟ ೬೧

೫೯. ಮುಳ್ಳು ಕಂಟಿಯಾ ನಡುವೆ, ಅನಸೂಯ ಕಾಂಬಳೆ, ೧೯೯೯, ಪುಟ ೧೩

೬೦. ಮುಖಾಮುಖಿ, ಡಾ. ಬಿ.ಎಂ. ಪುಟ್ಟಯ್ಯ, ೨೦೦೮, ಪುಟ ೩೪

೬೧. ಕರಿನೆಲದ ಕಲೆಗಳು, ಸತ್ಯಾನಂದ ಪಾತ್ರೋಟ, ೧೯೮೫, ಪುಟ ೩೨

೬೨. ಆಕ್ರೋಶ, ಹನುಮಂತರಾವ್ ಬಿ. ದೊಡ್ಡಮನಿ, ೨೦೦೨, ಪುಟ ೩೪

೬೩. ಉರಿ ಕಂಡಾಯ, ಡಾ. ಸಿದ್ಧಲಿಂಗಯ್ಯ, ೨೦೦೯, ಪುಟ ೧೪

೬೪. ಕಪ್ಪು ಕಾವ್ಯ, ಡಾ. ಅರವಿಂದ ಮಾಲಗತ್ತಿ, ೧೯೮೫, ಪುಟ. ೫

೬೫. ಸೂಜಿಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು, ಸುಬ್ಬು ಹೊಲೆಯಾರ್, ೨೦೦೩, ಪ್ರಸ್ತಾವನೆ

೬೬. ಮಣ್ಣಲ್ಲಿ ಬರಿದ ಅಕ್ಷರ, ಜಂಬಣ್ಣ ಅಮರಚಿಂತ, ೧೯೯೧, ಪುಟ ೧೮

೬೭. ಕನ್ನಡ ಪ್ರತಿಭಟನೆಯ ಕಾವ್ಯ, (ಪ್ರಸಂ) ಹಂಪ ನಾಗರಾಜಯ್ಯ, ೧೯೮೧, ಪುಟ ೪೫

೬೮. ಕೆರ ಹೊತ್ತ ಬಸವ, ರಾಮಪ್ಪ ಮಾದರ, ೨೦೦೫, ಪುಟ ೧೫

೬೯. ಕದಡು, ಡಾ. ಬಿ.ಎಂ. ಪುಟ್ಟಯ್ಯ, ೨೦೦೮, ಪುಟ ೫೦

೭೦. ನಾನೊಂದು ಮರವಾಗಿದ್ದರೆ, ಮೂಡ್ನಾಕೂಡು ಚಿನ್ನಸ್ವಾಮಿ, ೧೯೯೮, ಪುಟ ೨೩

೭೧. ಜಾತಿ ವಿಶ್ಲೇಷಣೆಯ ಸಮಸ್ಯೆ, ಡಾ. ಬಿ.ಎಂ. ಪುಟ್ಟಯ್ಯ, ೨೦೧೦, ಪುಟ ೭

೭೨. ಬೆಂಕಿಯೊಳಗಿನ ಬದುಕು, ಮಹಾದೇವ ಕುಕ್ಕರಹಳ್ಳಿ, ೨೦೦೬, ಪುಟ ೨೪

೭೩. ದಲಿತರು ಏನನ್ನು ಪಡೆಯಲು ಹೋರಾಡಬೇಕು?, ಎಂ. ಗೋಪಿನಾಥ್, ೧೯೯೭, ಪುಟ ೫

೭೪. ಬೆಂಕಿಯೊಳಗಿನ ಬದುಕು, ಮಹದೇವ ಕುಕ್ಕರಹಳ್ಳಿ, ೨೦೦೬, ಪುಟ ೩೭

೭೫. ಮಾತಾಡುವ ಎಲುಬುಗಳು, ಭಾಸ್ಕರ್ ಟಿ.ಎಂ., ೨೦೦೪, ಪುಟ ೨೨

೭೬. ರಕ್ತದ ರಂಗೋಲಿ, ಆರ್. ಮಾನಸಯ್ಯ, ೨೦೦೭, ಪುಟ ೨೫

೭೭. ಮತ್ತೆ ಮಳೆ ಬರುವ ಮುನ್ನ, ಮೂಡ್ನಾಕೂಡು ಚಿನ್ನಸ್ವಾಮಿ, ೨೦೦೦, ಪುಟ ೩೨

೭೮. ಬೆಂಕಿಯೊಳಗಿನ ಬದುಕು, ಮಹಾದೇವ ಕುಕ್ಕರಹಳ್ಳಿ, ೨೦೦೬, ಪುಟ ೩೯

೭೯. ಹೋರಾಟದ ಹಾಡುಗಳು, ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್ ಪ್ರಕಾಶನ, ೨೦೦೬, ಪುಟ ೭೫

೮೦. ಅದೇ ಪುಟ ೮೪

೮೧. ಮುಳ್ಳುಕಂಟಿಯ ನಡುವೆ, ಅನಸೂಯ ಕಾಂಬಳೆ, ೧೯೯೯, ಪುಟ ೨೫

೮೨. ಕಲ್ಲಿಗೂ ಗೊತ್ತಿರುವ ಕತೆ, ಸತ್ಯಾನಂದ ಪಾತ್ರೋಟ, ೧೯೯೪, ಪುಟ ೪೨

೮೩. ಬಯಲೇ ಸಂಗಾತಿ, ಎನ್.ಡಿ. ವೆಂಕಮ್ಮ, ೨೦೦೪, ಪುಟ ೧೯

ಅಧ್ಯಾಯ ಏಳು

ದಲಿತ ಕಾವ್ಯ : ರಾಜಕೀಯ ತತ್ವ

೭.೧. ದಲಿತ ಕಾವ್ಯ : ಸ್ಥಾಪಿತ ಮೌಲ್ಯಗಳಿಗೆ ಅಸಹನೆ ಮತ್ತು ಪ್ರತಿರೋಧ

೭.೨. ದಲಿತ ಕಾವ್ಯ : ದುಡಿಯುವ ವರ್ಗದ ದೃಷ್ಟಿಕೋನದ ನಿರ್ಮಾಣ

೭

ದಲಿತ ಕಾವ್ಯ : ರಾಜಕೀಯ ತತ್ವ

ಪ್ರತಿಯೊಂದು ಮಾತು ಮತ್ತು ಬರವಣಿಗೆಯ ಹಿಂದೆ ಒಂದು ಉದ್ದೇಶವಿರುತ್ತದೆ. ಅದು ಅನೇಕ ಸಲ ರಾಜಕೀಯದ ನೆಲೆಗಟ್ಟಿನಲ್ಲೂ ಅಂತ್ಯಗೊಳ್ಳಬಹುದು. ಮಾತಿಗೆ ಮಾತು ಕೊಡುವಾಗಲೂ, ಮಾತು ಹಾಡಾಗಿ ಹೊರಹೊಮ್ಮುವಾಗಲೂ, ಅದು ಹೊರಡಿಸುವ ಅರ್ಥ ಸಾಧ್ಯತೆಗಳಿಂದಾಗಿಯೂ ಒಂದು ರಾಜಕೀಯ ತತ್ವ ಅಡಕವಾಗಿರುತ್ತದೆ. ದಲಿತ ಕಾವ್ಯ ಇಂತಹ ರಾಜಕೀಯ ತತ್ವವನ್ನೇ ತನ್ನ ಒಡಲಿನಲ್ಲಿ ಹುಟ್ಟಾಕಿತು. ಏಕೆಂದರೆ ನೊಂದ ಜನರ ನೆಲೆಯಿಂದ ಎದ್ದ ಕಾವ್ಯ ನೊಂದ ಜನರ ನೋವನ್ನು ನಿರೂಪಿಸಲು ಮತ್ತು ಅದನ್ನು ಕೊನೆಗಾಣಿಸಲು ಪ್ರಯತ್ನಿಸುತ್ತದೆ. ಕಾವ್ಯವೇ ಈ ಕೆಲಸ ಮಾಡುತ್ತದೆಂದು ಸಂಪೂರ್ಣವಾಗಿ ಹೇಳಲಾಗುವುದಿಲ್ಲ. ಆದರೆ ಕಾವ್ಯದಿಂದ ಸಾಧ್ಯವಾಗುವುದಿಲ್ಲವೆಂದು ಸಾರಾಸಗಟಾಗಿ ತಳ್ಳಿಹಾಕುವಂತೆಯೂ ಇಲ್ಲ. ಕಾವ್ಯ ಇಂತಹ ಪ್ರಕ್ರಿಯೆಗೊಂದು ಚಾಲಕ ಶಕ್ತಿಯಾಗಿ ನಿಲ್ಲುತ್ತದೆ. ಈ ಹಿನ್ನೆಲೆಯಲ್ಲಿ ದಲಿತ ಕಾವ್ಯ ಸೃಷ್ಟಿಸಿದ ರಾಜಕೀಯ ತತ್ವದ ಸ್ವರೂಪ ಯಾವುದು? ಆ ತತ್ವದ ಹಿಂದಿನ ಉದ್ದೇಶವೇನು? ಮಿತಿಗಳೇನು? ಇದರಿಂದ ಮುಂದೆ ಆಗಬಹುದಾದ ಪರಿಣಾಮಗಳ ಕಡೆಗೆ ಚರ್ಚೆಯನ್ನು ಕೊಂಡೊಯ್ಯುವುದು ಈ ಅಧ್ಯಾಯದ ಉದ್ದೇಶ.

ಮನುಷ್ಯ ಕೈಗೊಳ್ಳುವ ಪ್ರತಿಯೊಂದು ಕ್ರಿಯೆಯಲ್ಲೂ 'ರಾಜಕೀಯ' ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಕ್ರಿಯಾಶೀಲವಾಗಿರುತ್ತದೆ. ರಾಜಕೀಯವಿಲ್ಲದ ಒಂದು ಸಣ್ಣ ಘಟನೆಯನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಜಗತ್ತಿನಾದ್ಯಂತ ನಡೆದಿರುವ ಮತ್ತು ನಡೆಯುತ್ತಿರುವ ಅನೇಕ ಹೋರಾಟಗಳು, ಯುದ್ಧಗಳು, ಪ್ರತಿಭಟನೆಗಳು, ಪ್ರತಿಭಟನೆಗಳನ್ನು ಹತ್ತಿಕ್ಕುವ ತಂತ್ರಗಾರಿಕೆಗಳು, ಚಳುವಳಿಗಳು, ಶಾಂತಿಪಾಲನಾ ಸಭೆಗಳು, ಸಮಾವೇಶಗಳು ಎಲ್ಲವೂ ಒಂದಲ್ಲಾ ಒಂದು ರೀತಿಯ ರಾಜಕೀಯ ಪ್ರೇರಿತವೇ. ಈ ರಾಜಕೀಯ ಎನ್ನುವುದು ಮೇಲ್ನೋಟಕ್ಕೆ ಆಳುವವರು ಮತ್ತು ಆಳಿಸಿಕೊಳ್ಳುವವರ ನಡುವಿನ ಕ್ರಿಯೆ. ಇದು ಪರೋಕ್ಷವಾಗಿ ಶಕ್ತಿ ರಾಜಕಾರಣದ ಸಂಕೇತದಂತೆ. ಅಂದರೆ ಮತದಾರರು ತಮ್ಮ ಮತಗಳಿಂದ ಆಳುವ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಆಳಿಸಿಕೊಳ್ಳುವ ವಿಧಾನದಂತೆ ಕಂಡುಬಂದರೂ ಇದರ ವಿನ್ಯಾಸ ಇಷ್ಟಕ್ಕೇ ಸೀಮಿತಗೊಳ್ಳುವುದಿಲ್ಲ. ಸೀಮಿತಗೊಳಿಸಿದರೆ ಇದರ ವಿಶಾಲ ವ್ಯಾಪ್ತಿ ಸಂಕುಚಿತಗೊಳ್ಳುತ್ತದೆ.

ರಾಜಕೀಯ ಎನ್ನುವುದು ಮೂಲತಃ ಕ್ರಿಯೆಗೆ ಸಂಬಂಧಿಸಿದ್ದು. ಆದರೆ ಕ್ರಿಯೆಯ ಚೌಕಟ್ಟು ಇಟ್ಟು ನೋಡಿದರೆ ಮೊದಲೇ ಹೇಳಿದ ಹಾಗೆ ಅದು ಆಳುವವರ ಮತ್ತು ಆಳಿಸಿಕೊಳ್ಳುವವರ ನಡುವಿನ ಸರಕಾಗುತ್ತದೆ. ಇದರಿಂದ ಸ್ವಲ್ಪ ಮುಂದೋದರೆ ಈ ಕ್ರಿಯೆಗೆ ಬೇಕಾದ ಆಲೋಚನೆಯೂ ಕೂಡ ರಾಜಕೀಯವೆಂಬ ಈ ಪರಿಧಿಯೊಳಗೆ ಸೇರಿಕೊಂಡುಬಿಡುತ್ತದೆ. ಏಕೆಂದರೆ ಕ್ರಿಯೆಗಿಂತ ಮೊದಲು ಆಲೋಚನೆ. ಯಾವುದೇ ಆಲೋಚನೆ ಇಲ್ಲದೆ ಕ್ರಿಯೆ ಸಂಭವಿಸಲಿಕ್ಕೆ ಸಾಧ್ಯವೇ ಇಲ್ಲ. ಇಂತಹ ಆಲೋಚನೆಗಳ ಮೂಲಕವಾಗೇ ಕವಿ, ಕಲಾವಿದರು ಜನತೆಯಲ್ಲಿ ಒಂದು ಮನೋಭೂಮಿಕೆಯನ್ನು ಸಿದ್ಧಪಡಿಸುತ್ತಾರೆ. ಇಂತಹ ರಾಜಕೀಯ ತಕ್ಷಣಕ್ಕೆ ಯಶಸ್ಸು ನೀಡಬಹುದು ಅಥವಾ ಮುಂದೊಂದು ಕಾಲಘಟ್ಟದಲ್ಲಿ ಸಂಭವಿಸಬಹುದು. ಒಟ್ಟಾರೆ ಸಮಾಜವನ್ನು ಬದಲಿಸುವ ಈ ಆಲೋಚನಾ ಕ್ರಮ ರಾಜಕೀಯ ಚಿಂತನೆಯ ಬಹುಮುಖ್ಯ ನೆಲೆಗಟ್ಟು.

ಈ ರಾಜಕೀಯ ಚಿಂತನೆಯ ಸ್ವರೂಪವನ್ನು ಹಲವು ಧೋರಣೆಗಳ ಹಿನ್ನೆಲೆಯಲ್ಲಿ ಚಿಂತಿಸಿದ್ದುಂಟು. ರಾಜಕಾರಣಿಗಳು, ಅಧಿಕಾರಿಗಳು, ರಾಜಕೀಯ ಚಿಂತಕರು, ದಾರ್ಶನಿಕರು, ಕವಿ, ಕಲಾವಿದರು, ಅಧಿಕಾರ ರಹಿತ ರಾಜಕಾರಣಿಗಳು, ವಿವಿಧ ಬಗೆಯ ಬರಹಗಾರರು, ಅಕ್ಷರ ಬಲ್ಲವರು, ಅನಕ್ಷರಸ್ಥರು, ಯಜಮಾನ ಪ್ರಭುಗಳು, ಕೂಲಿಕಾರ್ಮಿಕರು, ಮಹಿಳೆಯರು ಎಲ್ಲರನ್ನೂ ಈ ರಾಜಕೀಯ ತನ್ನತ್ತ ಸೆಳೆದಿದೆ. ರಾಜಕೀಯ ರಹಿತ ಯಾವೊಂದು ಆಲೋಚನೆಯೂ ಇವರಲ್ಲಿ ಹುಟ್ಟಲು ಸಾಧ್ಯವಿಲ್ಲ. ಆದರೆ ಒಬ್ಬೊಬ್ಬರ ಚಿಂತನೆಗಳು ಒಂದೊಂದು ರೀತಿಯಲ್ಲಿ ನೆಲೆಗೊಂಡಿರುತ್ತವೆ. ಉದಾಹರಣೆಗೆ ಅಧಿಕಾರದಲ್ಲಿರುವ ರಾಜಕಾರಣಿಗೂ, ಕೂಲಿಕಾರ್ಮಿಕರ ರಾಜಕೀಯ ಚಿಂತನೆಗಳಿಗೂ ವಿರುದ್ಧ ಸಂಬಂಧವಿದೆ. ಇಬ್ಬರ ಚಿಂತನೆಗಳು ಒಂದೇ ಎಂದು ಹೇಳಲು ಬರುವುದಿಲ್ಲ. ಹಾಗೆಯೇ ಅಧಿಕಾರಸ್ಥ ವರ್ಗದವರ ಚಿಂತನೆಗೂ ಮತ್ತು ಪ್ರಗತಿಪರ ಎನ್ನಲಾಗುವ ಸಾಹಿತಿಗಳ ಚಿಂತನೆಗೂ ಸಾಮ್ಯತೆ ಕಲ್ಪಿಸಲು ಬರುವುದಿಲ್ಲ. ಅಧಿಕಾರಿಗಳಲ್ಲಿ ಅಧಿಕಾರದ ದಾಹವಿದ್ದರೆ, ಕವಿ, ಕಲಾವಿದ ಸಾಹಿತಿಗಳಲ್ಲಿ ಒಂದು ದಾರ್ಶನಿಕವಾದ ಅಗತ್ಯದ ಕಾಳಜಿಯ ರಾಜಕೀಯವಿದೆ. ಈ ದಾರ್ಶನಿಕತೆಯ ಮೂಲಕವಾಗೇ ಇವರು ತಮ್ಮ ರಾಜಕೀಯ ದೃಷ್ಟಿಕೋನವನ್ನು ಹರಿಯಬಿಡುತ್ತಾರೆ.

ಅಧಿಕಾರ ಒಂದೇ ವರ್ಗದವರಲ್ಲಿ ಕೇಂದ್ರೀಕರಣವಾದಾಗ ಅದು ಅನೇಕ ಶೋಷಣೆಗೆ ದಾರಿಮಾಡಿಕೊಡಬಲ್ಲದು. ಈ ಅಧಿಕಾರ ಎನ್ನುವುದು ಕೇವಲ ರಾಜಕೀಯ ಅಧಿಕಾರವಷ್ಟೇ ಅಲ್ಲ. ಅದು ಗಂಡು-ಹೆಣ್ಣು, ಮಾಲಿಕರು-ಕೂಲಿಯವರು, ಭೂಮಾಲಿಕರು-ಭೂರಹಿತರು, ಮೇಲ್ಜಾತಿ-ಕೆಳಜಾತಿ, ಹಿರಿಯರು-ಕಿರಿಯರು, ತಂದೆ-ಮಕ್ಕಳು, ಶ್ರೀಮಂತರು-ಬಡವರು, ಕಲಿತವರು-ಕಲಿಯದವರು, ಆಳುವವರು-ಆಳಿಸಿಕೊಳ್ಳುವವರು ಮುಂತಾದ ತಾರತಮ್ಯ ನೆಲೆಗಳೇ

ಅಧಿಕಾರದ ದುರುಪಯೋಗಕ್ಕೆ ಕಾರಣಗಳಾಗಿವೆ. ಆದ್ದರಿಂದಲೇ ಇಲ್ಲಿ ಸೂಚಿಸಿರುವ ಒಂದೊಂದು ವರ್ಗವೂ ಒಂದೊಂದು ರಾಜಕೀಯ ನೆಲೆಯಲ್ಲಿ ತನ್ನನ್ನು ತಾನು ಉಳಿಸಿಕೊಳ್ಳಲು ಪ್ರಯತ್ನಿಸಿರುತ್ತದೆ.

ರಾಜಕಾರಣವಿಲ್ಲದ ಯಾವುದೇ ಕ್ಷೇತ್ರವನ್ನು ನಾವಿಂದು ಕಾಣಲಾರೆವು. ಎಲ್ಲಾ ವಲಯಗಳಲ್ಲಿ ರಾಜಕೀಯ ಇದ್ದೇ ಇರುತ್ತದೆ, ಇರಲೇಬೇಕು. ಇಲ್ಲದಿದ್ದರೆ ಯಾವ ಕ್ಷೇತ್ರವೂ ಚಲನಶೀಲತೆಗೆ ಒಳಗಾಗಲು ಸಾಧ್ಯವಿಲ್ಲ. ಇಂತಹ ಒಂದು ಚಲನಶೀಲತೆಗೆ ೭೦ರ ದಶಕದ ದಲಿತ ಕಾವ್ಯವೂ ತನ್ನನ್ನು ತಾನು ತೆರೆದುಕೊಂಡಿತು. 'ಕಲೆಗಾಗಿ ಕಲೆ' ಎಂಬ ತತ್ವವನ್ನು ಧೂಳೀಪಟ ಮಾಡಿದ ಈ ಕಾವ್ಯ ಪರಂಪರೆ 'ಕಲೆ ಮಾನವನ ಒಳಿತಿಗಾಗಿ' ಎಂಬ ಧ್ಯೇಯದೊಂದಿಗೆ ಗುರುತಿಸಿಕೊಂಡಿತು.

ಕಲ್ಲು ಕಟ್ಟಡದೆದುರು ಕೈಚೆಲ್ಲಿ ಕುಳಿತವರ
ನಿಟ್ಟುಸಿರು ಧಿಕ್ಕಾರವಾಗಲೆಂದು
ಒದೆತ ಒಡೆತಕ್ಕೆ ಸಿಕ್ಕಿ ಭೂಗತರಾದವರು
ಒಂದೇ ನೆಗೆತಕ್ಕೆ ಉತ್ತರ ಕೊಡಲೆಂದು
ಅಕ್ಷರಗಳ ಅಗ್ನಿಕುಂಡದಲ್ಲಿ
ಸಿಟ್ಟು ಧಗಧಗಿಸಿ ಉರಿಯುತ್ತಿರಲೆಂದು
ನನ್ನ ಕವಿತೆ ಹಾರೈಸುತ್ತದೆ[೧]

ಇಲ್ಲಿ ಕವಿತೆ ಹಾರೈಸುವ ಪರಿಯೂ ರಾಜಕೀಯ ಪ್ರೇರಿತವೇ. ಇಲ್ಲಿ ಎಲ್ಲದರಿಂದಲೂ ವಂಚಿತವಾದ ಒಂದು ಸಮುದಾಯವಿದೆ. ಆ ಸಮುದಾಯಕ್ಕೆ ಅಕ್ಷರ ಬಂದ ಕೂಡಲೆ ಅವರೊಳಗಿನ ಸಿಟ್ಟು ಧಗಧಗಿಸಿ ಅಗ್ನಿಕುಂಡದಲ್ಲಿ ಉರಿಯಲು ಪ್ರಾರಂಭಿಸುತ್ತದೆ. ತನ್ನ ವಿರುದ್ಧವಾದುದೆಲ್ಲವನ್ನೂ ನಾಶಪಡಿಸುವ ಕ್ರೌರ್ಯ ಅವರಲ್ಲಿ ಮನೆಮಾಡಿದೆ. ಕವನದ ಇಡೀ ರಾಜಕೀಯ ತತ್ವವೇ 'ನಾನು ಇಲ್ಲದವರ ಪರ' ಎಂಬುದನ್ನು ತನ್ನ ಗರ್ಭದಲ್ಲಿ ಇರಿಸಿಕೊಂಡಿದೆ. ಕೈಚೆಲ್ಲಿ ಕುಳಿತವರ ಕೈಯ ಕುಡುಗೋಲು, ದಲಿತ ಕಾವ್ಯ ಮತ್ತು ಹೋರಾಟ.

ಅಗ್ನಿಕುಂಡ ಎಂಬುದು ಯಜ್ಞಯಾಗಗಳ ಸಂದರ್ಭದಲ್ಲಿ ಬಳಕೆಯಾಗುವ ಪದ. ಅಲ್ಲಿ ಕಾಣದ ದೇವರುಗಳನ್ನು ಒಲಿಸಿಕೊಳ್ಳುವ ಉದ್ದೇಶ ಹೊಂದಿದ್ದರೆ, ಇಲ್ಲಿ ಉರಿಯಬೇಕಿರುವುದು ಅಕ್ಷರಗಳ ಅಗ್ನಿಕುಂಡ. ಅಗ್ನಿಯ ಕೆಲಸ ನಾಶಗೊಳಿಸುವುದು. ಈ ನಾಶದ ಕೆಲಸ ಅಕ್ಷರಗಳಿಂದ ಆಗಬೇಕಿದೆ. ಅದೂ ನಿರಂತರವಾಗಿ ನಡೆಯಬೇಕಿದೆ. ದಲಿತರ ಮೇಲೆ ಹೇರಿರುವ ನಂಬಿಕೆಗಳು, ಮೌಢ್ಯಗಳು, ಮೇಲಿನವರ ತುಳಿತಗಳು ಮುಂತಾದವುಗಳೆಲ್ಲವೂ ನಾಶ ಹೊಂದುವವರೆಗೂ ಈ ಅಗ್ನಿಕುಂಡ ಹಾಗೇ ಉರಿಯುತ್ತಿರಬೇಕು.

ಅಕ್ಷರಗಳು ಅಗ್ನಿಕುಂಡವಾಗುವುದು ಯಾವ ಮತ್ತು ಯಾರ ಆಲೋಚನೆಗಳಿಂದ ಎಂಬುದೂ ಮುಖ್ಯ. ಏಕೆಂದರೆ ಅಕ್ಷರಗಳು ಆಳುವ ವರ್ಗದ ಆಲೋಚನೆಗಳನ್ನು ಹೊತ್ತು ಸಾಗಿಸುವ ವಾಹಕಗಳಾಗಿ ಪರಿಣಮಿಸಿದರೆ ಅಲ್ಲಿ ಪ್ರತಿರೋಧವಾಗಲೀ, ಪ್ರತಿಭಟನೆಯಾಗಲೀ ಹುಟ್ಟಲು ಸಾಧ್ಯವಿಲ್ಲ. ಆಗ ಅಕ್ಷರಗಳು ಅಗ್ನಿಕುಂಡವಾಗುವ ಬದಲು ಆಳುವ ವರ್ಗದ ಹಿತಾಸಕ್ತಿ ಕಾಪಾಡುವ ಸರಕುಗಳಾಗುತ್ತವೆ. ಆದರೆ ಅದೇ ಅಕ್ಷರಗಳು ದುಡಿಯುವ ವರ್ಗದ ಆಲೋಚನೆಗಳನ್ನು ಹುಟ್ಟುಹಾಕುವಂತಿದ್ದರೆ ಅಗ್ನಿಕುಂಡದಲ್ಲಿ ಉರಿಯುವ ಬೆಂಕಿಯಾಗಿ, ತನ್ನದಲ್ಲದನ್ನು ನಾಶಗೊಳಿಸುವ ಶಕ್ತಿಯಾಗಿ, ಮನುಷ್ಯಪರ ಆಲೋಚನೆಗಳನ್ನು ಬಿತ್ತಲು ಸಾಧ್ಯ.

> ದಣಿಯ ಹಟ್ಯಾಗ ದುಡಿದುಡಿದು ನಾವು
> ಬೇಲಿಯಾಗಿ ನಿಂತವರು
> ದಣಿಯ ದರ್ಪದಲಿ ಬೆಂದೆವು ನಾವು
> ಅವರ ಗರ್ಜನೆಯಲಿ ಮೂಕರು[೨]

ಇಲ್ಲಿ ಒಂದು ವ್ಯವಸ್ಥೆ ಇದೆ, ಸಾಮಾಜಿಕ ಪರಿಸ್ಥಿತಿ ಇದೆ. ಅದು ಉಳ್ಳವರು ಮತ್ತು ಇಲ್ಲದವರಿಂದ ಆವೃತವಾಗಿದೆ. ಇದು ಆರ್ಥಿಕ ಅಸಮಾನತೆಯಿಂದ ಕೂಡಿರುವ ಸಮಾಜ. ಎಲ್ಲಿ ಆರ್ಥಿಕ ಶ್ರೇಣೀಕರಣವಿರುತ್ತದೋ ಅಲ್ಲಿ ಶೋಷಣೆ, ದಬ್ಬಾಳಿಕೆ, ದೌರ್ಜನ್ಯ ನಿತ್ಯ ನಿರಂತರ. ಇಲ್ಲಿ ದಣಿಯೂ ಇದ್ದಾನೆ, ಅವನ ಕೈಕೆಳಗೆ ಕೂಲಿ ಮಾಡುವ ಕೂಲಿಕಾರರೂ ಇದ್ದಾರೆ. ಆದರೆ ಸಂಪತ್ತು ಮಾತ್ರ ನಿರಂತರವಾಗಿ ದಣಿಯ ಪಾಲಾಗುತ್ತಿದೆ. ಆ ಸಂಪತ್ತಿನ ಉತ್ಪಾದಕ ವರ್ಗ ಮಾತ್ರ ನಿರಂತರವಾಗಿ ಹಸಿವಿನಿಂದ ಸಾಯುತ್ತಲೆ ಇದೆ. ಇಂತಹ ಅಸಮಾನ ಅಂಶಗಳೇ ದಲಿತ ಕಾವ್ಯದ ಪ್ರಜ್ಞೆಯ ಕೇಂದ್ರ ಪ್ರಜ್ಞೆಗಳಾದವು. ಎಲ್ಲಿ ಪ್ರಜ್ಞೆ ಸ್ಫೋಟಗೊಳ್ಳುತ್ತದೋ ಅಲ್ಲಿ ಬದಲಾವಣೆ ಸಾಧ್ಯ. ಈ ಪ್ರಜ್ಞಾಸ್ಫೋಟದ ತಂತ್ರಗಾರಿಕೆಯನ್ನು ಮೈಗೂಡಿಸಿಕೊಂಡು ಬೆಳೆದಿದ್ದೇ ದಲಿತ ಕಾವ್ಯ ಕೈಗೊಂಡ ಬಹುಮುಖ್ಯ ರಾಜಕೀಯ ಚಿಂತನೆ. ಈ ಚಿಂತನೆ ಹಲವು ಮುಖಗಳಲ್ಲಿ ಮುಂದುವರೆಯಿತು.

ಜಗತ್ತಿನಲ್ಲಿ ದುಡಿಯುವ ವರ್ಗದ ಪರಿಸ್ಥಿತಿ ಹೇಗಿದೆ ಎಂದರೆ ಕೇವಲ ದುಡಿಯುವುದಷ್ಟೇ ಅಲ್ಲ. ಆ ದುಡಿದ ದುಡಿಮೆಯ ಪ್ರತಿಫಲ ಒಡೆಯನ ಕೈಸೇರಿ, ಒಡಲು ಸೇರುವವರೆಗೂ ಕಾವಲು ಕಾಯುವವರು ಇವರೇ. ಶ್ರೇಣೀಕರಣದ ಸಾಮಾಜಿಕ ವ್ಯವಸ್ಥೆಯಲ್ಲಿ ಹಿಂದೂ ಧರ್ಮದ ಹೆಸರಿನಲ್ಲಿ ತಾರತಮ್ಯಗಳನ್ನು ಹುಟ್ಟುಹಾಕಿದ ಬ್ರಾಹ್ಮಣ ವಾದವನ್ನು ನಿರಂತರವಾಗಿ ಕಾಪಾಡಿಕೊಂಡು ಬರುತ್ತಿರುವ ಇಲ್ಲಿನ ಭೂಮಾಲೀಕ ಮತ್ತು ಬಂಡವಾಳಶಾಹಿ ವ್ಯವಸ್ಥೆ ಹೇಗೆ ಶೋಷಣೆಗೆ ಬೇಲಿಯಾಗಿ ನಿಂತು ಕಾವಲು ಕಾಯುತ್ತಿರುವುದೋ ಹಾಗೆ ದಲಿತರು ಇವರ ಮನೆಯ ಕಾವಲು ಕಾಯುತ್ತಿದ್ದಾರೆ. ಈ ಕಾವಲು ಶಾಶ್ವತ ಕಾವಲಾಗುವ ಮೊದಲು ಎಚ್ಚೆತ್ತುಕೊಳ್ಳಬೇಕಿದೆ. ಅದನ್ನೇ ಮೇಲಿನ ಕವಿತೆಯ ಸಾಲುಗಳು ಪ್ರಸ್ತುತಪಡಿಸುತ್ತಿವೆ.

ಯಾವುದೇ ಒಂದು ಕಾವ್ಯ ಪಂಥ ಅದು ಇದ್ದಕ್ಕಿದ್ದಂತೆ ಉದ್ಭವವಾಗುವುದಿಲ್ಲ. ಅದರ ಹಿಂದೆ ಸಾಮಾಜಿಕ, ರಾಜಕೀಯ, ಮತ್ತು ಧಾರ್ಮಿಕ ತಾತ್ವಿಕತೆ ಇದ್ದೇ ಇರುತ್ತದೆ. ೭೦ರ ದಶಕದಲ್ಲಿ ಬಂದ ದಲಿತ ಕಾವ್ಯವೂ ಕೂಡ ಇಂತಹದ್ದೊಂದು ರಾಜಕೀಯ ತಾತ್ವಿಕತೆಯಡಿಯಲ್ಲೇ ಜನ್ಮತಾಳಿತು. ಇದಕ್ಕೆ ಬಸವಲಿಂಗಪ್ಪನವರ 'ಬೂಸಾ ಪ್ರಕರಣ' ಮುನ್ನುಡಿ ಬರೆದರೆ, ದಲಿತ ಸಂಘರ್ಷ ಸಮಿತಿ ರಾಜ್ಯಾದ್ಯಂತ ಕೈಗೊಂಡ ಅಸಮಾನತೆ ದೌರ್ಜನ್ಯದ ವಿರುದ್ಧ ಹೋರಾಟಗಳು ಸ್ಫೂರ್ತಿ ಒದಗಿಸಿದವು. ಬಸವಲಿಂಗಪ್ಪನವರು ಕನ್ನಡ ಸಾಹಿತ್ಯವನ್ನು ಬೂಸಾ ಎಂದು ಕರೆಯುವುದರ ಹಿಂದೆ ಒಂದು ದೊಡ್ಡ ರಾಜಕೀಯ ಉದ್ದೇಶವೇ ಅಡಗಿತ್ತು. ಈ ಘೋಷಣೆ ಕರ್ನಾಟಕದಲ್ಲಿ ಉಂಟುಮಾಡಿದಷ್ಟು ತಲ್ಲಣವನ್ನು ಬೇರೆ ಯಾವ ಚಿಂತನೆಗಳಿಂದಲೂ ಊಹಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅಂಬೇಡ್ಕರ್ ಚಿಂತನೆಗಳಿಂದ ಪ್ರಭಾವಿತರಾದ ಅಕ್ಷರಸ್ಥ ದಲಿತರು ಅಸಮಾನತೆಗಳ ವಿರುದ್ಧ ಕೂಗೆಬ್ಬಿಸಲು ದಲಿತ ಸಂಘರ್ಷ ಸಮಿತಿ ಕಟ್ಟಿಕೊಂಡು ರಾಜ್ಯದ ಮೂಲೆಮೂಲೆಯಲ್ಲಿ ತಮಗಾದ ಶೋಷಣೆ, ಅಪಮಾನ ಕುರಿತು ಧಿಕ್ಕರಿಸಲು, ಪ್ರತಿಭಟಿಸಲು ಪ್ರಾರಂಭಿಸಿದರು. ಇದರ ಜೀವಕಣವಾಗಿ ಬೆಳೆದ ದಲಿತ ಕಾವ್ಯ ಈ ಹೋರಾಟದ ಹಾದಿಯಲ್ಲಿ ಮುಂಚೂಣಿಗೆ ಬಂದು ದಲಿತರ ರಾಜಕೀಯ ಹಿತಾಸಕ್ತಿಯನ್ನು ಜನತೆಯ ಮನಮನಗಳಲ್ಲಿ ಬಿತ್ತಲು ಪ್ರಾರಂಭಿಸಿತು.

ಬರುತಿಹೆವು ನಾವು ಬರುತಿಹೆವು
ಯುಗಯುಗಗಳಿಂದ ನೀವ್ ತುಳಿದ
ಕೊರಳ ದನಿಗಳು ನಾವುಗಳು
ಅಸಮಾನತೆಯನು ಸುಟ್ಟುಬಿಡಲು
ಭುಗಿಲೆದ್ದ ಬೆಂಕಿಯ ಜ್ವಾಲೆಗಳು[೩]

ಯುಗಯುಗಗಳಿಂದ ಸಾಗಿ ಬಂದಿರುವ ಮತ್ತು ಇಂದಿಗೂ ಮುಂದುವರೆಯುತ್ತಿರುವ ಅಸಮಾನತೆಯನ್ನು ಸುಟ್ಟುಬಿಡಲು ಬೆಂಕಿಯ ಜ್ವಾಲೆಯಾಗಿ ಬರುವ ಆಶಯವನ್ನು ವ್ಯಕ್ತಪಡಿಸಿರುವ ಈ ಕವನದ ಸಾಲುಗಳು ಕೊನೆಗೊಳ್ಳುವುದು ಹೀಗೆ..

ಸಿರಿವಂತರ ಸೊಕ್ಕಿನ ಭದ್ರಕೋಟೆಗೆ
ಬರಸಿಡಿಲಾಗಿ ಬಂದೆವು ನಾವು
ಸುಲಿಗೆಕೋರರ ಒಡಲ ಸೀಳಲು

ಸುಲಿಗೆಕೋರರ ಒಡಲು ಸೀಳಿದ ಮೇಲೆ ಮುಂದೇನು ಎಂಬ ಪ್ರಶ್ನೆ ಗಂಭೀರವಾಗಿ ಕಾಡುತ್ತದೆ. ಸುಲಿಗೆಕೋರರ ಆಸ್ತಿಯನ್ನು ಹಂಚಿಕೊಳ್ಳುವುದೇ, ಸರ್ಕಾರಕ್ಕೆ ಒಪ್ಪಿಸುವುದೇ, ಇಲ್ಲದವರಿಗೆ ಬಿಟ್ಟುಕೊಡುವುದೇ ಇತ್ಯಾದಿ, ಇತ್ಯಾದಿ. ಇದನ್ನು ನಿವಾರಿಸಿಕೊಳ್ಳಬೇಕಾದರೆ

ಮೊದಲು ಅಸಮಾನತೆಯ ನೆಲೆ ಯಾವುದು ಎಂಬುದನ್ನು ತಿಳಿದುಕೊಳ್ಳಬೇಕು. ಅದು ರಾಜಕೀಯದ್ದೋ, ಸಾಮಾಜಿಕವಾದದ್ದೋ, ಆರ್ಥಿಕವಾದದ್ದೋ, ಸಾಂಸ್ಕೃತಿಕವಾದದ್ದೋ ಈ ಪ್ರಶ್ನೆಗೆ ಮೊದಲು ಉತ್ತರ ಕಂಡುಕೊಳ್ಳಬೇಕು ಆನಂತರ ಇದರ ವಿರುದ್ಧ ನಿಲ್ಲಲು ಸಾಧ್ಯ. ಇವೆಕ್ಕೆಲ್ಲಾ ಒಂದೇ ಕಾರಣ ಎಂದು ಸೀಮಿತಗೊಳಿಸಲು ಬರುವುದಿಲ್ಲ. ಏಕೆಂದರೆ ಇವುಗಳಿಂದ ಉಂಟಾಗುವ ಶೋಷಣಾ ತೀವ್ರತೆಗಳು ಬೇರೆಬೇರೆ. ಪರಿಹಾರವೂ ಬೇರೆಬೇರೆ. ಆದ್ದರಿಂದ ಅಸಮಾನತೆ ವಿರುದ್ಧ ಭುಗಿಲೆದ್ದ ಬೆಂಕಿಯ ಜ್ವಾಲೆಯಾಗಿ ಯಾವುದನ್ನು ಮೊದಲು ಸುಡುವುದು, ಸಿರಿವಂತರನ್ನು ಸುಟ್ಟ ತಕ್ಷಣ ಎಲ್ಲವೂ ಸರಿಹೋಗಬಲ್ಲುದೇ ಈ ದ್ವಂದ್ವತೆ ಇಲ್ಲಿ ಕಾಡುತ್ತದೆ.

ಭಾರತೀಯ ಸಮಾಜವೆಂಬುದೇ ಅಸಮಾನತೆಗಳ ಗೂಡು. ಇಲ್ಲಿ ದಲಿತರ ಬದುಕು ನಾಯಿಪಾಡು ಎಲ್ಲವನ್ನು ಮಾಡಿ ಏನೂ ಪಡೆಯಲಾಗದ ಸ್ಥಿತಿ. ನಿತ್ಯ ದೌರ್ಜನ್ಯ, ಅಪಮಾನ, ಹಿಂಸೆ, ಕ್ರೌರ್ಯ, ನಿಂದನೆ, ತಿರಸ್ಕಾರ, ಅತ್ಯಾಚಾರ, ಶೋಷಣೆ ಇವುಗಳಿಗೆ ಒಳಗಾಗುತ್ತಲೆ ಸಾವಿರಾರು ವರ್ಷಗಳಿಂದ ಜೀತ ಮಾಡುತ್ತಾ, ತಮ್ಮ ಹಣೆಬರಹ ಇಷ್ಟೇ ಎಂದು ನಂಬಿ ಕುಂತವರು. ಪ್ರತಿಭಟಿಸುವುದಿರಲಿ, ಕನಿಷ್ಠ ಕೂಲಿ ಕೇಳಿದರೂ ಕೊಲೆಯಾಗುವ ಪರಿಸ್ಥಿತಿ ಇವರದು. ಇಂತಹ ವ್ಯವಸ್ಥೆಯ ವಿರುದ್ಧ ನಿಂತು ಸುಡುವ ಬೆಂಕಿಯ ಜ್ವಾಲೆಯಾಗುವುದು ಸುಲಭದ ಮಾತಲ್ಲ. ಪಂಜರದೊಳಗಿನ ಪಾರಿವಾಳಗಳೆಲ್ಲಾ ಒಗ್ಗಟ್ಟಾಗಿ ಹಾರಿದರೆ ಆಗುವ ಕ್ರಿಯೆಯೇ ದಲಿತ ರಾಜಕೀಯದ ತಾತ್ವಿಕ ನೆಲೆ.

ಯಾವುದೇ ಹೋರಾಟಕ್ಕೆ ಒಂದು ದೃಢತೆ ಬೇಕು, ತತ್ವಬೇಕು, ಸಾಧಿಸುತ್ತೇವೆಂಬ ಛಲಬೇಕು. ಹೋರಾಟದ ಮನೋಭಾವ ಬೇಕು. ಏಕೆಂದರೆ ದಲಿತರನ್ನು ಬಂಧಿಸಿರುವ ಸರಳುಗಳು ಏಕಮುಖವಾದವುಗಳಲ್ಲ. ಅವು ಬಹುಮುಖೀ ನೆಲೆಗಳಿಂದ ಆವರಿಸಲ್ಪಟ್ಟಿವೆ. ಒಂದನ್ನು ಮುರಿದು ಮುನ್ನುಗ್ಗಿದರೆ ಮತ್ತೊಂದು ಎದುರಾಗುತ್ತದೆ. ಉದಾಹರಣೆಗೆ ಜಾತಿ ಮುರಿದು ಮುನ್ನುಗ್ಗಿದರೆ, ವರ್ಗ ಅದರ ಮಗ್ಗುಲಲ್ಲೇ ಕತ್ತಿ ಹಿಡಿದು ನಿಂತಿರುತ್ತದೆ. ಯಾರ ತಲೆಯಾದರೂ ಒಂದೇ ಅದಕ್ಕೆ. ಆದರೂ ದಲಿತರ ರಕ್ತ ಮಾತ್ರ ಬಲುರುಚಿ. ಇಂತಹ ವ್ಯವಸ್ಥೆಯ ವಿರುದ್ಧ ಈಜಿ ಜಯಿಸುವುದು ಒಂದು ಸಮಷ್ಟಿ ಪ್ರಜ್ಞೆಯಿಂದ ಮಾತ್ರ ಸಾಧ್ಯ. ಇಂತಹ ಸಮಷ್ಠಿ ಪ್ರಜ್ಞೆಯ ಅರಿವು ಬಂದಿದ್ದೇ ೭೦ರ ದಶಕದಲ್ಲಿ. ಅಂದು ಸಂಘಟಿತಗೊಂಡ ದಲಿತ ಸಂಘರ್ಷ ಸಮಿತಿ, ಆ ಸಮಿತಿಯೊಳಗಿದ್ದ ಮತ್ತು ಹೊರಗಿದ್ದ ಅನೇಕ ಚಿಂತಕರಿಂದ, ಕವಿಗಳಿಂದ, ಹೋರಾಟಗಾರರಿಂದ ಹಾಗೂ ವಿಚಾರವಾದಿಗಳಿಂದ ಹೊಸ ಪ್ರಜ್ಞೆಯ ಅರಿವು ದಲಿತರಲ್ಲಿ ಉಂಟಾಯಿತು.

ದಲಿತರ ಮೂಲಭೂತ ಸಮಸ್ಯೆ ಇರುವುದೇ ಹಸಿವಿನೊಂದಿಗೆ. ಈ ಹಸಿವು ಶತಮಾನಗಳುದ್ದಕ್ಕೂ ತಲೆತಗ್ಗಿಸಿ ನಿಲ್ಲುವಂತೆ ಮಾಡಿದೆ. ಇದರ ಜೊತೆಗೆ ಜಾತಿ ಧರ್ಮದ ಹೆಸರಿನಲ್ಲಾಗುವ ದೌರ್ಜನ್ಯ ಅವಮಾನಗಳೂ ಕೂಡ ದಲಿತರ ಬದುಕನ್ನು ಹೀನಾಯ

ಗೊಳಿಸಿವೆ. ಇಂತಹ ಸಮಸ್ಯೆಗೆ ಈ ನೆಲದಿಂದಲೇ ಬಂದ ಅಂಬೇಡ್ಕರ್ ಕಾನೂನು ಮತ್ತು ಸಂವಿಧಾನಾತ್ಮಕ ವ್ಯಾಪ್ತಿಯಲ್ಲಿ ಅನೇಕ ಕಾಯ್ದೆಗಳನ್ನು ತಂದು ಅವರ ಬದುಕನ್ನು ಹಸನುಗೊಳಿಸಲು ಪ್ರಯತ್ನಿಸಿದರು. ಅವರ ಇಡೀ ಜೀವಮಾನದ ಹೋರಾಟವೇ ದಲಿತರನ್ನು ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಮೇಲ್ಪದರಕ್ಕೆ ಕೊಂಡೊಯ್ದು ಸಮಾನತೆಯ ಸಮಾಜ ಕಟ್ಟುವುದೇ ಆಗಿತ್ತು. ಆದರೆ ಕಾನೂನು ಮತ್ತು ಸಂವಿಧಾನಗಳನ್ನು ಜಾರಿಗೆ ತರುವಂತಹ ಅವಕಾಶಗಳನ್ನು ಅಸಮಾನತೆಯ ವ್ಯವಸ್ಥೆ ದಲಿತರಿಗೆ ಬಿಡಲಿಲ್ಲ.

ಅಂಬೇಡ್ಕರ್ ಹಾಕಿಕೊಟ್ಟ ತಳಹದಿಯ ಮೇಲೆ ನಿಂತ ದಲಿತ ಸಂಘರ್ಷ ಸಮಿತಿ ಭಾರತದಲ್ಲಿ ನಡೆಯುತ್ತಿದ್ದ ಅನೇಕ ದಲಿತ ಹೋರಾಟಗಳಿಂದ ಪ್ರೇರಣೆಗೊಂಡು ದಲಿತರ ಹಿತಾಸಕ್ತಿ ಕಾಪಾಡುವ ನಿಟ್ಟಿನಲ್ಲಿ ಹೆಜ್ಜೆಹಾಕಿತು. ಈ ಹೆಜ್ಜೆಗೆ ಪ್ರೇರಣೆಯಾದದ್ದು ದಲಿತ ಕಾವ್ಯ. ಹಾಗಾಗಿ ಅಂಬೇಡ್ಕರ್ ಚಿಂತನೆ ದಲಿತರಿಂದ ದೂರವಾಗಲು ಸಾಧ್ಯವೇ ಇಲ್ಲ. ಸ್ವಾತಂತ್ರ್ಯ ಬಂದು ೬೦ ವರ್ಷಗಳಾದರೂ ದಲಿತರ ಬದುಕು ಇನ್ನೂ ಹತ್ತು ಹಲವು ಶೋಷಣೆಗಳೊಂದಿಗೆ ಮುಂದುವರೆಯುತ್ತಲೇ ಇದೆ. ಹಿಂದಿನ ಶೋಷಣೆಗಳು ಹೊಸಹೊಸ ರೂಪಗಳೊಂದಿಗೆ ಮತ್ತೊಮ್ಮೆ ದಲಿತರ ಬದುಕನ್ನು ಕಂಗಾಲಾಗಿಸುತ್ತಿವೆ. ಬದುಕಲು ಹೋರಾಟವೇ ಅನಿವಾರ್ಯವೆಂಬ ಪರೋಕ್ಷ ಸತ್ಯವನ್ನು ಕಾಣಿಸುತ್ತಿವೆ. ಇಂತಹ ಸ್ಥಿತಿಯನ್ನು ಒಂದು ದಲಿತ ಕಾವ್ಯ ಹೀಗೆ ಕಟ್ಟಿಕೊಟ್ಟಿದೆ.

ತುಂಬಿತೆ ನಿಂಗಿವತ್ತಿಗೆ
ವರುಷ ನಲವತ್ತು
ಹೇಳಬೇಕೆಂದಿರುವೆ
ತಿಳಿಯದ ಗುಟ್ಟೊಂದ

ತಾಯಿ ಭಾರತಿಯೆ
ಎದೆಯಾಳದಲ್ಲಿ ಧಗ–
ಧಗಿಸುವ ಬೆಂಕಿ ಇಟ್ಟವರಾರು?
ದುಡಿವ ಕೈಗಳಲಿ
ಬೂಟು ಮೆಟ್ಟುಗಳ ಹಿಡಿಸಿದವರಾರು?

ಮನಮಂದಿರಗಳಲಿ
ಪಾಪಾಸುಕಳ್ಳಿ ಬೆಳೆದವರಾರು?
ಅನ್ನ ಉಣ್ಣುವ ಬಾಯಿಗೆ
ಅನ್ಯರ ಮಲಯಿಕ್ಕಿದವರಾರು?[೪]

ಇಂಡಿಯಾವನ್ನು, ಮಹಿಳೆಯನ್ನು ಅತ್ಯಂತ ಗೌರವದಿಂದ ಕಾಣುವ ದೇಶ ಎಂಬುದಾಗಿ ಹೊಗಳುವ ಹೊಗಳುಭಟ್ಟರಿಗೇನೂ ಈ ದೇಶದಲ್ಲಿ ಕಡಿಮೆಯಿಲ್ಲ. ಇಂತಹ ದೇಶದಲ್ಲಿ ಮಹಿಳೆಯರ ಅತ್ಯಾಚಾರ ನಿತ್ಯ ಸಹಜವೆಂಬಂತೆ ನಡೆಯುತ್ತಲೇ ಇದೆ. ದುಡಿಯುವ ರೈತರ, ಕೂಲಿಕಾರ್ಮಿಕರ ಶೋಷಣೆ ನಿರಂತರವಾಗಿ ನಡೆಯುತ್ತಲೇ ಇದೆ. ಇವುಗಳ ನಡುವೆ ಜಾತಿ, ಕೋಮು, ವರ್ಗ ಮುಂತಾದವುಗಳಿಂದಲೇ ಅಧಿಕಾರ ಚುಕ್ಕಾಣಿ ಹಿಡಿದ ರಾಜಕೀಯ ಪಕ್ಷಗಳು ತಮ್ಮ ಆಳ್ವಿಕೆ ಸುಗಮಗೊಳಿಸಲು ಇವುಗಳನ್ನು ಹಾಗೇ ಉಳಿಸಿಕೊಳ್ಳುವ ಹುನ್ನಾರ ನಡೆಸುತ್ತಿವೆ. ಅಧಿಕಾರದ ದರ್ಪದಿಂದ ಹಲವು ಹಗರಣಗಳನ್ನು ತಮ್ಮ ಆಜನ್ಮ ಸಿದ್ಧ ಹಕ್ಕು ಎಂಬಂತೆ ಆಳುವ ವರ್ಗ ನಡೆಸುತ್ತಿದೆ. ಬಹಿಷ್ಕಾರದಂತಹ ಘಟನೆಗಳು ಈ ಶತಮಾನದಲ್ಲೂ ಮುಂದುವರೆದಿವೆ. ಈ ಪರಿಸ್ಥಿತಿಯಲ್ಲಿ ಇದನ್ನೆಲ್ಲಾ ಮನಗಂಡ ೭೦ರ ದಶಕದ ದಲಿತ ಕಾವ್ಯ ತನ್ನೊಳಗೆ ಈ ಅಸಹಾಯಕ ಜನರ ಆಶೋತ್ತರಗಳಿಗನುಗುಣವಾಗಿ ಯಾವ ರೀತಿಯ ರಾಜಕೀಯ ತತ್ವ ಪ್ರಣಾಳಿಕೆಯನ್ನು ತನ್ನೊಡಲಿಂದ ಚಿಮ್ಮಿಸಿದೆ, ಆ ಮೂಲಕ ಕ್ರಿಯೆಗೆ ಹೇಗೆ ಅದು ಸ್ಪಂದಿಸಿದೆ, ಅದರ ಆಶಯದ ಪ್ರಧಾನ ನೆಲೆಗಳೇನು? ಇದರಿಂದ ಸಮಾಜದಲ್ಲಿ ಉಂಟಾಗುವ ಬದಲಾವಣೆಗಳೇನು? ಎಂಬುದು ಬಹಳ ಮುಖ್ಯ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದ ಚರ್ಚೆ ಸಾಗಿದೆ. ಎರಡು ಮುಖ್ಯ ನೆಲೆಗಳಲ್ಲಿ ಇವುಗಳನ್ನು ಚರ್ಚಿಸಲಾಗುವುದು.

೭.೧ ದಲಿತ ಕಾವ್ಯ : ಸ್ಥಾಪಿತ ಮೌಲ್ಯಗಳಿಗೆ ಅಸಹನೆ ಮತ್ತು ಪ್ರತಿರೋಧ

> ಬೀದಿ ಕೊನೆಯಲ್ಲಿ ಕೆರೆ
> ನೀರ ಮುಟ್ಬ್ಯಾಡೆಂದರು
> ನಿಂತು ನೋಡಿದೆ
> ನೀರೇ ಮುಟ್ಟಾಗಿರಬೇಕೆಂದು[೫]

ವ್ಯವಸ್ಥೆಯಲ್ಲಿ ಅನೇಕ ಮೌಲ್ಯಗಳು ಸ್ಥಾಪನೆಗೊಂಡಿರುತ್ತವೆ ಮತ್ತು ಸ್ಥಾಪನೆಗೊಳ್ಳುವಂತೆ ಮಾಡಲ್ಪಟ್ಟಿರುತ್ತವೆ. ಆದರೆ ಈ ಮೌಲ್ಯಗಳು ಯಾರ ಹಿತಾಸಕ್ತಿ ಕಾಪಾಡಲು ಹುಟ್ಟಿವೆ ಎಂಬುದೂ ಮುಖ್ಯ. ಮೇಲಿನ ಕವನದ ಸಾಲುಗಳಲ್ಲಿ ಒಂದು ವರ್ಗದ ಹಿತಾಸಕ್ತಿ ಮೈಲಿಗೆಯ ನೆಪವೊಡ್ಡಿ ಕೆರೆಯ ನೀರನ್ನು ಮುಟ್ಟದಂತೆ ಕಾಪಾಡಿಕೊಳ್ಳುತ್ತಾ ಬಂದಿದೆ. ಆ ವರ್ಗ ತನ್ನ ಹಿತಾಸಕ್ತಿಯನ್ನು ಮುಟ್ಟಿಸಿಕೊಳ್ಳದವನ ಮೌಲ್ಯವೆಂಬಂತೆ ಬಿಂಬಿಸುತ್ತಾ ಸಾಗಿದೆ. ಇದರೊಂದಿಗಿನ ಗುದ್ದಾಟ ಮುಟ್ಟಿಸಿಕೊಳ್ಳದವರಿಂದಲೇ ಆಗಬೇಕು. ಈ ಗುದ್ದಾಟದ ಪ್ರತಿಫಲವೇ ಮೇಲಿನ ಕಾವ್ಯದ ಸಾಲುಗಳು.

ಇಲ್ಲೊಂದು ಪ್ರತಿರೋಧವಿದೆ. ಅದು ವ್ಯವಸ್ಥೆಗೆ ವಿರುದ್ಧವಾಗಿ ನಿಂತ ಪ್ರತಿರೋಧ. ಇಲ್ಲಿ ನೀರನ್ನು ಮುಟ್ಟಲು ಹೋಗಿರುವ ಕಾರಣ ಮುಟ್ಬ್ಯಾಡ ಎಂದಿದ್ದಾರೆ. ಅಂದರೆ ಕೆರೆಯ ನೀರಿನ ಅವಶ್ಯಕತೆ ಇದೆ ಎಂದಾಯಿತು. ಮುಟ್ಟಲಿಕ್ಕೆ ಅವಕಾಶ ಕೊಡದ ಈ ನೀರನ್ನು

ತಾನು ಕುಡಿಯಲು ಹೊಸ ದಾರಿಯನ್ನು ಕಂಡುಕೊಳ್ಳಬೇಕಾಗಿದೆ. ಇದು ಒಂದು ದಿನದ ಸಮಸ್ಯೆಯಲ್ಲ, ನಿತ್ಯದ ಸಮಸ್ಯೆ ಇದನ್ನು ಶಾಶ್ವತವಾಗಿ ಪರಿಹರಿಸಿಕೊಳ್ಳಬೇಕಾಗಿರುವುದು ಆ ಸಮಸ್ಯೆಯೊಳಗಡೆ ಬದುಕಿರುವ ಜನತೆಯದ್ದು. ಈ ಆಲೋಚನೆಯನ್ನು ಬಿತ್ತುವುದಕ್ಕೆ ಮೇಲಿನ ಕಾವ್ಯ ಮುಂದಾಗಿದೆ. ಮೇಲಿನ ಕಾವ್ಯದ ದಿಕ್ಕನ್ನು ಬೇರೊಂದು ನೆಲೆಯಲ್ಲಿ ಚಿಂತಿಸಿದರೆ ಅದು ಕೇವಲ ಕೆರೆಯ ನೀರಿನ ಸಮಸ್ಯೆಗಷ್ಟೇ ಸೀಮಿತಗೊಳ್ಳುವುದಿಲ್ಲ. ಬದಲಾಗಿ ಸಾಂಪ್ರದಾಯಿಕ ವ್ಯವಸ್ಥೆಯ ಎಲ್ಲ ವಲಯಗಳಲ್ಲಿ ದಲಿತರು ಕಂಡುಕೊಳ್ಳುವ ತಮ್ಮದೇ ಆದ ಪರ್ಯಾಯ ಆಲೋಚನೆಯಂತೆ ಭಾಸವಾಗುತ್ತದೆ.

"ಕಾವ್ಯದಲ್ಲಿ ಎರಡು ಮಾರ್ಗಗಳು ಸ್ಪಷ್ಟವಾಗಿವೆ. ಒಂದು ವ್ಯವಸ್ಥೆಯ ಪರ, ಮತ್ತೊಂದು ವ್ಯವಸ್ಥೆಯ ವಿರುದ್ಧ. ವ್ಯವಸ್ಥೆಯ ಪರ ಇರುವ ಲೇಖನಿಗಳು ಯಾವ ಮಾರ್ಗದಲ್ಲಿಯಾದರೂ ಆಗಲಿ ಎಲ್ಲವನ್ನು ತಮ್ಮದನ್ನಾಗಿಸಿಕೊಂಡು ಕಾವ್ಯವನ್ನು ಆನಂದಕ್ಕಾಗಿ, ತೀಟೆಗಾಗಿ ಬಳಸುವುದು ಒಂದು ಕಡೆಯಾದರೆ, ಬೆವರು ಬಸಿದು ಬರಿಗೈಯಾದ ಬಡವರ ಸುಡುವ ಒಡಲ ದನಿಯಾಗುವುದು ವ್ಯವಸ್ಥೆಯ ವಿರುದ್ಧದ ಲೇಖನಿಗಳ ಗುರಿಯಾಗಿದೆ. ವ್ಯವಸ್ಥೆಯ ಪರ ಇರುವ ಲೇಖನಿಗಳು ಪುಷ್ಪಸ್ವರಗಳಾದರೆ, ವ್ಯವಸ್ಥೆಯ ವಿರುದ್ಧದ ಲೇಖನಿಗಳು ಖಡ್ಗವಾಗುತ್ತವೆ."[೬] ಈ ವ್ಯವಸ್ಥೆಯ ವಿರುದ್ಧದ ಲೇಖನಿಗಳು ಖಡ್ಗವಾಗುವಾಗ ಅದಕ್ಕೆ ಸಾಮಾಜಿಕ ಪ್ರಜ್ಞೆಯ ಒಟ್ಟು ಅರಿವು ಇರಬೇಕಾಗುತ್ತದೆ. ಈ ಅರಿವು ಬದಲಾವಣೆ ಬಯಸುವ ಮನಗಳಿಗೆ ಮುನ್ನುಡಿ ಬರೆಯಬಲ್ಲದು.

ನನ್ನ ಸ್ವಾಭಿಮಾನವ
ಹತ್ತಿಕ್ಕುವ ಧರ್ಮ ನನಗೆ ಬೇಡ
ನನ್ನ ಆತ್ಮಗೌರವದ ಮೇಲೆ
ಹಲ್ಲೆ ನಡೆಸುವ ಧರ್ಮ ನನಗೆ ಬೇಡ[೭]

ಇಲ್ಲಿ ಬೇಡವೆನ್ನುವ ನಿರಾಕರಣೆಯ ನೆಲೆಗಳಿವೆ. ಹಾಗೆಯೆ ಅದು ಏಕೆ ಬೇಡ? ಎಂಬ ಅಂಶಗಳನ್ನೂ ಒಳಗೊಂಡಿದೆ. ಧರ್ಮ ಮತ್ತು ಧಾರ್ಮಿಕತೆ ಮನುಷ್ಯನ ಒಳಿತಿಗಾಗಿ ಮತ್ತು ಪ್ರಗತಿಗಾಗಿ ಶ್ರಮಿಸಬೇಕು. ಆದರೆ ಅದೇ ಧರ್ಮ ಮನುಷ್ಯ ಮನುಷ್ಯರ ನಡುವೆ ಬಿರುಕುಗಳನ್ನು ಉಂಟುಮಾಡಿ ಒಬ್ಬರನ್ನು ಮತ್ತೊಬ್ಬರ ಗುಲಾಮನನ್ನಾಗಿ ಮಾಡುವ ನಿಟ್ಟಿನಲ್ಲಿ ನಿರತವಾದರೆ, ಅಂತಹ ಧರ್ಮದ ವಿರುದ್ಧ ಗುಲಾಮಗಿರಿಯ ಸಮುದಾಯವೇ ತನ್ನ ಸ್ವಾತಂತ್ರ್ಯಕ್ಕಾಗಿ ಹೋರಾಟದ ಹೆಜ್ಜೆ ಮೂಡಿಸುತ್ತದೆ. ಇಂತಹ ಧರ್ಮದ ಉಚ್ಚಾಟನೆಯೇ ತನ್ನ ಪ್ರಮುಖ ಕಾಳಜಿಯನ್ನಾಗಿಸಿಕೊಳ್ಳುತ್ತದೆ. ಈ ಉಚ್ಚಾಟನೆಯ ಜೊತೆಯಲ್ಲೇ ತನ್ನ ಅಸ್ತಿತ್ವದ ಹುಡುಕಾಟದಲ್ಲಿ ತೊಡಗಿ ತನ್ನ ಪರಂಪರೆಯ ನೆಲೆಗಳನ್ನು ತಾನೇ ಕಂಡುಕೊಳ್ಳುತ್ತದೆ. ತನ್ನ

ಪರಂಪರೆಯ ಚಹರೆ ಸಿಕ್ಕ ಕೂಡಲೇ ಅದರಲ್ಲೆ ತನ್ನತನವನ್ನು ಮೂಡಿಸಲು ಯತ್ನಿಸುತ್ತದೆ. ತನಗೆ ವಿರುದ್ಧವಾದುದೆಲ್ಲವನ್ನು ಬೇಡ ಎನ್ನುವುದರಲ್ಲೆ ಒಂದು ರಾಜಕೀಯ ಹಿತಾಸಕ್ತಿಯನ್ನು ಬೆಳೆಸುತ್ತದೆ. ಅದನ್ನು ಉಳಿಸಿ ಬೆಳೆಸಲು ನಿರಂತರವಾಗಿ ಶ್ರಮಿಸುತ್ತದೆ.

'ಹಿಂದೂ ನಾವೆಲ್ಲರೂ ಒಂದು' ಎನ್ನುತ್ತಲೇ ಅಸ್ಪೃಶ್ಯರನ್ನು ಮನೆಯಿಂದ ಹೊರನಿಲ್ಲಿಸಿದ ಹಿಂದೂ ಧರ್ಮ ಅವರ ಬದುಕನ್ನು ಪ್ರಾಣಿಗಿಂತಲೂ ಕಡೆಯಾಗಿಸಿತು. "ಹಿಂದೂ ಧರ್ಮ ಸೋದರತೆಯನ್ನು ಬೋಧಿಸುವ ಧರ್ಮವಲ್ಲ. ಐಕ್ಯವನ್ನು ಬೋಧಿಸುವ ಧರ್ಮವಲ್ಲ, ಬದಲಿಗೆ ಅದು ಭಿನ್ನತೆಯನ್ನು ವರ್ಣಾಶ್ರಮಗಳನ್ನು ಬೋಧಿಸಿ ಬೇರೆ ಬೇರೆ ವರ್ಗಪ್ರಜ್ಞೆಯನ್ನು ರೂಢಿಸುವ ಧರ್ಮ."[೮] ಇದೇ ಹಿಂದೂ ಧರ್ಮ ಅಸ್ಪೃಶ್ಯರನ್ನು ಅತ್ಯಂತ ಅಮಾನವೀಯ ನೆಲೆಗೆ ಕೊಂಡೊಯ್ದಿತು. ಅನಾದಿಕಾಲದಿಂದ ಇಂದಿನವರೆಗೂ ಅವರ ಬದುಕು ಜೀತ, ಗುಲಾಮಗಿರಿಗೆ ಮೀಸಲಾಗುವಂತೆ ಅತ್ಯಂತ ಜಾಗರೂಕವಾಗಿ ಧರ್ಮದೆಸರಲ್ಲಿ ಶಾಸನಗಳನ್ನು ರಚಿಸಲಾಗಿದೆ. ಇಂತಹ ಧರ್ಮವನ್ನು ಕಿತ್ತೊಗೆಯಬೇಕೆಂಬ ಸಂಕಲ್ಪವೇ ದಲಿತ ಕಾವ್ಯದ ಅಭಿವ್ಯಕ್ತಿಯೊಳಗಿನ ಪ್ರಧಾನ ನಿಲುವು.

ಸ್ವಾಭಿಮಾನ ಮತ್ತು ಆತ್ಮಾಭಿಮಾನದ ಪರಿಕಲ್ಪನೆ ಪ್ರಮುಖವಾಗಿ ಯಾರ ಹಿತಾಸಕ್ತಿಯಿಂದ ಹುಟ್ಟಿದವುಗಳೆಂದು ಮೊದಲು ಯೋಚಿಸಬೇಕು. ಏಕೆಂದರೆ ತಮ್ಮ ಧರ್ಮ ಯಾವುದೆಂದು ಗೊತ್ತಿಲ್ಲದ ಅಥವಾ ಗೊತ್ತಿದ್ದರೂ ಅದು ನಮ್ಮನ್ನು ಶೋಷಿಸಲಿಕ್ಕೆ ಅವಕಾಶ ಮಾಡಿಕೊಟ್ಟಿದೆ ಎಂಬುದು ಗೊತ್ತಿಲ್ಲದ ಜನತೆಯ ಒಡಲಾಳದಿಂದ ಹುಟ್ಟಿದ ಪರಿಕಲ್ಪನೆಯಂತೂ ಇದಾಗಲಿಕ್ಕೆ ಸಾಧ್ಯವಿಲ್ಲ. ಈ ಚರ್ಚೆಯನ್ನು ಮುಂದುವರಿಸುವುದಾದರೆ ಧಾರ್ಮಿಕವಾಗಿ ನಾವು ಶೋಷಣೆಗೆ ಒಳಗಾಗುತ್ತಿದ್ದೇವೆ ಎನ್ನುವ ಪರಿಜ್ಞಾನ ಅಕ್ಷರ ಕಲಿತ ದಲಿತರದು. ಇವರು ಶೋಷಣೆಗೆ ಒಳಗಾಗುತ್ತಿರುವುದು ಸಾಮಾಜಿಕ ಚೌಕಟ್ಟಿನ ಒಳಗೆ, ಆದರೆ ದುಡಿಯುವ ದಲಿತರು ಶೋಷಣೆಗೆ ಒಳಗಾಗುತ್ತಿರುವುದು ತಾವು ದುಡಿಯುವಂತಹ ಸ್ಥಳಗಳಲ್ಲಿ. ಇವರಿಗೆ ಮುಕ್ತಿ ಸಿಗಬೇಕಾಗಿರುವುದು ಊಳಿಗಮಾನ್ಯಶಾಹಿ ಮತ್ತು ಬಂಡವಾಳಶಾಹಿಗಳಿಂದ. ಆದರೆ ಕಾವ್ಯ ಹೇಳುತ್ತಿರುವುದು ಧರ್ಮದಿಂದ. ಈ ಬಗೆಯ ಧೋರಣೆಗಳೇ ದಲಿತರನ್ನೂ ದಲಿತ ಕಾವ್ಯವನ್ನೂ ಬೇರ್ಪಡಿಸುತ್ತವೆ. ಆದರೂ ಇವುಗಳೆಲ್ಲದರ ನಡುವೆ ಧರ್ಮದ ಕೊಂಡಿಗಳು ಚಾಚಿಕೊಂಡಿರುವುದನ್ನು ನಿರಾಕರಿಸಲು ಸಾಧ್ಯವಿಲ್ಲ.

ಸುಂಟರಗಾಳಿಗೆ ಸಿಕ್ಕಿ ಥರಥರಗುಡುವ
ಗುರುಮಠದ ಧ್ವಜದಲಿ ಧರ್ಮವಿಲ್ಲ
ಮೂಳೆ ತುಂಬಿದ ಹಣೆಗೆ ಸೊಟ್ಟಸೊಟ್ಟಗೆ ಬಳಿದ
ನಾಮ ವಿಭೂತಿಯಲಿ ಧರ್ಮವಿಲ್ಲ[೯]

ಮೇಲಿನ ಕಾವ್ಯದ ವಿಶ್ಲೇಷಣೆಗೂ ಈ ಕವನದ ವಿಶ್ಲೇಷಣೆಗೂ ತಾತ್ವಿಕವಾಗಿ ವ್ಯತ್ಯಾಸವಿದೆ. ಧರ್ಮದ ಪರಿಕಲ್ಪನೆಯನ್ನು ಅದು ವಿಸ್ತರಿಸಿರುವ ರೀತಿಯೇ ಬೇರೆ. ಇಲ್ಲಿನ ಕಾವ್ಯ ವಿಸ್ತರಿಸಿರುವ ರೀತಿಯೇ ಬೇರೆ. ಅಲ್ಲಿ ಧರ್ಮ ದಲಿತರ ಸ್ವಾಭಿಮಾನದ ದಕ್ಕೆಗೆ ಪೆಟ್ಟುತಂದರೆ, ಇಲ್ಲಿ ಧರ್ಮದ ದಲಿತರ ಮೂಢನಂಬಿಕೆಗಳಿಗೆ ಬಲಿಯಾಗುವುದನ್ನು ತಪ್ಪಿಸಲು ಪ್ರಯತ್ನಿಸುತ್ತದೆ.

ಧರ್ಮದ ಸ್ಥಾಪನೆ ಮತ್ತು ಅದರ ವಾರಸುದಾರಿಕೆ ದಲಿತರ ಆಯ್ಕೆಯಂತೂ ಅಲ್ಲವೇ ಅಲ್ಲ. ಆದರೆ ದಲಿತರಿಗೆ ಇದೇ ನಿಮ್ಮ ಧರ್ಮ ಎಂಬುದನ್ನು ಒತ್ತಿ ಹೇಳಲಾಗಿದೆ. ಧರ್ಮವನ್ನು ತಮ್ಮ ತೆವಲುಗಳ ಈಡೇರಿಕೆಗೆ ಆಳುವ ವರ್ಗ ಬಳಸಿಕೊಂಡಿತು. ಇದನ್ನು ದುಡಿವ ಜನತೆಯಲ್ಲಿ ಒಂದಷ್ಟು ಮೌಲ್ಯಗಳನ್ನು ತುಂಬಿ ತಮ್ಮ ಸಂಪತ್ತನ್ನು ವಂಶಪಾರಂಪರ್ಯವಾಗಿ ಉಳಿಸಿಕೊಳ್ಳಲು ತಂತ್ರದೋಪಾದಿಯಲ್ಲಿ ಬಳಕೆಗೆ ತಂದರು. ಇದಕ್ಕಾಗಿ ಅವರು ಗುರು, ಮಠ, ಮಂದಿರ, ವಿಭೂತಿ, ನಾಮ, ಭಜನೆ ಮುಂತಾದ ಮೌಲ್ಯಗಳನ್ನು ಸಾಮಾನ್ಯ ಜನತೆಯ ತಲೆಗೆ ತುಂಬಿ, ಆ ಮೌಲ್ಯಗಳ ಮೂಲಕವೇ ತಮ್ಮ ಅಧಿಕಾರವನ್ನು ನಿರಂತರವಾಗಿ ಕಾಪಾಡಿಕೊಂಡು ಬಂದರು. ದಲಿತ ಕಾವ್ಯ ಇಂತಹ ಪೊಳ್ಳು ಧಾರ್ಮಿಕತೆಯ ವಿರುದ್ಧ ಅಸಹನೆ ಮತ್ತು ಪ್ರತಿರೋಧ ಒಡ್ಡಿ ವಿರೋಧಿಸಿದೆ. ಈ ಅಸಹನೆ ಮತ್ತು ಪ್ರತಿರೋಧಗಳೆ ದಲಿತ ಕಾವ್ಯದ ಬಹುಮುಖ್ಯ ರಾಜಕೀಯ ತತ್ವವಾಗಿ ಪರಿಣಮಿಸಿದೆ.

> ಹೊಟ್ಟೆಯೊಳಗೆ ಕಕ್ಕಸ ತುಂಬಿಕೊಂಡು
> ಪಕ್ಕದವನ ಕಂಡು ಇಸ್ಸಿ ಎನ್ನುವ
> ಸಂಸ್ಕೃತಿ ಇಲ್ಲಿ ಸದಾ ನೂತನ ಇಂಥ
> ಹೇಯ ಕೃತ್ಯಗಳ ಹಿಯಾಳಿಸಲು
> ನಾಲಿಗೆ ಕಳಕೊಂಡು ಪರದಾಡುವ ಜನರನಿಲ್ಲಿ ಕಾಣುವಿರಿ[೧೦]

ಇಂಡಿಯಾ ದೇಶದಲ್ಲಿ ಒಂದು ಸಂಸ್ಕೃತಿ ಇದೆ. ಅದನ್ನು ಮೇಲ್ನೋಟಕ್ಕೆ ಬಹುಸಂಸ್ಕೃತಿಗಳು ಎಂದು ಕರೆದರೂ ಅಂತರಾಳದಲ್ಲಿ ಶ್ರೇಣೀಕರಣ ಸಂಸ್ಕೃತಿಯನ್ನು ನಿರಂತರವಾಗಿ ಕಾಪಾಡಿಕೊಂಡು ಬಂದಿದೆ. ಒಂದು ಸಂಸ್ಕೃತಿ ಮತ್ತೊಂದು ಸಂಸ್ಕೃತಿಯನ್ನು ತುಳಿದು ತನ್ನ ಅಸ್ತಿತ್ವವನ್ನು ಭದ್ರಪಡಿಸಿಕೊಂಡು ತುಳಿತಕ್ಕೊಳಗಾದ ಸಂಸ್ಕೃತಿಗೆ ತಮ್ಮ ಸಂಸ್ಕೃತಿಯೇ ಮೇಲು ಎಂಬ ನಂಬಿಕೆಯನ್ನು ತುಂಬಿ ಕೊಂಡಾಡಿಸಿಕೊಳ್ಳುತ್ತಾ, ಅಧಿಕಾರದ ನೆಲೆಗೆ ಅಂಟಿಕೊಂಡು ಕುಳಿತುಬಿಟ್ಟಿದೆ. ಹೀಗೆ ನಂಬಿಸಿರುವ ಮೌಲ್ಯಗಳ ಧೂಳಿಪಟವಾಗದ ಹೊರತು, ದಲಿತರ ಏಳಿಗೆ ಸಾಧ್ಯವಿಲ್ಲ. ತನ್ನ ಸಂಸ್ಕೃತಿಯೂ ಶ್ರೇಷ್ಠ ಎಂಬ ಭಾವನೆ ಮೂಡದ ಹೊರತು ಅದರ ಅಸ್ತಿತ್ವ ಉಳಿಯಲು ಸಾಧ್ಯವಿಲ್ಲ. ತುಳಿದವರಿಗೆ ಪಾಠ ಕಲಿಸಲು

ಸಾಧ್ಯವಿಲ್ಲ. ಹಾಗೆಯೇ ತನ್ನದೇ ಆದ ಚಹರೆ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಮೇಲಿನ ಕವನದ ಸಾಲುಗಳು ವಿಡಂಬನಾತ್ಮಕವಾಗಿ ಸಂಸ್ಕೃತಿಯ ಎಲ್ಲೆಗಳನ್ನು ಅನಾವರಣಗೊಳಿಸಿವೆ. ಎಲ್ಲಾ ಸಂಸ್ಕೃತಿಯೊಳಗೆ ಶ್ರೇಷ್ಠ ಕನಿಷ್ಠತೆಗಳಿವೆ. ಹಾಗೆಯೇ ಎಲ್ಲಾ ಸಂಸ್ಕೃತಿಯೂ ಶ್ರೇಷ್ಠ ಎಂಬ ಮನೋಭೂಮಿಕೆಯನ್ನು ಬಿತ್ತಿದೆ. ಹೀಗೆ ಬಿತ್ತುವುದರ ಹಿಂದೆ ಶೋಷಿತರ ಏಳಿಗೆಯ ಕನಸೂ ಇದೆ. ಶೋಷಿತರಿಗೆ ತಮ್ಮ ಶ್ರಮ ಸಂಸ್ಕೃತಿಯ ಬಗ್ಗೆ ಅಭಿಮಾನ ಮೂಡಬೇಕು. ತನ್ನ ಹಿಂದಿನ ಪರಂಪರೆ ಮತ್ತು ಇತಿಹಾಸಗಳ ಅವಲೋಕನ ಆಗಬೇಕು. ಆ ಮೂಲಕ ದಲಿತರು ಮುನ್ನುಗ್ಗಿ ಹೊಸ ಇತಿಹಾಸಕ್ಕೆ, ಸಮ ಸಮಾಜಕ್ಕೆ ನಾಂದಿ ಹಾಡಬೇಕು. ಇದು ದಲಿತ ಕಾವ್ಯ ಒತ್ತಾಯಿಸುವ ರಾಜಕೀಯ ಸ್ಥಿತಿ.

ನೀವು ನೀವಾಗಿ ಮಾಡಿದ ಅವಮಾನದ ವಿರುದ್ಧ
ಹೋರಾಡದೆ ಹೋದರೆ..........
ನಾವು ಅವಸಾನ ನಾವು ಅವಸಾನ
ನೀವೇ ನೀವಾಗಿ ಮಾಡಿದ ಅವಮಾನದ ವಿರುದ್ಧ
ನಾವು ಹೋರಾಡಿ ಗೆದ್ದರೆ
ನಾವು ಸನ್ಮಾನ ನಾವೇ ಸನ್ಮಾನ[೧೧]

ಇಲ್ಲಿ ಅವಸಾನವೂ ಇದೆ. ಸನ್ಮಾನವೂ ಇದೆ. 'ನೀವು' ಎಂಬ ಇಡೀ ಪದ್ಯದ ಬಹುವಚನ ರೂಪಕವೇ ತುಳಿದವರ ನೆಲೆಗಳನ್ನು ಅನಾವರಣಗೊಳಿಸಿದೆ. ಇಲ್ಲಿ ವ್ಯವಸ್ಥೆಯ ಅರಿವನ್ನು ಮೂಡಿಸುತ್ತಲೇ ಅಸಹಾಯಕತೆಯೊಳಗಿನ ಜನರು ಮಾಡಬೇಕಾದ ಕರ್ತವ್ಯಗಳನ್ನು ಎಚ್ಚರಗೊಳಿಸಿದೆ. ಇಲ್ಲಿ 'ನೀವು ನೀವಾಗಿ ಮಾಡಿದ' ಎಂಬ ವಾಕ್ಯವೇ ದಲಿತರು ದೌರ್ಜನ್ಯಕ್ಕೆ ಬೇಕಂತಲೇ ಒಳಗಾದವರಲ್ಲ. ಅವರನ್ನು ಬಲಾತ್ಕಾರವಾಗಿ, ಪ್ರಯತ್ನಪೂರ್ವಕವಾಗಿ ಶೋಷಣೆಗೆ ಒಳಗು ಮಾಡಲಾಗಿದೆ ಎಂಬ ಅರಿವನ್ನು ಕಾವ್ಯ ಕಟ್ಟಿಕೊಡುತ್ತಿದೆ. ಹೀಗೆ ಕಟ್ಟುವುದರ ಹಿಂದೆ ಹೋರಾಟದ ಮನೋಭಾವವನ್ನು ಬಿತ್ತುತ್ತಿದೆ. ನಮಗೆ ಯಾರೂ ಸನ್ಮಾನಿಸಬೇಕಿಲ್ಲ, ನಮ್ಮ ಕೊಂಡಿಗಳನ್ನು ಕಳಚಿ ನಾವೇ ಬಂಧಮುಕ್ತರಾಗಿ ನಮಗೆ ನಾವೇ ಸನ್ಮಾನಿತರಾಗಬೇಕೆಂಬ ಆಶಯಗಳನ್ನು ಕಾವ್ಯ ಹೊತ್ತು ನಿಂತಿದೆ. ದಲಿತರು ತಮ್ಮ ದಡ್ಡತನದಿಂದ, ಪೂರ್ವಜನ್ಮದ ಕರ್ಮಫಲಗಳಿಂದ, ನಿರಕ್ಷರತೆಯಿಂದ ತುಳಿತಕ್ಕೊಳಗಾಗಿದ್ದಾರೆ ಎಂಬ ತತ್ವಗಳನ್ನು, ಮೌಲ್ಯಗಳನ್ನು ಬದಿಗೊತ್ತಿ, ಸತ್ಯದ ಹಲವು ಮುಖಗಳನ್ನು ದಲಿತ ಕಾವ್ಯ ಪರಿಚಯಿಸುತ್ತಿದೆ.

ಮಠದ ಬಾವಿ ಮುಂದ
ಗುಡಕ ನೀರ ಬೇಡಿದ್ರ
ಹೆಡ್ಕ ಹಿಡ್ದು ಹೊರಾಗ ಒಗಿತಾರ

ಮನ್ಯಾಗ ದನಾ ಸತ್ರ
ಹೊತಗೊಂಡು ಹೊಗಾಕ
ಬೆಣ್ಣಿಹಚ್ಚಿ ಒಳಾಗ ಕರಿತಾರ[೨]

ಸಮಾಜದಲ್ಲಿ ಎರಡು ವರ್ಗಗಳು ಚಾಲ್ತಿಯಲ್ಲಿವೆ. ಒಂದು ದುಡಿವ ವರ್ಗ, ಇನ್ನೊಂದು ದುಡಿಯದೇ ತಿನ್ನುವ ವರ್ಗ. ಇಲ್ಲಿ ಎರಡೂ ವರ್ಗಕ್ಕೂ ಒಂದೊಂದು ರೀತಿಯ ಮೌಲ್ಯಗಳು ಸೃಷ್ಟಿಗೊಂಡಿವೆ. ಆದರೆ ದುಡಿಯುವವರ ಮೌಲ್ಯಗಳು ಕಸ ಗುಡಿಸುವುದರಲ್ಲೋ, ಹೇಲೆತ್ತುವುದರಲ್ಲೋ, ಉಳುಮೆ ಮಾಡುವುದರಲ್ಲೋ, ಬಿಟ್ಟಿ ಚಾಕರಿ ಮಾಡುವುದರಲ್ಲೋ, ಜೀತ ಮಾಡುವುದರಲ್ಲೋ, ನಿತ್ಯ ಕಾಯಕಕ್ಕೆ ಮೀಸಲಾಗಿರುವಂತೆ ಆಳುವ ವರ್ಗ ದುಡಿಯುವವರ ತಲೆಯ ಮೇಲೆ ಹೇರಿದೆ. ಇದನ್ನೆಲ್ಲಾ ಮಾಡಿಸಿಕೊಳ್ಳುವುದಕ್ಕೇ ನಾವು ಹುಟ್ಟಿರುವುದು ಎಂಬುದನ್ನ ತಮ್ಮ ತಲೆಯ ಮೇಲೆ ತಾವೇ ಹೇರಿಕೊಂಡಿದ್ದಾರೆ. ಇಂತಹ ಮೌಲ್ಯಗಳ ತಿರಸ್ಕಾರಕ್ಕೆ ದಲಿತ ಕಾವ್ಯ ಮುಂದಾಗಿದೆ. ಇದಕ್ಕೆ ಪೂರಕವೆಂಬಂತೆ ಮೇಲಿನ ಕಾವ್ಯ ಅಭಿವ್ಯಕ್ತಗೊಂಡಿದೆ. ಕವನದ ಶೀರ್ಷಿಕೆ 'ಮ್ಯಾಗಿನವ್ರು' ಈ ಮ್ಯಾಗಿನವ್ರ ದ್ವಿಮುಖತನವನ್ನೆ ಕಾವ್ಯ ಬಿಚ್ಚಿಟ್ಟಿದೆ. ದನ, ನಾಯಿ, ಎಮ್ಮೆ, ಎತ್ತು, ಕತ್ತೆ ಸತ್ತಾಗ ಕೆಳಗಿನವರನ್ನು ಇವರು ಕರೆಯುವ ರೀತಿ ಮತ್ತು ಮಠದ ಮುಂದಿನ ಬಾವಿಯಲ್ಲಿ ನೀರು ಬೇಡಿದಾಗ ನಡೆದುಕೊಳ್ಳುವ ರೀತಿ ಮ್ಯಾಗಿನವ್ರ ಮನಸ್ಥಿತಿಗೆ ಹಿಡಿದ ಕನ್ನಡಿ. ಇಂತಹ ಮನಸ್ಥಿತಿಯನ್ನು ಕೆಳಗಿನವರಿಗೆ ಪರಿಚಯಿಸಿ ಅದರ ವಿರುದ್ಧ ನಿಲ್ಲುವ ಮನೋಭಾವ ಸೃಷ್ಟಿಗೆ ಕಾವ್ಯ ಮುನ್ನಡೆದಿದೆ. ಉಪಯೋಗಿಸಿದ ನಂತರ ಬಿಸಾಕುವ ವಸ್ತುವಿನಂತೆ ದಲಿತರ ಬದುಕನ್ನು ನಡೆಸಿಕೊಂಡು ಬರಲಾಗಿದೆ. ಉಪಯೋಗ ಮಾತ್ರ ಉಳ್ಳವರಿಗೆ, ದುಡಿಮೆ ಮಾತ್ರ ದಲಿತರಿಗೆ. ಇದೇ ಇಲ್ಲಿನ ಚರಿತ್ರೆ.

ಮಠ ಮಾನ್ಯಗಳು, ದೇವಸ್ಥಾನಗಳು, ಗುಡಿಗುಂಡಾರಗಳು, ಅಶ್ವಥಕಟ್ಟೆಗಳು ಮುಂತಾದವುಗಳಿಗೆ ಪವಿತ್ರ ಎಂಬ ಮೌಲ್ಯವನ್ನು ಹೇರಿದ ಆಳುವ ವರ್ಗ, ಅವುಗಳಿಗೆ ಅನೇಕ ಕಟ್ಟುಕಟ್ಟಳೆಗಳ ಮೌಢ್ಯತೆಯನ್ನು ತುಂಬುತ್ತಾ ಅಸ್ಪೃಶ್ಯರು ಮುಟ್ಟುವುದಿರಲಿ ಅವರ ನೆರಳೂ ಸಹ ಸೋಕಿದರೆ ಮೈಲಿಗೆಯೆಂಬ ತತ್ವತುಂಬಿ ನಿರಂತರವಾಗಿ ಅವುಗಳಿಂದ ಪ್ರಯೋಜನಗಳನ್ನು ಪಡೆಯುತ್ತಾ ಸಾಗಿ ಬಂದಿದೆ. ದಲಿತರಿಗೂ ಕೂಡ ಇವುಗಳು ನೀವು ಮುಟ್ಟಬಾರದ ಸ್ಥಳಗಳು ಎಂಬಂತೆ ಬಿಂಬಿಸಿ ಅವರನ್ನು ದೂರವಿಟ್ಟರು. ದಲಿತರು ಕೂಡ ಶತಮಾನಗಳಿಂದ ಇಂತಹ ಮೌಲ್ಯಗಳನ್ನು ನಂಬುತ್ತಲೇ ಬಂದರು. ಇಂತಹ ನಂಬಿಕೆಗಳು ಬುಡಮೇಲಾಗದ ಹೊರತು ಪೊಳ್ಳುತನಗಳು, ಮೂಢನಂಬಿಕೆಗಳು ಹೊರಬರಲು ಸಾಧ್ಯವಿಲ್ಲ. ೧೯೭೦ರ ದಶಕದಲ್ಲಿ ದಲಿತ ಕವಿಗಳು ಮೊದಲ ಬಾರಿಗೆ ಇವುಗಳನ್ನು ಕುರಿತು ಕಟುವಾಗಿ ವಿರೋಧಿಸಿದರು ಮತ್ತು ಸ್ಥಾಪಿತ ಮೌಲ್ಯಗಳನ್ನು ಕುರಿತು ತಿರಸ್ಕಾರ ಹೊಂದಿ ಧಿಕ್ಕರಿಸಲು ಪ್ರಾರಂಭಿಸಿದರು.

ಊರಿನ ಕೇರಿಗಳಲ್ಲೇ ನೀರನ್ನು ಕುಡಿಯಲು ಸಾಧ್ಯವಾಗದ ದಲಿತರು ಮಠದ ಮುಂದೆ ನೀರನ್ನು ಬೇಡಿದ್ದಾದರೂ ಏಕೆ? ಎಂಬ ಪ್ರಶ್ನೆ ಕಾಡುತ್ತದೆ. ಮಠಕ್ಕೂ, ದಲಿತರಿಗೂ ಸಾಮಾಜಿಕವಾದ ಸಂಬಂಧವೇನೂ ಇಲ್ಲ. ಆದರೆ ಮಾನಸಿಕ ಸಂಬಂಧವಿದೆ. ಇದು ದೂರಾಗಬೇಕು, ಇಲ್ಲದಿದ್ದರೆ ಮಠದೊಳಗಿನ ಬೆಕ್ಕುಗಳಿಗೆ ಆಹುತಿಯಾಗುವ ದಲಿತ ಜೀವಗಳೆಷ್ಟೋ? ಇದನ್ನೇ ಕಾವ್ಯ ಮಠಕ್ಕೂ–ನೀರಿಗೂ–ದಲಿತರಿಗೂ ಸಾಮ್ಯತೆ ಕಲ್ಪಿಸಿ ಮಾತಾಡುತ್ತಿದೆ.

....

ಯುಗಯುಗಗಳ
ಸೋಬಾನೆಯ ಗುಡಿಸಿ
ಇಹಪರಗಳ
ಹರಿಕತೆಗಳ ಸುಡಿಸಿ
ಜೀವ ಹೀನ ದೇವತೆಗಳ
ಕೊಳೆ ಗುಂಡಿಗೆ ಜಾಡಿಸಿ
ಬಡಜೀವಗಳ
ಬಡಬಾಗ್ನಿಯು ಘೋರೈಸಿ
ಬಡತನದ ಕಡುಕೋಪದ
ದಲಿತರಾಗ ಮೊರೆಯುತಿದೆ
ಸಾಗರದಲೆ ನರ್ತಿಸಿ[೧೩]

"ಇವತ್ತಿನ ದಲಿತ ಕವಿಯ ವಜ್ರಾಯುಧ ಎಂದರೆ ಪ್ರಚಂಡವಾದ ತನ್ನರಿವು. ಆಫ್ರಿಕನ್ ಲೋಕದ ತನ್ನರಿವು ಎಂದರೆ ಶೋಯಿಂಕನ ಪ್ರಕಾರ ಒಂದು ಸಂಸ್ಕೃತಿಯನ್ನು ತಾಳೆ ನೋಡುವ ನೆಲೆಬಿಂದುಗಳು. ಆ ಸಂಸ್ಕೃತಿಯ ಒಳಗೆ ಇರುವಂತವಾಗಿರಬೇಕು ಎಂಬ ಅರಿವು. ಈ ತನ್ನರಿವು ಬಹಳ ನಿರಾಯಾಸವಾಗಿ ಇಷ್ಟರವರೆಗಿನ ವಿಚಾರಗಳಿಗೆ, ನಂಬಿಕೆಗಳಿಗೆ ಮರುವ್ಯಾಖ್ಯಾನ ನೀಡಬಲ್ಲದು."[೧೪] ಈ ಮರುವ್ಯಾಖ್ಯಾನ ಮಾಡಲಾಗದಿದ್ದರೆ ಅಸ್ತಿತ್ವವೇ ನಾಶ ಹೊಂದುತ್ತದೆ. ಯಾವುದನ್ನು ಶ್ರೇಷ್ಠ ಎಂದು ನಂಬಿಸಲಾಗಿತ್ತೋ ಅದನ್ನೇ ಕನಿಷ್ಠ ನೆಲೆಗೆ ತಳ್ಳಿ ತನ್ನ ಕನಿಷ್ಠತೆಯನ್ನು ಸ್ವಾಭಿಮಾನದ ಮೆಟ್ಟಿಲುಗಳಿಂದ ಕಟ್ಟಿ ಶ್ರೇಷ್ಠತೆಯ ಮಟ್ಟಕ್ಕೇರುವ ಸ್ಥಿತಿ ಮೇಲಿನ ಪದ್ಯದ ಸಾಲುಗಳಲ್ಲಿದೆ.

....

ಕೋಟೆಯ ಮೆಟ್ಟಿ ಸೂರ್ಯ ಬಂದಾಗ
ಬೆಳಕ ಮುಷ್ಟಿಯಲಿ ಹಿಡಿಯುವೆಯಾ?

ಸಾಗರವನ್ನು ಎದುರಿಸಬಲ್ಲೆಯಾ?
ಗುಡಿಯಲ್ಲಿನ ಕಲ್ಲಿನಲಿ ದೇವರಿಲ್ಲ ಗೌಡ
ಅದು ನಿನ್ನ ಪಾಪದ ಪಿಂಡ[೧೫]

ಬಹಳ ಹಿಂದೆಯೇ ಬಸವಣ್ಣ 'ಉಳ್ಳವರು ಶಿವಾಲಯವ ಮಾಡುವರು ನಾನೇನು ಮಾಡಲಿ ಬಡವನಯ್ಯ, ಎನ್ನ ಕಾಲೇ ಕಂಬ, ದೇಹವೇ ದೇಗುಲ' ಎನ್ನುವುದರ ಮೂಲಕ ಮೂರ್ತಿ ಆರಾಧನೆಗೆ ವಿರೋಧ ವ್ಯಕ್ತಪಡಿಸಿದ್ದ. ಹಾಗೆಯೇ ಅಲ್ಲಮಪ್ರಭು ಕೂಡ 'ಕಲ್ಲು ದೇವರ ಮಾಡಿ, ಕಲ್ಲು ಮನೆಯ ಮಾಡಿ, ಆ ಕಲ್ಲು ಈ ಕಲ್ಲ ಮೇಲೆ ಕೆಡೆದರೆ ದೇವರೆತ್ತ ಪೋದನೋ ಗುಹೇಶ್ವರ' ಎನ್ನುವುದರ ಮೂಲಕ ದೇವರ ಅಸ್ತಿತ್ವವನ್ನೇ ನಿರಾಕರಿಸಿದ್ದನು. ಆದರೆ ಕೆಲವೊಂದು ವರ್ಗ ಈ ದೇವಸ್ಥಾನಗಳನ್ನೇ ತಮ್ಮ ವ್ಯಭಿಚಾರದ ಕೇಂದ್ರವನ್ನಾಗಿ ಮಾಡಿಕೊಂಡು ದೇವರ ಹೆಸರಿನಲ್ಲಿ ದೇವದಾಸಿ ಪದ್ಧತಿ, ಬೆತ್ತಲೆಸೇವೆ, ಬಲಿ ಮುಂತಾದ ಕ್ರೌರ್ಯ ತುಂಬಿದ ಆಚರಣೆಗಳನ್ನು ಹುಟ್ಟುಹಾಕಿತು. ಈ ಕ್ರೌರ್ಯಗಳಿಗೆ ಬಲಿಯಾಗಲು ದಲಿತರೇ ಅವರಿಗೆ ಸಿಕ್ಕ ಸರಕುಗಳಾದವು. ಇಂತಹ ವ್ಯಭಿಚಾರದ ಕೃತ್ಯಗಳನ್ನೇ ಕಾವ್ಯ ಮೇಲಿನ ರೀತಿಯಲ್ಲಿ ಚುಚ್ಚುತ್ತಿದೆ.

ಮೇಲಿನ ಕವನ ಏಕಕಾಲದಲ್ಲಿ ಗುಡಿಯಲ್ಲಿರುವುದು ಕಲ್ಲೇ ಹೊರತು ಬೇರೇನೂ ಅಲ್ಲ ಎಂಬ ಅಂಶದ ಜೊತೆಗೆ ಅದು ಪುರೋಹಿತರನ್ನು ಟಾರ್ಗೆಟ್ ಮಾಡುತ್ತಿಲ್ಲ. ಬದಲಾಗಿ ಭೂಮಾಲೀಕರನ್ನು ಟಾರ್ಗೆಟ್ ಮಾಡುತ್ತಿದೆ. ದಲಿತರ ನಿಜವಾದ ಶತ್ರು ಯಾರೆಂಬುದನ್ನು ಕಾವ್ಯ ತನ್ನ ಅಭಿವ್ಯಕ್ತಿಯಲ್ಲೇ ತೋರಿಸಿಕೊಟ್ಟಿದೆ. ಗುಡಿಯಲ್ಲಿನ ಕಲ್ಲಿಗೆ ಪುರೋಹಿತ ಪೂಜೆ ಮಾಡಬಹುದಷ್ಟೇ, ಆದರೆ ಊರ ಯಜಮಾನ ಅದರಿಂದ ತನ್ನ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುತ್ತಲೇ ಹೋಗುತ್ತಾನೆ. ಹಾಗೂ ದಲಿತರಿಗೂ ಪುರೋಹಿತರಿಗೂ ಕೆಲವೊಂದು ಸಂದರ್ಭಗಳನ್ನು ಬಿಟ್ಟರೆ ಇವರಿಬ್ಬರ ಸಂಬಂಧ ಅಷ್ಟಕ್ಕಷ್ಟೇ. ಆದರೆ ದಲಿತರ ದಿನನಿತ್ಯ ಬದುಕು ನಡೆಯುತ್ತಿರುವುದೇ ಈ ಭೂಮಾಲೀಕ ವ್ಯವಸ್ಥೆಯ ಸಂಬಂಧದೊಂದಿಗೆ. ತನ್ನ ಆಡಳಿತದ ಸುಗಮಕ್ಕೆ ಅನೇಕ ತಂತ್ರಗಳನ್ನು ಹೆಣೆಯುತ್ತಲೇ ಇರುತ್ತಾರೆ. ಇಂತಹ ತಂತ್ರಗಳಲ್ಲಿ ಕವಿತೆ ಹೇಳುತ್ತಿರುವ ತಂತ್ರವೂ ಒಂದು.

ಈ ತರದ ದಿಟ್ಟತೆಯ, ಕ್ರೌರ್ಯ ತುಂಬಿದ, ಅಸಹನೆ ತುಂಬಿದ ಮಾತು ಹೊರ ಬರಲು ಅದರ ಹಿಂದಿನ ನೋವಿನ ಪರಿಯೆಷ್ಟು? ಎಂಬುದನ್ನು ಅರ್ಥಮಾಡಿಕೊಳ್ಳಬೇಕಿದೆ. ದೇವಸ್ಥಾನಕ್ಕೆ ದಲಿತರಿಗೆ ಪ್ರವೇಶವಿಲ್ಲ ಎಂದು ಹೇಳುತ್ತಲೇ ವ್ಯಭಿಚಾರದ ಗೂಡುಗಳನ್ನಾಗಿಸಿದ ಉಳ್ಳವರನ್ನು ಕುರಿತ ಅಸಹನೆ ಪದ್ಯದ ತಾತ್ವಿಕ ನೆಲೆಗಟ್ಟಾಗಿದೆ. ಯಾವುದನ್ನು ದಲಿತರು ಪವಿತ್ರ ಎಂದು ನಂಬಿದ್ದರೋ ಅದಕ್ಕೆ ಅಪವಿತ್ರದ ಲೇಪನ ಹಚ್ಚಿ ನಿಮ್ಮ ಅಸ್ತಿತ್ವ ಬೇರೆ

ಇದೆ ಎಂಬುದನ್ನು ಕವಿತೆ ಮನಗಾಣಿಸುತ್ತಿದೆ. ಇಂತಹ ಪ್ರತಿಭಟನೆಗೆ ಮೂಲ ಬೇರು ಅಂಬೇಡ್ಕರ್ ವಿಚಾರಧಾರೆಗಳು. "ಹಿಂದೂ ಧರ್ಮದಲ್ಲಿ ಸಾಮಾನ್ಯ ಮಾನವನ ಜೀವನಕ್ಕೆ ಯಾವುದೇ ಪುಷ್ಟಿಯಿಲ್ಲ; ಸಾಮಾನ್ಯನ ದುಃಖಕ್ಕೆ ಯಾವುದೇ ಸಾಂತ್ವನವಿಲ್ಲ; ಮನುಷ್ಯನ ಬಲಹೀನತೆಗೆ ಯಾವ ನೆರವೂ ಇಲ್ಲ. ಅದು ಮನುಷ್ಯನನ್ನು ಅಂಧಕಾರದಲ್ಲಿ ನಿಸರ್ಗದಲ್ಲಿ ಅಂತ್ಯ ಶಕ್ತಿಗಳಿಗೆ ಮುಖಾಮುಖಿಯಾಗಿ ನಿಲ್ಲಿಸುತ್ತದೆ; ನಿಷ್ಫಲವಾದ ಕೆಲವು ಹೋರಾಟಗಳ ಬಳಿಕ, ಅವರು ಸೋತು ಹೋಗುತ್ತಾರೆ. ಅತ್ಯಂತ ಬರ್ಬರ ಧರ್ಮಕ್ಕಿಂತ ಕಡಿಮೆಯಿಲ್ಲದ ಕ್ರೌರ್ಯದಿಂದ ದೇವರೊಂದಿಗೆ ಯಾವುದೇ ಸಂಸರ್ಗವಾಗದಂತೆ ಅದು ಮನುಷ್ಯರನ್ನು ವಿಚ್ಛೇದಗೊಳಿಸುತ್ತದೆ."[೧೬] ಇವರ ಚರಿತ್ರೆ ಅಂಬೇಡ್ಕರ್ ವಿಚಾರಧಾರೆಗಳಿಂದಲೇ ತಿಳಿದುಬಂದಿದೆ. ಇವನ್ನು ಅರ್ಥೈಸಿಕೊಂಡು ದಲಿತಪರ ಹೋರಾಟಗಾರರು ತಮ್ಮ ಹೋರಾಟಗಳಲ್ಲಿ ಇವರಿಂದ ಮುಕ್ತಿ ಹೊಂದಲು ಶ್ರಮಿಸಿದರು.

ಸೂರ್ಯನ ಜೊತೆ ನಾವು ನಿತ್ಯ
ಉದಯಿಸಿ ಬರುತ್ತೇವೆ
ಬೆಳಗಿನ ಜಾವ ನಿಮ್ಮ ಮನೆಯಂಗಳಕೆ
ಹಿಡಿದು ಪಿಕಾಸಿ, ಪೊರಕೆ ಚಿಹ್ನೆಯ ಪತಾಕೆ

ಈ ಪಿಕಾಸಿ ನಿಮ್ಮ ಗೋರಿ ತೋಡಲು ಅಲ್ಲ
ಈ ಪೊರಕೆ ನಿಮಗೆ ಹಿಡಿದ ದೆವ್ವ ಬಿಡಿಸಲು ಅಲ್ಲ
ಮಂತ್ರಗಳಲ್ಲಿ ಮನುಷ್ಯತ್ವ ಕೊಳೆಯಿಸಿದ ನಿಮ್ಮ
ಹಿಂಸಾ–ಪರಂಪರೆಯನು ಸಮ ಮಾಡುತ್ತೇವೆ
ಕಿತ್ತು ಬುಡಸಹಿತ–
ನಿಮ್ಮ ಕಚಡಾ ಸಂಸ್ಕೃತಿಯನು ಸ್ವಚ್ಛಗೊಳಿಸುತ್ತೇವೆ
ಪೊರಕೆ ಹಿಡಿದು ಬಳೆದು
ನಿರ್ಮಿಸಿ ಸಮ ಸಮಾಜಕೆ ಹೊಸದಾರಿ
ಉದಯಿಸುವ ನಮ್ಮ ಭಾಗ್ಯದ
ಸೂರ್ಯನಿಗೆ ಸ್ವಾಗತ ಹಾಡುತ್ತೇವೆ[೧೭]

ದುಡಿಯುವವರ ಅಷ್ಟೂ ದುಡಿಮೆಯನ್ನು ಕಿತ್ತು ತಿಂದು ಕೊಬ್ಬಿ ತಮ್ಮದೇ ಸರ್ವಶ್ರೇಷ್ಠ ಸಂಸ್ಕೃತಿ ಎಂದು ಮೆರೆಯುವ ವರ್ಗಕ್ಕೆ ದಲಿತ ಕಾವ್ಯ ಅದರ ಮಾಯಾ ಮುಸುಕುಗಳನ್ನು ಬಯಲಿಗೆಳೆದು, ಅದಕ್ಕೆ 'ಕಚಡಾ ಸಂಸ್ಕೃತಿ' ಎಂಬ ಬಿರುದು ನೀಡಿ ತಾನು ಹೋರಾಡ

ಬೇಕಿರುವುದು ಯಾರ ಯಾರ ವಿರುದ್ಧ ಎಂಬುದನ್ನು ಸ್ಪಷ್ಟಪಡಿಸಿದೆ. ಹಿಂಸಾ ಪರಂಪರೆಯನ್ನು ತೊಲಗಿಸಲು ಹೊಸ ಸೂರ್ಯನ ಬರುವಿಕೆಗಾಗಿ ಹಾತೊರೆಯುವ ಇಲ್ಲಿನ ಕವಿತೆ ಸಮ ಸಮಾಜದ ಕನಸು ಕಾಣುತ್ತಿದೆ. ಈ ಕವಿತೆಯ ಆಶಯ ಬಹುಪಾಲು ದಲಿತ ಕಾವ್ಯಗಳ ಆಶಯವೂ ಆಗಿದೆ. 'ಸುಲಿಗೆ ಕೋರ ಸಂಸ್ಕೃತಿಯ, ಮಾಯ ಮುಸುಕುಗಳ ಹರಿದು, ಮತ ಜಾತಿಯ ವಿಷದ ಕೊರೆ ಕಿತ್ತೆಸೆದು ಮುಂದೆ ನಡೆವ' ಎನ್ನುವ ಹೋರಾಟದ ಹಾಡಿನ ನಿಲುವು ಮೇಲಿನ ಕವನಕ್ಕಿಂತ ದೃಢವಾಗಿ ದಲಿತರ ರಾಜಕೀಯ ಹಿತಾಸಕ್ತಿಯನ್ನು ಕಟ್ಟಿಕೊಡುತ್ತಿದೆ. ಪೊರಕೆ, ಪಿಕಾಸಿ ಇವು ಶ್ರಮಜೀವನದ ಸಂಕೇತಗಳು. ದಲಿತ ಕಾವ್ಯ ತನ್ನ ರೂಪವನ್ನು ನಿರ್ಮಿಸಿಕೊಳ್ಳುವಾಗ ಅದು ದಲಿತರ ವಾಸ್ತವ ನೆಲೆಗಳಿಂದಲೇ ಪರಿಕರಗಳನ್ನು ಒದಗಿಸಿಕೊಳ್ಳುತ್ತದೆ ಎಂಬುದಕ್ಕೆ ಮೇಲಿನ ಕಾವ್ಯದ ಸಾಲುಗಳು ಮಹತ್ವವೆನಿಸುತ್ತವೆ.

ಸಂಸ್ಕೃತಿ ಇದುವರೆಗೂ ಚರ್ಚೆಯಾಗುತ್ತಿದ್ದುದು ಎರಡು ನೆಲೆಗಳಲ್ಲಷ್ಟೇ. ಒಂದು ಪ್ರಧಾನ ಸಂಸ್ಕೃತಿ ಮತ್ತೊಂದು ಅಧೀನ ಸಂಸ್ಕೃತಿ. ಆದರೆ ಕಾವ್ಯ ಇನ್ನೊಂದು ಸಂಸ್ಕೃತಿಯನ್ನು ಪರಿಚಯಿಸುತ್ತಿದೆ. ಅದು ಸುಲಿಗೆ ಸಂಸ್ಕೃತಿ. ಪ್ರಧಾನ ಸಂಸ್ಕೃತಿ ಅಂದ ತಕ್ಷಣ ಅದು ತಳ ಸಂಸ್ಕೃತಿಯನ್ನು ತುಳಿಯುತ್ತಲೇ ಮುಂದೆ ಬಂದಿದೆ ಎಂಬ ತಕ್ಷಣದ ನಿಲುವಿಗೆ ಬಂದುಬಿಡಬಹುದು. ಆದರೆ ಸುಲಿಗೆ ಸಂಸ್ಕೃತಿ ಎನ್ನುವಾಗ ಅದು ದೇಶೀಯ ಬಂಡವಾಳಿಗರ ಆದಿಯಾಗಿ ಖಾಸಗೀಕರಣ, ಜಾಗತೀಕರಣ, ಉದಾರೀಕರಣಗಳ ದೋಚುವಿಕೆಯನ್ನು ದಲಿತರ ನೆಲೆಯಲ್ಲಿ ನಿಂತು ವಿವರಿಸುತ್ತದೆ. ಇವುಗಳು ಎಂದಿಗೂ ದಲಿತರ ಮಿತ್ರರಲ್ಲ ಎಂಬುದನ್ನು ಕಾವ್ಯ ಕಟ್ಟಿಕೊಡುತ್ತಿದೆ. ಇಲ್ಲಿ ವರ್ಗ ವೈರುಧ್ಯಗಳ ಅನಾವರಣವಿದೆ. ಶೋಷಿತರು ವರ್ಗಗಳ ವಿರುದ್ಧ ಹೋರಾಡಬೇಕಾದ ಅನಿವಾರ್ಯತೆಯನ್ನು ಕಾವ್ಯ ಕಟ್ಟಿಕೊಡುತ್ತಿದೆ. ಆದರೆ ಜಾತಿ ಸಮಸ್ಯೆಯನ್ನು ಪ್ರಧಾನವಾಗಿ ಬಿಂಬಿಸಿದ ಕೆಲವೊಂದು ವರ್ಗ, ವರ್ಗ ಸಮಸ್ಯೆಯನ್ನು ಪ್ರಮುಖವಾಗಿ ಚರ್ಚೆಗೊಳ್ಳುವಂತೆ ಮಾಡಿದರು. ಆದರೆ ಅಂಬೇಡ್ಕರ್ ಇದನ್ನು ಮೊದಲೇ ಗುರುತಿಸಿ ಹೇಳಿರುವ ಮಾತುಗಳು ಹೀಗಿವೆ; "ಸಮಕಾಲೀನ ಹಿಂದೂಗಳು ಬಹುಶಃ ಮಾರ್ಕ್ಸ್‌ವಾದದ ಬಹು ದೊಡ್ಡ ವಿರೋಧಿಗಳು. ಅದರ ವರ್ಗ ಹೋರಾಟದ ಸಿದ್ಧಾಂತದಿಂದ ಅವರು ಭಯಗೊಂಡಿದ್ದಾರೆ. ಆದರೆ ಇಂಡಿಯಾ ದೇಶವು ವರ್ಗ ಹೋರಾಟ ಮಾತ್ರವಲ್ಲ, ವರ್ಗ ಸಮರಗಳ ತವರೂರು ಎಂಬುದನ್ನು ಅವರು ಮರೆತಿದ್ದಾರೆ."[೧೮] ಇದರ ಬಗ್ಗೆ ಎಚ್ಚರಿರಬೇಕಾದ ಅನಿವಾರ್ಯತೆ ಪ್ರತಿಯೊಬ್ಬ ಶೋಷಿತರ ಮೇಲಿದೆ.

ಈ ರೀತಿ ಸುಲಿಗೆ ಮಾಡುತ್ತಲೇ ತನ್ನ ಸಂಸ್ಕೃತಿಯೇ ಶ್ರೇಷ್ಠ ಎಂದಿದ್ದ ಮೇಲ್ವರ್ಗದವರು ದಲಿತರ ಬದುಕು ನಿಕೃಷ್ಟವೆಂಬಂತೆ ಬಿಂಬಿಸಿದರು. ಅವರ ಹತ್ಯೆಯನ್ನು ಕನಿಷ್ಠ ಕಾಗೆಯ ಹತ್ಯೆಗೆ ಹೋಲಿಸಿ ಸಮಾನವೆಂದು ಹೇಳಿ ತಮ್ಮ ಸೌಲಭ್ಯಗಳನ್ನು ಧರ್ಮದೆಸರೇಳಿ ಪಡೆಯುತ್ತಿತ್ತು. ಇಂತಹ ಸುಲಿಗೆಕೋರ ಸಂಸ್ಕೃತಿಯ ಹುನ್ನಾರಗಳಿಗೆ ಅನೇಕ ನೀತಿ ಶಾಸ್ತ್ರಗಳೂ ಪೂರಕವಾಗಿ ಕೆಲಸ ಮಾಡಿವೆ. ಇಂತಹ ಸಂಸ್ಕೃತಿಯ ಹುಳುಕುಗಳನ್ನು ಅಂಬೇಡ್ಕರ್ ಬಿಚ್ಚಿಟ್ಟರು. ಅವರೇ ಬರೆಯುವಂತೆ "ಸಾಮಾಜಿಕ ಹಕ್ಕುಗಳ ಬಗೆಗೆ 'ಮನು ಧರ್ಮ

ಸಂಹಿತೆ'ಯಂತಹ ದುಷ್ಟ ಕಾನೂನುಗಳು ಇನ್ನೆಲ್ಲಿಯೂ ಇಲ್ಲ. ಸಾಮಾಜಿಕ ಅನ್ಯಾಯದ ಯಾವುದೇ ದೇಶದ ಯಾವುದೇ ಉದಾಹರಣೆಗಳು ಇದರ ಮುಂದೆ ಸಪ್ಪೆಯಾಗಿಬಿಡುತ್ತವೆ."[೧೯] ಇಂತಹ ಸಂಸ್ಕೃತಿಗಳ ಅಮಾನವೀಯತೆಯನ್ನು ಹೊರಗೆಡವುದರ ಮೂಲಕ ತನ್ನ ಧೋರಣೆಯನ್ನು ಸಾಮಾಜಿಕ ನ್ಯಾಯದ ಕಡೆಗೆ ಕೊಂಡೊಯ್ಯುವ ಪ್ರಯತ್ನದಲ್ಲಿ ದಲಿತ ಕಾವ್ಯ ಸಾಗಿದೆ.

ಅತ್ಯಂತ ಪ್ರಜ್ಞಾಪೂರ್ವಕವಾಗಿ ಯಾವುದನ್ನು ದಲಿತರಿಗೆ ನಂಬಿಸಲಾಗಿದೆ ಅಥವಾ ನಂಬುವಂತೆ ಮಾಡಲಾಗಿದೆ ಅದನ್ನು ಅಪಮೌಲ್ಯೀಕರಣಗೊಳಿಸದ ಹೊರತು ದಲಿತರ ಅಸ್ತಿತ್ವ ಉಳಿಯಲು ಸಾಧ್ಯವಿಲ್ಲ. ಆ ಸಂಸ್ಕೃತಿಯ ಸಂಪ್ರದಾಯಗಳಿಗೆ ಅಸಹನೆ ತೋರಿ ವಿರೋಧಿಸುವುದರ ಜೊತೆಗೆ ತನ್ನ ನಡೆ ಯಾವುದರ ಕಡೆಗೆ ಎಂಬುದನ್ನು ದಲಿತ ಕಾವ್ಯ ಬಿಚ್ಚಿಟ್ಟಿದೆ. ಇದಕ್ಕೆ ಪೂರಕವೆಂಬಂತೆ ಒಂದು ಹೋರಾಟದ ಹಾಡು 'ಸುಲಿಗೆ ಕೋರ ಸಂಸ್ಕೃತಿಯ ಮಾಯಾ ಮುಸುಕುಗಳ ಹರಿದು ಮತಜಾತಿಯ ವಿಷದ ಕೊರೆ ಕಿತ್ತೆಸೆದು ಮುಂದೆ ನಡೆವ' ಎಂದು ನಿರೂಪಿಸುವುದರ ಮೂಲಕ ಇವೆಲ್ಲವುಗಳನ್ನು ಬುಡಸಮೇತ ಕಿತ್ತೊಗೆಯುವ ಧ್ಯೇಯಗಳನ್ನು ಒಳಗೊಂಡು ಹೋರಾಟದ ಹಾದಿಯಲ್ಲಿ ಮುನ್ನಡೆಯಲು ಕರೆಕೊಡುತ್ತದೆ.

"ಪಾವಿತ್ರ್ಯ ನಾಶವೆಂದರೆ ಯಾವ ಯಜಮಾನ ಸಂಸ್ಕೃತಿಯು ದುಡಿಯುವ ಜನರ ಲೋಕಕ್ಕೆ ಸಂಬಂಧಿಸಿದ್ದನ್ನು ಹೀನವೆಂದೂ, ತನ್ನದನ್ನು ಶ್ರೇಷ್ಠವೆಂದೂ ಮೂಡಿಸಿದ ನಂಬಿಕೆಗಳಿವೆಯೋ ಅವನ್ನು ಅಪಮೌಲ್ಯೀಕರಣಗೊಳಿಸುವುದು. ಅದು ಪವಿತ್ರೀಕರಿಸುವ ಸಂಕೇತಗಳನ್ನು ನಿರಾಕರಿಸುವುದು. ಇದೊಂದು ಜಾಗತಿಕ ಪ್ರತಿಭಟನಾ ಸಾಹಿತ್ಯಗಳ ಸಾಮಾನ್ಯ ಲಕ್ಷಣ."[೨೦] ಇದು ಜಗತ್ತನ್ನೇ ಸೃಷ್ಟಿಸಿದವರು ತ್ರಿಮೂರ್ತಿಗಳು ಎನ್ನುವಾಗ ಆ ತ್ರಿಮೂರ್ತಿಗಳನ್ನು ಸೃಷ್ಟಿಸಿದ್ದು ನಮ್ಮ ಮಂಟೇಸ್ವಾಮಿ ಎನ್ನುವ ಜನಪದ ಪರಂಪರೆಯ ಪ್ರತಿರೋಧವಿದ್ದಂತೆ. ಇಂತಹ ಪ್ರತಿರೋಧಕ್ಕೆ ಬೇಕಾಗಿರುವುದು ಪರಂಪರೆಯ ಜ್ಞಾನ, ಚರಿತ್ರೆಯೊಳಗೆ ಅಡಗಿಹೋದ ದಲಿತರ ಅಗಾಧ ನೋವಿನ ಎಳೆಗಳು. ಭೂತದಲ್ಲಿ ಆದ ಸಾಮಾಜಿಕ ಸಾಂಸ್ಕೃತಿಕ ಪಲ್ಲಟಗಳು ಮತ್ತು ಅವುಗಳ ಪ್ರಜ್ಞೆ ಅನಿವಾರ್ಯ. ಇವತ್ತೂ ಕೂಡ ಹಳ್ಳಿಗಳಲ್ಲಿ ಮೇಲ್ವರ್ಗದವರು ತಳವರ್ಗದವರ ಮನೆಗಳಿಗೆ ಬಂದರೆ ದರಿದ್ರ ಬರುತ್ತದೆ. ಹಾಗೆಯೇ ತಳವರ್ಗದವರು ಮೇಲ್ವರ್ಗದವರ ಮನೆಗಳಿಗೆ ಹೋದರೆ ಅದೃಷ್ಟ ಬರುತ್ತದೆ ಎನ್ನುವ ನಂಬಿಕೆ ಇಂದಿಗೂ ದಕ್ಷಿಣ ಕರ್ನಾಟಕದ ಅನೇಕ ಕಡೆ ದಲಿತರಲ್ಲಿ ನಂಬಿಕೆಯಾಗಿಯೇ ಉಳಿದುಕೊಂಡಿದೆ. ಇದು ಯಾವುದೇ ಸಾಹಿತ್ಯ ಒಡ್ಡದ ಪ್ರತಿರೋಧಕ್ಕಿಂತ ದೊಡ್ಡ ಪ್ರತಿರೋಧ ಎನಿಸುತ್ತದೆ.

....

ಒಂದಾನೊಂದು ಕಾಲಕ್ಕೆ
ನಮ್ಮಪ್ಪ ದಧೀಚಿಯಾಗಿದ್ದ

ಕರ್ಣನೂ ಆದ
ಕಥೆಯಾಗಿ ಹೋದ
ಯಾರ ಕುಂಚವೂ ಇವನನ್ನು ಕಾಣಲಿಲ್ಲ
ಕಾವ್ಯ ಕಣ್ದೆರಯಲಿಲ್ಲ
ಮುಪ್ಪಾಗುವತನಕ
ನಮ್ಮಪ್ಪ ಗುಡುಗು ಮಿಂಚಿಗೆ ಎದೆಯೊಡ್ಡಿ
ಬೆವರು ಸುರಿಸಿದ
ರಕ್ತ ಹರಿಸಿದ
ನೆಲದಿಂದ ನೆಗೆದ ಮಹಲಿಗೆಲ್ಲ ಆಧಾರವಾದ
.......................೨೧

ಪ್ರತಿಯೊಂದು ಹಳ್ಳಿಯಿಂದ ಹಿಡಿದು ದಿಲ್ಲಿಯವರೆಗೆ ಯಜಮಾನರ ಮನೆಯ ಉದ್ಧಾರದಲ್ಲೇ ತಮ್ಮ ಅಸ್ತಿತ್ವವನ್ನು ಕಂಡುಕೊಳ್ಳುತ್ತಿದ್ದ ದಲಿತರು ತಮ್ಮ ಇಡೀ ಜೀವನವನ್ನೇ ಅವರಿಗಾಗಿ ಮುಡಿಪಾಗಿಟ್ಟರು. ಮಹಾಭಾರತದಲ್ಲಿ ಬರುವ ಕರ್ಣನ ತ್ಯಾಗಕ್ಕಾಗಲೀ, ದುರ್ಯೋಧನನ ಸ್ನೇಹಪರತೆ ಮತ್ತು ಛಲಕ್ಕಾಗಲೀ, ಅರ್ಜುನನ ಶೌರ್ಯಕ್ಕಾಗಲೀ, ಭೀಮನ ಭುಜಬಲಕ್ಕಾಗಲೀ ಯಾವುದರಲ್ಲಿಯೂ ಕಡಿಮೆಯಿಲ್ಲದ ದಲಿತರು ಮಾತ್ರ ಯಾವ ಮಹಾಕಾವ್ಯಗಳಲ್ಲಾಗಲೀ, ಯಾವ ಚಿತ್ರ ಶಿಲ್ಪಗಳಲ್ಲಾಗಲೀ ಕಾಣಿಸಿಕೊಳ್ಳಲೇ ಇಲ್ಲ. ಕಂಡ ಲೋಕಕ್ಕಿಂತ ಕಾಣದ ಲೋಕದ ಒಡವೆಗೆ ಕೈಚಾಚುವ ಭಾರತೀಯರ ಮನಸ್ಥಿತಿ ಉದ್ದಕ್ಕೂ ಕೆಲಸ ಮಾಡಿರುವುದನ್ನು ಕಾಣಬಹುದಾಗಿದೆ.

ಇಂಡಿಯಾದಲ್ಲಿ ಹಳ್ಳಿಯಿಂದ ದಿಲ್ಲಿಯವರೆಗೂ ಬೃಹತ್ ಕಟ್ಟಡಗಳಿವೆ, ಐತಿಹಾಸಿಕ ತಾಣಗಳಿವೆ, ಸುಂದರ ಉದ್ಯಾನವನಗಳಿವೆ, ಜಲಾಶಯಗಳಿವೆ, ಅಣೆಕಟ್ಟುಗಳಿವೆ ಮತ್ತು ಕೈಗಾರಿಕಾ ವಲಯಗಳಿವೆ ಹಾಗೂ ವಿಶ್ವಶ್ರೇಷ್ಠ ನೆಲೆಗಳಿವೆ. ಇವುಗಳ ನಿರ್ಮಾಣದ ಹೊಗಳುವಿಕೆಯಲ್ಲಿ ಕಟ್ಟಿಸಿದವನನ್ನೋ ಅಥವಾ ಕಟ್ಟಲಿಕ್ಕೆ ನೀಲಿನಕ್ಷೆ ಹಾಕಿಕೊಟ್ಟವನನ್ನೋ ಕೊಂಡಾಡಲಾಗುತ್ತದೆ, ಪ್ರಶಸ್ತಿ ಪುರಸ್ಕಾರಗಳನ್ನು ನೀಡಲಾಗುತ್ತದೆ. ಆದರೆ ಇವರ ಬೌದ್ಧಿಕತೆಗೆ ವಿರುದ್ಧವಾಗಿ ಆ ಕಟ್ಟಡ ಕಟ್ಟಿದವರ ಹೆಸರು ಎಲ್ಲಿಯೂ ಪ್ರಸ್ತಾಪವಾಗುವುದೇ ಇಲ್ಲ. ಏಕೆಂದರೆ ಇಲ್ಲಿನ ಸಂಸ್ಕೃತಿ ಚಿಂತಕರಿಗೆ ತಲೆ ಮುಖ್ಯವೇ ಹೊರತು ದೇಹವಲ್ಲ. ಈ ಬೌದ್ಧಿಕ ಸಂಸ್ಕೃತಿಯ ಆರಾಧನೆಯಿಂದಾಗಿಯೇ ಕನ್ನಂಬಾಡಿ ಜಲಾಶಯದ ನಿರ್ಮಾಣದಲ್ಲಿ ವಿಶ್ವೇಶ್ವರಯ್ಯನನ್ನೋ, ತಾಜಮಹಲ್ ಹೇಳುವಾಗ ಷಹಜಹಾನನನ್ನು, ಮತ್ತೊಂದು ಹೇಳುವಾಗ ಮತ್ತೊಬ್ಬರನ್ನು ಹಾಡಿ ಹೊಗಳಿ, ಇತಿಹಾಸದ ಪುಟಗಳಲ್ಲಿ ಶಾಶ್ವತವಾಗಿ ನೆಲೆಗೊಳ್ಳುವಂತೆ ನೋಡಿಕೊಳ್ಳಲಾಗುತ್ತಿದೆ. ಆದರೆ ಇಂತಹ ಚಿಂತನೆಗೆ 'ನೆಲದಿಂದ ನೆಗೆದ ಮಹಲಿಗೆಲ್ಲ ಆಧಾರವಾದ' ಎನ್ನುವ ದಲಿತ

ಕಾವ್ಯ ಜಗತ್ತಿನಲ್ಲಿ ಬೌದ್ಧಿಕ ಸಂಸ್ಕೃತಿಯಷ್ಟೇ ಶ್ರೇಷ್ಠವಲ್ಲ. ದುಡಿಮೆ ಸಂಸ್ಕೃತಿಯೂ ಶ್ರೇಷ್ಠ. ಹಾಗೆಯೇ ದುಡಿಮೆಯ ಸಹಾಯವಿಲ್ಲದ ಬೌದ್ಧಿಕತೆ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ ಎಂಬುದನ್ನು ಹೇಳುತ್ತಿದೆ. ಇದು ವಿಜ್ಞಾನ ಪ್ರಪಂಚಕ್ಕೂ ಅನ್ವಯಿಸುತ್ತದೆ.

ಇಂತಹ ಒಂದು ವಿಸ್ಮೃತಿಗೆ ಒಳಗಾದ ಇತಿಹಾಸವನ್ನು ಹೆಕ್ಕಿ ತೆಗೆಯಬೇಕಿದೆ. ಆ ಮೂಲಕ ಗತಕಾಲದ ಎಳೆಗಳೊಂದಿಗೆ ಇಂದಿನ ಬದುಕನ್ನು ಹೆಣೆದು ಹೊಸತನದ ನಿರ್ಮಾಣಕ್ಕೆ ಹಾತೊರೆಯುವ ಮನಸ್ಸು ಇವರದು. ಚರಿತ್ರೆಯ ಪುಟಗಳಲ್ಲಿ ಕಾಣದೆ ಕುಳಿತ ವಾಸ್ತವವನ್ನು ಕಣ್ಣೆದುರು ತಂದು ಭೂತಕಾಲದಲ್ಲಿ ಅಸ್ಪೃಶ್ಯರಿಗಾದ ಶೋಷಣಾ ನೆಲೆಗಳನ್ನು ಗುರುತಿಸಿ ಅವುಗಳನ್ನು ಮಂಡಿಸುತ್ತಲೇ ಅವುಗಳ ಬಿಡುಗಡೆಗಾಗಿ ಹಾತೊರೆಯುವುದು ದಲಿತ ಕಾವ್ಯದ ರಾಜಕೀಯ ಆಶಯಗಳಲ್ಲಿ ಬಹುಮುಖ್ಯವಾದುದು. ಮೇಲಿನ ಕವನದ ಸಾಲುಗಳು ಮುಂದುವರಿದು;

ಕೊನೆಗೊಮ್ಮೆ ವಟ್ಟರಿಸಿ
ನಮ್ಮಪ್ಪ ಮಹಲುಗಳ ಹುಟ್ಟು
ಕುಟ್ಟಿ ಪುಡಿ ಪುಡಿ ಮಾಡಲು ಸಿದ್ಧನಾದದ್ದು
ಹುಚ್ಚು ಹೊಳೆಯಾಗಿ ಹರಿಯ ಹತ್ತಿದ್ದು
ಯಾಕೆಂದು
ಇನ್ನುತನಕ ಯಾರೂ ಬರೆದಿಲ್ಲ
ನಾನೇ ಬರೆಯುತ್ತೇನೆ
ನಾನೇ ಬರೆಯುತ್ತೇನೆ
ನಾನೀಗ ಬರೆಯಹತ್ತಿದ್ದೇನೆ[೨೨]

ಇಲ್ಲಿ 'ನಾನೇ ಬರೆಯುತ್ತೇನೆ' ಎಂಬ ತೀವ್ರ ಒತ್ತಡ ದಲಿತ ಕವಿಗಿದೆ. ಇದು ಅವರ ಸಾಮಾಜಿಕ ಒತ್ತಡವೇ ಹೊರತು, ಸಾಂಸ್ಕೃತಿಕ ಒತ್ತಡವಲ್ಲ. ಏಕೆಂದರೆ ದಲಿತರ ಬಿಡುಗಡೆ ದಲಿತರಿಂದ ಮಾತ್ರ ಸಾಧ್ಯ ಎಂಬ ಅಗಾಧ ನಂಬಿಕೆ ಹಾಗೂ ದಲಿತರು ಮಾತ್ರ ದಲಿತರ ನೋವುಗಳನ್ನು ಮಂಡಿಸಬಲ್ಲ ಅನುಭವ ಮತ್ತು ಅದರಿಂದ ಎಚ್ಚರಗೊಳಿಸುವ ತಾಕತ್ತು ಇರುತ್ತದೆಂಬ ಅಗಾಧ ಒಲವು ದಲಿತರನ್ನು ಅಕ್ಷರ ಮುಖೇನ ನೋವುಗಳನ್ನು, ಪ್ರತಿಭಟನೆಗಳನ್ನು ಹೊರಹಾಕುವಂತೆ ಮಾಡಿತು.

ಬರೆಯುವುದು ಕೇವಲ ಆತ್ಮಸಾಕ್ಷಾತ್ಕಾರಕ್ಕಾಗಿ ಅಲ್ಲ ಎಂಬುದನ್ನು ದಲಿತ ಕಾವ್ಯ ಪ್ರತಿಪಾದಿಸಿತು. ನೋವುಂಡವರಿಂದ ಮಾತ್ರ ನೋವಿನ ಸೂಕ್ಷ್ಮಗಳು ಹೊಮ್ಮಲು ಸಾಧ್ಯ ಎಂಬುದನ್ನು ಮನಗಂಡ ಅಕ್ಷರ ಕಲಿತ ದಲಿತರು ಚರಿತ್ರೆ, ಪುರಾಣ, ಪರಂಪರೆ, ವಾಸ್ತವ

ಮುಂತಾದವುಗಳ ಅಧೀನದಿಂದ ಸ್ವಾತಂತ್ರ್ಯಗೊಳ್ಳಲು ಮುಂದಾದರು. ಪುರಾಣ ಮತ್ತು ಪರಂಪರೆಗಳ ಮೂಲಕ ಯಾವುದನ್ನು ಶ್ರೇಷ್ಠ ಎನ್ನಲಾಗಿತ್ತೋ, ಅದರ ವಿರುದ್ಧ ನೆಲೆಯಲ್ಲಿ ನಿಂತು ಅದು ಶ್ರೇಷ್ಠ ಅಲ್ಲ ಹೇಗೆ? ಎಂಬುದನ್ನು ದಲಿತ ಕಾವ್ಯ ಪ್ರತಿಪಾದಿಸಿತು.

ಭಾರತಕ್ಕೊಂದು ಇತಿಹಾಸವಿದೆ ಅದು ರಾಜ ರಾಣಿಯರ ಕತೆಗಳನ್ನು ಒಳಗೊಂಡಿದೆ. ರಾಜನ ರಾಜ್ಯಭಾರಕ್ಕೆ ಪ್ರಾಣ ಕೊಟ್ಟು ರಾಜ್ಯಕ್ಕಾಗಿ ತಮ್ಮ ತನುಮನಗಳನ್ನು ಅರ್ಪಿಸಿದ ಸೈನಿಕ ವರ್ಗ ಮಾತ್ರ ಈ ಇತಿಹಾಸದ ಪುಟಗಳಲ್ಲಿ ದಾಖಲಾಗಲೇ ಇಲ್ಲ. ಹಾಗೆಯೇ ಶತಮಾನಗಳಿಂದ ತಮ್ಮ ದುಡಿಮೆ ಎಲ್ಲವನ್ನೂ ಉಳ್ಳವರ ಉಳಿವಿಗಾಗಿಯೇ ತ್ಯಾಗ ಮಾಡಿದ ದಲಿತರ ಚಿತ್ರಣ ಎಲ್ಲಿಯೂ ಕಾಣ ಸಿಗುವುದೇ ಇಲ್ಲ. ಇವರ ದುಡಿಮೆಯನ್ನು ತಿಂದ ವರ್ಗ ಮಾತ್ರ ಅಂದಿನ ಚರಿತ್ರೆ ಪುಟಗಳಿಂದ ಹಿಡಿದು ಇಂದಿನ ಆಧುನಿಕ ಮಾಧ್ಯಮಗಳವರೆಗೂ ಕಾಣಿಸಿಕೊಳ್ಳುತ್ತದೆ. ಆದರೆ ಇದೆಲ್ಲದರ ವಂಚನೆ ವಿರುದ್ಧ ದಲಿತರ ಅಸ್ತಿತ್ವವನ್ನು ಪುನರ್ ಸ್ಥಾಪಿಸುವ ಪ್ರಕ್ರಿಯೆ ದಲಿತರಿಂದಲೇ ಸಾಗಬೇಕು. ದಲಿತರ ವಸ್ತುಸ್ಥಿತಿ ದಲಿತರಿಂದಲೇ ಆಗಬೇಕು. ಆಗಲೇ ಅದಕ್ಕೊಂದು ಬೆಲೆ ಬರುವುದು.

....

ಬಿಲ್ಲು ವಿದ್ಯೆ ಕಲಿಯಲು ಹಂಬಲಿಸಿದಾಗ
ಏಕಲವ್ಯನಿಗೆ ನಿರಾಕರಿಸಿದ ಕುಲದ ನೆಪ
ಮೂರ್ತಿಯನ್ನಿಟ್ಟು ಕಲಿತ ವಿದ್ಯೆಯನು
ಶಿಷ್ಯ ದಕ್ಷಿಣೆಗೆ ಹೆಬ್ಬೆರಳ ಕೊಟ್ಟು

ಶಂಬೂಕನ ತಪಸ್ಸು ರಾಜನಿಗೆ ದೂರು
ಹಾರುವ ಮನಸ್ಸಿಗೆ ಸಂಕಟ
ರಾಜನ ಕೈಯಲ್ಲಿ ಕತ್ತಿಯ ಹಿಡಿಸಿದರು
ಶಂಬೂಕನ ತಲೆ ಕಡಿಸಿದರು
ರಾಜನಿಗೆ ಎದುರಿಲ್ಲ
ಹಾರುವರಿಗೆ ದಯೆ ಇಲ್ಲ[೨೩]

ರಾಮಾಯಣ ಮಹಾಭಾರತಗಳು ನಮ್ಮ ಪವಿತ್ರ ಗ್ರಂಥಗಳು ಹಾಗೂ ಧರ್ಮಗ್ರಂಥಗಳು. ಅವುಗಳು ಪ್ರಶ್ನಾತೀತವಾದವುಗಳು ಎಂಬ ತಾತ್ವಿಕ ಮೌಲ್ಯವನ್ನು ಎಲ್ಲರ ಮೇಲೂ ಹೇರಲಾಗಿದೆ ಹಾಗೂ ಅವೇ ನಮ್ಮ ಮಹಾಕಾವ್ಯಗಳು ಎಂಬುದನ್ನು ತಲೆಗೆ ತುಂಬಿವೆ. ಆದರೆ ಈ ಧೋರಣೆಯನ್ನು ಅನೇಕ ಪ್ರಗತಿಪರ ಚಿಂತಕರು ತಮ್ಮ ಬರವಣಿಗೆಯ ಮೂಲಕ ಬುಡಮೇಲು ಮಾಡಿದ್ದಾರೆ. ಇದನ್ನು ದಲಿತ ಕಾವ್ಯವೂ ಕೂಡ ಆ ಕಾವ್ಯಗಳೊಳಗಿನ ವರ್ಗ,

ವರ್ಣ, ಮತಗಳಿಂದ ಜರ್ಜರಿತಗೊಂಡ ಪಾತ್ರಗಳನ್ನಾಯ್ದು ತಮ್ಮ ಅಸ್ತಿತ್ವದ ಗುರುತಿನ ಜಾಡು ಹಿಡಿದು ಸನಾತನ ಮೌಲ್ಯ ಯಾವ ರೀತಿ ನಮ್ಮ ಪರಂಪರೆಯನ್ನು ಹೊಸಕಿ ಹಾಕಿತು ಎಂಬುದನ್ನು ಬೆಳಕಿಗೆ ತಂದಿದೆ.

ಏಕಲವ್ಯ, ಶಂಭೂಕ, ಕರ್ಣ, ಕನಕದಾಸ ಮುಂತಾದವರ ಪರಂಪರೆಯ ಜಾಡು ಹಿಡಿದು ಅಸ್ಪೃಶ್ಯತೆ ಆಚರಿಸಿದ ನೆಲೆಗಳನ್ನು ಜನರೆದುರು ಇಟ್ಟರು. ಜಾತಿ, ಮತ, ಧರ್ಮಗಳ ನೆಲೆಯಿಂದ ಯಾವುದನ್ನು ದಲಿತರಿಂದ ವಂಚಿಸಿ, ಅದರಿಂದ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದರೋ ಅದನ್ನು ಪ್ರತಿರೋಧಿಸಿ ದಲಿತ ಕಾವ್ಯ ಸಮಾನತೆಯ ಹಾದಿಗೆ ಕೊಂಡೊಯ್ಯುವ ನೆಲೆಗೆ ತನ್ನನ್ನು ತಾನು ತೆರೆದುಕೊಂಡಿತು.

ಏಕಲವ್ಯ, ಶಂಭೂಕ, ಕರ್ಣನ ಪಾತ್ರಗಳು ಕನ್ನಡ ಸಾಹಿತ್ಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬಳಕೆಯಾಗಿವೆ. ಕುವೆಂಪು ಕೂಡ 'ಬೆರಳ್ಗೆ ಕೊರಳ್' ಮತ್ತು 'ಶೂದ್ರ ತಪಸ್ವಿ' ನಾಟಕಗಳ ಮೂಲಕ ರಾಮಾಯಣ, ಮಹಾಭಾರತಗಳನ್ನು ಹೊಸ ದೃಷ್ಟಿಕೋನದಲ್ಲಿ ನೋಡುವ ಪ್ರಯತ್ನವನ್ನು ಮಾಡಿದ್ದಾರೆ. ಆದರೆ ಹಿಂದೂ ಧಾರ್ಮಿಕ ನೆಲೆಗಟ್ಟಿನ ಹುಳುಕು ಮುಚ್ಚುವ ಪ್ರಯತ್ನದಂತೆ ಕಂಡುಬರುವ ಇವರ ಆಲೋಚನೆಗಳು ಒಂದು ರೀತಿಯಲ್ಲಿ ಆದರ್ಶ ನೆಲೆಗಳನ್ನು ಒತ್ತಾಯಪೂರ್ವಕವಾಗಿ ಹೇರಿದಂತೆ ಕಂಡುಬರುತ್ತದೆ. ಆದರೆ ದಲಿತರು ಇವರ ಮೂಲಕವೇ ಶೋಷಣೆಯ ತೀವ್ರತೆ ಮತ್ತು ಇಂಡಿಯಾಕ್ಕೆ ಆದರ್ಶ ಪುರುಷರೆನಿಕೊಂಡ ದೇವಮಾನವರೊಳಗಿನ ಹುಳುಕುಗಳನ್ನು ತಮ್ಮದೇ ಆದ ಅಭಿವ್ಯಕ್ತಿಗಳಲ್ಲಿ ತೋರಿಸಿಕೊಟ್ಟರು.

ಪ್ರತಿಭೆ ಯಾರ ಸ್ವತ್ತೂ ಅಲ್ಲ
ಯಾರ ಗುತ್ತಿಗೇನೂ ಅಲ್ಲ
ಕವಿ ಕನಕದಾಸ
ಕೃಷ್ಣನ ದರ್ಶನಕೆ ಹೋದಾಗ
ಬಾಗಿಲು ಮುಚ್ಚಿದ ಪ್ರಸಂಗ
ಬಿಡದೆ ಬೆನ್ನತ್ತಿದ ಕನಕದಾಸ
ಅಸ್ಪೃಶ್ಯತೆ ಆಚರಿಸಿದ್ದು ಈಗ ಇತಿಹಾಸ[೨೪]

ಕವಿ ಕನಕದಾಸ ಕೃಷ್ಣನ ದರ್ಶನಕ್ಕೆ ಹೋದಾಗ ಬಾಗಿಲು ಮುಚ್ಚಿ ತಡೆದದ್ದು ಅಸ್ಪೃಶ್ಯತೆ ಆಚರಣೆಯ ಇನ್ನೊಂದು ಮುಖ. ಆದರೆ ಕೃಷ್ಣನು ಗೋಡೆ ಮೂಲಕ ದರ್ಶನ ಕೊಟ್ಟಿದ್ದನ್ನೇ ಹಾಡಿ ಹೊಗಳುವುದರ ಮೂಲಕ ಈ ಆಚರಣೆ ಯಾರ ಗಮನಕ್ಕೂ ಬರದ ಹಾಗೆ ಒಂದು ವರ್ಗ ಅತ್ಯಂತ ಪ್ರಜ್ಞಾಪೂರ್ವಕವಾಗಿ ತನ್ನ ಹಿತಾಸಕ್ತಿಯನ್ನು ಕಾಪಾಡಿಕೊಂಡು ಬಂದಿತ್ತು. ಈ ಘಟನೆ ಮೂಲಕ ಅನೇಕ ಸತ್ಯಗಳನ್ನು ಮುಚ್ಚಿಹಾಕಲಾಗಿತ್ತು. ವಾಸ್ತವವಾಗಿ ಕೃಷ್ಣ

ಪ್ರತ್ಯಕ್ಷನಾಗಲೇ ಇಲ್ಲ. ಒಂದು ವೇಳೆ ಪ್ರತ್ಯಕ್ಷನಾಗಿದ್ದರೆ ಅಸ್ಪೃಶ್ಯತೆಯಿಂದಾಗಿ ಹೊರಗಿದ್ದ ಕನಕದಾಸನನ್ನು ಒಳಗೆ ಕರೆದು ದರ್ಶನ ನೀಡಬಹುದಿತ್ತು ಅಥವಾ ಕನಕದಾಸನ ಬಳಿಗೇ ಬರಬಹುದಿತ್ತು. ಆದರೆ ಕೃಷ್ಣ ಗೋಡೆಯ ಕಿಂಡಿಯ ಮೂಲಕ ದರ್ಶನ ಕೊಟ್ಟಿದ್ದು ಅವನೂ ಕೂಡ ಅಸ್ಪೃಶ್ಯತೆಯ ಆಚರಣೆಗೆ ಕುಮ್ಮಕ್ಕು ನೀಡಿದನೆಂಬ ಆರೋಪವನ್ನು ಅವನೇ ಹೆಗಲಿಗೇರಿಸಿಕೊಂಡಂತಾಗುತ್ತದೆ ಅಥವಾ ಕನಕದಾಸನನ್ನು ನಿಯಂತ್ರಿಸಲು ಪುರೋಹಿತ ವರ್ಗ ಗೋಡೆ ಒಡೆದು ಕೃಷ್ಣನ ವಿಗ್ರಹವನ್ನು ತಿರುಗಿಸಿ ಕನಕದಾಸನ ಭಕ್ತಿಯನ್ನು ದುರುಪಯೋಗ ಪಡಿಸಿಕೊಂಡರೆಂಬ ಗುಮಾನಿಯೂ ಪ್ರಾರಂಭವಾಗುತ್ತದೆ. ಇಷ್ಟೆಲ್ಲಾ ಹುಳುಕುಗಳಿದ್ದರೂ ಕನಕದಾಸನ ಮೂಲಕ ಭಕ್ತಿ ಪರಾಕಾಷ್ಠತೆಯನ್ನು ದಲಿತರ ಮೇಲೆ ತುಂಬುವ ಹುನ್ನಾರ ಮೊದಲಿನಿಂದಲೂ ಸಾಗುತ್ತಲೇ ಬರುತ್ತಿದೆ. ಇದರ ಅಸ್ತಿತ್ವ ನಾಶವಾಗಬೇಕು, ಇಂತಹ ಮೌಲ್ಯಗಳ ನಿರಾಕರಣೆಗೆ ದಲಿತ ಕಾವ್ಯ ಒತ್ತು ನೀಡಿತು.

ಪ್ರತಿಭೆ ಕೆಲವರ ಸ್ವತ್ತು ಎಂದು ಬಿಂಬಿಸಿದ್ದ ವರ್ಗಕ್ಕೆ, ಅದು ಎಲ್ಲರ ಸ್ವತ್ತು ಎಂದು ಹೇಳುತ್ತಲೇ ಹೋರಾಟಕ್ಕೆ ನಿಂತ ದಲಿತರು ಸರ್ವರ ಬದುಕು ಸಮಾನವಾಗಲಿ ಎಂದು ಆಶಿಸಿದರು. ಪ್ರತಿಭೆ ಎಂಬುದು ಹುಟ್ಟಿನ ಹಿನ್ನೆಲೆಯಿಂದ ಬರುವಂತಹುದು. ಸತತ ಸಾಧನೆ, ಪರಿಶ್ರಮ, ಅಭ್ಯಾಸದಿಂದ ಮಾತ್ರ ಪ್ರತಿಭೆಯನ್ನು ಒಲಿಸಿಕೊಳ್ಳಲು ಸಾಧ್ಯ ಎನ್ನುತ್ತಾ ಬೌದ್ಧಿಕ ಸಂಸ್ಕೃತಿಗೆ ಪ್ರಾಧಾನ್ಯತೆ ನೀಡಿದ್ದ ಪಂಡಿತ ವರ್ಗಕ್ಕೆ ದುಡಿಮೆ ಸಂಸ್ಕೃತಿಯ ಮಹತ್ವ ಸಾರುವ ಕೆಚ್ಚನ್ನು ದಲಿತ ಕಾವ್ಯ ತೋರಿತು.

ಪ್ರತಿಭೆಯನ್ನು ಇವತ್ತು ಹಲವು ಮಾನದಂಡಗಳಲ್ಲಿ ಅಳೆಯಲಾಗುತ್ತಿದೆ. ಅಂಕಗಳ ಶ್ರೇಣೀಕರಣದಲ್ಲೋ, ಬಿಲ್ಲುಗಾರಿಕೆಯಲ್ಲೋ, ಓಟದಲ್ಲೋ, ನೆಗೆತದಲ್ಲೋ. ಚೆಂಡನ್ನು ಬಾರಿಸುವುದರಲ್ಲೋ, ಕುಣಿತದಲ್ಲೋ, ಸೊಗಸಾದ ಹಾಡಿನಲ್ಲೋ, ಚಿತ್ರಕಲೆಯಲ್ಲೋ ಮುಂತಾದ ಕಡೆ ಗುರುತಿಸಲಾಗುತ್ತಿದೆ. ಇದು ಆಗಬಾರದೆಂಬ ಅಥವಾ ಇವುಗಳು ಪ್ರತಿಭೆಗಳಲ್ಲ ಎನ್ನುವ ಚರ್ಚೆ ಖಂಡಿತಾ ಇಲ್ಲಿಲ್ಲ. ಆದರೆ ಹೊಲ ಉಳುವುದು, ನಾಟಿ ಮಾಡುವುದು, ಬಂಡೆ ಒಡೆದು ಆಸನ ಮಾಡುವುದು, ಮನೆ ಕಟ್ಟುವುದು, ಮನೆಯೊಳಗಿನ ವಸ್ತುಗಳನ್ನು ಶೃಂಗರಿಸುವುದು, ಕೈಗಳ ಸಹಾಯದಿಂದ ಅದ್ಭುತವಾದ ಕರಕುಶಲ ವಸ್ತುಗಳನ್ನು ತಯಾರಿಸುವುದು ಇವೆಲ್ಲಾ ಈ ಪ್ರತಿಭೆಯೆಂಬ ಪರಿಧಿಯೊಳಗೆ ಬರುವುದೇ ಇಲ್ಲ. ಹಾಗಾದರೆ ಇವು ಕಲೆಯಲ್ಲವೇ, ಇವುಗಳು ಸರ್ವೇಸಾಮಾನ್ಯ ಅನ್ನುವುದಾದರೆ ಓಟವೂ ಕೂಡ ಅದೇ. ಪ್ರತಿಭೆಯನ್ನು ಸಮರ್ಥಿಸಲಿಕ್ಕೆ ಕನಕದಾಸರ ಸಾಹಿತ್ಯವೇ ಬೇಕಿಲ್ಲ. ನಿತ್ಯ ದುಡಿಯುವ ಜನರ ಬದುಕೇ ಸಾಕು.

"ಪರಂಪರೆ ಯಾವಾಗಲೂ ತನ್ನ ಜೊತೆಯಲ್ಲೇ ತನಗೆ ವಿರುದ್ಧವಾದಂತಹ ಪ್ರತಿಪರಂಪರೆಯೊಂದನ್ನು ಎದುರಿಸುತ್ತಲೇ ಬೆಳೆಯುತ್ತಿರುತ್ತದೆ. ಇಂತಹ ಎರಡು ಬಗೆಯ ಪರಂಪರೆಗಳ ಸ್ವರೂಪವನ್ನು ನಾವು 'ಸತ್' ಪರಂಪರೆ ಮತ್ತು 'ಶತೃ' ಪರಂಪರೆ ಎಂಬುದಾಗಿ

ಗ್ರಹಿಸಲು ಸಾಧ್ಯ."[೨೫] ಈ 'ಸತ್' ಪರಂಪರೆಯ ಪರಿಕಲ್ಪನೆಯೇ ದಲಿತರಿಗೆ ತಮ್ಮ 'ಶತೃ' ಪರಂಪರೆ ಯಾವುದು ಎಂಬುದನ್ನು ಗ್ರಹಿಸಲು ಸಾಧ್ಯವಾಯಿತು.

....

ಅಂದು
ಋಷಿಗಳ ರಾಜರ ವೇಷತೊಟ್ಟು
ನೀವು ಮಾಡಿದ ಕರ್ಮಕಾಂಡ ಸಾಕು!
ನಿಮ್ಮ ಪಲ್ಲಕ್ಕಿ ಹೊತ್ತು ಜಯ ಪರಾಕು ಹೇಳಲು
ನಾವೀಗ,
ಅಪ್ಪ ನೆಡಸಿದ ಆಲದ ಮರಕ್ಕೆ
ನೇಣು ಹಾಕಿಕೊಂಡು ಸಾಯುವ ಮೂಢ ಕುಲದವರಲ್ಲ
ಸ್ವತಂತ್ರರು !
ನ್ಯಾಯಕ್ಕೆ ತಲೆಬಾಗಿ ಅನ್ಯಾಯಕ್ಕೆ ಸಿಡಿಮದ್ದಾದ
ನಾವೀಗ ಎಲ್ಲರಿಗೂ ಯಕ್ಷಪ್ರಶ್ನೆ[೨೬]

ನ್ಯಾಯಕ್ಕೆ ತಲೆಬಾಗಿ ಅನ್ಯಾಯಕ್ಕೆ ಸಿಡಿಮದ್ದಾಗುವ ಈ ಜನ ತಮ್ಮ ಅನ್ಯಾಯಗಳಿಗೆ ಕಾರಣಕರ್ತರಾದವರನ್ನು ಮೊದಲು ಬಯಲು ಮಾಡಲು ಪ್ರಯತ್ನಿಸಿದರು. ಇದರ ಫಲವೇ ರಾಜ, ಋಷಿ, ಮತಾಂಧರ ಒಳಗಿನ ಮರ್ಮ ಅರಿಯಲು ಸಾಧ್ಯವಾಯಿತು. ಆಳುವ ವರ್ಗ ಯಾವುದನ್ನು ಜನತೆಯ ತಲೆಗೆ ತುಂಬಿ ಶೋಷಣೆಯನ್ನು ಮುಂದುವರಿಸಿತ್ತೊ ಅದನ್ನು ಮುಕ್ತಗೊಳಿಸಿ, ಬಹುಪರಾಕ್ ಹಾಕುವ ಬದಲು ಧಿಕ್ಕಾರ ಕೂಗಿ, ತನ್ನ ಹಸಿವು ಅವಮಾನಗಳನ್ನು ಜನತೆಯ ದನಿಯಲ್ಲಿ ಕೂಗಿ ಎಲ್ಲರಿಗೂ ತಿಳಿಸುತ್ತಾ ಸತತ ಹೋರಾಟದೊಂದಿಗೆ ಸಮಾನತೆಯ ಹಾದಿ ಹಿಡಿಯುವುದೇ ಶೋಷಿತರ ಮುಖ್ಯ ರಾಜಕೀಯ ತತ್ವ.

'ನ್ಯಾಯ' ಎನ್ನುವ ಪರಿಕಲ್ಪನೆ ದಲಿತರಿಂದ ಬಂದುದಲ್ಲ. ಏಕೆಂದರೆ ಇಕ್ರಲಾ, ವದೀರ್ಲಾ ಎನ್ನುವಾಗ; ಸೆರಗು ಸೊಂಟಕ್ಕೆ ಸುತ್ತಿಕೋ, ತಂಗ್ಯವ್ವ ಕುಡಗೋಲು ಕೈಗೆತ್ತಿಕೋ ಎನ್ನುವಾಗ; ಚೋಮನಿಗೆ ಭೂಮಿ ಕೊಡಲು ನಿರಾಕರಿಸುವ ಸಂಕಪ್ಪನ ಕುಟುಂಬಕ್ಕೂ, ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಬರುವ ಹೊನ್ನಾಳಿ ಹೊಡ್ತಕ್ಕೂ, ಕುಸುಮಬಾಲೆ ಕಾದಂಬರಿಯಲ್ಲಿ ಗಾರಸಿದ್ಮಾವ ಎಳನೀರು ಕದ್ದು ಹೊಡೆಸಿಕೊಳ್ಳುವುದಕ್ಕೂ ಹಲವು ನ್ಯಾಯದ ಪರಿಕಲ್ಪನೆಗಳು ಇವೆ. ಇಲ್ಲಿ ಯಾವುದು ಸಾಮಾಜಿಕ ನ್ಯಾಯ ಎಂದು ಯೋಚಿಸಿದಾಗ ಅವರವರ ದೃಷ್ಟಿಕೋನದಲ್ಲಿ ಅದೇ ಸಾಮಾಜಿಕ ನ್ಯಾಯ. ಈ ಚರ್ಚೆಯನ್ನು ವಿಸ್ತರಿಸುವುದಾದರೆ

ದುಡಿಯುವ ನೆಲೆಯಲ್ಲಿ ನಿಂತು ದುಡಿಮೆಯ ಪ್ರತಿಫಲವನ್ನು ಉಣ್ಣುವ ದುಡಿಯದವರ ಹಿತಾಸಕ್ತಿ ಕೊನೆಗಾಣಿಸಲು ಹೋರಾಟವೊಂದೇ ದಾರಿ. ಇದು ಶೋಷಿತರ ಸಾಮಾಜಿಕ ನ್ಯಾಯ.

ಹಸಿವು ಅವಮಾನಗಳು ಶೋಷಿತರ ಬಹುಮುಖ್ಯ ಕೊರತೆಗಳು. ಈ ಕೊರತೆಗಳನ್ನು ತನ್ನ ಜನರಿಗೆ ತಿಳಿಸುತ್ತಲೇ ಅದಕ್ಕೆ ಕಾರಣಕರ್ತರ ವಿರುದ್ಧ ತನ್ನ ಧಿಕ್ಕಾರದ ದನಿಯನ್ನು ನಿರಂತರವಾಗಿ ಕೂಗುತ್ತಾ ಅವುಗಳಿಗೆ ಪರಿಹಾರ ಕಂಡುಕೊಳ್ಳಬೇಕೆಂಬ ತುಡಿತ ಶೋಷಿತರ ರಾಜಕೀಯ ನಿಲುವು.

ಕುಂತ ಮನಗಳೆ
ನಿಂತ ಮನಗಳೆ
ಕೇಳದೆ ಹೊಸನುಡಿ
ಕಾಣದೆ ಕೆಂಗಿಡಿ
ಹೋರಾಟವೆ ದಾರಿ

ಕೊನೆಗಾಣದ ಬಾಳಿನ ಗೋಳಿಗೆ
ಹೋರಾಟವೆ ದಾರಿ
ಭಿಕ್ಷಾನ್ನಕೆ ಕೈಯನು ಒಡ್ಡುವ
ಕೈಗಳು ಕೊಳೆಯುವವು
ಬೇಡುವ ನೀಡುವ ಜಾಲದಂತ್ಯದಲಿ
ಸೌಖ್ಯದ ನಾಡುದಯ
ಸಮ ಸೌಖ್ಯದ ನಾಡುದಯ
ಕಪ್ಪು ಕತ್ತಲೆಯ ಕಗ್ಗವಿಯಲ್ಲಿ
ಕೆಂಪು ಬೆಳಕಿನ ಕಿರಣಗಳು
ಸರಪಳಿ ಕಿತ್ತ ಕೆಂಪು ದಾರಿಯಲಿ
ಕೋಟಿ ಕಂಠಗಳ ಸಾಲುಗಳು[೨೭]

ಶೋಷಿತ ವ್ಯವಸ್ಥೆಯ ಕೊನೆಗಾಣದ ಬಾಳಿಗೆ ಹೋರಾಟವೆ ದಾರಿಯಾಗಿದೆ. ರಾಜಕಾರಣದಲ್ಲಿ ಎರಡು ರೀತಿಯ ರಾಜಕಾರಣವಿದೆ. ಒಂದು ಶೋಷಕರ ರಾಜಕಾರಣ ಮತ್ತೊಂದು ಶೋಷಿತರ ರಾಜಕಾರಣ. ಇವೆರಡರ ನೆಲೆಗಳು ಒಂದೇ. ಅಸ್ತಿತ್ವ ಒಂದೇ. ಆದರೆ ಪರಿಣಾಮಗಳು ಮಾತ್ರ ಬೇರೆ ಬೇರೆ. ಶೋಷಕರು ನಿರಂತರವಾಗಿ ತಾವು

ಮೇಲ್ಪದರದಲ್ಲೇ ಇರಬೇಕೆಂಬ ತವಕ ಅವರದು. ಅಂದರೆ ಕಾನೂನು ಕಟ್ಟಳೆ, ಧರ್ಮ, ಶಾಸ್ತ್ರ ಮುಂತಾದವುಗಳನ್ನು ತಮಗೆ ಹೇಗೆ ಬೇಕೋ ಹಾಗೆ ತಿರುಚಿಕೊಂಡು ಸದಾ ಆಳುವ ವರ್ಗವಾಗಿ ಮಾರ್ಪಾಡುಗೊಂಡು ತಮ್ಮ ಆಳುವ ಹಕ್ಕಿಗೆ ಮೆಟ್ಟಿಲುಗಳನ್ನಾಗಿ ಶೋಷಿತರನ್ನು ಸದಾ ಶೋಷಿತ ನೆಲೆಯಲ್ಲೇ ಇರಿಸಿ, ಅವರ ಉತ್ಪಾದನೆಯನ್ನು ಸದಾ ಅನುಭವಿಸುತ್ತಾ, ವರ್ಗ, ವರ್ಣ, ಜಾತಿಯ ತಾರತಮ್ಯಗಳು ಸದಾ ನೆಲೆ ನಿಲ್ಲುವಂತೆ ಮಾಡಿ, ತಾವು ಉತ್ಪಾದಕರಂತೆ ಪ್ರತಿಬಿಂಬಿಸಿ, ಮೂಲಭೂತ ಸವಲತ್ತುಗಳನ್ನೆಲ್ಲಾ ಅನುಭವಿಸುತ್ತಾ ದರ್ಪದಿಂದ ಮೆರೆಯುವುದು ಶೋಷಕರ ರಾಜಕಾರಣ. ಆದರೆ ಇದನ್ನೆಲ್ಲಾ ಬುಡಮೇಲು ಮಾಡಿ ಅವುಗಳ ವಿರುದ್ಧ ನಿರಂತರವಾಗಿ ಹೋರಾಡುತ್ತಾ, ಅವುಗಳನ್ನೆಲ್ಲಾ ಬದಲಾಯಿಸಬೇಕೆಂಬ ದೃಢ ಸಂಕಲ್ಪ ಶೋಷಿತರ ರಾಜಕಾರಣ. ಶೋಷಕರಿಗೆ ಶೋಷಣೆ ಮಾಡುವುದೇ ಕಾಯಕವಾದರೆ ಶೋಷಿತರಿಗೆ ಆ ಶೋಷಣೆಗೆ ಧಿಕ್ಕಾರ ಕೂಗಿ ಹೋರಾಡುವುದೆ ಕಾಯಕ. ಈ ಶೋಷಣೆ ತೀವ್ರತರವಾಗಿ ಕಾಡತೊಡಗಿದಾಗ ಶೋಷಣೆಗೊಳಗಾದ ಮನುಷ್ಯರಿಂದ ಹೊರಡುವ ಮಾತುಗಳು ಈ ಕೆಳಗಿನಂತೆ ಮೂಡುತ್ತವೆ.

ಕ್ವರುಗ್ತಿನಿ ಕ್ವನೆಗೊಂದ್ಸಲ ಕೂಗ್ತಿನಿ
ಬಡ್ಡೀ ದುಡ್ನೋನ್ ಬಂಗ್ಲೆ ಕ್ಯಳ್ಗೆ
ತಳಾದೀಗ್ ಸಿಕ್ಕಿರೋ ಮೂಳೆ
ನೆಲನಾಸ್ಕಂಡು ಬಾಣಾನೊದ್ಕಂಡು
ಈ ಮಿಂಡ್ರುಗುಟ್ಟೋರ್ ಚಂದಾಗ್ ಬದ್ಕಾಕ್
ದುಡ್ದು ಮೂಳೆ ಆಗಿ ಕ್ವಳಿತಿದಿನಿ[೨೮]

"ಶೋಷಿತರ ರಾಜಕಾರಣಕ್ಕೆ ಹೋರಾಟವೇ ಜೀವಾಳ"[೨೯] ಈ ಹೋರಾಟ ನಿರಂತರವಾಗಿ ಕಾಪಾಡಿಕೊಂಡು ದುಡಿವವರ ಸಾರ್ವಭೌಮಾಧಿಕಾರ ಸ್ಥಾಪಿಸುವ ನೆಲೆಯೇ ಇವರದು. ಅದಕ್ಕೆ ೭೦ರ ದಶಕದ ಆರಂಭದ ದಿನಗಳಲ್ಲಿ ದಲಿತ ಕಾವ್ಯ ಮಾರ್ಕ್ಸ್‌ನ ತತ್ವಗಳಿಂದ ಪ್ರೇರೇಪಿತಗೊಂಡದ್ದು. "ಸಮಾಜವಾದಿ ಕ್ರಾಂತಿ ಬರುವುದನ್ನು ಕಂಡು ಆಳುವ ವರ್ಗಗಳು ತತ್ತರಿಸಲಿ, ಕಾರ್ಮಿಕ ವರ್ಗಕ್ಕೆ ಕಳೆದುಕೊಳ್ಳಲು ಉಳಿದಿರುವುದು ದಾಸ್ಯದ ಸಂಕೋಲೆಗಳಷ್ಟೇ. ಆದರೆ ಪಡೆಯಲು ಸಮಸ್ತ ಜಗತ್ತೇ ಇದೆ. ಎಲ್ಲ ದೇಶಗಳ ಶ್ರಮಜೀವಿಗಳೇ ಒಂದಾಗಿ."[೩೦] ಮಾರ್ಕ್ಸ್‌ನ ಈ ಹೇಳಿಕೆ ದಲಿತರಿಗೆ ಖಡ್ಗಾಯುಧವಾಗಿ ಪರಿಣಮಿಸಿತು. "ಖಡ್ಗವಾಗಲಿ ಕಾವ್ಯ ; ಜನರ ನೋವಿಗೆ ಮಿಡಿವ ಪ್ರಾಣ ಮಿತ್ರ"[೩೧] ಎಂಬ ಘೋಷಣೆ ಬರಲು ಮಾರ್ಕ್ಸ್‌ನ ಚಿಂತನೆಯೇ ಕಾರಣ. ಬಡ್ಡಿ ಚಕ್ರಬಡ್ಡಿಗಳ ನೆಪದಿ ಜೀತಗಾರಿಕೆಯನ್ನು ತಲೆತಲಾಂತರದಿಂದ ಹೇರಿ ದುಡಿಮೆಯ ಪ್ರತಿಫಲವನ್ನೆಲ್ಲಾ ಕೂತುಣ್ಣುವ ಜನತೆಯ

ವಿರುದ್ಧವಾಗಿ ಧಿಕ್ಕರಿಸಿದಾಗ ಮೇಲಿನ ಕವನದ ಸಾಲುಗಳು ಉತ್ಪತ್ತಿಯಾಗುತ್ತವೆ. ತಳಾದೀಗ್ ಸಿಕ್ಕಿರೋ ಮೂಳೆ ಅಲುಗಾಡಿದಾಗ ಮಹಡಿ ಮನೆ ನೆಲಸಮವಾಗೋ ರೀತಿಯ ಹೋರಾಟ ದುಡಿಮೆಗಾರರದ್ದು. ಶೋಷಿತರದ್ದು. ತಮ್ಮ ಸಂಕೋಲೆಗಳನ್ನು ತಾವೇ ಬಿಡಿಸಿಕೊಳ್ಳಬೇಕೆಂಬ ನಿಲುವು ಅವರದು.

ಈ ಸಂಕೋಲೆಯ ಬಂಧನಗಳು ದಲಿತರ ಹುಟ್ಟಿನಿಂದಲೇ ಪ್ರಾರಂಭವಾಗುತ್ತವೆ. 'ಮಕ್ಕಳು ದೇವರಿಗೆ ಸಮಾನ' ಎಂದು ಹೇಳುವ ಇಲ್ಲಿನ ಆಳುವ ವರ್ಗದವರು ಜೀತದ ಮಕ್ಕಳ ಕುರಿತು ಒಂದು ದನಿಯನ್ನೂ ತೆಗೆಯುವುದಿಲ್ಲ. ದೇಶದ ಸಮಸ್ತವನ್ನು ಹಿಡಿಹಿಡಿಯಾಗಿ ಕೊಂಡಾಡುವ ಇಲ್ಲಿನ ಕೆಲವು ಚಿಂತಕರಿಗಂತೂ ಇದರ ಬಗ್ಗೆ ಗಮನವೇ ಹೋಗುವುದಿಲ್ಲ. ದಲಿತರ ಹುಟ್ಟಿನಿಂದಲೇ ಪ್ರಾರಂಭವಾಗುವ ಶೋಷಣೆಯನ್ನು ಕವನ ಬಿಚ್ಚಿಡುವುದು ಹೀಗೆ;

ಯಾರದೋ ಮಳಿಗೆಯಲಿ
ಇನ್ಯಾರದೋ ಕೊರಳ ತಬ್ಬಿ ಮಲಗಿದ
ಚಿಣ್ಣನಿವ
ಹೊತ್ತಾರೆ ಎದ್ದು ಏಳದವನ ಒದ್ದು
ಹೆಗಲಿಗೊಂದು ಚೀಲ ಏರಿಸಿ
ನಡೆದೇ ಬಿಡುವ ಗಲ್ಲಿ ಗಟಾರಗಳ ಹಾದು[೩೨]

ಇಂಡಿಯಾದಲ್ಲಿ ದಿನಬೆಳಗಾದರೆ ಅನೇಕ ಚಳುವಳಿಗಳು ನಡೆಯುತ್ತಿರುತ್ತವೆ. ಪ್ರಗತಿಪರರೆನಿಸಿಕೊಂಡಿರುವವರು, ವಿಚಾರವಾದಿಗಳು, ಚಿಂತಕರು, ದಾರ್ಶನಿಕರು, ಚಳುವಳಿಗಾರರು ಒಂದಲ್ಲಾ ಒಂದು ಹೋರಾಟದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವವರೇ. ದೇಶಕ್ಕಾಗಿಯೋ, ಭಾಷೆಗಾಗಿಯೋ, ಸಂಸ್ಕೃತಿಗಾಗಿಯೋ, ಧರ್ಮಕ್ಕಾಗಿಯೋ, ಯಾರೋ ಹೇಳಿದ ಅವಮಾನಕರ ಮಾತುಗಳಿಗಾಗಿಯೋ, ಯಾವುದೋ ಕೃತಿಯ ಮುಟ್ಟುಗೋಲು ಮಾಡಲೋ ಮುಂತಾದವುಗಳಿಗಾಗಿ ಹೋರಾಟಗಳು ನಡೆಯುತ್ತಲೇ ಇವೆ. ಆದರೆ ಈ ಪ್ರಗತಿಪರ ಎನಿಸಿಕೊಂಡವರಿಗೆ ದಲಿತರ ಜೀತಪದ್ಧತಿಯಾಗಲೀ, ದೌರ್ಜನ್ಯವಾಗಲೀ, ದಲಿತ ಮಹಿಳೆಯ ಅತ್ಯಾಚಾರವಾಗಲೀ, ದಲಿತ ಮಕ್ಕಳು ಮಾಡುವ ಕೂಲಿಯಾಗಲೀ ಯಾವುದೂ ಮುಖ್ಯವೆನಿಸುವುದಿಲ್ಲ ಮತ್ತು ಇದರ ವಿರುದ್ಧ ಪ್ರತಿಭಟಿಸುವುದಾಗಲೀ, ಹೋರಾಟ ಮಾಡುವುದಾಗಲೀ, ಉಪವಾಸ ಕೂರುವುದಾಗಲೀ ಇವರಿಂದ ಸಾಧ್ಯವಾಗುವುದಿಲ್ಲ. ಆದರೆ ನಾವು ಬಡವರ ಪರ ಎಂಬುದನ್ನು ಮಾತ್ರ ಪ್ರತಿನಿತ್ಯ ಪ್ರಚಾರ ಪಡೆದುಕೊಳ್ಳುವ ಹುನ್ನಾರ ನಡೆಸುತ್ತಲೇ ಇರುತ್ತಾರೆ.

ಕುಟುಂಬ ಸಮೇತ ದುಡಿದರೂ ತೀರದ ಸಾಲದ ಕೂಪಕ್ಕೆ ಬಿದ್ದ ಶೋಷಿತರು, ಸತತ ದುಡಿಮೆಯ ಪ್ರತಿಫಲವನ್ನು ಒಡೆಯನಿಗೆ ಅರ್ಪಿಸಿ, ಬರೀ ಗಂಜಿಯಿಂದ ಜೀವನ ನಡೆಸುವ ಸ್ಥಿತಿಗೆ ತಲುಪಿದರು. ಇದೆಲ್ಲವನ್ನು ಅಕ್ಷರ ಕಲಿತ ದಲಿತರು ಜನತೆಯ ನೆಲೆಯಲ್ಲಿ ನಿಂತು ವಿವರಿಸಿ, ಜನತೆಯ ಮನದಾಳಕ್ಕೆ ತಲುಪಿಸಲು ಅಕ್ಷರ ರೂಪ ಕೊಟ್ಟರು. ಈ ಅಕ್ಷರದೊಂದಿಗೆ ಮನಮನಗಳಲ್ಲಿ ಕ್ರಾಂತಿ ತುಂಬಿ ಬದಲಾವಣೆಯ ನಿಟ್ಟಿಗೆ ಕೊಂಡೊಯ್ಯುವ ಪರಿಶ್ರಮ ತೋರಿದರು.

ಅಕ್ಷರ, ಅಧಿಕಾರ, ಸಂಪತ್ತು, ಭೂಮಿ ಇವು ಶೋಷಿತರಿಂದ ದೂರ ಇರುವಂತೆ ಕೆಲವೊಂದು ವರ್ಗ ಕಾಪಾಡಿಕೊಂಡು ಬಂದಿತ್ತು. ಶೋಷಕ ವರ್ಗ ಇವುಗಳಿಂದಾಗಿಯೇ ತನ್ನ ದೌರ್ಜನ್ಯ ದಬ್ಬಾಳಿಕೆಯನ್ನು ಅನುಸರಿಸುತ್ತಾ ಬಂದಿತು. ಅದರಲ್ಲೂ ಅಧಿಕಾರ, ಭೂಮಿ, ಸಂಪತ್ತು ಯಾರ ಬಳಿ ಇರುತ್ತವೋ ಅವರು ಜಗತ್ತನ್ನೆ ತಮ್ಮ ಕಪಿಮುಷ್ಟಿಯಲ್ಲಿಟ್ಟು ನಡೆಸಬಲ್ಲರು. ಇಂಡಿಯಾದಾದ್ಯಂತ ಆಗಿದ್ದು ಇದೆ. ಧರ್ಮ, ಜಾತಿ, ಮತಗಳ ಹೆಸರಿನಲ್ಲಿ ಆಸ್ತಿ ಸಂಪತ್ತನ್ನು ಗಳಿಸಿದ ಶೋಷಕ ವರ್ಗ ಶೋಷಣೆಯನ್ನು ತೀವ್ರತರವಾಗಿ ಸಂಪತ್ತು ರಹಿತ ಜನತೆಯ ಮೇಲೆ ನಡೆಸುತ್ತಾ ಬಂದಿದೆ. ಇವರ ಬೆವರಿನ ಹನಿ ಭೂಮಿ ಮೇಲೆ ಬೀಳದಿದ್ದರೂ ಕೂಡ ಸಂಪತ್ತಿನ ಒಡೆಯರು ಮಾತ್ರ ನಾವೇ ಎಂದು ಪ್ರಜ್ಞಾಪೂರ್ವಕವಾಗಿ ಎಲ್ಲರ ತಲೆಗೆ ತುಂಬಿದ್ದಾರೆ. ಎಲ್ಲಿ ಸಂಪತ್ತು ಕ್ರೋಢೀಕರಣ ಗೊಳ್ಳುತ್ತದೋ ಅಲ್ಲಿ ದೌರ್ಜನ್ಯ ದಬ್ಬಾಳಿಕೆ ಸಾಧ್ಯ. ಆದರೆ ಈ ದೌರ್ಜನ್ಯಕ್ಕೆ ಒಳಗಾಗುವವರು ಯಾವುದೋ ಅಜ್ಞಾತ ಸ್ಥಳದಲ್ಲಿ ಇರುವುದಿಲ್ಲ. ಆ ಸಂಪತ್ತಿನ ಉತ್ಪಾದಕರು ಅವರೇ ಆಗಿರುತ್ತಾರೆ. ಆದರೆ ಪ್ರತಿಫಲವಿಲ್ಲದ ಬದುಕು ಅವರದ್ದಾಗಿರುತ್ತದೆ. "ಭೂಮಿ, ಸಂಪತ್ತು ರಾಜ್ಯಾಧಿಕಾರದಿಂದ ವಂಚಿತರಾದ ಮತ್ತು ಅವಕ್ಕೆಲ್ಲ ಒಟ್ಟಾಗಿ ಪರ್ಯಾಯ ವ್ಯವಸ್ಥೆಯನ್ನು ರೂಪಿಸಲು ನಿರಂತರವಾಗಿ ಹೋರಾಡುವ ವರ್ಗದ ಮತ್ತೊಂದು ಹೆಸರೇ ಶೋಷಿತ ವರ್ಗ"[೩೩]

ಕೂಲಿ ಇಂಡಿಯಾದಲ್ಲಿ ಬದುಕುವ ಕೋಟ್ಯಾಂತರ ಬಡವರ ಜೀವನಾಡಿ. ಕೂಲಿ ಸಿಗದ ದಿನ ಕಾಳಿಗಾಗಿ ಪರದಾಡುವ ಈ ಜನ ತಮ್ಮ ನಿತ್ಯ ಬದುಕನ್ನು ಕೃಷಿ ಭೂಮಿಯಲ್ಲೋ, ಉಳ್ಳವರ ಮನೆ ಕೊಟ್ಟಿಗೆಗಳಲ್ಲೋ, ಕಾಫಿ ತೋಟಗಳಲ್ಲೋ, ಮಹಡಿ ಮನೆಗಳ ನಿರ್ಮಾಣದಲ್ಲೋ, ಕೈಗಾರಿಕೆಗಳಲ್ಲೋ, ಫ್ಯಾಕ್ಟರಿಗಳಲ್ಲೋ ಮುಂತಾದ ಕಡೆಗಳಲ್ಲಿ ದುಡಿಯುವುದರ ಮೂಲಕ ತಮ್ಮ ಜೀವನವನ್ನು ಸಾಗಿಸಬೇಕಾದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಕೂಲಿಗಾಗಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ವಲಸೆ ಹೋಗುವ ಈ ಜನ ತಮ್ಮ ಅಸಹಾಯಕತೆಯಿಂದಾಗಿ ಹಳ್ಳಿಯಾದಿಯಾಗಿ ಪಟ್ಟಣ ಪ್ರದೇಶದವರೆಗೂ ಶೋಷಣೆಗೆ ತುತ್ತಾಗುತ್ತಲೇ ಬಂದಿದ್ದಾರೆ. ಇವರಿಗೆ ನಿಮ್ಮ ಪೂರ್ವಜನ್ಮದ ಕರ್ಮಫಲ ಎಂಬಂತೆ ಬಿಂಬಿಸಿ ಇವರ ಪ್ರತಿರೋಧ ಶಕ್ತಿಯನ್ನೇ ಕಿತ್ತುಕೊಳ್ಳಲಾಗಿದೆ. ಈ ಪ್ರತಿರೋಧ ಶಕ್ತಿ ತುಂಬಿ ಕೂಲಿಮಾಡುವ ಕೈಗಳು ದೇಶ ಆಳುವ ಕಡೆಗೆ ಸಾಗಬೇಕೆಂಬ ನಿಲುವನ್ನು

ದಲಿತ ಕಾವ್ಯ ತನ್ನ ಅಭಿವ್ಯಕ್ತಿಯ ಮೂಲಕ ಹೊರಹಾಕಿತು. ಕೂಲಿಯನ್ನೇ ತಮ್ಮ ಜೀವನದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಂಡಿರುವ ದುಡಿವ ಜನತೆಯ ಬದುಕಿನ ಬವಣೆಯನ್ನು ಈ ಕೆಳಗಿನ ಸಾಲು ಅರ್ಥಗರ್ಭಿತವಾಗಿ ನಿರೂಪಿಸುತ್ತಿವೆ.

ನನ್ನವರು ನನ್ನ ಜನ ಎಲ್ಲಿ ಇರುವರೋ
ಊರ ಹೊರಗೆ ಬೇಲಿ ಆಚೆ ನರಳುತ್ತಿರುವರೋ

ಹಗಲು ರಾತ್ರಿ ದುಡಿದು ದುಡಿದು ಸೊರಗಿ ಹೋದರೊ
ಕಲ್ಲು ಬಂಡೆ ಒಡೆದು ಒಡೆದು ಬೆವರು ಸುರಿಸಿದರೊ

ಊರ ಬೀದಿ ಗುಡಿಸಿ ಕಸವ ಹೊತ್ತರೊ
ಹೇಲ, ಹೆಂಡಿ ಬಳಿದು ಬಳಿದು ಮುದುಕರಾದರೊ

ದಣಿಯ ಹೊಲವ ಕಾಯ್ದು ಕಾಯ್ದು ಕುರುಡರಾದರೊ
ಕತ್ತೆಯಂತೆ ದುಡಿದು ದುಡಿದು ಮೆತ್ತಗಾದರೊ[೩೪]

ದುಡಿಮೆಗೆ ಪ್ರತಿಫಲವಿಲ್ಲದ ಬದುಕನ್ನು ಮೇಲಿನ ಸಾಲುಗಳು ಅರ್ಥಗರ್ಭಿತವಾಗಿ ಮಂಡಿಸುತ್ತಿವೆ. ದೇಶ ಕಟ್ಟಿದವರಿಗೆ ದೇಶದಲ್ಲಿ ನೆಲೆಯಿಲ್ಲ. ಇದು ದಲಿತರ ವಾಸ್ತವ ನೆಲೆ. ಕೂಲಿ ಕದ್ದ ಸಾಹುಕಾರ ಕೋಟೆ ಕಟ್ಟಿಸಿ ಆಳುತ್ತಾನೆ. ಅವನ ಕೋಟೆಯ ಇಟ್ಟಿಗೆಯನ್ನು ರಕ್ತದಲ್ಲಿ ಅದ್ದಿ ಕಟ್ಟಿದ ಜನ ಮಾತ್ರ ಹೊಟ್ಟೆಗೆ ಅನ್ನವಿಲ್ಲದೆ ಸಾಯುತ್ತಾರೆ. ಇದು ಇಂಡಿಯಾದ ಇನ್ನೊಂದು ಮುಖ. ಈ ಮುಖದ ಅನಾವರಣ ದಲಿತ ಕಾವ್ಯದಿಂದ ಸಾಧ್ಯವಾಗಿದೆ. ಏಕೆಂದರೆ ಅವರ ಬದುಕು ಅಲ್ಲೇ ಇದೆ. ಇಂತಹ ವಾಸ್ತವದ ಅರಿವನ್ನು ಮೂಡಿಸುತ್ತಲೇ ದಲಿತ ಕಾವ್ಯ ತನ್ನ ಒಳ ರಾಜಕೀಯ ಪರಿಭಾಷೆಯಲ್ಲಿ ದುಡಿಮೆಗೆ ತಕ್ಕ ಪ್ರತಿಫಲ ಬೇಕೆನ್ನುವ ತಾತ್ವಿಕತೆ ಬಿತ್ತಿ ಅದಕ್ಕಾಗಿ ಒಂದು ಹೋರಾಟದ ಮನೋಭೂಮಿಕೆಯನ್ನು ಸಿದ್ಧಪಡಿಸುತ್ತಿದೆ.

ದಲಿತ ಕಾವ್ಯದ ಇಡೀ ರಾಜಕೀಯ ಕಾಳಜಿಯೇ ಸಮಾನತೆಯ ಸಮಾಜ ಮತ್ತು ಗೋಳಿಲ್ಲದ ಸಮಾಜದ ನಿರ್ಮಾಣ. ಇದನ್ನು ಅನೇಕ ದಲಿತ ಕಾವ್ಯಗಳು ದುಡಿಯುವ ನೆಲೆಯಲ್ಲಿ ನಿಂತು ನಿರೂಪಿಸಿವೆ. ಈ ದೇಶದ ಬೆನ್ನೆಲುಬು ರೈತ. ಈ ದೇಶ ಕಟ್ಟಿದವರು ಕೂಲಿಕಾರರು. ಈ ದೇಶದ ಸಕಲ ಸಂಪತ್ತಿನ ಉತ್ಪಾದಕ ವರ್ಗ ದುಡಿಯುವವರು. ಇವರೇ ಈ ದೇಶವನ್ನು ಆಳಬೇಕು ಮತ್ತು ಇವರಿಂದಲೇ ಸಮಾನತೆಯ ಸಮಾಜ ಬರಲು ಸಾಧ್ಯ ಹಾಗೂ ಸಮಾನತೆ ಎಲ್ಲರ ಹಕ್ಕು ಎಂಬುದನ್ನು ದಲಿತ ಕಾವ್ಯಗಳು ಒತ್ತಿ ಹೇಳಿವೆ.

ಜನಸ್ತೋಮದ ಹಸಿರ ನಡುವೆ
ಬಾಂಧವ್ಯದ ಹೂಗಳರಳಿ

ಸಮಾನತೆಯ ಸಂತಸವನು
ಋತುವಸಂತ ಸಾರಲಿ[೩೫]

ಬಡವರ ರಾಜ್ಯ ಭೂಮಿಯ ಮೇಲೆ ನಿಲ್ಲಬೇಕು. ಬಡವರ ದುಡಿಮೆಗೆ ತಕ್ಕ ಪ್ರತಿಫಲ ಸಿಗಬೇಕು. ದುಡಿಯುವವರ ಮೇಲೆ ಹೇರಿರುವ ಮೌಢ್ಯತೆಗಳು ಅಳಿಯಬೇಕು. ಸ್ಥಾಪಿತ ಮೌಲ್ಯಗಳು ಕೊನೆಗೊಂಡು ಹೊಸ ಬದುಕು ಚಿಗುರಬೇಕು. ಮೌಲ್ಯಗಳ ಹೆಸರಿನಲ್ಲಿ ಮನೆಮಂದಿಯೆಲ್ಲಾ ಕೂತುಣ್ಣುವಷ್ಟು ಸಂಪತ್ತಿನ ಕ್ರೋಢೀಕರಣ ಮಾಡಿಕೊಂಡಿರುವ ಬಂಡವಾಳಶಾಹಿಗಳ ಶೋಷಣಾ ವ್ಯವಸ್ಥೆ ಅನಾವರಣಗೊಳ್ಳಬೇಕು. ಅಸಮಾನ ಹಂಚಿಕೆ ತೊಲಗಬೇಕು. ಹೀಗೆ ದಲಿತ ಕಾವ್ಯ ದಲಿತರ ಪರವಾದ ಹಿತಾಸಕ್ತಿಯನ್ನು ತನ್ನ ಅಭಿವ್ಯಕ್ತಿಯಲ್ಲಿ ಹೊರಹಾಕಿದೆ. ದುಡಿಯುವವರೇ ಈ ದೇಶದ ನಿಜವಾದ ವಾರಸುದಾರರು ಎಂಬ ಆಲೋಚನೆ ಹಿನ್ನೆಲೆಯಲ್ಲಿ ದಲಿತ ಕಾವ್ಯ ಮಂಡಿಸಿದ ವಿಚಾರಗಳನ್ನು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

೭.೨ ದಲಿತಕಾವ್ಯ : ದುಡಿಯುವ ವರ್ಗದ ದೃಷ್ಟಿಕೋನ ನಿರ್ಮಾಣ

ನಾವು ಬೆವರನು ಸುರಿಸಿ ದುಡಿಯುವ ಜನ
ನಮ್ಮ ಬೆವರಿನ ಪಾಲನು ಕೇಳುವೆವು
ತುಂಡು ಭೂಮಿಯಲ್ಲ ಒಂದು ದೇಶವಲ್ಲ
ಇಡೀ ಭೂಗೋಳವನೇ ಕೇಳುವೆವು
ನಾವು ಬೆವರನು ಸುರಿಸಿ ದುಡಿಯುವ ಜನ[೩೬]

ದಲಿತರು ಎಂದರೆ ದುಡಿಯುವವರು, ದಲಿತ ಸಾಹಿತ್ಯ ಎಂದರೆ ದುಡಿಯುವವರ ಹಿತಾಸಕ್ತಿಯಿಂದ ಮೂಡಿರುವಂತಹುದು. ಆದ್ದರಿಂದ ದಲಿತ ಕಾವ್ಯ ದುಡಿಯುವವರ ಆಶಯಕ್ಕನುಗುಣವಾಗಿ ಸೃಷ್ಟಿಯಾಗಿದೆಯೇ? ಮತ್ತು ದಲಿತರ ವಸ್ತುಸ್ಥಿತಿಯನ್ನು ಕಾವ್ಯದ ಮೂಲಕ ಹೇಗೆ ಮಂಡಿಸುತ್ತಾ ಒಂದು ಹೋರಾಟದ ಭೂಮಿಕೆಯನ್ನು ಸಿದ್ಧಪಡಿಸುತ್ತಿದೆ ಹಾಗೂ ದುಡಿಯುವ ವರ್ಗದ ಶೋಷಣೆಯ ವಿವಿಧ ನೆಲೆಗಳನ್ನು ಗುರುತಿಸಿರುವ ಬಗೆ ಹೇಗೆ? ಈ ಶೋಷಣೆಗಳಿಗೂ ದಲಿತರಿಗೂ ಇರುವ ಸಂಬಂಧ ಎಂತಹುದು? ಈ ಶೋಷಣೆಯ ವಿನಾಶಕ್ಕೆ ಕಾವ್ಯ ಸೂಚಿಸುತ್ತಿರುವ ಪರ್ಯಾಯ ಮಾರ್ಗಗಳೇನು? ಇವುಗಳಲ್ಲಿ ವೈವಿಧ್ಯತೆ ಇದೆಯಾ? ಅಥವಾ ವೈರುಧ್ಯಗಳಿವೆಯೇ ಎಂಬುದನ್ನು ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

ದಲಿತ ಕಾವ್ಯದ ಇಡೀ ಶಕ್ತಿ ಕೇಂದ್ರೀಕೃತವಾಗಿರುವುದೇ ದುಡಿವ ವರ್ಗದ ದೃಷ್ಟಿಕೋನವನ್ನ ನಿರ್ಮಾಣ ಮಾಡಿರುವಲ್ಲಿ. ದಲಿತ ಕಾವ್ಯ ತನ್ನ ಅಭಿವ್ಯಕ್ತಿಯಲ್ಲಿ ದುಡಿಯುವ ವರ್ಗದ ದೃಷ್ಟಿಕೋನವನ್ನು ನಿರ್ಮಿಸಿದೆ. ದುಡಿವ ವರ್ಗದ ದೃಷ್ಟಿಕೋನವನ್ನು ಬಳಸಿಕೊಂಡಿದೆ ಮತ್ತು ದುಡಿವ ವರ್ಗದ ದೃಷ್ಟಿಕೋನದ ಮೂಲಕವಾಗೇ ಜಗತ್ತಿನ ಆಗುಹೋಗುಗಳನ್ನು ನೋಡಿದೆ. ಜಗತ್ತಿನಲ್ಲಿ ನಿರಂತರವಾಗಿ ಎರಡು ವರ್ಗ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿವೆ. ಒಂದು ಆಳುವ ವರ್ಗ, ಮತ್ತೊಂದು ದುಡಿಯುವ ವರ್ಗ. ಈ ದುಡಿಯುವ ವರ್ಗ ಶತಮಾನಗಳಿಂದ ತನ್ನ ದುಡಿಮೆಯ ಪ್ರತಿಫಲವನ್ನು ಆಳುವ ವರ್ಗಕ್ಕೆ ನೀಡುತ್ತಲೇ ಬಂದಿದೆ. ದುಡಿಯದ ಆಳುವ ವರ್ಗ ಮಾತ್ರ ಈ ಪ್ರತಿಫಲವನ್ನು ತನ್ನ ಆಜನ್ಮ ಸಿದ್ಧ ಹಕ್ಕು ಎಂಬಂತೆ ಯಾವುದೇ ಮುಜುಗರವಿಲ್ಲದೆ ಅನುಭವಿಸುತ್ತಲೇ ಬಂದಿದೆ. ಇಂತಹ ಆಳುವ ವರ್ಗದ ಹುನ್ನಾರವನ್ನು ಬಯಲು ಮಾಡಲು ದುಡಿಯುವ ವರ್ಗದ ಆಲೋಚನೆ ಮತ್ತು ಅದರ ಹೋರಾಟದಿಂದಲೇ ಸಾಧ್ಯ. ಹಾಗಾಗಿ ದುಡಿಯುವ ವರ್ಗದಿಂದ ಸೃಷ್ಟಿಯಾದದ್ದೇ ದಲಿತ ಕಾವ್ಯ.

ದಲಿತ ಕಾವ್ಯ ಮೂಲತಃ ದುಡಿಯುವ ಜನರ ಜೀವನಾಡಿ. ಇದರ ತುಡಿತ ಮಿಡಿತ ಎಲ್ಲವೂ ದುಡಿವ ವರ್ಗದ ಆಲೋಚನೆಗಳಿಗೆ ಸಂಬಂಧಿಸಿದ್ದು. ಕನ್ನಡ ಕಾವ್ಯ ಪರಂಪರೆ ಇದುವರೆಗೂ ಕಂಡರಿಯದ ಒಂದು ಹೊಸ ಆಲೋಚನಾ ಕ್ರಮ ಇದು. ದುಡಿಯುವ ವರ್ಗದ ದೃಷ್ಟಿಕೋನದ ಮೂಲಕವಾಗೇ ಒಂದು ಹೊಸ ರಾಜಕೀಯ ತಾತ್ವಿಕತೆಯನ್ನು ಹುಟ್ಟು ಹಾಕುವ ನೆಲೆಗಳು ಇಲ್ಲಿನ ಕವಿತೆಗಳಲ್ಲಿವೆ.

ಮೇಲಿನ ಕವನದ ಸಾಲುಗಳಲ್ಲಿ ದುಡಿಯುವ ಜನರ ಆಲೋಚನಾ ಕ್ರಮವೇ ತುಂಬಿಕೊಂಡಿದೆ. ತಮ್ಮ ಬೆವರಿನ ಪಾಲನು ಕೇಳಲು ಒತ್ತಾಯಿಸುವ ರಾಜಕೀಯ ಪರಿಭಾಷೆಯೇ ಇಲ್ಲಿ ವ್ಯಕ್ತಗೊಂಡಿದೆ. ಇಡೀ ಭೂಗೋಳದಲ್ಲಿ ಬದುಕುವ ಅರ್ಹತೆ ಹೊಂದಿರುವವರು ದುಡಿಯುವವರು ಮಾತ್ರ ಎಂಬುದನ್ನು ಸಾಬೀತುಪಡಿಸಿದೆ.

ಸಾಹಿತ್ಯದಲ್ಲಿ ಅಥವಾ ಕಾವ್ಯದಲ್ಲಿ ತಮ್ಮದೇ ಆದ ದೃಷ್ಟಿಕೋನವನ್ನು ನಿರ್ಮಾಣ ಮಾಡುವುದರಲ್ಲಿ ಒಂದು ರಾಜಕೀಯ ಇಚ್ಛಾಶಕ್ತಿಯಿದೆ. ಹಿಂದೆ ಧರ್ಮವನ್ನೇ ಕೇಂದ್ರೀಕರಿಸಿಕೊಂಡಿದ್ದ ಕಾವ್ಯಗಳು ಅವುಗಳ ಪ್ರಚಾರಕ್ಕಾಗೇ ತಮ್ಮ ಕಾವ್ಯವನ್ನು ಮೀಸಲಿರಿಸಿದ್ದವು. ಆದರೆ ಆಧುನಿಕ ಕಾವ್ಯ ಹೊರಬಂದಾಗ ಅನೇಕ ಚಳುವಳಿಗಳು ಅದನ್ನು ಸುತ್ತುವರೆದಿದ್ದವು. ಈ ಚಳುವಳಿಗಳ ಇಚ್ಛಾಶಕ್ತಿಯು ಆಯಾ ಕಾಲಘಟ್ಟದ ಸಾಹಿತ್ಯದ ಮೇಲೆ ತೀವ್ರತರವಾದ ಪರಿಣಾಮವನ್ನು ಬೀರಿದವು. ಆದರೆ ಯಾವ ಸಾಹಿತ್ಯವಾಗಲೀ, ಚಳುವಳಿಯಾಗಲೀ ಸಂಪೂರ್ಣವಾಗಿ ದುಡಿಯುವ ಜನತೆಯ ನೆಲೆಯಲ್ಲಿ ಅನಾವರಣಗೊಂಡಿರಲಿಲ್ಲ. ದುಡಿಯುವ ಜನತೆ ಸಾಹಿತ್ಯ ರಚನೆಯಲ್ಲಿ ತೊಡಗಿದಾಗ ಅದು ಹುಟ್ಟು ಹಾಕುವ ರಾಜಕೀಯ ದೃಷ್ಟಿಕೋನಗಳು ಹೀಗಿರುತ್ತವೆ.

ಹಸಿದ ಹೊಟ್ಟೆಯ ಹಿಟ್ಟು ಕಸಿದು
ಮಾನದ ಬಟ್ಟೆ ಕಿತ್ತೆಸೆದು
ತುಂಡು ಭೂಮಿ ಕಸಿದುಕೊಂಡು
ನಕ್ಕು ಗುಡಿಸಲ ಸುಟ್ಟು
ಮಾನ ಪ್ರಾಣ ಅಪಹರಣ
ಊರು ಕೇರಿ ಹರಣ.
ಧೀರತನದಿ ತಿರುಗುವವರ
ಬಗ್ಗು ಬಡಿಯ ಬನ್ನಿ
ನಾವೆಲ್ಲರೂ ಒಂದೇ[೩೭]

ಇಲ್ಲಿ ಎರಡು ವರ್ಗಗಳ ನಡುವಿನ ಸಂಬಂಧವನ್ನು ಕವಿತೆಯ ಸಾಲುಗಳು ಹಿಡಿದಿಟ್ಟಿವೆ. ಸಾರ್ವತ್ರಿಕಗೊಂಡಿರುವ ದುಃಖವನ್ನು ನಿರೂಪಿಸಿರುವ ಈ ಕವನ ದುಡಿಯುವ ಪ್ರತಿ ಮನೆ ಮನೆಯ ಚಿತ್ರಣವನ್ನು ಕಟ್ಟಿಕೊಡುತ್ತಿದೆ. ಬಡವರು ಬೆಳೆದ ಬೆಳೆ ಎಲ್ಲವನ್ನು ಕಿತ್ತು ತಿನ್ನುವ ಸಾಹುಕಾರ ಇರುವವರೆಗೂ ಬಡತನ ಹೋಗುವುದಿಲ್ಲ ಎಂಬ ವಾಸ್ತವವನ್ನು ಕಾವ್ಯ ಮನಗಾಣಿಸುತ್ತಿದೆ.

ಬಡತನದ ಬೇಗೆಯಲ್ಲಿ ಬಳಲುತ್ತಾ ಬಡತನದಲ್ಲೂ ಪ್ರೀತಿಯ ಬೆಳೆ ಬೆಳೆಯುತ್ತಾ ಪ್ರೀತಿಯಲ್ಲಿ ಆ ಬಡತನದ ನೋವನ್ನೆಲ್ಲಾ ಮರೆತು ಹಾಯಾಗಿರಬೇಕೆಂಬ ತಾತ್ವಿಕತೆ ದಲಿತ ಕಾವ್ಯದ ಯಾವ ಸಾಲುಗಳಲ್ಲಿಯೂ ಇಲ್ಲ. ಪ್ರೀತಿ ಮತ್ತು ಬಡತನವನ್ನು ಕುರಿತು ಕನ್ನಡ ಕಾವ್ಯ ಸಾಕಷ್ಟು ವರ್ಣಿಸಿದೆ. ವರ್ಣಿಸುವುದರ ಜೊತೆಯಲ್ಲೇ ಪ್ರೀತಿ ಬಡತನವನ್ನು, ಬಡತನದ ನೋವನ್ನು ಮರೆಸಬೇಕೆಂದೂ ಸೂಚಿಸಿದೆ. ಆದರೆ ದಲಿತರನ್ನು ದಿನನಿತ್ಯ ಇಂಚಿಂಚು ಕಿತ್ತು ತಿನ್ನುತ್ತಿರುವುದೇ ಬಡತನ. ಇದು ಸೋಮಾರಿತನದಿಂದ ಬಂದ ಬಡತನವಲ್ಲ. ತಮ್ಮ ವರ್ಗದ ಬದುಕನ್ನೇ ಪಣಕ್ಕಿಟ್ಟು ಬೇರೆಯವರ ಆಸ್ತಿಯಲ್ಲಿ ದುಡಿದರೂ ತೊಟ್ಟು ನೀರು, ಅಗುಳು ಅನ್ನ ದಕ್ಕದ ಬಡತನವಿದು. ಈ ಕ್ರೂರ ವಸ್ತುಸ್ಥಿತಿಯನ್ನೇ ದಲಿತ ಕಾವ್ಯ ತನ್ನ ವಸ್ತು ಮತ್ತು ಅಭಿವ್ಯಕ್ತಿಯನ್ನಾಗಿ ಮಾಡಿಕೊಂಡಿತು. ಶೋಷಕ ಮತ್ತು ಶೋಷಿತ ವರ್ಗದ ನಡುವಿನ ನಾನಾ ವಿಕೃತ ಮುಖಗಳು ದಲಿತ ಕಾವ್ಯದಲ್ಲಿ ಮೈದಾಳಿವೆ. ಮೇಲಿನ ಕಾವ್ಯಕ್ಕೆ ಪೂರಕವೆಂಬಂತೆ 'ಮನೆಮನೆಯು ಕತ್ತಲೆ ಪ್ರತಿ ಕಣ್ಣು ಕಣ್ಣೀರು ರಾಜ್ಯ ಬಂದಿದ್ಯಾರಿಗೋ ಸುಖವು ದಕ್ಕಿದ್ಯಾರಿಗೋ' ಎಂದು ನಿರೂಪಿಸುವುದರ ಮೂಲಕ ಬಡವರ ಪ್ರತಿ ಮನೆಮನೆಯಲ್ಲೂ ಕಣ್ಣೀರಿದೆ. ಆ ಕಣ್ಣೀರಿನ ಕಾರಣಗಳು ಗೊತ್ತು. ಇಂತಹ ವಾಸ್ತವತೆಯನ್ನು ಅನಾವರಣಗೊಳಿಸುತ್ತಲೇ ಬಡವರ ಬದುಕು ಬೀದಿ ಪಾಲಾದ ಬಗೆಯನ್ನು ಬಿಚ್ಚಿಟ್ಟಿದೆ.

ಬಡವರ ಮನದಾಳದಲ್ಲಿ ಅಡಗಿದ್ದ ಸುಪ್ತ ಜ್ವಾಲಾಮುಖಿಗಳು ಸ್ಫೋಟಗೊಳ್ಳುವ ಬಗೆ ಇದು. ಯಾರು ಬೆಳೆ ಬೆಳೆಯುತ್ತಾರೋ ಅವರ ಕಣಜ ತುಂಬಬೇಕು. ಅವರ ಹೊಟ್ಟೆ ಹಸಿವಿನಿಂದ ಬಳಲಬಾರದೆಂಬ ರಾಜಕೀಯ ಇಚ್ಛಾಶಕ್ತಿ ಮೇಲಿನ ಕವನದ ಸಾಲುಗಳಲ್ಲಿ ಅಡಕವಾಗಿದೆ.

ದುಡಿಮೆಗೆ ಜಾತಿಭೇದವಿಲ್ಲ. ಆದರೆ ದುಡಿಯುವ ವರ್ಗಗಳನ್ನು ಜಾತಿ ಭೇದದ ಅಸಮಾನತೆಯ ವಸ್ತುಸ್ಥಿತಿಯಲ್ಲಿ ಇಡಲಾಗಿದೆ. ಕೆಲವೊಂದು ಸಮುದಾಯ ಎಲ್ಲ ಕೆಲಸಗಳಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡರೆ, ಕೆಲವೊಂದು ಸಮುದಾಯ ಕೆಲವು ಕೆಲಸಗಳಿಗಷ್ಟೇ ಸೀಮಿತವಾಗಿರುತ್ತವೆ. ಇವರು ದುಡಿಯುವುದಷ್ಟೇ ತಮ್ಮ ಕಾಯಕ ಮಾಡಿಕೊಂಡಿದ್ದಾರೆ. ಅದರ ಪ್ರತಿಫಲವೆಲ್ಲ ಉಳ್ಳವರ ಪಾಲು. ದುಡಿಮೆಯ ಪ್ರತಿಫಲವನ್ನೆಲ್ಲ ಕೂತುಣ್ಣುವ ವರ್ಗ, ವರ್ಗದಿಂದಷ್ಟೇ ಅಲ್ಲದೆ ಜಾತಿ, ವರ್ಣಗಳಾದಿಯಾಗಿ ದಬ್ಬಾಳಿಕೆ ನಡೆಸುತ್ತದೆ. ಒಂದು ಹೋರಾಟದ ಹಾಡು ದುಡಿಮೆಯ ಸಾರ್ವತ್ರಿಕತೆಯನ್ನು ಸಾರುವ ಬಗೆ ಹೀಗಿದೆ.

ಯಾವ ಕುಲವಯ್ಯ ನಮ್ಮದ್ಯಾಮತವಯ್ಯ
ಯಾವ ಕುಲವಯ್ಯ ನಮ್ಮದ್ಯಾಮತವಯ್ಯ
ಮಣ್ಣು ಕಲಸಿ ಇಟ್ಟಿಗೆ ಮಾಡಿ
ಮನೆಯ ಕಟ್ಟಿ ಕೊಟ್ಟಾಗ
ಮೈಸವೆಸಿ ಉತ್ತು ಬಿತ್ತಿ
ಧಾನ್ಯ ರಾಶಿ ಹೊತ್ತಾಗ ।ಯಾ ಕುಲವಯ್ಯ।

ಒಣಶೀಕಲು ತಿಂದು ನಾವು
ಸುಣ್ಣ ಬಣ್ಣ ಬಳಿದಾಗ
ನಸುಕಲೆದ್ದು ಬೀದಿಗುಡಿಸಿ
ಚಂದ ಮಾಡಿ ಇಟ್ಟಾಗ ।ಯಾ ಕುಲವಯ್ಯ।

ಮರ ಕಡಿದು ತೊಲೆ ಹೊತ್ತು
ಮಂಚ ಮೇಜು ಮಾಡಿದಾಗ
ಖಂಡ ಹಿಂಡಿ ಬಂಡೆ ಒಡೆದು
ವಿಗ್ರಹಗಳ ಕೆತ್ತಿದಾಗ ।ಯಾ ಕುಲವಯ್ಯ।

ಬೆಂಕಿ ಕುಲುಮೆಯಾಗಿ ಹೊಟ್ಟೆ
ಮಚ್ಚು ಹಾರೆ ಮಾಡಿದಾಗ

ಕ್ಷಯದಿ ನಾವು ಕೆಮ್ಮಿ ಕೆಮ್ಮಿ
ಇದ್ದಿಲು ಗಣಿಗಿಳಿದಾಗ ।ಯಾ ಕುಲವಯ್ಯ।

ದನದ ಕೊರಳ ಕೊಯ್ದು ನಿಮಗೆ
ಕೆರ ಹೊಲಿದು ಕೊಟ್ಟಾಗ
ಕರುಳಿಗಿಷ್ಟು ಕೂಳಿರದೆ
ಮಡಿಕೆ ಮಾಡಿ ಕೊಟ್ಟಾಗ ।ಯಾ ಕುಲವಯ್ಯ।

ದನದ ಕೊರಳ ಕೊಯ್ದು ನಿಮಗೆ
ಕೆರ ಹೊಲಿದು ಕೊಟ್ಟಾಗ
ಕರುಳಿಗಿಷ್ಟು ಕೂಳಿರದೆ
ಮಡಿಕೆ ಮಾಡಿ ಕೊಟ್ಟಾಗ ।ಯಾ ಕುಲವಯ್ಯ।

ಬೈರಾಗಿಗಳಾಗಿ ಬಂದ್ರೆ
ಕ್ಷೌರ ಮಾಡಿ ಕಳುಹಿಸಿದಾಗ
ಕೊಳಕು ಬಟ್ಟೆ ಒಗೆದು ಮಲ್ಲಿಗೆ
ಹೂ ಮಾಡಿ ಕೊಟ್ಟಾಗ ।ಯಾ ಕುಲವಯ್ಯ।[೩೮]

ಇಲ್ಲಿ ದಿನನಿತ್ಯ ದುಡಿದು ದಣಿದು ಸವಕಲಾದ ಶೋಷಿತರ ದುಡಿಮೆಯ ಕರಾಳ ಚಿತ್ರಣಗಳಿವೆ. ದಿನನಿತ್ಯ ಇವರ ಬದುಕು ಕಳೆದು ಹೋಗುತ್ತಿರುವ ಪರಿಯನ್ನು ಮೇಲಿನ ಕವನ ಅತ್ಯಂತ ಸಮಂಜಸವಾಗಿ ಕಟ್ಟಿಕೊಟ್ಟಿದೆ. ಇಲ್ಲಿ ಮಣ್ಣು ಕಲಸಿ ಇಟ್ಟಿಗೆ ಮಾಡುವ ಜನರಿಂದ ಹಿಡಿದು ಅದರಿಂದ ಮನೆ ಕಟ್ಟುವವರು, ಮೈಸವೆಸಿ ಉತ್ತು ಬಿತ್ತು ಬೆಳೆ ಬೆಳೆವವರು, ಸುಣ್ಣ ಬಣ್ಣ ಬಳಿವವರು, ತಮ್ಮದಲ್ಲದ ಬೀದಿ ಗುಡಿಸಿ ಚಂದ ಮಾಡುವವರು, ಮರ ಕಡಿದು ಮಂಚ ಮೇಜು ಮಾಡುವವರು, ವಿಗ್ರಹಗಳ ಕೆತ್ತಿದವರು, ಮಚ್ಚು ಹಾರೆ ಮಾಡಿದವರು, ಗಣಿಗಳಲ್ಲಿ ಕೆಲಸ ಮಾಡುವವರು, ಪೂಜೆಗಾಗಿ ಹೂ ಕೊಯ್ಯುವ ಬುಟ್ಟಿ ಹೆಣೆವವರು, ಅಕ್ಷರಕ್ಕೆ ಆಕಾರ ಕೊಡಲು ಮಸಿ ತಯಾರಿಸುವವರು, ದನದ ಚರ್ಮದಿಂದ ಕೆರ ಹೊಲೆಯುವವರು, ಕ್ಷೌರ ಮಾಡಿ ಅಂದಗೊಳಿಸುವವರು, ಕೊಳಕು ಬಟ್ಟೆ ಹೊಗೆಯುವವರು, ಎಲ್ಲ ಶ್ರಮಜೀವಿಗಳ ದಂಡೇ ಇದೆ. ಆದರೆ ಈ ಶ್ರಮದ ಮೂಲ ಪ್ರಯೋಜನ ಇವರಿಗೆ ಆಗಿದೆಯೇ, ಎಂಬುದೇ ಇಲ್ಲಿ ಮುಖ್ಯ. ಇಷ್ಟೆಲ್ಲಾ ಜನರು ತಮ್ಮದಲ್ಲದ ಕೆಲಸವನ್ನು ತಮ್ಮ ಮೇಲೆ ಹೇರಿಕೊಂಡಿದ್ದಾರೆ ಅಥವಾ ಹೇರಲಾಗಿದೆ.

ದಿನನಿತ್ಯ ಉಪಯೋಗಿಸುವ ಪ್ರತಿಯೊಂದು ವಸ್ತುಗಳ ತಯಾರಿಕೆಯ ಹಿಂದೆ ದುಡಿಯುವ ಜನರ ಶ್ರಮವಿದೆ. ಸೂರ್ಯ ಹುಟ್ಟುವ ಮೊದಲೇ ಪ್ರಾರಂಭವಾಗುವ ಶ್ರಮಿಕರ ಶ್ರಮ ಸೂರ್ಯ ಮುಳುಗಿದರೂ ಮುಗಿಯುವುದಿಲ್ಲ. ಇದನ್ನು ಉಪಯೋಗಿಸುವ ವರ್ಗ ಮಾತ್ರ ಅವರನ್ನು ಕೀಳುಜನರೆಂದು ಬಣ್ಣಿಸುತ್ತ ಜಾತಿ ಹೆಸರಿನಲ್ಲಿ ಇಲ್ಲಸಲ್ಲದ ಕತೆ ಕಟ್ಟಿ ಸದಾ ಅವಮಾನಿಸುತ್ತಲೇ ಇರುತ್ತಾರೆ. ಇಂತಹ ಜನರ ದ್ವಿಮುಖತನವನ್ನು ಮೇಲಿನ ಹೋರಾಟದ ಹಾಡು ಹಿಡಿದಿಟ್ಟಿದೆ.

ಕರಕುಶಲ ವಸ್ತುಗಳ ಉತ್ಪಾದಕ ವರ್ಗವಾದಂತಹ ದಲಿತರು ತಮ್ಮ ಕುಶಲ ಕಲೆಯ ಆರ್ಥಿಕತೆಯನ್ನು ಅನುಭವಿಸುವಲ್ಲಿ ವಿಫಲರಾದರು. ಇಂತಹ ಕರಕುಶಲ ಕಲೆಯನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡ ಬಂಡವಾಳಿಗರು ಅದರ ಒಟ್ಟು ಲಾಭವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡರು. ಈ ಹಿನ್ನೆಲೆಯಲ್ಲಿಯೇ ಗಾಂಧಿಯವರು ಗುಡಿ ಕೈಗಾರಿಕೆಗಳ ಅಭಿವೃದ್ಧಿಗೆ ಒತ್ತು ನೀಡಿದ್ದು ಮತ್ತು ನೆಹರೂರವರು ಬೃಹತ್ ಕೈಗಾರಿಕೆಗಳ ಅಭಿವೃದ್ಧಿಗೆ ಒತ್ತು ನೀಡಿದ್ದು. ಈ ಎರಡೂ ಆಲೋಚನೆಗಳು ಕಡಿಮೆ ಮತ್ತು ಬೃಹತ್ ಬಂಡವಾಳಿಗರ ಹಿತಾಸಕ್ತಿಯನ್ನು ಆಧರಿಸಿ ಬಂದುದಾಗಿತ್ತೇ ಹೊರತು ದುಡಿಯುವ ಜನತೆಯ ಆಶೋತ್ತರಗಳಿಗೆ ಅನುಗುಣವಾಗಿ ಬಂದುದಲ್ಲ. ಕುವೆಂಪು ಹೇಳುವಂತೆ 'ಕತ್ತಿ ಪರದೇಶಿಯಾದರೆ ಮಾತ್ರ ನೋವೆ! ನಮ್ಮವರೆ ಹದಹಾಕಿ ತಿರುವಿದರದು ಹೂವೆ'.

ಇಲ್ಲಿ ಶ್ರಮಿಕರ ಮತ್ತು ಶ್ರಮಿಕರ ಪ್ರತಿಫಲವನ್ನು ಉಣ್ಣುವ ವರ್ಗರಕ್ಷಕರನ್ನು ಕವನ ಇಬ್ಭಾಗವಾಗಿ ಸೀಳಿದೆ. ಶ್ರಮವೇ ಇಲ್ಲದೆ ಶ್ರಮಿಕರ ಪ್ರತಿಫಲವನ್ನು ಉಣ್ಣುವ ಅಸಂಖ್ಯಾತ ಜನ ಇಂಡಿಯಾದಲ್ಲಿದ್ದಾರೆ. ಈ ಶ್ರಮಿಕರಿಗೆ ನಿಮ್ಮ ಶ್ರಮದ ಪ್ರತಿಫಲ ನಿಮ್ಮದಲ್ಲ ಎಂಬುದನ್ನು ಒತ್ತಾಯಪೂರ್ವಕವಾಗಿ ಹೇರಲಾಗಿದೆ. ಒಂದು ಕಡೆ ಭೂಮಿ ಮತ್ತು ಆಸ್ತಿಯ ಕೇಂದ್ರೀಕರಣ ಮತ್ತೊಂದು ಕಡೆ ವಿಶಾಲವಾದ ಭೂರಹಿತ ಕೃಷಿಕಾರ್ಮಿಕರು ಇರುವುದರಿಂದ ಇಲ್ಲಿ ಜೀತ ಪದ್ಧತಿಯು ಸಾಮಾನ್ಯವಾಗಿ ಹೋಗಿದೆ. ಇದನ್ನು ಜಾತಿ, ಮತ, ಧರ್ಮಗಳು ಬೆಂಬಲಿಸುತ್ತಿವೆ. ಆರ್ಥಿಕ ರಾಜಕೀಯ ಅಸಮಾನತೆ ಇರುವುದರಿಂದ ಗುಲಾಮಗಿರಿ ಮುಂದುವರೆದಿದೆ. ಇಂತಹ ಮನುಷ್ಯರ ದುಡಿಮೆಗೆ ಬೆಲೆಕಟ್ಟುವ ಸಾಹಿತ್ಯ ಸೃಷ್ಟಿಸಿ ದುಡಿಮೆಗೆ, ದುಡಿಯುವವರಿಗೆ ಜಾತಿ, ಮತಗಳ ಹಂಗಿರುವುದಿಲ್ಲ ಎಂಬ ಮನೋಭೂಮಿಕೆಯನ್ನು ಮೇಲಿನ ಕಾವ್ಯ ಬಿತ್ತಿದೆ.

ಮೇಲಿನ ಕಾವ್ಯವನ್ನು ಇನ್ನಷ್ಟು ವಿಸ್ತರಿಸುವುದಾದರೆ ಅಮರಚಿಂತರ 'ಬಡವ ಸಿಡಿದರೆ ವಡಬ' ಕವನ ನೆನಪಿಗೆ ಬರುತ್ತದೆ,

ಜೋಡು ಬೀಜದೆಡಿಗೆ
ಬಿತ್ತೋ ಕೂರಿಗೆ ನಿಮ್ಮದಲ್ಲ

ಹೊಳಿಸಾಲ ಹೊನ್ನ ಬಿತ್ತೋ ಆರಂಭದೆತ್ತು ನಿಮ್ಮದಲ್ಲ
ಹರಗೋರು ನೀವಲ್ಲ
ರಂಟೆಕುಂಟೆ ನಿಮದಲ್ಲ
ನಾಟಿ ಹಾಕೋರು ನೀವಲ್ಲ
ನೀರು ಬಿಡೋರು ನೀವಲ್ಲ[೩೯]

ಆದರೂ ಸಂಪತ್ತಿಗೆ ಒಡೆಯರು. ಇಲ್ಲಿ ಸಾಮಾಜಿಕ ಮತ್ತು ಆರ್ಥಿಕ ನೆಲೆಗಳ ಎರಡೂ ಅನಾವರಣವಿದೆ. ದುಡಿಯುವ ಜನತೆ ಜಾತಿಯಲ್ಲಿ ಕೀಳರಿಮೆಯನ್ನೂ, ದುಡಿಮೆಯಲ್ಲಿ ಪಾಲು ಕೇಳದಿರುವುದನ್ನು ಶತಮಾನಗಳಿಂದ ಉಳಿಸಿಕೊಂಡು ಬರಲಾಗಿದೆ. ಆರ್ಥಿಕ ಉತ್ಪಾದನೆಗಳ ಒಡೆತನ ಸಾಮಾಜಿಕ ಸ್ಥಾನಮಾನಗಳನ್ನು ತಾನಾಗೇ ತಂದುಕೊಡುತ್ತದೆಂಬ ಭರವಸೆ ಈ ಕಾವ್ಯಗಳಲ್ಲಿ ಕಾಣುತ್ತಿದೆ.

ಕನ್ನಡ ಸಾಹಿತ್ಯದ ಯಾವ ಪರಂಪರೆಯೂ ಕೂಡ ತನ್ನನ್ನು ಇಡಿಯಾಗಿ ಶ್ರಮಿಕ ವರ್ಗದ ಪರವಾದ ಧೋರಣೆಯನ್ನು ಹೊಂದಿಲ್ಲ. ವಚನ ಸಾಹಿತ್ಯ ಇಂತದ್ದೊಂದು ಆಸಕ್ತಿಯನ್ನು ಹೊಂದಿತ್ತಾದರೂ ಅದರ ಆಂತರಿಕ ವೈರುಧ್ಯಗಳಿಂದ ಅದನ್ನು ಪೂರ್ಣಗೊಳಿಸಲು ಆಗಲಿಲ್ಲ. ಶ್ರಮಿಕ ನೆಲೆಯ ಸಾಹಿತ್ಯವೆಂದೇ ಗುರುತಿಸಲಾಗಿರುವ ಜನಪದ ಸಾಹಿತ್ಯವೂ ಕೂಡ ಆಯಾಸ ಪರಿಹಾರದ ನಿಟ್ಟಿನಲ್ಲಿ ಅಥವಾ ತನ್ನ ಅಂತರಾಳದ ಬೇಗೆಗಳನ್ನು ಹಾಡಿಕೊಳ್ಳಲಿಕ್ಕಷ್ಟೆ ಸೀಮಿತವಾಯಿತೆಂದು ಹೇಳಬಹುದು. ಆದರೆ ಇವೆರಡೂ ಧಾರೆಗಳು ಬಹಳ ಮುಖ್ಯ. ಏಕೆಂದರೆ ಇವೆರಡರಲ್ಲಿ ದುಡಿವ ವರ್ಗದ ಅನಾವರಣವಿದೆ. ಯಜಮಾನಿಕೆಯ ವಿರುದ್ಧ ದನಿಗಳಿವೆ ಮತ್ತು ಎಲ್ಲಾ ಶ್ರಮ ಸಂಸ್ಕೃತಿಯ ಬೇರುಗಳ ಹೆಜ್ಜೆ ಗುರುತುಗಳಿವೆ. ಸಿದ್ಧಲಿಂಗಯ್ಯ ಅವರು ಹೇಳುವ ಹಾಗೆ "ನನಗೆ ಜಾನಪದ ಬೇಕು. ಏಕೆಂದರೆ ಅಲ್ಲಿ ದಲಿತ ಸಂಸ್ಕೃತಿಯೊಂದರ ಶೋಧನೆಗೆ ಅವಕಾಶ ಇದೆ. ಸಮಾಜದ ಬಹುಸಂಖ್ಯಾತರಲ್ಲಿ ಸ್ವಾಭಿಮಾನವನ್ನು ಹುಟ್ಟಿಸುವ ಸಂಪತ್ತು ಅದರಲ್ಲಿ ಅಡಗಿದೆ."[೪೦]

....
ದುಡ್ಡಿನ ದರ್ಪದಲ್ಲಿ ಸರ್ಪವಾಗಿ
ಬುಸುಗುಟ್ಟುತ್ತಿರುವ ಬಂಡವಾಳಶಾಹಿಗಳ
ಕರ್ಮಕಾಂಡಗಳು ಬೇಡ ನನ್ನ ಕಾವ್ಯಕ್ಕೆ
ರಕ್ತ ಹೀರಿದರೂ ಶಕ್ತಿಗುಂದದೇ
ಸವಾಲಗೆ ನಿಂತ ಈ ದೇಶದ ಬಹುಜನರ

ಚಿಂದಿಯಂತಹ ಬದುಕೇ ಸಾಕು
ಚೆಂದ ನನ್ನ ಕಾವ್ಯಕ್ಕೆ

ಕಾರು–ಬಾರು–ಬಂಗಲೆಗಳಲ್ಲಿ
ತಿಂಗಳುಗಟ್ಟಲೇ ಠಿಕಾಣಿ ಹೂಡಿ
ಹೆಂಗೆಳೆಯರೊಂದಿಗೆ ಚಕ್ಕಂದವಾಡುವ
ಕಳ್ಳ ಖದೀಮರ ಕ್ರೂರ ಕೃತ್ಯಗಳು ಬೇಡ ನನ್ನ ಕಾವ್ಯಕ್ಕೆ
ಹರಿದ ಬಟ್ಟೆ ತೊಟ್ಟು
ಕೆದರಿದ ಕೂದಲು ಬಿಟ್ಟು
ಕೆರೆ ಬಾವಿ ಕೆದರುವ ನನ್ನವರ
ಕಮರಿದ ಕನಸುಗಳೆ ಸಾಕು
ಹಿರಿದಾದ ನನ್ನ ಕಾವ್ಯಕ್ಕೆ.

ಗುಡಿ ಗುಂಡಾರ ಕಟ್ಟಿ
ಇಡೀ ರಾತ್ರಿ ಹಾಡಿಹರಸಿ
ಮೋಡಿ ಮಾಡುವ ಈ ಮೋಸದ ಮಠಾದೀಶರ
ಮಂತ್ರ ಮಾಟ ಬೇಡ ನನ್ನ ಕಾವ್ಯಕ್ಕೆ
ಹಿಡಿ ಅನ್ನಕ್ಕಾಗಿ ವರ್ಷವಿಡೀ
ಕಣ್ಣೀರ ಕೋಡಿ ಹರಿಸುವ
ಈ ನಾಡಿನ ರೈತನ ಹಣ್ಣಾದ ಬದುಕೇ ಸಾಕು
ಸಣ್ಣದಾದ ನನ್ನ ಕಾವ್ಯಕ್ಕೆ.[೪೧]

ಇಲ್ಲಿ ಕವಿ ಬೇಡ ಎನ್ನುವ ನಿರಾಕರಣೆಯ ನೆಲೆಗಳನ್ನು ಗಮನಿಸಿದರೆ ಸಾಕು, ದಲಿತ ಕಾವ್ಯದ ನೋಟ ಯಾವುದರೆಡೆಗೆ ಎಂಬುದು ತಿಳಿಯುತ್ತದೆ. ಬಂಡವಾಳಿಗರನ್ನು, ಮಠಾಧೀಶರನ್ನು, ಜಾತಿವಾದಿಗಳನ್ನು, ಕಾರು ಬಂಗಲೆಗಳಲಿ ಇರುವವರನ್ನು, ಏಕಕಾಲದಲ್ಲಿ ನಿರಾಕರಿಸುವ ಈ ಕವಿತೆ ಚಿಂದಿ ಬಟ್ಟೆಯುಟ್ಟ ಕೆದರಿದ ಕೂದಲಿನ, ಅನ್ನಕ್ಕಾಗಿ ಕಣ್ಣೀರಿಡುವ ಜನರೆಡೆಗೆ ತನ್ನ ನೋಟ ಬೀರಿದೆ. ನೋಟದಲ್ಲಿ ಬಡವರ ದುಡಿಮೆಯಲ್ಲಿ ಬಂಗಲೆ ಕಟ್ಟಿಸಿ ಮೆರೆದಾಡುವ ಜನರ ದರ್ಪವನ್ನು ಬಣ್ಣಿಸಿ, ಆ ಬಂಗಲೆಯ ವಾರಸುದಾರರು ದುಡಿಯುವವರು ಎಂಬ ರಾಜಕೀಯ ನೆಲೆಯನ್ನು ಕಾವ್ಯ ಬಿತ್ತಿದೆ.

ಬಂಡವಾಳಿಗರು, ಮಠಾಧೀಶರು, ಜಾತಿವಾದಿಗಳು, ಕಾರು ಬಂಗಲೆಗಳಲ್ಲಿ ಇರುವವರೆಲ್ಲ ಆರ್ಥಿಕವಾಗಿ ಪ್ರಬಲರೇ, ಇವರು ದಲಿತ ಕಾವ್ಯಕ್ಕೆ ಬೇಡವಾದವರು. ಆದರೆ ಇವರ ನಡುವೆಯೇ ದಿನನಿತ್ಯದ ತುತ್ತಿಗಾಗಿ ಜೀತ ಮಾಡುತ್ತಿರುವ ಶ್ರಮಿಕರೇ ಕಾವ್ಯದ ಕೇಂದ್ರಬಿಂದು. ತಾನು ಅವರನ್ನು ಬೇಡ ಎನ್ನುವುದರ ಮೂಲಕವಾಗೇ ಅವರ ಆರ್ಥಿಕ ಹಿರಿಮೆಗೆ ಕಾರಣ ದಲಿತರು ಮತ್ತು ಅವರ ಭೋಗವಿಲಾಸಕ್ಕೆ ವಿರೋಧವಿಲ್ಲದೆ ಕುಳಿತಿರುವವರು ದಲಿತರು. ಇವರ ಎಚ್ಚರ ಅವರ ವೈಭೋಗಕ್ಕೆ ಕತ್ತರಿ. ಈ ಎಚ್ಚರಿಕೆಯ ಕೆಲಸವನ್ನು ದಲಿತ ಕಾವ್ಯ ದುಡಿಯುವ ಜನತೆಯಲ್ಲಿ ತುಂಬುತ್ತಿದೆ.

ಕಾವ್ಯದಲ್ಲಿ 'ಬಹುಜನ' ಎಂಬ ಪದ ನೆಲೆಯೂರಿದೆ. ಈ ಪದ ದುಡಿಯುವವರ ಸಂಖ್ಯೆಯನ್ನು ಅಸಂಖ್ಯಾತ ನೆಲೆಯಲ್ಲೂ, ದುಡಿಯದೇ ತಿನ್ನುವವರ ಸಂಖ್ಯೆಯನ್ನು ಎಣಿಸಬಹುದಾದ ನೆಲೆಯಲ್ಲೂ ಹಿಡಿದಿಟ್ಟಿದೆ. ಬಹುಜನರ ಬೆವರಿನ ಹನಿಯನ್ನು ಕೆಲವು ವರ್ಗಗಳು ತಮ್ಮ ಭೋಗ ಜೀವನಕ್ಕೆ ಬಳಸಿಕೊಂಡಿರುವ ವಸ್ತುಸ್ಥಿತಿಯನ್ನು ಕಾವ್ಯ ಅಭಿವ್ಯಕ್ತಿಸಿದೆ.

ಕನ್ನಡ ಸಾಹಿತ್ಯದಲ್ಲಿ ಇದುವರೆಗೂ ಯಾವುದು ಕಣ್ಮರೆಯಾಗಿತ್ತೋ ಅಥವಾ ಕಣ್ಮರೆಯಾಗುವಂತೆ ನೋಡಿಕೊಳ್ಳಲಾಗಿತ್ತೋ ಅದು ಮೊದಲ ಬಾರಿಗೆ ದಲಿತ ಕಾವ್ಯದಲ್ಲಿ ಮುಂಚೂಣಿಗೆ ಬಂತು. ಇಲ್ಲಿ ಮುಂಚೂಣಿಗೆ ಬಂತು ಎಂದರೆ ಅದರ ಹೊಳಹು ಕಡಿಮೆಯಾದೀತು. ಅಂದರೆ ಯಾವುದು ಸಾಹಿತ್ಯದಲ್ಲಿ ಕಣ್ಮರೆಯಾಗಿತ್ತೋ ಅದರೊಳಗಿನ ಸಮುದಾಯಗಳು ಎದೆ ಎತ್ತಿ ನಿಂತಾಗ ಹುಟ್ಟಿದ ಕಾವ್ಯವೇ ದಲಿತ ಕಾವ್ಯ. ಅದಕ್ಕೇ ಇಲ್ಲಿ ದುಡಿವ ಜನರ ನಾಡಿಮಿಡಿತಗಳಿವೆ. ತನ್ನ ಗುಡಿಸಲಿನ ಮನೆಯ ಇಲಿ ಬಿಲಕ್ಕೆ ಹಬ್ಬಗಳಲ್ಲಿ ಕಲ್ಲು ಕುಟ್ಟಿ ಸಗಣಿಯಿಂದ ತಾರಿಸುವ ಅವ್ವನ ಬೆರಳಿನ ಎಳೆಗಳಿಂದ ಹಿಡಿದು ಅಸಮಾನತೆಯನ್ನೇ ಹಾಸಿಗೆಯನ್ನಾಗಿ ಮಾಡಿಕೊಂಡು ನಿದ್ರಿಸುವವರ ವಿರುದ್ಧ ಧಿಕ್ಕಾರ ಕೂಗುವವರೆಗೆ ದಲಿತ ಕಾವ್ಯ ಮತ್ತು ಸಾಹಿತ್ಯ ಬೆಳೆದು ನಿಂತಿತು.

"ಸಮಾಜವನ್ನು ಶೋಷಣೆ ಮಾಡಿದ ಅಲ್ಪಸಂಖ್ಯಾತರ ಭಾವನೆಗಳೆ ಇಡೀ ಸಮಾಜದ ಭಾವನೆಗಳಲ್ಲ. ಅವರ ಸುಖದುಃಖಗಳೇ ಎಲ್ಲರ ಬದುಕನ್ನು ಪ್ರತಿನಿಧಿಸುವುದಿಲ್ಲ. ಇದಕ್ಕಿಂತ ಭಿನ್ನವಾದ ಈ ನೆಲದಲ್ಲೇ ತುಳಿಯಲ್ಪಟ್ಟ ವೈವಿಧ್ಯಮಯ ಭಾವನೆಗಳಿವೆ. ಬಹುಸಂಖ್ಯಾತ ಜನತೆ ಕಂಡ ಬಣ್ಣ ಬಣ್ಣದ ಕನಸುಗಳಿವೆ. ಪ್ರಸಿದ್ಧ ಕವಿ ಕಲಾವಿದರಿಗೆ ಕಾಣದೆ ಹೋದ ಕೋಟಿ ಸೂರ್ಯರ ಬೆಳಕುಗಳಿವೆ. ಆಳುವ ವರ್ಗದಿಂದ ಮುಚ್ಚಿಡಲ್ಪಟ್ಟಿದ್ದ ಈ ಅಮೂಲ್ಯ ಸತ್ಯಗಳನ್ನು ಕ್ರಾಂತಿಕಾರಿ ಸಾಹಿತ್ಯಗಳು ಬಯಲಿಗೆ ತಂದು ಮರೆಯಾಗಿ ಹೋಗಿದ್ದ ಜನತೆಯ ಸಂಸ್ಕೃತಿಯನ್ನು ಅನಾವರಣ ಮಾಡಬೇಕಿದೆ. ಅದರಿಂದ ಸಾಹಿತ್ಯ ಮತ್ತು ಬದುಕಿನ ಸಂಬಂಧಗಳನ್ನು ನಾವು ಉದ್ಘಾಟಿಸಿದಂತಾಗುತ್ತದೆ."[೪೨]

ಇಂಡಿಯಾದಂತಹ ದೇಶದಲ್ಲಿ ಕೆಲವೇ ಜನಾಂಗದ ಸಂಸ್ಕೃತಿ ಶ್ರೇಷ್ಠವೆಂದೂ ಹಲವು ಸಮುದಾಯಗಳ ಸಂಸ್ಕೃತಿ ಕನಿಷ್ಠವೆಂದೂ ಭಾವಿಸುವಂತಹ ವಾತಾವರಣ ಸಾಗಿ ಬಂದಿದೆ. ಕೆಲವರ ಭಾವನೆಗಳನ್ನೇ ಹಲವರ ಭಾವನೆಗಳನ್ನಾಗಿ ಇಲ್ಲಿ ನೋಡಲಾಗಿದೆ. ಇಲ್ಲಿ ಹಲವರಿಗೂ ಕೆಲವರಿಗೂ ವ್ಯತ್ಯಾಸವಿದೆ. ಕೆಲವರು ಬೆರಳೆಣಿಕೆಯಷ್ಟಾದರೆ ಹಲವರು ಲೆಕ್ಕವಿಲ್ಲದಷ್ಟು. ಲೆಕ್ಕವಿಲ್ಲದಷ್ಟು ಜನ ಕೆಲವರ ಬೌದ್ಧಿಕತೆಗೆ ತುತ್ತಾಗಿ ತಮ್ಮ ಸಂಸ್ಕೃತಿ, ಆಚರಣೆ, ವಿಧಿವಿಧಾನ ಎಲ್ಲವೂ ಕನಿಷ್ಠವೆಂಬ ಭಾವನೆ ಬೆಳೆಸಿಕೊಂಡಿದೆ. ಅಥವಾ ಬೆಳೆಸಿಕೊಳ್ಳುವ ಹಾಗೆ ಅವರನ್ನು ಪ್ರೇರೇಪಿಸಲಾಗಿದೆ. ಇದಕ್ಕೆ ಸಹಾಯಕವೆಂಬಂತೆ ಅನೇಕ ಗಾದೆಗಳು, ಒಗಟುಗಳೂ, ಹೇಳಿಕೆಗಳು, ಕಥೆಗಳು, ತಮಾಷೆಗಳು, ಬೈಗುಳಗಳು ತಮ್ಮದೇ ಆದ ಕೆಲಸ ಮಾಡಿವೆ.

ಈ ಹಿನ್ನೆಲೆಯಲ್ಲಿ ನೋಡಿದಾಗ ಸಿದ್ಧಲಿಂಗಯ್ಯನವರ ಮೇಲಿನ ಮಾತುಗಳು ಎಷ್ಟು ಅವಶ್ಯಕ ಎಂಬುದನ್ನು ಪ್ರಶ್ನೆ ಮಾಡಿಕೊಳ್ಳಲೇಬೇಕಾಗಿದೆ. ಪ್ರಸಿದ್ಧರೆನಿಸಿಕೊಂಡವರಿಗೆ ಕಾಣದ ಲೋಕವೊಂದು ಅವಿತು ಕುಳಿತಿದೆ. ಅದು ದಲಿತಲೋಕ. ಅದೇ ದುಡಿವ ಲೋಕ. ಇಲ್ಲೊಂದು ಬದುಕಿದೆ. ಆ ಬದುಕು ತನ್ನ ಉಳಿವಿಗಾಗಿ ನಿರಂತರವಾಗಿ ಹೋರಾಡುತ್ತಲೇ ಇದೆ. ತನ್ನ ಬದುಕಿನುದ್ದಕ್ಕೂ ಬೇರೆಯವರ ಏಳ್ಗೆಗಾಗಿಯೇ ಶ್ರಮಿಸಿದ ಈ ದುಡಿವ ಜನರ ಬದುಕು ತನ್ನಂತರಾಳದಲ್ಲಿ ಮೇಲೆ ಬರಲೇಬೇಕೆಂಬ ತುಡಿತಗಳಿಂದ ಆವೃತವಾಗಿದೆ. ಈ ತುಡಿತಗಳ ಅನಾವರಣವೇ ದಲಿತ ಕಾವ್ಯ. ಇಲ್ಲಿ ಕೇವಲ ಅನಾವರಣವಷ್ಟೇ ಅಲ್ಲ ದುಡಿವ ಜನರ ವಿರುದ್ಧ ನೆಲೆಗಳನ್ನು ನಾಶಗೊಳಿಸುವ ಗುರಿಯೂ ಇದಕ್ಕಿದೆ. ಅದಕ್ಕೆ ಇಲ್ಲಿ ಸಾಹಿತ್ಯ ಮತ್ತು ಬದುಕು ಏಕಕಾಲದಲ್ಲಿ ಉದ್ಘಾಟನೆಗೊಂಡಿವೆ.

ಊರಗೌಡನ ಭೂಮಿ ಮೂರು ಸಾವಿರ ಎಕರೆ
ಹುಟ್ಟಿ ಸಾಯುವ ಪೈರು ಊರ ಜನರು
ಕಾನೂನು ಕಟ್ಟಳೆಯು ಕಲ್ಲು ದೇವರ ಮಾತು
ಗರ್ಭಗುಡಿಯ ಒಳಗೆ ಪೂಜಾರಿ ತೀರ್ಪು

ಕಳ್ಳತನವಾದರೆ ಕಟ್ಟುವರು ಕಂಬಕ್ಕೆ
ಜೀವವಿಲ್ಲದ ಜೀತದಾಳುಗಳನು
ಕೂಲಿ ಕೇಳಿದ ಜನರ ಗೋಣು ಕಂಬದ ಕೆಳಗೆ
ಹಸಿವಿನಲ್ಲಿ ಅಳುವವರು ಲೆಕ್ಕವಿಲ್ಲವು ಒಳಗೆ
ಪ್ರಾಣಿಪಕ್ಷಿಗಳಂತೆ ಸಾಯುವರು ಜನರಿಲ್ಲಿ
ನಾಯಿ ನರಿಗಳಿಗೆ ಶ್ರಾದ್ಧ ಮಾಡುವರಿಲ್ಲಿ[೪೩]

ಈ ಕವನದ ಶೀರ್ಷಿಕೆ 'ಶಾಂತಿ ಗ್ರಾಮ'. ಆದರೆ ಶಾಂತಿ ಯಾರಿಗೆ ಎಂದರೆ ಕವನದ ಸಾಲುಗಳು ಮಾತ್ರ ಉಳ್ಳವರನ್ನೇ ಬೆರಳು ಮಾಡಿ ತೋರಿಸುತ್ತವೆ. ಊಳಿಗಮಾನ್ಯಶಾಹಿ ವ್ಯವಸ್ಥೆಯ ಕ್ರೂರ ವಾಸ್ತವತೆಯನ್ನು ಇಲ್ಲಿ ಕಟ್ಟಿಕೊಡಲಾಗಿದೆ. ಕುವೆಂಪು ಅವರ ಕಾದಂಬರಿಗಳಲ್ಲೂ ಈ ಭೂಮಾಲೀಕ ವ್ಯವಸ್ಥೆಯ ಕ್ರೂರತನಗಳ ಅನಾವರಣವಿದೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಬರುವ ಹೊನ್ನಾಳಿ ಹೊಡ್ತ ಇದಕ್ಕೊಂದು ಸ್ಪಷ್ಟ ನಿದರ್ಶನ. ಆದರೆ ಕುವೆಂಪು ಕಾದಂಬರಿಗಳಲ್ಲಿ ಬರುವ ದುಡಿಯುವ ಜನತೆ ಯಾವುದೇ ಪ್ರತಿರೋಧವಿಲ್ಲದೆ ತಮ್ಮ ಶೋಷಣೆಯನ್ನು ಒಪ್ಪಿ ನಡೆಯುವ ಪಾತ್ರಗಳಾಗೇ ಕಾಣಿಸಿಕೊಳ್ಳುತ್ತವೆ. ದಲಿತ ಕಾವ್ಯದಲ್ಲಿ ಇದಕ್ಕಿಂತ ಭಿನ್ನ ನೆಲೆಯ ಅನಾವರಣವಿದೆ. ಇಲ್ಲಿ ದುಡಿಮೆಯ ಜೊತೆಗೆ ಪ್ರತಿರೋಧವಿದೆ. ಕುವೆಂಪು ಕಾದಂಬರಿಗಳ ದಲಿತ ಲೋಕದ ಚಿತ್ರಣ ಅದು ಮೇಲ್ನೋಟದ ಚಿತ್ರಣವೆಂದು ಈಗಾಗಲೇ ಗುರುತಿಸಿರುವ ಬಿ. ಕೃಷ್ಣಪ್ಪ ಅವರ ಆಲೋಚನೆ ದಲಿತ ಸಂವೇದನೆಯನ್ನು ದಲಿತರಿಂದಲೇ ಕಟ್ಟಿಕೊಡಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದೆ.

ಇಂಡಿಯಾದಲ್ಲಿ ಬಡತನಕ್ಕೆ ಕಾರಣಗಳನ್ನು ಗುರುತಿಸಿ ಪಠ್ಯದ ಮೂಲಕ ಅದನ್ನು ಹೊರತರಲಾಗಿದೆ. ಬಂಡವಾಳಶಾಹಿ ಅರ್ಥಶಾಸ್ತ್ರವು ಈ ಬಡತನಕ್ಕೆ ಹಲವು ಕಾರಣಗಳನ್ನು ಕೊಟ್ಟಿದೆ. ಅವುಗಳೆಂದರೆ ಸೋಮಾರಿತನ, ನಿರುದ್ಯೋಗ, ಅನಕ್ಷರತೆ, ಮೂಢನಂಬಿಕೆ, ಜನಸಂಖ್ಯೆ ಹೆಚ್ಚಳ, ಅವಿಭಕ್ತ ಕುಟುಂಬ ಮುಂತಾದವುಗಳು. ಆದರೆ ಇವು ಬಡತನದ ಪರಿಣಾಮಗಳೇ ಹೊರತು ಬಡತನಕ್ಕೆ ಮೂಲ ಕಾರಣಗಳಲ್ಲ.

ಇಂಡಿಯಾ ದೇಶದಲ್ಲಿ ಶೋಷಣೆಯ ಮೂಲ ಕೇಂದ್ರೀಕೃತವಾಗಿರುವುದೇ ಸಂಪತ್ತಿನ ಅಸಮಾನ ಹಂಚಿಕೆಯಲ್ಲಿ ಮತ್ತು ಭೂಮಿಯ ಅಸಮಾನ ಹಂಚಿಕೆಯಲ್ಲಿ. ದಲಿತರು ಕರ್ನಾಟಕದಲ್ಲಷ್ಟೇ ಅಲ್ಲ ಇಡೀ ಭಾರತದಾದ್ಯಂತ ಶೋಷಣೆಗೆ ಅವಮಾನಗಳಿಗೆ ತುತ್ತಾಗುತ್ತಿದ್ದರೂ ಅದೆಲ್ಲವೂ ಈ ಭೂಮಾಲಿಕ ವರ್ಗ ಮತ್ತು ಬಂಡವಾಳಶಾಹಿಗಳಿಂದ. ಸಂಪತ್ತು ಎಲ್ಲಿ ಕ್ರೋಢೀಕೃತವಾಗಿರುತ್ತದೋ ಅಲ್ಲಿ ನ್ಯಾಯ, ತೀರ್ಪು, ಕಾನೂನು ಎಲ್ಲವೂ ಕಾಲುಚಾಚಿಕೊಂಡು ಬಿದ್ದಿರುತ್ತವೆ. ಆ ಸಂಪತ್ತಿನ ಒಡೆಯರ ಹಿತ ರಕ್ಷಿಸಲು ಅವುಗಳನ್ನು ಉಪಯೋಗಿಸಿಕೊಳ್ಳಲಾಗುತ್ತದೆ. ಇಂತಹ ಅಸಮಾನ ವರ್ಗ ವೈರುಧ್ಯವನ್ನು ದಲಿತ ಕಾವ್ಯ ತನ್ನ ಅಭಿವ್ಯಕ್ತಿಯಲ್ಲಿ ಎತ್ತಿ ಹಿಡಿಯಿತು.

ಮೇಲಿನ ಕವನದ ಸಾಲುಗಳು ವರ್ಗ ವೈರುಧ್ಯದಲ್ಲಿ ನಲುಗಿ ಹೋದ ಕರಾಳ ಬದುಕನ್ನು ಕಟ್ಟಿಕೊಡುತ್ತವೆ. ಊರಗೌಡನಿಗೆ ಮೂರು ಸಾವಿರ ಎಕರೆ, ಕೂಲಿಯಾಳು ಸಾಯುವ ಪೈರಿಗೆ ಸಮಾನ. ಇಡೀ ಊರಿನ ಭೂಮಿಯ ಒಡೆಯ ಅವನು, ಅವನು ಹೇಳಿದ್ದೇ ನ್ಯಾಯ, ಮಾಡಿದ್ದೇ ಕಾನೂನು. ದುಡಿಮೆಗೆ ಕೂಲಿ ಕೇಳಿದರೂ ದಲಿತರಿಗೆ ಸಿಗುವುದು ಮಾತ್ರ ಹೊಡೆತ ಅಥವಾ ಕೊಲೆಯಲ್ಲಿ ಪರ್ಯವಸಾನ. ಹಸಿವಿನಲ್ಲಿ ಅಳುತ್ತಲೇ

ಗೌಡನ ಭೂಮಿ ಹದಮಾಡಿ ಬೆಳೆಬೆಳೆವ ಈ ಜನ ಗೌಡನ ಶ್ರೀಮಂತಿಕೆಯ ವಾರಸುದಾರರು. ಆದರೆ ಈ ಪ್ರಜ್ಞೆ ಅವರಿಗಿಲ್ಲ. ಇಂತಹ ಪ್ರಜ್ಞೆಯ ಪ್ರವಾಹಕ್ಕೆ ದಲಿತ ಕಾವ್ಯ ಕೈಹಾಕಿತು. ದುಡಿವ ವರ್ಗದ ಮೂಲಕವಾಗೇ ಇಡೀ ಸಮಸ್ಯೆಯನ್ನು ನೋಡುವ ತಾತ್ವಿಕತೆ ಬೆಳೆಸಿಕೊಂಡಿತು. ಸಮಾಜದ ವರ್ಗ ನೆಲೆಗಳ ಶೋಧನೆಗೆ ಕಾವ್ಯ ಶ್ರಮಿಕ ವರ್ಗದ ದೃಷ್ಟಿಕೋನದಲ್ಲಿ ನೋಡಿ ಅನಾವರಣಗೊಳಿಸಿ ತನ್ನದೇ ಆದ ನೆಲೆಗಟ್ಟಿನಲ್ಲಿ ಅಭಿವ್ಯಕ್ತಿ ನೀಡಿತು. ಇದರ ಫಲವೇ ಕಾವ್ಯ ಮತ್ತು ಬದುಕು ಏಕಕಾಲದಲ್ಲಿ ವಿಲೀನಗೊಂಡು ಕಾವ್ಯ ದಲಿತರ ಹೋರಾಟಕ್ಕೆ ವೇಗವರ್ಧಕವಾಗಿ ಪರಿಣಮಿಸಿತು. ಮೇಲಿನ ಕಾವ್ಯದ ಸಾಲುಗಳು ಉಳುವವನೇ ಭೂಮಿಯ ಒಡೆಯನಾಗಬೇಕೆಂಬ ಹಂಬಲದೊಂದಿಗೆ, ಭೂಮಿಯ ಸಮಾನ ಹಂಚಿಕೆಯ ರಾಜಕೀಯ ನೆಲೆಯನ್ನು ಬಿತ್ತಿದೆ.

ದಲಿತ ಕಾವ್ಯದಲ್ಲಿ ದುಡಿಯುವ ವರ್ಗದ ದೃಷ್ಟಿಕೋನ ನಿರ್ಮಾಣದಲ್ಲಿ ಒಂದು ರಾಜಕೀಯ ಇಚ್ಚಾಶಕ್ತಿಯಿದೆ. ಅದು ಶೋಷಿತರ ಪರವಾಗಿದೆ. ಶೋಷಿತರ ಪರವಾಗಿ ನಿಂತು ಗಟ್ಟಿ ದನಿಯಲ್ಲಿ ಹಕ್ಕು ಕೇಳುವ ಪ್ರಜ್ಞೆ ಮೂಡಿಸಿಕೊಂಡಿದೆ. ಏಕೆಂದರೆ ಇದು ಮೂಲತಃ ಶೋಷಿತರ ಕಾವ್ಯ. ಇಲ್ಲಿ ಜಾತಿ, ವರ್ಗದಿಂದ ನಲುಗಿದ ಸಮುದಾಯದ ನೋವಿನ ತಲ್ಲಣಗಳಿವೆ.

ಅಗೊ ಆ ಮರೆತ ಮಹಲುಗಳ ಹದಿಗೆ
ಇವರನ್ನೆ ಕಡಿದು ಕಚಪಿಚನೆ ತುಳಿದು
ಇವರೆದೆಯ ರಕ್ತದಲಿ ಅದ್ದಿದಿಟ್ಟಿಗೆಗಳ ಬಿಗಿದು
ಕಟ್ಟಿಹರು ಗೋಪುರಗಳವಕೆ.

ಇವರವಾಳುವ ಜನರೋ.....
ಇವರಸ್ಥಿಪಂಜರದ ರಕ್ಷೆಯಲೆ ಬೆಳೆದ ಆ ಜಾಣರು
ಕ್ರಾಂತಿ ಭ್ರೂಣಗಳನ್ನೆಲ್ಲ ಕೊಂದು ತಿಂದ ಅಸುರರು
ಮೌನದಲಿ ತಲೆಸವರಿ ಮಾತಿನಲೆ ಮೆದುಳಗೆದು
ನೆಡುವರಲ್ಲಲ್ಲಿ ತಮ್ಮ ಸ್ವಾರ್ಥದ ಸಸಿಗಳ[೪೪]

ಇಲ್ಲಿ ಶ್ರಮಿಕ ವರ್ಗದ ಶ್ರಮಿಕತೆಗೆ ಅನುಗುಣವಾಗಿ ಕಾವ್ಯದ ಸಾಲುಗಳು ನಿರೂಪಿತಗೊಂಡಿವೆ. ಈ ನಿರೂಪಣೆಯೂ ಸಹ ದುಡಿವ ವರ್ಗದ ದೃಷ್ಟಿಕೋನದಿಂದಲೆ ಮೂಡಿಬಂದಿರುವಂತಹುದು. ಏಕವ್ಯಕ್ತಿಯ ಒಡಲೊಳಗಿನ ತಲ್ಲಣಗಳಲ್ಲೇ ಕನ್ನಡ ಕಾವ್ಯ ಪರಂಪರೆ ಸಾಗಿ ಬಂದಿತ್ತು ಮತ್ತು ಇದೇ ಶ್ರೇಷ್ಠ ಎಂಬ ಭ್ರಮೆಯನ್ನು ಮೂಡಿಸುವುದರ

ಜೊತೆಗೆ ಅದನ್ನು ಎಲ್ಲರ ಭಾವನೆಗಳೆಂಬಂತೆ ಬಿಂಬಿಸಿತ್ತು. ಆದರೆ ದಲಿತ ಕಾವ್ಯ ಮೊದಲ ಬಾರಿಗೆ ದುಡಿವ ವರ್ಗದ ದೃಷ್ಟಿಕೋನದಿಂದಲೇ ಜಗತ್ತನ್ನು ನೋಡುವ ದೃಷ್ಟಿಯನ್ನು ಬೆಳೆಸಿತು. ಇದರ ಹಿಂದೆ ಇರುವ ಶ್ರಮಿಕರ ಕೈಗಳಿಗೆ ತಕ್ಕ ಪ್ರತಿಫಲ ದೊರೆಯಬೇಕೆಂಬ ರಾಜಕೀಯ ನಿಲುವನ್ನು ತಾಳಿತು.

ಮೇಲಿನ ಕವನ ಇಂತಹುದೇ ನೆಲೆಯಲ್ಲಿ ಮೂಡಿಬಂದಿದೆ. ಜಗತ್ತಿನ ವಸತಿಗಳನ್ನು ಕಟ್ಟಿದವರು ಶ್ರಮಿಕರು. ಆದರೆ ಅದರಲ್ಲಿ ವಾಸ ಮಾತ್ರ ಬೇರೆಯವರದು. ಮಹಡಿ ಮಹಲುಗಳ ಕಟ್ಟುವಾಗ ಬರೀ ನೀರು, ಮಣ್ಣುಗಳಿಂದ ಕಟ್ಟಲಿಲ್ಲ, ಬದಲಾಗಿ ರಕ್ತದಲ್ಲಿ ಇಟ್ಟಿಗೆ ಅದ್ದಿ ಕಟ್ಟಿದ್ದಾರೆ. ಏಕೆಂದರೆ ಇವರು ಒಂದು ಹೊತ್ತಿನ ತುತ್ತಿಗಾಗಿ ಹಗಲಿರುಳೂ ದುಡಿಯಬೇಕಾದಂತವರು. ಬೆವರನ್ನೇ ನಾಲೆ ಮಾಡಿ ಗದ್ದೆಗೆ ಕಳುಹಿಸುವ ಇವರ ಒಡಲು ಮಾತ್ರ ಸದಾ ಹಸಿವು, ಹಾಹಾಕಾರಗಳಿಂದ ತುಂಬಿರುವಂತಹುದು. ಈ ಹೊಟ್ಟೆ ಪಾಡಿನ ತಳಮಳದ ಹಾದಿಯೇ ದಲಿತ ಕಾವ್ಯದ ಅಭಿವ್ಯಕ್ತಿ ಕ್ರಮವೂ ಆಗಿದೆ. ಹೊಟ್ಟೆಯ ಕಿಚ್ಚು ಸ್ಫೋಟಗೊಂಡಾಗ ಆಗುವ ಪರಿಣಾಮಗಳ ನೆಲೆಗಳ ಹುಡುಕಾಟವೇ ದಲಿತ ಕವಿಗಳ ಪ್ರಧಾನ ರಾಜಕೀಯ ಕಾಳಜಿ.

"ಮೇಲುವರ್ಗ ಶೋಷಣೆ ಮಾಡಿಕೊಂಡು ಮನುಷ್ಯತ್ವವನ್ನು ಕಳೆದುಕೊಂಡು ತನ್ನ ಆಸ್ತಿಯ ಅಹಂಭಾವದಿಂದ ಅಮಾನವೀಯವಾಗಿದೆ".[೪೫] ಈ ಅಮಾನವೀಯತೆ ದಲಿತರ ಬದುಕನ್ನು ಛಿದ್ರಗೊಳಿಸಿದೆ. ಜೀತಗಾರಿಕೆಯನ್ನು ದುಡಿದವರ ಮೇಲೆ ಹೇರಿ ನಿರಂತರವಾಗಿ ಅವರನ್ನು ಆಳಲಾಗುತ್ತಿದೆ. ಈ ವರ್ಗವು ಶೋಷಣೆಯ ವ್ಯವಸ್ಥೆ ನಿರಂತರವಾಗಿ ಹೀಗೇ ಇರಬೇಕೆಂದು ಆಶಿಸುತ್ತದೆ. ಆದರೆ ಆಳುವ ವರ್ಗದ ವಿರುದ್ಧ ನಿಂತ ಜನತೆ ಮಾತ್ರ ಪರ್ಯಾಯ ವ್ಯವಸ್ಥೆಗೆ ಹಾತೊರೆಯುತ್ತಾರೆ.

ನಮ್ಮ ದುಡಿಮೆಯ ಬೆವರಿನಿಂದ
ನಿಮ್ಮ ಮುಖ ತೊಳೆಯುವವರೇ
ಹಣದ ನೆರಳಿಗೆ ನಿಂತು
ನರಳಿಸುವವರೇ
ಜಾತಿಯ ಜೋಪಡಿಯಲಿ
ಜೋಕಡಿಸುವವರೇ
ಅಟ್ಟದ ಮೇಲೇರಿ
ಹೊಟ್ಟೆ ಉರಿಸುವವರೇ;
ಸಂಪ್ರದಾಯದ ಸೆರಗಿನಲಿ
ಸೋಗು ಹಾಕುವವರೇ

ಕೇಳಿ,
ಲಕ್ಷಗೊಟ್ಟು ಕೇಳಿ
ಸಿದ್ಧವಾಗಿವೆ ಅದೆಷ್ಟೋ
ಚೆನ್ನಯ್ಯನ ಮನೆಯ(ಲಿ)
ಬಿದ್ದ ಉಂಗುಟ ಹರಿದ
ಅಟ್ಟ ಕಿತ್ತ ಜೋಡುಗಳು
ಎದ್ದು ನಡೆದಿವೆ ಈಗ
ಬಗ್ಗಿ ಬಾರಿಸಲು
ನಡೆದಿವೆ ಗರಡಿ
ಅಂಬೇಡ್ಕರರ ಕೂಸುಗಳ
ಮುಟ್ಟಿ ಮೆಟ್ಟು
ನಿಮ್ಮ ಎದೆ ತಟ್ಟಲು[೪೬]

ಇಲ್ಲಿ ವಾಸ್ತವ ಮತ್ತು ಅದರಿಂದುಂಟಾದ ಜಾಗೃತಿಯ ಫಲಗಳನ್ನು ದಲಿತ ಕಾವ್ಯ ಅತ್ಯಂತ ಸಮಂಜಸವಾಗಿ ಕಟ್ಟಿಕೊಟ್ಟಿದೆ. ದೇಶದ ತಳಪಾಯ ನಿಂತಿರುವುದೇ ದುಡಿಯುವವರಿಂದ. ಇವರಿಗೆ ಕೂಲಿಯೊಂದೇ ಸರ್ವಸಾಧನ. ಚಿರಾಸ್ತಿ, ಚರಾಸ್ತಿ ಇಲ್ಲದ ಇವರಿಗೆ ಪಿತ್ರಾರ್ಜಿತ ಆಸ್ತಿಯಂತೂ ಇವರ ಪಾಲಿಗೆ ಬರಲೇ ಇಲ್ಲ. ಮದುವೆಯ ಸಾಲಕ್ಕೆ ಹಣಕೊಟ್ಟು ಊರ ಸಾಹುಕಾರ ಅವರ ವಂಶಪಾರಂಪರ್ಯವನ್ನು ಜೀತಕ್ಕೆ ತಳ್ಳುವುದರ ಮೂಲಕ ತನ್ನ ವಂಶವನ್ನು ಸುಖದ ಸುಪ್ಪತ್ತಿಗೆಯಲ್ಲಿ ತೇಲಾಡುವಂತೆ ಮಾಡಿದ. ಬಟ್ಟೆಯನ್ನು ನೇಯ್ದರೂ ಬರಿ ಮೈಲೇ ಹೋಗುವ ಕೂಲಿಯವರು ತಂಗಳಿಟ್ಟು ತುಂಡುಬಟ್ಟೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟರು. ಇಂತವರಿಗೆ ಅಕ್ಷರ ಬಂದುದೆ ತಡ ಅವರು ತಮ್ಮ ವಾಸ್ತವತೆಯ ವಿಕೃತತೆಯನ್ನು ಹೇಳುತ್ತಲೇ ಅದಕ್ಕೆ ಪರ್ಯಾಯ ವ್ಯವಸ್ಥೆಯ ಬಗ್ಗೆ ಆಲೋಚಿಸಿ ಸಂಘಟಿಸಲು ಮುಂದಾದರು. ಈ ಸಂಘಟನೆಯ ಮನಸ್ಥಿತಿಯ ಫಲವೇ 'ದಲಿತ ಸಂಘರ್ಷ ಸಮಿತಿ'. ದುಡಿವ ಜನರ ನಾಡಿಮಿಡಿತ ಹಿಡಿದ ಈ ಸಂಘಟನೆ ತನ್ನ ಧಿಕ್ಕಾರಗಳನ್ನು ಕಾವ್ಯದ ಮುಖೇನ ಹೊರ ಹಾಕಿ ಹೊಸ ನಾಡುದಯದ ಕನಸು ಕಂಡಿತು. ಕೂಲಿಯವರು ಉದ್ಧಾರವಾಗಬೇಕಾದರೆ ಕೂಲಿಯ ರಾಜ್ಯ ಬರಬೇಕೆಂಬ ರಾಜಕೀಯ ಪರ್ಯಾಯವನ್ನು ಒತ್ತಿ ಹೇಳಿತು. ದಲಿತ ಕಾವ್ಯದ ದುಡಿವ ವರ್ಗದ ದೃಷ್ಟಿಕೋನ ದುಡಿವ ಜನತೆಯ ರಾಜ್ಯಾಧಿಕಾರದ ಅಪೇಕ್ಷೆಯವರೆಗೂ ಚಾಚಿಕೊಂಡೇ ಬೆಳೆಯಿತು.

ಮೇಲಿನ ಕಾವ್ಯಕ್ಕೆ ಪೂರಕವೆನಿಸುವಂತೆ ಒಂದು ಹೋರಾಟದ ಹಾಡು 'ಕೂಲಿಯವರು ಬದುಕು ಬ್ಯಾಡ ಕೇಳೋ, ಅಯ್ಯೋ ಕೂಳಿಗಿರದ ಬದುಕು ಬ್ಯಾಡ ಕೇಳೋ' ಎನ್ನುವುದರ ಮೂಲಕ ಕೂಲಿ ರಾಜ್ಯ ಮತ್ತು ದುಡಿಯುವವರ ಕೈಯಲ್ಲಿ ಅಧಿಕಾರ ಬರಲೇಬೇಕೆಂದು

ಒತ್ತಾಯಿಸುತ್ತದೆ. ಈ ಹಾಡಿನಲ್ಲಿ ಸಾಲುಗಳು ಹತಾಶಾ ಸ್ಥಿತಿಯಲ್ಲಿ ಹೇಳಿದಂತೆ ಕಂಡುಬಂದರೂ ಅವುಗಳ ಅಂತರಾಳದಲ್ಲಿ ಈ ಹಸಿವಿನ ಬದುಕು ನಮ್ಮದಲ್ಲ, ಏಕೆಂದರೆ ನಾವು ದುಡಿಯುವವರು, ದುಡಿಯುವವರೇ ಈ ನೆಲದ ವಾರಸುದಾರರು ಎಂಬುದನ್ನು ಒತ್ತಿ ಹೇಳುತ್ತಿರುವಂತೆ ಭಾಸವಾಗುತ್ತದೆ. ಹೋರಾಟದ ಹಾಡುಗಳ ರಚನೆಯ ಉದ್ದೇಶ ಇದರ ನಡುವೆಯೇ ನೆಲೆ ನಿಂತಿರುತ್ತದೆ.

ದಲಿತರ ದಿನನಿತ್ಯದ ಸಮಸ್ಯೆಗಳನ್ನು ಹಳ್ಳಿಯ ವಾತಾವರಣದಲ್ಲಿ ಅರ್ಥಮಾಡಿಕೊಳ್ಳಬೇಕಾದ ಅಗತ್ಯವಿದೆ. ಹಳ್ಳಿಯ ಉದ್ಧಾರ ಬಂಡವಾಳಿಗರ ಉದ್ಧಾರವೇ ಹೊರತು ಶ್ರಮಿಕರದಲ್ಲ ಎಂಬ ಸತ್ಯದ ನೆಲೆ ಇಲ್ಲಿದೆ. ಇದಕ್ಕೆ ಸಾಕ್ಷಿಯೆಂಬಂತೆ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರದ ಭಾರತದ ಹಳ್ಳಿಗಳ ಚಿತ್ರಣವನ್ನು ಗಮನಿಸಿದರೆ ಸಾಕು. ಶ್ರಮಿಕರ ನೋವು ಹಳ್ಳಿಯ ಯಜಮಾನನ ಹಟ್ಟಿಯಲ್ಲಿದೆ. ಶತಶತಮಾನದ ಜೀತದ ಜಾಡು ಹಳ್ಳಿಯ ಮಣ್ಣಿನಲ್ಲಿ ಅರಳಿ ನಿಂತಿದೆ. ಇದನ್ನು ಒಂದು ದಲಿತ ಕಾವ್ಯ ಹೀಗೆ ಕಟ್ಟಿಕೊಡುತ್ತದೆ.

ಮೊಲೆ ಕುಡಿವ ಮಕ್ಕಳ ಅರೆ ಹೊಟ್ಟೆ ಮಲಗೀಸಿ
ಕೂಲಿ ಕುಂಬಳಿಗೋಗುವ ನನ್ನಕ್ಕ- ಅವ್ವರು
ಸೆರಗು ಜಾರಿಸಬೇಕಾಯ್ತು ಸಾವ್ಕಾರರ ಹೊಲದಲ್ಲಿ
ಅಂಗೈಲಿ ಜೀವಿಡಿದು ಮುದುಡುತ ಮರಳುವ ಚಿತ್ರ ॥

ಮಂದಿಯ ಹೊಲದಲ್ಲಿ ಬೆವರ ಮುತ್ತ ಹರಿಸಿ
ಉಪವಾಸ ಹೊತ್ತುಂಡು ಕಣ ತುಂಬಿ ಹಾಡುವ
ದಿಕ್ಕೆಟ್ಟ ಅಣ್ಣ - ಅಪ್ಪರು, ಕಲಿಯುವ ಮಕ್ಕಳು
ಪದವಿ ತರುವ ದಾರಿ ಕಾಯುವ ರೀತಿ[೪೭]

ಇದು ಇವತ್ತಿಗೂ ಜೀವಂತವಾಗಿದೆ. ಜೀತದ ಜೀವಂತಿಕೆ ಕಾಪಾಡಲು ಕಾಲಿಗೆ ಸರಪಳಿ ಬಿಗಿದು ಅಮಾನವೀಯ ಕ್ರೌರ್ಯ ಮೆರೆಯುವ 'ಹಂಗರವಳ್ಳಿ'ಯಂತಹ ಹಳ್ಳಿಗಳು ಭಾರತದ ಉದ್ದಗಲಕ್ಕೂ ಇನ್ನೂ ಎಷ್ಟಿವೆಯೋ ತಿಳಿದಿಲ್ಲ. ಈ ವಾಸ್ತವವನ್ನು ಮುಚ್ಚಿ ಹಾಕಲು ಈ ದೇಶವನ್ನು, ಹಳ್ಳಿಗಳನ್ನು ಹಾಡಿಹೊಗಳಲಾಗಿದೆ. ಭ್ರಾತೃತ್ವದ ಹೆಸರಿನಲ್ಲಿ ಎಲ್ಲವೂ ಒಂದೇ ಎನ್ನುವ ಪಿತೂರಿಯನ್ನು ಎಲ್ಲರ ಮೇಲೆ ಒತ್ತಾಯಪೂರ್ವಕವಾಗಿ ಹೇರಲಾಗಿದೆ. ಮನೆಮಂದಿಯೆಲ್ಲಾ ದುಡಿದು ಒಡೆಯನ ಕಣಜ ತುಂಬಿಸಿ ಬರಿಗೈಲೇ ಅರೆಹೊಟ್ಟೆಯಲ್ಲೇ ಮನೆಗೆ ಮರಳುವ ಸ್ಥಿತಿ ಹಳ್ಳಿಯಲ್ಲಿನ್ನೂ ಜೀವಂತವಾಗಿದೆ. ಆದರೆ ಇದನ್ನೆಲ್ಲಾ ಬದಿಗೆ ಸರಿಸಿದ ಮೇಲ್ವರ್ಗ ಅತ್ಯಂತ ಜಾಗರೂಕತೆಯಿಂದ ನ್ಯಾಯ, ನೀತಿ, ಸತ್ಯ, ಧರ್ಮ, ಪಾಪ,

9

ಪುಣ್ಯ, ಸ್ವರ್ಗ, ನರಕ, ತ್ಯಾಗ, ಬಲಿದಾನ ಮುಂತಾದವುಗಳ ಪುಂಗಿ ಊದುತ್ತಲೇ ಅವರನ್ನು ಅಸಹಾಯಕರನ್ನಾಗಿ ಮಾಡಿ ತಮ್ಮ ವಿರುದ್ಧ ತಿರುಗಿ ಬೀಳದ ಹಾಗೆ 'ನಾವು ನಿಮ್ಮವರೇ' ಎಂಬ ಮೋಸಜಾಲವನ್ನು ಜಾಗರೂಕತೆಯಿಂದ ನೇಯ್ದು ದುಡಿಸಿಕೊಳ್ಳುತ್ತಲೇ ಬಂದಿದ್ದಾರೆ. ಇದರ ಅರಿವು ದುಡಿಯುವವರಿಗೆ ಆಗದ ಹೊರತು ಎಚ್ಚರಗೊಳ್ಳಲು ಸಾಧ್ಯವಿಲ್ಲ. ಇದನ್ನೇ ದಲಿತ ಕಾವ್ಯ ತನ್ನಂತರಾಳದಿಂದ ಹೊರಹಾಕಿತು.

ಎಲ್ಲಾ ಸಮುದಾಯಗಳಲ್ಲಿ ಅಥವಾ ಜಾತಿಗಳಲ್ಲಿ ದುಡಿಯುವ ವರ್ಗವಿದೆ. ಆದರೆ ಅಸ್ಪೃಶ್ಯರಲ್ಲಿರುವ ಶ್ರಮಿಕ ವರ್ಗದ ನೋವು, ನಿರಾಸೆ, ಹತಾಶೆಗಳು ಬೇರೆ ವರ್ಗಕ್ಕೆ ಹೋಲಿಸಿದರೆ ಬೇರೆ ಬೇರೆ ಕಾರಣಗಳಿಂದ ಅತಿ ತೀವ್ರವಾದುದು. ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಏಕಕಾಲಕ್ಕೆ ಶೋಷಣೆಗೆ ಗುರಿಯಾಗುವ ಈ ಜನತೆ ಜಾತಿ, ಧರ್ಮ ಮುಂತಾದವುಗಳ ಕೈಗೆ ಸಿಕ್ಕಿ ಅತ್ಯಂತ ಶೋಚನೀಯ ಸ್ಥಿತಿಯಲ್ಲಿದೆ. ದಲಿತ ಕಾವ್ಯ ಇಂತಹ ಶೋಚನೀಯ ಶ್ರಮಿಕರ ನೆಲೆಯಲ್ಲೇ ಮೂಡಿದ ಕಾರಣ ಅದರ ವಿವಿಧ ಮಜಲುಗಳನ್ನು ಎತ್ತಿ ತೋರಿಸಲು ಸಾಧ್ಯವಾಯಿತು. ಜಾತಿ ಮತ್ತು ವರ್ಗ ಇವು ಪರಸ್ಪರ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇವುಗಳು ಅಳಿಯದ ಹೊರತು ದಲಿತರ ಉಳಿಗಾಲ ಸಾಧ್ಯವಿಲ್ಲ.

"ಜಾತಿಗಳ ನಡುವಿನ ಅಸಮಾನತೆಯು ಕೇವಲ ಸಾಮಾಜಿಕ ಅಸಮಾನತೆ ಮಾತ್ರವಾಗಿರದೆ ಅದು ಆರ್ಥಿಕ ಅಸಮಾನತೆಯೂ ಆಗಿದೆ. ಆರ್ಥಿಕ ಅಸಮಾನತೆ ಇರುವುದರಿಂದ ಜಾತಿಗಳ ಶ್ರೇಣೀಕರಣ ಮತ್ತಷ್ಟು ಗಟ್ಟಿಗೊಂಡಿದೆ. ಅದೇ ರೀತಿಯಲ್ಲಿ ಜಾತಿಗಳ ನಡುವೆ ಅಸಮಾನತೆ ಇರುವುದರಿಂದ ಆರ್ಥಿಕ ಅಸಮಾನತೆ ಇನ್ನಷ್ಟು ಗಟ್ಟಿಗೊಂಡಿದೆ. ಇವೆರಡಕ್ಕೂ ನೇರವಾದ ಸಂಬಂಧವಿದೆ"[೪೮] ಈ ಜಾತಿ ಮತ್ತು ಆರ್ಥಿಕ ಅಸಮಾನತೆಯು ನೇರವಾಗಿ ದಲಿತರನ್ನು ಏಕಕಾಲದಲ್ಲಿ ಬಲಿತೆಗೆದುಕೊಂಡಿದೆ.

ಹುಟ್ಟ ಬಾರ್ದದ್ರೆಪ್ಪೊ ಹುಟ್ಟಬಾರ್ದ
ಏಳೇಳು ಜನ್ಮದಾಗ ಈ ಭೂಮಿಮ್ಯಾಗ
ಹೊಲಿ ಮಾದಿಗ್ರಾಗಿ ಹುಟ್ಟಬಾರ್ದ.
ನಮ್ಮ ಬಾಯಾಗಿನ ಉಗ್ಳು ಉಗಳಬೇಕಂದ್ರ
ಜಾತಕ ಕೇಳ್ದದಂಗ ಇವ್ರುಗಿ ಕೇಳಬೇಕಂತ,
ಕೇಳಿದ್ರ.....
'ಕೊಳ್ಳಾಗ ಗಡಗಿ ಕಟಗೊಂಡು ಉಗುಳಕೊರ್ರಿ' ಅಂದ್ರು
ಸೂರ್ಯ ನೆತ್ತಿ ಮ್ಯಾಗಿರಲಾಕಾಗ್ಯ ಊರಾಗ ಹೋಗ್ಬೇಕು

ಯಾಕಂದ್ರ; ನಮ್ಮ ನೆಳ್ಳ ಅವ್ರ ಮ್ಯಾಗ ಬಿತ್ತಂದ್ರ
'ಮುಡಚ್ಚಟ್' ಆಕ್ಕೈತೆಂತ
ಕಸಾ ಹೊಡ್ಯಾಕ ಹೋಬೇಕಂದ್ರ
ಕೈಯಾನ ಬಾರಗಿ ಎತ್ತಿ ಹಿಡ್ದ 'ನಾವು ಬರ್ತಿವಿರಪ್ಪೋ' ಅಂತ
ಒದರಕೊಂತ ಒಂದು ಸುತ್ತ ಓಡಿ ಬಂದಮ್ಯಾಲ
ಇವ್ರ ಇಟ್ಟ ಪೋತಿನಾ ಬಳಿಬೇಕು,
ಬಾವ್ಯಾಗಿನ ನೀರು ನಾವ ಸೇದ್ಕೊಬಾರ್ದ?
ದನದ ಅಡ್ಡೇದಾಗ ಸರ್ಕಾರದೋರು ಬಾಂವಿ ಕಟ್ಸಿಸಿ ಕೊಟ್ರು
ಅವರಾಗೆ ಬಂದು ಎತ್ತಿ ನೀರ್ಹಾಕೋ ಮಟಾ
ನೀವು ಸೇದ್ಯಾಕ್ಕಿ, ನೀವು ಜಗ್ಯಾಕ್ರೆಂತ
ಬಾಯಿ-ಬಾಯಿ ಬಿಡಬೇಕು,
ಕಲ್ಲು ಮಣ್ಣು ಹೊತ್ತ ನಾವು ಕಟ್ಟಿದ ಗುಡ್ಯಾಗ
ನಾವು ಕಾಲಿಡಬಾರ್ದ,
'ಚಾ' ಅಂಗಡ್ಯಾಗ ಹೊಕ್ರ
ಚಂಡ ಹಿಡ್ದ ಹೊರ್‍ಯಾಕ ವಗಿತಾರ
ಮನ್ಯಾಗ ದನ ಸತ್ರ
ಹಲಗಿ ಬಡ್ಯಾಕ, ಕುಣಿ ತೋಡಾಕ ಒಳಗ ಕರಿತಾರ
ಹೇತ ಹೇಲ ತಲಿಮ್ಯಾಗ ಹೊರ್ಸಿ
ಕಟ್ಟಿಮ್ಯಾಗ ನಿಂತ, 'ಎಲಿ' ಹಾಕೊಂತ ಕ್ಷೇಮ ಕೇಳ್ತಾರ
ಅದ್ಕೆ ಹೇಳುದೂ
........................[೪೯]

ದಲಿತರ ಬದುಕು ಶತಮಾನಗಳಿಂದ ನಡೆದು ಬಂದ ದಾರಿಯನ್ನು ಮೇಲಿನ ಕವಿತೆ ನಿರೂಪಿಸಿದೆ. ಶ್ರಮ ಎಲ್ಲಿದೆಯೋ ಅಲ್ಲಿ ದಲಿತರು. ಸುಖ ಎಲ್ಲಿದೆಯೋ ಅಲ್ಲಿ ದಲಿತೇತರ ಶ್ರೀಮಂತರು. ಇದು ಕಾಲಚಕ್ರ ಉರುಳಿ ಬಂದ ಗುರುತು. ಕಸಗುಡಿಸಲು, ಹೇಲು ಹೊರಲು, ಸತ್ತ ದನ ಎಳೆದೊಯ್ಯಲು, ಹಲಗಿ ಬಡಿಯಲು, ದೇವರ ಉತ್ಸವಕ್ಕೆ ಸಾಕ್ಷಿಯಾಗಲು, ಗುಡಿ ಕಟ್ಟಲು, ಮನೆಕಟ್ಟಲು ಎಲ್ಲಕ್ಕೂ ಇವರು ಬೇಕು. ಆದರೆ ಮೇಲ್ವರ್ಗದ ಕೇರಿಗೆ, ಆ ಕೇರಿಯೊಳಗಿನ ಮನೆಗಳಿಗೆ, ದಲಿತೇತರ ದೇವಸ್ಥಾನಗಳಿಗೆ ಇವರಿಗೆ ಪ್ರವೇಶವಿಲ್ಲ.

ಉಪಯೋಗಿಸಿ ನಂತರ ಬಿಸಾಡುವ ವಸ್ತುವಿನ ಹಾಗೆ ದಲಿತರ ಬದುಕು ಆಗಿದೆ. ದಲಿತರ ಮೇಲೆ ದೌರ್ಜನ್ಯ ಹೆಚ್ಚು ನಡೆದಿರುವುದೇ ಹಳ್ಳಿಗಳಲ್ಲಿ. ಕಟ್ಟುನಿಟ್ಟಿನ ಸಂಪ್ರದಾಯಗಳನ್ನು ಮುರಿಯಲು ಹೋದ ದಲಿತರ ಈ ಹೋರಾಟ ಮನೋಭಾವನೆಯಿಂದಾಗಿ.

"ಯಾವ ಜಾತಿಗಳು ತಮಗಿರುವ ಆಸ್ತಿ ಸಂಪತ್ತು, ಮುಂತಾದುವನ್ನು ಬಳಸಿಕೊಂಡು ಬೆಳೆಯಬಲ್ಲವೋ, ಅವು ಆಸ್ತಿ ಸಂಪತ್ತುಗಳಿಲ್ಲದ ಜಾತಿಗಳನ್ನು ತುಳಿಯುತ್ತಿವೆ. ಈ ರೀತಿಯಲ್ಲಿ ಜಾತಿಯ ತುಳಿತಕ್ಕೆ ಒಳಗಾಗಿರುವ ಕೆಳಜಾತಿಗಳು ತಮ್ಮ ದುಡಿಮೆಯ ಮೂಲಕ ಆಸ್ತಿ, ಸಂಪತ್ತು ಇರುವ ಜಾತಿಗಳನ್ನು ಬೆಳೆಸುತ್ತಿವೆ."[೫೦] ಆಸ್ತಿ ಸಂಪತ್ತು ಈ ಉತ್ಪಾದಕ ವರ್ಗದಿಂದಲೇ ಪಡೆದ ಜಾತಿಗಳು ಇಂದು ಮೇಲುಗೈ ಸಾಧಿಸಿ ರಾಜಕೀಯಾರ್ಥಿಕ ನೆಲೆಗಳನ್ನು ತಮ್ಮ ಭದ್ರಕೋಟೆಯಲ್ಲಿರಿಸಿಕೊಂಡು, ತಮ್ಮ ವೈಭವೋಪೇತ ಜೀವನವನ್ನು ಸುಗಮವಾಗಿ ನಡೆಸುತ್ತಿವೆ. ಇವುಗಳಿಗೆ ವ್ಯವಸ್ಥೆ ಬದಲಿಸಬೇಕೆಂಬ ಯಾವುದೇ ಭಾವನೆಗಳು ಇರುವುದಿಲ್ಲ. ಆದರೆ ಈ ವ್ಯವಸ್ಥೆಯೊಳಗೆ ನಲುಗಿದ ದಲಿತರಿಗೆ ಮಾತ್ರ ಇದರ ಬದಲಾವಣೆಗೆ ಸನ್ನದ್ಧರಾಗಬೇಕಾದ ಸನ್ನಿವೇಶ ಒದಗುತ್ತದೆ. ಅದಕ್ಕೇ ಇವರು ಗತಕಾಲದ ಪರಂಪರೆಯ ಬೇರುಗಳನ್ನು ಹಿಡಿದು ಅಲ್ಲಿಂದಲೇ ತಮ್ಮ ಒಡಲೊಳಗಿನ ಕಿಚ್ಚಿಗೆ ಅಭಿವ್ಯಕ್ತಿ ನೀಡಿ ಬದಲಾವಣೆಯ ಹಾದಿಗೆ ಮುನ್ನಡೆಯುತ್ತಾರೆ.

ಬರ್ತಾವು, ಬರ್ತಾವು
ನಾವು ಹೊಲ್ದ ಕಾಲ್ಮರಿ
ನಮ್ಮ ಕೇರ್ಯಾಕ ಬರ್ತಾವು
ಬೆಳ್ಳಿ ಚಿಕ್ಕಿ ಜೋಡಿ ಮಟಾ ಮಾಯಕ್ಕಾವು
ಹ್ಯಾದ್ರಾ ಕಂಡ್ರ
ಹಗಲ್ಹೊತ್ತ ಹ್ವೊರಾಗ ಎಳದು
ರಾತ್ರ್ಹೊತ್ತ ಹಾಸಿ ಮಲಗಿ
ನೆತ್ತಿ ಮ್ಯಾಲಿ ಕತ್ತಿಯಿಟ್ಟು, ನ್ಯಾಯಮಾಡಿ
ಮಲಿ-ಮೂಗು ಕೊಯ್ದಿವರ ಕಾಲ್ಮರಿ
ನಮ್ಮನಿ ಬಾಗಲಕ ಬರ್ತಾವು[೫೧]

ಇಂತಹ ಉಳ್ಳವರ ಮುಖವಾಡಗಳನ್ನು ಬಯಲು ಮಾಡುತ್ತಲೆ ಅದರ ವಿರುದ್ಧದ ನೆಲೆಗಳನ್ನು ಕಂಡುಕೊಳ್ಳಲು ದಲಿತ ಹೋರಾಟಗಾರರು ೭೦ರ ದಶಕದಲ್ಲಿ ಪ್ರಾರಂಭಿಸಿದರು. ವರ್ತಮಾನದ ವಿಷವೃಕ್ಷದ ಕೊಂಬೆಗಳು ಬೆಳೆದು ಚಾಚಿರಲು ಅದಕ್ಕೆ ಗತಕಾಲದ ಭೂತಕಾಲದ ಬೇರುಗಳಿವೆ ಎಂದು ಕಂಡುಕೊಂಡರು. ಈ ಬೇರುಗಳ ಕತ್ತರಿಸುವಿಕೆಯಿಂದ ಮಾತ್ರ ದಲಿತರ

12

ಏಳಿಗೆ ಸಾಧ್ಯ ಎಂಬುದನ್ನು ದಲಿತ ಕಾವ್ಯ ಹೇಳಿತು. ಅದಕ್ಕೇ ದಲಿತ ಕವಿಗಳು ಮೊದಲು ಅಂಬೇಡ್ಕರ್ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡು ಹಿಂದೂ ಧರ್ಮದ ಸಂಕೋಲೆಗಳಿಂದ ಮುಕ್ತಿ ಹೊಂದಲು ಯೋಚಿಸಿದರು. ವರ್ಗ, ಜಾತಿ, ಮತಗಳಿಂದ ಬಿಡುಗಡೆ ಹೊಂದಿದ ರಾಜ್ಯದ ಕನಸು ದಲಿತರದು.

"ಮರಾಠಾ ದೇಶದಲ್ಲಿ ಪೇಶ್ವೆಗಳು ಆಳುತ್ತಿದ್ದ ಕಾಲದಲ್ಲಿ ಹಿಂದೂವೊಬ್ಬನು ಸಾರ್ವಜನಿಕ ರಸ್ತೆಯಲ್ಲಿ ಬರುತ್ತಿದ್ದರೆ ಅಸ್ಪೃಶ್ಯನು ಆ ಹಾದಿಯಲ್ಲಿ ಕಾಲಿಡಕೂಡದು. ಇವನ ಮೇಲೆ ನೆರಳು ಬಿದ್ದರೆ ಆ ಹಿಂದೂವಿಗೆ ಮೈಲಿಗೆಯಾಗುತ್ತಿತ್ತು. ಅಸ್ಪೃಶ್ಯನಾದವನು ತನ್ನ ಮುಂಗೈಯ ಮೇಲಾಗಲಿ, ಕೊರಳಲ್ಲಾಗಲಿ, ಒಂದು ಕರಿಯ ದಾರವನ್ನು ಕಟ್ಟಿಕೊಳ್ಳಬೇಕಾಗಿತ್ತು. ಹಿಂದೂಗಳು ಅರಿಯದೆ ಅಸ್ಪೃಶ್ಯನನ್ನು ಮುಟ್ಟಿ ಮೈಲಿಗೆಗೆ ಗುರಿಯಾಗಬಾರದೆಂದು ಹೀಗೆ ವಿಧಿಸಲಾಗಿತ್ತು".[೫೨] ಇಂತಹ ಶೋಷಣೆಯ ವಿರುದ್ಧ ಪ್ರತಿಭಟಿಸಲೇಬೇಕಾದಂತ ಅನಿವಾರ್ಯತೆ ದಲಿತರ ಮುಂದೆ ಇತ್ತು. ಇಲ್ಲದಿದ್ದರೆ ಇನ್ನು ಹಲವು ಶತಮಾನಗಳ ಕಾಲ ಇದು ಹೀಗೇ ಮುಂದುವರೆಯುತ್ತಿತ್ತು. ಈಗಲೂ ಸಹ ಹಳ್ಳಿಗಳಲ್ಲಿ ಸಹಪಂಕ್ತಿ ಭೋಜನ ವ್ಯವಸ್ಥೆ ಇಲ್ಲ. ಇಂತಹ ದೇಶವನ್ನು ಹೊಗಳುವ ಮಂದಿ ಮಾತ್ರ ಸಕಲ ಭೋಗಗಳ ಒಡೆಯರಾಗಿರಬೇಕೇ ವಿನಾಃ ಒಬ್ಬ ದಲಿತನಿಂದ ಖಂಡಿತ ಸಾಧ್ಯವಿಲ್ಲ. ದಲಿತ ಕಾವ್ಯ ಇಂತಹ ಪರಿಸ್ಥಿತಿಯನ್ನು ಮನಗಾಣಿಸುವ ರೀತಿಯೂ ಕೂಡ ವಿಶೇಷವಾದುದು. ಏಕೆಂದರೆ ಈ ನೆಲವ ಪ್ರೀತಿಸಬೇಕು ಇಲ್ಲಿನ ಜನರನ್ನು ಪ್ರೀತಿಸಬೇಕು. ಏಕೆಂದರೆ ನಮ್ಮ ಕರ್ಮಭೂಮಿ ಇದು ಎನ್ನುವ ಹೊಗಳು ಭಟ್ಟರಿಗೆ ಚುಚ್ಚುವ ಕವಿತೆಯ ಸಾಲುಗಳು ಹೀಗಿವೆ.

ನಾವು ಹುಟ್ಟಿದ ನೆಲವ ಪ್ರೀತಿಸಬೇಕು, ನಿಜ
ನೆಲ ನಮ್ಮ ಸಲಹಿದರೆ
ಹೆತ್ತ ಬಳಿಕ ತಿಪ್ಪೆಗೆಸೆವ ತಾಯ
ಪ್ರೀತಿಸುವನೆ ಗಟಾರದ ಹುಡುಗ
ಸಲಹದಿದ್ದರೆ ಬೇಡ ಈ ನೆಲ
ನಮ್ಮ ಸಹಿಸುವುದೂ ಇಲ್ಲ
ಜಲ ಬರುವಲ್ಲಿ ಉಕ್ಕುವುದು ಹಾಲಾಹಲ
ನಮ್ಮವರ ಕೊಡಗಳ ಕಂಡ ಬಾವಿಯಲ್ಲಿ
ಕುಂಡಿ ತೊಳೆವ ಹೊಂಡಗಳಲ್ಲಿ
ಕೆಸರಾಡಿದ ನೀರು ಕುಡಿಸುವ ಈ ನೆಲವ
ನಾವು ಹೇಗೆ ನೆನೆಯಬೇಕು
ಶಪಿಸದಿದ್ದರೆ ಸಾಕು ನಾವು ಸಭ್ಯರು[೫೩]

ಪ್ರೀತಿ ಮತ್ತು ಸ್ನೇಹಕ್ಕೆ ಜಗತ್ತಿನಲ್ಲಿ ವಿಶೇಷ ಸ್ಥಾನಮಾನ. ಜಗತ್ತಿನಲ್ಲಿ ಪ್ರೀತಿ ಇಲ್ಲದಿರುವುದರಿಂದಾಗಿಯೇ ಯುದ್ಧಗಳು, ಕೊಲೆಗಳು, ಹಿಂಸೆಗಳು, ಅವಮಾನಗಳು ನಡೆಯುತ್ತಲೇ ಇರುತ್ತವೆ. ಇಂಡಿಯಾ ದೇಶದಲ್ಲಿ ಇವುಗಳು ಇನ್ನೂ ತೀವ್ರತರವಾಗಿ ಶೋಷಿಸುತ್ತವೆ. ಪಾಶ್ಚಿಮಾತ್ಯ ದೇಶಗಳಲ್ಲಿ ವರ್ಣ ವೈರುಧ್ಯಗಳಿಂದಾಗಿ ಶೋಷಣೆಯ ತೀವ್ರತೆ ಇದ್ದರೂ ಕನಿಷ್ಠಪಕ್ಷ ಕರಿಯರನ್ನು ಅಡುಗೆ ಕೆಲಸಕ್ಕೆ ನೇಮಿಸಿಕೊಳ್ಳುವುದರ ಮೂಲಕವಾದರೂ ಅವರನ್ನು ಮನುಷ್ಯರಂತೆ ಕಾಣುತ್ತಾರೆ. ಆದರೆ ಇಂಡಿಯಾ ದೇಶದಲ್ಲಿ ಮುಟ್ಟಿಸಿಕೊಳ್ಳದೆಯೇ ಅನೇಕ ಸಮುದಾಯಗಳನ್ನು ಊರ ಹೊರಗಿರಿಸಿ ಇಂದಿಗೂ ಶೋಷಣೆಯನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಇಂತಹ ದೇಶದಲ್ಲಿ ಹುಟ್ಟಿದ ಅಸ್ಪೃಶ್ಯನೊಬ್ಬ ಈ ನೆಲವನ್ನು ಯಾವ ನೆಲೆಗಟ್ಟಿನಲ್ಲಿ ನಿಂತು ಪ್ರೀತಿಸಬೇಕು, ಕುಂಡಿ ತೊಳೆವ ಹೊಂಡದ ನೀರನ್ನು ಕುಡಿಯಲು ಕೊಟ್ಟು ಈ ನೆಲವನ್ನು, ಈ ದೇಶವನ್ನು, ಈ ಭಾಷೆಯನ್ನು ಪ್ರೀತಿಸು ಎನ್ನುವ ಸೋಗಲಾಡಿಗಳು ಮಾಧ್ಯಮಗಳಲ್ಲಿ ಪ್ರಚಾರ ಗಿಟ್ಟಿಸಿಕೊಳ್ಳುತ್ತಿದ್ದಾರೆ. ಇಂತವರ ಮಧ್ಯೆ ನಿಂತ ದಲಿತರು ಕೇಳುವ ಪ್ರಶ್ನೆಗಳು ಮೇಲಿನ ಕವನಗಳಲ್ಲಿ ಕಾಣಿಸುತ್ತಿದೆ. ಹಾಗೆಯೇ ಇನ್ನೊಂದು ಕವಿತೆ ಹೇಳುವುದು ಹೀಗಿದೆ,

ನಾನು ಸಂತೋಷ ಪಡುತ್ತೇನೆ
ಇಲ್ಲಿ ಹುಟ್ಟಿರುವುದಕ್ಕೆ
ಮರಗಿಡ ಪರ್ವತಗಳು
ಇನ್ನೂ ಉಸಿರಾಡುತ್ತಿರುವುದನ್ನು ನೋಡಿಕೊಂಡು
ಹರಿಯುವ ಝರಿಗಳಲ್ಲಿ ಇಳಿಯುತ್ತ
ಬಯಲು ದಾರಿಯಲ್ಲಿ ಹರಿಯುತ್ತ
ಮಲ ತಿನ್ನಿಸಿಕೊಂಡಾದರೂ
ಮುಟ್ಟಿಸಿಕೊಳ್ಳದೆ
ಪವಿತ್ರನಾಗಿರಬೇಕೆಂದು[೫೪]

ಈ ಎರಡೂ ಕವನಗಳ ಸಾಲು ಶ್ರಮಿಕ ಜನತೆ ತನ್ನ ಶ್ರಮಕ್ಕೆ ಜನತೆ ಕೊಡುವ ಪ್ರತಿಫಲಗಳ ನಿವೇದನೆಯೇ ಆಗಿದೆ. "ಒಬ್ಬ ವ್ಯಕ್ತಿಗೆ ಇನ್ನೊಬ್ಬನ ಸ್ವಾತಂತ್ರ್ಯವನ್ನು ನಿಯಂತ್ರಿಸುವ ಶಕ್ತಿ ಅಥವಾ ಅಧಿಕಾರ ಒದಗುವುದು ಧರ್ಮದಿಂದ, ಸಾಮಾಜಿಕ ಸ್ಥಾನಮಾನದಿಂದ ಹಾಗೂ ಆಸ್ತಿಯಿಂದ. ಈ ಮೂರರಲ್ಲಿ ಒಂದು ಕಾಲದಲ್ಲಿ ಒಂದು ಪ್ರಧಾನವಾಗಿದ್ದರೆ ಇನ್ನೊಂದು ಕಾಲದಲ್ಲಿ ಇನ್ನೊಂದು ಪ್ರಧಾನವಾಗುತ್ತದೆ ಅಷ್ಟೆ ವ್ಯತ್ಯಾಸ."[೫೫] ಆದರೆ ದುರದೃಷ್ಟವಶಾತ್

14

ಈ ಮೂರೂ ಸಹ ಮೊದಲಿನಿಂದ ಮೇಲ್ವರ್ಗಗಳ ಕುತ್ತಿಗೆಗಳಲ್ಲಿ ಮಾಲೆಗಳಾಗಿ ಸುತ್ತಿಕೊಂಡಿವೆ. ಆದರೆ ಇಂದು ವಸ್ತುಸ್ಥಿತಿ ಬದಲಾಗಿದೆ. ಮೇಲ್ವರ್ಗವೆನಿಸಿಕೊಂಡ ಬ್ರಾಹ್ಮಣರಿಂದ ಇಂದು ದಲಿತರಿಗೆ ಯಾವುದೇ ಅನ್ಯಾಯಗಳು ಆಗುತ್ತಿಲ್ಲ. ಅದಕ್ಕೆ ಅವರ ತಟಸ್ಥ ಧೋರಣೆಯೂ ಇರಬಹುದು. ಆದರೆ ಬಂಡವಾಳಶಾಹಿ, ಭೂಮಾಲೀಕ ವರ್ಗ ಮಾತ್ರ ನಿರಂತರವಾಗಿ ದಲಿತರನ್ನು ದೋಚುತ್ತಲೇ ಬರುತ್ತಿದೆ ಮತ್ತು ಶೋಷಣೆಯ ತೀವ್ರತೆಗೆ ಅವರನ್ನು ದೂಡಿದೆ. ಏಕೆಂದರೆ 'ತತ್ತೂರಿನಲ್ಲಿ ಮೂತ್ರ ಕುಡಿಸಿದ್ದು' 'ಬೆಂಡಿಗೇರಿಯಲ್ಲಿ ಹೇಲು ತಿನ್ನಿಸಿದ್ದು' ಕೇರಿಗೆ ಕೇರಿಗಳನ್ನೇ ಹಾಡುಹಗಲೇ ಸುಟ್ಟು ಸುಡುಗಾಡು ಮಾಡಿದ್ದು, ಕಂಬಾಲಪಲ್ಲಿಯಲ್ಲಿ ಏಳುಜನ ದಲಿತರನ್ನು ಜೀವಂತ ಇದ್ದಾಗಲೇ ಬೆಂಕಿಹಾಕಿ ಸುಟ್ಟದ್ದು ಈ ಭೂಮಾಲಿಕ ವರ್ಗದವರೇ ವಿನಾಃ ಯಾವ ಬ್ರಾಹ್ಮಣರೂ ಅಲ್ಲ. ಇಂತವರ ದಬ್ಬಾಳಿಕೆಗಳನ್ನು ದುಡಿವ ವರ್ಗದ ಮೂಲಕ ನೋಡುವ ಪರಿಯೇ ದಲಿತ ಕಾವ್ಯದ ಪ್ರಮುಖ ತಿರುಳು.

"ಜಾತೀಯತೆ, ಅಸ್ಪೃಶ್ಯತೆಗೂ ಮತ್ತು ಭೂಮಿಯ ಒಡೆತನ ಹಾಗೂ ಅದರಿಂದ ಹುಟ್ಟುವ ಅಧಿಕಾರಕ್ಕೂ ನೇರವಾದ ಸಂಬಂಧವಿದೆ. ಇಂದು ಜಾತೀಯತೆ ಮತ್ತು ಅಸ್ಪೃಶ್ಯತೆ ಐಟಿ, ಬಿಟಿ ಯುಗವನ್ನೂ ಮೀರಿ ಮುನ್ನಡೆದಿದೆ".[೫೬] ಸಂಪತ್ತು ಮತ್ತು ಭೂಮಿಯ ಒಡೆತನವಿಲ್ಲದ ದಲಿತರು ನಿತ್ಯ ಶೋಷಣೆ ಅನುಭವಿಸುವಂತಾಗಿದೆ. ಇದನ್ನು ಮನಗಂಡು ದಲಿತ ಸಂಘರ್ಷ ಸಮಿತಿ ತನ್ನ ಹೋರಾಟದ ಆರಂಭದ ಹೆಜ್ಜೆಗಳಲ್ಲಿ ದಲಿತರಿಗೆ ಭೂಮಿ ಕೊಡಿಸಲು ನಿರಂತರವಾಗಿ ಶ್ರಮಿಸಿತು.

'ಕೊಟ್ಟಿದ್ದು ಸಾಕು ಹೆಂಡ ಕೋಳಿ, ದಲಿತರು ನಿಂತಿದ್ದಾರೆ ಭೂಮಿ ಕೇಳಿ' ಎಂಬ ಘೋಷಣೆಗಳೊಂದಿಗೆ ದಲಿತ ಸಂಘರ್ಷ ಸಮಿತಿ ಕರ್ನಾಟಕದಾದ್ಯಂತ ಭೂ ಹೋರಾಟ ಮತ್ತು ವಸತಿಗೆ ಸಂಬಂಧಿಸಿದ ಹೋರಾಟಗಳನ್ನು ೧೯೭೩ರಿಂದಲೇ ಹಮ್ಮಿಕೊಂಡಿತು. ಹಾಸನದ ಬಿದಿರೆ ಕಾವಲು, ಹೆಗ್ಗಡೆ ದೇವನಕೋಟೆಯ ದೇವಲಾಪುರ, ಕೋಲಾರ ಜಿಲ್ಲೆಯ ನಾಗಸಂದ್ರ, ರಾಯಚೂರಿನ ಮೆದಕಿನಾಳ, ದಕ್ಷಿಣ ಕನ್ನಡದ ಪೇಜಾವರ, ಮೂಡಿಗೆರೆಯ ಗಬ್‌ಗಲ್ ಚಂಡುಗೋಡು, ಮರಸನಪಲ್ಲಿಯಲ್ಲಿ ೨ ರೂಪಾಯಿ ಕಳ್ಳೆಮರಿಗೆ ದಲಿತರು ಮಾರಿಕೊಂಡ ಜಮೀನನ್ನು ಕೊಡಿಸಿರುವುದು. ಮುಂತಾದ ಹೋರಾಟಗಳನ್ನು ಡಿ.ಎಸ್.ಎಸ್. ಹಮ್ಮಿಕೊಂಡು ತಕ್ಕಮಟ್ಟಿನ ಯಶಸ್ಸನ್ನು ಪಡೆಯಿತು.

ಅದರಲ್ಲೂ ೧೯೭೬ರಲ್ಲಿ ಭದ್ರಾವತಿಯ ಸಿದ್ಧಾಪುರದ ಭೂ ಹೋರಾಟ, ಕರ್ನಾಟಕದಲ್ಲಿ ಭೂ ಪರಭಾರೆ ನಿಷೇಧಕಾಯ್ದೆ ಜಾರಿಗೆ ತರುವುದಕ್ಕೆ ಕಾರಣವಾಯಿತು. ದಲಿತರ ಮೂಲಭೂತ ಸಮಸ್ಯೆ ಅಡಗಿರುವುದೇ ಆರ್ಥಿಕ ಅಸಮಾನತೆಯಿಂದ ಮತ್ತು ಭೂಮಿಯ ಒಡೆತನವಿಲ್ಲದಿರುವುದರಿಂದ. ಇದನ್ನು ತಿಳಿದ ಡಿ.ಎಸ್.ಎಸ್. ತನ್ನ ಆರಂಭದ ಹೋರಾಟದಲ್ಲಿ

15

ಇದನ್ನು ಗಳಿಸಲು ಪ್ರಯತ್ನಿಸಿತು. ನಂತರದಲ್ಲಿ ಈ ಹೋರಾಟ ಮುಂಚೂಣಿಗೆ ಬರದ ಕಾರಣ ಭೂಮಿ ದಲಿತರ ಕೈಸೇರಲಿಲ್ಲ. ಆದರೆ ಭೂಮಿಯ ಹಕ್ಕು ದಲಿತರಿಗೆ ಎಷ್ಟು ಮುಖ್ಯ ಎಂಬುದನ್ನು ಅನೇಕ ಹೋರಾಟದ ಹಾಡುಗಳು ಜನತೆಯ ಮುಂದೆ ಮನ ಬಿಚ್ಚಿ ಹಾಡಿದವು,

....
ನೂರಕೆ ತೊಂಬತ್ತು ಬಡ ಜನಗಳು
ಭೂಮಿಯ ನಂಬಿ ಬದುಕುತಿರುವರು
ಉಳುವವನಿಗೆ ಭೂಮಿ ಇಲ್ಲ
ಉತ್ತರು ಬಿತ್ತರು ಗಂಜಿ ಇಲ್ಲ
ರೈತ ದೇಶದಲ್ಲಿ ರೈತ ಮಗನಿಗೆ ಭೂಮಿ ಇಲ್ಲವಲ್ಲೊ ಜನರೇ

ಈ ಅಸಮಾನತೆಗೆ ಮೂಲಕಾರಣ ಆಲಿಸಿ ಕೇಳಿರೋ ಜನರೇ
ದೊಡ್ಡ ದೊಡ್ಡ ಭೂಮಾಲೀಕರೆಲ್ಲ
ತಿಮ್ಮನ ಬೊಮ್ಮನ ಮಾಡಿಕೊಂಡರು
ನಾಯಿ ನರಿ ಕತ್ತೆ ಹೆಸರಲಿ
ಸೈಟು ಭೂಮಿಗಳ ಹಂಚಿಕೊಂಡರು
ಭೂಸುಧಾರಣೆ ಎಂಬ ಘೋಷಣೆ
ಕಾಂಗ್ರೆಸ್ ನಡೆಸಿದ ನಾಟಕವಣ್ಣ
ಈ ಅಸಮಾನತೆಗೆ ಮೂಲಕಾರಣ ಆಲಿಸಿ ಕೇಳಿರೋ ಜನರೇ॥
ಟಾಟಾ ಬಿರ್ಲಾರ ಹಣದಿಂದಲೇ ಗದ್ದುಗೆಗೇರಿದ ನರಸಿಂಹರಾಯ
ಟಾಟಾ ಬಿರ್ಲಾರ ಹಣದಿಂದಲೇ ಕುರ್ಚಿಲಿ ಕುಂತ ರಾಜೀವಗಾಂಧಿ
ಕಟ್ಟಿರುವಂತ ಭವ್ಯ ಬಂಗಲೆಗಳು ಯಾರಯಾರವೋ ಜನರೇ॥
ಟಾಟಾ ಬಿರ್ಲಾರ ಆಸ್ತಿಪಾಸ್ತಿಗಳು ಕೋಟಿಗಟ್ಟಲೆ ಬೆಳೆಯುತಿರುವವು
ದಿನಕಳೆದಂತೆ ಬಡತನವೆಂಬುದು ಚುಕ್ಕೆಗಳಲ್ಲಿ ಸೇರುತಿರುವುದು
ಆ ಅಸಮಾನತೆಗೆ ಮೂಲಕಾರಣ ಆಲಿಸಿಕೇಳಿರೋ ಜನರೇ॥[೫೭]

ಈ ದೇಶದ ಬಂಡವಾಳಶಾಹಿಗಳಿಗೂ, ದೇಶ ಆಳುವವರಿಗೂ ಒಂದು ಅವಿನಾಭಾವ ಸಂಬಂಧವಿದೆ. ಅವರಿದ್ದರೆ ಇವರು, ಇವರಿದ್ದರೆ ಅವರು ಎಂಬುವಷ್ಟರ ಮಟ್ಟಿಗೆ ಆರ್ಥಿಕತೆ

16

ಅವರಿಬ್ಬರನ್ನು ಆವರಿಸಿಕೊಂಡಿದೆ. ವಿದೇಶಿ ಬಂಡವಾಳ ಹೂಡಿಕೆದಾರರಿಗೆ ಮತ್ತು ದೇಶೀಯ ಬಂಡವಾಳ ಹೂಡಿಕೆದಾರರಿಗೆ ವಿಶೇಷ ಸವಲತ್ತು ಒದಗಿಸುವ ಇಲ್ಲಿನ ರಾಜಕಾರಣಿಗಳು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಇವರ ಸಂಪತ್ತು ವರ್ಷದಿಂದ ವರ್ಷಕ್ಕೆ ಕೋಟಿ ಕೋಟಿಗಳಲ್ಲಿ ದ್ವಿಗುಣಗೊಳ್ಳುವಂತೆ ನೋಡಿಕೊಂಡರು. ಜೊತೆಗೆ ಇವರೂ ಸಹ ವಂಶ ಪಾರಂಪರ್ಯವೆಲ್ಲಾ ಕೂತುಣ್ಣುವಷ್ಟು ಆಸ್ತಿಯನ್ನು ಕೂಡಿಟ್ಟುಕೊಂಡರು. ಇಂತಹ ಸ್ವಾರ್ಥ ಸಾಧನೆಗಾಗಿ ಈ ಮಣ್ಣಿನ ದುಡಿಯುವ ಜನತೆಯನ್ನು ಬಲಿಕೊಟ್ಟರು. ಓಟ್ ಬ್ಯಾಂಕ್‌ಗಾಗಿ ಭೂ ಸುಧಾರಣೆಯ ನಾಟಕವಾಡಿದ ಕಾಂಗ್ರೆಸ್ ಈ ದೇಶದ ದಲಿತರನ್ನು ಉಪಯೋಗಿಸಿಕೊಂಡು ಸ್ವಾಂತಂತ್ರ್ಯ ನಂತರದಲ್ಲಿ ಮೂವತ್ತು ವರ್ಷ ಆಳ್ವಿಕೆ ನಡೆಸಿತೇ ಹೊರತು ದಲಿತರಿಗಾಗಿ ಏನನ್ನೂ ಮಾಡಿಲ್ಲ. ಕೆಲವೊಂದು ತೇಪೆ ಹಚ್ಚುವ ಕೆಲಸವನ್ನು ಮಾಡಿ, ಅದರಿಂದಲೇ ಅಬ್ಬರದ ಪ್ರಚಾರವನ್ನು ಪಡೆದು ದಲಿತರನ್ನು ವಂಚಿಸುತ್ತಾ ರಾಜ್ಯಭಾರ ಮಾಡಿತು. ಇಂತಹ ವ್ಯವಸ್ಥೆಯ ಹುನ್ನಾರವನ್ನು ಮೇಲಿನ ಕಾವ್ಯ ಹೇಳುತ್ತಿದೆ.

ಇಡೀ ಭಾರತದ ಭೂಮಿ, ಸಂಪತ್ತು ಹರಿದು ಹೋದ ರೀತಿಯನ್ನು ಈ ಹೋರಾಟದ ಹಾಡು ಜನಪರ ಆಶಯದ ಮೂಲಕ ಜನರೆದುರು ಇಟ್ಟು, ಅದರ ವಿರುದ್ಧ ಸಿಡಿದು ನಿಂತು ಭೂ ಹಕ್ಕು ಪಡೆಯಲು ದಲಿತರಿಗೆ ಒತ್ತಾಯಿಸಿದೆ. ಇಂತಹ ಹತ್ತಾರು ಹೋರಾಟದ ಹಾಡುಗಳು ದುಡಿವ ಜನತೆಯ ದೃಷ್ಟಿಕೋನದ ಮೂಲಕವಾಗೇ ಪದಕಟ್ಟಿ ಹಾಡಿ ಜನತೆಯನ್ನು ಎಚ್ಚರಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡಿವೆ. ಜನಪರ ಆಶಯಗಳೊಂದಿಗೆ ಬಂದ ದಲಿತ ಕಾವ್ಯ ಜನತೆಯಲ್ಲಿ ಹೋರಾಟದ ಕೆಚ್ಚನ್ನು ತುಂಬಿವೆ.

ಒಂದು ಕಡೆ ದಲಿತರು ತಮ್ಮ ಹೋರಾಟವನ್ನು ಭೂಮಿಯ ಸುತ್ತ ಕೇಂದ್ರೀಕರಿಸಿಕೊಂಡಿದ್ದು ಭೂಮಾಲೀಕ ಜಾತಿಗಳಿಗೆ ನುಂಗಲಾರದ ತುತ್ತಾಯಿತು. ಈ ಹೋರಾಟವನ್ನು ಹತ್ತಿಕ್ಕುವ ಸಲುವಾಗಿ ಅದು ಅನೇಕ ಹುನ್ನಾರಗಳನ್ನು ನಡೆಸಿತು. ಮತ್ತೊಂದು ಕಡೆ ಸರ್ಕಾರವೂ ಕೂಡ ದಲಿತರನ್ನು ದಿಕ್ಕು ತಪ್ಪಿಸುವ ಸಲುವಾಗಿ ಅನೇಕ ಯೋಜನೆಗಳನ್ನು ಕಾಲಕಾಲಕ್ಕೆ ಹಮ್ಮಿಕೊಂಡಿತು. ದಲಿತರ ಕಲ್ಯಾಣದ ಹೆಸರಿನಲ್ಲಿ ಜಾರಿಯಾದ ಅನುದಾನಗಳು, ಉದ್ಯೋಗ ಖಾತ್ರಿ ಯೋಜನೆಗಳು, ವಸತಿಗೆ ಸಂಬಂಧಿಸಿದ ಯೋಜನೆಗಳು, ಗಂಗಾ ಕಲ್ಯಾಣ ಯೋಜನೆಗಳು ಮುಂತಾದ ಅಭಿವೃದ್ಧಿ ಯೋಜನೆಗಳನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಹಮ್ಮಿಕೊಳ್ಳುವುದರ ಮೂಲಕ ದಲಿತರ ಮೂಲಭೂತ ಸಮಸ್ಯೆಗಳಿಗೆ ತೇಪೆ ಹಚ್ಚುವ ಕೆಲಸವನ್ನು ಕೈಗೊಂಡು ದಲಿತರ ಹೋರಾಟವನ್ನು ಒಂದು ರೀತಿಯಲ್ಲಿ ಮೊಟಕುಗೊಳಿಸಿತು. ಈ ರೀತಿಯ ತಂತ್ರಗಳನ್ನು ದಲಿತ ಕಾವ್ಯಗಳು ತಮ್ಮ ಅಭಿವ್ಯಕ್ತಿಯಲ್ಲಿ ವ್ಯಕ್ತಪಡಿಸಿವೆ. 17

ಸಾವಿರಾರು ಜಾತಿ ಮತಗಳ ಬಿತ್ತಿ
ಕಲ್ಲು, ಗಿಡ, ಹಲ್ಲಿಯೇ ದೇವರೆಂದು
ಶಿವದಾರ, ಜನಿವಾರ ಆಧಾರಗಳ ಮೇಲೆ
ಬದುಕುವ ಜನಕ್ಕೆಲ್ಲ ಧಿಕ್ಕಾರವಿರಲಿ

....

ಸಾವಿರಾರು ವರ್ಷಗಳಿಂದ ಸುಖದ
ಸುಪ್ಪತ್ತಿಗೆಯಲ್ಲಿ ಬದುಕಿ
ಬಡವರ ರಕ್ತ ಹೀರಿ ಮೈ ಬೆಳೆಸಿ
ಬದುಕುವ ಜನಕ್ಕೆಲ್ಲ ಧಿಕ್ಕಾರವಿರಲಿ

ದುಡಿಯುವ ದಲಿತನ ಅನ್ನವ ತಿಂದು
ಆತನ ಬೆನ್ನಿಗೆ ಚೂರಿಯನಿಟ್ಟು
ಮಠಾಧಿಪತಿಗಳ ಹರಕೆಯ ಹೊತ್ತು
ಬದುಕುವ ಜನಕ್ಕೆಲ್ಲ ಧಿಕ್ಕಾರವಿರಲಿ[೫೮]

ಸಹನೆ ಕಟ್ಟೆಯೊಡೆದ ಶ್ರಮಿಕರ ಒಡಲೊಳಗಿನ ಪ್ರತಿರೋಧಗಳೇ ಕವನವಾಗಿ ಮೈದಾಳಿದೆ. ಇಡೀ ಕಾವ್ಯದ ಸಾಲುಗಳು ಶ್ರಮದ ನೆಲೆಗಳಿಂದ ಉಂಟಾದ ಸಾಲುಗಳೇ ಹೊರತು ಎ.ಸಿ. ರೂಮಿನಲ್ಲಿ ಕೂತು ಏಕಾಂಗಿತನದ ಸ್ವಗತದಲ್ಲಿ ಮೈಮರೆವಿನ ನೆಲೆಯಲ್ಲಿ ಬರೆದ ಪದಗಳಲ್ಲ. ಇವುಗಳನ್ನು ಬೀದಿಯಲ್ಲಿ ಹಾಡಿದಾಗ ಜನತೆಯನ್ನು ಎಚ್ಚರಿಸುವ ತಾಕತ್ತು ಈ ಎಲ್ಲಾ ಹಾಡುಗಳಿಗಿದೆ. ತನ್ನನ್ನು ತುಳಿಯುತ್ತಿರುವ ಸಂಸ್ಕೃತಿಯನ್ನು ಧಿಕ್ಕರಿಸುವುದೇ ಅನೇಕ ದಲಿತ ಕಾವ್ಯಗಳ ಮೂಲಧ್ಯೇಯವಾಗಿರುತ್ತದೆ.

ಮೇಲಿನ ಕವಿತೆ ಸಾಮಾಜಿಕ ಮತ್ತು ಆರ್ಥಿಕ ನೆಲೆಗಳಿಂದ ದಲಿತರನ್ನು ನೋಡಿದೆ. ಇದರಿಂದಾಗಿ ಅದು ಸಾಮಾಜಿಕ ನ್ಯಾಯದ ಹುಡುಕಾಟದಲ್ಲಿ ತೊಡಗಿದೆ. ದಲಿತರಿಗೆ ಭೂಮಿ ಇಲ್ಲ, ಇದ್ದಬದ್ದ ಭೂಮಿಯನ್ನೆಲ್ಲ ಹೆಂಡ ಬಾಡಿಗೆ ಮಾರಿಕೊಂಡಿದ್ದಾರೆ ಎಂಬುದನ್ನು ಹಲವು ದಶಕಗಳಿಂದ ಹೇಳುತ್ತಲೇ ಬರಲಾಗುತ್ತಿದೆ. ಆದರೆ ಕಾವ್ಯ 'ದುಡಿಯುವ ದಲಿತನ ಅನ್ನವ ತಿಂದು, ಆತನ ಬೆನ್ನಿಗೆ ಚೂರಿಯನಿಟ್ಟು' ಎನ್ನುವುದರ ಮೂಲಕ ಭೂಮಿಯನ್ನು ದಲಿತರು ತಾವಾಗೇ ಮಾರಿಕೊಂಡವರಲ್ಲ ಮತ್ತು ಭೂಮಿಯನ್ನು ತಾವಾಗೇ ಕಳೆದುಕೊಂಡವರಲ್ಲ ಅದನ್ನು ಕಿತ್ತುಕೊಳ್ಳಲಾಗಿದೆ ಎಂಬ ಅರಿವನ್ನು ಬಿತ್ತಲು ಪ್ರಯತ್ನಿಸುತ್ತಿದೆ.

ದಲಿತರು ತಮ್ಮ ಮೇಲಿನ ದೌರ್ಜನ್ಯಗಳನ್ನು ಧಿಕ್ಕರಿಸಲು ಹೊರಟದ್ದರ ಪ್ರತಿಫಲವೇ ದಲಿತ ಕಾವ್ಯ ಸೃಷ್ಟಿಗೆ ಕಾರಣ. ದಲಿತರಿಗೆ ತಮ್ಮ ದಾಸ್ಯದ ಸಂಕೋಲೆಗಳ ಜೊತೆ ತಮ್ಮ

18

ಹಕ್ಕುಗಳನ್ನು ಪಡೆದುಕೊಳ್ಳಬೇಕೆಂಬ ತೀವ್ರ ಸಂಕಲ್ಪವಿದ್ದಂತೆಯೇ ಆಳುವ ವರ್ಗಕ್ಕೂ ಒಂದು ಗುಪ್ತ ಅಜೆಂಡಾವಿರುತ್ತದೆ. ಅದೇನೆಂದರೆ "ದಲಿತ ಸಮುದಾಯಗಳು ಬಹುಕಾಲದಿಂದಲೂ ಪ್ರಭುತ್ವದ ಪಾದದ ಅಡಿಯಲ್ಲಿ ಅಪ್ಪಚ್ಚಿಯಾಗಿರುವಂತಹವು. ತುಳಿದು ಕೊಬ್ಬಿದ ಸಮಾಜ ಮತ್ತದರ ಗರ್ವದ ವರ್ಗವು ತಾನು ನಿಶ್ಯಕ್ತನಾಗುತ್ತಿದ್ದೇನೆ ಎನಿಸಿದಾಗಲೆಲ್ಲ ತನ್ನ ಎದುರಾಳಿಯನ್ನು ಆತ್ಮೀಯನನ್ನಾಗಿಸಿಕೊಳ್ಳಲು ತಂತ್ರಗಳನ್ನು ರೂಪಿಸುತ್ತದೆ. ಹಾಗೆ ತಂತ್ರ ಬಳಸಿ ತನ್ನ ಅಸ್ತಿತ್ವವನ್ನು ಬಲಪಡಿಸಿಕೊಳ್ಳುತ್ತಿರುತ್ತದೆ. ಹಂಚಿಕೆಯ ನ್ಯಾಯದಲ್ಲೆ ಹಂಗಿಗೆ ಒಳಪಡಿಸುವುದು ಪ್ರಭುತ್ವದ ಹಳೆಯ ಗುಣ".[೫೯] ದಲಿತರು ಇದನ್ನು ಅತ್ಯಂತ ಜಾಗರೂಕತೆಯಿಂದ ಗಮನಿಸಬೇಕು, ಗಮನಿಸಿ ಎಚ್ಚರಗೊಳ್ಳಬೇಕು ಇಲ್ಲವಾದರೆ 'ನಾವು ನಿಮ್ಮವರು' ಎಂದು ಹೇಳುತ್ತಲೇ ಸಮಸ್ತವನ್ನು ಅನುಭವಿಸುವ ಪ್ರಭುತ್ವ ಶಕ್ತಿಗೆ ಮತ್ತಷ್ಟು ಕಾವು ಕೊಟ್ಟಂತಾಗುತ್ತದೆ.

"ವರ್ಗಗಳು ಹುಟ್ಟಿದ್ದು ಖಾಸಗಿ ಒಡೆತನದಿಂದ, ಇಡೀ ಸಮಾಜದ ಒಡೆತನಕ್ಕೆ ಸೇರಿದ್ದ ವನ, ಭೂಮಿ, ಇತರ ವಸ್ತುಗಳು ಕೆಲವೇ ಜನರ ಸೊತ್ತಾದಾಗ ವರ್ಗಗಳು ಹುಟ್ಟುತ್ತವೆ. ಸಮಾಜದ ಉಪಭೋಗಕ್ಕಿಂತ ಆರ್ಥಿಕ ಉತ್ಪಾದನೆ ಸಾಧ್ಯವಾದಾಗ ಸಂಗ್ರಹ ಸಾಧ್ಯ. ಆಗ ಖಾಸಗಿ ಒಡೆತನ, ಬುಡಕಟ್ಟುಗಳ, ಸೈನಿಕ, ನೇತಾರರ ಇಲ್ಲವೇ ಪುರೋಹಿತರ ಪಾಲಾಗುತ್ತದೆ. ಜಗತ್ತಿನ ಎಲ್ಲೆಡೆ ಶೋಷಕ ವರ್ಗಗಳು ಹುಟ್ಟಿದ್ದೇ ಹೀಗೆ."[೬೦] ಇಂತಹ ವರ್ಗಗಳನ್ನು ಬುಡಸಮೇತ ಕಿತ್ತೊಗೆಯಬೇಕು. ಆಗಲೇ ಸಮಾನತೆಯ ನಾಡು ಕಟ್ಟಲು ಸಾಧ್ಯ. ಇಂತಹ ನಾಡು ಕಟ್ಟಲು ನೊಂದವರೇ ಧಿಕ್ಕಾರ ಕೂಗಲು ಮುಂದಾಗಬೇಕು. ಇದರ ಆಲೋಚನೆಗೆ ಪುಷ್ಟಿ ನೀಡಲೋ ಎಂಬಂತೆ ದಲಿತರಿಂದ ಕಾವ್ಯವೂ ತೆರೆದುಕೊಂಡಿತು.

ವರ್ಗ ಕದನ ನಮ್ಮದೋ
ವರ್ಗ ಪ್ರೇಮ ನಮ್ಮದೋ
ವರ್ಗವಿಲ್ಲದ ರಾಜ್ಯವೋ
ಹೋರಾಡಿ ತಂದೆ ತರುವೆವು

ಬಿಲ್ಲುಬಾಣ ಕತ್ತಿ ಎತ್ತಿ
ವರ್ಗ ವೈರಿ ಹೊಟ್ಟೆ ಸೀಳಿ
ಕುಲಮತ ಗುಲಾಮತನಕೆ
ಗೋರಿ ತೋಡುವಾ ಕದನ
ಬುಡಕಟ್ಟು ಬಾಣ ಕದನವೋ

....

19

ತಂತ್ರಜ್ಞಾನ ಬೆಳೆಯಿತೊ
ವಿಜ್ಞಾನ ವಿಕಾಶವಾಯಿತೊ
ವಿಜ್ಞಾನ ತಂತ್ರಜ್ಞಾನ
ಕಷ್ಟಜೀವಿ ಕಾಣಿಕೆಯೋ

ಪ್ರಪಂಚದ ಅರ್ಥಸ್ಥಿತಿ
ಯಂತ್ರ ತಂತ್ರ ಉತ್ಪತ್ತಿ
ಕಾರ್ಖಾನೆ ಮಿಲ್ಲು ಮಿಶನ್
ಶ್ರಮಜೀವಿಯೇ ನಿರ್ಮಿಸಿದ
ಶ್ರಮಶಕ್ತಿ ಕದನ ನಮ್ಮದೋ
ಶ್ರಮ ಇಲ್ದ ಸಾವು ನಿಮ್ಮದೋ।

ಇತಿಹಾಸ ತುಂಬ ಯುದ್ಧವೋ
ಯುದ್ಧವೇ ಇತಿಹಾಸವೋ
ವಿಶ್ವ ಕಾರ್ಮಿಕರಣ್ಣರೇ
ವೀರ ಯೋಧರಾಗಿರಿ
ವಿಶ್ವವ್ಯಾಪಿ ರೈತರೇ
ರೈಫಲೆತ್ತಿ ಸಾಗಿರಿ
ಬುಡಕಟ್ಟು ಅಡವಿ ಹುಲಿಗಳೇ
ಬಿಲ್ಲುಬಾಣ ಹೂಡಿರಿ
ವಿದ್ಯಾರ್ಥಿ ಯುವ ಶೂರರೇ
ವರ್ಗ ಸಮರ ಸಾರಿರಿ।[೬೧]

ವರ್ಗವಿಲ್ಲದ ರಾಜ್ಯ ತರಲು ಹೋರಾಟವೊಂದೇ ದಾರಿ ಎನ್ನುವುದನ್ನು ದಲಿತ ಕಾವ್ಯ ಅಭಿವ್ಯಕ್ತಿಸಿದೆ. ಹಳ್ಳಿಯ ಮೂಲಭೂತ ಅವಶ್ಯಕತೆಯಿಂದ ಹಿಡಿದು ವಿಜ್ಞಾನ ತಂತ್ರಜ್ಞಾನ ಮುಂದುವರಿಯಲು ಶ್ರಮಿಕ ಶಕ್ತಿಯೇ ಕಾರಣ. ಅದು ಬೆಳವಣಿಗೆ ಹೊಂದಿ ಉಳ್ಳವರ ಗಾಳಕ್ಕೆ ಸಿಲುಕಿ, ಶ್ರಮಿಕರ, ಕಷ್ಟಜೀವಿಗಳ, ಬುಡಕಟ್ಟು ಜನರ, ಕಾರ್ಮಿಕರ ಶೋಷಣೆಗೆ ದಾರಿ ಮಾಡಿಕೊಡುತ್ತದೆ. ಇಂತಹ ವರ್ಗ ಮೇಲ್ಪದರದವರ ವಿರುದ್ಧ ನಿಂತು ವರ್ಗರಹಿತ ಸಮಾಜ ನಿರ್ಮಿಸಬೇಕಾದರೆ ತುಳಿದವರೆಲ್ಲಾ ಸೇರಿ ರೈಫಲನೆತ್ತುವುದೇ ಉಚಿತ ಎಂಬುದನ್ನು ಕಾವ್ಯ ವರ್ಗದಿಂದ ತುಳಿತಕ್ಕೊಳಗಾದ ಜನತೆಯ ಮನದಾಳದಲ್ಲಿ ನಿಂತು ದಲಿತ ಕಾವ್ಯ

ತನ್ನ ಆಶಯಗಳಲ್ಲಿ, ಧೋರಣೆಗಳಲ್ಲಿ, ಧಿಕ್ಕಾರಗಳಲ್ಲಿ, ಪ್ರತಿಭಟನೆಯಲ್ಲಿ, ಹೋರಾಟದಲ್ಲಿ ದುಡಿವ ವರ್ಗದ ದೃಷ್ಟಿಕೋನವನ್ನು ನಿರ್ಮಿಸಿದೆ. ದುಡಿಯುವ ವರ್ಗ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯಕ್ಕಾಗಿ ಅದು ಒತ್ತಾಯಿಸಿದೆ. "ಸಮಾಜವಾದಿ ಕ್ರಾಂತಿ ಬರುವುದನ್ನು ಕಂಡು ಆಳುವ ವರ್ಗಗಳು ತತ್ತರಿಸಲಿ, ಕಾರ್ಮಿಕ ವರ್ಗಕ್ಕೆ ಕಳೆದುಕೊಳ್ಳಲು ಉಳಿದಿರುವುದು ದಾಸ್ಯದ ಸಂಕೋಲೆಗಳಷ್ಟೇ. ಆದರೆ ಪಡೆಯಲು ಸಮಸ್ತ ಜಗತ್ತೇ ಇದೆ. ಎಲ್ಲ ದೇಶಗಳ ಶ್ರಮಜೀವಿಗಳೇ ಒಂದಾಗಿ"[೮] ಎಂಬ ಮಾರ್ಕ್ಸ್‌ನ ವಿಚಾರಧಾರೆ ದಲಿತ ಕಾವ್ಯದ ಉದ್ದಕ್ಕೂ ಕೆಲಸ ಮಾಡಿರುವುದನ್ನು ನೋಡಬಹುದು.

ದಲಿತರು ಜಮೀನುಗಳಲ್ಲಿ, ಜೀತಗಾರಿಕೆಯಲ್ಲಿ, ಫ್ಯಾಕ್ಟರಿಯಲ್ಲಿ, ಮನೆಕೆಲಸಗಳಲ್ಲಿ ಎಲ್ಲ ಕಡೆಗಳಲ್ಲೂ ಶೋಷಣೆಗೆ ಒಳಗಾಗುತ್ತಿದ್ದಾರೆ. ಇಂತಹ ಶೋಷಣೆಯು ಅವರ ದುಡಿಮೆಯ ಜಾಗದಲ್ಲಿ ನಡೆಯುತ್ತಿರುವುದು ವಿಷಾದನೀಯ. ಈ ಶೋಷಣೆಯನ್ನು ಕೊನೆಗಾಣಿಸಬೇಕೆಂಬ ಆಶಯದೊಂದಿಗೆ ದಲಿತರ ಹೋರಾಟ ೭೦ರ ದಶಕದಲ್ಲಿ ಹುಟ್ಟಿತು. ಇದಕ್ಕೆ ವೇಗವರ್ಧಕ ನೀಡಲಿಕ್ಕೆ ದಲಿತ ಕಾವ್ಯ ಸ್ಫೂರ್ತಿಯಾಯಿತು. ಆಳುವ ವರ್ಗ ತನ್ನ ಆಳುವ ಗುಣಗಳನ್ನು ನಿರಂತರವಾಗಿ ಉಳಿಸಿಕೊಳ್ಳಲು ಏನಾದರೊಂದು ತಂತ್ರ ಉಪಾಯಗಳನ್ನು ಹೂಡುತ್ತಲೇ ಇರುತ್ತದೆ. ಅದರಲ್ಲಿ ದಲಿತರನ್ನು ದಿಕ್ಕು ತಪ್ಪಿಸುವ ಹಾದಿಯೂ ಒಂದು. ದಲಿತ ಸಂಘರ್ಷ ಸಮಿತಿ ತನ್ನ ಹೋರಾಟವನ್ನು ಭೂಮಿಯ ಬಗೆಗೆ ಕೇಂದ್ರೀಕರಿಸದೆ ಇರುವುದು ಒಂದು. ಹಾಗೂ ದಲಿತರಲ್ಲೇ ಹೊಲೆಯರು ಮಾದಿಗರು ಎಂದು ಇಬ್ಬಾಗ ಮಾಡಿ ಇವರೇ ಪರಸ್ಪರ ಕಚ್ಚಾಡುವ ಹಾಗೆ ಮಾಡಿದ್ದು ಇನ್ನೊಂದು. ಜೊತೆಯಲ್ಲೇ ಇದ್ದು ಬೆಳವಣಿಗೆ ಕಾಣದಂತೆ ಮಾಡುವುದು ಇವರ ಧ್ಯೇಯ. ನಾವು ಸಹಾಯಪರರು ಎಂಬುದನ್ನು ಸಾಬೀತುಪಡಿಸಲು ಆಳುವ ವರ್ಗ ನಡೆಸಿದ ಹುನ್ನಾರಗಳನ್ನು ಒಂದು ಕವನ ಹೀಗೆ ಬಯಲು ಮಾಡುತ್ತದೆ,

ನನ್ನೂರಿನಲ್ಲಿ
ಮಳೆಗಾಳಿ ಬಿಸಿಲಿನೊಳಗೆ ರಸಿಕರೂ ಹಾವು ಚೇಳು ಕಳ್ಳರೂ
ಸಲೀಸಾಗಿ ಒಳನುಗ್ಗುವಂತ ಮನೆಗಳಿವೆ;
ಊರಾಚೆಯ ಹೊಲಗೇರಿಯ ಬೆಚ್ಚನೆ ಗುಡಿಸಲು ಕೆಡವಿ ಅಲ್ಲೇ
ಅಸ್ಪೃಶ್ಯರ ಸ್ಮಾರಕದಂತೆ
ಪ್ರಭುಗಳು ಕಟ್ಟಿಸಿಕೊಟ್ಟದ್ದು ನಮ್ಮ ಊರೊಳಗಿನ ಕನಸ
ಸುಟ್ಟದ್ದು

ಭೂಮಿಗೆ ಕಾಲಿಳಿವ
ಮಳೆಹುಯ್ದರೂ ನೆನೆಯದ ಬಂಡೆಯ ತುಂಡು
ಹೊಲಗಳಿವೆ;
ಬಡವರು ಬೆಳೆಯಲೆಂದು ಪ್ರಭುಗಳು ಕೊಟ್ಟದ್ದು ನಮ್ಮ
ಹಸುರಿನ ಕನಸ ಸುಟ್ಟದ್ದು

ಗೋಡೆ ತಬ್ಬಿದ ಖಾಲಿ ಮಡಕೆಯ ಒಳಗೆ
ತಿಂಗಳಿಗೊಮ್ಮೆ ಬರುವ ಮುಗ್ಗಲು ಅಕ್ಕಿಯ ಕಾದು
ಮಗುವಿನಂತೆ ಮಲಗಿದ ಪಡಿತರ ಚೀಟಿ ಇದೆ;
ಬಡವರು ಹಸಿಯದಿರಲೆಂದು ಪ್ರಭುಗಳು ಕೊಟ್ಟದ್ದು ನಮ್ಮ
ಅನ್ನದ ಕನಸ ಸುಟ್ಟದ್ದು

ಹಟ್ಟಿಯ ಬೀದಿಗತ್ತಲಲ್ಲಿ ಸಿಟ್ಟಿಗೆ ಪಿಳಿಗುಟ್ಟಿ
ಪುಸ್ಸೆನ್ನುವ ಭಾಗ್ಯಜ್ಯೋತಿಗಳಿವೆ
ಬಡವರು ಬೀಳದಿರಲೆಂದು ಪ್ರಭುಗಳು ಕೊಟ್ಟದ್ದು
ನಮ್ಮ ಬೆಳಕಿನ ಕನಸ ಸುಟ್ಟದ್ದು

ನಾಲಗೆ ಮೇಲೆ ಸಾರಾಯಿ ಅಂಗಡಿಯಿದೆ
ಬಡವರು ಬಾಯಾರದಿರಲೆಂದು ಪ್ರಭುಗಳು ಕೊಟ್ಟದ್ದು
ನಮ್ಮ ನೀರಿನ ಕನಸ ಸುಟ್ಟದ್ದು
ಬೆವರಿನ ಮೇಲೆ ಲಾಟರಿ ಅಂಗಡಿಯಿದೆ;
ಬಡವರು ಶ್ರೀಮಂತರಾಗಲೆಂದು
ಪ್ರಭುಗಳು ಕೊಟ್ಟದ್ದು ನಮ್ಮ
ಭವಿಷ್ಯದ ಕನಸ ಸುಟ್ಟದ್ದು

ನಿದ್ದೆ ನುಂಗಿದ ಯಜಮಾನರ
ನೆಲಗಳಲ್ಲಿ
ಅವ್ವ ಸೀರೆ ಎತ್ತಿ ದುಡಿಯುತ್ತಿದ್ದಾಳೆ
ಅಪ್ಪ ತಲೆಬಾಗಿ ಕಣ್ಣೀರ ಭಾರ 22

ಹೊರುತ್ತಿದ್ದಾನೆ

ತಂಗಿ ಒಲೆ ಮುಂದೆ ಮೇಣದಂತೆ

ಕರಗುತ್ತಿದ್ದಾಳೆ[೬೩]

ಆಳುವ ವರ್ಗದ ಸಹಾಯಪರ ನೀತಿಯಲ್ಲಿ ಹಲವು ಹುನ್ನಾರಗಳಿವೆ. ದಲಿತರಿಗೆ, ದುಡಿವವರಿಗೆ ಇದನ್ನು ಅರ್ಥೈಸಿ ಅವರ ಹುನ್ನಾರಗಳನ್ನು ಬಯಲು ಮಾಡುವ ಅನಿವಾರ್ಯತೆ ಇದೆ. ಇದು ಸಮ ಆರ್ಥಿಕತೆಗೆ ಮತ್ತು ಸಮಾನತೆಗಾಗಿ ಹೋರಾಟ ಮಾಡುವಂತೆ ಪ್ರೇರೇಪಿಸುತ್ತದೆ. ಇಂತಹ ಮನೋಭಾವವನ್ನು ದಲಿತ ಕಾವ್ಯ ತನ್ನ ಅಂತರಂಗದಿಂದ ಹೊರಹಾಕಿತು.

ಆಳುವ ವರ್ಗ ಯಾವಾಗಲೂ ತನ್ನ ಆಳ್ವಿಕೆಯನ್ನು ನಿರಂತರವಾಗಿ ಉಳಿಸಿಕೊಂಡು ಹೋಗಲು ಬಡಜನತೆಯ ವಿಶ್ವಾಸಗಳಿಸಲು ಪ್ರಯತ್ನಿಸುತ್ತಿರುತ್ತದೆ. ಈ ಪ್ರಯತ್ನ ಹರಿದ ಬಟ್ಟೆಗೆ ತೇಪೆ ಹಾಕುವ ಕೆಲಸಕ್ಕಷ್ಟೇ ಸೀಮಿತವಾಗಿರುತ್ತದೆ. ಬಡವರಿಗೆ ಮನೆ ಕಟ್ಟಿಸಿಕೊಡುತ್ತೇವೆಂದು ಕಟ್ಟಿದ ಮನೆಗಳು, ಭಾಗ್ಯಜ್ಯೋತಿ ಹೆಸರಿನಲ್ಲಿ ದಲಿತರ ಕೇರಿಗೆ ಬಂದ ಬೀದಿ ದೀಪಗಳು, ತಿಂಗಳಿಗೊಮ್ಮೆ ಪಡಿತರ ಚೀಟಿ ಮೂಲಕ ಬರುವ ಮುಗ್ಗಲು ಅಕ್ಕಿ ಸರ್ಕಾರಿ ನಿಯಮಾನುಸಾರವಾಗಿಯೇ ಮನೆಬಾಗಿಲ ಮುಂದೆ ಬರುವ ಸಾರಾಯಿ ಇವೆಲ್ಲವೂ ಬಡವರ ಹೆಸರೇಳುತ್ತಲೇ ಹುಟ್ಟಿಕೊಂಡಿವೆ. ಆದರೆ ಇದರ ಫಲ ಬಡವರ ಕೇರಿಯನ್ನು, ಮನೆಯನ್ನು ನೋಡಿದರೆ ಗೊತ್ತಾಗುತ್ತದೆ. ಇದರ ಪ್ರಯೋಜನ ಬಡವರಿಗೆ ಬಿಡಿಗಾಸಿನ ಪ್ರಯೋಜನಕ್ಕೆ ಬರಲಿಲ್ಲ. ಆದರೆ ಆಳುವ ವರ್ಗಕ್ಕೆ ಕೋಟಿ ಕೋಟಿ ಸಂಪಾದಿಸಿಕೊಳ್ಳುವ ದಾರಿಯಂತೂ ನಿರ್ಮಾಣವಾಯಿತು.

ಈ ಎಲ್ಲ ಭರವಸೆಗಳ ನಡುವೆ ಬದುಕುತ್ತಿರುವ ದಲಿತರ ಸ್ಥಿತಿಯನ್ನು ಮೇಲಿನ ಕವನದ ಕೊನೆಯ ಸಾಲುಗಳು ಸಮಂಜಸವಾಗಿ ಹಿಡಿದಿಟ್ಟಿವೆ. ಸೀರೆ ಎತ್ತಿ ದುಡಿಯುವ ಅವ್ವ, ಆ ಕಾರಣಕ್ಕಾಗಿಯೇ ಕಣ್ಣೀರಭಾರ ಹೊರುವ ಅಪ್ಪ ದಲಿತರ ಬದುಕಿನ ಕ್ರೂರ ವಾಸ್ತವತೆಗೆ ಹಿಡಿದ ಕನ್ನಡಿ. ಇವರ ಮೂಲಕ ವಾಸ್ತವ ನೆಲೆಗಳನ್ನು ಕವನ ಅನಾವರಣಗೊಳಿಸುತ್ತಿದೆ. ಇದರೊಂದಿಗೆ ಬಡವರ ಬದುಕು ಭರವಸೆಗಳಲ್ಲಿಯೇ ಅಥವಾ ತಾತ್ಕಾಲಿಕ ಪರಿಹಾರದಲ್ಲಿಯೇ ಕಳೆದುಹೋಗುತ್ತಿರುವ ಹಿನ್ನೆಲೆಯನ್ನು ಚಿತ್ರಿಸಿದೆ.

ಇಂಡಿಯಾದ್ಯಂತ ದುಡಿವ ವರ್ಗಕ್ಕೆ ಅಂಬೇಡ್ಕರ್ ಹೋರಾಟದ ಹಾದಿಗಳೇ ಸ್ಫೂರ್ತಿ, ಮಾರ್ಕ್ಸ್ ದೃಷ್ಟಿಕೋನಗಳೇ ಜೀವಾಳ. ಅಂಬೇಡ್ಕರ್ ಈ ದೇಶದ ತಳಸ್ಪರ್ಶಿ ಅಧ್ಯಯನ ನಡೆಸಿ ಆ ಮೂಲಕ ಸಮಾನತೆಯ ಸಮಾಜಕ್ಕಾಗಿ ಹೋರಾಟ ಮಾಡಿದರು ಮತ್ತು ಸೋರಿಹೋಗುತ್ತಿರುವ ದಲಿತರ ಬದುಕಿಗೆ ಆಸರೆಯಾಗಿ ನಿಂತು ಸ್ವಾಭಿಮಾನ ನೆಲೆನಿಲ್ಲುವಂತೆ ಮಾಡಿದರು. ಅಕ್ಷರ, ಅಧಿಕಾರ, ಸ್ವಾಭಿಮಾನಗಳ ಮುಖಾಂತರ ದಲಿತರನ್ನು ಎಚ್ಚರಿಸಿದ

23

ಅಂಬೇಡ್ಕರ್ ದಲಿತ ಹೋರಾಟದ ಕೇಂದ್ರ ಪ್ರಜ್ಞೆ. ಇಂತಹ ಮಹಾನ್ ಮಾನವತಾವಾದಿಯನ್ನು ನೆನಸಿಕೊಳ್ಳದ, ಅವರಿಂದ ಹೋರಾಟದ ಕೆಚ್ಚನ್ನು ಪಡೆಯದ ಒಬ್ಬ ದಲಿತ ಹೋರಾಟಗಾರನೂ ಇಲ್ಲ. ದಲಿತ ಕಾವ್ಯವೂ ಬುದ್ಧ, ಬಸವ, ಅಂಬೇಡ್ಕರ್, ಮಾರ್ಕ್ಸ್, ಗಾಂಧಿ, ಲೋಹಿಯಾ, ಮೊಲಾಯಿಸ್, ನೆಲ್ಸನ್ ಮಂಡೇಲಾ ಮುಂತಾದವರಿಂದ ಸ್ಫೂರ್ತಿಯನ್ನು ಹೊಂದಿದೆ. ಇವರಿಂದ ಪ್ರಚೋದನೆಗೊಂಡ ಕಾವ್ಯ ಇವರ ವಿಚಾರಧಾರೆಗಳಿಂದ ಪ್ರಭಾವಿತಗೊಂಡು ಜನತೆಯಲ್ಲಿ ಹೋರಾಟದ ಮನೋಭೂಮಿಕೆಯನ್ನು ಬಿತ್ತಿದೆ. ಈ ಮನೋಭೂಮಿಕೆಯನ್ನು ಬಿತ್ತುವಾಗ ಮತ್ತು ಇಂತಹ ಮಹಾನ್ ಹೋರಾಟಗಾರರ ಹಾದಿಯನ್ನು ಹಾಡಿನ ಮೂಲಕ ಹೇಳುವಾಗಲೂ ಸಹ ದಲಿತ ಕಾವ್ಯ ದುಡಿವ ವರ್ಗದ ದೃಷ್ಟಿಕೋನದ ಮೂಲಕವಾಗೇ ನೋಡಿದೆ.

> ಜಾತೀಯತೆಯ ಕರಾಳ ಸಾಮ್ರಾಜ್ಯದಲ್ಲಿ
> ಪ್ರಜ್ವಲಿಸುವ ಸೂರ್ಯನಾದೆ ಹೊಂಬೆಳಕಿನ ಕಿರಣ ಚೆಲ್ಲಿ
> ಹೋರಾಟದ ಬೆಳಕಾಗ ಮಹಾರಾಷ್ಟ್ರದ ಮಣ್ಣಿನಲ್ಲಿ
> ....
> ದುಡಿವರೆಡೆಗೆ ಸಮತೆ ತರಲು ಮಂತ್ರವೊಂದೆ ಒಗ್ಗಟ್ಟು
> ಅಕ್ಷರವ ಒಲಿಸಿಕೊಂಡೆ ವಿಮೋಚನೆಗೆ ಅರಿವಾಯ್ತು
> ಪಾಂಡಿತ್ಯ ಪಂಡಿತರ ಪಾಪವೆಲ್ಲಾ ಬಯಲಾಯತು
> ....
> ಮಾನವೀಯತೆಗೆ ಸಿಗದೊ ಬೆಲೆ ಮುಚ್ಚಿದ ಹೃದಯಗಳಲ್ಲಿ
> ದಲಿತರ ಒಡಲಾಳದ ನೋವು ನಿಲ್ಲಲಿಲ್ಲ ಕಣ್ಮುಂದೆ
> ಅದಕ್ಕೆ ನಮ್ಮ ಬಾಳಿಗೆ ಸೂರ್ಯನೇ ನೀನಾದೆ[೬೪]

ಇಂಡಿಯಾದಲ್ಲಿ ಜಾತಿ, ಧರ್ಮ, ಅಧಿಕಾರ, ವರ್ಣ, ವರ್ಗಗಳಿಂದ ನಲುಗಿದ ದುಡಿವ ಜನತೆಗೆ ಅಂಬೇಡ್ಕರ್ ಅವರೆ ದಾರಿದೀಪ. ಅನಸೂಯ ಕಾಂಬಳೆ ಅವರ ಮೇಲಿನ ಕವನ ಅಂಬೇಡ್ಕರ್ ಅವರನ್ನು ನೆನಸಿಕೊಳ್ಳುತ್ತಲೇ ದುಡಿವ ವರ್ಗದ ದೃಷ್ಟಿಕೋನವನ್ನು ನಿರ್ಮಿಸಿದೆ. ಮತ್ತು ದುಡಿವ ಜನತೆಯ ದೃಷ್ಟಿಕೋನದ ಮೂಲಕವಾಗೇ ಅಂಬೇಡ್ಕರ್ ಅವರನ್ನು ನೋಡಲು ಪ್ರಯತ್ನಿಸಿದೆ.

ದುಡಿವ ಜನತೆಯ ಏಳಿಗೆಗಾಗಿಯೇ ಅಕ್ಷರದ ಮೂಲಕ ಕ್ರಾಂತಿ ಆರಂಭಿಸಿದ ಅಂಬೇಡ್ಕರ್ ಜಾತಿ, ವರ್ಗ ಶೋಷಣೆಯಿಂದ ನಲುಗುತ್ತಿದ್ದವರನ್ನು ಇವುಗಳಿಂದ ಮುಕ್ತಗೊಳಿಸಲು ಹೋರಾಡಿದರು. ಮೇಲಿನ ಸಾಲುಗಳು ಅಂಬೇಡ್ಕರ್ ಅವರನ್ನು ದುಡಿಯುವ

ನೆಲೆಯಲ್ಲಿ ನಿಂತು ನೋಡುತ್ತಾ ಅವರ ಸಾಧನೆಗೆ ದಲಿತರ ಹೃದಯದಲ್ಲಿ ಸಿಕ್ಕಿರುವ ಸ್ಥಾನವನ್ನು ಒತ್ತಿ ಹೇಳುತ್ತಿದೆ.

ಅಕ್ಷರ ಸಂಸ್ಕೃತಿಯನ್ನು ಹೊಗಳುವ ನೆಪದಂತೆ ಕಂಡುಬರುವ ಮೇಲಿನ ಕವಿತೆ ಅಕ್ಷರವೇ ದಲಿತರನ್ನು ಉದ್ಧಾರ ಮಾಡುವ ಏಕೈಕ ಮಾರ್ಗ ಎಂಬುದನ್ನು ಒತ್ತಿ ಹೇಳಿದಂತೆ ಭಾಸವಾಗುತ್ತದೆ. ಈ ಚರ್ಚೆಯನ್ನು ಅಂಬೇಡ್ಕರ್ ನೆಲೆಯಲ್ಲಿಟ್ಟು ಚರ್ಚಿಸುವುದಾದರೆ ಅಂಬೇಡ್ಕರ್ ಅವರು ಅಕ್ಷರದ ಮೂಲಕವಾಗೇ ದಲಿತರ ಪರವಾದ ಚಳುವಳಿಯನ್ನು ಆರಂಭಿಸಲು ಸಾಧ್ಯವಾದದ್ದು ಸರಿಯೇ. ಆದರೆ ಅಕ್ಷರ ಅರಿವಿಗೆ ಹೋಗಲು ಅಸಾಧ್ಯವಾದ ನೆಲೆಯಲ್ಲಿ ಬದುಕಿರುವ ಬಡವರ ಸಂಖ್ಯೆ ಲೆಕ್ಕವಿಲ್ಲದಷ್ಟು. ಇವರಿಗೆ ಸಾಮಾಜಿಕ ನ್ಯಾಯ ದೊರೆಯಬೇಕಿರುವುದು ಎಲ್ಲಾ ಬಗೆಯ ಶೋಷಣೆ ಮತ್ತು ಅಸಮಾನತೆಗಳಿಂದ ಮುಕ್ತಿ ಹೊಂದುವುದರ ಮೂಲಕವೇ ಹೊರತು ಅಕ್ಷರದಿಂದಲ್ಲ. ಈ ಎಚ್ಚರ ದಲಿತ ಕಾವ್ಯಕ್ಕೆ ಇರಬೇಕಾದ ಅವಶ್ಯಕತೆಯೂ ಇದೆ. ಇದನ್ನು ಮನಗಂಡೇ ಒಂದು ಹೋರಾಟದ ಹಾಡು 'ಈ ಬದುಕಿಲ್ಲದ ವಿದ್ಯೆಗೆ ಬಂಧಿಯಾಗಬೇಡವೋ, ಹೋರಾಟದ ಹೊಂಬೆಳಕಿನಲಿ ಶೂರನಾಗು ನೀ' ಎನ್ನುತ್ತದೆ. ವಿದ್ಯೆ ಎಂಬುದು ಆಧುನಿಕ ಜಗತ್ತಿನ ಮತ್ತೊಂದು ಗುಲಾಮಗಿರಿಗೆ ಶರಣುಹೋದಂತೆ ಎಂಬುದು ಈ ಹೋರಾಟದ ಹಾಡಿನ ನಿಲುವು. ಏಕೆಂದರೆ ಇಂಗ್ಲೀಷರು ಇಂಡಿಯಾದ ಆಡಳಿತವನ್ನು ಯಾವ ತೊಂದರೆ ಇಲ್ಲದಂತೆ ನಡೆಸಿಕೊಂಡು ಹೋಗಲು ಜಾತಿಮತಗಳ ವಿಂಗಡಣೆಗಳಿಲ್ಲದೆ ತಂದ ಕೊಡುಗೆ ಇದು. ಇದು ಒಂದು ರೀತಿಯಲ್ಲಿ ಭಾರತೀಯರನ್ನು ತಮ್ಮ ಗುಲಾಮರನ್ನಾಗಿ ಮಾಡಿಕೊಳ್ಳುವ ಹುನ್ನಾರದ ಫಲ. ಇದನ್ನು ಮತ್ತೊಂದು ಹೋರಾಟದ ಹಾಡು ನಿರೂಪಿಸುವ ಬಗೆ ಹೀಗಿದೆ, 'ಮೆಕಾಲೆಯ ಕಾಲದಲ್ಲಿ ಗುಮಾಸ್ತರ ಉಳಿಸಲೆಂದು ಜಾರಿಗೆ ತಂದ ವಿದ್ಯೆಯೋ ಓ ವಿದ್ಯಾರ್ಥಿ ಮುಂದುವರೆಸಿಕೊಂಡು ಬಂದರೋ ಓ ವಿದ್ಯಾರ್ಥಿ' ಎಂದು ವಿದ್ಯಾರ್ಥಿಗಳಿಗೆ ಕರೆಕೊಡುತ್ತದೆ. ಮತ್ತೊಂದು ಹಾಡು ಹೀಗಿದೆ...

ನಾಡ ನಡುವಿನಿಂದ ಸಿಡಿದ
ನೋವಿನ ಕೂಗೆ
ಆಕಾಶದ ಅಗಲಕ್ಕೂ
ನಿಂತ ಆಲವೆ
ಕೋಟಿಕೋಟಿ ಕಪ್ಪು ಜನರ
ಮೊಟ್ಟ ಮೊದಲ ಮಾತೆ

ನೀರಿನಾಚೆ ಮೋಡದಾಚೆ
ಮೊಳಗಿದಂತ ಘೋಷವೆ
....
ಜಾತಿಯನ್ನು ಹೂತುಬಿಡಲು
ಲಕ್ಷಲಕ್ಷ ಜನರನು
ಕಟ್ಟಿ ಕ್ರಿಯಾರಂಗಕಿಳಿದ
ಸ್ವಾಭಿಮಾನ ಸಮುದ್ರ
....
ಮಲಗಿದವರ ಕೂರಿಸಿದೆ
ನಿಲಿಸುವವರು ಯಾರೋ?
ಛಲದ ಜೊತೆಗೆ ಬಲದ ಪಾಠ
ಕಲಿಸುವವರು ಯಾರೋ?[೬೫]

ಅಂಬೇಡ್ಕರ್ ಇಂಡಿಯಾಕ್ಕಷ್ಟೇ ಅಲ್ಲ ಪ್ರಪಂಚದಲ್ಲೆ ತನ್ನ ಛಾಪು ಮೂಡಿಸಿದ ವ್ಯಕ್ತಿ. ಇಂತಹ ವ್ಯಕ್ತಿಯ ಹೋರಾಟದ ಹಾದಿ ಅಪೂರ್ಣವಾಗಿದೆ, ಪೂರ್ಣಗೊಳಿಸಲು ಮತ್ತೆ ಹುಟ್ಟಿ ಬಾ ಎಂಬ ಆಕಾಂಕ್ಷೆಯೊಂದಿಗೆ ಕವನ ರೂಪುಗೊಂಡಿದೆ. ಹಾಗೆಯೇ ಜಾತಿ, ಧರ್ಮಗಳಿಂದ ದಲಿತರನ್ನು ಮುಕ್ತಗೊಳಿಸಿ ದಲಿತರ ರಾಜ್ಯಾಧಿಕಾರದ ಕನಸು ಕಂಡ ಅಂಬೇಡ್ಕರ್ ದಲಿತರಿಗೊಂದು ಹೋರಾಟದ ಮನೋಭೂಮಿಕೆ ಸಿದ್ದಪಡಿಸಿದರು. ಇಲ್ಲಿ ಕಾವ್ಯ ಇದನ್ನು ಹೇಳುತ್ತಲೇ ಬೌದ್ಧ ಧರ್ಮದೆಡೆಗೆ ನಡೆದ ಅಂಬೇಡ್ಕರ್ ಚಿಂತನೆಗೆ ಅಸಹನೆ ವ್ಯಕ್ತಪಡಿಸಿದೆ. ಯಾವುದೇ ಧರ್ಮವಾದರೂ ಅದು ಸಂಕೋಲೆಯೇ ಹೊರತು, ಸ್ವಾತಂತ್ರ್ಯವಲ್ಲವೆಂದು ಕಾವ್ಯ ಬಿಂಬಿಸಿದೆ. ಆದರೆ ಅಂಬೇಡ್ಕರ್‌ಗೆ ಹಿಂದೂ ಧರ್ಮದ ಹಿಡಿತದಿಂದ ತನ್ನ ಜನರನ್ನು ಬಿಡಿಸಬೇಕಾಗಿತ್ತು. ಇದರಿಂದ ಮುಕ್ತಗೊಳಿಸಲು ಆಯ್ಕೆ ಮಾಡಿಕೊಂಡ ದಾರಿ ಬೌದ್ಧ ಧರ್ಮದ ಕಡೆಗೆ ನಡೆಯಲು ಸಾಧ್ಯವಾಯಿತೆಂದು ಗ್ರಹಿಸಲು ಸಾಧ್ಯವಿದೆ.

ಅಂಬೇಡ್ಕರ್ ಅವರನ್ನು 'ಕೇವಲ ಒಬ್ಬ ಮನುಷ್ಯ' ಎಂದು ಪರಿಗಣಿಸಬೇಕಾಗಿಲ್ಲ ಅಥವಾ ಒಬ್ಬ ಹೋರಾಟಗಾರನನ್ನಾಗಿಯಷ್ಟೇ ನೋಡಲು ಬರುವುದಿಲ್ಲ. ಏಕೆಂದರೆ ಇವಿಷ್ಟೇ ಆದರೆ ಅಂಬೇಡ್ಕರ್ ಅವರ ಆಲೋಚನೆಗಳು ಶೋಷಿತರಿಗೆ ಇವತ್ತಿಗೂ ಕೂಡ ಪ್ರಸ್ತುತವಾಗುತ್ತಿರಲಿಲ್ಲ. ಮೇಲಿನ ಹಾಡೇ ನಿರೂಪಿಸುವಂತೆ 'ಕೋಟಿ ಕೋಟಿ ಕಪ್ಪು ಜನರ ಮೊಟ್ಟಮೊದಲ ಮಾತೆ' ದುಡಿಯುವ ಜನತೆಯನ್ನು ಎಲ್ಲಾ ರಂಗಗಳಲ್ಲಿ ಮೇಲೆತ್ತಲು ಅವಿತರವಾಗಿ ಶ್ರಮಿಸಿದ ಅಂಬೇಡ್ಕರ್ ದುಡಿಯುವ ಜನರ ಪಾಲಿನ ತಾಯಿಯೇ ಸರಿ.

ತಾಯಿಯಲ್ಲಿ ಕರುಣೆಯಿದೆ, ತನ್ನ ಮಕ್ಕಳನ್ನು ಸಾಕೇ ಸಾಕುತ್ತೇನೆಂಬ ಧೈರ್ಯವಿದೆ, ಆಕೆ ಮಕ್ಕಳನ್ನು ಸರಿದಾರಿಯಲ್ಲಿ ಮತ್ತು ಉನ್ನತ ಸ್ಥಾನದಲ್ಲಿ ನೋಡಲು ಸದಾ ಬಯಸುತ್ತಾಳೆ. ಅವರ ಏಳ್ಗೆಯೇ ಅವಳ ಕನಸು. ಇದು ಅಂಬೇಡ್ಕರ್ ಮತ್ತು ದಲಿತರಿಗೆ ಇದ್ದಂತಹ ಸಂಬಂಧದ ಅಗಾಧತೆ. ಆದ್ದರಿಂದಲೇ ಈ ದುಡಿಯುವ ಜನತೆ ಅಂಬೇಡ್ಕರ್ ಅವರನ್ನು ಮಾತೆ ಎಂಬುದಾಗಿ ಕರೆದುಕೊಳ್ಳುತ್ತದೆ.

ಹುಟ್ಟೆಂಬ ಬೇಗೆಯಲ್ಲಿ ಮೋಡವಾಗಿ
ಮೂಡಿದೋನು
ಹೊಲಸೆಂಬ ಹಟ್ಟಿಯೊಳಗೆ ಮಳೆಯಾಗಿ
ಹರಿದೋನು
ಅರಿವೇ ಅಂಬೇಡ್ಕರ ಗುರುವೇ ಅಂಬೇಡ್ಕರ
ನೆಲದಿ ಹೂತ ಶಿರಗಳಲ್ಲಿ ಚಿಗುರು ಮಿಂಚು
ತಂದೋನು
ಪೊರಕೆ ಚರ್ಮರಂಪಿಗೆಯಲ್ಲಿ ಚಂದ್ರನ ಚಂದ
ತುಂಬಿದೋನು
....
ನುಡಿಯ ಹಕ್ಕಿಯಾಗಿ ಹಾರಿ ಊರು ಕೇರಿಯನ್ನು ಸೇರಿ
ನರ ನಾಡಿಯೊಳಗೆಲ್ಲ ಕಿಡಿಯಗೂಡ ಕಟ್ಟಿದೋನು
ಗೂಡ ಸುಡುವ ನೆರಳಿಗೆ ನೊಂದು
ಬುದ್ಧನೂರ ಸೇರಿದೋನು
................................೬೬

ಹೊಲಸು, ಬೇಗೆ, ಪೊರಕೆ, ಚರ್ಮ, ರಂಪಿಗೆ ಎಲ್ಲವೂ ದಲಿತರ ಬದುಕಿನಲ್ಲಿ ಹಾಸುಹೊಕ್ಕಾಗಿರುವಂತಹುಗಳು. ಹೊಲಸೆಂಬ ಬೇಗೆಯ ಜನಕ್ಕೆ ಚಂದ್ರನ ಚಂದ ತುಂಬಿದ ಅಂಬೇಡ್ಕರ್ ದಲಿತರಿಗಾಗಿ ನುಡಿಯ ಹಕ್ಕಿಯಾಗಿ ಹಾರಾಡಿ ಶ್ರಮಿಸಿದವರು. ಇಂತವರ ಸಾಧನೆಯನ್ನು ಹೇಳುತ್ತಿರುವ ಈ ಕಾವ್ಯ, ದುಡಿವ ಜನತೆಯ ನೆಲೆಯಿಂದಲೇ ಪರಾಮರ್ಶಿಸಿ, ಮುಂದಿನ ನಡೆಗಳನ್ನು ಗುರುತಿಸಿದೆ.

ಹುಟ್ಟೆಂಬ ಬೇಗೆ, ಹೊಲಸೆಂಬ ಹಟ್ಟಿ ಇದು ದಲಿತರ ನೈಜಸ್ಥಿತಿ. ಇಲ್ಲಿಂದಲೇ ಹುಟ್ಟಿಬಂದ ಅಂಬೇಡ್ಕರ್ ಹೊಲಸು ತೊಳೆವ ಮಳೆಯಾದರು. ಈ ಹೊಲಸು ಬೇರೆಯವರಿಂದ ಬಂದದ್ದೂ ಇರಬಹುದು ಅಥವಾ ಅಲ್ಲೇ ಇರಬಹುದು. ಈ ಎರಡನ್ನೂ

27

ಹೋಗಲಾಡಿಸುವುದು ಅವಶ್ಯಕ. ಇಂತಹ ಹೊಲಸು ತೊಳೆಯಲು ಶ್ರಮಿಸಿದ ಅಂಬೇಡ್ಕರ್ ದಲಿತರಿಗೆ ಅರಿವಿನ ಪರಿಧಿಯನ್ನು ವಿಸ್ತರಿಸುವ ಚೇತನವಷ್ಟೇ ಆಗಲಿಲ್ಲ. ಬದಲಾಗಿ ದಲಿತರಿಗೆ ಅರಿವಿನ ಗುರುವಾದರು.

ಅಂಬೇಡ್ಕರ್ ಕುರಿತ ಮೇಲಿನ ಕಾವ್ಯಗಳ ಜೊತೆಗೆ ಇನ್ನೊಂದು ಮುಖವನ್ನು ಅವಲೋಕಿಸಿದರೆ ಭಿನ್ನ ರೀತಿಯಲ್ಲಿ ನಿರೂಪಣೆಗೊಂಡ ಹೋರಾಟದ ಹಾಡುಗಳನ್ನು ನೋಡಬಹುದು. ಅಂಬೇಡ್ಕರ್ ಅವರ ಇಡೀ ವ್ಯಕ್ತಿತ್ವ ಮತ್ತು ಹೋರಾಟದ ಹಾದಿಯನ್ನು ಕಟ್ಟಿಕೊಡುತ್ತಲೇ ಹೋರಾಟದ ಅನಿವಾರ್ಯತೆಯನ್ನು ಮನಗಾಣಿಸುವ ಹಾಡು ಅವರನ್ನು ಸ್ಮರಿಸುವುದು ಹೀಗೆ...

ಅಂಬೇಡ್ಕರ್ ಹೇಳಿದಮಾತು
ಮರೆಯಬೇಡಿ ಮರೆತು ಮಲಗಬೇಡಿ
ಜಾತಿವರ್ಗ ಒಂದೇ ನಾಣ್ಯದ ಎರಡು ಮುಖಗಳು
ದುಡಿವವರೆ ಈ ದೇಶದ ವಾರಸುದಾರರು ॥ಅಂಬೇಡ್ಕರ್॥
ಶಿಕ್ಷಣ ಸಂಘಟನೆ ಹೋರಾಟ ಮುತ್ತಿನಂತ ಮೂರೇ ಸೂತ್ರ
ದುಡಿದ ಜನಕೆ ಧೈರ್ಯ ಕೊಡುವಂತಾ
ದಲಿತರಿಗೆ ಪ್ರಜ್ಞೆ ನೀಡುವಂತಾ
ಇದುವೆ ಓದು ಇದುವೆ ಬರಹ
ಇದುವೆ ಸ್ವಾಭಿಮಾನವೆಂದ ।ಅಂಬೇಡ್ಕರ್।
ಸಂವಿಧಾನ ಬರೆದೆ ನಾನು ಎಂದನು
ನೀವು ಸಂತಸದಿ ಬದುಕಲಾರಿರೆಂದನೋ
ಆಸ್ತಿ ಹಕ್ಕು ಇರುವವರಿಗೆ ದೇಶವು
ಜಾತ್ಯಾತೀತ ರಾಷ್ಟ್ರವಾಗದೆಂದನೊ
ದಲಿತರಿಗೆ ಹಕ್ಕು ಸಿಗದೆ ದರಿದ್ರ ಬದುಕು ಆದ್ರೆ
ಸಂವಿಧಾನ ಮೊದಲು ಸುಡುವೆನೆಂದನು ।ಅಂಬೇಡ್ಕರ್।[೬೭]

ಮುಂತಾದ ಪದ್ಯಗಳು ಅಂಬೇಡ್ಕರ್ ನೀವಿಲ್ಲದಿದ್ದರೆ ನಮ್ಮ ಬಾಳು ಕತ್ತಲೆಯಾಗುತ್ತಿತ್ತು ಎಂಬುದನ್ನು ಒತ್ತಿ ಒತ್ತಿ ಹೇಳಿವೆ. ದಲಿತರ ಹೋರಾಟದ ಒಂದೊಂದು ಜೀವಕಣದಲ್ಲೂ ಅಂಬೇಡ್ಕರ್ ಹೆಸರೇ ಸ್ಫೂರ್ತಿಯ ಬಿಂದು. ಪರಂಪರೆ, ಪುರಾಣ, ಧರ್ಮ, ಮತ, ಮೌಢ್ಯ, ಆಚಾರ-ವಿಚಾರಗಳನ್ನೆಲ್ಲಾ ತಿಳಿದು ಭಾರತದ ಇತಿಹಾಸವನ್ನು ಪುನರ್ ನಿರ್ಮಿಸಿದ ಅಂಬೇಡ್ಕರ್ ಕುರಿತ ಹಾಡುಗಳು ಸಾಕಷ್ಟು ರಚನೆಗೊಂಡಿವೆ. ಇವೆಲ್ಲವೂ ಕೂಡ ದುಡಿವ

ಜನತೆಯ ನೆಲೆಯಿಂದಲೇ ಅರಳಿರುವಂತವು. ಇವರ ದೃಷ್ಟಿಕೋನದಿಂದಲೇ ಅಂಬೇಡ್ಕರ್ ಅವರನ್ನು ನೋಡಿದ್ದಾರೆ, ವಿಮರ್ಶಿಸಿದ್ದಾರೆ, ಅಭಿನಂದಿಸಿದ್ದಾರೆ, ಆರಾಧಿಸಿದ್ದಾರೆ ಮತ್ತು ದೈವೋಪಾದಿಯಲ್ಲಿ ಕೊಂಡಾಡಿದ್ದಾರೆ. ಹಾಗೆಯೇ ಅಂಬೇಡ್ಕರ್ ನಂತರದ ಬದುಕು ಕಂಗಾಲಾದ ಬಗೆಯನ್ನು ಮತ್ತು ದಲಿತರಲ್ಲೇ ಒಡಕು ಉಂಟಾದ ನೆಲೆಗಳನ್ನು ಹಾಗೂ ನಾಯಕರ ದ್ವಿಮುಖತನವನ್ನು ಈ ಶ್ರಮಿಕ ನೆಲೆಯಿಂದಲೇ ನಿಂತು ಟೀಕಿಸಿದ್ದಾರೆ. ಭಾರತದ ಭವಿಷ್ಯಕ್ಕೆ ಭೀಮಶಕ್ತಿಯೇ ಮಂತ್ರ ಎಂಬುದನ್ನು ಒತ್ತಿ ಹೇಳಿದ್ದಾರೆ.

ದಲಿತರಿಗೆ ಅಂಬೇಡ್ಕರ್ ಅಷ್ಟೇ ಸ್ಫೂರ್ತಿಯ ಕೇಂದ್ರವಾಗಿರಲಿಲ್ಲ. ಅಂಬೇಡ್ಕರ್‌ರನ್ನು ರೂಪಿಸಿದ ಹಾದಿಗಳು ಮತ್ತು ಸಮಕಾಲೀನ ಸಂದರ್ಭದಲ್ಲಿನ ಅನೇಕ ಹೋರಾಟಗಾರರ ಹೋರಾಟಗಳು, ತಾತ್ವಿಕ ಚಿಂತನೆಗಳು, ಸಮಾಜವನ್ನು ಗ್ರಹಿಸುವ ಪರಿಕಲ್ಪನೆಗಳು ಮುಂತಾದುವೆಲ್ಲವೂ ಇವರ ಹೋರಾಟದ ಹಾದಿಗೆ ದಾರಿದೀಪವಾದವು. ಆ ಕಾರಣದಿಂದಾಗಿಯೇ ದಲಿತರು ತಮ್ಮ ಹೋರಾಟದ ವೇಗವರ್ಧಕವಾದ ಹಾಡುಗಳಲ್ಲಿ ಬುದ್ಧ, ಬಸವಣ್ಣ, ಕಾರ್ಲ್‌ಮಾರ್ಕ್ಸ್, ನೆಲ್ಸನ್ ಮಂಡೆಲಾ, ಗಾಂಧೀಜಿ ಮುಂತಾದ ಹೋರಾಟಗಾರರನ್ನೆಲ್ಲಾ ಸ್ಮರಿಸಿದ್ದಾರೆ. ಸ್ಮರಿಸುವಾಗ ಅದು ಆರಾಧನೆಗೆ ಮೀಸಲಾಗದೆ ತಮ್ಮ ಶ್ರಮಿಕ ನೆಲೆಯಲ್ಲಿ ನಿಂತು ವಿಮರ್ಶಿಸಿದ್ದಾರೆ. ಇವರನ್ನೆಲ್ಲ ಕುರಿತು ಬೇರೆ ಬೇರೆ ಕವಿಗಳು ರಚಿಸಿದ ಹಾಡುಗಳು ಈ ಕೆಳಗಿನಂತಿವೆ.

ಕಾರ್ಲ್‌ಮಾರ್ಕ್ಸ್

ಮರೆಮಾಚಿ ಹೋಗಿದ್ದ ಜಗದ ನಿಜಗಳನೆಲ್ಲ
ಅರಿಯಲೆಂದಡಿಯಿಟ್ಟೆ ಮುಳ್ಳುಗಳ ಮೇಲೆ
ನಿದ್ದೆಮಂಪರುಕವಿದ ಮನುಕುಲವನೆಚ್ಚರಿಸಿ
ದುಡಿವ ಜನತೆಗೆ ನೀನು ಕಣ್ಣಾಗಿ ನಿಂತೆ.

....

ತೊಟ್ಟ ಚಿಂದಿಯ ಕಂಡು ತೇಪೆ ಹಾಕುವ ಬದಲು
ಹೊಸಬಟ್ಟೆಯನು ತರುವ ಕನಸ ಕಂಡೆ
ನೊಂದ ಎದೆಯಲಿ ನಗೆಯ ಹೂವ ಅರಳಿಸಲೆಂದು
ಹೋರಾಟಗಳ ಕಟ್ಟಿ ಕನವರಿಸಿದೆ.
ಬಿಗಿದ ಕೋಳಗಳನ್ನು ಕಡಿದೆಸೆವ ಬಿಡುಗಡೆಯ
ನಿನ್ನ ಕನಸುಗಳಿಂದು ಅರಳುತಿಹವು

ನ್ಯಾಯ ಕೇಳಲು ಹೊರಟ ಜನರ ಮೆರವಣಿಗೆಯಲಿ
ಬಂದು ಮುನ್ನಡೆಸುವುದು ನಿನ್ನ ನೆನಪು[೬೮]

ಜಗತ್ತಿನ ಶ್ರಮಿಕರಿಗೆ ವಿರೋಚಿತ ಹೋರಾಟದ ಮಾರ್ಗ ತೋರಿಸಿದ್ದು ಕಾರ್ಲ್‌ಮಾರ್ಕ್ಸ್. ಈತ ಆಳುವ ವರ್ಗದ ಆಶಯಗಳನ್ನು ದುಡಿಯುವ ಜನತೆಯ ನೆಲೆಯಲ್ಲಿ ನಿಂತು ವಿವರಿಸುತ್ತಾನೆ. ದುಡಿಯುವ ಜನರ ಸಾರ್ವಭೌಮಾಧಿಕಾರದ ಕನಸನ್ನು ನನಸು ಮಾಡಲು ಜಗತ್ತಿನ ಶ್ರಮಿಕರು ಒಂದಾಗುವಂತೆ ಕರೆಕೊಡುತ್ತಾನೆ. ವಿಶ್ವ ಕಾರ್ಮಿಕ ಸಂಘಟನೆಗಳಿಗೆಲ್ಲಾ ಮಾರ್ಕ್ಸ್‌ನ ವಿಚಾರಧಾರೆಗಳೇ ದಾರಿದೀಪ. ಆದ್ದರಿಂದಲೇ ಶ್ರಮಿಕ ಸಾಹಿತ್ಯ ಮಾರ್ಕ್ಸ್‌ನನ್ನು ತನ್ನ ದುಡಿಮೆಯ ನೆಲೆಗಳಿಂದಲೇ ನೆನೆಯುತ್ತದೆ.

ಬಸವ

ನಿನಗೆ ನೋಡಲು ಬಂದಾಗ
ಕೇಳುವರು ಕುಲ ಯಾವುದೆಂದು
ಗೊತ್ತಿಲ್ಲ ಇವರಿಗೆ ಇವನಾರವ ಇವನಾರವ
ಎಂದೆನಿಸದಿರಯ್ಯ ಎಂಬ ಮಾತು
ಅಂತರಜಾತಿ ವಿವಾಹ ಮಾಡಿಸಿದ
ಆದರ್ಶ ಮಾನವ
ಎಲ್ಲಾ ಜಾತಿಯ ಶರಣರ ಕೂಡಿಸಿದ
ಕರುಣಾಜನಕ[೬೯]

ಬಸವಣ್ಣ ಸಾಮಾಜಿಕ ಸಮಾನತೆಗಾಗಿ ಹೋರಾಟವನ್ನು ಕೈಗೊಂಡ ಸಮಾಜ ಸುಧಾರಕ. ಬಸವಣ್ಣನ ಅನುಯಾಯಿಗಳೆಂದು, ಅವನು ಕಟ್ಟಿದ ಜಾತ್ಯಾತೀತ ಒಗ್ಗೂಡುವಿಕೆಯ ನೆಲೆಯನ್ನೇ ಜಾತಿಯನ್ನಾಗಿ ಕೆಲವು ಜಾತಿವಾದಿಗಳು ಮಾಡಿಕೊಂಡರು. ಇದರಿಂದಾಗಿ ಬಸವಣ್ಣನ ತತ್ವವನ್ನು ಗಾಳಿಗೆ ತೂರಿದರು. ಬಸವಣ್ಣ ಕಂಡ ಕನಸುಗಳನ್ನೆಲ್ಲಾ ಧಿಕ್ಕರಿಸುತ್ತಾ ಆಳುವ ವರ್ಗವಾಗಿ ಮಾರ್ಪಟ್ಟರು. ಶೋಷಣೆಯನ್ನು ಮುಖ್ಯ ಧ್ಯೇಯವನ್ನಾಗಿ ಮಾಡಿಕೊಂಡ ಇವರು ಬಸವಣ್ಣನನ್ನು ಕೇವಲ ವಚನಗಳ ವಾಚನಕ್ಕಷ್ಟೇ ಸೀಮಿತಗೊಳಿಸಿ, ಜಾತ್ಯಾತೀತ ಮನಸ್ಸಿನ ಬಸವಣ್ಣನನ್ನು ಜಾತಿಗೆ ಸೀಮಿತಗೊಳಿಸಿ ತಮ್ಮ ಅಸ್ತಿತ್ವವನ್ನು ಮೇಲ್ದರ್ಜೆಯ ನೆಲೆಯಲ್ಲಿಯೇ ಗುರುತಿಸಿಕೊಳ್ಳಲು ಬಯಸಿದರು. ಇಲ್ಲಿನ ಕೆಲವೊಂದು ಜಾತಿಗಳು ಆತ್ಮಾವಲೋಕನ ಮಾಡಿಕೊಂಡರೆ ಮಾತ್ರ ಬಸವಣ್ಣ ಎಲ್ಲರ ಅಣ್ಣನಾಗಿ ಉಳಿಯಲು ಸಾಧ್ಯ.

ಅನುಭವ ಮಂಟಪದ ಮೂಲಕ ಜಾತ್ಯಾತೀತ ಮನಸ್ಸುಗಳನ್ನೆಲ್ಲಾ ಒಂದೆಡೆ ಸೇರಿಸಿ ಸಾಮಾಜಿಕ ಬದಲಾವಣೆಗೆ ನಾಂದಿ ಹಾಡಲು ಹೊರಟ ಬಸವಣ್ಣನನ್ನು ೨೦ರ ದಶಕದ

ದಲಿತ ಹೋರಾಟವು ತನ್ನ ಸ್ಫೂರ್ತಿಯ ಒಂದು ಅಂಶವನ್ನಾಗಿ ಪರಿಗಣಿಸಿದೆ. ಜಾತಿ, ಮತ, ಬಣ್ಣ ಮುಂತಾದವುಗಳಿಂದ ನೊಂದ ಜನತೆಯನ್ನು ಸಮಾನತೆಯ ನೆಲೆಯಲ್ಲಿ ಕೊಂಡೊಯ್ಯುವ ಸಂಕಲ್ಪ ತೊಟ್ಟ ಬಸವಣ್ಣ ಜಾತಿ, ಮತ, ಕುಲ, ದೇವರು, ಧರ್ಮ ಮುಂತಾದವುಗಳು ಮನುಷ್ಯ ಮನುಷ್ಯನಿಗೆ ಉಂಟುಮಾಡಿರುವ ಬಿರುಕುಗಳನ್ನು ಎತ್ತಿ ತೋರಿಸುತ್ತಲೇ ದುಡಿಮೆ ಜನತೆಯ ಸಾರ್ವತ್ರಿಕತೆಯನ್ನು ಸಾರುವ 'ಕಾಯಕವೇ ಕೈಲಾಸ' ಎಂಬ ಪರಿಕಲ್ಪನೆಯನ್ನು ಕಟ್ಟಿದರು. ಇಂತಹ ಸಮಾನತೆಯ ಮಾನವತಾವಾದಿಯನ್ನು ನೋಡುವಾಗಲೂ ಕೂಡ ದಲಿತ ಕಾವ್ಯ ತನ್ನ ದುಡಿಯುವ ವರ್ಗದ ನೆಲೆಯಲ್ಲೇ ನಿಂತು ವಿಶ್ಲೇಷಿಸುತ್ತಿದೆ. ಇಂತಹ ದುಡಿಯುವ ಜನತೆಯ ಪರ ಹೋರಾಟ ಕಟ್ಟಿದ ದಕ್ಷಿಣ ಆಫ್ರಿಕಾದ ಕತ್ತಲೆಯಲ್ಲಿ ಸೂರ್ಯನಂತೆ ಮೂಡಿಬಂದ ನೆಲ್ಸನ್ ಮಂಡೇಲಾರನ್ನು ಕುರಿತ ಕಾವ್ಯ ಮೂಡಿಬಂದದ್ದು ಈ ಕೆಳಗಿನಂತಿದೆ.

ನೆಲ್ಸನ್ ಮಂಡೇಲಾ

ನೆಲ್ಸನ್ ಮಂಡೇಲಾ ಭೂಮಂಡಲ, ಮಂಡಲ ಹಾವಿನಂತೆ
ನಿಂತಿದ್ದಾನೆ ಹೆಡೆ ಎತ್ತಿ ಗಾಂಧಿ ಅಸ್ತ್ರವ ಒಗೆದು
ಬದುಕು ರೋಸದ ಯುದ್ಧ ಮುಗಿಸದ ಯೋಧ-ಸೂರ್ಯ
ಚಾಮರ ಇಲ್ಲದೆ ಒಬ್ಬಂಟಿ ಕಾಯುತ್ತಾನೆ ಅಗೆದು

....

ಸ್ವಯಮಾಧಿಕಾರಕ್ಕೆ ಜಗತ್ತಿನ ಬಡವರು ನಿನ್ನೊಂದಿಗಿರಲಿ
ಬಿಳಿ ಭೂರ್ಜ್ವರಿಗೆ ಮಣ್ಣು ಮುಕ್ಕಿಸಲು
ಮರೆಯದಿರಿ ಬೆಂಜಮಿನಂಥವರ ದಾರಿ; ಭಾರ ಬದಲಾಯಿಸಿ
ಕೊಳ್ಳಿ ಭಾರವೆನಿಸಿದರೆ, ನೆಲಕ್ಕಿಡಬೇಡಿ ಕರ್ತವ್ಯ[೨೦]

ದಲಿತ ಕಾವ್ಯ ತನ್ನ ಪರಂಪರೆಯ ಹೆಜ್ಜೆ ಜಾಡನ್ನು ಹಿಡಿದಿರುವುದೂ ಸಹ ಸಮಾನತೆಯ ನ್ಯಾಯಕ್ಕಾಗಿ ಹೋರಾಟ ಮಾಡಿದವರನ್ನೇ. ಅಸಮಾನತೆ ಎಂಬುದು ದುಡಿಯುವವರನ್ನು ಅಸಹಾಯಕರನ್ನಾಗಿಸಿ ಸಾಮಾಜಿಕ ತುದಿಗೆ ತಳ್ಳಿದೆ. ಸದಾ ಅವಮಾನದ ನೆರಳಿನಲ್ಲಿಯೇ ಬದುಕುತಿದ್ದವರನ್ನು ಮೇಲ್ಪದರಕ್ಕೆ ಕೊಂಡೊಯ್ಯುವ ಛಲ ಹಿಡಿದು ಅನೇಕ ಮಹನೀಯರುಗಳು ಹೋರಾಡಿದರು. ಇವರ ಸಾಧನೆಯ ಹಾದಿಯಿಂದ ಸ್ಫೂರ್ತಿಗೊಂಡ ಅಕ್ಷರ ಕಲಿತ ದಲಿತರು ಹೋರಾಟದ ಹಾದಿಯಲ್ಲಿ ಅವರ ತತ್ವಗಳನ್ನು ಪಾಲಿಸಲು ಮುಂದಾದರು. ಅದರ ಫಲವೇ ಕಾವ್ಯದಲ್ಲಿಯೂ ಮೈದಾಳಿತು. ಇಡೀ ದುಡಿವ ವರ್ಗಕ್ಕೆ ನ್ಯಾಯ ಸಿಗಬೇಕೆಂಬ ಹಂಬಲದೊಂದಿಗೆ ಮೈದಾಳಿದ ಈ ಕಾವ್ಯ ಪರಂಪರೆ ದುಡಿವ

31

ಜನತೆಯ ದೃಷ್ಟಿಕೋನದಲ್ಲಿಯೇ ತನ್ನ ಆದರ್ಶ ಪುರುಷರನ್ನು ನೋಡಿ ನಿರೂಪಿಸಿದೆ. ಹಾಗೆಯೆ ಇವರೆಲ್ಲರ ಮೂಲಕ ದುಡಿವ ಜನತೆಯ ದೃಷ್ಟಿಕೋನವನ್ನು ನಿರ್ಮಿಸಿದೆ. ಮೇಲಿನ ಕವಿತೆ ಕರಿಯರಿಗಾಗಿ ತನ್ನ ಜೀವಮಾನದುದ್ದಕ್ಕೂ ಹೋರಾಡಿದ ಮತ್ತು ಹೋರಾಡುತ್ತಿರುವ ಮಂಡೇಲನನ್ನು ಕುರಿತು ಹಾಡುತ್ತಿದೆ. 'ಬ್ಲಾಕ್ ಈಸ್ ಬ್ಯೂಟಿಫುಲ್' ಎಂಬ ಘೋಷಣೆ ದಕ್ಷಿಣ ಆಫ್ರಿಕಾದ ವರ್ಗ ನೆಲೆಗಳನ್ನೇ ಅಲ್ಲಾಡಿಸಿತು. ಇಂತಹ ದೇಶದಲ್ಲಿ ಸಮಾನತೆಯ ಹರಿಕಾರನಂತೆ ಕಾಣಿಸಿಕೊಂಡ ನೆಲ್ಸನ್ ಮಂಡೇಲಾ ದುಡಿಯುವ ವರ್ಗಕ್ಕೆ ಸದಾ ಬೆಳಕು ಚೆಲ್ಲುವ ಸೂರ್ಯನಿದ್ದಂತೆ. ಮಂಡೆಲಾ ಕೇವಲ ದಕ್ಷಿಣ ಆಫ್ರಿಕಾದ ಸ್ವತ್ತಲ್ಲ. ಅವನು ಭೂಮಂಡಲದ ಸ್ವತ್ತು. ದುಡಿಯುವ ಜನತೆಯ ಸ್ವಾಭಿಮಾನದ ಸಂಕೇತ. ಇಂತಹ ವ್ಯಕ್ತಿಯನ್ನು ಕನ್ನಡ ದಲಿತ ಕಾವ್ಯ ಅಭಿಮಾನದಿಂದ ಆರಾಧಿಸಿದೆ. ಹಾಗೆಯೇ ಕರ್ತವ್ಯವನ್ನು ನೆಲಕ್ಕಿಡದಂತೆ ಪ್ರಾರ್ಥಿಸಿಕೊಂಡಿದೆ.

ಮೇಲಿನ ಕಾವ್ಯದಲ್ಲಿ ಗಾಂಧಿ, ಅಸ್ತ್ರವ ಒಗೆದು ಎಂಬ ವಾಕ್ಯ ಬಂದಿದೆ. ಗಾಂಧಿಯನ್ನು ದಲಿತರು ಎರಡು ನೆಲೆಯಲ್ಲಿ ನಿರೂಪಿಸಿದ್ದಾರೆ. ಒಂದು ಗಾಂಧಿ ಅಸ್ಪೃಶ್ಯತೆಯ ವಿರುದ್ಧ ತನ್ನ ನಿಲುವನ್ನು ತಾಳಿದ್ದು. ಹಾಗೆಯೇ ಅದರಿಂದಲೇ ತಿರಸ್ಕಾರಕ್ಕೆ ಒಳಗಾಗಿದ್ದು. ಏಕೆಂದರೆ ಗಾಂಧಿ ಅಸ್ಪೃಶ್ಯತೆಯನ್ನು ದಲಿತರ ಸಾಮಾಜಿಕ ಮತ್ತು ಆರ್ಥಿಕ ನೆಲೆಯಲ್ಲಿಟ್ಟು ನೋಡಲಿಲ್ಲ. ಬದಲಾಗಿ ಹಿಂದೂ ಧರ್ಮಕ್ಕಂಟಿದ ಕೊಳಕಿನ ರೂಪದಲ್ಲಿ ನೋಡಿದ್ದು. ಹಾಗೆಯೇ ಪೂನಾ ಒಪ್ಪಂದದಲ್ಲಿ ದಲಿತರಿಗೆ ಸಿಗಬೇಕಿದ್ದ ಎರಡು ಓಟಿನ ಮತದಾನದ ಹಕ್ಕನ್ನು ಕಿತ್ತುಕೊಂಡದ್ದು. ಗಾಂಧಿಯ ಈ ಇಬ್ಬಂದಿತನದಿಂದಲೇ ದಲಿತ ಕವಿಗಳು ತಮ್ಮ ಅಭಿವ್ಯಕ್ತಿಯಲ್ಲಿ ಇಬ್ಬಂದಿತನವನ್ನು ತೋರಿದಂತೆ ಭಾಸವಾಗುತ್ತದೆ.

ದಲಿತ ಕಾವ್ಯ ಸಮುದಾಯದ ಹಾಡಾಗಿ, ಕವಿಯೇ ಮರೆತು ಹೋಗುವ ನಿಟ್ಟಿನಲ್ಲಿ ಪರಿಣಮಿಸಿದ್ದು ಅದರೊಳಗಿನ ದುಡಿವ ಜನತೆಯ ದೃಷ್ಟಿಕೋನದ ನೆಲೆಗಳಿಂದಲೇ, ಇಲ್ಲಿನ ಹಾಡು ಹಾಡುತ್ತಿದ್ದರೆ ಅದು ಸಮುದಾಯವೇ ಹಾಡಿದಂತಿರುತ್ತದೆ. ನೋವುಂಡ ಎಲ್ಲರ ಮನದಾಳದ ಮಾತುಗಳಾಗಿ ಅದು ಹೊರಹೊಮ್ಮುತ್ತದೆ.

ದಲಿತ ಕಾವ್ಯ ದುಡಿವ ವರ್ಗದ ದೃಷ್ಟಿಕೋನದಲ್ಲಿ ನಿರೂಪಿಸಿದ ಬಹುಮುಖ್ಯ ಪರಿಕಲ್ಪನೆ ಪ್ರಜಾಪ್ರಭುತ್ವ ವ್ಯವಸ್ಥೆಯ ಕಟು ವಿಮರ್ಶೆ. ಆದ್ದರಿಂದ ರಾಜ್ಯವಾಳುವವರನ್ನು ಕಳ್ಳರ ರಾಜ್ಯವೆಂದೇ ಬಣ್ಣಿಸಿದ ದಲಿತ ಕಾವ್ಯ ಪರ್ಯಾಯ ರಾಜಕೀಯ ವ್ಯವಸ್ಥೆಗೆ ಹಾತೊರೆಯಿತು. ಹೋರಾಟದ ಹಾಡುಗಳಂತೂ ರಾಜ್ಯವಾಳುವವರನ್ನು ಕಳ್ಳರ ರಾಜ್ಯ ಇದು ದರೋಡೆಕೋರರ ರಾಜ್ಯ ಎಂದೇ ಬಣ್ಣಿಸಿವೆ. ತಮ್ಮನ್ನಾಳುವ ಪ್ರಭುತ್ವಶಾಹಿಗಳಿಂದಾಗಲಿ, ಜಾಗತೀಕರಣದ ಹೆಸರಿನಲ್ಲಿ ಬದುಕನ್ನು ಅತಂತ್ರ ಮಾಡುತ್ತಿರುವ ದಲ್ಲಾಳಿಗಳಿಂದಾಗಲಿ ಈ ದೇಶದ ಬಡವರ ಬದುಕು ಹಸನಾಗುವುದಿಲ್ಲವೆಂದು ಮನಗಂಡ ದಲಿತ ಕವಿಗಳು ತಮ್ಮ ಹೋರಾಟದ ಹಾದಿಯಲ್ಲಿ ಪರ್ಯಾಯ ರಾಜಕೀಯ ವ್ಯವಸ್ಥೆಗೆ ಒತ್ತಾಯಿಸಿದರು.

ಯಾರಣ್ಣ ಇವರು ಯಾರಣ್ಣ
ಆಳೋರಿಗೆ ಆರಾಣೆ
ಉಳೋರಿಗೆ ಮೂರಾಣೆ
ತಂದೋರು ಯಾರು ಹೇಳಣ್ಣ
ದುಡಿಯೋರಿಗೆ ದುಡ್ಡಿಲ್ಲಣ್ಣ
ಬಿತ್ತೋರ್ಹೊಟ್ಟೆಗೆ ರೊಟ್ಟಿಲ್ಲಣ್ಣ
ಬಂಗ್ಲೆದೋರ ಹೊಟ್ಟೆ ತುಂಬಿತಣ್ಣ
ಇದು ಬಿಟ್ಟೋರು ಯಾರು ಹೇಳಣ್ಣ

....

ಬಡವರ ರಕ್ತ ಹೀರ್‍ದ್ಯಾರಣ್ಣ
ಎಲ್ಲಾ ಆಸ್ತಿ ದೋಚ್ಯಾರಣ್ಣ
ಕಣ್ಣಿಗೆ ಮಣ್ಣು ಎರಚಾರಣ್ಯ
ಬಡಜನಕ ಕೊಂದು ಧನಿಕರಾಗ್ಯಾರಣ್ಣ[೭೧]

ಸ್ವಾತಂತ್ರ್ಯ ಬಂದು ಅರ್ಧಶತಮಾನಗಳೆ ಕಳೆದಿವೆ. ಅಲ್ಲಿಂದ ಇಲ್ಲಿಯವರೆಗೂ ಈ ದೇಶವನ್ನು ಭೂಮಾಲೀಕ, ಬಂಡವಾಳಶಾಹಿಗಳೇ ಆಳ್ವಿಕೆ ನಡೆಸಿದ್ದಾರೆ. ಬಡವರ ಉದ್ಧಾರ ಮಾಡ್ತೀವಿ, ಬಡತನ ಹೋಗಲಾಡಿಸುತ್ತೀವಿ ಅಂತೇಳುತ್ತಲೇ ತಮ್ಮ ಆಸ್ತಿಯನ್ನು ಕೋಟಿ ಕೋಟಿಗಳಲ್ಲಿ ಸಂಗ್ರಹಿಸುತ್ತಿದ್ದಾರೆ. ದೇಶವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುವ ನಿಟ್ಟಿನಲ್ಲಿ ವಿದೇಶಿ ಕಂಪನಿ ಮತ್ತು ಸ್ವದೇಶೀ ಬಂಡವಾಳಿಗರಿಗೆ ಮನ್ನಣೆ ನೀಡಲಾಗುತ್ತಿದೆ. ಉದಾರೀಕರಣ, ಖಾಸಗೀಕರಣ, ಜಾಗತೀಕರಣಗಳು ಬಡವರ ಬದುಕನ್ನು ಅತಂತ್ರ ಸ್ಥಿತಿಗೆ ತಳ್ಳಿವೆ. ದುಡಿಯುವ ಜನರಿಗೆ ಕೂಲಿಯೂ ಸಿಗದಂತಹ ಪರಿಸ್ಥಿತಿ ಇದೆ. ಇಂತಹ ಸಂದರ್ಭದಲ್ಲಿ ದೇಶ ಉದ್ಧಾರ ಮಾಡ್ತೀವಿ ಎಂದು ಆಳುವ ವರ್ಗಗಳು ಜನರ ಬದುಕಿನ ಜೊತೆ ಆಟವಾಡುತ್ತಿವೆ. ಇದನ್ನು ಮನಗಂಡೇ ದಲಿತ ಕವಿಗಳು ತಮ್ಮ ಕಾವ್ಯಗಳಲ್ಲಿ ಬಡಜನರ ರಕ್ತಹೀರಿ ಬದುಕುವ ಬಂಡವಾಳಶಾಹಿಗಳ ಬಂಡವಾಳವನ್ನು ಬಯಲು ಮಾಡಿದರು. ದುಡಿಯುವ ವರ್ಗದ ಶ್ರಮ ಅನ್ಯರ ಹೊಟ್ಟೆಗೆ ಆಹಾರವಾಗುತ್ತಿರುವ ಶೋಚನೀಯ ಸ್ಥಿತಿಯನ್ನು ಮೇಲಿನ ಕವನ ದುಡಿಯುವ ನೆಲೆಯಲ್ಲಿ ನಿಂತು ನಿರೂಪಿಸಿದೆ.

ದೋಚುವ ರಾಜ್ಯ, ದೊರೆಗಳ ರಾಜ್ಯ, ಪೋಲೀಸು ರಾಜ್ಯ, ಮಂತ್ರಿ ರಾಜ್ಯ, ತುಪಾಕಿ ರಾಜ್ಯ ಇವೆಲ್ಲವೂ ಕಟುಕರ ರಾಜ್ಯವೆಂಬುದು ದಲಿತ ಕಾವ್ಯದ ಅಭಿವ್ಯಕ್ತಿ. ಇದಕ್ಕೆ ಬ್ರಿಟಿಷರು ಬಿಟ್ಟು ಹೋದ ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳೇ ಸಾಬೀತುಪಡಿಸಿವೆ. ದಲಿತರ

ಮೇಲಿನ ದಬ್ಬಾಳಿಕೆ, ಅತ್ಯಾಚಾರ ನಡೆಯದ ದಿನವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಕಾನೂನು ಎಲ್ಲರಿಗೂ ಒಂದೇ ಎನ್ನುವ ಆಳುವ ವರ್ಗ ದಲಿತರ ವಿಷಯದಲ್ಲಿ ಕಣ್ಣು ಮುಚ್ಚುತ್ತದೆ. ಹಾಗೆಯೇ ಬಂದೂಕು ಹಿಡಿಯುವುದು ದೇಶದ್ರೋಹಿ ಕೆಲಸ ಎಂದು ಹೇಳುತ್ತಲೇ ತಮ್ಮ ಹಕ್ಕು ಕೇಳುವ ದಲಿತರಿಗೆ, ರೈತರಿಗೆ ಬಂದೂಕಿನ ರುಚಿ ತೋರಿಸುವ ಆಳುವ ವರ್ಗಗಳು ತನ್ನ ಬಂಡವಾಳದ ಕೇಂದ್ರೀಕರಣವನ್ನು ಅಪ್ಪಿತಪ್ಪಿಯೂ ಮುಕ್ಕಾಗದ ಹಾಗೆ ನೋಡಿಕೊಳ್ಳುತ್ತವೆ.

....

ಸಾಲಮನ್ನ ಮಾಡ್ತೀವೆಂದು ಅಣ್ಣ ಕೂಲಿಯಣ್ಣ
ಕಾಂಗ್ರೆಸ್ಸು ಪಾರ್ಟಿ ಬಂತು
ಮಂದಿರವ ಕಟ್ತೀವೆಂದು
ಬಿಜೆಪಿ ಪಾರ್ಟಿ ಬಂತು
ಸಾಮಾಜಿಕ ನ್ಯಾಯವೆಂದು
ಜನತಾದಳ ಮತ್ತೆ ಬಂತು
ಕಳ್ಳರೆಲ್ಲ ಕೂಡಿಕೊಂಡು
ಮಂತ್ರಿಕೂಟ ಮಾಡಿಕೊಂಡು
ಇಂದಿರಮ್ಮ ಹೋದಳು ರಾಜೀವ ಬಂದನು
ರಾಜೀವ ಹೋಗಿ ಮತ್ತೆ ನರಸಿಂಹ ಬಂದನು
ನರಸಿಂಹ ಹೋದನು ದ್ಯಾವೇಗೌಡ ಬಂದನು
ದ್ಯಾವೇಗೌಡ ಹೋಗಿ ಮತ್ತೆ ಗುಜರಿ ಗುಜರಾಲ್ ಬಂದನು
ಗುಜರಿ ಗುಜರಾಲ್ ಹೋದನು ವಾಜಪೇಯಿ ಬಂದನು
ಎಲ್ಲ ಜೋಡಿಕಳ್ಳರು ದೇಶದ್ರೋಹಿ ಬಂಟರು ॥ನಂಬೋದು॥೨

ಕಾಂಗ್ರೆಸ್, ಬಿಜೆಪಿ, ಜನತಾ ದಳ ಈ ಆಳುವ ವರ್ಗಗಳು ಮತ್ತೆ ಮತ್ತೆ ಆಳಿವೆ. ಆದರೆ ಈ ಮೂರನ್ನು ದೋಚುವ ರಾಜ್ಯವೆಂದು ಕರೆದ ಹೋರಾಟದ ಹಾಡು ಆಳುವ ವರ್ಗದಲ್ಲಿ ಯಾರೇ ಇದ್ದರೂ ಅವರು ಕಳ್ಳರೇ ಎಂದು ನಿರೂಪಿಸಿದೆ. ನಾವು ಅವರಲ್ಲ ಎಂದುಕೊಳ್ಳುತ್ತಲೆ ಬಡವರ ಸುಲಿಗೆ ಮಾಡೋ ಜಾಯಮಾನಕ್ಕೆ ಇಳಿಯುತ್ತಾರೆ. ಇಂತಹ ರಾಜಕಾರಣಿಗಳ ನಂಬಬೇಡಿ ಎಂಬುದೇ ಇಲ್ಲಿನ ರಾಜಕೀಯ ಒತ್ತಾಸೆ, ದುಡಿವ ನೆಲದ ಶ್ರಮಿಕರ ಶ್ರಮವನ್ನು ಉಂಡು ಮರೆಯುವ ಆಳುವ ವರ್ಗದಲ್ಲಿ ಕವಿತೆ ಅದೇ ನೆಲೆಯಲ್ಲಿ ನಿಂತು ಧಿಕ್ಕರಿಸುತ್ತಿದೆ ಮತ್ತು ತಿರಸ್ಕರಿಸುತ್ತಿದೆ. ಕರಾಳ ರಾಣಿಯ ಕತೆಯನು ಹೇಳುತೀವಿ

34

ಎನ್ನುವುದರ ಮೂಲಕ ಇಂದಿರಾಗಾಂಧಿ ಹೇರಿದ ತುರ್ತು ಪರಿಸ್ಥಿತಿಯನ್ನು ಬಡವರ ಪಾಲಿನ ಕರಾಳ ದಿನಗಳೆಂದೇ ದಲಿತ ಕಾವ್ಯಗಳು ತೋರಿಸಿಕೊಟ್ಟವು.

ಬಡವರ ಸಾಲ ಮನ್ನಾದ ಹೆಸರಿನಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದ ಕಾಂಗ್ರೆಸ್ ಪಕ್ಷ ತಾನು ಈ ದೇಶದ ಬಡವರ ಪರ ಎಂಬುದನ್ನು ತನಗೆ ತಾನೇ ಹೇಳಿಕೊಂಡು ಹೊಗಳಿಕೊಂಡಿತು. ಆದರೆ ದುಡಿಯುವ ದುಡ್ಡನ್ನು ಕೂಡಿಟ್ಟರೆ ಕಾಯುವ ಕೆಲಸ ನಮ್ಮದು ಎಂದು ಹೇಳಿಕೊಂಡು ತಿರುಗುವ ಬ್ಯಾಂಕ್‌ಗಳು ಸಾಲ ಕೊಟ್ಟಿದ್ದು ದುಡಿದು ತಿನ್ನುವ ಬಡವನಿಗಲ್ಲ. ಸಂಪತ್ತು ಮತ್ತು ಆಸ್ತಿಯನ್ನು ಕನಿಷ್ಠಮಟ್ಟಿಗಾದರೂ ಉಳ್ಳ ಅಲ್ಪ ಮತ್ತು ಭಾರೀ ಭೂಮಾಲೀಕರಿಗೆ. ಸಾಲ ಮನ್ನಾ ಮಾಡಿದರೆ ಇವರಿಗೆ ಸಹಾಯವಾಗಬಹುದೇ ಹೊರತು ಆ ಭೂಮಿಯಲ್ಲಿ ಕೂಲಿ ಕೆಲಸ ಮಾಡುವ ಕಾರ್ಮಿಕ ವರ್ಗಕ್ಕಲ್ಲ. ಈ ಹುನ್ನಾರ ಜನತೆಯಲ್ಲಿ ಬಿತ್ತಿದ ಕಾಂಗ್ರೆಸ್ ಚೇಲಾಗಳು, ಕಾಂಗ್ರೆಸ್ ಪಕ್ಷ ಹಲವು ವರ್ಷ ಅಧಿಕಾರದ ಚುಕ್ಕಾಣಿ ಹಿಡಿಯಲು ಸಾಧ್ಯವಾಯಿತು.

ಇನ್ನು ಕಾಂಗ್ರೆಸ್ ಹೇರಿದ ತುರ್ತುಪರಿಸ್ಥಿತಿಯನ್ನೇ ಆಧಾರವಾಗಿಟ್ಟುಕೊಂಡು ಅಧಿಕಾರಕ್ಕೆ ಬಂದ ಜನತಾ ಪಕ್ಷ ಜನತೆಯನ್ನು ಮತ್ತೊಂದು ರೀತಿಯಲ್ಲಿ ದಿಕ್ಕುತಪ್ಪಿಸಿತು. ಸಾಮಾಜಿಕ ನ್ಯಾಯ ನಮ್ಮ ಮೂಲಮಂತ್ರವೆಂದು ಹೇಳಿಕೊಂಡ ಈ ಪಕ್ಷ ಮತ್ತದೇ ಬಂಡವಾಳಶಾಹಿ ಮತ್ತು ಭೂಮಾಲೀಕ ವರ್ಗದವರಿಗೆ ಮಣೆ ಹಾಕಿತು. ದುಡಿಯುವ ವರ್ಗಕ್ಕೆ ಇದು ಕಿಂಚಿತ್ತೂ ಕೊಡುಗೆ ನೀಡಲಿಲ್ಲ. ಮೂಲತಃ ಭೂಮಾಲೀಕ ವರ್ಗದಿಂದ ಸೃಷ್ಟಿಗೊಂಡ ಈ ರಾಜಕೀಯ ಪಕ್ಷ ತನ್ನ ಆಲೋಚನೆಗಳೆಲ್ಲಾ ಆ ವರ್ಗಕ್ಕೇ ಸೀಮಿತಗೊಳಿಸಿತು. ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ತಿಮ್ಮಿ, ಗುತ್ತಿ ಜೊತೆ ಓಡಿಹೋಗಿದ್ದಕ್ಕೆ ಸಣ್ಣಬೀರನನ್ನು ಕಟ್ಟಿ ಹಾಕಿ ಹೊನ್ನಾಳಿ ಹೊಡ್ತ ಹೊಡೆಯುವ ಗೌಡರ ಸಾಮಾಜಿಕ ನ್ಯಾಯದ ಪರಿಕಲ್ಪನೆ ಮುಂದುವರಿದಂತೆ ಈ ಪಕ್ಷದ ಧೋರಣೆಯೂ ಮುಂದುವರಿಯಿತು.

ಈ ದೇಶದ ಅಸ್ಪೃಶ್ಯರೇನೇ ಆಗಲಿ, ಬಡವರ ಬದುಕು ಹಸನಾಗಲಿ ಬಿಡಲಿ ರಾಮಮಂದಿರ ಕಟ್ಟೇ ತೀರುತ್ತೇವೆಂದು ಧಾರ್ಮಿಕ ಅಂಧಕಾರವನ್ನು ಜನತೆಯ ತಲೆಯಲ್ಲಿ ತುಂಬಿ ಅಧಿಕಾರ ನಡೆಸಿದ ಬಿಜೆಪಿ ಪಕ್ಕಾ ಮೂಲಭೂತವಾದಿಗಳಿಂದ ಕೂಡಿದ ಸರ್ಕಾರವಾಗಿತ್ತು. ಮೀಸಲಾತಿಯ ಮೇಲೆ ಸದಾ ಕಣ್ಣಿಟ್ಟಿರುವ ಇವರು ದಲಿತರನ್ನು ಸಂಪೂರ್ಣವಾಗಿ ಮತ್ತೊಮ್ಮೆ ಜೀತಕ್ಕೆ ನೂಕುವ ತಂತ್ರವನ್ನು ನೇಯುತ್ತಲೇ ಇರುತ್ತಾರೆ. ಆರ್.ಎಸ್.ಎಸ್., ಭಜರಂಗದಳ, ಶ್ರೀರಾಮಸೇನೆ, ಎಬಿವಿಪಿ ಮುಂತಾದ ಕೋಮುವಾದಿ ಸಂಘಟನೆಗಳ ಬೆನ್ನಿನಿಂದ ಎದ್ದು ಬಂದ ಈ ರಾಜಕೀಯ ಪಕ್ಷ ದಲಿತರನ್ನು, ದುಡಿಯುವವರನ್ನು ವೇದಗಳ ಕಾಲದ ಸಾಮಾಜಿಕ ವ್ಯವಸ್ಥೆಗೆ ತಳ್ಳುವುದರಲ್ಲಿ ಅನುಮಾನವೇ ಇಲ್ಲ. ಈ ಮೂರು ಪಕ್ಷಗಳೇ ಅಲ್ಲ, ಆಳುವ ಯಾವುದೇ ರಾಜಕೀಯ ಪಕ್ಷಗಳು ಬಂದರೂ

ಸರಿ ದುಡಿಯುವವರಿಗೆ ಸಾಮಾಜಿಕ ನ್ಯಾಯ ದೊರಕುವುದು ಕನಸಿನ ಮಾತು. ಇಂತಹ ರಾಜಕೀಯ ಪಕ್ಷಗಳ ಕೊಳ್ಳುಬಾಕು ಸಂಸ್ಕೃತಿಯನ್ನೇ ದಲಿತ ಕಾವ್ಯಗಳು ಮತ್ತು ಹೋರಾಟದ ಹಾಡುಗಳು ತಮ್ಮ ಅಭಿವ್ಯಕ್ತಿಯಲ್ಲಿ ಧಿಕ್ಕರಿಸಿವೆ.

ಐದು ವರ್ಷಗಳಿಗೊಮ್ಮೆ ಓಟು ಕೇಳಲು ಬರುವ ರಾಜಕಾರಣಿಗಳು ಮತ್ತೆ ಎಂದಿಗೂ ಇವರ ಕಡೆ ಮುಖಮಾಡಿ ಮಲಗುವುದೂ ಇಲ್ಲ. ಇನ್ನು ಹಳ್ಳಿಗಳ ಮೂಲಭೂತ ಸೌಕರ್ಯದ ಕೊರತೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. 'ಭಾರತ ಪ್ರಕಾಶಿಸುತ್ತಿದೆ' ಎಂಬ ಸೋಗನ್ನು ಎಲ್ಲರ ಮೇಲೆ ಹೇರಲಾಗಿದೆ. ಇಂತಹ ಚುನಾವಣೆಯ ದಿನಗಳನ್ನು ಒಂದು ದಲಿತ ಕಾವ್ಯ ನಿರೂಪಿಸುವ ರೀತಿ ಹೀಗಿದೆ;

ನಮ್ಮ ದೇಶದಲ್ಲಿ
ಓಟುಗಳು ಮಾರಾಟಕ್ಕಿವೆ
ಮಾರುಕಟ್ಟೆಗೇನು?
ಊರಿಗೊಂದು ಕೇರಿಗೊಂದು
ಮಾರುವ ಸಮಯಕ್ಕೇನು?
ಹಗಲೂ ಇರುಳೂ.
ನಮ್ಮ ದೇಶದಲ್ಲಿ
ಓಟುಗಳು ಮಾರಾಟಕ್ಕಿವೆ
ಸೀರೆ ಪಂಚೆಗೊಂದು
ಒಪ್ಪತ್ತಿನೂಟಕ್ಕೊಂದು
ನೂರು ರೂಪಾಯಿಗೊಂದು
ಸಾರಾಯಿ ಬಾಟಲಿಗೊಂದು[೭೩]

ಇಂಡಿಯಾ ದೇಶದಲ್ಲಿ ಚುನಾವಣೆ ಮೂಲಕ ಆಳುವವರನ್ನು ಆಯ್ಕೆ ಮಾಡಲಾಗುತ್ತದೆ ಎಂದು ಎಗ್ಗಿಲ್ಲದೆ ಪ್ರಚಾರ ಮಾಡಲಾಗುತ್ತಿದೆ. ಇದರಿಂದಾಗಿ ಚುನಾವಣೆಯ ವೇಳೆ ಚಲಾವಣೆಗೊಳ್ಳುವ ಕಪ್ಪುಹಣದ ಚರ್ಚೆ ಮುಂಚೂಣಿಗೆ ಬರುತ್ತಲೇ ಇಲ್ಲ. ಮತದಾರರು ತಮ್ಮ ಮತಗಳನ್ನು ಮಾರಿಕೊಳ್ಳುವುದರ ಮೂಲಕವಾಗಿ ದೇಶ ಆಳುವವರ ಸೃಷ್ಟಿ ನಡೆಯುತ್ತಿದೆ. ಇಂತಹ ಮತದಾನ ಪದ್ದತಿ ಗೋಸುಂಬೆ ತರ ಬಣ್ಣ ಬದಲಾಯಿಸುವ ಮತ್ತು ಹದ್ದು, ಹುಲಿಯಂತೆ ಕಿತ್ತು ತಿನ್ನುವ ನರಭಕ್ಷಕರನ್ನು ಸೃಷ್ಟಿಸುತ್ತದೆಯೇ ಹೊರತು ಬಡವರ ಕಣ್ಣೀರನ್ನು ಒರೆಸುವ ಮನುಷ್ಯರನ್ನಲ್ಲ. ಆಳುವವರು ತಮ್ಮ ಆಳ್ವಿಕೆಗಾಗಿ ಹೇಗೆ ಬೇಕಾದರೂ ಬಣ್ಣ

36

ಬದಲಾಯಿಸುತ್ತಾರೆ. ಎಲ್ಲವನ್ನು ರಾಜಕೀಯವೆಂಬ ನೆಲೆಯಲ್ಲಿ ತಳ್ಳಿಹಾಕುತ್ತಾರೆ. ಸಮಯಕ್ಕೆ ತಕ್ಕ ಹಾಗೆ ವರ್ತಿಸಿ ತಮ್ಮ ದೋಚುವ ಮುಖಗಳನ್ನು ಪ್ರದರ್ಶಿಸುತ್ತಾರೆ. ಇಂತಹ ಪ್ರಭುತ್ವ ಮಹಲಿನಲ್ಲಿರುವವರನ್ನು ಅರ್ಥಮಾಡಿಕೊಳ್ಳುವಷ್ಟರಲ್ಲಿ ಮತ್ತೆ ಚುನಾವಣೆ ಬಂದಿದೆ. ಇದನ್ನು ಮತ್ತೊಂದು ಕವನ ಹೀಗೆ ನಿರೂಪಿಸುತ್ತದೆ.

ಯಾರಿಗೆ ಬಂತು, ಎಲ್ಲಿಗೆ ಬಂತು
ಐದು ವರ್ಷದ ಚುನಾವಣೆ
ಇಷ್ಟವಾದ ಖಾತೆಯ ಬಯಸುತ
ಬಡಿದಾಡುತ್ತ ಬಂದರು ದಿನೇ ದಿನೆ
ಕೈಗೆ ಬಂದ ಮನವಿ ಪತ್ರಕ್ಕೆ
ನೀಡುತ್ತ ಬಂದರು ಸುಳ್ಳು ಆಶ್ವಾಸನೆ
ಜನಗಳ ರಕ್ಷಣೆ ಮಾಡದೆ ಇವರು
ತಪ್ಪದೆ ಬೇಡುವರು ತಮಗೆ ರಕ್ಷಣೆ
ಜಾತಿ-ಜಾತಿಗಳ ತಳಹದಿಯ ಮೇಲೆ
ಹೆಮ್ಮರವಾಗಿ ಬೆಳೆದಿದೆ ಚುನಾವಣೆ
ಹಲವಾರು ಪಕ್ಷಗಳ ನಡುವೆ ಹರಿದು
ಹಂಚಿ ಹೋಗಿದೆ ದೇಶದ ಖಜಾನೆ
ರಾಜಕಾರಣಿಗಳ ಖಾದಿಗೆ ಬಂತು, ಪೋಲಿಸರ
ಜೇಬಿಗೆ ಬಂತು ಐದು ವರ್ಷದ
ಚುನಾವಣೆ, ಮಚ್ಚು ಲಾಂಗಿಗೆ ಬಂತು
ಮದ್ದು ಗುಂಡಿಗೆ ಬಂತು
ಐದು ವರ್ಷದ ಚುನಾವಣೆ[೨೪]

ಆಳುವ ಪಕ್ಷ ಯಾವುದೇ ಇರಲಿ ಅದರ ಮೂಲ ಉದ್ದೇಶ ಸುಲಿಗೆ ಸಂಸ್ಕೃತಿಯನ್ನು ಕಾಪಾಡುವುದು. ಜಾತಿ ಜಾತಿಗಳ ನಡುವೆ ಕಂದಕವೇರ್ಪಡಿಸುತ್ತಲೇ ತಮ್ಮ ಓಟ್‌ಬ್ಯಾಂಕ್ ಉಳಿಸಿಕೊಳ್ಳುವುದು. ಇಂತಹ ಆಳುವ ವರ್ಗ ದುಡಿಯುವವರ ಶತೃವಾಗುತ್ತಾರೆಯೇ ಹೊರತು ಮಿತ್ರರಾಗಲು ಸಾಧ್ಯವಿಲ್ಲ. ಚುನಾವಣೆ ಎಂಬುದು ಅಧಿಕಾರಗಳ ಕೈಗೊಂಬೆಯಾಗಿಯೇ ಮುನ್ನಡೆದು ಲೂಟಿ ಸಂಸ್ಕೃತಿಯನ್ನು ಕಾಪಾಡಲು ಸಿದ್ಧವಾಗುತ್ತದೆ. ಇದನ್ನು ತೊಲಗಿಸಬೇಕಾದರೆ ಅಕ್ಕ, ತಂಗಿ, ಅಣ್ಣ, ತಮ್ಮ ಎಲ್ಲರೂ ಸಂಘಟಿತರಾಗಿ ಸುಲಿಗೆ ರಾಜ್ಯ ತೊಲಗಿಸಲು

37

ಒಂದಾಗಬೇಕು. ಸುಲಿಗೆಗೆ ಒಳಗಾದ ಜನತೆಗೆ ಮಾತ್ರ ಇದನ್ನು ಪ್ರತಿಭಟಿಸುವ ಅನಿವಾರ್ಯತೆ ಮತ್ತು ಹಕ್ಕುಗಳಿರುತ್ತವೆ. ಇಂತವರು ಒಂದಾಗಿ ಸುಲಿಗೆ ರಾಜ್ಯ ತಪ್ಪಿಸಬೇಕು. ಈ ತರದ ಎಚ್ಚರವನ್ನು ದಲಿತ ಕಾವ್ಯ ನೀಡುತ್ತಿದೆ.

ರಾಮಮಂದಿರದ ಹೆಸರಿನಲ್ಲಿ ಬಿಜೆಪಿ, ಭೂಮಿ ಹೆಸರಿನಲ್ಲಿ ಕಾಂಗ್ರೆಸ್, ರೈತನ ಹೆಸರಿನಲ್ಲಿ ಜನತಾದಳ ಮತ್ತೊಂದು ಮತ್ತೊಂದು ಹೆಸರೇಳುತ್ತಾ ಮತ್ತೊಂದು ಪಕ್ಷಗಳು ಜನರಿಗೆ ಸಾಮಾಜಿಕ ನ್ಯಾಯ ಒದಗಿಸುತ್ತೇವೆಂದು ಬಂದು ಅವರ ಸಮಾಧಿಯನ್ನು ಕಟ್ಟಿವೆ. ಇವರೆಲ್ಲರೂ ಬಂಡವಾಳಶಾಹಿಗಳು. ಅದಕ್ಕಾಗೇ ತಮ್ಮ ಪಟ್ಟಭದ್ರ ಹಿತಾಸಕ್ತಿಯನ್ನು ಉಳಿಸಿಕೊಳ್ಳಲು ಏನಾದರೊಂದು ತಂತ್ರ ಹೂಡುತ್ತಲೇ ಇರುತ್ತವೆ. ಇಂತವರ ಆಳ್ವಿಕೆ ತೊಲಗಿ ಕಾರ್ಮಿಕ ರಾಜ್ಯ, ರೈತರಾಜ್ಯ ಬರಬೇಕಾದರೆ ಹೋರಾಟವೊಂದೇ ದಾರಿ. ಈ ಹಿನ್ನೆಲೆಯಲ್ಲಿ ಬಡವರನ್ನು ತಮ್ಮ ದಾಳಗಳನ್ನಾಗಿ ಮಾಡಿಕೊಂಡು ಅಧಿಕಾರ ನಡೆಸುವವರ ಹುನ್ನಾರವನ್ನು ದಲಿತ ಕಾವ್ಯ ಬಯಲು ಮಾಡುವ ಬಗೆ ಹೀಗಿದೆ;

ನಿಮ್ಮರೆ
ನಿಮ್ಮನ್ನು
ಆಶ್ವಾಸನೆಗಳಿಂದ
ಪೋಷಿಸುವುದೇಕೆಂದು
ಬಲ್ಲಿರಾ?
ನೀವು ಮತಗಟ್ಟೆಯಲ್ಲಿ
ಚಲಾವಣೆಯ ನಾಣ್ಯಗಳು
ಎಣಿಕೆಗೆ ದಕ್ಕುವಷ್ಟು
'ಗುರುತುಗಳು'
ಸಮಗ್ರವಾಗಿ ಹೇಳಬೇಕೆಂದರೆ
'ಇಷ್ಟೆ'
ಪ್ರಜಾಪ್ರಭುತ್ವ
ನಿಮಗಿತ್ತ ಬೆಲೆ (ಕೊಡುಗೆ)[೭೫]

ಇಲ್ಲಿ ದುಡಿಯುವ ವರ್ಗ ನಿರಂತರವಾಗಿ ಆಳುವ ವರ್ಗದ ಕೈಕೆಳಗಿನ ಚಲಾವಣೆಯ ನಾಣ್ಯಗಳಾಗಿ ಬದುಕುತ್ತಿದ್ದಾರೆ. ಪ್ರಜಾಪ್ರಭುತ್ವ ಎಂಬುದು ಹೆಸರಿಗೆ ಮಾತ್ರ. ಏಕೆಂದರೆ ಅಧಿಕಾರವೆಲ್ಲಾ ಪ್ರಭುಪ್ರಭುತ್ವದಲ್ಲಿದೆ. ಇದನ್ನೇ ಮೇಲಿನ ಕವಿತೆ ನಿರೂಪಿಸುತ್ತಿದೆ. ಆಳುವ ವರ್ಗಕ್ಕೆ ತಮ್ಮ ಆಳ್ವಿಕೆಯನ್ನು ಸುಗಮವಾಗಿ ನಡೆಸಲು ಹೋರಾಟಗಳನ್ನು ಹತ್ತಿಕ್ಕುವುದೇ

ಕಾಯಕ. ಆದರೆ ದುಡಿವ ಜನತೆಗೆ ಇವರ ಆಳ್ವಿಕೆ ಕೊನೆಗಾಣಿಸಿ ದುಡಿಯುವ ಜನತೆ ಆಳುವ ವರ್ಗವಾಗುವಂತೆ ಮಾಡುವುದೇ ಮೂಲ ಧ್ಯೇಯ. ಇದಕ್ಕಾಗಿ ದುಡಿಯುವವರು ಹೋರಾಟವನ್ನೇ ಪ್ರಮುಖ ರಾಜಕೀಯದ ನಿಲುವಾಗಿ ಆರಿಸಿಕೊಳ್ಳುತ್ತಾರೆ. ಕೋಮುವಾದದ ಹೆಸರಿನಲ್ಲಿ ಧರ್ಮಧರ್ಮಗಳ ನಡುವೆ ತಿಕ್ಕಾಟ ಹಚ್ಚಿ, ಜಾತಿಜಾತಿಗಳ ನಡುವೆ ಕಂದಕವೇರ್ಪಡಿಸಿ ಓಟ್ ಬ್ಯಾಂಕಿಗಾಗಿ ಜಾತಿ, ಧರ್ಮ, ವರ್ಗಗಳನ್ನು ನಿರಂತರವಾಗಿ ಕಾಪಾಡಿಕೊಂಡು ಬರುವ ಹುನ್ನಾರ ಆಳುವ ವರ್ಗದ್ದು. ಇದನ್ನು ಬುಡಮೇಲು ಮಾಡಬೇಕೆನ್ನುವುದು ದಲಿತರ ಹೋರಾಟದ ತಾತ್ವಿಕ ನಿಲುವು. ಏಕೆಂದರೆ ದಲಿತರು ಇವುಗಳಿಂದಲೇ ನಿರಂತರ ಶೋಷಣೆಗೆ ಒಳಗಾಗುತ್ತಿರುವುದು.

"ದುಡಿಯುವ ವರ್ಗದ ರಾಜಕಾರಣ ಶೋಷಣಾಯುಕ್ತ ಸಮಾಜವನ್ನು, ಶೋಷಣಾಮುಕ್ತ ಸಮಾಜವನ್ನಾಗಿ ಬದಲಾಯಿಸಲು ನಿರಂತರ ಹೋರಾಟ ಮಾಡುತ್ತದೆ. ಹೋರಾಟ, ಸಂಘರ್ಷ ಪ್ರತಿರೋಧಗಳೆ ಇದರ ಜೀವಾಳ. ರಾಜಕೀಯವಾಗಿ, ಸಾಮಾಜಿಕವಾಗಿ, ಒತ್ತಾಯಪೂರ್ವಕವಾಗಿ ಹೇರಿ ಒಪ್ಪಿಸಲಾಗಿರುವ ಎಲ್ಲಾ ಬಗೆಯ ಆಲೋಚನೆ, ಆಚರಣೆ, ಮಾನವ ಸಂಬಂಧಗಳು ಮುಖ್ಯವಾಗಿ ಉತ್ಪಾದನಾ ಸಂಬಂಧಗಳು ಈ ಎಲ್ಲವನ್ನೂ ಜನತೆಯ ನೆಲೆಯಲ್ಲಿ ರಾಜಕೀಯ ದೃಷ್ಟಿಕೋನದಿಂದ ವಿವರಿಸುವುದು ಮತ್ತು ಅವುಗಳನ್ನು ಬದಲಾಯಿಸಲು ನಿರಂತರ ಶ್ರಮಿಸುವುದು ಶೋಷಿತರ ರಾಜಕಾರಣದ ಸ್ವರೂಪ ಹಾಗೂ ಸ್ವಭಾವ."[೭೬] ಇಂತಹ ಶೋಷಣೆಯ ನೆಲೆಯಲ್ಲಿ ಬೆಂದ ಶ್ರಮಿಕರ ನೆಲೆಯಿಂದಲೇ ಈ ದೇಶದ ರಾಜಕೀಯವನ್ನು ಬದಲಾಯಿಸಲು ಸಾಧ್ಯ, ಹೋರಾಟಕ್ಕೆ ಪರ್ಯಾಯ ವ್ಯವಸ್ಥೆಗೆ ದಾರಿ ತೋರಿಸುತ್ತದೆ. ರಾಜಕಾರಣಿಗಳ ದರ್ಬಾರನ್ನು ಕುರಿತು ಡಾ. ಸಿದ್ಧಲಿಂಗಯ್ಯ ಅವರ 'ಸತ್ತೋಗೋರಾ' ಕವನ ತಿವಿಯುವ ರೀತಿ ಹೀಗಿದೆ..

ರಾಜಕೀಯದ ಗಡಿಬಿಡಿ ವಳಗೋಡಾಡೋರಾ
ಪಾರ್ಲಿಮೆಂಟು, ಅಸೆಂಬ್ಲೀಲಿ ಮ್ಯತ್ಗಿರೋ ಸೀಟ್ನಮ್ಯಾಲ್ ಕುಂತು
ಪಾನ್ ಬೀಡಾ ಅಗ್ಯೋ ನಾಯಕ್ರಾ
ನಿಮ್ಗ್ ಕೇಳ್ಸಲ್ವೇನ್ರಲೇ ನಮ್ ಕೂಳಿಲ್ಲದ್ ಕೂಗು[೭೭]

ಜನತೆಯಿಂದಲೆ ಗೆದ್ದು ಜನತೆಯ ಕಡೆಗೆ ನೋಡದ ರಾಜಕಾರಣಿಗಳು ಇಲ್ಲಿದ್ದಾರೆ. ಆಳುವ ಜನರನ್ನು ಜನತೆಯ ನೆಲೆಯಲ್ಲಿ ನಿಂತು ಮೇಲಿನ ಕಾವ್ಯ ವ್ಯಂಗ್ಯ ಮತ್ತು ಆಕ್ರೋಶದ ದನಿಯಲ್ಲಿ ಗುಡುಗುತ್ತಿದೆ. ದಿನದಿನಕ್ಕೆ ಕುಬೇರರಾಗುವ ಇವರು ಆಕಾಶದಲ್ಲಿ ತೇಲಾಡುತ್ತಾ, ಸೀಟಿಗಾಗಿ ಎಂತಹ ಹೇಯ ಕೃತ್ಯ ಮಾಡಲು ಹೇಸದ ಜನ ಪಾರ್ಲಿಮೆಂಟಿನಲ್ಲಿದ್ದಾರೆ. ಇಂತವರನ್ನು ಕಿತ್ತೊಗೆಯಬೇಕು. ಆ ಜಾಗದಲ್ಲಿ ದುಡಿವ ಜನತೆ ಇರಬೇಕು ಎಂಬ ಹಂಬಲದ ದನಿ ಮೇಲಿನ ಕಾವ್ಯದ ಸಾಲುಗಳಲ್ಲಿದೆ.

ಆಳುವ ವರ್ಗ ಯಾವಾಗಲೂ ತನ್ನ ಸುತ್ತ ಒಂದು ಭದ್ರ ಕೋಟೆಯನ್ನು ನಿರ್ಮಿಸಿಕೊಂಡಿರುತ್ತದೆ. ಪೋಲೀಸು, ನ್ಯಾಯ, ಕಾನೂನು ಮುಂತಾದವು ಆ ಭದ್ರ ಕೋಟೆಗಳು. ಆದರೆ 'ಇವೆಲ್ಲಾ ಜನತೆಗಾಗಿ' ಎಂಬಂತೆ ನಂಬಿಸಲಾಗಿದೆ. ಸಾರ್ವಜನಿಕರಿಗೆ ಒಂದೇ ನ್ಯಾಯ, ಕಾನೂನು ಇದನ್ನು ವ್ಯವಸ್ಥಿತವಾಗಿ ಕಾಪಾಡಲು ಪೋಲಿಸ್ ವ್ಯವಸ್ಥೆ ಇದೆ ಎಂಬುದನ್ನು ಜನತೆಗೆ ಧಾರಾಳವಾಗಿ ಉಣಬಡಿಸಲಾಗಿದೆ. ಆದರೆ ಇವೆಲ್ಲವೂ ಕೂಡ ಉಳ್ಳವರ ಅಡಿಯಾಳು. ಅವರ ಕಾಲಿನ ಧೂಳು ನೆಕ್ಕುವ ನಾಯಿಗಳಾಗಿ ಕೆಲಸ ಮಾಡುತ್ತವೆ. ಪೋಲೀಸು, ನ್ಯಾಯ, ಕಾನೂನು, ಎಲ್ಲವೂ ಬಡಜನರ ಪಾಲಿನ ಮುಳ್ಳುಗಳೇ ಹೊರತು ಹೂಗಳಾಗಿ ಅರಳಲು ಸಾಧ್ಯವಿಲ್ಲ. ದುಡಿವವರ ಬದುಕು ಸಾಹುಕಾರರ ಕಾಲ್ಗಳಡಿ ನಲುಗುತ್ತಿದೆ. ದುಡಿಯುವವರಷ್ಟೇ ಶಕ್ತಿ ಹೊಂದಿದ್ದರೂ ದುಡಿಯದೆ ಅಧಿಕಾರ, ಹಣ, ಆಸ್ತಿ ಬಲದಿಂದ ದುಡಿಸಿಕೊಳ್ಳುತ್ತ ಸಾಗಿ ಬಂದಿರುವ ಇವರು ದಲಿತರ ಹಿತಶತ್ರುಗಳಾಗಿ ಪರಿಣಮಿಸಿದ್ದಾರೆ. ಒಂದೇ ನೆಲದಲ್ಲಿ ನೆಲೆನಿಂತ ಈ ಇಬ್ಬರ ಆರ್ಥಿಕತೆ ಭಿನ್ನವಾಗಿದೆ. ಇಂತಹ ಪರಿಸ್ಥಿತಿಯನ್ನು ದಲಿತ ಕಾವ್ಯ ಈ ರೀತಿ ಕಟ್ಟುತ್ತದೆ.

....

ನಮ್ಹಟ್ಟಿ ತಟ್ಟಿಗೆ
ಬಾರಿಯ ಮುಳ್ಯಾಕೊ
ನಿಮ್ಮನಿಯ ಬಾಗಿಲಿಗೆ
ತುಳಸಿಯ ಗಿಡವ್ಯಾತಕೊ–ತಂದೇ
ಮೂರು ಕೂಗಾಳಿನ ಗದ್ದೆಯು ನಿಮಗುಂಟು
ಅದರಲ್ಲಿ ನಿಮ್ಮ ಕೃಪೆಯ ಗುಡಿಸಲು ನಮಗುಂಟು
ಅದರ ಹಿಂದಿಂದೆ ನಾನು ಓಡೋಡಿ ಬರಬೇಕೊ–ತಂದೆ

....

ಯಕ್ಷ ಯಕ್ಷಿಯ ವೇಷ ನೀವೇನೆ ಹಾಕುವಿರಿ
ಭೂತ ಬೇತಾಳ ವೇಷ ನಮ ಕೊರಳಿಗೆ ಕಟ್ಟಿದರೆ
ಹಗಲಿನಲಿ ಕಂಡಿದ್ದು ಇರುಳಿನಲಿ ಇಲ್ಲ
ಇರುಳಿನಲಿ ಕಂಡಿದ್ದು ಹಗಲಿನಲಿ ಇಲ್ಲ–ತಂದೆ
ನಿಮ್ಮಂತೆ ನಾವಿದ್ದು
ಬರಿಯ ದುಡಿವವರು ನಾವ್ಯಾಕೊ

ಕೈ ಕಾಲು ನಿಮಗಿದ್ದು
ಬರಿ ದುಡಿಸಿಕೊಳ್ಳುವ ಹಕ್ಕ್ಯಾಕೊ–ತಂದೆ[೭೮]

ದುಡಿಸಿಕೊಳ್ಳುವುದೇ ನಮ್ಮ ಹಕ್ಕು, ನಮ್ಮದೇ ಶ್ರೇಷ್ಠ ಸಂಸ್ಕೃತಿ ಎಂದು ಬಡಾಯಿ ಕೊಚ್ಚಿಕೊಳ್ಳುವ ಸೋಮಾರಿತನದ ಗೋಸುಂಬೆಗಳ ಬಣ್ಣವನ್ನು ಮೇಲಿನ ಕಾವ್ಯ ಬಯಲು ಮಾಡುತ್ತಿದೆ. ಬಡವರ ರಾಜ್ಯ ಬಂದರೆ ಮಾತ್ರ ಈ ದೇಶ ಸಮತಾ ರಾಜ್ಯವಾಗಿ ಬದಲಾಗಲು ಸಾಧ್ಯ. ಬಡವರು ಈ ದೇಶದಲ್ಲಿ ಬರೀ ದುಡಿಯುವುದಷ್ಟೇ ಅಲ್ಲ. ದುಡಿಮೆಗೆ ತಕ್ಕ ಪ್ರತಿಫಲವನ್ನೂ ಪಡೆಯಬೇಕು. ದುಡಿಯುವ ಕೈಗಳು ಅಧಿಕಾರದ ಚುಕ್ಕಾಣಿ ಹಿಡಿದರೆ, ದೇಶದ ದುಡಿವವರಿಗೆ ನ್ಯಾಯ ಸಿಗಲು ಸಾಧ್ಯ. ಸಾಮ್ರಾಜ್ಯಶಾಹಿ ಧೋರಣೆಯು ಜಗತ್ತನ್ನೇ ಸುತ್ತುವರೆದು ತನ್ನ ಬಾಹುಬಂಧನದಲ್ಲಿ ಸೆರೆಹಿಡಿದು ತನ್ನ ತಾಳಕ್ಕೆ ತಕ್ಕಂತೆ ತೃತೀಯ ಜಗತ್ತಿನ ರಾಷ್ಟ್ರಗಳನ್ನು ಕುಣಿಸುತ್ತಿರುವ ಸಂದರ್ಭದಲ್ಲಿ ಮತ್ತದೇ ದೇಶೀಯ ಬಂಡವಾಳಶಾಹಿಗಳು ಅಧಿಕಾರದ ಚುಕ್ಕಾಣಿ ಹಿಡಿದರೆ ಬಡವರ ಬದುಕು ಇನ್ನೂ ಅತಂತ್ರ ಸ್ಥಿತಿಗೆ ತಳ್ಳಲ್ಪಡುತ್ತದೆ. ಈಗಾಗಲೇ ವಿಶ್ವಮಾರುಕಟ್ಟೆಯು ಅಸ್ತಿತ್ವಕ್ಕೆ ಬಂದು ದುಡಿವ ಜನತೆ ಕರಕುಶಲ ವಸ್ತುಗಳಿಗೆ ಬೆಲೆ ಇಲ್ಲದಂತೆ ಮಾಡಿ, ಅವರ ಕನಿಷ್ಠ ಜೀವನೋಪಾಯದ ಆರ್ಥಿಕತೆಗೆ ಕತ್ತರಿ ಹಾಕಿದೆ. ಖಾಸಗೀ ಒಡೆತನಗಳು ನಾಯಿಕೊಡೆಗಳಂತೆ ತಲೆಯೆತ್ತಿ ಸರಕಾರದ ಹಿಡಿತದಲ್ಲಿರುವ ಅನೇಕ ಇಲಾಖೆಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಇಲ್ಲಿ ಕನಿಷ್ಠ ಕೂಲಿಗೂ ಪರದಾಡುವ ಸ್ಥಿತಿ ದಲಿತರಿಗೆ ಎದುರಾಗುತ್ತಿದೆ. ಇಂತಹ ಸಂದರ್ಭದಲ್ಲಿ ದುಡಿಯುವ ಜನತೆ ದೇಶ ಆಳುವ ನೆಲೆಗೆ ಬಂದರೆ ಮಾತ್ರ, ಬಡವರು ಉಸಿರಾಡಲು ಸಾಧ್ಯ.

ದುಡಿಯುವ ಜನತೆಯ ಅಧಿಕಾರದ ಕನಸು ಅಷ್ಟು ಸುಲಭವಲ್ಲ. ಇದಕ್ಕೆ ಸತತ ಪ್ರಯತ್ನ ಬೇಕು. ಈ ಪ್ರಯತ್ನದಲ್ಲಿ ಎಲ್ಲರ ಒಗ್ಗೂಡುವಿಕೆ ಬಹಳ ಮುಖ್ಯ. ಏಕೆಂದರೆ ದುಡಿಯುವವರಲ್ಲೇ ಹಲವು ಜಾತಿ, ಮತ, ಪಂಗಡಗಳಿವೆ. ಇವು ಒಬ್ಬರನ್ನೊಬ್ಬರು ಸೇರದ ಹಾಗೆ ಮಾಡುತ್ತಲೇ ಬರುತ್ತಿವೆ. ಈ ಕನಸನ್ನು ಅತ್ಯಂತ ಜಾಗರೂಕತೆಯಿಂದ ಬಿತ್ತಿದ ಆಳುವ ವರ್ಗ ಕಸದಲ್ಲೇ ಕಿತ್ತಾಡುವ ಈ ಸಮುದಾಯ ಕಂಡು ಆನಂದಪಡುತ್ತಾ ತಮ್ಮ ಅಧಿಕಾರ, ಸಂಪತ್ತು ಮುಂತಾದವುಗಳನ್ನು ಹಾಗೇ ಉಳಿಸಿಕೊಂಡು ಬರುತ್ತಿವೆ. ಈ ಪಂಗಡಗಳ ವಿಂಗಡಣೆ ಮರೆತು ಶೋಷಿತರೆಲ್ಲರೂ ಒಂದಾಗದ ಹೊರತು ಶೋಷಿತರಿಗೆ ನ್ಯಾಯ ಸಿಗಲು ಸಾಧ್ಯವಿಲ್ಲ. ಹಾಗೆಯೇ ಮತ್ತೊಂದು ದಲಿತ ಕಾವ್ಯ ಕಟ್ಟುವ ಸಾಮಾಜಿಕ ರಾಜಕೀಯ ವಾಸ್ತವತೆ ಹೀಗಿದೆ,

ದಣಿಯ ಹಣದ ಚೀಲದಲ್ಲಿ ಜಮೀನ್ದಾರ್ರ ಜಾತಿ ಒಳಗೆ
ವಿಲಿವಿಲಿ ಒದ್ದಾಡುತಿದೆ ಬಡವರ ನ್ಯಾಯ
ಬಂಡೆ ಮೇಲ ಬಿಸಿಲಿನಂತೆ ಬೀದಿ ಮಗುವಿನಳುವಿನಂತೆ

ಬಿಕ್ಕಿ ಬಿಕ್ಕಿ ಅಳುತಲಿದೆ ಬಡವರ ನ್ಯಾಯ
ಬಂದೂಕದ ಬಾಯಿಯಲಿ ಕೊಲೆಗಡುಕರ ಕತ್ತಿಗಳಲಿ
ಇಣುಕಿ ಹಾಕಿ ನಗುತಲಿತ್ತು ಬಡವರ ನ್ಯಾಯ
ಸರಳುಗಳ ಸಂಧಿಯೊಳಗೆ ಕಾಣುವ ಕೈಕೋಳಗಳಲಿ
ಬಿಡುಗಡೆಯನು ಬೇಡುತ್ತಿತ್ತು ಬಡವರ ನ್ಯಾಯ[೨೯]

ಇಲ್ಲಿ ಬಡವರ ನ್ಯಾಯ ಅರಣ್ಯರೋಧನವಾಗಿದೆ. ಆಳುವ ವರ್ಗಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ಸಾಮಾಜಿಕ ನ್ಯಾಯವನ್ನು ರೂಪಿಸಿಕೊಂಡಿವೆ. ನ್ಯಾಯ ಎನ್ನುವುದು ಎಲ್ಲರಿಗೂ ಸಮಾನವಾಗಿದೆ ಎಂಬುದು ಘೋಷಣೆಗಳಲ್ಲಿ ಮಾತ್ರ ಅಡಕವಾಗಿದೆ. ಇಂತಹ ವಾಸ್ತವತೆಯನ್ನು ದಲಿತ ಕಾವ್ಯಗಳು ತಮ್ಮ ಅಭಿವ್ಯಕ್ತಿಯಲ್ಲಿ ನಿರೂಪಿಸಿವೆ. ಆದರೆ ಹೋರಾಟದ ಹಾಡುಗಳ ನಿರೂಪಣೆಯೇ ಬೇರೆ ಅದು ಬಂಡವಾಳಿಗರ ಆಳ್ವಿಕೆಯನ್ನು ಮತ್ತು ಆ ಆಳ್ವಿಕೆಗೆ ಊರುಗೋಲಾಗಿರುವ ರಕ್ಷಣೆಯ ವರ್ಗವನ್ನು ಕಿತ್ತೊಗೆದು ಅಲ್ಲಿ ಬಡವರ ರಾಜ್ಯ ಸ್ಥಾಪನೆಯಾಗಬೇಕೆನ್ನುತ್ತದೆ. ಮತ್ತು ದುಡಿವವರೇ ಈ ದೇಶದ ನಿಜವಾದ ವಾರಸುದಾರರು. ಇಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಎಂಬ ಹೆಸರಿನಲ್ಲಿ ಕ್ರೂರಪ್ರಭುತ್ವ ದಬ್ಬಾಳಿಕೆ ಇದೆ. ಇದು ತೊಲಗಬೇಕು. ಇದು ತೊಲಗಬೇಕಾದರೆ ಕ್ರಾಂತಿ ಆಗಲೇಬೇಕು. ಆ ಕ್ರಾಂತಿ ಯಾವ ಮಾರ್ಗದಿಂದಲಾದರೂ ಸರಿ. ಬದಲಾವಣೆ ಆಗಬೇಕು. ಸಮತಾ ರಾಜ್ಯ ಬರಬೇಕು. ದೊರೆಗಳ ರಾಜ್ಯ ತೊಲಗಬೇಕು. ಇದು ಹೋರಾಟದ ಹಾಡುಗಳ ಜನಪರ ನಿಲುವಿನ ರಾಜಕೀಯ ಕಾಳಜಿ.

ಆಳುವ ವರ್ಗಗಳು, ಜಮೀನುದಾರರು, ಧರ್ಮಗುರುಗಳು, ಸಾಮ್ರಾಜ್ಯಶಾಹಿಗಳು, ಬಂಡವಾಳಿಗರು, ಅರಸರು, ಆಳುವ ಪಕ್ಷಗಳು ಮತ್ತು ಹೊಸ ಪಕ್ಷಗಳು, ರಕ್ಷಣೆ ಹೆಸರಿನ ಸಂಚುಕೋರರು, ನ್ಯಾಯ ಕಾನೂನಿನ ಒಡೆಯರು, ವಿದೇಶಿ ಬಂಡವಾಳಗಾರರು ಇವರೆಲ್ಲಾ ಬಡವರನ್ನು ಕಿತ್ತು ತಿನ್ನುವ ರಣಹದ್ದುಗಳಾಗಿದ್ದಾರೆ. ಇವರ ಆಳ್ವಿಕೆ ಕೊನೆಯಾಗಬೇಕಾದರೆ ಹೋರಾಟವೊಂದೇ ದಾರಿ. ಇದನ್ನೇ ದಲಿತ ಕಾವ್ಯ ಮತ್ತೆಮತ್ತೆ ತನ್ನ ಕಾವ್ಯದಲ್ಲಿ ಒತ್ತಿ ಹೇಳಿದೆ. ಅಂತಿಮವಾಗಿ ಅದು ಜನಮೂಲದಲ್ಲಿ ನಿಂತು ದುಡಿವ ಜನತೆಗೆ ಕರೆಕೊಡುವ ರೀತಿ ಹೀಗಿದೆ.

ಸಮತೆಯ ಹೂವು ಹರಳಬೇಕು ಬೀದಿ ಬೀದಿಯಲಿ
ಭ್ರಷ್ಟತೆಯ ಬೇರು ಕೀಳಬೇಕು ಕುರ್ಚಿ ಕುರ್ಚಿಯಲಿ
ಕೆಂಪು ಮೋಡ ಕಟ್ಟಬೇಕು ಆಕಾಶದೆದೆಯಲ್ಲಿ

42

ಪ್ರೇಮಪುಷ್ಪ ಅರಳಬೇಕು ಬೀಳು ಹೊಲಗಳಲ್ಲಿ
ಬಂದೂಕಿನಿಂದ ಕೀಳಬೇಕು ಧಣಿಗಳ ಕೊಬ್ಬನು
ಛಲದೀ ವಶಕೆ ಪಡೆಯಬೇಕು ನಾವು ದುಡಿವ ನೆಲವನು
ಬನ್ನಿ ಬನ್ನಿ ಗೆಳೆಯರೇ ಕೆಂಪು ಜ್ಯೋತಿ ಹಿಡಿಯಿರಿ
ಹೋರಾಟದ ಕಿರಣದಿಂದ ಜಗವನ್ನೆಲ್ಲ ಬೆಳಗಿರಿ[೮೦]

ಯುದ್ಧವೇ ತುಂಬಿರುವ ಈ ಇತಿಹಾಸದ ಪುಟಗಳಲ್ಲಿ ಮತ್ತೊಮ್ಮೆ ಯುದ್ಧಕ್ಕೆ ಸಜ್ಜಾಗಲು ಕಾವ್ಯ ಕರೆಕೊಡುತ್ತಿದೆ. ಏಕೆಂದರೆ ಹಳೆಯದರ ಸರ್ವನಾಶ ಹೊಂದಿ ಹೊಸ ಮನ್ವಂತರ ಮೂಡಬೇಕಾದರೆ ಕೈಗೆ ಕೋವಿ ಬರಬೇಕೆಂಬ ಎಚ್ಚರಿಕೆಯನ್ನು ದಲಿತ ಕಾವ್ಯ ನೀಡಿದೆ. ಅಸಮಾನತೆಯ ಬೆಂಕಿಯ ಬೂದಿಯಿಂದೆದ್ದ ಈ ಜನ ಸಮಸಮಾಜ ನಿರ್ಮಿಸಲು ಇರುವುದು ಇದೊಂದೇ ದಾರಿ ಎಂಬುದನ್ನು ಒತ್ತಿ ಹೇಳುತ್ತಿದೆ. ಅದಕ್ಕಾಗಿ ತೂಗುವ ತೊಟ್ಟಿಲ ಕೈಗಳಾದಿಯಾಗಿ ಕೆರ ಹೊಲೆಯುವವರು, ಕಸಗುಡಿಸುವವರು, ಉತ್ತುವವರು, ಬಿತ್ತುವವರು, ಬೆಳೆಯುವವರು, ಯಂತ್ರಗಳ ಜೊತೆ ಯಂತ್ರವಾದವರು, ನೇಯುವವರು, ಬಡಿಗೆ ಮಾಡುವವರು, ಕೂಲಿಕಾರರು, ಅನ್ನಕ್ಕಾಗಿ ಅಲೆಯುವವರು ಎಲ್ಲರೂ ಒಂದಾಗಿ ಬರಬೇಕೆಂಬ ಸಂದೇಶವನ್ನು ದಲಿತ ಕಾವ್ಯ ಮುಂಚೂಣಿಗೆ ತಂದಿತು.

ದಲಿತ ಕಾವ್ಯಗಳಲ್ಲಿ ಕಂಡುಬರುವ ಮಳೆಯ ಪದ್ಯಗಳೂ ಸಹ ದುಡಿವ ಜನತೆಯ ದೃಷ್ಟಿಕೋನವನ್ನು ನಿರ್ಮಿಸಿವೆ. ಮತ್ತು ದುಡಿವ ಜನತೆಯ ದೃಷ್ಟಿಕೋನದಿಂದಲೆ ಅನಾವರಣಗೊಳಿಸಿವೆ. ಇಲ್ಲಿಯ ಮಳೆಯ ಹಾಡುಗಳು ಋತುಗಳ ಕಾಲದಚ್ಚರಿಯ ಸೊಬಗಿನ ಹನಿಗಳಾಗಿ ವರ್ಣನೆಗೊಂಡಿಲ್ಲ. ಮಳೆ ಸಮಷ್ಟಿಯ ಸಂಕೇತ. ಮತ್ತೆ ಮತ್ತೆ ಮಳೆರಾಯನಲ್ಲಿ ಮೊರೆ ಹೋಗುವ ದಲಿತ ಕಾವ್ಯಗಳು ದಲಿತರ ಒಗ್ಗೂಡುವಿಕೆಯ ನೆಲೆಯಲ್ಲಿ ಅಭಿವ್ಯಕ್ತಗೊಂಡಿರುವಂತಹುಗಳು. ಮಳೆಗೆ ಕೊಳೆ ತೊಳೆಯುವ ಶಕ್ತಿ ಹೇಗಿರುವುದೋ ಹಾಗೆ ದಲಿತರ ಒಗ್ಗೂಡುವಿಕೆಗೆ ಸಾಮಾಜಿಕ ಪರಿವರ್ತನಾ ಶಕ್ತಿಯಿದೆ ಎಂಬುದನ್ನು ಮಳೆಯ ಪದ್ಯಗಳು ನಿರೂಪಿಸಿವೆ.

"ಬಡತನದ ತೀವ್ರ ಸಂಕಟದ ವಿವರಗಳು ಮಳೆರಾಜನ ಹಾಡಿನಲ್ಲಿ ವ್ಯಕ್ತವಾದಷ್ಟು ಗಂಭೀರವಾಗಿ ಬೇರೆಲ್ಲೂ ವ್ಯಕ್ತವಾಗಿಲ್ಲ"[೮೧] ಎನ್ನುವ ಸಿ. ವೀರಣ್ಣ ಅವರ ಮಾತು ಅತ್ಯಂತ ಅರ್ಥಗರ್ಭಿತ. ಜನಪದ ಸಾಹಿತ್ಯದಲ್ಲಿ ಬಂದಿರುವ ಮಳೆಯ ಹಾಡುಗಳು ಅವು ಹುಟ್ಟು ಹಾಕಿರುವ ದುಡಿಯುವ ಜನತೆಯ ದೃಷ್ಟಿಕೋನಗಳು ಕನ್ನಡ ಸಾಹಿತ್ಯದ ಇತರೆ ಲಿಖಿತ ಸಾಹಿತ್ಯ ಪರಂಪರೆಗಳು ಹುಟ್ಟುಹಾಕಲಿಲ್ಲ. ಈ ಜನಪದರ ನಾಡಿಮಿಡಿತದಿಂದಲೇ ಎದ್ದು ಬಂದ ದಲಿತ ಕಾವ್ಯವೂ ಕೂಡ ದುಡಿಯುವ ಜನತೆಯ ದೃಷ್ಟಿಕೋನವನ್ನು ಮಳೆಯ

43

ಹಾಡುಗಳ ಮೂಲಕವೂ ವ್ಯಕ್ತಪಡಿಸಿತು. ಮಳೆಯ ಒಂದೊಂದು ಹನಿಯನ್ನು ರಮ್ಯ ನೆಲೆಯ ಒಳಗೇ ಅನಾವರಣಗೊಳಿಸಿದ್ದ ಕನ್ನಡ ಕಾವ್ಯ ಪರಂಪರೆಗೆ ದಲಿತ ಕಾವ್ಯ ಬೇರೊಂದು ಕವಚ ತೊಡಿಸಿತು. ಈ ನೆಲೆಯ ಅನಾವರಣಗಳನ್ನ ತೋರಿಸುವ ಪರಿ ಹೀಗಿದೆ.

ನೆಲಕ್ಕೆ ತಲೆ ಮುಟ್ಟಿಸಿ ಪ್ರಾರ್ಥಿಸುತ್ತೇನೆ
ಮಹಾ ಬರಗಾಲವೇ ಬಾ
ಪ್ರೀತಿಯಿದ್ದರೆ ನಮ್ಮ ಮೇಲೆ
ಗುಡಿಸಿಕೊಂಡು ಹೋಗು
ಕಸ–ಕಡ್ಡಿಗಳಂತೆ ಹುಳ–ಹುಪ್ಪಟೆಗಳಂತೆ
ಹೊಲೆ ಮಾದಿಗರ ಕೇರಿಗಳನ್ನು
ಮುಂಗಾರು ಮಳೆಯಾಗಿ
ಮೈ ತುಂಬಿ ಹರಿಯುತ್ತೇವೆ
ತಿಳಿಯಾದೀತೆ ನನ್ನೊಡಲಿನ ನೀರು ನೀರಾಗಿ?
ಇಲ್ಲಿ ತೊಗಲಿಗೂ
ಪಂಚಭೂತಗಳ ಮೈಲಿಗೆಯೇ?[೮೨]

ಮೈದುಂಬಿ ಕಾವ್ಯವನ್ನು ಆಸ್ವಾದನೆಗೆ ಬಳಸುವ ಕವಿಗೂ ಮೈಮೇಲಿನ ನೋವುಗಳನ್ನು ವಾಸ್ತವದ ನೆಲೆಯಲ್ಲಿ ಬಿಂಬಿಸುವ ಕವಿಗೂ ಇರುವ ವ್ಯತ್ಯಾಸ ಮೇಲಿನ ಮಳೆಯ ಹಾಡಿನ ತಲ್ಲಣಗಳೇ ಸಾಕ್ಷಿ. ಇದಕ್ಕೆ ಕವಿ ಬದುಕಿರುವ ಸಾಮಾಜಿಕ ವಾಸ್ತವದ ಅರಿವೂ ಮುಖ್ಯ. ಡಿ.ಆರ್. ನಾಗರಾಜರು ಹೇಳುವ ಹಾಗೆ "ಕಾವ್ಯವೊಂದರಲ್ಲಿ ಕಂಡುಬರುವ ಸಮಾಜದ ಪರಿಕಲ್ಪನೆಗಳು, ಚಾರಿತ್ರಿಕ ಅನುಭವಗಳು ಆಯಾ ಸಮಾಜದ ನಿರ್ದಿಷ್ಟ ಶ್ರೇಣೀಕರಣಗಳ ಅನುಭವದಿಂದ ನಿಯಂತ್ರಿತವಾಗುತ್ತವೆ. ತಮ್ಮ ಅನುಭವಕ್ಕೆ ಸಿಕ್ಕಷ್ಟು ಮಾತ್ರ ಸತ್ಯಗಳನ್ನು ಆಯಾ ಶ್ರೇಣೀಕರಣಗಳು ಸಾಹಿತ್ಯದಲ್ಲಿ ಪ್ರಕಟಿಸುತ್ತವೆ."[೮೩]

ದುಡಿಯುವ ಜನತೆಯ ನೆಲೆಯಲ್ಲಿ ನಿಂತು ದುಡಿಯುವ ವರ್ಗದ ದೃಷ್ಟಿಕೋನವನ್ನು ಕಾವ್ಯದ ಮೂಲಕ ಹೊರಹಾಕಿದ ದಲಿತ ಕಾವ್ಯ ಸಂಸ್ಕೃತಿ ಚಿಂತಕರಿಗೆ, ನಾಡಿಗೆ ಸರ್ವಶ್ರೇಷ್ಠ ಸಾಹಿತ್ಯ ನೀಡಿದ್ದೇವೆಂದುಕೊಂಡವರಿಗೆ, 'ಜನರಿಗಾಗಿಯೇ ನಾವು' ಎನ್ನುವ ರಾಜಕೀಯ ಪುಡಾರಿಗಳಿಗೆ, ಮಠಮಾನ್ಯಗಳಲ್ಲಿ ಕುಳಿತಿರುವ ಮಹಾಸ್ವಾಮಿಗಳಿಗೆ, ಸಂಪ್ರದಾಯ ಶರಣರಿಗೆ ಇನ್ನು ಮುಂತಾದವರಿಗೆ ಜಗತ್ತಿನ ಸರ್ವಸ್ವವನ್ನೂ ದುಡಿಯುವ ಜನತೆಯ ಮೂಲಕ ನೋಡಿ ಎಂದು ಕರೆಕೊಟ್ಟಿತು. ಏಕೆಂದರೆ ಜಗತ್ತಿನಲ್ಲಿ ದುಡಿಯುವವರು ಮಾತ್ರ ಜಗತ್ತನ್ನು ಆಳಬೇಕು ಎಂಬ ದೂರದೃಷ್ಟಿತ್ವವನ್ನು ಈ ಮೂಲಕ ದಲಿತ ಕಾವ್ಯ ಬಿತ್ತಿತು.

44

ಕರ್ನಾಟಕದಲ್ಲಿ ಇತ್ತೀಚೆಗೊಂದು ಆಲೋಚನೆಯು ಸಿದ್ದಗೊಳ್ಳುತ್ತಿದೆ. ಅದು ಪರ್ಯಾಯ ರಾಜಕಾರಣದ ಆಲೋಚನೆ. ಹೇಗೆಂದರೆ ಕರ್ನಾಟಕದಲ್ಲಿ ಅಸ್ತಿತ್ವದಲ್ಲಿರುವ ರೈತ ಸಂಘ, ದಲಿತ ಸಂಘರ್ಷ ಸಮಿತಿ, ಕನ್ನಡ ಚಳುವಳಿ ಪಕ್ಷಗಳು, ಅಹಿಂದ ಸಂಘಟನೆ, ಕನ್ನಡ ರಕ್ಷಣಾ ವೇದಿಕೆ ಸಂಘಟನೆಗಳು, ಸರ್ವೋದಯ ಪಕ್ಷ ಮುಂತಾದವುಗಳು ಸೇರಿ ಒಂದು ಹೊಸ ರಾಜಕೀಯ ಪಕ್ಷವನ್ನು ಹುಟ್ಟುಹಾಕಿ ಆ ಮೂಲಕ ಅಧಿಕಾರದ ಗದ್ದುಗೆ ಏರುವುದು. ಆದರೆ ಇಲ್ಲಿ ಸಮಸ್ಯೆ ಇರುವುದು ಇವು ಒಗ್ಗೂಡುವುದರಲ್ಲಲ್ಲ. ಈ ಸಂಘಟನೆಯ ಹಿಂದಿರುವ ತಾತ್ವಿಕ ಸಿದ್ಧಾಂತಗಳು ಮತ್ತು ಧ್ಯೇಯಗಳು. ಮೂಲತಃ ಇವೆಲ್ಲವೂ ಒಂದೇ ಸೂರಿನಡಿ ಜನಿಸಿದಂತಹುಗಳಲ್ಲ. ಅಹಿಂದ ಮತ್ತು ರೈತ ಸಂಘಗಳು ಭಾರೀ ಭೂಮಾಲೀಕ ವರ್ಗದ ಪ್ರತಿನಿಧಿಗಳು. ಕನ್ನಡಪರ ಸಂಘಟನೆಗಳ ಹಿಂದೆ ಅದೇ ಭೂಮಾಲೀಕ ವರ್ಗ, ಭಾಷಾ ಅಂಧಾಭಿಮಾನಿಗಳ ಮತ್ತು ಮಧ್ಯಮ ವರ್ಗದ ಚಿಂತನಾಕ್ರಮವಿದೆ. ದಲಿತ ಸಂಘಟನೆಗಳಿಗೆ ದಲಿತರ ಮುಂದಿರುವ ಸಾಮಾಜಿಕ ಆರ್ಥಿಕ ಸಮಸ್ಯೆಗಳೇ ಮುಖ್ಯವಾಗಿವೆ. ಇಂತಹ ಸಂದರ್ಭದಲ್ಲಿ ಇವು ಒಗ್ಗೂಡಿ ಅಧಿಕಾರಕ್ಕೆ ಬಂದರೆ ಯಾವ ತರದ ಸಾಮಾಜಿಕ ನ್ಯಾಯವನ್ನು ತಂದುಕೊಡುತ್ತವೆ ಎಂಬುದು ಗೊಂದಲ ಮತ್ತು ಅಸ್ಪಷ್ಟ. ಇದರಿಂದಾಗಿಯೇ ಹೋರಾಟದ ಹಾಡುಗಳು ದುಡಿಯುವವರ ಸಾರ್ವಭೌಮಾಧಿಕಾರದ ಕನಸು ಕಾಣುತ್ತವೆ.

ಅದರೆ ದಲಿತ ಸಾಹಿತ್ಯವಾಗಲೀ, ಚಳುವಳಿಯಾಗಲೀ ಇಡಿಯಾಗಿ ತನ್ನ ಹೋರಾಟವನ್ನು ಬಿ.ಎಂ. ಪುಟ್ಟಯ್ಯ ಅವರು ಹೇಳುವ ಹಾಗೆ 'ರಾಜಕೀಯಾರ್ಥಿಕ ನೆಲೆಗೆ ಕೊಂಡೊಯ್ಯಬೇಕಾದ ಅನಿವಾರ್ಯತೆ ಇದೆ'. ದಲಿತರು ತಮ್ಮ ಚಳುವಳಿಯನ್ನು ಜಾತಿ ಸಂಘರ್ಷಕ್ಕೊ, ಅವಮಾನಗಳನ್ನು ತೇಪೆ ಹಚ್ಚುವ ರೀತಿ ಪರಿಹರಿಸಿಕೊಳ್ಳಲಿಕ್ಕೊ ವಿನಿಯೋಗಿಸಿಕೊಂಡರೆ ಆಳುವ ವರ್ಗದ ಕುತಂತ್ರಗಳಿಗೆ ನೇರವಾಗಿ ಬಲಿಯಾಗುವುದಲ್ಲದೆ, ಸಾಮ್ರಾಜ್ಯಶಾಹಿ ಕಬಂಧ ಬಾಹುಗಳಲ್ಲಿ ಸಿಕ್ಕಿ ಬಲಿಪಶುವಾಗಬೇಕಾಗುತ್ತದೆ. ಭೂಮಿ, ಸಂಪತ್ತು, ರಾಜ್ಯಾಧಿಕಾರದಿಂದ ವಂಚಿತರಾದ ದಲಿತರಿಗೆ ಇವು ದೊರಕದ ಹೊರತು ಸಾಮಾಜಿಕ ನ್ಯಾಯ ಕನಸಿನ ಮಾತಾಗುತ್ತದೆ. ದಲಿತ ಹೋರಾಟಗಳು ಇದನ್ನು ಕೇಂದ್ರ ಅಜೆಂಡಾವೆಂದು ಭಾವಿಸದ ಹೊರತು ಅವರ ಹೋರಾಟವೆಲ್ಲಾ ಗಾಳಿಯೊಂದಿಗಿನ ಗುದ್ದಾಟವಾಗುತ್ತದೆಯೇ ಹೊರತು ಬೇರೇನೂ ಆಗಲು ಸಾಧ್ಯವಿಲ್ಲ. ೪೫

*****

ಕೊನೆ ಟಿಪ್ಪಣಿಗಳು

೧. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೩೧

೨. ಸ್ವಾಭಿಮಾನದ ಬೀಡಿಗೆ, ವಿ. ಮುನಿವೆಂಕಟಪ್ಪ, ೧೯೯೬, ಪುಟ ೪೧

೩. ದಲಿತ ಕಾವ್ಯ, (ಸಂ) ಕೆ.ಬಿ. ಸಿದ್ದಯ್ಯ, ಹೆಚ್. ಗೋವಿಂದಯ್ಯ, ನಟರಾಜ್ ಬೂದಾಳ್ ೧೯೯೬, ಪುಟ ೯೮

೪. ಸ್ವಾಭಿಮಾನದ ಬೀಡಿಗೆ, ವಿ. ಮುನಿವೆಂಕಟಪ್ಪ, ೧೯೯೬, ಪುಟ ೪೫

೫. ಜೀವಸೆಲೆ, ಚಾಂಡಾಲ, ೧೯೯೫, ಪುಟ ೩೮

೬. ನವ ಇತಿಹಾಸ, ಗಂಗಾಧರ ಹೊಗರೇಹಳ್ಳಿ, ೧೯೯೩, ಪುಟ ೧

೭. ಮತ್ತೆ ಮಳೆ ಬರುವ ಮುನ್ನ, ಮೂಡ್ನಾಕೂಡು ಚಿನ್ನಸ್ವಾಮಿ, ೨೦೦೦, ಪುಟ ೪೫

೮. ಡಾ.ಬಿ.ಆರ್. ಅಂಬೇಡ್ಕರ್ ರವರ ಸಮಗ್ರ ಬರಹಗಳು ಮತ್ತು ಭಾಷಣಗಳು (ಪ್ರ.ಸಂ) ಡಾ. ಪ್ರಧಾನ್ ಗುರುದತ್, ೨೦೧೦, ಪುಟ ೩೫೪

೯. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೬೯

೧೦. ಮತ್ತೆ ಮಳೆ ಬರುವ ಮುನ್ನ, ಮೂಡ್ನಾಕೂಡು ಚಿನ್ನಸ್ವಾಮಿ, ೨೦೦೦, ಪುಟ ೪೫

೧೧. ರಕ್ತದ ರಂಗೋಲಿ, ಆರ್. ಮಾನಸಯ್ಯ, ೨೦೦೭, ಪುಟ ೫೬

೧೨. ಅರವಿಂದ ಮಾಲಗತ್ತಿ ಅವರ ಆಯ್ದ ಕವನಗಳು (ಸಂ), ಎಚ್.ಎಸ್. ರಾಘವೇಂದ್ರರಾವ್ ೨೦೦೪, ಪುಟ ೧೭೫

೧೩. ವಿದ್ರೋಹ, ಡಾ.ಮ.ನ. ಜವರಯ್ಯ, ೨೦೦೧, ಪುಟ ೧೦

೧೪. ಜೀವಸೆಲೆ, ಚಾಂಡಾಲ, ೧೯೯೫, ಪುಟ ೩೪

೧೫. ಮುಳ್ಳುಕಂಟಿಯಾ ನಡುವೆ, ಅನಸೂಯ ಕಾಂಬಳೆ, ೧೯೯೯, ಪುಟ ೨೫

೧೬. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು, ಸಂಪುಟ. ೩ (ಪ್ರಸಂ.) ಡಾ. ಪ್ರಧಾನ್ ಗುರುದತ್, ೨೦೧೦, ಪುಟ ೪೩

೧೭. ಅಮರಚಿಂತ ಕಾವ್ಯ, ಜಂಬಣ್ಣ ಅಮರಚಿಂತ, ೧೯೯೩, ಪು ೯೩

೧೮. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು (ಪ್ರಸಂ) ಡಾ. ಪ್ರಧಾನ್ ಗುರುದತ್, ೨೦೧೦, ಸಂಪುಟ–೩, ಪುಟ ೫೧

೧೯. ಅದೇ ಪುಟ ೭೩

೨೦. ದಲಿತ ಅಧ್ಯಯನ, (ಸಂ) ಡಾ. ಟಿ.ಆರ್. ಚಂದ್ರಶೇಖರ್, ೨೦೦೫, ಪುಟ. ೨೬೬

೨೧. ಕರಿನೆಲದ ಕಲೆಗಳು, ಸತ್ಯಾನಂದ ಪಾತ್ರೋಟ, ೧೯೮೫, ಪುಟ ೧

H6

೨೨. ಅದೇ ಪುಟ ೨

೨೩. ಕಾಡು ಕಣಿವೆಯ ಹಕ್ಕಿ, ಡಾ. ವಿ. ಮುನಿವೆಂಕಟಪ್ಪ, ೧೯೯೯, ಪುಟ ೧೨

೨೪. ಅದೇ ಪುಟ ೧೨

೨೫. ದಲಿತ ಅಧ್ಯಯನ, (ಸಂ) ಡಾ. ಟಿ.ಆರ್. ಚಂದ್ರಶೇಖರ್, ೨೦೦೫. ಪುಟ ೨೬೨

೨೬. ಕರಿನೆಲದ ಕಲೆಗಳು, ಸತ್ಯಾನಂದ ಪತ್ರೋಟ, ೧೯೮೫, ಪುಟ ೧೧

೨೭. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೨೯

೨೮. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೫೮

೨೯. ಮುಖಾಮುಖಿ, ಡಾ. ಬಿ.ಎಂ. ಪುಟ್ಟಯ್ಯ, ೨೦೦೮. ಪುಟ ೪೧

೩೦. ಕಮ್ಯೂನಿಸ್ಟ್ ಮ್ಯಾನಿಫೆಸ್ಟೊ, ಮಾರ್ಕ್ಸ್ ಎಂಗೆಲ್ಸ್, ೧೮೪೮, ಪುಟ ೬೦

೩೧. ಬಂಡಾಯ ಸಾಹಿತ್ಯ ಚಳುವಳಿ: ಹತ್ತು ವರ್ಷ, (ಸಂ), ಡಾ. ಹೆಚ್.ಜೆ. ಲಕ್ಕಪ್ಪಗೌಡ ೧೯೯೦, ಪುಟ. ೧೭

೩೨. ಚಂದಿರನ ಕಣ್ಣು ಇಂಗಲಾರದ ಹುಣ್ಣು, ಮೂಡ್ನಾಕೂಡು ಚಿನ್ನಸ್ವಾಮಿ, ೨೦೦೪, ಪುಟ ೨೪

೩೩. ಮುಖಾಮುಖಿ, ಡಾ. ಬಿ.ಎಂ. ಪುಟ್ಟಯ್ಯ, ೨೦೦೮, ಪುಟ ೪೭

೩೪. ಮಾತಾಡುವ ಎಲುಬುಗಳು, ಟಿ.ಎಂ. ಭಾಸ್ಕರ್, ೨೦೦೪, ಪುಟ ೯

೩೫. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೪೨

೩೬. ಹೋರಾಟದ ಹಾಡುಗಳು, ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್ ಪ್ರಕಾಶನ, ೨೦೦೬, ಪುಟ ೧೬

೩೭. ಬಯಲೇ ಸಂಗಾತಿ, ಎನ್.ಡಿ. ವೆಂಕಮ್ಮ, ೨೦೦೪, ಪುಟ ೨೮

೩೮. ಹೋರಾಟದ ಹಾಡುಗಳು, ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್ ಪ್ರಕಾಶನ, ೨೦೦೬, ಪುಟ ೩೪

೩೯. ಅಮರಚಿಂತ ಕಾವ್ಯ, ಜಂಬಣ್ಣ ಅಮರಚಿಂತ, ೧೯೯೩, ಪುಟ ೧೮

೪೦. ಉರಿ ಕಂಡಾಯ, ಡಾ. ಸಿದ್ಧಲಿಂಗಯ್ಯ, ೨೦೦೯, ಪುಟ ೧೬

೪೧. ನೊಂದವರ ನೋವುಗಳು, ರಾಜಶೇಖರ ಮಾಂಗ್, ೨೦೦೬, ಪುಟ ೭

೪೨. ಉರಿ ಕಂಡಾಯ, ಡಾ. ಸಿದ್ಧಲಿಂಗಯ್ಯ, ೨೦೦೯, ಪುಟ ೨೮

೪೩. ಕಪ್ಪು ಕಣ್ಣಿನ ಹುಡುಗಿ, ಎಲ್. ಹನುಮಂತಯ್ಯ, ೧೯೯೧, ಪುಟ ೧೫

೪೪. ದಲಿತ ಕಾವ್ಯ, (ಸಂ) ಕೆ.ಬಿ. ಸಿದ್ದಯ್ಯ, ಹೆಚ್. ಗೋವಿಂದಯ್ಯ, ನಟರಾಜ್ ಬೂದಾಳ್, ೧೯೯೬, ಪುಟ ೧೮

೪೫. ಉರಿ ಕಂಡಾಯ, ಡಾ. ಸಿದ್ಧಲಿಂಗಯ್ಯ, ೨೦೦೯, ಪುಟ ೩೧

೪೬. ಹಸಿದ ಗೊಮ್ಮಟಗಳು, ಯಲ್ಲಣ್ಣ ಇಲಾಳ, ೧೯೮೮, ಪುಟ ೯

೪೭. ಮುಳ್ಳು ಕಂಟಿಯ ನಡುವೆ, ಅನಸೂಯ ಕಾಂಬಳೆ, ೧೯೯೯, ಪುಟ ೯

೪೮. ಜಾತಿ ವಿಶ್ಲೇಷಣೆಯ ಸಮಸ್ಯೆ, ಡಾ. ಬಿ.ಎಂ. ಪುಟ್ಟಯ್ಯ, ೨೦೧೦, ಪುಟ ೮

೪೯. ಅರವಿಂದ ಮಾಲಗತ್ತಿ ಅವರ ಆಯ್ದ ಕವನಗಳು, (ಸಂ) ಎಚ್.ಎಸ್. ರಾಘವೇಂದ್ರರಾವ್, ೨೦೦೪, ಪುಟ ೧೬೩

೫೦. ಜಾತಿ ವಿಶ್ಲೇಷಣೆಯ ಸಮಸ್ಯೆ, ಡಾ. ಬಿ.ಎಂ. ಪುಟ್ಟಯ್ಯ, ೨೦೧೦, ಪುಟ ೮

೫೧. ಅರವಿಂದ ಮಾಲಗತ್ತಿ ಅವರ ಆಯ್ದ ಕವನಗಳು, (ಸಂ) ಎಚ್.ಎಸ್.ರಾಘವೇಂದ್ರರಾವ್, ೨೦೦೪, ಪುಟ ೧೬೭

೫೨. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ ಸಮಗ್ರ ಬರಹಗಳು ಮತ್ತು ಭಾಷಣಗಳು, (ಪ್ರಸಂ.) ಡಾ. ಪ್ರಧಾನ್ ಗುರುದತ್, ಸಂಪುಟ–೧, ೨೦೧೦, ಪುಟ ೪೩

೫೩. ಮತ್ತೆ ಮಳೆ ಬರುವ ಮುನ್ನ, ಮೂಡ್ನಾಕೂಡು ಚಿನ್ನಸ್ವಾಮಿ, ೨೦೦೦, ಪುಟ ೨೭

೫೪. ಸೂಜಿಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು, ಸುಬ್ಬು ಹೊಲೆಯಾರ್, ೨೦೦೩, ಪುಟ ೩

೫೫. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ ಸಮಗ್ರ ಬರಹಗಳು ಮತ್ತು ಭಾಷಣಗಳು (ಪ್ರಸಂ.) ಡಾ. ಪ್ರಧಾನ್ ಗುರುದತ್, ಸಂಪುಟ–೧, ೨೦೧೦, ಪುಟ ೪೮

೫೬. ದಲಿತರು ಮತ್ತು ಭೂಮಿಯ ಪ್ರಶ್ನೆ, ಡಾ. ಬಿ.ಎಂ. ಪುಟ್ಟಯ್ಯ, ೨೦೦೮, ಪುಟ ೨೦

೫೭. ಹೋರಾಟದ ಹಾಡುಗಳು, ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್ ಪ್ರಕಾಶನ. ೨೦೦೬, ಪುಟ ೨೦

೫೮. ಕೆಂಡದ ನಡುವೆ, ವಿ. ಮುನಿವೆಂಕಟಪ್ಪ, ೧೯೮೨, ಪುಟ ೨೯

೫೯. ದಲಿತ ಕಥನ, ಡಾ. ಮೊಗಳ್ಳಿ ಗಣೇಶ್, ೨೦೦೬, ಪುಟ ೨೫೬

೬೦. ದಲಿತ ಅಧ್ಯಯನ, (ಸಂ) ಡಾ. ಟಿ.ಆರ್.ಚಂದ್ರಶೇಖರ್, ೨೦೦೫, ಪುಟ ೭೩

೬೧. ರಕ್ತದ ರಂಗೋಲಿ, ಆರ್. ಮಾನಸಯ್ಯ, ೨೦೦೭, ಪುಟ ೭

೬೨. ಕಮ್ಯೂನಿಷ್ಟ್ ಮ್ಯಾನಿಫೆಸ್ಟೋ, ಮಾರ್ಕ್ಸ್ ಏಂಗೆಲ್ಸ್, ೧೮೪೮, ಪು ೭೦

೬೩. ಚಿತ್ರದ ಬೆನ್ನು, ಎನ್.ಕೆ. ಹನುಮಂತಯ್ಯ, ೨೦೦೬, ಪುಟ ೩೬

೬೪. ಮುಳ್ಳುಕಂಟಿಯಾ ನಡುವೆ, ಅನಸೂಯ ಕಾಂಬಳೆ, ೧೯೯೯, ಪುಟ ೪

೬೫. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೭೯

೬೬. ಚಿತ್ರದ ಬೆನ್ನು, ಎನ್.ಕೆ. ಹನುಮಂತಯ್ಯ, ೨೦೦೬, ಪುಟ ೫೬

೬೭. ಹೋರಾಟದ ಹಾಡುಗಳು, ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್ ಪ್ರಕಾಶನ, ೨೦೦೬, ಪುಟ ೮೪

೬೮. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೪೪

48

೧೯. ರೊಚ್ಚು, ಎಸ್.ಪಿ. ಸುಳ್ಳದ್, ೧೯೯೪, ಪುಟ ೩

೨೦. ಜೀವಸೆಲೆ, ಚಾಂಡಾಲ, ೧೯೯೫, ಪುಟ ೨೫

೨೧. ನಮ್ಮ ದೇಶ ನಮ್ಮ ಜನ, ಹನುಮಂತರಾವ ಬಿ ದೊಡ್ಡಮನಿ, ೧೯೯೭, ಪುಟ ೧೦

೨೨. ಹೋರಾಟದ ಹಾಡುಗಳು, ಬೆಳ್ಳಿಚುಕ್ಕಿ ಬುಕ್ ಟ್ರಸ್ಟ್ ಪ್ರಕಾಶನ, ೨೦೦೬, ಪುಟ ೪೬

೨೩. ಬಿಸಿಲ ಭೂಮಿಯ ಕೋಗಿಲೆ, ಜಿ.ಬಿ. ಪೂಜಾರಿ, ೨೦೦೭, ಪುಟ ೧೭

೨೪. ಬಾಳೋಣ ಬಾ ಜೊತೆಯಾಗಿ, ಅಮರೇಶ ದಾಸನೂರ, ೨೦೦೬, ಪುಟ ೩೮

೨೫. ಮತ್ತೆ ಮಳೆ ಬರುವ ಮುನ್ನ, ಮೂಡ್ನಾಕೂಡು ಚಿನ್ನಸ್ವಾಮಿ, ೨೦೦೦, ಪುಟ ೩೪

೨೬. ಮುಖಾಮುಖಿ, ಡಾ. ಬಿ.ಎಂ. ಪುಟ್ಟಯ್ಯ, ೨೦೦೮, ಪುಟ ೪೬

೨೭. ಮೆರವಣಿಗೆ, ಡಾ. ಸಿದ್ಧಲಿಂಗಯ್ಯ, ೨೦೦೦, ಪುಟ ೬೦

೨೮. ಅರವಿಂದ ಮಾಲಗತ್ತಿ ಅವರ ಆಯ್ದ ಕವನಗಳು, (ಸಂ) ಎಚ್.ಎಸ್. ರಾಘವೇಂದ್ರರಾವ್, ೨೦೦೪, ಪುಟ ೬೨

೨೯. ಕಪ್ಪು ಕಣ್ಣಿನ ಹುಡುಗಿ, ಎಲ್. ಹನುಮಂತಯ್ಯ, ೧೯೯೧, ಪುಟ ೧೮

೮೦. ಕೆರ ಹೊತ್ತ ಬಸವ, ರಾಮಪ್ಪ ಮಾದರ, ೨೦೦೫, ಪುಟ ೨೫

೮೧. ಕನ್ನಡ ಪ್ರತಿಭಟನೆ ಕಾವ್ಯ, (ಪ್ರಸಂ.) ಹಂಪ ನಾಗರಾಜಯ್ಯ, ೧೯೮೧, ಪುಟ ೨೨

೮೨. ಸೂಜಿಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು, ಸುಬ್ಬು ಹೊಲೆಯಾರ್, ೨೦೦೩, ಪುಟ ೮೦

೮೩. ಶಕ್ತಿ ಶಾರದೆಯ ಮೇಳ, ಡಿ.ಆರ್. ನಾಗರಾಜ, ೨೦೦೨, ಪುಟ ೨೯

49

ಅಧ್ಯಾಯ ಎಂಟು

ಸಮಾರೋಪ

೮.೧. ಅಧ್ಯಯನದ ಫಲಿತಗಳು

೮.೨. ಅಧ್ಯಯನದ ಮಿತಿಗಳು

೮.೩. ಅಧ್ಯಯನದ ಸಾಧ್ಯತೆಗಳು

೮

ಸಮಾರೋಪ

ಕನ್ನಡ ಸಾಹಿತ್ಯದ ದಿಕ್ಕನ್ನು ಮತ್ತು ಚಲನೆಯನ್ನು ದುಡಿಯುವ ವರ್ಗದ ಕಡೆಗೆ ತಿರುಗಿಸಿದ್ದು ದಲಿತ ಕಾವ್ಯ. ಸಾಹಿತ್ಯದಲ್ಲಿ ಮನುಷ್ಯ ಪರ ಆಲೋಚನೆಗಳೇ ಮುಖ್ಯ ಎಂಬುದನ್ನು ಪ್ರತಿಪಾದಿಸಿತು. ಕಲೆ ಮಾನವನ ಒಳಿತಿಗಾಗಿ ಶ್ರಮಿಸಬೇಕೆನ್ನುವ ಧ್ಯೇಯ ದಲಿತ ಬರಹಗಾರರಲ್ಲಿ ಮನೆಮಾಡಿತು. ಈ ಧ್ಯೇಯದಿಂದಾಗಿಯೇ ಇಂಡಿಯಾದಂತಹ ದೇಶದಲ್ಲಿ ದುಡಿದರೂ ಮೂಲೆಗುಂಪಾಗಿ ತನ್ನ ದುಡಿಮೆಯ ಪ್ರತಿಫಲವನ್ನು ಕಾಣದ ಮನುಷ್ಯರ ಪರ ದನಿ ಎತ್ತಲು ಸಾಧ್ಯವಾಯಿತು. ದುಡಿಮೆ ಸಾಹಿತ್ಯ ಹುಟ್ಟಿಕೊಂಡಾಗ ಅದು ಪ್ರತಿಪಾದಿಸುವ ಸಾಮಾಜಿಕ ಕ್ರೌರ್ಯಗಳೇ ಅಕ್ಷರ ರೂಪ ತಾಳಿ ಸಾಹಿತ್ಯವೋ, ಕಾವ್ಯವೋ ಆಗಿ ನಿರೂಪಿತಗೊಳ್ಳುತ್ತವೆ. ಹೀಗೆ ನಿರೂಪಣೆಗೊಳ್ಳುವ ಅಭಿವ್ಯಕ್ತಿಗಳೇ ದಲಿತರ ಯಾತನಾಮಯ ಬದುಕನ್ನು ಹೊರಹಾಕುತ್ತವೆ. ಈ ರೀತಿಯ ದುಡಿಯುವ ಜನತೆಯ ದನಿಯಾಗಿ ದಲಿತ ಕಾವ್ಯ ತನ್ನ ಅಭಿವ್ಯಕ್ತಿಯನ್ನು ಕಂಡುಕೊಂಡಿದೆ.

ಜಾಗತೀಕರಣದ ಪ್ರಕ್ರಿಯೆಯು ಬಂಡವಾಳಶಾಹಿಗಳ ಹಿತಾಸಕ್ತಿಯನ್ನು ಕಾಪಾಡುತ್ತಿದೆ. ಇದರ ಪರಿಣಾಮಗಳು ನೇರವಾಗಿ ದಲಿತರ ಬದುಕನ್ನು ಅಧೋಗತಿಗೆ ತಳ್ಳುತ್ತಿವೆ. ಕನಿಷ್ಠ ಕೂಲಿಯೂ ಸಿಗದಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಕಾವ್ಯ ಕೂಡ ತನ್ನ ಅಭಿವ್ಯಕ್ತಿ ವಿಧಾನವನ್ನು ಬದಲಾಯಿಸಿಕೊಳ್ಳುತ್ತಿದೆ. ಕಾವ್ಯದ ಅಂತಿಮ ಉದ್ದೇಶವೇ ಮನುಷ್ಯನ ಉನ್ನತಿಗಾಗಿ ಎಂದು ನಂಬಿರುವ ಅಕ್ಷರ ಕಲಿತ ದಲಿತರು ತಮ್ಮ ಕಾವ್ಯದ ಮೂಲಕ ದಲಿತರ ವಸ್ತುಸ್ಥಿತಿಯನ್ನು ನಿರೂಪಿಸಿದರು. ನಿರೂಪಿಸುವುದರ ಜೊತೆಯಲ್ಲೇ ಬದಲಾವಣೆಯ ಅನಿವಾರ್ಯತೆಯನ್ನು ಒತ್ತಿ ಹೇಳಿದರು. ಇವುಗಳೆಲ್ಲದರ ಸಂಗಮವೇ ದಲಿತ ಕಾವ್ಯ.

ದಲಿತ ಕಾವ್ಯ ಕುರಿತು ನಡೆದಿರುವ ಅನೇಕ ವಿಮರ್ಶೆಗಳು ದಲಿತ ಕಾವ್ಯದಲ್ಲಿ ಏಕತಾನತೆ ಇದೆ ಎಂದು ಷರಾ ಬರೆದಿಟ್ಟಿವೆ. ಆದರೆ ದಲಿತ ಕಾವ್ಯದಲ್ಲಿ ವಸ್ತು ವೈವಿಧ್ಯತೆ ಇರುವುದನ್ನು ಕಾಣಬಹುದು. ದಲಿತ ಕಾವ್ಯ ಪ್ರಧಾನವಾಗಿ ಶೋಷಿತರ ದಮನ, ದಬ್ಬಾಳಿಕೆ, ದೌರ್ಜನ್ಯ, ಅವಮಾನ, ಅಸಹಾಯಕತೆ ಮುಂತಾದ ನೋವಿನ ನೆಲೆಗಳನ್ನು ಪ್ರಧಾನವಾಗಿ ಅಭಿವ್ಯಕ್ತಿಸಿದೆ. ಹಾಗೆಯೇ ಈ ನೋವುಗಳ ಜೊತೆಯಲ್ಲಿ ಪ್ರೀತಿ, ಪ್ರೇಮ, ಅನುರಾಗ,

ಸಂಬಂಧದಂತಹ ನವಿರು ಭಾವನೆಗಳೂ ಅದರಲ್ಲಿವೆ. ಇವುಗಳ ಜೊತೆಗೆ ಇಂದಿನ ಯಂತ್ರನಾಗರೀಕತೆಯಲ್ಲಿ ದಲಿತ ಬದುಕು ಸೋರಿಹೋಗುತ್ತಿರುವುದನ್ನೂ ಅಭಿವ್ಯಕ್ತಿಸಿದೆ. ಇವೆಲ್ಲಕಿಂತ ಮುಖ್ಯವಾಗಿ ಸಮಾಜ ಹೀಗೇ ಇರಬೇಕೆಂಬ ತನ್ನ ಆಶಯವನ್ನು ವ್ಯಕ್ತಪಡಿಸಿದೆ.

ಒಟ್ಟಿನಲ್ಲಿ ಹೇಳುವುದಾದರೆ ದಲಿತ ಕಾವ್ಯ ಮನುಷ್ಯಪರ ಆಲೋಚನೆಗಳನ್ನು ನಿರೂಪಿಸಿದೆ. ಹಾಗೆ ನಿರೂಪಿಸುತ್ತಲೇ ಸಮಾಜ ಹೀಗೇ ಇರಬೇಕೆಂಬ ಆಶಯವನ್ನೂ ಬಿತ್ತಿದೆ. ಜಾನಪದ ಲಯ, ಹಾಡುಗಬ್ಬ ಮುಂತಾದವುಗಳಿಂದ ಹಾಡುವಿಕೆಗೆ ಒಳಗಾಗಿ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನ ರೀತಿಯ ಶೋಷಣೆಯನ್ನು ಜನತೆಯ ಮುಂದೆ ಅಭಿವ್ಯಕ್ತಿಸಿದೆ. ಹೋರಾಟದ ಹಾಡುಗಳು ಇದಕ್ಕೂ ಮುಂದೆ ಹೋಗಿ ಶೋಷಣೆಯ ತೀವ್ರತೆಯನ್ನು ಕಟ್ಟಿಕೊಡುತ್ತಲೇ ಪರ್ಯಾಯ ಆಲೋಚನೆಯನ್ನು ಬಿತ್ತಿವೆ. ಈ ಆಲೋಚನೆಗಳಲ್ಲಿ ಮೇಲ್ನೋಟಕ್ಕೆ ಏಕತಾನತೆ ಕಂಡುಬಂದರೂ ಸಾಮಾಜಿಕ ವ್ಯವಸ್ಥೆಯ ಕ್ರೂರ ಮುಖಗಳನ್ನು ಪರಿಚಯಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ.

೮.೧ ಅಧ್ಯಯನದ ಫಲಿತಗಳು

೧. ದಲಿತ ಕಾವ್ಯ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನ ರೀತಿಯ ಶೋಷಣಾ ನೆಲೆಗಳನ್ನು ಅನಾವರಣಗೊಳಿಸಿದೆ. ದಲಿತರು ಕರ್ನಾಟಕದ ಮೂಲೆಮೂಲೆಯಲ್ಲಿ ನೆಲೆಸಿದ್ದಾರೆ. ಇಲ್ಲಿ ಮೂಲೆಮೂಲೆಗೂ ಒಂದೊಂದು ರೀತಿಯ ಸಮಸ್ಯೆಗಳ ಆಗರವೇ ಇದೆ. ಉತ್ತರ ಕರ್ನಾಟಕದ ದಲಿತರಿಗೂ, ದಕ್ಷಿಣ ಕರ್ನಾಟಕದ ದಲಿತರಿಗೂ ಇರುವ ಸಮಸ್ಯೆಗಳ ಸ್ವರೂಪ ಬೇರೆ ಬೇರೆ. ಆದರೆ ಶೋಷಕರು ಮಾತ್ರ ಒಂದೇ. ಈ ಎಲ್ಲಾ ಪ್ರದೇಶಗಳಲ್ಲಿ ಕೂಲಿ, ಜೀತ ಮುಂತಾದವುಗಳಿಂದ ದಲಿತರ ಬದುಕು ಅತಂತ್ರಗೊಂಡಿರುವ ಬಗೆಯನ್ನು ದಲಿತ ಕಾವ್ಯಗಳು ಆಯಾ ನೆಲೆಗಟ್ಟಿನಲ್ಲಿ ನಿಂತು ನಿರೂಪಿಸಿವೆ.

೨. ದಲಿತ ಕಾವ್ಯದಲ್ಲಿ ವಾಚ್ಯ ಪ್ರಧಾನವಾಗಿ ಕಾಣಿಸಿಕೊಂಡಿದೆ. ಈ ವಾಚ್ಯವೇ ದಲಿತರ ಬದುಕಿನ ವಿವಿಧ ನೆಲೆಗಳನ್ನು ಬಿಚ್ಚಿಟ್ಟಿದೆ. ಏಕೆಂದರೆ ದಲಿತ ಕಾವ್ಯಕ್ಕೆ ಪಾರಂಪರಿಕ ಮಾದರಿಯ ಕಾವ್ಯದ ಸ್ವರೂಪ ಬೇಕಿರಲಿಲ್ಲ. ಬದಲಾಗಿ ತನ್ನ ಜನರ ಬದುಕಿನ ಬವಣೆಯನ್ನು ಹೇಳುವ ತರಾತುರಿ ಅದಕ್ಕಿತ್ತು.

೩. ಕಾವ್ಯಕ್ಕೆ ಪ್ರತಿಮೆ, ಉಪಮೆ, ಅಲಂಕಾರಗಳ ಅಗತ್ಯತೆ ಇದ್ದೇ ಇದೆ. ಇವು ಕಾವ್ಯದ ಸೊಗಸನ್ನು ಹೆಚ್ಚಿಸಬೇಕೆನ್ನುವುದು ಸಾಂಪ್ರದಾಯಿಕ ಕಾವ್ಯ ಮಾದರಿಯ ಲಕ್ಷಣ. ಆದರೆ ಇವುಗಳ ಮೂಲಕವೇ ದಲಿತರ ಯಾತನಾಮಯ ಬದುಕನ್ನು ಅನಾವರಣ ಗೊಳಿಸಿರುವುದು ದಲಿತ ಕಾವ್ಯದ ಲಕ್ಷಣ.

೪. ಕನ್ನಡ ಕಾವ್ಯ ಪ್ರಪಂಚದಲ್ಲಿ ದುಡಿಯುವ ವರ್ಗದ ದೃಷ್ಟಿಕೋನವನ್ನು ನಿರ್ಮಾಣ ಮಾಡಿದ್ದು ದಲಿತ ಕಾವ್ಯ. ದಲಿತ ಕಾವ್ಯದ ಇಡೀ ಶಕ್ತಿ ಕೇಂದ್ರೀಕೃತವಾಗಿರುವುದೇ ದುಡಿವ ವರ್ಗದ ದೃಷ್ಟಿಕೋನವನ್ನ ನಿರ್ಮಾಣ ಮಾಡಿರುವಲ್ಲಿ. ದಲಿತ ಕಾವ್ಯ ತನ್ನ ಅಭಿವ್ಯಕ್ತಿಯಲ್ಲಿ ದುಡಿಯುವ ವರ್ಗದ ದೃಷ್ಟಿಕೋನವನ್ನು ನಿರ್ಮಿಸಿದೆ. ದುಡಿವ ವರ್ಗದ ದೃಷ್ಟಿಕೋನವನ್ನು ಬಳಸಿಕೊಂಡಿದೆ. ಮತ್ತು ದುಡಿವ ವರ್ಗದ ದೃಷ್ಟಿಕೋನದ ಮೂಲಕವಾಗೇ ಜಗತ್ತಿನ ಆಗುಹೋಗುಗಳನ್ನು ನೋಡಿದೆ.

೫. ಘಟನೆಗಳು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನ. ಆದರೆ ಘಟನೆಗಳ ಪರಿಣಾಮ ಮಾತ್ರ ಒಂದೇ. ಅಕ್ಷರ ಕಲಿತ ದಲಿತರು ತಮ್ಮ ಸಮುದಾಯದ ಮೇಲಾದ ಘಟನೆಗಳನ್ನು ಅಭಿವ್ಯಕ್ತಿಸುತ್ತಾ ದಲಿತರ ವಸ್ತುಸ್ಥಿತಿಯನ್ನು ಬಿಂಬಿಸಿದ್ದಾರೆ. ಘಟನೆಗಳು ಕೇವಲ ಆ ಸಂದರ್ಭಕ್ಕೆ ಅಥವಾ ಆಯಾ ಪ್ರದೇಶಕ್ಕೆ ಸೀಮಿತವಾಗಿರುವುದಿಲ್ಲ. ಅದು ಸಾವಿರಾರು ವರ್ಷಗಳ ದಲಿತರ ಮೇಲಿನ ದಬ್ಬಾಳಿಕೆಯನ್ನು ನಿರೂಪಿಸುತ್ತದೆ. ಮುಂದೆಯೂ ನಡೆಯಬಹುದಾದ ಪ್ರಮೇಯವನ್ನು ಹೇಳುತ್ತದೆ. ಈ ಎಲ್ಲಾ ನೆಲೆಗಳು ದಲಿತ ಕಾವ್ಯ ನಿರೂಪಿಸಿದ ಘಟನಾಧಾರಿತ ಅಭಿವ್ಯಕ್ತಿಯಲ್ಲಿವೆ.

೬. ದಲಿತ ಕಾವ್ಯದಲ್ಲಿ ಮತ್ತು ದಲಿತ ಹೋರಾಟದಲ್ಲಿ ಮಹಿಳೆಯ ಪಾತ್ರ ಕಡಿಮೆ ಎಂದು ಹೇಳಲಾಗುತ್ತದೆ. ಆದರೆ ದಲಿತ ಕಾವ್ಯವು ನಿರೂಪಿಸಿದ ಶೋಷಣೆಯ ವಿಭಿನ್ನ ಮುಖಗಳಲ್ಲಿ ಪುರುಷನದೆಷ್ಟು, ಮಹಿಳೆಗೆ ಸಂಬಂಧಿಸಿದ್ದೆಷ್ಟು ಎಂದು ನೋಡಲು ಬರುವುದಿಲ್ಲ. ಏಕೆಂದರೆ ಒಬ್ಬರ ಶೋಷಣೆ ಮತ್ತೊಬ್ಬರ ಮೇಲೆ ತೀವ್ರತರವಾದ ಪರಿಣಾಮವನ್ನು ಬೀರುತ್ತದೆ. ಈ ಹಿನ್ನೆಲೆಯಲ್ಲಿ ದಲಿತ ಕಾವ್ಯ ಶೋಷಣೆಯ ಅಭಿವ್ಯಕ್ತಿಯಲ್ಲಿ ಏಕರೂಪತೆಯನ್ನು ಮಂಡಿಸಿದೆ.

೭. ಕನ್ನಡ ಕಾವ್ಯ ಪರಂಪರೆಯಲ್ಲಿ ಯಾವ ಕಾವ್ಯ ಪ್ರಕಾರವೂ ಕೂಡ ಇಂತಹದೇ ಸಮಾಜ ಬೇಕು ಎಂಬುದರ ಬಗ್ಗೆ ತನ್ನನ್ನು ತಾನು ಸಂಪೂರ್ಣವಾಗಿ ತೊಡಗಿಸಿಕೊಂಡಿಲ್ಲ. ಆದರೆ ದಲಿತ ಕಾವ್ಯ ಮಾತ್ರ ಇಂತಹದೇ ಸಮಾಜ ಬೇಕು ಎಂಬುದರ ಬಗ್ಗೆ ಸಂಪೂರ್ಣವಾಗಿ ತನ್ನ ಅಭಿವ್ಯಕ್ತಿಯನ್ನು ಕೇಂದ್ರೀಕರಿಸಿದೆ. ಈ ಕಾರಣದಿಂದಾಗಿಯೇ ಮನುಷ್ಯ ಪರ ಆಲೋಚನೆಯನ್ನು ದಲಿತ ಕವಿಗಳು ತಮ್ಮ ಕಾವ್ಯದ ಮೂಲಕ ಬಿತ್ತಲು ಸಾಧ್ಯವಾಯಿತು.

೮. ಕನ್ನಡ ಕಾವ್ಯದ ವಿಸ್ತಾರತೆಯಲ್ಲಿ ಆರಾಧನಾ ಮತ್ತು ಆಸ್ವಾದನಾ ನೆಲೆಯೊಂದು ಸಾಗಿ ಬಂದಿದೆ. ಆದರೆ ದಲಿತ ಕಾವ್ಯ ಈ ಆರಾಧನಾ ಮತ್ತು ಆಸ್ವಾದನಾ ನೆಲೆಯಿಂದ ಆಚೆ ನಿಂತು ನೋವನ್ನೇ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಮಾಡಿಕೊಂಡಿದೆ. ಆದ್ದರಿಂದ ದಲಿತ ಕಾವ್ಯದ ವಿಶ್ಲೇಷಣೆ ಆ ನೋವಿನ ಪದರುಗಳಿಂದಲೇ ಸಾಗಬೇಕಿದೆ.

೯. ದಲಿತ ಕಾವ್ಯ ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಆಳವಾಗಿ ಬೇರುಬಿಟ್ಟಿದ್ದ ಸ್ಥಾಪಿತ ಮೌಲ್ಯಗಳಿಗೆ ಅಸಹನೆಯನ್ನು ತೋರಿದೆ ಮತ್ತು ತನ್ನದೇ ಆದ ನೆಲೆಗಟ್ಟಿನಲ್ಲಿ ಅದನ್ನು ತಿರಸ್ಕರಿಸಿದೆ. ಹೀಗೆ ತಿರಸ್ಕರಿಸುತ್ತಲೇ ಮೌಲ್ಯಗಳು ಯಾರ ಪರವಾಗಿವೆ ಮತ್ತು ದಲಿತ ಸಮುದಾಯಕ್ಕೆ ಅದರ ಕೊಡುಗೆಯೇನು ಎಂಬುದನ್ನು ನಿರೂಪಿಸಿದೆ.

೧೦. ದಲಿತ ಕಾವ್ಯದ ಅಧ್ಯಯನದಲ್ಲಿ ಹೋರಾಟದ ಹಾಡುಗಳನ್ನು ಕಡೆಗಣಿಸಲಾಗಿದೆ. ಆದರೆ ಹೋರಾಟದ ಹಾಡುಗಳು ದಲಿತರ ಸಾಮಾಜಿಕ ಪರಿಸ್ಥಿತಿಯನ್ನು ಬಿಂಬಿಸುವಲ್ಲಿ ಮತ್ತು ಕರ್ನಾಟಕದಾದ್ಯಂತ ದಲಿತರು ಎಚ್ಚೆತ್ತುಕೊಳ್ಳುವಲ್ಲಿ ತನ್ನದೇ ಆದ ಪಾತ್ರವನ್ನು ವಹಿಸಿವೆ. ಪರಿಸ್ಥಿತಿಯನ್ನು ಬಿಂಬಿಸುವಲ್ಲಿ ಮತ್ತು ಪರ್ಯಾಯವನ್ನು ಸೂಚಿಸುವಲ್ಲಿ ಹೋರಾಟದ ಹಾಡುಗಳು ತಮ್ಮದೇ ಆದ ಕೊಡುಗೆಯನ್ನು ನೀಡಿವೆ. ಪ್ರಸ್ತುತ ಅಧ್ಯಯನದಿಂದ ಈ ಅಂಶಗಳು ತಿಳಿದುಬಂದಿವೆ.

೧೧. ದಲಿತ ಕಾವ್ಯದಲ್ಲಿ ಬರುವ ಪ್ರತಿಮೆ, ಉಪಮೆ, ರೂಪಕಗಳು ಕನ್ನಡ ಕಾವ್ಯದಲ್ಲಿ ಬಂದಿರುವ ಪ್ರತಿಮೆ, ಉಪಮೆ, ರೂಪಕಗಳಿಗಿಂತ ಭಿನ್ನವಾಗಿ ಅಭಿವ್ಯಕ್ತಗೊಂಡಿವೆ. ಕಾವ್ಯದ ಸೊಗಸಿಗೆ ಬಳಕೆಗೊಳ್ಳುತ್ತಿದ್ದ ಇವುಗಳನ್ನು ದಲಿತ ಕವಿಗಳು ದಲಿತರ ಸಾಮಾಜಿಕ ವಸ್ತುಸ್ಥಿತಿಯನ್ನು ಹೇಳಲು ಪ್ರಯೋಗಿಸಿದರು. ಇಲ್ಲಿ ಪ್ರಯೋಗಿಸಿದರು ಎಂಬುದಕ್ಕಿಂತ ದಲಿತ ಕವಿಗಳು ತಮ್ಮ ಸಾಮಾಜಿಕ ವಸ್ತುಸ್ಥಿತಿಯಿಂದಲೇ ಕಾವ್ಯದ ಉಪಮೆಗಳನ್ನು ಕಟ್ಟಿಕೊಟ್ಟರು.

೧೨. ದಲಿತರಿಗೆ ನಿಜವಾದ ಶತೃಗಳು ಪುರೋಹಿತಶಾಹಿಗಳು ಎಂದು ನಂಬಿಸಲಾಗಿದೆ. ಆದರೆ ದಲಿತ ಕಾವ್ಯಗಳು ಮಾತ್ರ ಪುರೋಹಿತಶಾಹಿಗಳು, ಭೂಮಾಲೀಕರು, ಬಂಡವಾಳಶಾಹಿಗಳು, ಸಾಮ್ರಾಜ್ಯಶಾಹಿಗಳು, ಅಧಿಕಾರದ ಗದ್ದುಗೆ ಏರಿದವರು, ವಿದೇಶಿ ಕಂಪನಿಗಳು, ಸ್ವದೇಶಿ ಬಂಡವಾಳಿಗರು ಮುಂತಾದವರನ್ನು ತನ್ನ ಶತೃಗಳೆಂದು ನಿರೂಪಿಸಿದೆ. ಅದರಲ್ಲೂ ಹೋರಾಟದ ಹಾಡುಗಳು ದಲಿತರ ನಿಜವಾದ ಶತೃ ಭೂಮಾಲೀಕ ಮತ್ತು ಬಂಡವಾಳಶಾಹಿಗಳೆಂದು ಪ್ರಧಾನವಾಗಿ ಗುರುತಿಸಿವೆ.

೧೩. ಕನ್ನಡ ಕಾವ್ಯ ಪಂರಂಪರೆಯ ಸಾಂಪ್ರದಾಯಿಕ ನೆಲೆಗಳು ಕಾವ್ಯವನ್ನು ತೀರಾ ವೈಯಕ್ತಿಕ ನೆಲೆಯಲ್ಲಿ ಹಿಡಿದಿರಿಸಿತ್ತು. ಆದರೆ ದಲಿತ ಕಾವ್ಯ ಅದನ್ನು ವೈಯಕ್ತಿಕತೆಯಿಂದ ಸಾಮೂಹಿಕತೆಯ ಕಡೆಗೆ ಕರೆತಂದಿತು. ಕವಿಯೇ ಮರೆತುಹೋಗಿ ಕಾವ್ಯ ಜನಮಾನಸದಲ್ಲಿ ಹೋರಾಟಕ್ಕೆ ವೇಗವರ್ಧಕವಾಗಿ ಪರಿಣಮಿಸಿತು.

೧೪. ದಲಿತ ಕಾವ್ಯದ ಮೇಲೆ ಅಂಬೇಡ್ಕರ್ ಅವರ ದಟ್ಟ ಪ್ರಭಾವ ಆಗಿರುವುದನ್ನು ಕಾಣಬಹುದಾಗಿದೆ. ಪ್ರತಿಯೊಬ್ಬ ದಲಿತ ಕವಿಗಳೂ ಕೂಡ ಒಂದಲ್ಲಾ ಒಂದು ರೀತಿಯಲ್ಲಿ ಅಂಬೇಡ್ಕರ್ ಅವರ ಸಾಧನೆಗಳನ್ನು ಕೊಂಡಾಡಿದ್ದಾರೆ ಮತ್ತು ತಮ್ಮದೇ ಆದ ನೆಲೆಗಟ್ಟಿನಲ್ಲಿ ವಿಶ್ಲೇಷಿಸಿದ್ದಾರೆ, ವಿಮರ್ಶಿಸಿದ್ದಾರೆ.

೧೫. ದಲಿತ ಕಾವ್ಯದ ಪ್ರಧಾನ ನಿಲುವುಗಳಲ್ಲಿ ಶೋಷಣೆಯನ್ನು ಅಭಿವ್ಯಕ್ತಿಸುವುದೇ ಆಗಿದೆ. ಇಲ್ಲಿ ದಲಿತ ಕಾವ್ಯ ಶೋಷಣೆಯನ್ನು ಕೇವಲ ಅಭಿವ್ಯಕ್ತಿಸಿಲ್ಲ; ಬದಲಾಗಿ ಶೋಷಣೆಗೆ ಕಾರಣಗಳನ್ನು ಮತ್ತು ಅದರ ಪರಿಣಾಮಗಳನ್ನು ಅವಲೋಕಿಸಿದೆ. ಹೀಗೆ ಅವಲೋಕಿಸುವುದರ ಜೊತೆಯಲ್ಲೇ ಅದಕ್ಕೊಂದು ಪರ್ಯಾಯ ಆಲೋಚನೆಯನ್ನೂ ನೀಡಿದೆ.

೧೬. ದಲಿತ ಕಾವ್ಯ ಸಂಘಟನೆ ಹಾಗೂ ಹೋರಾಟದ ಒಡಲೊಳಗಿಂದ ಎದ್ದು ಬಂದಂತದ್ದು. ಆದ್ದರಿಂದ ಇದು ಗಟ್ಟಿಯಾಗಿ ಹಾಡಿಕೊಳ್ಳಲು ಬಯಸುತ್ತದೆ. ಕಾವ್ಯ ಏಕಾಂತದಲ್ಲಿ ಸೃಷ್ಟಿಯಾಗುತ್ತದೆಂಬ ಭ್ರಮೆಯನ್ನು ಅನೇಕ ದಲಿತ ಕಾವ್ಯಗಳು ಹುಸಿಗೊಳಿಸಿದವು. ಏಕೆಂದರೆ ದಲಿತ ಕಾವ್ಯದ ಅದೆಷ್ಟೋ ಹಾಡುಗಳು ಹೋರಾಟದ ಹಾದಿಯಲ್ಲಿ ರಚನೆಗೊಂಡವುಗಳು. ಅದಕ್ಕೇ ಇಲ್ಲಿ ಸಾಮೂಹಿಕತೆಯ ನಡುವಿನ ರಚನೆಯ ಹಿನ್ನೆಲೆ ಅದಕ್ಕಿದೆ.

೧೭. ದಲಿತ ಕಾವ್ಯ ದಲಿತ ಸಂಘಟನೆಗಳ ಸ್ಥಿತಿಗತಿಗಳನ್ನು ಕುರಿತು ಅಭಿವ್ಯಕ್ತಿಸಿದೆ. ಹಾಗೆಯೇ ದಲಿತ ಸಂಘಟನೆಗಳು ಇಬ್ಭಾಗವಾದ ಬಗೆಯನ್ನು ಮತ್ತು ಅದರಿಂದ ಲಾಭ ಪಡೆದು ತಮ್ಮನ್ನು ತಾವು ಮಾರಿಕೊಂಡ ದಲಿತ ಹೋರಾಟಗಾರರನ್ನು ಕೂಡ ಅವು ವಿಮರ್ಶಿಸಿವೆ.

೧೮. ದಲಿತ ಕಾವ್ಯ ಹೇಗೆ ಬಂದಿದೆ ಎಂಬುದು ಸಾಂಸ್ಕೃತಿಕ ವಿಮರ್ಶೆಯ ಮುಂಚೂಣಿಯಾಗಬಾರದು. ಏಕೆಂದರೆ ದಲಿತ ಕಾವ್ಯ ಸಾಮಾಜಿಕ ಕ್ರೌರ್ಯಗಳ ವಿರುದ್ಧ ಬಂಡೆದ್ದು ಹೊರಬಂದದ್ದು. ಆದ್ದರಿಂದ ದಲಿತ ಕಾವ್ಯವನ್ನು ನೋಡುವಾಗ ಏನನ್ನು ಹೇಳುತ್ತಿದೆ? ಮತ್ತು ಏಕೆ ಹೇಳುತ್ತಿದೆ? ಎಂಬುದು ಮುಖ್ಯವಾಗಬೇಕು. ಇದರಿಂದಾಗಿ ದಲಿತ ಕಾವ್ಯಕ್ಕೆ ನ್ಯಾಯ ಒದಗಿಸಿದಂತಾಗುತ್ತದೆ.

೧೯. ಶಬ್ದ ಮತ್ತು ಅರ್ಥ ಕಾವ್ಯದಲ್ಲಿ ಬಹುಮುಖ್ಯ ಅಂಗಗಳು. ಶಬ್ದದ ಕೆಲಸ ಅರ್ಥಗಳನ್ನು ಹುಟ್ಟಾಕುವುದು, ಅರ್ಥದ ಕೆಲಸ ಬಹು ಅರ್ಥಗಳನ್ನು ಹೊರಡಿಸುತ್ತಾ ಕಾವ್ಯವನ್ನು ಗಟ್ಟಿಗೊಳಿಸುವುದು. ಆದರೆ ದಲಿತ ಕಾವ್ಯದಲ್ಲಿ 'ಅರ್ಥ'ದ ಕೆಲಸ ಕ್ರಿಯೆಯಲ್ಲಿ ಸಾಗಿದೆ. ಕ್ರಿಯೆಯನ್ನು ಪ್ರಚೋದಿಸದ ಅರ್ಥವು ದಲಿತ ಕಾವ್ಯದಲ್ಲಿ ಇರುವುದಿಲ್ಲ. ಆದರೆ ಕೆಲವು ವಿಮರ್ಶೆಗಳು ಪಾರಂಪರಿಕ ಅರ್ಥದ ಜಾಡನ್ನು ದಲಿತ ಕಾವ್ಯದ ಮೇಲೂ ಪ್ರಯೋಗಿಸಿವೆ. ಆ ಮೂಲಕ ಅದರ ವಿಶಾಲತೆಯನ್ನು ಸಂಕುಚಿತಗೊಳಿಸಿವೆ.

೨೦. ದಲಿತ ಕಾವ್ಯ ಪಾರಂಪರಿಕ ಕಾವ್ಯದ ಚೌಕಟ್ಟನ್ನು ಮುರಿದಿದೆ. ಹಾಗೆ ಮುರಿಯುವುದರ ಮೂಲಕ ತನ್ನದೇ ಆದ ಪರಂಪರೆಯನ್ನು ಕಟ್ಟಿದೆ. ಏಕೆಂದರೆ ದಲಿತ ಕಾವ್ಯಕ್ಕೆ ಕಾವ್ಯದ ರೂಪವಾಗಲೀ, ಸ್ವರೂಪವಾಗಲೀ ಬೇಕಿರಲಿಲ್ಲ. ಈ ನಿಲುವಿನಿಂದಾಗಿಯೇ ಅದು ತನ್ನ ಸುತ್ತಣ ಬದುಕಿನ ದಲಿತರ ವಸ್ತುಸ್ಥಿತಿಯನ್ನು ಅಭಿವ್ಯಕ್ತಿಸಿದೆ. ಆ ಮೂಲಕ ಪ್ರಸ್ತುತದಲ್ಲಿ ದಲಿತರ ಬದುಕು ಯಾವ ರೀತಿ ಇದೆ ಎಂಬುದನ್ನು ತೋರಿಸಿಕೊಟ್ಟಿದೆ.

೮.೨ ಅಧ್ಯಯನದ ಮಿತಿಗಳು

ದಲಿತ ಕಾವ್ಯಕ್ಕೆ ಏಕಮುಖ ಚಲನೆಯಿಲ್ಲ. ಭಿನ್ನ ನೆಲೆಗಳ ಅನಾವರಣವಿದೆ. ಪ್ರಸ್ತುತ ಅಧ್ಯಯನ ಸಾಮಾಜಿಕ ನೆಲೆಗಳಿಗಷ್ಟೇ ಸೀಮಿತಗೊಂಡಿದೆ. ಪ್ರತಿಯೊಂದು ಅಸ್ತಿತ್ವವೂ ಸಾಮಾಜಿಕ ನೆಲೆಗೆ ಪೂರಕವೆನಿಸಿದರೂ ಬೇರೆ ಬೇರೆ ಸ್ತರಗಳಲ್ಲಿ ಅದರ ಪರಿಣಾಮಗಳನ್ನು ಅವಲೋಕಿಸುವುದು ಉಚಿತವೆನಿಸುತ್ತದೆ. ಕರ್ನಾಟಕದಲ್ಲಿ ನೂರಾರು ದಲಿತ ಕವಿಗಳು ತಮ್ಮ ನೋವುಗಳನ್ನು ಕಾವ್ಯದ ಮೂಲಕ ಅಭಿವ್ಯಕ್ತಿಸಿಕೊಂಡಿದ್ದಾರೆ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಎಲ್ಲರ ನಿಲುವುಗಳನ್ನು ಚರ್ಚಿಸಲು ಸಾಧ್ಯವಾಗಿಲ್ಲ. ದಲಿತರೇ ಬರೆದ ದಲಿತ ಕಾವ್ಯವನ್ನು ಈ ಅಧ್ಯಯನ ಚರ್ಚೆಗೆ ಒಳಪಡಿಸುವುದರ ಮೂಲಕ ದಲಿತೇತರರು ಬರೆದ ದಲಿತ ಕಾವ್ಯವನ್ನು ಚರ್ಚೆಯಿಂದ ಹೊರಗಿಟ್ಟಿದೆ. ದಲಿತ ಕಾವ್ಯದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನ ರೀತಿಯ ಸಾಮಾಜಿಕ ಸ್ಥಿತಿಗತಿಗಳು ಕಾವ್ಯದ ವಸ್ತುವಾಗಿ ಪರಿಣಮಿಸಿವೆ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಆಯಾ ಪ್ರದೇಶದ ಭಿನ್ನತೆಗಳನ್ನು ಸಮಗ್ರವಾಗಿ ಹಿಡಿದಿಡಲು ಸಾಧ್ಯವಾಗಿಲ್ಲ.

೮.೩ ಅಧ್ಯಯನದ ಸಾಧ್ಯತೆಗಳು

ದಲಿತ ಕಾವ್ಯವನ್ನು ಕುರಿತು ಕನ್ನಡ ವಿಮರ್ಶಾಲೋಕ ಸಾಕಷ್ಟು ಚರ್ಚಿಸಿದೆ. ಈ ಎಲ್ಲಾ ವಿಮರ್ಶಾ ಲೇಖನಗಳೇ ಸ್ವತಂತ್ರ ಅಧ್ಯಯನ ಕೈಗೊಳ್ಳುವಷ್ಟು ಸಾಮಗ್ರಿಯನ್ನು ಹೊಂದಿವೆ. ಕನ್ನಡದ ಲಿಖಿತ ಕಾವ್ಯ ಪರಂಪರೆಯಲ್ಲಿ ಸಿದ್ಧಲಿಂಗಯ್ಯ ಅವರ 'ಹೊಲೆ ಮಾದಿಗರ ಹಾಡು' ಪ್ರಕಟಗೊಂಡ ಮೇಲೆ ಕರ್ನಾಟಕದ ಉದ್ದಕ್ಕೂ ನೂರಾರು ಅಕ್ಷರ ಕಲಿತ ದಲಿತರು ಕಾವ್ಯ ರಚನೆಯಲ್ಲಿ ತೊಡಗಿದರು. ಆದರೆ ವಿಮರ್ಶಾ ವಲಯ ಮಾತ್ರ ಕೆಲವೇ ಕವಿಗಳನ್ನು ಪ್ರಧಾನವಾಗಿ ಚರ್ಚಿಸಿದೆ. ಇದರಿಂದಾಗಿ ನೂರಾರು ದಲಿತ ಕವಿಗಳ ಕೃತಿಗಳು ನಿರಾಕರಣೆಗೆ ಒಳಗಾದಂತೆ ಭಾಸವಾಗುತ್ತದೆ. ಆದ್ದರಿಂದ ಈ ಎಲ್ಲಾ ಕವಿಗಳ ಕೃತಿಗಳನ್ನು ಅಧ್ಯಯನ ಮಾಡುವುದರ ಮೂಲಕ ದಲಿತ ಕಾವ್ಯಕ್ಕೊಂದು ವಿಸ್ತಾರತೆಯನ್ನು ತಂದುಕೊಡುವ ಅನಿವಾರ್ಯತೆ ಇದೆ ಎನಿಸುತ್ತದೆ. ಹಾಗೆಯೇ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನ ನೆಲೆಯ ಸಮಸ್ಯೆಗಳು ನಿರೂಪಿತಗೊಂಡಿರುವ ದಲಿತ ಕಾವ್ಯವನ್ನು ಅಧ್ಯಯನ ಮಾಡುವುದರಿಂದ ದಲಿತರ ಮೇಲಿನ ದಬ್ಬಾಳಿಕೆಯ ವಿಭಿನ್ನ ಮುಖಗಳು ಬಯಲಿಗೆ ಬರುತ್ತವೆ. ದಲಿತ ಕಾವ್ಯದಲ್ಲಿ ಇದುವರೆಗೆ ಈ ಅಧ್ಯಯನವೂ ಒಳಗೊಂಡಂತೆ ಶೋಷಣೆ, ದಬ್ಬಾಳಿಕೆ, ದೌರ್ಜನ್ಯಗಳ ವಿಶ್ಲೇಷಣೆಗೇ ಹೆಚ್ಚು ಒತ್ತು ನೀಡಲಾಗಿದೆ. ಇವುಗಳು ದಲಿತ ಕಾವ್ಯದಲ್ಲಿ ಬಹಳ ಮುಖ್ಯವೂ ಹೌದು. ಆದರೆ ದಲಿತ ಕಾವ್ಯ ಇವುಗಳ ಜೊತೆಯಲ್ಲೇ ಪ್ರೀತಿ, ಪ್ರೇಮ, ಅನುರಾಗದಂತಹ ನವಿರು ಭಾವನೆಗಳನ್ನೂ ಅಭಿವ್ಯಕ್ತಿಸಿದೆ ಇವುಗಳ ವಿಶ್ಲೇಷಣೆಯೂ ಅಧ್ಯಯನಕ್ಕೆ ಒಳಪಡಬೇಕಿದೆ.

*****

ಅನುಬಂಧಗಳು

ಅ. ಮೂಲ ಆಕರಗಳು

ಆ. ಪರಾಮರ್ಶನ ಸಾಹಿತ್ಯ

ಅನುಬಂಧಗಳು

ಅ. ಮೂಲ ಆಕರಗಳು

೧. ಅರ್ಜುನ ಗೊಳಸಂಗಿ (ಸಂ), ಬಿಸಿಲೊಳಗಿನ ಬೆಳದಿಂಗಳು, ೨೦೦೮, ರಾಜ್ಯ ಪದವಿ ಪೂರ್ವ ಕಾಲೇಜು ಅಧ್ಯಾಪಕರ ಬಳಗ, ಗದಗ.

೨. ಅನಸೂಯ ಕಾಂಬಳೆ, ಮುಳ್ಳು ಕಂಟಿಯ ನಡುವೆ, ೧೯೯೯, ಹೊಸದಿಕ್ಕು ಪ್ರಕಾಶನ, ಬೆಂಗಳೂರು

೩. ಅಮರೇಶ ದಾಸನೂರು, ಬಾಳೋಣ ಬಾ ಜೊತೆಯಾಗಿ, ೨೦೦೬, ದಲಿತ ಸಾಹಿತ್ಯ ಪರಿಷತ್, ಗದಗ.

೪. ಅರವಿಂದ ಮಾಲಗತ್ತಿ, ಮೂಕನಿಗೆ ಬಾಯಿ ಬಂದಾಗ, ೧೯೮೧, ಶೈಲ ಪ್ರಕಾಶನ, ಮುದ್ದೇಬಿಹಾಳ.

೫. ಅರವಿಂದ ಮಾಲಗತ್ತಿ, ಕಪ್ಪುಕಾವ್ಯ, ೧೯೮೫, ಶೈಲ ಪ್ರಕಾಶನ, ಮುದ್ದೇಬಿಹಾಳ.

೬. ಅರವಿಂದ ಮಾಲಗತ್ತಿ, ಮೂರನೆಯ ಕಣ್ಣು, ೧೯೯೬, ಶೈಲ ಪ್ರಕಾಶನ, ಮುದ್ದೇಬಿಹಾಳ.

೭ ಅರವಿಂದ ಮಾಲಗತ್ತಿ (ಸಂ), ಕನ್ನಡ ಕಾವ್ಯದಲ್ಲಿ ದಲಿತ ಧ್ವನಿಗಳು, ೧೯೯೭, ವಿಚಾರವಾದಿ ಪ್ರಕಾಶನ, ಮೈಸೂರು.

೮. ಅರವಿಂದ ಮಾಲಗತ್ತಿ, ನಾದನಿನಾದ, ೧೯೯೯, ಶೈಲ ಪ್ರಕಾಶನ, ಮುದ್ದೇಬಿಹಾಳ.

೯. ಅರವಿಂದ ಮಾಲಗತ್ತಿ, ಸಿಲಿಕಾನ್ ಸಿಟಿ ಮತ್ತು ಕೋಗಿಲೆ, ೨೦೦೩, ಅಭಿರುಚಿ ಪ್ರಕಾಶನ, ಮೈಸೂರು.

೧೦. ಆಂಜನೇಯ ಜಾಲಿಬೆಂಚಿ, ಕೆಂಪುರೆಕ್ಕೆಯ ಹಕ್ಕಿ, ೧೯೯೨, ಜಾಲಿಬೆಂಚಿ ಪ್ರಕಾಶನ, ರಾಯಚೂರು.

೧೧. ಈರಣ್ಣ ಕರುನಾಡಕರ್ (ಸಂ), ಕತ್ತಲು ಲೋಕದ ಕಾವ್ಯ, ೧೯೯೮, ಪ್ರತಿಭಾ ಪ್ರಕಾಶನ, ರಾಯಚೂರು.

೧೨. ಉಮೇಶ ಮೇಲಕೇರಿ, ನನ್ನೊಳಗಿನ ನೋವುಗಳು, ೨೦೧೦, ಶ್ರೀ ಲಕ್ಷ್ಮೀದೇವಿ ಸಾಹಿತ್ಯ ಪ್ರಕಾಶನ, ಕಟಗೇರಿ.

೧೩. ಕವಿತಾ ಮಲ್ಲಪ್ಪ, ಪ್ರಜಾಧ್ವನಿ, ೨೦೦೮, ಶ್ರೀ ಸಿದ್ಧಲಿಂಗೇಶ್ವರ ಬುಕ್ ಡಿಪೋ, ಗುಲ್ಬರ್ಗಾ.

೧೪. ಗಂಗಾರಾಂ ಚಂಡಾಳ, ಚಂಡಾಲರ ಕೂಗು, ೧೯೮೩, ಬಂಡಾಯ ಪ್ರಕಾಶನ. ಹೊನ್ನಾವರ.

೧೫. ಗಂಗಾರಾಂ ಚಂಡಾಳ, ಜೀವಸೆಲೆ, ೧೯೯೫, ಚೈತ್ರ ಪ್ರಕಾಶನ, ಕೋಲಾರ.

೧೬. ಗುರುಬಸವರಾಜ್. ಹಿ.ಮ. (ಸಂ), ಕಪ್ಪು ನಾಡಿನ ಕೆಂಪು ಸೂರ್ಯ, ೧೯೮೭, ಅಭಿವ್ಯಕ್ತಿ ಪ್ರಕಾಶನ, ಹಗರಿಬೊಮ್ಮನಹಳ್ಳಿ, ಬಳ್ಳಾರಿ.

೧೭. ಗೋವಿಂದರಾಜು. ಕೆ, ಹೂ ಮುಡಿದ ಖಡ್ಗಗಳ ಮೇಲೆ, ೧೯೯೧, ಚಿತ್ರಕೂಟ ಪ್ರಕಾಶನ, ಚಿಕ್ಕಮಗಳೂರು.

೧೮. ಗೋವಿಂದರಾಜು. ಕೆ, ಅನಾತನ ಭೇಟಿ ಅನಾದಿಯ ಜೊತೆ, ೧೯೯೯, ಕನ್ನಡ ಬಳಗ, ಮೈಸೂರು.

೧೯. ಗೋವಿಂದರಾಜು. ಕೆ, ವಾಲ್ಮೀಕಿಯ ಆಯಸ್ಸು ವ್ಯಾಸನ ಮನಸ್ಸು, ೨೦೦೮ : ಕಿಟಕಿ ಪ್ರಕಾಶನ, ಮೈಸೂರು.

೨೦. ಚೆನ್ನಬಸಪ್ಪ ಸಿ.ಎಂ, ಚೈತ್ರ ಬಂದಿದೆ, ೨೦೦೦, ತ್ವರಿತ ಮುದ್ರಣ, ಗದಗ.

೨೧. ಜಂಬಣ್ಣ ಅಮರಚಿಂತ, ಮಣ್ಣಲ್ಲಿ ಬಿರಿದ ಅಕ್ಷರ, ೧೯೯೧, ಬಂಡಾಯ ಸಾಹಿತ್ಯ ಪ್ರಕಾಶನ, ರಾಯಚೂರು.

೨೨. ಜಂಬಣ್ಣ ಅಮರಚಿಂತ, ಅಮರಚಿಂತ ಕಾವ್ಯ, ೧೯೯೩, ವಿಕಾಶ ವೇದಿಕೆ, ರಾಯಚೂರು.

೨೩. ಜಂಬಣ್ಣ ಅಮರಚಿಂತ, ಹರಿಯುವ ನದಿಗೆ ಮೈಯೆಲ್ಲ ಕಾಲು, ೨೦೦೩, ನಾಗಶ್ರೀ ಪ್ರಕಾಶನ, ಬೆಂಗಳೂರು

೨೪. ಜಂಬಣ್ಣ ಅಮರಚಿಂತ, ಮುಳ್ಳಿನ ಬಾಯಲ್ಲಿ ಹೂ ನಾಲಗೆ, ೨೦೦೫, ಸುಮುಖ ಪ್ರಕಾಶನ, ಬೆಂಗಳೂರು

೨೫. ಜನವಾಡಕರ ಎಸ್.ಎಂ, ಶೀಲ ತರಂಗ, ೨೦೦೫, ಭಾರತೀಯ ಬೌದ್ಧ ಧಮ್ಮ ಚಾರಿಟೇಬಲ್ ಟ್ರಸ್ಟ್, ಬೀದರ್

೨೬. ಜವರಯ್ಯ ಮ.ನ, ಅತ್ತೆ ಸೊಸೆ ಆತ್ಮಕತೆ, ೧೯೮೮, ಶ್ರೀಮತಿ ಸಿದ್ದಾರ್ಥ ಗ್ರಂಥಮಾಲೆ, ಮೈಸೂರು

೨೭. ಜವರಯ್ಯ ಮ.ನ, ಗುಲಾಮಿ, ೧೯೯೮, ಸಿದ್ಧಾರ್ಥ ಗ್ರಂಥಮಾಲೆ, ಮೈಸೂರು

೨೮. ಜವರಯ್ಯ ಮ.ನ, ವಿದ್ರೋಹ, ೨೦೦೧, ಬಹುಜನ ಮಾಧ್ಯಮ ಕೇಂದ್ರ, ಮೈಸೂರು.

೨೯. ದೊಡಮನಿ ಜೆ.ಪಿ, ಪ್ರತಿಧ್ವನಿ, ೨೦೦೭, ಸುಶೀಲ್ ಪ್ರಕಾಶನ, ತೇರದಾಳ

೩೦. ನಾಗರಾಜು ತಲಕಾಡು, ಜೀತಗಾರನ ಹಟ್ಟಿಯ ಹಾಡು, ೨೦೦೦, ಅಭಿರುಚಿ ಪ್ರಕಾಶನ, ಮೈಸೂರು.

೩೧. ನೆಲ್ಲಿಕಟ್ಟೆ ಎಸ್. ಸಿದ್ದೇಶ್, ಬಿಸಿಲು-ಮಳೆ, ೨೦೦೧, ನಾಡಿಗ್ ಪ್ರಕಾಶನ, ಚಿತ್ರದುರ್ಗ.

೩೨. ಪೂಜಾರಿ ಜಿ.ಬಿ, ಇದೊಂದು ಬದುಕು, ೨೦೦೨, ಕೆಂಧೂಳಿ ಪ್ರಕಾಶನ, ಶಹಾಪುರ.

೩೩. ಪೂಜರಿ ಜಿ.ಬಿ, ಬಿಸಿಲ ಭೂಮಿಯ ಕೋಗಿಲೆ, ೨೦೦೭, ಸುಜಾತ ಪ್ರಕಾಶನ, ಗುಲ್ಬರ್ಗಾ

೩೪. ಬಾಹುಸಾಹೇಬ ಟಿ. ಕಾಂಬಳೆ, ಸ್ಫೂರ್ತಿ, ೨೦೧೧, ಸತ್ಯಶೋಧಕ ಪ್ರಕಾಶನ, ಅಬ್ಬಿಹಾಳ

೩೫. ಭಜಂತ್ರಿ ವೈ.ಎಂ, ಕೆಂಪು ನೀರು, ೨೦೧೯, ದಲಿತ ಸಾಹಿತ್ಯ ಪರಿಷತ್, ಗದಗ

೩೬. ಭಾಸ್ಕರ್ ಟಿ.ಎಂ, ಹೊಸದಾರಿ, ೧೯೮೯, ಲಲಿತಾ ಪ್ರಕಾಶನ, ಗುಲ್ಬರ್ಗಾ

೩೭. ಭಾಸ್ಕರ್ ಟಿ,ಎಂ, ಮಾತಾಡುವ ಎಲುಬುಗಳು, ೨೦೦೪, ಮರುಗ ಪ್ರಕಾಶನ, ಗುಲ್ಬರ್ಗಾ.

೩೮. ಭಾಸ್ಕರ್ ಟಿ,ಎಂ. (ಸಂ), ಪಂಚಶೀಲನ ಮೂಕನಾಯಕ, ೨೦೦೫, ಮರುಗ ಪ್ರಕಾಶನ, ಗುಲ್ಬರ್ಗಾ.

೩೯. ಮಲ್ಲಿಕಾರ್ಜುನ ಜೆ. ಆಮ್ಲೆ, ಕೆಂಪು ಸೂರ್ಯ ಮತ್ತು ಇತರ ಕವನಗಳು, ೧೯೯೭, ನವಕ್ರಾಂತಿ ಪ್ರಕಾಶನ, ಸೋನಕೇರ, ಬೀದರ್.

೪೦. ಮಲ್ಲಿಕಾರ್ಜುನ ಕೆ.ಹೆಚ್, ಚೇತನ, ೨೦೦೮, ಕಾಂಚನ-ಅರ್ಚನ ಪ್ರಕಾಶನ, ಗುಲ್ಬರ್ಗಾ.

೪೧. ಮಹದೇವಯ್ಯ ಟಿ.ಆರ್. (ಸಂ), ದಲಿತೋದಯ, ೧೯೯೬, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೪೨. ಮಹದೇವ ಕುಕ್ಕರಹಳ್ಳಿ, ಬೆಂಕಿಯೊಳಗಿನ ಬದುಕು, ೨೦೦೬, ಸಹಜ ಪ್ರಕಾಶನ, ಮೈಸೂರು.

೪೩. ಮಹದೇವ ಕುಕ್ಕರಹಳ್ಳಿ, ನನ್ನ ದೇಶ ನನ್ನ ಜನ, ೨೦೦೯, ಸಹಜ ಪ್ರಕಾಶನ, ಮೈಸೂರು.

೪೪. ಮಾನಸಯ್ಯ ಆರ್, ರಕ್ತದ ರಂಗೋಲಿ, ೨೦೦೭, ದುಡಿಮೆ ಪ್ರಕಾಶನ, ಬೆಂಗಳೂರು.

೪೫. ಮಾಯಣ್ಣಸ್ವಾಮಿ ಕಿರಂಗೂರು, ಹೆಬ್ಬೆಟ್ಟಿನ ಗುರುತು, ೨೦೦೮, ಶ್ರೀನಿಧಿ ಗ್ರಾಫಿಕ್ಸ್, ಬೆಂಗಳೂರು.

೪೬. ಮಿತಾ ದೇವನೂರು, ಮೋಡದಲ್ಲಿ ಒಂದು ಕಣ, ೨೦೦೩, ಸಂಗಾತಿ ಪ್ರಕಾಶನ, ಬೆಂಗಳೂರು.

೪೭. ಮುನಿವೆಂಕಟಪ್ಪ ವಿ, ಕೆಂಡದ ನಡುವೆ, ೧೯೮೨, ಪಂಚಮ ಪ್ರಕಾಶನ, ಬೆಂಗಳೂರು.

೪೮. ಮುನಿವೆಂಕಟಪ್ಪ ವಿ, ಸ್ವಾಭಿಮಾನದ ಬೀಡಿಗೆ, ೧೯೮೮, ವಿಚಾರವಾದಿ ಪ್ರಕಾಶನ, ಮೈಸೂರು.

೪೯. ಮುನಿವೆಂಕಟಪ್ಪ ವಿ, ಐಕ್ಯಗೀತೆ, ೧೯೯೧, ವಿಚಾರವಾದಿ ಪ್ರಕಾಶನ, ಮೈಸೂರು.

೫೦. ಮುನಿವೆಂಕಟಪ್ಪ ವಿ, ಕಾಡು ಕಣಿವೆಯ ಹಕ್ಕಿ, ೧೯೯೯, ವಿಚಾರವಾದಿ ಪ್ರಕಾಶನ, ಮೈಸೂರು.

೫೧. ಮುನಿವೆಂಕಟಪ್ಪ ವಿ, (ಸಂ), ಬಹುಜನ ಕಾವ್ಯ, ೨೦೦೧, ವಿಚಾರವಾದಿ ಪ್ರಕಾಶನ, ಮೈಸೂರು.

೫೨. ಮುಳ್ಳೂರು ನಾಗರಾಜ, ನೆಲದ ಜೋಗುಳ, ೧೯೯೨, ವಿಚಾರವಾದಿ ಪ್ರಕಾಶನ, ಮೈಸೂರು.

೫೩. ಮೂಡ್ನಾಕೂಡು ಚಿನ್ನಸ್ವಾಮಿ, ಕೊಂಡಿಗಳು ಮತ್ತು ಮುಳ್ಳು ಬೇಲಿಗಳು, ೧೯೮೯, ಭಾಗ್ಯ ಪ್ರಕಾಶನ, ಬೆಂಗಳೂರು.

೫೪. ಮೂಡ್ನಾಕೂಡು ಚಿನ್ನಸ್ವಾಮಿ, ಗೋಧೂಳಿ, ೧೯೯೩, ಶುಭದ ಪ್ರಕಾಶನ, ಬೆಂಗಳೂರು.

೫೫. ಮೂಡ್ನಾಕೂಡು ಚಿನ್ನಸ್ವಾಮಿ, ನಾನೊಂದು ಮರವಾಗಿದ್ದರೆ, ೧೯೯೮, ವಿಶ್ವಾಲಯ ಪ್ರಕಾಶನ, ಬೆಂಗಳೂರು.

೫೬. ಮೂಡ್ನಾಕೂಡು ಚಿನ್ನಸ್ವಾಮಿ, ಮತ್ತೆ ಮಳೆ ಬರುವ ಮುನ್ನ, ೨೦೦೦, ದಲಿತ ಸಾಹಿತ್ಯ ಪರಿಷತ್ತು, ಗದಗ.

೫೭. ಮೂಡ್ನಾಕೂಡು ಚಿನ್ನಸ್ವಾಮಿ, ಕನಕಾಂಬರಿ, ೨೦೦೩, ಅಭಿರುಚಿ ಪ್ರಕಾಶನ, ಮೈಸೂರು.

೫೮. ಮೂಡ್ನಾಕೂಡು ಚಿನ್ನಸ್ವಾಮಿ, ಚಂದಿರನ ಕಣ್ಣು ಇಂಗಲಾರದ ಹುಣ್ಣು, ೨೦೦೪, ಮಾನವಧರ್ಮ ಪೀಠ, ಬೆಂಗಳೂರು.

೫೯. ಮೂಡ್ನಾಕೂಡು ಚಿನ್ನಸ್ವಾಮಿ, ಬುದ್ಧ ಬೆಳದಿಂಗಳು, ೨೦೧೦, ಅಕ್ಷರ ಪ್ರಕಾಶನ, ಹೆಗ್ಗೋಡು.

೬೦. ಮೊಗಳ್ಳಿ ಗಣೇಶ್, ದೇವಸ್ಮಶಾನ, ೨೦೦೮, ಪಲ್ಲವ ಪ್ರಕಾಶನ, ಚನ್ನಪಟ್ಟಣ.

೬೧. ಯಲ್ಲಣ್ಣ ಇಲಾಳ, ಹಸಿದ ಗೊಮ್ಮಟಗಳು, ೧೯೮೯, ವಿಶಾಲ ಪ್ರಕಾಶನ, ಮಾದನ ಹಿಪ್ಪರಗಾ.

೬೨. ಯಲ್ಲಪ್ಪ ಬಿ.ಎಂ, ಬದುಕೊಂದು ಭಾವಗೀತೆ, ೨೦೦೫, ದಲಿತ ಸಾಹಿತ್ಯ ಪರಿಷತ್ತು, ಗದಗ.

೬೩. ಯಲ್ಲಪ್ಪ ಟಿ, ಕಡಲಿಗೆ ಕಳಿಸಿದ ದೀಪ, ೨೦೦೮, ಸಂಚಯ, ಬೆಂಗಳೂರು.

೬೪. ರಾಘವೇಂದ್ರರಾವ್ ಹೆಚ್.ಎಸ್, (ಸಂ), ಅರವಿಂದ ಮಾಲಗತ್ತಿ ಅವರ ಆಯ್ದ ಕವಿತೆಗಳು, ೨೦೦೪, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೬೫. ರಾಮಪ್ಪ ಮಾದರ, ಕೆರ ಹೊತ್ತ ಬಸವ, ೨೦೦೫, ಜನವಿದ್ಯಾ ಪ್ರಸಾರಂಗ, ಹೂವಿನಹಡಗಲಿ.

೬೬. ಲಕ್ಕೂರು ಸಿ ಆನಂದ, ಊರಿಂದ ಊರಿಗೆ, ೨೦೦೪, ಸಿ.ವಿ.ಜಿ. ಪಬ್ಲಿಕೇಷನ್, ಬೆಂಗಳೂರು.

೬೭. ಲಕ್ಕೂರು ಸಿ ಆನಂದ, ಇಪ್ಪತ್ತರ ಕಲ್ಲಿನ ಮೇಲೆ, ೨೦೦೬, ಸಿ.ವಿ.ಜಿ. ಪಬ್ಲಿಕೇಷನ್, ಬೆಂಗಳೂರು.

೬೮. ಲಕ್ಕೂರು ಸಿ ಆನಂದ, ಬಟವಾಡೆಯಾಗದ ರಶೀದಿ, ೨೦೦೮, ಅಭಿನವ ಪ್ರಕಾಶನ, ಬೆಂಗಳೂರು

೬೯. ಲಕ್ಕೂರು ಸಿ ಆನಂದ, ಇತಿ ನಿನ್ನ ವಿಧೇಯ, ೨೦೧೦, ಕಣ್ವಾ ಪ್ರಕಾಶನ, ಬೆಂಗಳೂರು

೭೦. ಲಕ್ಷ್ಮಣ ಎಂ, ಭಗ್ನಧ್ವನಿಗಳ ಅಗ್ನಿಲಯ, ೧೯೮೯, ಮುಕ್ತ ಪ್ರಕಾಶನ, ಗಂಗಾವತಿ.

೭೧. ಲೋಕಾಪುರ ಎಂ.ಎಸ್, ಕನ್ನಡ ದಲಿತ ಕಾವ್ಯ, ೧೯೯೯, ನಿರ್ದೇಶಕರು ಪ್ರಸಾರಾಂಗ, ಧಾರವಾಡ

೭೨. ವಿಠ್ಠಲರಾವ್ ಚಾಂಬಾಳ್, ಭೀಮ ಭಜನೆ, ೧೯೮೯, ಶಂಕರ ಕೋಡ್ಲು ಪ್ರಕಾಶನ, ಗುಲ್ಬರ್ಗಾ.

೭೩. ವಿಠ್ಠಲರಾವ್ ಚಾಂಬಾಳ್, ಭೀಮಜ್ಯೋತಿ, ೧೯೯೦, ಸಮತಾ ಕಲಾ ಹವ್ಯಾಸ ಸಂಘ, ಗುಲ್ಬರ್ಗಾ.

೭೪. ವಿಠ್ಠಲರಾವ್ ಚಾಂಬಾಳ್, ಭೀಮಬೆಳಕು, ೧೯೯೧, ಸಮತಾ ಕಲಾ ಹವ್ಯಾಸ ಸಂಘ, ಗುಲ್ಬರ್ಗಾ.

೭೫. ವಿಠ್ಠಲರಾವ್ ಚಾಂಬಾಳ್, ಭೀಮನಾಮ ಗೀತಾವಳಿ, ೧೯೯೮, ಸತೀಶ ಪ್ರಕಾಶನ, ಗುಲ್ಬರ್ಗಾ

೭೬. ವಿಠ್ಠಲರಾವ್ ಚಾಂಬಾಳ್, ಭೀಮಶಕ್ತಿ, ೨೦೦೩, ಬಹುಜನ ಹಿತಾಯ ಬಹುಜನ ಸುಖಾಯ ಪ್ರಕಾಶನ ಹುಮನಾಬಾದ್

೭೭. ವಿಜಯ ಪಾಟೀಲ, ಮಂಗ್ಳೂರು ವಿಜಯ (ಸಂ), ಕಪ್ಪು ಜನರ ಕೆಂಪು ಕಾವ್ಯ, ೧೯೭೭, ವಿಮೋಚನಾ ಪ್ರಕಾಶನ, ಧಾರವಾಡ

೭೮. ವಿನಾಯಕ ಕಮತದ, ಒಡಲ ಹಕ್ಕಿಯ ಹಾಡು, ೨೦೦೨, ದಲಿತ ಸಾಹಿತ್ಯ ಪರಿಷತ್ತು, ಗದಗ.

೭೯. ವೆಂಕಟಸ್ವಾಮಿ ಎಂ, ಬೆಟ್ಟಗುಡ್ಡಗಳ ಬೋಗುಣಿಯಲ್ಲಿ, ೧೯೯೬, ಕ್ರಾಂತಿ ಪ್ರಕಾಶನ, ಬೆಂಗಳೂರು.

೮೦. ವೆಂಕಟರಾಜು ಎನ್.ಸಿ, ಅವ್ವ, ೨೦೦೯, ದಲಿತ ಸಾಹಿತ್ಯ ಪರಿಷತ್ತು, ಗದಗ.

೮೧. ವೆಂಕಮ್ಮ ಎನ್.ಡಿ, ಭೀಮ ಸಂದೇಶ, ೧೯೯೮, ಶಂಭೂಕ ಪ್ರಕಾಶನ, ಬಳ್ಳಾರಿ

೮೨. ವೆಂಕಮ್ಮ ಎನ್.ಡಿ, ಬಯಲೇ ಸಂಗಾತಿ, ೨೦೦೪, ಶಂಭೂಕ ಪ್ರಕಾಶನ, ಬಳ್ಳಾರಿ

೮೩. ಶರಣಮ್ಮ ಗೊರೇಬಾಳ, ಕನವರಿಕೆ, ೨೦೦೭, ಲಿಂಗರಾಜ ಪ್ರಕಾಶನ, ಧಾರವಾಡ.

೮೪. ಶಿವಕುಮಾರ್ ಜಿ, ಗ್ಯಾನಪ್ಪ ಬಡಿಗೇರ, ವೆಂಕಟೇಶ್ ಸಿ, ನದಾಫ್ ಯಳವತ್ತಿ, ಜ್ವಾಲಾಮುಖಿ, ೨೦೦೦, ಸಿರಿಭಾರತಿ ಪ್ರಕಾಶನ, ಬೆಂಗಳೂರು

೮೫. ಶಿವಕುಮಾರ್ ಜಿ, ಹೊಲಗೇರಿಯ ಬೆಳದಿಂಗಳು, ೨೦೦೨, ಆರ್ ಯು ಪಬ್ಲಿಕೇಶನ್, ಬೆಂಗಳೂರು.

೮೬. ಶಿವಕುಮಾರ್ ಕಂಪ್ಲಿ, ಅಗ್ನಿ ಕಿರೀಟ, ೨೦೦೭, ಸಂಸ್ಕೃತಿ ಪ್ರಕಾಶನ, ಬಳ್ಳಾರಿ.

೮೭. ಶೇಖರ್ ಎಂ.ಎಸ್, ಗರಿಕೆ, ೨೦೧೦, ಪಲ್ಲವ ಪ್ರಕಾಶನ, ಚನ್ನಪಟ್ಟಣ

೮೮. ಸಣ್ಣವೀರಣ್ಣ ಹೆಚ್ ದೊಡ್ಡಮನಿ, ಕಂಗಳ ಮುಂದಣ ಕತ್ತಲೆ, ೨೦೦೯, ಗಂಗಬಸವ ಪ್ರಕಾಶನ, ಗದಗ.

೮೯. ಸತ್ಯಾನಂದ ಪಾತ್ರೋಟ, ಕರಿನೆಲದ ಕಲೆಗಳು, ೧೯೮೫, ಕಾಳಿದಾಸ ಮಾಧ್ಯಮಿಕ ಶಾಲೆ, ಬಾಗಲಕೋಟೆ.

೯೦. ಸತ್ಯಾನಂದ ಪಾತ್ರೋಟ, ಜಾಜಿ ಮಲ್ಲಿಗೆ, ೧೯೯೦, ಸಮತಾ ಪ್ರಕಾಶನ, ಬಾಗಲಕೋಟೆ

೯೧. ಸತ್ಯಾನಂದ ಪಾತ್ರೋಟ, ಕಲ್ಲಿಗೂ ಗೊತ್ತಿರುವ ಕತೆ, ೧೯೯೪, ಸಮತಾ ಪ್ರಕಾಶನ. ಬಾಗಲಕೋಟೆ.

೯೨. ಸತ್ಯಾನಂದ ಪಾತ್ರೋಟ, ನದಿಗೊಂದು ಕನಸು ಮತ್ತು ಅವಳು, ೨೦೦೪, ಸಮತಾ ಪ್ರಕಾಶನ, ಬಾಗಲಕೋಟೆ.

೯೩. ಸದಾಶಿವ ದೊಡ್ಡಮನಿ (ಸಂ), ಧರೆ ಹತ್ತಿ ಉರಿದೊಡೆ, ೨೦೦೩, ದಲಿತ ಸಾಹಿತ್ಯ ಪರಿಷತ್ತು, ಗದಗ.

೯೪. ಸದಾಶಿವ ದೊಡ್ಡಮನಿ, ನೆರಳಿಗೂ ಮೈಲಿಗೆ, ೨೦೦೯, ದಲಿತ ಸಾಹಿತ್ಯ ಪರಿಷತ್ತು, ಗದಗ

೯೫. ಸರಸ್ವತಿ ದು, ಜೀವ ಸಂಪಿಗೆ, ೨೦೦೬, ಅಭಿನವ ಪ್ರಕಾಶನ, ಬೆಂಗಳೂರು.

೯೬. ಸಾಸಾ ರಾಮಮೂರ್ತಿ, ಬೂದಿ ಗೊಬ್ಬರದ ಹಾಡು, ೧೯೯೦, ರವಿ ಪ್ರಕಾಶನ, ಬೆಂಗಳೂರು.

೯೭. ಸಾಸಾ ರಾಮಮೂರ್ತಿ, ಗುಬ್ಬಿ ಕೂತಾವ ಕಣ್ಣೊಳಗೆ, ೧೯೯೬, ಸಾಸಾರಾಂ, ಬೆಂಗಳೂರು.

೯೮. ಸ್ವಾಮಿರಾವ್ ಕುಲಕರ್ಣಿ (ಸಂ), ದಲಿತ ದನಿ, ೨೦೦೦, ಶಿರಪುರ ಪ್ರಕಾಶನ, ಗುಲಬರ್ಗಾ.

೯೯. ಸಿದ್ದಯ್ಯ ಕೆ.ಬಿ, ಬಕಾಲ, ೧೯೮೮, ಚಾಲನಾ ಪ್ರಕಾಶನ, ತುಮಕೂರು.

೧೦೦. ಸಿದ್ದಯ್ಯ ಕೆ.ಬಿ, ಅನಾತ್ಮ, ೨೦೦೩, ನೆಲಸಿರಿ ಪ್ರಕಾಶನ, ತುಮಕೂರು.

೧೦೧. ಸಿದ್ದಯ್ಯ ಕೆ.ಬಿ, ಗಲ್ಲೆಬಾನಿ, ೨೦೦೯, ನಮ್ಮ ಪ್ರಕಾಶನ, ತಿಪಟೂರು.

೧೦೨. ಸಿದ್ದಯ್ಯ ಕೆ.ಬಿ, ಎಚ್. ಗೋವಿಂದಯ್ಯ, ನಟರಾಜ ಬೂದಾಳ್ (ಸಂ), ದಲಿತ ಕಾವ್ಯ, ೧೯೯೬, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೦೩. ಸಿದ್ಧಲಿಂಗಯ್ಯ, ಹೊಲೆ ಮಾದಿಗರ ಹಾಡು, ೧೯೭೫, ಮುಂಗಾರು ಪ್ರಕಾಶನ, ಬೆಂಗಳೂರು.

೧೦೪. ಸಿದ್ಧಲಿಂಗಯ್ಯ, ಸಾವಿರಾರು ನದಿಗಳು, ೧೯೭೫, ಸಮುದಾಯ ಪ್ರಕಾಶನ, ಬೆಂಗಳೂರು.

೧೦೫. ಸಿದ್ಧಲಿಂಗಯ್ಯ, ಕಪ್ಪು ಕಾಡಿನ ಹಾಡು, ೧೯೮೨, ಅಜಂತಾ ಪ್ರಕಾಶನ, ಬೆಂಗಳೂರು.

೧೦೬. ಸಿದ್ಧಲಿಂಗಯ್ಯ, ಆಯ್ದ ಕವಿತೆಗಳು, ೧೯೯೭, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೦೭. ಸಿದ್ಧಲಿಂಗಯ್ಯ, ಮೆರವಣಿಗೆ, ೨೦೦೦, ಅಂಕಿತ ಪುಸ್ತಕ, ಬೆಂಗಳೂರು.

೧೦೮. ಸುಬ್ಬು ಹೊಲೆಯಾರ್, ಸೂಜಿಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು, ೨೦೦೩, ದ್ರಾವಿಡ ಪ್ರಕಾಶನ, ಮೈಸೂರು.

೧೦೯. ಸುಳ್ಳದ್ ಎಸ್.ಪಿ, ರೊಚ್ಚು, ೧೯೯೪, ಮಿಲಿಂದ– ಆನಂದ ಪ್ರಕಾಶನ, ಗುಲ್ಬರ್ಗಾ

೧೧೦. ಸುಳ್ಳದ್ ಎಸ್.ಪಿ, ಗರ್ದಿ ಗಮ್ಮತ್, ೨೦೦೮, ಮಿಲಿಂದ–ಆನಂದ ಪ್ರಕಾಶನ, ಗುಲ್ಬರ್ಗಾ

೧೧೧. ಸೋಮಣ್ಣ ಜೆ, ಮಾತು ಮೌನದ ಮಧ್ಯೆ, ೧೯೯೭, ಸಂಧ್ಯಾ ಪ್ರಕಾಶನ, ಕೊಡಗು.

೧೧೨. ಹಂಪಣ್ಣ ಎ.ಕೆ, ದೀಪವಂಶ, ೨೦೦೯, ಶಾಂತಮ್ಮ ಪ್ರಕಾಶನ, ಚಿತ್ರದುರ್ಗ.ಶ

೧೧೩. ಹನಸೋಗೆ ಸೋಮಶೇಖರ್, ಭೀಮ ಪಲ್ಲವಿ, ೨೦೦೨, ಜಸ್ಟೀಸ್ ಪಬ್ಲಿಕೇಷನ್, ಮೈಸೂರು.

೧೧೪. ಹನಸೋಗೆ ಸೋಮಶೇಖರ್, ಹೊನ್ನುಡಿ, ೨೦೦೨, ಜಸ್ಟೀಸ್ ಪಬ್ಲಿಕೇಷನ್, ಮೈಸೂರು.

೧೧೫. ಹನಸೋಗೆ ಸೋಮಶೇಖರ್, ಮೌನ ಮೊರೆತ, ೨೦೦೯, ಅಂಬಾರಿ ಪ್ರಕಾಶನ, ಮೈಸೂರು.

೧೧೬. ಹನುಮಂತಯ್ಯ ಎಲ್, ಕಪ್ಪು ಕಣ್ಣಿನ ಹುಡುಗಿ, ೧೯೯೧, ಪಂಚಮ ಪ್ರಕಾಶನ, ಬೆಂಗಳೂರು

೧೧೭. ಹನುಮಂತಯ್ಯ ಎಲ್ (ಸಂ), ಅಂಬೇಡ್ಕರ್ ಕವಿತೆಗಳು, ೧೯೯೨, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೧೮. ಹನುಮಂತಯ್ಯ ಎಲ್, ಅವ್ವ, ೧೯೯೫, ಸಾರಾ ಪಬ್ಲಿಕೇಷನ್ಸ್, ಬೆಂಗಳೂರು.

೧೧೯. ಹನುಮಂತಯ್ಯ ಎಲ್, ಅವ್ವನ ಕವಿತೆ, ೧೯೯೯, ಶಕ್ತಿ ಮುದ್ರಣ ಪ್ರಕಾಶನ, ಬೆಂಗಳೂರು.

೧೨೦. ಹನುಮಂತಯ್ಯ ಎಲ್, ಅಕ್ಷಾರ ಅಕ್ಷಾರವೇ, ೨೦೦೨, ಪ್ರಗತಿ ಪ್ರಕಾಶನ, ಬೆಂಗಳೂರು.

೧೨೧. ಹನುಮಂತರಾವ್ ಬಿ. ದೊಡ್ಡಮನಿ, ನೊಂದವರ ಹಾಡು, ೧೯೯೫, ಶಾಂತಕುಮಾರ ಪ್ರಕಾಶನ, ಮಲ್ಲಾಬಾದ್

೧೨೨. ಹನುಮಂತರಾವ್ ಬಿ. ದೊಡ್ಡಮನಿ, ನಮ್ಮ ದೇಶ ನಮ್ಮ ಜನ, ೧೯೯೭, ಶಾಂತಕುಮಾರ ಪ್ರಕಾಶನ, ಮಲ್ಲಾಬಾದ್.

೧೨೩. ಹನುಮಂತಯ್ಯ ಎನ್.ಕೆ, ಹಿಮದ ಹೆಜ್ಜೆ, ೧೯೯೮, ಕನ್ನಡ ಸಂಘ, ಸಂತ ಜೋಸೆಫ್ ವಾಣಿಜ್ಯ ಕಾಲೇಜು, ಬೆಂಗಳೂರು.

೧೨೪. ಹನುಮಂತಯ್ಯ ಎನ್.ಕೆ, ಚಿತ್ರದ ಬೆನ್ನು, ೨೦೦೬, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು

೧೨೫. ಹುರುಗಲವಾಡಿ ರಾಮಯ್ಯ (ಸಂ), ಹೊಸನಾಡ ಕಟ್ಟೋಣ, ೨೦೦೭, ಸ್ವಾಭಿಮಾನಿ ಪ್ರಕಾಶನ, ಬೆಂಗಳೂರು.

೧೨೬. ಹೊಸೂರು ಮುನಿಶಾಮಪ್ಪ, ದಲಿತ ಜನರ ಕಿರಣ, ೧೯೯೧, ವಾಹಿನಿ ಪ್ರಕಾಶನ, ಬೆಂಗಳೂರು.

೧೨೭. ಹೊಸೂರು ಮುನಿಶಾಮಪ್ಪ, ಮಾದಾರ ತಾಯಿ, ೧೯೯೩, ವಾಹಿನಿ ಪ್ರಕಾಶನ, ಬೆಂಗಳೂರು.

೧೨೮. ಹೋರಾಟದ ಹಾಡುಗಳು, ಬೆಳ್ಳಿಚುಕ್ಕಿ ಪುಸ್ತಕಾಲಯ, ಮೈಸೂರು.

೧೨೯. ಹೋರಾಟದ ಹಾಡುಗಳು, ವಿವಿಧ ಲೇಖಕರು, ೧೯೮೦, ಕರ್ನಾಟಕ ದಲಿತ ಸಂಘರ್ಷ ಸಮಿತಿ ಪ್ರಕಟಣೆ, ಬೆಂಗಳೂರು

೧೩೦. ಹೋರಾಟದ ಹಾಡುಗಳು, ವಿವಿಧ ಲೇಖಕರು, ೧೯೯೨, ಕರ್ನಾಟಕ ದಲಿತ ವಿದ್ಯಾರ್ಥಿ ಒಕ್ಕೂಟ, ಬೆಂಗಳೂರು

೧೩೧. ಹೋರಾಟದ ಹಾಡುಗಳು, ವಿವಿಧ ಲೇಖಕರು, ೧೯೯೪, ವಿಚಾರವಾದಿ ಪ್ರಕಾಶನ, ಮೈಸೂರು.

ಆ. ಪರಾಮರ್ಶನ ಸಾಹಿತ್ಯ

೧. ಅರ್ಜುನ ಗೊಳಸಂಗಿ (ಸಂ), ದಲಿತಜ್ಞ, ೨೦೦೦, ದಲಿತ ಸಾಹಿತ್ಯ ಪರಿಷತ್, ಗದಗ.

೨. ಅರ್ಜುನ ಗೊಳಸಂಗಿ (ಸಂ), ಕನ್ನಡ ದಲಿತ ಸಾಹಿತ್ಯ, ೨೦೦೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩. ಅರ್ಜುನ ಗೊಳಸಂಗಿ, ದಲಿತರ ಬದುಕು ಮತ್ತು ಸಂಸ್ಕೃತಿ, ೨೦೦೪, ವಿಮೋಚನಾ ಪ್ರಕಾಶನ, ಬೆಳಗಾವಿ

೪. ಅರ್ಜುನ ಗೊಳಸಂಗಿ (ಸಂ), ಹುಸಿ ಇಲ್ಲದ ಗೂಡಿನೊಳಗೆ, ೨೦೦೫, ದಲಿತ ಸಾಹಿತ್ಯ ಪರಿಷತ್, ಗದಗ.

೫. ಅರ್ಜುನ ಗೊಳಸಂಗಿ (ಸಂ), ಕಾವ್ಯ ಮಂಥನ, ೨೦೦೯, ದಲಿತ ಸಾಹಿತ್ಯ ಪರಿಷತ್, ಗದಗ.

೬. ಅನಂತಮೂರ್ತಿ ಯು.ಆರ್, ಸನ್ನಿವೇಶ, ೧೯೭೪, ಅಕ್ಷರ ಪ್ರಕಾಶನ, ಹೆಗ್ಗೋಡು

೭. ಅನಂತಮೂರ್ತಿ ಯು.ಆರ್, ಪೂರ್ವಾಪರ, ೧೯೯೬, ಅಕ್ಷರ ಪ್ರಕಾಶನ, ಹೆಗ್ಗೋಡು

೮. ಅಪ್ಪಗೆರೆ ಸೋಮಶೇಖರ, ಸುಟ್ಟಾವು ಬೆಳ್ಳಿಕಿರಣ, ೨೦೦೬, ಪ್ರಸಾದ್ ಏಜೆನ್ಸಿಸ್, ಮೈಸೂರು.

೯. ಅಪ್ಪಗೆರೆ ಸೋಮಶೇಖರ, ಅಂತಃಕರಣ, ೨೦೦೭, ಅಪ್ಪಗೆರೆ ಸೋಮಶೇಖರ್ ಪ್ರಕಾಶನ, ಚನ್ನಪಟ್ಟಣ

೧೦. ಅಪ್ಪಗೆರೆ ಸೋಮಶೇಖರ್ (ಸಂ), ಬಯಲ ಬೆಳಕು, ೨೦೧೦, ದೇಸಿ ಪುಸ್ತಕ, ಬೆಂಗಳೂರು.

೧೧. ಅಮರೇಶ ನುಗಡೋಣಿ (ಸಂ), ಕನ್ನಡ ಅಧ್ಯಯನ ಸಂ. ೧೨, ಸಂಚಿಕೆ. ೨, ೨೦೦೭, ಪ್ರಸಾರಾಂಗ, ಹಂಪಿ.

೧೨. ಅರವಿಂದ ಮಾಲಗತ್ತಿ, ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನೆ, ೧೯೮೯, ಹೊಸದಿಕ್ಕು ಪ್ರಕಾಶನ, ಬೆಂಗಳೂರು

೧೩. ಅರವಿಂದ ಮಾಲಗತ್ತಿ, ಗೌರ್ಮೆಂಟ್ ಬ್ರಾಹ್ಮಣ, ೧೯೯೪, ಅಕ್ಷರ ಪ್ರಕಾಶನ, ಹೆಗ್ಗೋಡು

೧೪. ಅರವಿಂದ ಮಾಲಗತ್ತಿ, ದಲಿತ ಸಾಹಿತ್ಯ ಪ್ರವೇಶಿಕೆ, ೧೯೯೭, ಶೈಲ ಪ್ರಕಾಶನ, ಮುದ್ದೇಬಿಹಾಳ

೧೫. ಅರವಿಂದ ಮಾಲಗತ್ತಿ, ದಲಿತ ಯುಗ ಮತ್ತು ಕನ್ನಡ ಸಾಹಿತ್ಯ, ೧೯೯೯, ಚೇತನ ಬುಕ್ ಹೌಸ್, ಮೈಸೂರು

೧೬. ಅರವಿಂದ ಮಾಲಗತ್ತಿ, ಸಾಹಿತ್ಯ ಸಂಸ್ಕೃತಿ ಮತ್ತು ದಲಿತ ಪ್ರಜ್ಞೆ, ೨೦೦೩, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೭. ಅಶೋಕ ಟಿ.ಪಿ, ಸಾಹಿತ್ಯ ಸಂಪರ್ಕ, ೧೯೮೯, ಅಕ್ಷರ ಪ್ರಕಾಶನ, ಸಾಗರ.

೧೮. ಆಮೂರ ಜಿ.ಎಸ್, ಕೊರಳು–ಕೊಳಲು, ೨೦೦೫, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.

೧೯. ಆರ್ಕೆ ಮಣಿಪಾಲ, ವಿಮರ್ಶೆಯ ಸವಾಲು, ೨೦೦೬, ಸಂವಾದ ಪ್ರಕಾಶನ, ಮಣಿಪಾಲ

೨೦. ಕೀರ್ತಿನಾಥ ಕುರ್ತಕೋಟಿ, ಯುಗಧರ್ಮ ಮತ್ತು ಸಾಹಿತ್ಯ ದರ್ಶನ, ೧೯೯೧, ಮನೋಹರ ಗ್ರಂಥಮಾಲಾ, ಧಾರವಾಢ

೨೧. ಕೀರ್ತಿನಾಥ ಕುರ್ತಕೋಟಿ, ಬಯಲು ಆಲಯ, ೧೯೯೨, ಪ್ರಸಾರಾಂಗ, ಹಂಪಿ.

೨೨. ಕುಮಾರಸ್ವಾಮಿ ಎಚ್, ದಲಿತ ಚಳುವಳಿ ಮತ್ತು ಸಾಮಾಜಿಕ ನ್ಯಾಯ, ೨೦೧೦, ದಲಿತ ಅಭಿವೃದ್ಧಿ ಸಂಸ್ಥೆ. ಹೊಸಪೇಟೆ

೨೩. ಕುಶಾಲ ಬರಗೂರು, ಪ್ರೊ. ಅರವಿಂದ ಮಾಲಗತ್ತಿ ಅವರ ಕಾವ್ಯಾನುಸಂಧಾನ, ೨೦೦೫, ಈಶ್ವರಿ ಪ್ರಕಾಶನ, ಮೈಸೂರು

೨೪. ಕೃಷ್ಣಯ್ಯ ಎಂ.ಎಚ್ (ಸಂ), ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ, ೧೯೯೩, ಉದಯಭಾನು ಕಲಾಸಂಘ, ಬೆಂಗಳೂರು.

೨೫. ಕೃಷ್ಣಯ್ಯ ಎಂ.ಎಚ್ (ಪ್ರ.ಸಂ), ಆಧುನಿಕ ಕನ್ನಡ ಕಾವ್ಯ, ೧೯೯೪, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.

೨೬. ಕೃಷ್ಣಪ್ಪ ಬಿ, ಪ್ರೊ.ಬಿ. ಕೃಷ್ಣಪ್ಪ ಚಿಂತನೆಗಳು–ಬರಹಗಳು, ೧೯೯೯, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೨೭. ಕೇಶವಮೂರ್ತಿ ಕೆ, ಮಾರ್ಗ ಸಾಹಿತ್ಯ, ೨೦೦೬, ಅಭಿರುಚಿ ಪ್ರಕಾಶನ, ಮೈಸೂರು.

೨೮. ಕೋಟಿಗಾನಹಳ್ಳಿ ರಾಮಯ್ಯ(ಸಂ), ತಲಪರಿಗೆ, ೨೦೦೫, ಅಭಿಮಾನಿ ಪ್ರಕಾಶನ, ಬೆಂಗಳೂರು.

೨೯. ಗಂಗಾರಾಂ ಚಾಂಡಾಲ, ಕರ್ನಾಟಕ ದಲಿತ ಚಳುವಳಿ ಮತ್ತು ಬಿ.ಆರ್. ಅಂಬೆಡ್ಕರ್ ಪ್ರಭಾವ, ೨೦೦೨, ಚೈತ್ರ ಪ್ರಕಾಶನ, ಕೋಲಾರ

೩೦. ಗಂಗೂ ಎಂ.ಎಸ್, ದಲಿತ ಚಳುವಳಿ ಮತ್ತು ದಲಿತತ್ವ (ಅನುವಾದ), ೨೦೦೧, ಅಂಬೇಡ್ಕರ್ ಸಂಶೋಧನಾ ಕೇಂದ್ರ, ತುಮಕೂರು

೩೧. ಗಣೇಶನ್ ಎಸ್, ದಲಿತ ಸಾಹಿತ್ಯ ಚಳುವಳಿ, ೧೯೮೨, ಪಂಚಮ ಪ್ರಕಾಶನ, ಬೆಂಗಳೂರು

೩೨. ಗೋಪಿನಾಥ್, ದಲಿತರು ಏನನ್ನು ಪಡೆಯಲು ಹೋರಾಡಬೇಕು, ೧೯೯೭, ದಲಿತ ಸಾಹಿತ್ಯ ಸಂಘಟನೆ, ಬೆಂಗಳೂರು

೩೩. ಚಂದ್ರಶೇಖರ್ ಟಿ.ಆರ್ (ಸಂ), ದಲಿತ ಅಧ್ಯಯನ, ೨೦೦೫, ಪ್ರಸಾರಾಂಗ, ಕವಿವಿ ಹಂಪಿ.

೩೪. ಚಂದ್ರಕಾಂತ್ ವಿ. ಚವ್ಹಾಣ್, ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬಂಡಾಯ, ೨೦೦೪, ಸಾರಾ ಎಂಟರ್‌ಪ್ರೈಸಸ್, ಮೈಸೂರು.

೩೫. ಚಲವಾದಿ ಎಂ.ಆರ್, ಹೈದ್ರಾಬಾದ ಕರ್ನಾಟಕ ದಲಿತ ಸಾಹಿತ್ಯ, ೨೦೧೦, ಸಾಕ್ಷಿ ಪ್ರಕಾಶನ, ಬೀದರ್.

೩೬. ಚಿನ್ನಸ್ವಾಮಿ ಸೋಸಲೆ ಎನ್, ದಲಿತರ ಮೇಲಿನ ದೌರ್ಜನ್ಯ ಒಂದು ನೋಟ, ೨೦೦೬, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೭. ಚೆನ್ನಸ್ವಾಮಿ ಸೋಸಲೆ ಎನ್, ಭಾರತೀಯ ಸಮಾಜ ಮತ್ತು ದಲಿತರು, ೨೦೦೮, ಪ್ರಸಾರಾಂಗ, ಕ್ನನಡ ವಿಶ್ವವಿದ್ಯಾಲಯ, ಹಂಪಿ.

೩೮. ಚೆನ್ನವೀರ ಕಣವಿ, ಕಣವಿ ಸಮಗ್ರ ಕಾವ್ಯ, ೧೯೯೬, ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ

೩೯. ಜವರಯ್ಯ ಮ.ನ, ಪರಂಪರೆ ಹಾಗೂ ದಲಿತ ಬಂಡಾಯ ಸಾಹಿತ್ಯ ಸಮಗ್ರ ಅಧ್ಯಯನ, ೧೯೯೪, ಸಿದ್ದಾರ್ಥ ಗ್ರಂಥಮಾಲೆ, ಮೈಸೂರು.

೪೦. ಜವರಯ್ಯ ಮ.ನ, ಹತ್ತು ಶತಮಾನಗಳ ಕನ್ನಡ ಸಾಹಿತ್ಯ, ೧೯೯೯, ಸಿದ್ದಾರ್ಥ ಗ್ರಂಥಮಾಲೆ, ಮೈಸೂರು.

೪೧. ಜವರಯ್ಯ ಮ. ನ, ದಲಿತ ಬಂಡಾಯ ಸಾಹಿತ್ಯ ಸಿದ್ಧಾಂತದ ನೆಲೆಗಳು, ೨೦೦೮, ಬಹುಜನ ಮಾಧ್ಯಮ ಕೇಂದ್ರ, ಮೈಸೂರು.

೪೨. ತಿಪ್ಪೇಸ್ವಾಮಿ ಜಿ.ಆರ್, ಸಾಹಿತ್ಯ ಮತ್ತು ಕ್ರಿಯಾಶೀಲತೆ, ೨೦೦೫, ವಿಜಯಲಕ್ಷ್ಮಿ ಪ್ರಕಾಶನ, ಮೈಸೂರು.

೪೩. ತೀ.ನಂ. ಶ್ರೀಕಂಠಯ್ಯ, ಭಾರತೀಯ ಕಾವ್ಯ ಮೀಮಾಂಸೆ, (೧೯೫೩), ೨೦೦೭, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೪೪. ತುಂಬಾಡಿ ರಾಮಯ್ಯ, ಮಣೆಗಾರ, ೧೯೯೯, ಬೋಧಿಶ್ರೀ ಪ್ರಕಾಶನ, ತುಮಕೂರು

೪೫. ದಂಡಪ್ಪ. ಹೆಚ್ (ಸಂ), ಬಡವರ ನಗುವಿನ ಶಕ್ತಿ, ೨೦೦೧, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು

೪೬. ದುರ್ಗಾದಾಸ್ ಕೆ.ಆರ್, ಅನುಸಂಧಾನದ ಹೊಸಹಾದಿ, ೨೦೦೦, ಸಮತಾ ಪ್ರಕಾಶನ, ಧಾರವಾಡ

೪೭. ದೇವಯ್ಯ ಹರವೆ, ದಲಿತ ಸಾಹಿತ್ಯ ಮತ್ತು ಇತರ ಲೇಖನಗಳು, ೧೯೯೧, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೪೮. ನಾಗರಾಜ ಡಿ.ಆರ್, ಶಕ್ತಿ ಶಾರದೆಯ ಮೇಳ, ೧೯೮೭, ಅಕ್ಷರ ಪ್ರಕಾಶನ, ಹೆಗ್ಗೋಡು.

೪೯. ನಾಗರಾಜ ಡಿ.ಆರ್, ಉರಿ ಚಮ್ಮಾಳಿಗೆ, ೨೦೦೨, ವಸಂತ ಪ್ರಕಾಶನ, ಬೆಂಗಳೂರು.

೫೦. ನಾಗರಾಜ ಡಿ.ಆರ್, ಸಾಹಿತ್ಯ ಕಥನ, ೨೦೦೬, ಅಕ್ಷರ ಪ್ರಕಾಶನ, ಹೆಗ್ಗೋಡು.

೫೧. ನಾಗರತ್ನ ಕುಮಾರಿ ಬಿ.ಎಸ್ (ಸಂ), ಸಾಹಿತ್ಯ ವಿಮರ್ಶೆ, ೨೦೦೮, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೫೨. ಪುಟ್ಟಯ್ಯ ಬಿ.ಎಂ, ಮುಖಾಮುಖಿ, ೨೦೦೮, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ

೫೩. ಪುಟ್ಟಯ್ಯ ಬಿ.ಎಂ, ಕದಡು, ೨೦೦೮, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ

೫೪. ಪುಟ್ಟಯ್ಯ ಬಿ.ಎಂ, ದಲಿತರು ಮತ್ತು ಭೂಮಿಯ ಪ್ರಶ್ನೆ, ೨೦೦೮, ಪ್ರಸಾರಾಂಗ, ಹಂಪಿ

೫೫. ಪುಟ್ಟಯ್ಯ ಬಿ.ಎಂ, ಜಾತಿ ವಿಶ್ಲೇಷಣೆಯ ಸಮಸ್ಯೆ, ೨೦೧೦, ಪ್ರಸಾರಾಂಗ, ಹಂಪಿ

೫೬. ಪುರುಷೋತ್ತಮ ಬಿಳಿಮಲೆ, ಬಂಡಾಯ ದಲಿತ ಸಾಹಿತ್ಯ, ೧೯೯೦, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೫೭. ಪುರುಷೋತ್ತಮ ಬಿಳಿಮಲೆ, ಶಿಷ್ಟ ಪರಿಶಿಷ್ಟ, ೧೯೯೨, ಮುದಿಪು ಪ್ರಕಾಶನ, ಮಂಗಳೂರು.

೫೮. ಪೋತೆ ಹೆಚ್.ಟಿ, ಡಾ. ಅಂಬೇಡ್ಕರ್ ದಲಿತ ಚಳುವಳಿ, ೧೯೯೯, ಅಂಬು ಪ್ರಕಾಶನ, ರಾಯಚೂರು

೫೯. ಪೋತೆ ಹೆಚ್.ಟಿ, ಅವೈದಿಕ ಚಿಂತನೆ, ೨೦೦೫, ತಿಪ್ಪಣಂಬು ಪ್ರಕಾಶನ ಗುಲ್ಬರ್ಗಾ.

೬೦. ಪೋತೆ ಹೆಚ್.ಟಿ, ಅಂಬೇಡ್ಕರ್ ಸಂವೇದನೆ, ೨೦೦೭, ಕುಟುಂಬ ಪ್ರಕಾಶನ ಗುಲ್ಬರ್ಗಾ

೬೧. ಪೋತೆ ಹೆಚ್.ಟಿ, ಸಂಸ್ಕೃತಿ ಸಂಕ್ರಮಣ, ೨೦೦೭, ಕುಟುಂಬ ಪ್ರಕಾಶನ ಗುಲ್ಬರ್ಗಾ.

೬೨. ಪ್ರಾಹ್ಲಾದ ಅಗಸನಕಟ್ಟೆ, ದಲಿತ ಬಂಡಾಯ ಕಾವ್ಯ ಮತ್ತು ವಿಚಾರವಾದಗಳು, ೨೦೦೪, ಹರ್ಷ ಪ್ರಕಾಶನ, ಹುಬ್ಬಳ್ಳಿ

೬೩. ಪ್ರಶಾಂತ್ ನಾಯಕ್ ಜಿ, ಸಾಹಿತ್ಯ ವಿಮರ್ಶೆ, ೨೦೦೬, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬೪. ಪ್ರಧಾನ್ ಗುರುದತ್ತ (ಪ್ರಸಂ), ಡಾ. ಬಿ.ಆರ್. ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು, ಸಂಪುಟ ೧, ೨೦೦೯, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.

೬೫. ಪ್ರಧಾನ್ ಗುರುದತ್ತ (ಪ್ರಸಂ), ಡಾ. ಬಿ.ಆರ್. ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು, ಸಂಪುಟ ೨, ಭಾಗ ೧, ೨೦೧೦, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.

೬೬. ಪ್ರಧಾನ್ ಗುರುದತ್ತ (ಪ್ರಸಂ), ಡಾ. ಬಿ.ಆರ್. ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು, ಸಂಪುಟ ೨, ಭಾಗ ೨, ೨೦೧೦, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.

೬೭. ಪ್ರಧಾನ್ ಗುರುದತ್ತ (ಪ್ರಸಂ) ಡಾ. ಬಿ.ಆರ್. ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು, ಸಂಪುಟ ೩, ೨೦೧೦, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.

೬೮. ಪ್ರಧಾನ್ ಗುರುದತ್ತ (ಪ್ರಸಂ), ಡಾ. ಬಿ.ಆರ್. ಅಂಬೇಡ್ಕರ್ ಅವರ ಸಮಗ್ರ ಬರಹಗಳು ಮತ್ತು ಭಾಷಣಗಳು, ಸಂಪುಟ ೪, ೨೦೧೦, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.

೬೯. ಬರಗೂರು ರಾಮಚಂದ್ರಪ್ಪ, ಆಫ್ರಿಕಾದ ಕಪ್ಪು ಸಾಹಿತ್ಯ, ೧೯೯೨, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು

೭೦. ಬರಗೂರು ರಾಮಚಂದ್ರಪ್ಪ (ಪ್ರಸಂ), ಕನ್ನಡ ಸಾಹಿತ್ಯದಲ್ಲಿ ಮನುಷ್ಯನ ಪರಿಕಲ್ಪನೆ, ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೭೧. ಬರಗೂರು ರಾಮಚಂದ್ರಪ್ಪ (ಪ್ರಸಂ), ಕನ್ನಡ ಸಾಹಿತ್ಯದಲ್ಲಿ ನೋವಿನ ನೆಲೆಗಳು, ೧೯೯೩ ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು

೭೨. ಬರಗೂರು ರಾಮಚಂದ್ರಪ್ಪ, ಸಂಸ್ಕೃತಿ, ಶ್ರಮ ಮತ್ತು ಶೃಜನಶೀಲತೆ, ೨೦೦೧, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.

೭೩. ಬಂಜಗೆರೆ ಜಯಪ್ರಕಾಶ್, ಉಲಿಯ ಉಯ್ಯಾಲೆ, ೨೦೦೫, ಸಿವಿಜಿ ಪಬ್ಲಿಕೇಶನ್, ಬೆಂಗಳೂರು.

೭೪. ಬಸವರಾಜ ಕಲ್ಗುಡಿ (ಸಂ), ಸುವರ್ಣ ವಿಚಾರ ಸಾಹಿತ್ಯ, ೨೦೦೬, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೭೫. ಬಸವರಾಜ ಸಬರದ, ಹೊಸದಿಕ್ಕು, ೧೯೯೦, ಪಲ್ಲವಿ ಪ್ರಕಾಶನ, ಬೀದರ್.

೭೬. ಬಸವರಾಜ ಸಬರದ (ಸಂ), ಬಂಡಾಯ ಸಾಹಿತ್ಯದ ತಾತ್ವಿಕ ನೆಲೆಗಳು, ೧೯೯೨, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೭೭. ಬಸವರಾಜ ಸಬರದ, ವಚನಕಾರರು ಮತ್ತು ದಲಿತ ಸಂವೇದನೆ, ೨೦೦೪, ಪ್ರಸಾರಾಂಗ, ಕವಿವಿ ಹಂಪಿ.

೭೮. ಬಸವರಾಜ ಸಾದರ (ಸಂ), ೨೦ನೇ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು, ೨೦೦೨, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ.

೭೯. ಭಂಡಾರಿ ಆರ್.ವಿ, ಪ್ರಭುತ್ವ ಮತ್ತು ಸಾಹಿತ್ಯ, ೨೦೦೫, ಹೇಮಂತ ಸಾಹಿತ್ಯ, ಬೆಂಗಳೂರು.

೮೦. ಮಹದೇವಯ್ಯ ಪಿ. (ಸಂ), ದಲಿತರು ಮತ್ತು ಪರ್ಯಾಯ ರಾಜಕಾರಣ, ೨೦೦೫, ಪ್ರಸಾರಾಂಗ, ಕವಿವಿ ಹಂಪಿ.

೮೧. ಮಹದೇವಯ್ಯ ಪಿ, ದಲಿತರು ಭಾಷೆ ಮತ್ತು ಸಮಾಜ, ೨೦೦೬, ಪ್ರಸಾರಾಂಗ, ಕವಿವಿ ಹಂಪಿ.

೮೨. ಮಹದೇವಯ್ಯ ಟಿ.ಆರ್ (ಸಂ), ದಲಿತೋದಯ, ೨೦೦೩, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು

೮೩. ಮಹದೇವ ಕಣವಿ, ನಿಮ್ಮೊಡನೆ, ೨೦೦೬, ವಿದ್ಯಾನಿಧಿ ಪ್ರಕಾಶನ, ಗದಗ.

೮೪. ಮುಕ್ತಾಯಕ್ಕ ಎಚ್.ಎಸ್, ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆ, ೧೯೯೭, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೮೫. ಮುನಿವೆಂಕಟಪ್ಪ ವಿ. (ಸಂ), ದಲಿತ ಚಳುವಳಿ ಒಂದು ಅವಲೋಕನ, ೧೯೯೮, ವಿಚಾರವಾದಿ ಪ್ರಕಾಶನ, ಮೈಸೂರು

೮೬. ಮುನಿವೆಂಕಟಪ್ಪ ವಿ. (ಸಂ), ದಲಿತ ಸಾಹಿತ್ಯ ದರ್ಶನ, ೨೦೦೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೮೭. ಮುಳ್ಳೂರು ನಾಗರಾಜ, ಮರಣ ಮಂಡಲ ಮಧ್ಯದೊಳಗೆ, ೧೯೯೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೮೮. ಮೂಡ್ನಾಕೂಡು ಚಿನ್ನಸ್ವಾಮಿ, ನೊಂದವರ ನೋವು, ೨೦೦೨, ಲೋಹಿಯಾ ಪ್ರಕಾಶನ, ಬಳ್ಳಾರಿ

೮೯. ಮೂಡ್ನಾಕೂಡು ಚಿನ್ನಸ್ವಾಮಿ, ಅಪರಿಮಿತ ಕತ್ತಲೆ, ೨೦೧೦, ಸುಮೇಧ ಪ್ರಕಾಶನ, ಗುಲ್ಬರ್ಗಾ

೯೦. ಮೊಗಳ್ಳಿ ಗಣೇಶ್, ದಲಿತರು ಮತ್ತು ಜಾಗತೀಕರಣ, ೧೯೯೯, ಪ್ರಸಾರಾಂಗ, ಕವಿವಿ ಹಂಪಿ.

೯೧. ಮೊಗಳ್ಳಿ ಗಣೇಶ್, ದಲಿತ ಕಥನ, ೨೦೦೬, ಪ್ರಸಾರಾಂಗ, ಕವಿವಿ ಹಂಪಿ.

೯೨. ಮೋಹನ್ ಕುಮಾರ್ ಹೆಚ್, ದಲಿತರ ವಿಮೋಚನೆ, ೧೯೯೫, ಮೂಲನಿವಾಸಿಗಳ ಮಹಾ ಒಕ್ಕೂಟ–ಇಂಡಿಯಾ, ಬೆಂಗಳೂರು.

೯೩. ಮೋಹನ್ ಕುಮಾರ್ ಹೆಚ್, ಶೋಷಿತ ಸಮುದಾಯಗಳಿಗೆ ಕಾಂಗ್ರೆಸ್ ಮಾಡಿದ್ದೇನು?, ೨೦೦೯, ಪರಿವರ್ತನ ಪ್ರಕಾಶನ, ಮೈಸೂರು.

೯೪. ರಂಗರಾಜ ವನದುರ್ಗ, ದಲಿತ ಸಂವೇದನೆ, ೨೦೦೪, ಸಿ.ವಿ.ಜಿ.ಪಬ್ಲಿಕೇಶನ್, ಬೆಂಗಳೂರು.

೯೫. ರವಿ ಉಪಾಧ್ಯ, ಅಪೂರ್ವ ವಿನ್ಯಾಸ, ೨೦೦೦, ಸ್ನೇಹಾ ಪ್ರಕಾಶನ, ಬೆಳಗಾವಿ.

೯೬. ರಹಮತ್ ತರೀಕೆರೆ, ಇಲ್ಲಿ ಯಾರೂ ಮುಖ್ಯರಲ್ಲ, ೨೦೦೫, ಪ್ರಸಾರಾಂಗ, ಹಂಪಿ

೯೭. ರಹಮತ್ ತರೀಕೆರೆ, ಸಾಂಸ್ಕೃತಿಕ ಅಧ್ಯಯನ, ೨೦೦೮, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೯೮. ರಹಮತ್ ತರೀಕೆರೆ, ಪ್ರತಿ ಸಂಸ್ಕೃತಿ, ೨೦೦೯, ಅಭಿನವ ಪ್ರಕಾಶನ, ಬೆಂಗಳೂರು.

೯೯. ರಾಘವೇಂದ್ರರಾವ್ ಹೆಚ್.ಎಸ್ (ಸಂ), ಶತಮಾನದ ಸಾಹಿತ್ಯ ವಿಮರ್ಶೆ, ೨೦೦೧, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೧೦೦. ರಾಜಶೇಖರಯ್ಯ ಎಲ್, ಡಾ. ಸಿದ್ಧಲಿಂಗಯ್ಯ–ದಲಿತ ಕಾವ್ಯ ಕುತೂಹಲ, ೨೦೦೯, ಟಿ.ಎಸ್.ವಿ. ಸ್ಮಾರಕ ಗ್ರಂಥಮಾಲೆ, ಮೈಸೂರು.

೧೦೧. ರಾಜಶೇಖರಯ್ಯ ಎ.ಎಂ (ಸಂ), ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಸಂಪುಟ ೧೨, ಭಾಗ–೨, ೧೯೯೯, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೦೨. ರಾಜಶೇಖರಯ್ಯ ಎ.ಎಂ (ಸಂ), ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಸಂಪುಟ ೧೪, ಭಾಗ–೧(ಅ), ೨೦೦೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೦೩. ಲಕ್ಕಪ್ಪಗೌಡ. ಹೆಚ್.ಜೆ. (ಪ್ರ.ಸಂ), ಬಂಡಾಯ ಸಾಹಿತ್ಯ ಚಳುವಳಿ ಹತ್ತು ವರ್ಷ, ೧೯೯೦, ಕುವೆಂಪು.ವಿ.ವಿ. ಶಿವಮೊಗ್ಗ.

೧೦೪. ಲಕ್ಷ್ಮಣ ತೆಲಗಾವಿ, ಹಿಂದುಳಿದ ವರ್ಗಗಳು ಮತ್ತು ದಲಿತ ಚಳುವಳಿಗಳು, ೧೯೯೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೦೫. ಲಕ್ಷ್ಮಿನಾರಾಯಣ ನಾಗವಾರ (ಪ್ರ.ಸಂ), ಬತ್ತದ ಬೆಳದಿಂಗಳು, ೨೦೦೬, ಮಿಲಿಂದ ಪ್ರಕಾಶನ, ಬೆಂಗಳೂರು.

೧೦೬. ಲಕ್ಷೀಪತಿ ಕೋಲಾರ, ಕಾಲುದಾರಿ, ೨೦೦೧, ಕನ್ನಡ ಸಂಘ ಕ್ರೈಸ್ಟ್ ಕಾಲೇಜ್, ಬೆಂಗಳೂರು.

೧೦೭. ಲೋಕೇಶ ಅಗಸನಕಟ್ಟೆ, ಕನ್ನಡ ಕಾವ್ಯ, ೨೦೦೩, ಆಲೋಕ ಪ್ರಕಾಶನ, ಚಿತ್ರದುರ್ಗ.

೧೦೮. ವೀರಣ್ಣ ದಂಡೆ, ಕನ್ನಡ ಕಾವ್ಯ ಮೀಮಾಂಸೆ, ೨೦೦೬, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೧೦೯. ಶಂಕರೇಗೌಡ ಎನ್.ಎಸ್, ಬಿಂಬ ಪ್ರತಿಬಿಂಬ, ೨೦೦೪, ಸಾರಾ ಎಂಟರ್ ಪ್ರೈಸಸ್, ಮೈಸೂರು.

೧೧೦. ಶಾಂತರಸ (ಪ್ರ.ಸಂ), ಮೂರು ದಲಿತ ಕಮ್ಮಟಗಳು, ೧೯೯೬, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೧೧. ಶಿವರಾಮಯ್ಯ, ದನಿಯಿಲ್ಲದವರ ದನಿ, ೨೦೦೩, ಶಕ್ತಿ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್, ಬೆಂಗಳೂರು.

೧೧೨. ಶಿವರಾಮು ಕಾಡನಕುಪ್ಪೆ (ಸಂ), ಸಾಹಿತ್ಯ ವಿಮರ್ಶೆ, ೧೯೮೭, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೧೩. ಶಿವರುದ್ರಪ್ಪ ಜಿ.ಎಸ್, ಸಾಹಿತ್ಯ ವಾರ್ಷಿಕ–೧೯೭೫, ೧೯೭೭, ಪ್ರಸಾರಾಂಗ, ಬೆಂಗಳೂರು.

೧೧೪. ಶಿವರುದ್ರಪ್ಪ ಜಿ.ಎಸ್, ಸಾಹಿತ್ಯ ವಾರ್ಷಿಕ–೧೯೭೭, ೧೯೭೮, ಪ್ರಸಾರಾಂಗ, ಬೆಂಗಳೂರು.

೧೧೫. ಶಿವರುದ್ರಪ್ಪ ಜಿ.ಎಸ್, ಸಾಹಿತ್ಯ ವಾರ್ಷಿಕ–೧೯೮೩, ೧೯೮೭, ಪ್ರಸಾರಾಂಗ, ಬೆಂಗಳೂರು.

೧೧೬. ಶಿವರುದ್ರಪ್ಪ ಜಿ.ಎಸ್, ಕನ್ನಡ ಕವಿಗಳ ಕಾವ್ಯ ಕಲ್ಪನೆ, ೧೯೮೯, ಪ್ರಸಾರಾಂಗ, ಮೈಸೂರು

೧೧೭. ಶಿವರುದ್ರಪ್ಪ ಜಿ.ಎಸ್, ಜಿ.ಎಸ್.ಶಿವರುದ್ರಪ್ಪ ಸಮಗ್ರ ಕಾವ್ಯ, ೧೯೯೭, ಕಾಮದೇನು, ಬೆಂಗಳೂರು.

೧೧೮. ಶಿವರುದ್ರಪ್ಪ ಜಿ.ಎಸ್, ಕನ್ನಡ ಕಾವ್ಯ ತತ್ವ ಚಿಂತನೆ, ೨೦೦೭, ಪ್ರಸಾರಾಂಗ, ಕವಿವಿ ಹಂಪಿ

೧೧೯. ಶ್ರೀಕಂಠಯ್ಯ ತೀ.ನಂ, ಭಾರತೀಯ ಕಾವ್ಯ ಮೀಮಾಂಸೆ, ೧೯೬೮, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

೧೨೦. ಶೇಖರ್ ಎಂ.ಎಸ್(ಸಂ), ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮಾನವಪರ ಧೋರಣೆಗಳು, ೨೦೦೬, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೨೧. ಶೇಖರ್ ಎಂ.ಎಸ್ (ಸಂ), ಮೊದಲ ತಲೆಮಾರಿನ ದಲಿತ ಸಾಹಿತಿಗಳು, ೨೦೦೬, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೨೨. ಸರಜೂ ಕಾಟ್ಕರ್, ಕನ್ನಡ ಮರಾಠಿ ದಲಿತ ಸಾಹಿತ್ಯ, ೧೯೯೬, ವಿಮೋಚನಾ ಪ್ರಕಾಶನ, ಅಥಣಿ.

೧೨೩. ಸರಜೂ ಕಾಟ್ಕರ್, ಮರಾಠಿ ದಲಿತ ಕಾವ್ಯ, ೧೯೯೯, ಲೋಹಿಯಾ ಪ್ರಕಾಶನ, ಬಳ್ಳಾರಿ.

೧೨೪. ಸಿದ್ಧಲಿಂಗಯ್ಯ, ಊರುಕೇರಿ, ೨೦೦೦ (೬ನೇ ಮುದ್ರಣ), ಅಂಕಿತ ಪುಸ್ತಕ, ಬೆಂಗಳೂರು

೧೨೫. ಸಿದ್ಧಲಿಂಗಯ್ಯ, ಜನಸಂಸ್ಕೃತಿ, ೨೦೦೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೧೨೬. ಸಿದ್ಧಲಿಂಗಯ್ಯ, ಉರಿಕಂಡಾಯ, ೨೦೦೯, ಅಂಕಿತ ಪುಸ್ತಕ, ಬೆಂಗಳೂರು

೧೨೭. ಸಿದ್ಧಲಿಂಗಯ್ಯ, ಊರುಕೇರಿ–೨, ೨೦೦೯, ಅಂಕಿತ ಪುಸ್ತಕ, ಬೆಂಗಳೂರು

೧೨೮. ಸುಳ್ಳದ್ ಎಸ್.ಪಿ, ಅಸ್ಪೃಶ್ಯನ ಭವಾನುಭವ, ೨೦೦೬, ಮಿಲಿಂದ–ಆನಂದ ಪ್ರಕಾಶನ, ಗುಲ್ಬರ್ಗಾ

೧೨೯. ಸೂರ್ಯಕಿರಣ್ ಎಂ. ರಣಕಾಂಬೆ (ಅನುವಾದ), ಭಾರತದಲ್ಲಿ ಪ್ರಜಾಪ್ರಭುತ್ವ ಉಳಿದೀತೆ?, ೨೦೦೨, ಬಹುಜನ ಸಮಾಜ ಪಬ್ಲಿಕೇಷನ್ಸ್, ಬೆಂಗಳೂರು.

೧೩೦. ಹಂಪ ನಾಗರಾಜಯ್ಯ (ಪ್ರ.ಸಂ), ಕನ್ನಡ ಪ್ರತಿಭಟನೆಯ ಕಾವ್ಯ, ೧೯೮೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೩೧. ಹನುಮಂತಯ್ಯ ಎಲ್, ದಲಿತ ಲೋಕದ ಒಳಗೆ, ೧೯೯೨, ಕರ್ನಾಟಕ ದಲಿತ ಸಾಹಿತ್ಯ ಪರಿಷತ್ತು, ಬೆಂಗಳೂರು

೧೩೨. ಹನುಮಂತಯ್ಯ ಎನ್.ಕೆ, ಕ್ರಾಂತಿಯ ವಸಂತ (ಬಸಲಿಂಗಪ್ಪನವರ ಕಥನ), ೨೦೦೮, ಪಲ್ಲವ ಪ್ರಕಾಶನ, ಚನ್ನಪಟ್ಟಣ.

೧೩೩. ಹನುಮಂತರಾವ ಬಿ. ದೊಡ್ಡಮನಿ, ಪಂಚಮ, ೨೦೦೯, ಶಾಂತಕುಮಾರ ಪ್ರಕಾಶನ, ಮಲ್ಲಾಬಾದ

೧೩೪. ಹಿರೇಮಠ ಎಸ್.ಎಂ, ಆಧುನಿಕ ಕನ್ನಡ ಕಾವ್ಯ ಮೀಮಾಂಸೆ, ೨೦೦೨, ಅಶ್ವಿನಿ ಪ್ರಕಾಶನ, ಕಲ್ಬುರ್ಗಿ

